
ಕರ್ನಾಟಕದ ಗಂಜೀಫಾ ಚಿತ್ರಕಲೆ

ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಮಹಾಪ್ರಬಂಧ



ಸಂಶೋಧಕ
ಶಂಕ್ರಪ್ಪ. ಎಂ. ಕುಂದಗೋಳ

ಮಾರ್ಗದರ್ಶಕರು
ಡಾ. ಎಸ್. ಸಿ. ಪಾಟೀಲ

413

ಚಿತ್ರಕಲಾ ವಿಭಾಗ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೧

'ಸಿರಿಗನ್ನಡ' ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

413

413

AKSHARA GRANTHALAYA
ACC.NO. 049305

ಕರ್ನಾಟಕದ ಗಂಜೀಫಾ ಚಿತ್ರಕಲೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ



ಸಂಶೋಧಕ

ಶಂಕ್ರಪ್ಪ. ಎಂ. ಕುಂದಗೋಳ

ಮಾರ್ಗದರ್ಶಕರು

ಡಾ. ಎಸ್. ಸಿ. ಪಾಟೀಲ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೧೧

709.54
KUN K

049305

[illegible] ಆಗಿದೆ

ಘೋಷಣಾ ಪತ್ರ

ಕರ್ನಾಟಕದ ಗಂಜೀಫಾ ಚಿತ್ರಕಲೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಡಾ. ಎಸ್. ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಈ ಮೂಲಕ ಸಲ್ಲಿಸುತ್ತಿದ್ದೇನೆ

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

(ಶಂಕ್ರಪ್ಪ ಎಂ. ಕುಂದಗೋಳ)
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ : ಹಂಪಿ, ವಿದ್ಯಾರಣ್ಯ
ದಿನಾಂಕ : ೨೫.೦೪.೨೦೧೧

ದೃಢೀಕರಣ ಪತ್ರ

ಶಂಕ್ರಪ್ಪ ಎಂ. ಕುಂದಗೋಳ ಇವರು ನನ್ನ ಮಾರ್ಗದರ್ಶನದಲ್ಲಿ **ಕರ್ನಾಟಕದ ಗಂಜೀಫಾ ಚಿತ್ರಕಲೆ** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಸದರಿ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು ಇದರ ಯಾವುದೇ ಭಾಗ ಮತ್ತು ವಿಷಯವನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿಲ್ಲ ಮತ್ತು ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ ಮತ್ತು ದೃಶ್ಯಕಲಾ ವಿಭಾಗದ ಮೂಲಕ ಈ ಮಹಾಪ್ರಬಂಧವನ್ನು ಸಲ್ಲಿಸಲಾಗುತ್ತಿದೆ.

(ಡಾ. ಎಸ್. ಸಿ. ಪಾಟೀಲ)
ಮಾರ್ಗದರ್ಶಕರು
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ : ಹಂಪಿ, ವಿದ್ಯಾರಣ್ಯ
ದಿನಾಂಕ : ೨೫.೦೪.೨೦೧೧

ಪರಿವಿಡಿ



ಅಧ್ಯಾಯ – ಒಂದು
ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಜನಾಂಗದ ಬದುಕು ಜೀವನ ಚರಿತ್ರೆಯೆನಿಸಿದರೆ, ಕಲೆಗಳು ಅದರ ಆತ್ಮ ಚರಿತ್ರೆಯೆನಿಸುತ್ತವೆ. ವ್ಯಾಪಕವಾದ ಅರ್ಥದಲ್ಲಿ ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆ, ಜೀವನ ಮೌಲ್ಯ ಇತ್ಯಾದಿಗಳ ವಿವರಣೆಯೇ ಇತಿಹಾಸ[೧] ಎಂಬ ಮಾತುಗಳು ತುಂಬ ಅರ್ಥಪೂರ್ಣವಾದವುಗಳಾಗಿವೆ. ಈ ಇತಿಹಾಸದ ಒಳ ಚೌಕಟ್ಟಿನಲ್ಲಿ ಬೆಳೆದು ಬಂದ ಕಲೆಗಳು ಅದಕ್ಕೆ ಸುಂದರ ಸಂಸ್ಕಾರವನ್ನು ನೀಡುತ್ತವೆ. ಕರ್ನಾಟಕದಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ಚಾಲುಕ್ಯ, ಹೊಯ್ಸಳ, ವಿಜಯನಗರ, ಮೈಸೂರು ಮುಂತಾದ ಅರಸರ ಹಾಗೂ ಸಮಕಾಲೀನ ಆಳರಸರ ಕಾಲದವರೆಗೂ ಚಿತ್ರಕಲೆ ಮತ್ತು ಶಿಲ್ಪಕಲೆ ಪ್ರವರ್ಧಮಾನವಾಗಿ ಬೆಳೆದು ಬಂದಿವೆಯಲ್ಲದೆ ತನ್ನದೇ ಆದ ಹಿರಿಮೆಯನ್ನು ಉಳಿಸಿಕೊಂಡು ಬಂದಿವೆ. ಇಂತಹ ಹಿರಿಮೆಯನ್ನು ಹೊಂದಿದ ಕರ್ನಾಟಕದ ಚಿತ್ರಕಲೆಯ ಕುರಿತು ಸಂಶೋಧನ ಅಧ್ಯಯನಗಳು ಆಗಬೇಕಾದಷ್ಟು ಪ್ರಮಾಣದಲ್ಲಿ ಇನ್ನೂ ಆಗಿಲ್ಲ ಈ ದಿಸೆಯಲ್ಲಿ ಅಧ್ಯಯನಗಳು ಇತ್ತೀಚಿನ ದಶಕಗಳಲ್ಲಿ ತೀವ್ರವಾಗಿ ಪ್ರಾರಂಭಗೊಂಡಿವೆ. ಚಿತ್ರಕಲಾ ಪ್ರಕಾರಗಳಲ್ಲಿ ಒಂದಾದ ಗಂಜೀಫಾ ಆಟದ ಎಲೆಗಳ ಮೇಲಿನ ಚಿತ್ರಕಲೆ ಒಂದು ವಿಶಿಷ್ಟ ಕಲಾಪ್ರಕಾರ. ಈ ಅಜ್ಞಾತ ಕಲೆಯನ್ನು ಕುರಿತು ಸಮಗ್ರವಾಗಿ, ವ್ಯವಸ್ಥಿತವಾಗಿ ಅಧ್ಯಯನ ಮಾಡುವ ಮೂಲ ಉದ್ದೇಶವನ್ನು ಪ್ರಸ್ತುತ ಅಧ್ಯಯನ ಹೊಂದಿದೆ.

ಅಧ್ಯಯನದ ಉದ್ದೇಶ

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಗಂಜೀಫಾ ಆಟದ ಎಲೆಗಳ ಪ್ರಾಚೀನತೆ ಕುರಿತು ಸಾಕಷ್ಟು ಅಧ್ಯಯನ ನಡೆದಿದೆ. ಯುರೋಪಿನಲ್ಲಿ ೬೦೦೦ ವರ್ಷಗಳ ಇತಿಹಾಸ ಈ ಗಂಜೀಫಾ ಎಲೆಗಳ ಆಟಕ್ಕೆ ಇದೆ.

೦೧. ಡಾ. ಎಸ್.ಸಿ.ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪುಟ-೧

ಯುರೋಪಿನಲ್ಲಿ ತಯಾರಾದ ಪ್ರಾಚೀನ ಗಂಜೀಫಾ ಎಲೆಗಳೆಂದರೆ ಇಟಲಿಯ ಟ್ಯಾರೋ ವರ್ಣಮಯ ಎಲೆಗಳು. ಈ ಎಲೆಗಳನ್ನು ಧಾರ್ಮಿಕ ಉದ್ದೇಶಗಳಿಗೆ ಬಳಸುತ್ತಿದ್ದರು. ಭಾರತದಲ್ಲಿ ಗಂಜೀಫಾ ಚಿತ್ರದ ಎಲೆಗಳ ಆಟ ಅತ್ಯಂತ ಪ್ರಾಚೀನವಾದುದಾಗಿದೆ. ಕ್ರಿ.ಶ. ಹದಿನಾಲ್ಕನೆಯ ಶತಮಾನದಿಂದಲೇ ಈ ಗಂಜೀಫಾ ಚಿತ್ರಕಲೆ ಮತ್ತು ಆಟ ಪ್ರಚಲಿತದಲ್ಲಿತ್ತು. ಮಹಾರಾಷ್ಟ್ರದ ಸಾವಂತವಾಡಿಯಲ್ಲಿ ೧೯ನೇ ಶತಮಾನದ ಕೊನೆಯವರೆಗೆ ದಶಾವತಾರದ ಗಂಜೀಫಾ ತಯಾರಿಕೆಯ ನೆಲೆಗಳು ದೊರೆಯುತ್ತವೆ. ಹಾಗೆಯೇ ದಖನ್, ಓರಿಸ್ಸಾ, ಆಂಧ್ರಪ್ರದೇಶ, ಜಮ್ಮು, ಕಾಶ್ಮೀರ, ಹೀಗೆ ದೇಶದ ನಾನಾ ಭಾಗಗಳಲ್ಲಿ ಗಂಜೀಫಾ ಕಲೆಯ ಇತಿಹಾಸ ದೊರೆಯುತ್ತದೆ.[೨]

ಕರ್ನಾಟಕದಲ್ಲಿ ೧೬-೧೭ ನೇ ಶತಮಾನದಲ್ಲಿ ಟಿಪ್ಪುವಿನ ಕಾಲದಲ್ಲಿ ಗಂಜೀಫಾ ಚಿತ್ರಕಲೆ ಹಾಗೂ ಆಟ ಇತ್ತು. ನಂತರ ಮೈಸೂರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಗಂಜೀಫಾ ಚಿತ್ರಕಲೆ ಮತ್ತು ಆಟ ಹೆಚ್ಚಿನ ಪ್ರೋತ್ಸಾಹ ಪಡೆಯಿತು.[೩] ಹೀಗೆ ಗಂಜೀಫಾ ಚಿತ್ರಕಲೆ ಮತ್ತು ಆಟದ ಕುತೂಹಲಕರವಾದ ನೆಲೆ, ಹಿನ್ನೆಲೆ ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಗಂಜೀಫಾ ಎಲೆಗಳನ್ನು ಆಯಾ ಪ್ರದೇಶಗಳಲ್ಲಿ ಸಿಗುವ ವಸ್ತುಗಳ ಮೂಲಕ ತಯಾರಿಸುತ್ತಿದ್ದರು. ಕೈಯಿಂದ ತಯಾರಿಸಿದ ಕಾಗದ, ದಪ್ಪನೆಯ ಕಾರ್ಡುಗಳನ್ನು ಗಂಜಿಯಿಂದ ಅಥವಾ ಅಂಟಿನಂತಹ ದ್ರವ ಪದಾರ್ಥದಿಂದ ಒಂದರ ಮೇಲೊಂದು ಅಂಟಿಸಿ, ತಮಗೆ ಬೇಕಾದ ಅಳತೆಗೆ ವೃತ್ತಾಕಾರದಲ್ಲಿ ಕತ್ತರಿಸಿ ಮೇಲೆ ಶುಭ್ರವಾದ ಹಾಳೆಯನ್ನು ಲೇಪಿಸುತ್ತಿದ್ದರು. ಕೆಲವು ಸಂದರ್ಭದಲ್ಲಿ ತಾಳೆಗೇರಿ, ಚರ್ಮ, ಹಸ್ತಿದಂತಗಳ ಮೇಲೂ ಚಿತ್ರಗಳನ್ನು ರಚಿಸುತ್ತಿದ್ದರು. ಚಿತ್ರಗಳಿಗೆ ಬೇಕಾದ ವರ್ಣವನ್ನು ನೈಸರ್ಗಿಕವಾಗಿ ಪಡೆದುಕೊಳ್ಳುತ್ತಿದ್ದರು. ಕಪ್ಪು, ಬಿಳಿ, ಕಂದು, ಹಳದಿ, ಕೆಂಪು, ಮೊದಲಾದ ವರ್ಣಗಳನ್ನು ಕಲಾವಿದರೆ ನಿಸರ್ಗದಿಂದ ತಯಾರಿಸಿಕೊಳ್ಳುತ್ತಿದ್ದರು. ವಿವಿಧ ಬಣ್ಣದ ಮಣ್ಣು, ವಿವಿಧ ಸಸ್ಯಗಳ ರಸ, ಗುಲಗಂಜಿ ಕಾಯಿ, ಬೀಜ ಮುಂತಾದ ನೈಸರ್ಗಿಕ ವಸ್ತುಗಳಿಂದ ಬಣ್ಣಗಳನ್ನು ತಯಾರಿಸಿ ಲೇಪಿಸುತ್ತಿದ್ದರು. ವಿವಿಧ ಲೇಖನಿ ಮತ್ತು ಪರಿಕರಗಳನ್ನು ಉಪಯೋಗಿಸುವ ರೀತಿ ನೀತಿಗಳು ವೈವಿಧ್ಯಮಯವಾಗಿದ್ದು.[೪] ಈ ಗಂಜೀಫಾ ಎಲೆಗಳನ್ನು ಸಿದ್ಧ ಮಾಡುವ ಸಿದ್ಧತಾ ವಿಧಾನಗಳನ್ನು ಮತ್ತು ಪರಿಕರಗಳನ್ನು ಕುರಿತು ಅಧ್ಯಯನ ಮಾಡುವ ಉದ್ದೇಶವು ಇಲ್ಲಿದೆ.

ಕರ್ನಾಟಕದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಇಪ್ಪತ್ತು ಗಂಜೀಫಾ ಎಲೆಗಳ ಆಟಗಳನ್ನು ಆಡುತ್ತಿದ್ದರು. ಅವುಗಳಲ್ಲಿ ಕೆಲವು ಹೊಸ ಆಟಗಳನ್ನು ಮುಮ್ಮಡಿಯವರೆ ಕಟ್ಟಿದ್ದರು. ಅವುಗಳಲ್ಲಿ ಸಾಮ್ರಾಜ್ಯಪೇಟಿಕಾ, ಚಾಮುಂಡಿ, ಕಲ್ಯಾಣಗಂಜೀಫಾ ಹೀಗೆ ಕೆಲವು ಆಟಗಳನ್ನು ಹೊಸದಾಗಿ ಸಂಯೋಜಿಸಿದ್ದರು. ಇಂತಹ ಗಂಜೀಫಾ ಆಟದ ನೀತಿ-ನಿಯಮಗಳ ಬಗ್ಗೆ ಅಧ್ಯಯನ ಮಾಡುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ.

ಚಿತ್ರಗಳನ್ನು ಕುರಿತು ಹೇಳುವುದಾದರೆ ದಶಾವತಾರಗಳಿಗೆ ಸಂಬಂಧಿಸಿದ ಘಟನೆಗಳನ್ನು, ಚಾಮುಂಡಿ ದೇವಿಯ ದಶಾವತಾರಗಳ ಕುರಿತು ಚಿತ್ರಗಳಲ್ಲಿ ಸಂಯೋಜಿಸಲಾಗಿದೆ. ಹೀಗಾಗಿ ಆಗಿನ ಕಾಲದಲ್ಲಿ

---

೦೨. R and N.Y. Leyden : The Playing Cards of India, PP-5

೦೩. ಸಂತೋಷಕುಮಾರ್ ಗುಲ್ವಾಡಿ : ಗಂಜೀಫಾ ಕಲೆ, ಪುಟ-೧೨

೦೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ-೧೪೯

ನೋಡುವವರಿಗೆ, ಆಡುವವರಿಗೆ ದೈವೀಭಾವ, ಭಕ್ತಿಭಾವ ಹುಟ್ಟುವಂತೆ ಅವು ಕಾಣಿಸಿಕೊಂಡಿವೆ. ಗಂಜೀಫಾ ಎಲೆಗಳಲ್ಲಿ ಧಾರ್ಮಿಕ-ಧಾರ್ಮಿಕೇತರ ಗಂಜೀಫಾಗಳೆಂದು ವರ್ಗೀಕರಣ ಮಾಡಿ ಅವುಗಳ ವಸ್ತು ವಿಷಯಗಳ ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಗಂಜೀಫಾ ಕಲಾವಿದರ ವಿಭಿನ್ನ ಮನೋಧರ್ಮಗಳೇ ಪ್ರಾದೇಶಿಕ ಗಂಜೀಫಾ ಕಲೆಯ ವೈಶಿಷ್ಟ್ಯವೆಂದು ಹೇಳಬೇಕಾಗುತ್ತದೆ. ಅವರು ಬೆಳೆದ ಪರಿಸರ, ಹೊಂದಿದ ಧೋರಣೆ ಬೀರಿದ ಪ್ರಭಾವಕ್ಕೆ ಒಳಗಾಗಿ ಆಟದ ಹಿನ್ನೆಲೆಯಲ್ಲಿ ಗಂಜೀಫಾ ಎಲೆ ಚಿತ್ರರಚನೆಗೊಂಡಿರುವುದನ್ನು ನೋಡುತ್ತೇವೆ. ಕರ್ನಾಟಕದ ಗಂಜೀಫಾ ಚಿತ್ರಗಳು ಆಕಾರದಲ್ಲಿ ಚಿಕ್ಕ ಗಾತ್ರದಲ್ಲಿವೆ(೪ರಿಂದ ೫ ಇಂಚು). ಇವು ಸೂಕ್ಷ್ಮವಾದ, ಹಿತಮಿತವಾದ ಮಿಶ್ರವರ್ಣಗಳಿಂದ ಕೂಡಿವೆ. ಓರಿಸ್ಸಾ, ಬಿಷ್ಣುಪುರದ ಗಂಜೀಫಾಚಿತ್ರಗಳಲ್ಲಿ ಬಣ್ಣಗಳ ಗಡುಸತನವಿದೆಯಲ್ಲದೆ ಅವುಗಳಿಗೆ ಪ್ರಾದೇಶಿಕವಾದ ವೈಶಿಷ್ಟ್ಯವೂ ಇದೆ. ಯಾವ ಪ್ರದೇಶದಲ್ಲಿ ಈ ಚಿತ್ರಗಳು ಸಿದ್ಧಗೊಂಡಿರುತ್ತವೆಯೋ ಸಾಮಾನ್ಯವಾಗಿ ಆಯಾ ಪ್ರದೇಶಗಳ ಹೆಸರಿನಿಂದ ಗಂಜೀಫಾ ಎಲೆಗಳು ಎಂದು ಕರೆಯಲ್ಪಡುತ್ತವೆ. ಕೆಲವು ಸಲ ಸಿದ್ಧಪಡಿಸಿದವರ ಹೆಸರಿನಿಂದಲೂ ಗಂಜೀಫಾವನ್ನು ಕರೆಯುವ ರೂಢಿ ಇದೆ. ಕರ್ನಾಟಕೇತರ ಪ್ರದೇಶಗಳಲ್ಲಿ ಕರ್ನಾಟಕದ ಮೈಸೂರು, ಬಿಜಾಪುರ (ದಖನ್) ಗಂಜೀಫಾಗಳು ಕರ್ನಾಟಕದ ಗಂಜೀಫಾಗಳೆಂದೇ ಹೆಸರು ಹೊತ್ತಿವೆ. ಮೈಸೂರು ಭಾಗದಲ್ಲಿ ಗಂಜೀಫಾ ಚಿತ್ರದಲ್ಲಿ ಉಬ್ಬುವಿನ್ಯಾಸದ ಶೈಲಿ ಇದ್ದರೆ ಉತ್ತರ ಕರ್ನಾಟಕದಲ್ಲಿ ಮೊಘಲ್ ಅರಸರ ಪ್ರಭಾವ, ಮುಸ್ಲಿಂ ಶೈಲಿ ವರ್ಣಗಾರಿಕೆಯ ಶ್ರೀಮಂತಿಕೆಯನ್ನು ಗುರುತಿಸುತ್ತವೆ. ಹೀಗೆ ಆಯಾ ಪ್ರದೇಶಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರಗಾರಿಕೆ, ಶೈಲಿಯನ್ನು ಪ್ರಸ್ತುತ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಪ್ರಾಚೀನ ಭಾರತೀಯ ಗಂಜೀಫಾಎಲೆಗಳಲ್ಲಿ ದಶಾವತಾರದ ಹತ್ತು ರಂಗುಗಳಿದ್ದವು. ರಾಶಿ ಚಿತ್ರಗಳಿದ್ದವು, ಫ್ರಾನ್ಸ್, ಇಟಲಿ, ಸ್ಪೇನ್ ಎಲೆಗಳಲ್ಲಿ ನಾಲ್ಕು ಚಕ್ರವರ್ತಿ ಎಲೆಗಳು ಇರುತ್ತವೆ. ಪಶ್ಚಿಮ ಬಂಗಾಲ, ಓರಿಸ್ಸಾ, ಆಂಧ್ರ ಪ್ರದೇಶ, ಜಮ್ಮು-ಕಾಶ್ಮೀರ, ದಖನ್, ರಾಜಸ್ಥಾನ, ಸಾವಂತವಾಡಿ ಹೀಗೆ ಕರ್ನಾಟಕೇತರ ಪ್ರದೇಶಗಳಲ್ಲಿ ಗಂಜೀಫಾ ಚಿತ್ರಕಲೆಯು ಹರಡಿಕೊಂಡಿದ್ದು, ಅವುಗಳನ್ನು ಕರ್ನಾಟಕದ ಗಂಜೀಫಾ ಚಿತ್ರಕಲೆಗಳೊಂದಿಗೆ ಸೂಕ್ಷ್ಮವಾಗಿ ತೌಲನಿಕ ಅಧ್ಯಯನವನ್ನು ನಡೆಸುವ ಉದ್ದೇಶವನ್ನು ಹೊಂದಲಾಗಿದೆ.

ದೇಶಸ್ವಾತಂತ್ರ್ಯಾನಂತರ ಗಂಜೀಫಾ ಆಟವೇ ಅಳಿದು ಹೋಯಿತು. ಕರ್ನಾಟಕದಲ್ಲಿ ಗಂಜೀಫಾ ಚಿತ್ರಕಲೆ ಇಂದು ಹೆಚ್ಚು ಕಡಿಮೆ ಚಿತ್ರಕಲೆಯಾಗಿ, ಕೇವಲ ಪಳುವಳಿಕೆಯಾಗಿ ಮಾತ್ರ ಉಳಿದಿದೆ. ವಿದೇಶೀಯರ ಬೇಡಿಕೆಗೆ ಕಲಾತ್ಮಕ ದೃಷ್ಟಿಯಿಂದ ಕೆಲವರ ಸಂಗ್ರಹಗಳಲ್ಲಿ ಮತ್ತು ಕೆಲವು ಕಲಾವಿದರ ಹವ್ಯಾಸದಿಂದಾಗಿ ಗಂಜೀಫಾ ಚಿತ್ರಕಲೆ ಅಲ್ಲಲ್ಲಿ ಉಳಿದಿದೆ. ಪ್ರಾಚೀನ ಗಂಜೀಫಾ ಚಿತ್ರಗಳು ದೇಶ-ವಿದೇಶಗಳ ವಸ್ತು ಸಂಗ್ರಹಾಲಯಗಳಲ್ಲಿ, ಗಂಜೀಫಾ ಕಲಾವಿದರ ಮನೆಗಳಲ್ಲಿ, ರಾಜವಂಶಸ್ಥರ ಕುಟುಂಬದಲ್ಲಿ, ರಾಜಪರಿವಾರದ ಮನೆಗಳಲ್ಲಿ ಮತ್ತು ಶ್ರೀಮಂತರ ಕುಟುಂಬಗಳಲ್ಲಿ ಅಲ್ಲಲ್ಲಿ ನೋಡಲು ಸಿಗುತ್ತವೆ.

ಗಂಜೀಫಾ ಎಲೆಗಳಲ್ಲಿ ಅತ್ಯಂತ ಸೂಕ್ಷ್ಮವಾದ ರೀತಿಯಲ್ಲಿ ಕೆಲಸ ಮಾಡುವ ಚಿತ್ರಗಾರರು ಮಾತ್ರ ತೀರಾ ವಿರಳರಾಗಿದ್ದಾರೆ. ಆದರೆ ಕೆಲವು ಕಲಾವಿದರು ಕರ್ನಾಟಕದ ಮೈಸೂರು, ಬೆಂಗಳೂರು ಹಾಗೂ ಮಹಾರಾಷ್ಟ್ರದ ಸಾವಂತವಾಡಿಯಲ್ಲಿ ಈ ಪರಂಪರೆಯ ಕಲಾಕೃತಿಗಳನ್ನು ಈಗಲೂ ರಚಿಸುತ್ತಿದ್ದಾರೆ. ಅಂತಹ ಕಲಾವಿದರನ್ನು ಗುರುತಿಸುವ ಮತ್ತು ವಿವಿಧ ಕಡೆಗಳಲ್ಲಿ ಸಂಗ್ರಹಗೊಂಡಿರುವ ಗಂಜೀಫಾ ಚಿತ್ರಗಳ ಸ್ಥಿತಿಗತಿ ಕುರಿತು ಈ ಅಧ್ಯಾಯದಲ್ಲಿ ಪ್ರಮುಖವಾಗಿ ಅಧ್ಯಯನ ಕೈಗೊಳ್ಳುವ ಮಹತ್ವದ ಉದ್ದೇಶವನ್ನು ಹೊಂದಲಾಗಿದೆ.

ನಮ್ಮ ಸಾಂಪ್ರದಾಯಿಕ ಕಲೆಯನ್ನು ಮುಂದಿನ ಜನಾಂಗಕ್ಕೆ ಉಳಿಸುವ(ಡಾಕುಮೆಂಟೇಶನ್ ಮಾಡುವ) ಮತ್ತು ಸಮಕಾಲೀನ ಕಲಾವಿದರಿಗೆ ಈ ಕಲಾಪರಂಪರೆಯನ್ನು ಪರಿಚಯಿಸುವ ಅಲ್ಲದೆ ಇನ್ನೂ ಹಲವಾರು ಉದ್ದೇಶಗಳೊಂದಿಗೆ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಚಿತ್ರಕಲಾಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು.

ಕರ್ನಾಟಕದ ಸಂದರ್ಭದಲ್ಲಿ ಚಿತ್ರಕಲಾಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚೆಗಷ್ಟೆ. ೧೯೯೦ರ ದಶಕದಲ್ಲಿ ಈ ಅಧ್ಯಯನಗಳು ತೀವ್ರಗೊಂಡು ಈಗಷ್ಟೇ ತನ್ನ ಶೈಶವಾವಸ್ಥೆಯನ್ನು ಕಳೆದು ಯೌವ್ವನಕ್ಕೆ ಕಾಲಿಡುತ್ತಿವೆ. ೧೯೮೦ರ ದಶಕದಿಂದ ಕರ್ನಾಟಕದಲ್ಲಿ ನಡೆದ ದೃಶ್ಯಕಲಾ ಅಧ್ಯಯನಗಳ ಸ್ಥೂಲವಾದ ವಿವರವನ್ನು ಈ ಕೆಳಗೆ ಸಮೀಕ್ಷಿಸಿ ಕೊಡಲಾಗಿದೆ.

ಪಿಎಚ್.ಡಿ. ಮಹಾಪ್ರಬಂಧಗಳು

೧೯೮೦ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನ ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ. ಎಸ್.ಸಿ.ಪಾಟೀಲರು ೧೯೮೩ರಲ್ಲಿ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ: ಒಂದು ಅಧ್ಯಯನ**[೫] ಎಂಬ ಸಂಶೋಧನ ಕಿರುಪ್ರಬಂಧವು ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೭ರಲ್ಲಿ **ಡಾ. ಬಿ.ಕೆ.ಹಿರೇಮಠರು ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ**[೬] ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಾಗಿ ಎರಡು ಅಧ್ಯಾಯಗಳನ್ನು ಮೀಸಲಾಗಿಟ್ಟು ಅಧ್ಯಯನ ಮಾಡಿದ್ದಾರೆ. ಇದರ ನಂತರ ೧೯೯೧ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಪೂರ್ಣ ಪ್ರಮಾಣದಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ **ಕರ್ನಾಟಕ ಜನಪದ ಚಿತ್ರಕಲೆ**[೭]. ಈ ಮಹಾಪ್ರಬಂಧವನ್ನು ಡಾ. ಎಸ್. ಸಿ. ಪಾಟೀಲರು ಸಿದ್ಧಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ. ಅ. ಲ. ನರಸಿಂಹನ್ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**[೮], ೧೯೯೭ರಲ್ಲಿ ಡಾ. ಸಂಪದಾ ಭಟ್ ಅವರ **ಹಿಂದೂಸ್ತಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು**[೯], ಕನ್ನಡ ವಿಶ್ವವಿದ್ಯಾಲಯಕ್ಕೆ, ೧೯೯೭ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ **ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು**[೧೦], ೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ**[೧೧], ೨೦೦೨ರಲ್ಲಿ

೦೫. ಡಾ. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕಿರು ಮಹಾಪ್ರಬಂಧ, ಕರ್ನಾಟಕ ವಿ.ವಿ., ೧೯೮೩.

೦೬. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ೧೯೮೭.

೦೭. ಡಾ. ಎಸ್.ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ , ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ೧೯೯೧.

೦೮. ಡಾ. ಅ.ಲ.ನರಸಿಂಹನ್ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೧೯೯೮.

೦೯. ಡಾ. ಸಂಪದಾ ಭಟ್ : ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೧೯೯೮.

೧೦. ಡಾ. ಪುಷ್ಪಾ ದ್ರಾವಿಡ : ಅನಿವಾಸಿ ಭಾರತೀಯ ಕಲಾವಿದ ದಿ ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೧೯೯೭.

೧೧. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೧.

ಡಾ. ಶಿವಾನಂದ ಬಂಟನೂರು ಇವರ **ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ**[೧೨], ೨೦೦೨ ರಲ್ಲಿ ಡಾ. ಗಿರೀಶ ಅವರ **ಬುಡಕಟ್ಟು ಚಿತ್ರಕಲೆ**[೧೩], ೨೦೦೨ರಲ್ಲಿ ಡಾ. ಲಕ್ಷ್ಮೀ ದೇವಿ ಗವಾಯಿಯವರ **ಕಲಾವಿದ ಎಂ.ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ**[೧೪], ೨೦೦೨ರಲ್ಲಿ ಶರಣಪ್ಪ ಕೋಲ್ಕಾರ ಅವರ **ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ**[೧೫], ೨೦೦೨ರಲ್ಲಿ ಡಾ. ಸೌಮ್ಯಾ ಅವರ **ಯಂತ್ರಾ ದಿ ವಿಜುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್**[೧೬], ೨೦೦೨ರಲ್ಲಿ ಡಾ. ಪ್ರಮಿಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್**[೧೭], ೨೦೦೩ರಲ್ಲಿ ಡಾ. ವೀಣಾ ಶೇಖರ ಮಂಡಿಸಿದ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦ –೧೮೨೦)**[೧೮], ೨೦೦೩ರಲ್ಲಿ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಅವರ **ಕಲಾವಿದ ಆರ್.ಎಮ್.ಹಡಪದ : ಒಂದು ಅಧ್ಯಯನ**[೧೯], ೨೦೦೩ರಲ್ಲಿ ಡಾ. ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್**[೨೦], ೨೦೦೪ರಲ್ಲಿ ಡಾ. ವಿ.ಎಮ್.ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ (೧೪೦೦–೧೮೦೦)**[೨೧], ೨೦೦೪ರಲ್ಲಿ ಡಾ. ಶಿವಕುಮಾರ ಜಿ.ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು**[೨೨], ೨೦೦೪ರಲ್ಲಿ ಡಾ. ಪಿ. ಗೌರೀಶ ಅವರ **ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ**[೨೩], ೨೦೦೫ರಲ್ಲಿ ಡಾ. ಶಶಿಕಲಾ ಹೂಗಾರ ಅವರ **ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ**[೨೪], ೨೦೦೫ರಲ್ಲಿ ಡಾ. ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ**[೨೫], ೨೦೦೫ರಲ್ಲಿ

---

೧೨. ಡಾ. ಶಿವಾನಂದ ಬಂಟನೂರು :ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೩. ಡಾ. ಗಿರೀಶ : ಬುಡಕಟ್ಟು ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೪. ಡಾ. ಲಕ್ಷ್ಮಿದೇವಿ ಗವಾಯಿ : ಕಲಾವಿದ ಎಂ.ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨

೧೫. ಡಾ. ಶರಣಪ್ಪ ಕೋಲ್ಕಾರ : ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೬. ಡಾ. ಸೌಮ್ಯಾ : ಯಂತ್ರಾ ದಿ ವಿಜುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೭. ಡಾ. ಪ್ರಮಿಳಾ ಲೋಚನ : ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್ಸ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೮. ಡಾ. ವೀಣಾ ಶೇಖರ : ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ಸ್ ಆಫ್ ಕರ್ನಾಟಕ (೧೭೮೦–೧೮೨೦), ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೩.

೧೯. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್.ಎಮ್.ಹಡಪದ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೩.

೨೦. ಡಾ. ಎಸ್.ಸಿ.ಪಾಟೀಲ : ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಎಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್ಸ್, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ೨೦೦೨.

೨೧. ಡಾ. ವಿ.ಎಮ್.ಬಾಗಾಯತ್ : ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ (೧೪೦೦–೧೮೦೦), ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

೨೨. ಡಾ. ಶಿವಕುಮಾರ ಜಿ.ಓ. : ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಹೆಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ., ೨೦೦೪

೨೩. ಡಾ. ಪಿ. ಗೌರೀಶ : ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ., ೨೦೦೪.

೨೪. ಡಾ. ಶಶಿಕಲಾ ಹೂಗಾರ : ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

೨೫. ಡಾ. ಶಿವಪ್ರಕಾಶ ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

ಡಾ. ಎಚ್.ಎನ್.ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**[೨೬], ೨೦೦೫ರಲ್ಲಿ ಡಾ. ಎಸ್.ವಿ.ವೆಂಕಟೇಶಯ್ಯ ಅವರ **ಅಜಂತಾಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು – ಒಂದು ಅಧ್ಯಯನ**[೨೭], ೨೦೦೬ರಲ್ಲಿ ಡಾ. ವಿಶ್ವೇಶ್ವರಿ ತಿವಾರಿ ಅವರ **ರಂಗೋಲಿ ಕಲೆ**[೨೮], ೨೦೦೭ರಲ್ಲಿ ಡಾ. ಮಲ್ಲಿಕಾರ್ಜುನ ಬಾಗೋಡಿ ಅವರ **ಸುರಪುರ ಶೈಲಿಯ ಚಿತ್ರಕಲೆ – ಒಂದು ಅಧ್ಯಯನ**[೨೯], ಡಾ. ಗೀತಾಂಜಲಿ ಬಿ.ಆರ್. ಅವರ **ಐತಿಹಾಸಿಕ ದೀಪಸ್ತಂಭಗಳು**[೩೦], ೨೦೦೭ರಲ್ಲಿ ಡಾ. ರಾಠೋಡ್ ಅವರ **ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ**[೩೧], ೨೦೦೮ರಲ್ಲಿ ಡಾ. ಮೋಹನ್‌ರಾವ್ ಬಿ. ಪಂಚಾಳ ಅವರ **ಚಿತ್ರ ಕಲಾವಿದ ಡಾ. ಎಸ್.ಎಮ್.ಪಂಡಿತ್**[೩೨], ೨೦೦೮ರಲ್ಲಿ ಡಾ. ವಿಶ್ವನಾಥ ಎ.ಎಸ್. ಅವರ **ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು**[೩೩], ಡಾ. ರವೀಂದ್ರ ಎಸ್. ಕಮ್ಮಾರ ಅವರ **ಕಲಾವಿದ ವ್ಹಿ.ಬಿ. ಹಿರೇಗೌಡರ್– ಬದುಕು ಮತ್ತು ಕಲಾಕೃತಿಗಳು**[೩೪], ಡಾ. ಪ್ರೇಮಾನಂದ ಟಿ. ಲಕ್ಕಣ್ಣನವರ್ ಅವರ **ಕರ್ನಾಟಕದ ದೃಶ್ಯಕಲಾ ಸಾಹಿತ್ಯ– ಒಂದು ವೈಚಾರಿಕ ಅಧ್ಯಯನ**[೩೫], ಡಾ. ಜಿ. ಲಕ್ಷ್ಮೀಪತಿ ಅವರ **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ**[೩೬], ಡಾ. ಮಂಠಗಿ ಅವರ **ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ – ಒಂದು ಅಧ್ಯಯನ**[೩೭], ಡಾ. ರೆಹಮಾನ್ ಪಟೇಲ್ ಅವರ **ಕರ್ನಾಟಕದ ಬಿದರಿ ಕಲೆ– ಒಂದು ಅಧ್ಯಯನ– ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ**[೩೮], ೨೦೧೦ರಲ್ಲಿ ಶ್ರೀಮತಿ ಸುನಿತಾ ಪಾಟೀಲ್ ಅವರ **ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು**[೩೯], ನಿಂಗಪ್ಪ ಎಂ. ಅಂಗಡಿಯವರ **ಗಾಜಿನ ಮೇಲಿನ ಚಿತ್ರಗಳು ಒಂದು – ಅಧ್ಯಯನ**[೪೦], ಸಣ್ಣಮದಗಪ್ಪ ಎಸ್. ಗಡ್ಡಿಯವರ **ಕಲಾವಿದ ಎಂ.ಬಿ. ಪಾಟೀಲ್ ಜೀವನ ಮತ್ತು ಕಲಾಕೃತಿಗಳು – ಒಂದು ಅಧ್ಯಯನ**[೪೧], ೨೦೧೦ರಲ್ಲಿ

---

೨೬. ಡಾ. ಎಚ್.ಎನ್.ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

೨೭. ಡಾ. ಎಸ್.ವಿ.ವೆಂಕಟೇಶಯ್ಯ :ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು – ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

೨೮. ಡಾ. ವಿಶ್ವೇಶ್ವರಿ ತಿವಾರಿ : ಹೈದ್ರಾಬಾದ್ ಕರ್ನಾಟಕದ ರಂಗೋಲಿ ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ., ೨೦೦೬.

೨೯. ಡಾ. ಮಲ್ಲಿಕಾರ್ಜುನ ಬಾಗೋಡಿ : ಸುರಪುರ ಶೈಲಿಯ ಚಿತ್ರಕಲೆ – ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ., ೨೦೦೭.

೩೦. ಡಾ. ಗೀತಾಂಜಲಿ ಬಿ.ಆರ್. : ಐತಿಹಾಸಿಕ ದೀಪಸ್ತಂಭಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೭.

೩೧. ಡಾ. ರಾಠೋಡ್ : ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ, ಪಿಹೆಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ., ೨೦೦೭.

೩೨. ಡಾ. ಮೋಹನರಾವ್ ಬಿ. ಪಂಚಾಳ : ಕಲಾವಿದ ಎಸ್.ಎಮ್.ಪಂಡಿತ – ಬದುಕು ಮತ್ತು ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ., ೨೦೦೮.

೩೩. ಡಾ. ವಿಶ್ವನಾಥ ಎ.ಎಸ್. : ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೮.

೩೪. ಡಾ. ರವೀಂದ್ರ ಎಸ್. ಕಮ್ಮಾರ : ಕಲಾವಿದ ವಿ.ಬಿ. ಹಿರೇಗೌಡರ್– ಬದುಕು ಮತ್ತು ಕಲಾಕೃತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ೨೦೦೮

೩೫. ಡಾ. ಪ್ರೇಮಾನಂದ ಟಿ. ಲಕ್ಕಣ್ಣನವರ್ : ಕರ್ನಾಟಕದ ದೃಶ್ಯಕಲಾ ಸಾಹಿತ್ಯ– ಒಂದು ವೈಚಾರಿಕ ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ೨೦೦೮

೩೬. ಡಾ. ಜಿ. ಲಕ್ಷ್ಮೀಪತಿ : ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ, ಪಿಹೆಚ್.ಡಿ ಮಹಾಪ್ರಬಂಧ ಕನ್ನಡ ವಿವಿ. ೨೦೦೮

೩೭. ಡಾ. ಸೂರ್ಯಕಾಂತ ಕ. ಮಂಟಗಿ : ಕಲಾವಿದ ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ – ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ. ಗುಲಬರ್ಗಾ, ೨೦೦೯

೩೮. ಡಾ. ರೆಹಮಾನ್ ಪಟೇಲ್ : ಕರ್ನಾಟಕದ ಬಿದರಿ ಕಲೆ– ಒಂದು ಅಧ್ಯಯನ– ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ, ಪಿಹೆಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ. ಗುಲಬರ್ಗಾ, ೨೦೦೯

೩೯. ಡಾ. ಶ್ರೀಮತಿ ಸುನಿತಾ ಪಾಟೀಲ್: ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೦

೪೦. ನಿಂಗಪ್ಪ ಎಂ. ಅಂಗಡಿ : ಗಾಜಿನ ಮೇಲಿನ ಚಿತ್ರಗಳು – ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦

೪೧. ಸಣ್ಣಮದಗಪ್ಪ ಎಸ್. ಗಡ್ಡಿ : ಕಲಾವಿದ ಎಂ.ಬಿ. ಪಾಟೀಲ್ ಜೀವನ ಮತ್ತು ಕಲಾಕೃತಿಗಳು – ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦.

ಕಿಶೋರ್ ಎನ್. ದಾಟನಾಳ್ ಅವರ **ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು – ಒಂದು ಅಧ್ಯಯನ**[೪೨], ೨೦೧೦ರಲ್ಲಿ ಕಾಮಾಕ್ಷಿ ಸಿ. ಸೊಪ್ಪಣ್ಣ ಅವರ **ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ**[೪೩] ಇವು ದೃಶ್ಯಕಲೆಗಳ ಕುರಿತು ಬಂದ ಪಿಹೆಚ್.ಡಿ. ಮಹಾಪ್ರಬಂಧಗಳು.

ಡಿ.ಲಿಟ್ ಮಹಾಪ್ರಬಂಧಗಳು

೨೦೦೧ರಲ್ಲಿ ಡಾ. ದೇವದಾಸ್ ಕಸದ ಅವರ ಕನ್ನಡ ವೃತ್ತಿ ರಂಗಭೂಮಿ ಹಾಗೂ ರಂಗವಿನ್ಯಾಸ[೪೪], ೨೦೦೫ ರಲ್ಲಿ ಡಾ. ಆನಂದ ಪೂಜಾರ ಅವರ ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ[೪೫], ೨೦೦೫ ರಲ್ಲಿ ಡಾ. ಡಿ.ಎ. ಉಪಾಧ್ಯ ಅವರ ದೃಶ್ಯಕಲೆಗಳ ತೌಲನಿಕ ಅಧ್ಯಯನ[೪೬], ೨೦೦೯ರಲ್ಲಿ ಡಾ. ಎಂ. ಎಸ್. ಮೂರ್ತಿ ಅವರ ಮಕ್ಕಳ ಮನಸ್ಸಿನ ಚಿತ್ರಗಳು[೪೭] ಮುಂತಾದ ಡಿ.ಲಿಟ್ ಮಹಾಪ್ರಬಂಧಗಳಿವೆ.

ಎಂ.ಫಿಲ್. ಪ್ರಬಂಧಗಳು

೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರು ಎಂ.ಫಿಲ್. ಪದವಿಗಾಗಿ ಮಂಡಿಸಿದ ಚಿತ್ರಕಲಾವಿದ ಜೆ.ಎಸ್.ಖಂಡೇರಾವ – ಒಂದು ಅಧ್ಯಯನ[೪೮], ಮತ್ತು ೨೦೦೩ ರಲ್ಲಿ ಎ.ಎಸ್.ವಿಶ್ವನಾಥ ಅವರ ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು[೪೯], ೨೦೦೫ ರಲ್ಲಿಶಂಕರಪ್ಪ ಎಂ. ಕುಂದಗೋಳ ಅವರ ಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು[೫೦], ಸಿ.ಡಿ.ಜಟ್ಟೆಣ್ಣವರ ಅವರ ಕಲಾವಿದ ಡಾ. ಎಂ.ವಿ.ಮಿಣಜಿಗಿಯವರ ಜೀವನ ಮತ್ತು ಕಲಾಕೃತಿಗಳು[೫೧], ೨೦೦೬ ರಲ್ಲಿ ಸುಚಿತ್ರಾ ಜಿ. ಲಿಂಗದಳ್ಳಿ ಇವರ ವಿಜಯನಗರದ ಭಿತ್ತಿಚಿತ್ರಕಲೆ ಒಂದು ಅಧ್ಯಯನ[೫೨], ರವಿ ವಸರಾಮ ನಾಯಕ ಇವರ ಕಿನ್ನಾಳಕಲೆ – ಒಂದು ಅಧ್ಯಯನ[೫೩], ೨೦೦೭ ರಲ್ಲಿ ಬಿ.ಎಮ್.ಪಾಟೀಲ ಅವರ ನಿಪ್ಪಾಣಿವಾಡೆಯ ಭಿತ್ತಿಚಿತ್ರಗಳು[೫೪], ಶೈಲಾ ಬರಡೋಲ ಅವರ ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು[೫೫], ಉಮೇಶ ಎಸ್. ಅವರ ಕರ್ನಾಟಕ ಜೈನ ಚಿತ್ರಕಲೆ[೫೬], ಶಶಿಕಾಂತ

---

೪೨. ಕಿಶೋರ್ ಎನ್. ದಾಟನಾಳ್ : ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು – ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦

೪೩. ಕಾಮಾಕ್ಷಿ ಸಿ. ಸೊಪ್ಪಣ : ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೧೦

೪೪. ಡಾ. ದೇವದಾಸ್ ಕಳಸದ : ಕನ್ನಡ ವೃತ್ತಿ ರಂಗಭೂಮಿ ಹಾಗೂ ರಂಗವಿನ್ಯಾಸ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೦೧

೪೫. ಡಾ. ಆನಂದ ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೫.

೪೬. ಡಾ. ಡಿ.ಎ. ಉಪಾಧ್ಯ : ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ ೨೦೦೫.

೪೭ ಡಾ. ಎಂ. ಎಸ್. ಮೂರ್ತಿ : ಮಕ್ಕಳ ಮನಸ್ಸಿನ ಚಿತ್ರಗಳು, ಕನ್ನಡ ವಿ.ವಿ. ಹಂಪಿ, ೨೦೦೯

೪೮. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ – ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ಹಂಪಿ ೨೦೦೨.

೪೯. ಡಾ. ವಿಶ್ವನಾಥ ಎ.ಎಸ್. : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು ಎಂಪಿಲ್ ಕಿರು ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೮.

೫೦. ಶಂಕರಪ್ಪ ಎಂ. ಕುಂದಗೋಳ : ಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೦೫.

೫೧. ಸಿ.ಡಿ.ಜಟ್ಟೆಣ್ಣವರ : ಕಲಾವಿದ ಡಾ. ಎಂ.ವಿ.ಮಿಣಜಿಗಿಯವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೫

೫೨. ಸುಚಿತ್ರಾ ಜಿ. ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೬.

೫೩. ರವಿ ವಸರಾಮ ನಾಯಕ : ಕಿನ್ನಾಳ ಕಲೆ ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೬

೫೪. ಬಿ.ಎಮ್.ಪಾಟೀಲ : ನಿಪ್ಪಾಣಿವಾಡೆಯ ಭಿತ್ತಿಚಿತ್ರಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೭.

೫೫. ಶೈಲಾ ಬರಡೋಲ : ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೦೭.

೫೬. ಉಮೇಶ ಎಸ್. : ಕರ್ನಾಟಕ ಜೈನ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೭.

ಬಸರಿಕಟ್ಟಿ ಅವರ ಕಲಘಟಗಿ ಕಲೆ[೫೭], ೨೦೦೮ರಲ್ಲಿ ಕೃಷ್ಣವೇಣಿಯವರ ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ[೫೮], ಯೋಗಿಶ್ ಹೆಚ್. ಅವರ ಚಿತ್ರದುರ್ಗಜಿಲ್ಲೆಯ ಚಿತ್ರಕಲೆ[೫೯], ಮಹಾಕೋಟೇಶ್ವರಗೌಡ ಪಾಟೀಲ್ ಅವರ ಬೆಳಗಾವಿ ಜಿಲ್ಲೆಯ ಚಿತ್ರಕಲೆ[೬೦], ಸುರೇಶ ಬಡಿಗೇರ್ ಅವರ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ[೬೧], ಸಂತೋಷ್‌ಕುಮಾರ್ ಕುಲಕರ್ಣಿ ಅವರ ದಾವಣಗೆರೆ ಜಿಲ್ಲೆಯ ಚಿತ್ರಕಲೆ[೬೨], ಜಯರಾಜ ಚಿಕ್ಕ ಪಾಟೀಲ್ ಅವರ ಕರ್ನಾಟಕದ ಜಾಹಿರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು[೬೩], ಮಹೇಶ ಉಮತಾರ್ ಅವರ ಬಿ. ಪಿ. ಬಾಯಿರಿ ಕಲೆ ಮತ್ತು ಕಲಾಸಾಹಿತ್ಯ[೬೪], ಗಿರಿಜಾ ಬಿರಾದಾರ್ ಅವರ ಬಿಜಾಪುರ್ ಜಿಲ್ಲೆಯ ಚಿತ್ರಕಲೆ[೬೫], ಬಸಯ್ಯ ಗವಿಮಠ ಅವರ ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ[೬೬], ಕೃಷ್ಣೇಗೌಡ ಹೆಚ್.ಎನ್. ಅವರ ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ[೬೭], ಮಹಾಂತೇಶ್ ಎಂ. ಫಲದಿನ್ನಿ ಅವರ ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು[೬೮], ಈ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿವೆ.ಹೀಗೆ ಗುಲ್ಬರ್ಗಾ, ಬೆಂಗಳೂರು, ಕರ್ನಾಟಕ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ೨೯ ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ನಿಟ್ಟಿನಲ್ಲಿ ೧೫ಕ್ಕೂ ಹೆಚ್ಚು ಸಂಶೋಧಕರು ಅಧ್ಯಯನ ನಿರತರಾಗಿದ್ದಾರೆ. ಇದಲ್ಲದೇ ವಿಶ್ವವಿದ್ಯಾಲಯಗಳ ಬಿ.ಎಫ್.ಎ. ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ಸುಮಾರು ೪೦೦ಕ್ಕೂ ಹೆಚ್ಚಿನ ಲಘುಶೋಧ ಪ್ರಬಂಧಗಳು ರಚನೆಗೊಂಡಿವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ಸಂಶೋಧನಾ ಪ್ರಕಾರವು ದೃಶ್ಯಕಲಾ ಕ್ಷೇತ್ರದಲ್ಲಿ ಅನಿವಾರ್ಯ ಅಧ್ಯಯನವಾಗಿ ಬೆಳೆಯುತ್ತಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕವಾಗಿಯೂ ಬಲಗೊಳ್ಳುವ ಆಶಯವನ್ನು ನಿರೀಕ್ಷಿಸಬಹುದು.

ಗಂಜೀಫಾ ಚಿತ್ರಕಲೆಯ ಕುರಿತು ಈವರೆಗೆ ನಡೆದ ಅಧ್ಯಯನಗಳು

ಹಾಲೆಂಡಿನ ಶ್ರೀ ಹ್ಯಾಲ್ ಜೆನಸೆನ್ ಅವರು "ಬುಕ್ ಆನ್ ಪ್ಲೇಯಿಂಗ್ ಕಾರ್ಡ್ಸ್" ಎ ಹಿಸ್ಟರಿ ಎಂಬ ಪುಸ್ತಕವು ಡಚ್ ಭಾಷೆಯಲ್ಲಿ ಬಂದಿದೆ. ೧೯೮೨ರಲ್ಲಿ ಲಂಡನ್ನಿನ ರುಡಾಲ್ಫ್ ವಾನ್ ಲೇಡನ್ ಮತ್ತು ಮೈಕೇಲ್ ಡಮ್ಮೆಟ್ ಅವರು ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಜಿಯಂನಲ್ಲಿ ಸಂಗ್ರಹಗೊಂಡ ಭಾರತೀಯ ಗಂಜೀಫಾ ಆಟದ ಎಲೆಗಳ ಸಮೀಕ್ಷೆ "ದ ಪ್ಲೇಯಿಂಗ್ ಕಾರ್ಡ್ಸ್ ಆಫ್ ಇಂಡಿಯಾ"(The Playing cards of India) ಎಂಬ ಶೀರ್ಷಿಕೆಯಡಿಯಲ್ಲಿ ಹೊರತಂದಿದ್ದಾರೆ. ಈ ಪುಸ್ತಕದಲ್ಲಿ ಗಂಜೀಫಾ

೫೭. ಶಶಿಕಾಂತ ಬಸರಿಕಟ್ಟಿ : ಕಲಘಟಗಿ ಕಲೆ, ಎಂಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೭

೫೮. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೫೯. ಯೋಗಿಶ್ ಹೆಚ್. : ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೦. ಮಹಾಕೋಟೇಶ್ವರಗೌಡ ಪಾಟೀಲ್ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೧. ಸುರೇಶ ಬಡಿಗೇರ್ : ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೨. ಸಂತೋಷ್‌ಕುಮಾರ್ ಕುಲಕರ್ಣಿ : ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೩. ಜಯರಾಜ ಚಿಕ್ಕ ಪಾಟೀಲ್ : ಕರ್ನಾಟಕದ ಜಾಹಿರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೪. ಮಹೇಶ ಉಮತಾರ್ : ಬಿ. ಪಿ. ಬಾಯಿರಿ ಕಲೆ ಮತ್ತು ಕಲಾಸಾಹಿತ್ಯ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೫. ಗಿರಿಜಾ ಬಿರಾದಾರ್ : ಬಿಜಾಪುರ್ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೬. ಬಸಯ್ಯ ಗವಿಮಠ : ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೭. ಕೃಷ್ಣೇಗೌಡ ಹೆಚ್.ಎನ್. : ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೮. ಮಹಾಂತೇಶ್ ಎಂ. ಫಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮.

ಚಿತ್ರಕಲೆಯ ಕುರಿತು ಅದರ ನೆಲೆ-ಹಿನ್ನೆಲೆ, ಐತಿಹಾಸಿಕ ಹಿನ್ನೆಲೆ, ಧಾರ್ಮಿಕ ಹಿನ್ನೆಲೆ ಹಾಗೂ ಪ್ರಾದೇಶಿಕ ವೈವಿಧ್ಯದ ಕುರಿತು ಚರ್ಚಿಸಿದ್ದಾರೆ. ಈ ಚಿತ್ರಕಲೆಯ ಬೆಳವಣಿಗೆಯ ವಿವಿಧ ಹಂತಗಳನ್ನು ಪರಿಚಯಿಸಿದ್ದಾರೆ. ಗಂಜೀಫಾ ಚಿತ್ರಗಳ ರಚನೆಗೆ ಬೇಕಾಗುವ ಬಣ್ಣಗಳು, ಕಲಾವಿದರು ಆಯ್ಕೆ ಮಾಡಿಕೊಂಡ ವಸ್ತು ವಿಷಯಗಳು, ಪರಿಕರಗಳು ಹಾಗು ರಚನಾ ವಿಧಾನಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಚರ್ಚಿಸಿದ್ದಾರೆ. ಇಲ್ಲಿ ಈ ಗಂಜೀಫಾ ಆಟಗಳ ಕುರಿತು ಯಾವುದೇ ಹೆಚ್ಚಿನ ವಿವರಣೆ ಇರುವುದಿಲ್ಲ. ೨೦೦೭ರಲ್ಲಿ ಜರ್ನಲ್ ಆಫ್ ದ ಇಂಟರ್‌ನ್ಯಾಷನಲ್ ಸೊಸೈಟಿ ಅವರು "ದ ಪ್ಲೇಯಿಂಗ್-ಕಾರ್ಡ್" ಕುರಿತು ಕಿರುಪುಸ್ತಕವನ್ನು ಹೊರತಂದಿದ್ದು ಇಲ್ಲಿಯೂ ಸಂಕ್ಷಿಪ್ತವಾಗಿ ವಿವರಣೆ ಮಾಡಲಾಗಿದೆ.

ಚೆಂಗತ್ಸೆ ತುಂಗ ನಿಘಂಟನ್ನು ಕ್ರಿ.ಶ ೧೬೭೮ರಲ್ಲಿ ಸಂಪಾದಿಸಲಾಯಿತು. ಅದರಲ್ಲಿ ಈ ಆಟದ ಎಲೆಗಳನ್ನು ಕ್ರಿ.ಶ. ೧೧೨೦ರಲ್ಲಿ ಕಂಡು ಹಿಡಿಯಲಾಯಿತು ಎಂಬ ವಿವರವನ್ನು ಅದು ನೀಡುತ್ತದೆ.

* ಕಿಶೋರ್ ಗೋವರ್ಧನ್‌ದಾಸ್ ಅವರ ಲೇಖನಗಳು

ಭಾರತದಲ್ಲಿ ಗಂಜೀಫಾ ಚಿತ್ರಕಲೆಯಲ್ಲಿ ಈವರೆಗೆ ನಡೆದ ಅಧ್ಯಯನಗಳು

ಕ್ರಿ.ಶ. ೧೧೨೦ರಲ್ಲಿ ಚೀನಾ ಚಕ್ರವರ್ತಿಯೊರ್ವನು ತನ್ನ ಉಪಪತ್ನಿಯ ಮನೋರಂಜನೆಗಾಗಿ ಗಂಜೀಫಾ ಎಲೆಗಳನ್ನು ಬಳಸಿದ ಉಲ್ಲೇಖವು ಕ್ರಿ.ಶ. ೧೬೭೧ರ ಚೀನಾದ ನಿಘಂಟು ಚೆಂಗತ್ಸೆ ತುಂಗದಲ್ಲಿ ಕಂಡುಬರುತ್ತದೆ. ಚೀನಾ ದೇಶದಲ್ಲಿ ಪುರಾತನ ಟಾಂಗ ವಂಶದವರು ಕಾಗದದ ಹಣವನ್ನು ಚಲಾವಣೆಗೆ ತಂದರು. ಈ ಹಣಕ್ಕೂ ಗಂಜೀಫಾ ಎಲೆಗೂ ಬಹುಮಟ್ಟಿಗೆ ಸಾಧ್ಯವಿದೆ.

ಕ್ರಿ.ಶ. ೧೩೦೦ರಲ್ಲಿ ದೊರೆತ ಮಾಮ್ಲುಕ್ ಕಾರ್ಡ್ಸ್, ಇಟಲಿಯಲ್ಲಿ ದೊರಕಿದ ಕಾರ್ಡಗಳು ಇರಾನ್ ಮತ್ತು ಭಾರತದ ಗಂಜೀಫಾಗಳು ಮೂಲದಲ್ಲಿ ಒಂದೇ ಇರುವುದು ಕಂಡುಬರುತ್ತದೆ. ಗಂಜೀಫಾ ಆಟದ ಕರ್ಮ ಮತ್ತು ಗಂಜೀಫಾ ಆಟದ (೧೭೦೦) ಬಗ್ಗೆ ಸಂಸ್ಕೃತ ಕಾವ್ಯದಲ್ಲಿ ಎಂಟು ಘಟಕದ ಗಂಜೀಫಾ ಕಟ್ಟಿನ ವಿವರವಿದೆ. ಓರಿಸ್ಸಾ ರಾಜ್ಯದ ೧೮ನೇ ಶತಮಾನದ ಪ್ರಸ್ಥಭಾ ಚಿಂತಾಮಣಿ ಗ್ರಂಥದಲ್ಲಿ ಗಂಜೀಫಾವನ್ನು ಕಂಜೀಫಾ ಎಂದು ಬರೆಯಲಾಗಿದೆ. ಗಂಜೀಫಾ ಗಾಂಧರ್ವಿ ಎಂಬ ೧೮ನೇ ಶತಮಾನದ ಹಿಂದೀಕವನಗಳ ಸಂಕಲನದಲ್ಲಿ ಫಿರಂಗಿಯವರು ಗಂಜಪಾ ಎಂದು ವಿವರಣೆ ನೀಡಿದ್ದಾರೆ. ಅದರಲ್ಲಿ ನಲವತ್ತು ಎಲೆಗಳ ಬಗ್ಗೆ ವಿವರಣೆ ಇದೆ. ದಾಜಿ ಜ್ಯೋತಿರ್ವಿದನು ೧೮೭೯ರ ವಿಕ್ರಮ ಸಂವತ್ಸರದಲ್ಲಿ (೧೮೨೨) ಬರೆದ 'ಷಟ್ ವಿನೋದ' ಕೃತಿಯಲ್ಲಿ ಅರವತ್ತು ವಿನೋದಾವಳಿಯನ್ನು ವಿವರಿಸಿ ಅದರಲ್ಲಿ ದಶಾವತಾರ ಅಥವಾ ಚಂಗಾಂಚನ ಕೃತಿಯಲ್ಲಿನ ಗಂಜೀಫಾ ವಿವರಣೆ ಇದೆ.

ಆರನೆಯ ವೀರಾಸ್ವಾಮಿ (೧೮೩೦)ಯು ಗಂಜೀಫಾದ ಎಲೆಗಳು ನಿಜಾಮಬಾದ ಜಿಲ್ಲೆಯ ಬಾಲಕೊಂಡಾದಲ್ಲಿ ತಯಾರಾಗುವ ವಿವರವನ್ನು ನೀಡಿದ್ದಾನೆ. ಮತ್ತು ಅವುಗಳನ್ನು ಮಾರಾಟಕ್ಕಾಗಿ ಹೈದರಾಬಾದಿಗೆ ಕಳಿಸಿದ ವಿವರವನ್ನು ನೀಡುತ್ತಾನೆ. ಹರಿಕೃಷ್ಣ ಕವಿಯು ರಚಿಸಿದ ಕ್ರೀಡಾ ಕೌಶಲ್ಯಮ್ (೧೮೭೧) ಕೃತಿಯಲ್ಲಿ ಮೂರು ವಿಧದ ಆಟದ ಎಲೆಗಳ ಚಿತ್ರರಚನೆಗಳ ಬಗ್ಗೆ ವಿವರಿಸುತ್ತಾನೆ. ಚಂಗ

* ೦೧. ಪ್ಲೇಯಿಂಗ್ ಕಾರ್ಡ್ಸ್, ವಾಲ್ಟ್ ಡಿಸ್ನಿ ಕಾಯಿಕ್ ಕ್ಯಾರಕ್ಟರ್ಸ್, ಮಿಕಿ ಮೌಸ್, ೦೨. ಪ್ರಿನ್ಸ್ ಚಾರ್ಲ್ಸ್, ಪ್ರಿನ್ಸ್ ಡಯಾನ, ಬುದ್ಧ ಅನ್ ಗಂಜೀಫಾ ಕಾರ್ಡ್ಸ್, ೦೩. ಶೇಕ್ಸ್‌ಪಿಯರ್ ಪ್ಲೇಯಿಂಗ್ ಕಾರ್ಡ್ಸ್, ೦೪. ಕೋಕೋ ಕೊಲಾ ಅಂಡ್ ಪ್ಲೇಯಿಂಗ್ ಕಾರ್ಡ್, ೦೫. ಸರ್ ಲೈನ್ ಪ್ಲೇಯಿಂಗ್ ಕಾರ್ಡ್ಸ್ ಆಫ್ ದಿ ವರ್ಲ್ಡ್, ೦೬. ಒಲಂಪಿಕ್ ಗೇಮ್ಸ್ ಅಂಡ್ ಪ್ಲೇಯಿಂಗ್ ಕಾರ್ಡ್ಸ್, ೦೭. ರಾಜಾ ರವಿವರ್ಮ ಪ್ಲೇಯಿಂಗ್ ಕಾರ್ಡ್ಸ್, ೦೮. ವರ್ಲ್ಡ್ ಕಪ್ ಫುಟ್ ಬಾಲ್ ಅಂಡ್ ಪ್ಲೇಯಿಂಗ್ ಕಾರ್ಡ್ಸ್, ೦೯. ೫೩ ಸೈಶನ್ಸ್ ಪ್ಲೇ ಕಾರ್ಡ್ಸ್, ೧೦. ಸೀನ್ ಆಫ್ ಏರೋಟಿನ ಅಂಡ್ ಪ್ಲೇಯಿಂಗ್ ಕಾರ್ಡ್ಸ್, ೧೧. ವರ್ಗಾಸ್ ಗರ್ಲ್ಸ್ ಪ್ಲೇ ಕಾರ್ಡ್ಸ್, ೧೨. ಶ್ರೀ ಫ್ಯಾಶನ್ ಆಫ್ ಕಾಸ್ಟೂಮ್ ಪ್ಲೇ ಕಾರ್ಡ್ಸ್, ೧೩. ದಾರ್ ಪ್ಲೇ ಕಾರ್ಡ್ಸ್, ೧೪. ಲಾವನಗರ ಸೇಲ್ ಹಿಸ್ಟಾರಿಕಲ್ ಸೀರಿಸ್ ಕಾರ್ಡ್ಸ್, ೧೫. ಲಿಯೋನಾರ್ಡೋ-ಡ-ವಿಂಚಿ ಅಂಡ್ ಮೊನಾಲಿಸಾ ಕಾರ್ಡ್ಸ್, ೧೬. ಪೇಂಟಿಂಗ್ ಪ್ಲೇಯಿಂಗ್ ಕಾರ್ಡ್ಸ್

ಕಾಂಚನದಲ್ಲಿ ೯೬ ಎಲೆಗಳಿರುವ ವಿವರ ನೀಡುತ್ತಾನೆ. ಆತ ಹೂಣ ದೇಶದ ಕ್ರೀಡಾಪತ್ರ ಕೃತಿಯಲ್ಲಿ ೫೨ ಎಲೆಗಳು ಮತ್ತು ದಶಾವತಾರ ಗಂಜೀಫಾದಲ್ಲಿ ೧೨೦ ಎಲೆಗಳ ವಿವರವಿದೆ. ಭಗವಾನ್ ಗಂಗಾಧರ ಪಾಂಡೆ (೧೯೦೦)ಯು ಮರಾಠಿಯಲ್ಲಿ ಗಂಜೀ ಪಾಂಚ ಖೇಲ ಮತ್ತು ದಶಾವತಾರ ಗಂಜೀಫಾ ಮತ್ತು ಅದರ ನಿಯಮಗಳ ಕುರಿತು ವಿವರಿಸಿದ್ದಾರೆ. ೧೯೯೯ರಲ್ಲಿ ಬನಾರಾಸ್ ವಿಶ್ವವಿದ್ಯಾಲಯದ ಡಾ. ಸರಳಾ ಚೋಪ್ರಾ ಅವರು "ಗಂಜೀಫಾ" ಎಂಬ ಪುಸ್ತಕವನ್ನು ಆಂಗ್ಲಭಾಷೆಯಲ್ಲಿ ಹೊರತಂದಿದ್ದು ಗಂಜೀಫಾ ಕಾರ್ಡಿನ ಸಂಕ್ಷಿಪ್ತವಾದ ವಿವರಣೆಯಿದೆ.

೦೧. ಗಂಜೀಫಾ ಕಲೆ ಇತಿಹಾಸ, ೦೨. ಅಷ್ಟ ದಿಕ್ಪಾಲ ಗಂಜೀಫಾ, ೦೩. ನವಗ್ರಹ ಗಂಜೀಫಾ, ೦೪. ಮೈಸೂರು ಟೌನ್ಸ್ ಗಂಜೀಫಾ, ೦೫. ಪ್ಯಾಲೆಸ್ ಪ್ಯಾರ್ ಗಂಜೀಫಾ, ೦೬. ಸಾವಂತವಾಡಿ ಅಂಡ್ ಸರ್ ಗಂಜೀಫಾ, ೦೭. ಮೊಘಲ್ ಅಂಡ್ ದಶಾವತಾರ ಗಂಜೀಫಾ ಹಾಗೂ ೦೮. ಡಿಸ್ಕವರ್ ಇಂಡಿಯಾ(ಅಕ್ಟೋಬರ್ ೧೯೯೯)ದಲ್ಲಿ ಅಷ್ಟದಿಕ್ಪಾಲಕ ಗಂಜೀಫಾಗಳ ಕುರಿತು ಲೇಖನಗಳು ಇವೆ.

ಕರ್ನಾಟಕದಲ್ಲಿ ಗಂಜೀಫಾ ಚಿತ್ರಕಲೆಯಲ್ಲಿ ಈವರೆಗೆ ನಡೆದ ಅಧ್ಯಯನಗಳು

ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರರ (೧೭೯೪-೧೮೬೮) ಶ್ರೀತತ್ವನಿಧಿಯ ಕೊನೆಯ ಅಧ್ಯಾಯವಾಗಿರುವ ಕೌತುಕನಿಧಿಯಲ್ಲಿ ಗಂಜೀಫಾದ ಹದಿಮೂರು ಕಟ್ಟುಗಳ ವಿವರಣೆಯನ್ನು ನೀಡುತ್ತದೆ. ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯು ೧೯೭೨ರಲ್ಲಿ ಹೊರತಂದ ಕನ್ನಡ ವಿಶ್ವಕೋಶ, ಸಂಪುಟ ಐದರಲ್ಲಿ ೮೮೧ನೇ ಪುಟದಲ್ಲಿ ಗಂಜೀಫಾದ ಎರಡು ಆಟಗಳ ಕುರಿತು (ಸರ್ವಮಂಗಳ ಗಂಜೀಫಾ ಆಟ ಮತ್ತು ದಶಾವತಾರ) ಸಂಕ್ಷಿಪ್ತ ವಿವರಣೆ ಇದೆ.

೧೯೯೨ ಡಾ. ಎಸ್. ಸಿ. ಪಾಟೀಲ ಅವರು ತಮ್ಮ ಸಂಶೋಧನಾ ಕೃತಿ ಕರ್ನಾಟಕದ ಜನಪದ ಚಿತ್ರಕಲೆಯಲ್ಲಿ ಗಂಜೀಫಾ ಚಿತ್ರಕಲೆಯ ಬಗ್ಗೆ ಒಂದು ಅಧ್ಯಾಯವನ್ನು ಮೀಸಲಾಗಿಟ್ಟು ವಿಶೇಷವಾಗಿ ಸಂಶೋಧನೆ ನಡೆಸಿದ್ದಾರೆ. ಕರ್ನಾಟಕದ ಗಂಜೀಫಾದ ಬಗ್ಗೆ ಮಹತ್ವದ ಅಂಶಗಳನ್ನು ಕುರಿತು ಇಲ್ಲಿ ಚರ್ಚಿಸಿದ್ದಾರೆ.

೧೯೯೩ರಲ್ಲಿ ಎ.ಎನ್. ನಿರಂಜನರಾಜ ಅರಸು ಅವರು "ಮುಮ್ಮಡಿ ಶ್ರೀ ಕೃಷ್ಣರಾಜ ಮಹೀಪಾಲ ವಂಶರತ್ನಾಕರ" ಶೀರ್ಷಿಕೆಯಡಿ ಕಿರು ಪುಸ್ತಕದಲ್ಲಿ (ಪುಟ ೧೨೫ರಲ್ಲಿ ಹಾಗೂ ೧೨೬ರಲ್ಲಿ) ಕೌತುಕನಿದಿ ಹಾಗೂ ಜಗನ್ಮೋಹನ ಗಂಜೀಫಾ, ನವೀನ ಗಂಜೀಫಾಗಳ ಬಗ್ಗೆ ಸಂಕ್ಷಿಪ್ತ ವಿವರಗಳಿವೆ. ೧೯೯೪ರಲ್ಲಿ ಸಂತೋಷ ಕುಮಾರ ಗುಲ್ವಾಡಿಯವರು "ಗಂಜೀಫಾ ಕಲೆ" ಎನ್ನುವ ಶೀರ್ಷಿಕೆಯಲ್ಲಿ ನಲವತ್ತೇಳು ಪುಟಗಳ ಗಂಜೀಫಾ ಕಲೆಯ ಕುರಿತು ಸಂಕ್ಷಿಪ್ತ ವಿವರವನ್ನು ನೀಡಿದ್ದಾರೆ. ಈ ಪುಸ್ತಕವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ೧೯೯೪ರಲ್ಲಿ ಪ್ರಕಟಿಸಿದೆ.

ಎಸ್. ಎಂ. ಜಂಬುಕೇಶ್ವರ ಅಭಿನಂದನಾ ಗ್ರಂಥದಲ್ಲಿ ಮೈಸೂರಿನ ರಘುಪತಿ ಭಟ್ ಅವರು ಗಂಜೀಫಾ ಚಿತ್ರಕಲೆ ಕುರಿತು ಲೇಖನವೊಂದು ಪ್ರಕಟಗೊಂಡಿದೆ. ೧೯೯೫ರ ಮಾರ್ಚ್ ೧೨ರ ತರಂಗದಲ್ಲಿ ಮುಂಬೈನ ಎಚ್.ಕೆ. ಕರ್ಕೇರ ಅವರು "ಇಸ್ಪೇಟು ಎಲೆಗಳ ಮಹಲಿನ ಬಾದಷಹಾ" ಎಂಬ ಶೀರ್ಷಿಕೆಯಡಿ ಮುಂಬೈನ ಕಿಶೋರ ಗೋವರ್ಧನ್ ದಾಸ್‌ರ ಗಂಜೀಫಾ ಎಲೆಗಳ ಸಂಗ್ರಹದ ಕುರಿತು ಬೆಳಕು ಚಲ್ಲಿದ್ದಾರೆ.

ಮೈಸೂರಿನ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ, ನಿರ್ದೇಶನಾಯಲದ ಅಪರ ನಿರ್ದೇಶಕರಾದ

ಎಂ. ಎಲ್. ಶಿವಶಂಕರ ಅವರು ೧೯೯೬ರಲ್ಲಿ ಗಂಜೀಫಾ ಎನ್ನುವ ಶೀರ್ಷಿಕೆಯಡಿ ಹದಿಮೂರು ಪುಟಗಳ ಕಿರು ಪುಸ್ತಕವೊಂದನ್ನು ಹೊರತಂದಿದ್ದಾರೆ. ಅದರಲ್ಲಿ ಓರಿಸ್ಸಾದ ದಶಾವತಾರ ಕುರಿತು ಮತ್ತು ಮೈಸೂರಿನ ಛದ್ ಎಲೆಗಳ ಕುರಿತು ಸಂಕ್ಷಿಪ್ತ ವಿವರಣೆ ಇದೆ.

ಎಚ್. ಎನ್. ಕೃಷ್ಣೇಗೌಡ ಅವರು ೨೦೦೫ರಲ್ಲಿ ಬಿ.ಎಫ್.ಎ. ಪದವಿಗಾಗಿ ಸಲ್ಲಿಸಿದ "ಕರ್ನಾಟಕದ ಗಂಜೀಫಾ ಚಿತ್ರಕಲೆ" ಎಂಬ ಯೋಜನಾವರದಿಯಲ್ಲಿ ಗಂಜೀಫಾ ಇತಿಹಾಸ ಹಾಗೂ ಚಿತ್ರಗಾರ ರಘುಪತಿ ಭಟ್‌ರ ಸಂಕ್ಷಿಪ್ತ ವಿವರಣೆ ಇದೆ.

೨೦೦೭ರಲ್ಲಿ ಫೆಬ್ರುವರಿ ೩ರಲ್ಲಿ ರಾಮಸನ್ಸ್ ಕಲಾ ಪ್ರತಿಷ್ಠಾನದವರು ಬರೆದ ಲೇಖನ, ಮೈಸೂರಿನ "ವೀಕ್‌ಸ್ಟಾರ್ ಸಪ್ಲಿಮೆಂಟ್" ಪತ್ರಿಕೆಯಲ್ಲಿ ಗಂಜೀಫಾ ಎಲೆಗಳ ಕುರಿತು ಹಾಗೂ ಜ್ಯೋತಿಷ್ಯ ಎಲೆಗಳ ಕುರಿತು ಮಾಹಿತಿ ಇದೆ. ೨೦೦೮ರಲ್ಲಿ ಡೆಕ್ಕನ್ ಹೆರಾಲ್ಡ್, "ಕಾರ್ಡ್ಸ್ ಆಫ್ ಹಾನರ್" ಶೀರ್ಷಿಕೆಯಡಿಯಲ್ಲಿ ಸುಧಾ ವೆಂಕಟೇಶ್ವರ ಅವರ ಗಂಜೀಫಾ ಚಿತ್ರಕಲೆಯ ಕುರಿತು ವಿವರಣೆ ಇದೆ. ೨೦೧೦ರಲ್ಲಿ ನವಕರ್ನಾಟಕ ಪ್ರಕಾಶನದವರು ಕರ್ನಾಟಕ ಕಲಾದರ್ಶನ ಶೀರ್ಷಿಕೆಯಡಿ ಪ್ರೊ. ಎಂ.ಹೆಚ್. ಕೃಷ್ಣಯ್ಯ ಹಾಗೂ ಡಾ. ವಿಜಯಾ, ಶ್ರೀ. ಸಿ. ಆರ್. ಕೃಷ್ಣರಾವ್ ಸಂಪಾದನೆಯಲ್ಲಿ ಸಂತೋಷಕುಮಾರ ಗುಲ್ವಾಡಿಯವರ ಗಂಜೀಫಾ ಚಿತ್ರಕಲೆ ಶೀರ್ಷಿಕೆಯಡಿ ಲೇಖನವನ್ನು ಪ್ರಕಟಿಸಿದ್ದಾರೆ. ಇಲ್ಲಿ ಮೊಘಲ್ ಗಂಜೀಫಾ, ಗಂಜೀಫಾ ಸಂಗ್ರಹಗಳ ಕುರಿತು ಸಂಕ್ಷಿಪ್ತ ಮಾಹಿತಿ ಇದೆ(ಪುಟ. ೨೦, ೨೧, ೨೨, ೨೩, ೨೫ರಲ್ಲಿ ಕಾಣಬಹುದು).

ಕರ್ನಾಟಕ ಗಂಜೀಫಾ ಚಿತ್ರಕಲೆಯ ಕುರಿತು ಇಲ್ಲಿಯವರೆಗೆ ಯಾವುದೇ ರೀತಿಯ ಗಂಭೀರ ಅಧ್ಯಯನಗಳು ನಡೆದಿಲ್ಲ. ಕರ್ನಾಟಕ ಹಾಗೂ ಕನ್ನಡ ಮಟ್ಟಿಗೆ ಈ ವಿಷಯದಲ್ಲಿ ಬರವಣಿಗೆಯ ಕೊರತೆ ಎದ್ದು ಕಾಣುತ್ತದೆ. ಗಂಜೀಫಾ ಮೇಲಿನ ಚಿತ್ರಗಳ ಮತ್ತು ಆಟಗಳ ಕುರಿತಾಗಿ ಕೆಲವು ಸ್ಥೂಲನೋಟ ಕೊಡುವ ಪರಿಚಯಾತ್ಮಕ ಲೇಖನಗಳನ್ನು ಹೊರತು ಪಡಿಸಿದರೆ ಚಿತ್ರಕಲೆಯ ದೃಷ್ಟಿಯಿಂದ ಸಮಗ್ರವಾಗಿ ಯಾರೂ ಅಧ್ಯಯನ ಮಾಡದೇ ಇರುವುದನ್ನು ಇಲ್ಲಿ ಗಮನಿಸಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಕರ್ನಾಟಕದ ಗಂಜೀಫಾ ಚಿತ್ರಕಲೆಯ ಅಧ್ಯಯನವನ್ನು ಮುಖ್ಯವಾಗಿ ಒಂಭತ್ತು ಅಧ್ಯಾಯಗಳನ್ನಾಗಿ ವಿಭಜಿಸಿಕೊಂಡು, ಪ್ರತಿಯೊಂದು ಅಧ್ಯಾಯಗಳಲ್ಲಿ ಚರ್ಚಿಸಲ್ಪಡಬೇಕಾಗಿರುವ ವಿಷಯಗಳ ಸಂಕ್ಷಿಪ್ತ ಸ್ವರೂಪವನ್ನು ವಿವರಿಸಲಾಗಿದೆ.

ಅಧ್ಯಾಯ ಒಂದು – ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿಯನ್ನು ಕುರಿತು ಮತ್ತು ಅಧ್ಯಯನದ ವಿಧಿವಿಧಾನಗಳನ್ನು ಹಾಗೆಯೇ ಇದುವರೆಗೆ ಚಿತ್ರಕಲಾ ಕ್ಷೇತ್ರದಲ್ಲಿ ನಡೆದ ಅಧ್ಯಯನದ ವಿವರಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಎರಡು – ಗಂಜೀಫಾ ಚಿತ್ರಕಲೆಯ ಐತಿಹಾಸಿಕ ಹಿನ್ನೆಲೆ

ಗಂಜೀಫಾ ಚಿತ್ರಕಲೆಯ ಐತಿಹಾಸಿಕ ಹಿನ್ನೆಲೆಯನ್ನು ಹಾಗೂ ಅದರ ಬೆಳವಣಿಗೆಯ ಹೆಜ್ಜೆ ಗುರುತುಗಳನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ.

ಅಧ್ಯಾಯ ಮೂರು – ಗಂಜೀಫಾ ಚಿತ್ರಕಲೆಯ ಸಿದ್ಧತೆ ಮತ್ತು ರಚನಾವಿಧಾನ

ಗಂಜೀಫಾ ಚಿತ್ರಕಲೆಯ ಸಿದ್ಧತೆ ಮತ್ತು ರಚನಾವಿಧಾನ, ಪರಿಕರಗಳನ್ನು, ಚಿತ್ರವಿನ್ಯಾಸಗೊಳಿಸುವ ರಚನೆಯ ವಿವಿಧ ಹಂತಗಳನ್ನು ಈ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ.

ಅಧ್ಯಾಯ ನಾಲ್ಕು – ಗಂಜೀಫಾ ಚಿತ್ರಕಲೆಯ ವಸ್ತು ವಿಷಯಗಳು

ಗಂಜೀಫಾ ಎಲೆಗಳ ಆಟದ ಅನೇಕ ನೀತಿ-ನಿಯಮಗಳ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಐದು – ಗಂಜೀಫಾ ಆಟದ ನೀತಿ ನಿಯಮಗಳು

ಗಂಜೀಫಾ ಎಲೆಗಳಲ್ಲಿ ರಚನೆಗೊಂಡ ಚಿತ್ರಕಲೆ, ವಸ್ತು ವಿಷಯಗಳನ್ನು ವರ್ಗೀಕರಿಸಿಕೊಂಡು ಆಟದ ನಿಯಮಗಳನ್ನು ಇಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ ಆರು – ಗಂಜೀಫಾ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆ, ತಂತ್ರಗಾರಿಕೆ ಮತ್ತು ಶೈಲಿ

ಗಂಜೀಫಾ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆ, ತಂತ್ರಗಾರಿಕೆ ಮತ್ತು ಶೈಲಿಯ ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳು – ಗಂಜೀಫಾ ಚಿತ್ರಕಲೆಯ ಕರ್ನಾಟಕೇತರ ಪ್ರದೇಶಗಳ ತೌಲನಿಕ ಅಧ್ಯಯನ

ಗಂಜೀಫಾ ಚಿತ್ರಕಲೆಯ ಕರ್ನಾಟಕೇತರ ಪ್ರದೇಶಗಳ ತೌಲನಿಕ ಅಧ್ಯಯನವನ್ನು ವಿವಿಧ ಪ್ರದೇಶಗಳ ಗಂಜೀಫಾ ಚಿತ್ರಗಳನ್ನು ತೌಲನಿಕವಾಗಿ ಬಳಸಿಕೊಂಡು ಇಲ್ಲಿ ಅಧ್ಯಯನ ನಡೆಸಲಾಗಿದೆ.

ಅಧ್ಯಾಯ ಎಂಟು – ಗಂಜೀಫಾ ಚಿತ್ರಕಲೆಯ ಕಲಾವಿದರು ಮತ್ತು ಸದ್ಯದ ಸ್ಥಿತಿಗತಿ

ಗಂಜೀಫಾ ಚಿತ್ರಕಲೆಯ ಕಲಾವಿದರು ಮತ್ತು ಸದ್ಯದ ಗಂಜೀಫಾ ಚಿತ್ರಗಳ ಸ್ಥಿತಿಗತಿಗಳ ಕುರಿತು ಈ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ.

ಅಧ್ಯಾಯ ಒಂಭತ್ತು – ಸಮಾರೋಪ

ಈ ಮಹಾಪ್ರಬಂಧದಲ್ಲಿ ಚರ್ಚಿಸಲಾದ ಎಲ್ಲಾ ಅಧ್ಯಾಯಗಳ ಒಟ್ಟು ಫಲಿತಾಂಶಗಳನ್ನು ಸಮಾರೋಪ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಗಂಜೀಫಾ ಚಿತ್ರಕಲೆಯ ಅಧ್ಯಯನದ ವ್ಯಾಪ್ತಿಯು ಕರ್ನಾಟಕಕ್ಕೆ ಸೀಮಿತವಾಗಿದ್ದರೂ ಅಧ್ಯಯನದ ಅನುಕೂಲಕ್ಕಾಗಿ ದೇಶ-ವಿದೇಶಗಳ ಗಂಜೀಫಾ ಚಿತ್ರಗಳನ್ನು ಪೂರಕವಾಗಿ ಬಳಸಿಕೊಂಡು ಅಧ್ಯಯನ ನಡೆಸಲಾಗಿದೆ.

ಕರ್ನಾಟಕದಲ್ಲಿ ಮೈಸೂರು, ನಾಗಮಂಗಲ, ಶ್ರೀರಂಗಪಟ್ಟಣ, ಬೆಂಗಳೂರು, ಕರ್ನಾಟಕೇತರ ಪ್ರದೇಶಗಳಾದ ಸಾವಂತವಾಡಿ(ಮಹಾರಾಷ್ಟ್ರ), ಪುಣಾ, ಕೋಲ್ಹಾಪುರ, ಬಾಂಬೆ, ದಖನ್, ಆಂಧ್ರ ಪ್ರದೇಶ, ಓರಿಸ್ಸಾ, ಜಮ್ಮು, ಕಾಶ್ಮೀರ, ರಾಜಸ್ಥಾನ ಮುಂತಾದ ಪ್ರದೇಶಗಳ ಗಂಜೀಫಾ ಚಿತ್ರಗಳನ್ನು ಆಯ್ಕೆ ಮಾಡಿಕೊಂಡು ಇಲ್ಲಿ ತೌಲನಿಕ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವಿಧಾನ

ಕರ್ನಾಟಕದ ಗಂಜೀಫಾ ಚಿತ್ರಕಲೆ ಈ ಅಧ್ಯಯನಕ್ಕಾಗಿ ಎರಡು ರೀತಿಯ ಆಕರ ಸಾಮಗ್ರಿಗಳನ್ನು ಬಳಸಿ, ಗಂಜೀಫಾ ವಿಷಯವನ್ನು ಸಂಗ್ರಹ ಮಾಡಿಕೊಂಡು ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೦೧. ಮೂಲ ಆಕರ ಸಾಮಗ್ರಿ ೦೨. ಆನುಷಂಗಿಕ ಆಕರ ಸಾಮಗ್ರಿ

೦೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಯಲ್ಲಿ ಪ್ರಮುಖವಾದುದು ಕ್ಷೇತ್ರಕಾರ್ಯ. ಪ್ರಸ್ತುತ ಅಧ್ಯಯನದಲ್ಲಿ ಕ್ಷೇತ್ರಕಾರ್ಯ ಅತ್ಯಂತ ಮಹತ್ವ ಪೂರ್ಣವಾದುದಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಗಂಜೀಫಾ ಚಿತ್ರಗಳು ಕಂಡು ಬರುವ ಸ್ಥಳಗಳನ್ನು ಸಂದರ್ಶಿಸಿ ಸಂಬಂಧಿಸಿದ ವಿಷಯವನ್ನು ಸಂಗ್ರಹಿಸಲಾಯಿತು. ಕ್ಷೇತ್ರಕಾರ್ಯ ಸಂದರ್ಭಗಳಲ್ಲಿ ಈ ಕೆಳಗಿನ ರೀತಿಯಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಯಿತು.

ಅ. ಸಂದರ್ಶನ

ಬ. ಧ್ವನಿಗ್ರಹಣ

ಕ. ಛಾಯಾಚಿತ್ರಣ

ಡ. ಸಂಗ್ರಹಿಸಿದ ವಿಷಯಗಳನ್ನು ಪಟ್ಟಿ ಮಾಡಿಕೊಳ್ಳುವುದು.

ಅ. ಸಂದರ್ಶನ

ಅಧ್ಯಯನದ ವ್ಯಾಪ್ತಿಗೆ ಒಳಪಡುವ ಕ್ಷೇತ್ರಗಳಿಗೆ ಸಂದರ್ಶನ ಮಾಡಿ ಅಲ್ಲಿ ಲಭ್ಯವಾದ ಗಂಜೀಫಾ ಚಿತ್ರಗಳ ಕುರಿತು ಸ್ಥಳೀಯ ವ್ಯಕ್ತಿಗಳ ಸಂದರ್ಶನ ಮಾಡಲಾಯಿತು. ಈ ಚಿತ್ರಗಳು ಬೇರೆ ಬೇರೆ ಮನೆತನ, ಅರಮನೆಗಳು ಮತ್ತು ವಸ್ತು ಸಂಗ್ರಹಾಲಯಗಳಲ್ಲಿ ಲಭ್ಯವಾಗಿದ್ದು, ಇವುಗಳಿಗೆ ಸಂಬಂಧಪಟ್ಟವರನ್ನು ಸಂದರ್ಶಿಸಿ ವಿಷಯವನ್ನು ಸಂಗ್ರಹಿಸಲಾಯಿತು. ಇದೇ ಸಂದರ್ಭದಲ್ಲಿ ಹಿರಿ–ಕಿರಿಯ ಸಾಂಪ್ರದಾಯಿಕ ಕಲಾವಿದರನ್ನು, ಕಲಾಇತಿಹಾಸಕಾರರನ್ನು ಸಂದರ್ಶನ ಮಾಡಲಾಯಿತು. ಪ್ರಸ್ತುತ ಸಮಕಾಲೀನ ಗಂಜೀಫಾ ಚಿತ್ರಕಲಾವಿದರ ಹಾಗೂ ಅವರ ವರ್ಕ್‌ಶಾಪ್‌ಗಳಿಗೆ ಸಂದರ್ಶನ ಮಾಡಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸಲಾಗಿದೆ.

ಬ. ಧ್ವನಿಗ್ರಹಣ

ಪ್ರಸ್ತುತ ಅಧ್ಯಯನದಲ್ಲಿ ಕೆಲವು ಪ್ರಮುಖ ಸಾಂಪ್ರದಾಯಿಕ ಹಾಗೂ ಸಮಕಾಲೀನ ಕಲಾವಿದರ ಗಂಜೀಫಾ ಚಿತ್ರಗಳ ಕುರಿತು ಮಹತ್ವದ ಚರ್ಚೆಯನ್ನು ಧ್ವನಿಗ್ರಹಣದ ಮೂಲಕ ಸಂಗ್ರಹಿಸಿಕೊಳ್ಳಲಾಯಿತು.

ಗಂಜೀಫಾ ಚಿತ್ರಗಳು ಲಭ್ಯವಿರುವ ಪೋಷಕರ ಅಭಿಪ್ರಾಯಗಳನ್ನು ಸಹ ದಾಖಲೀಕರಣ ಮಾಡಿಕೊಂಡು ಅಧ್ಯಯನ ನಡೆಸಲಾಗಿದೆ.

ಕ. ಛಾಯಾಚಿತ್ರಣ

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಲಭ್ಯವಾದ ಗಂಜೀಫಾ ಚಿತ್ರಗಳನ್ನು ಛಾಯಾಚಿತ್ರ ಮಾಡಿಕೊಳ್ಳಲಾಗಿದೆ. ಉದಾಹರಣೆಗೆ ಮೈಸೂರು ಜಗನ್‌ಮೋಹನ ಅರಮನೆಯಲ್ಲಿರುವ ಸುಮಾರು ಮುನ್ನೂರಕ್ಕು ಹೆಚ್ಚು ಗಂಜೀಫಾ ಚಿತ್ರಗಳು, ಮೈಸೂರಿನ ಜನಪದ ವಸ್ತುಸಂಗ್ರಹಾಲಯದಲ್ಲಿ ನೂರಾನಲವತ್ತಕ್ಕೂ ಹೆಚ್ಚು ಗಂಜೀಫಾ ಚಿತ್ರಗಳು, ಧರ್ಮಸ್ಥಳದ ಮಂಜೂಷಾ ವಸ್ತು ಸಂಗ್ರಹಾಲಯದಲ್ಲಿರುವ ನೂರಾ ನಲವತ್ತೆಂಟು ಗಂಜೀಫಾ ಚಿತ್ರಗಳು ಮತ್ತು ಬೆಂಗಳೂರಿನ ಗಂಜೀಫಾ ಕಲಾವಿದೆ, ಶ್ರೀಮತಿ ಸುಧಾ ವೆಂಕಟೇಶ ಅವರ ಅನೇಕ ಗಂಜೀಫಾ ಚಿತ್ರಗಳನ್ನು ಈ ಸಂದರ್ಭದಲ್ಲಿ ಛಾಯಾಚಿತ್ರಣ ಮಾಡಲಾಗಿದೆ. ಅದಲ್ಲದೇ ಕರ್ನಾಟಕೇತರ ಪ್ರದೇಶಗಳಾದ ಭೂಪಾಲ್, ಸಾವಂತವಾಡಿ(ಮಹಾರಾಷ್ಟ್ರ), ಹೈದ್ರಾಬಾದ್, ಓರಿಸ್ಸಾ,

ಕಲ್ಕತ್ತ, ಕೇರಳ ಮುಂತಾದ ಪ್ರದೇಶಗಳಲ್ಲಿ ಸಂಗ್ರಹಗೊಂಡಿರುವ ಗಂಜೀಫಾ ಚಿತ್ರಗಳನ್ನು ಛಾಯಾಚಿತ್ರಣ ಮಾಡಿ ಅಧ್ಯಯನ ಮಾಡಲಾಗಿದೆ.

ಡ. ಸಂಗ್ರಹಿಸಿದ ವಿಷಯಗಳನ್ನು ಪಟ್ಟಿ ಮಾಡಿಕೊಳ್ಳುವುದು

ಕ್ಷೇತ್ರಕಾರ್ಯದಲ್ಲಿ ಕೈಕೊಂಡ ಸಂದರ್ಶನ, ಧ್ವನಿ ಮುದ್ರಣ ಹಾಗೂ ಛಾಯಾಚಿತ್ರಣ ಚಿತ್ರಗಳಿಂದ ದೊರೆಯುವ ವಿಷಯಗಳನ್ನು ಪ್ರಬಂಧದ ಪ್ರತಿಯೊಂದು ಅಧ್ಯಾಯಗಳಲ್ಲಿ ಆಯಾ ವಿಷಯಕ್ಕನುಗುಣವಾಗಿ ಚಿತ್ರಗಳನ್ನು ವ್ಯವಸ್ಥಿತವಾಗಿ ವರ್ಗೀಕರಿಸಿ, ವಿಷಯಗಳನ್ನು ಸಣ್ಣ ಸಣ್ಣ ಪಟ್ಟಿಕೆಗಳಲ್ಲಿ ದಾಖಲಿಸಿ ಅವುಗಳನ್ನು ಮಹಾ ಪ್ರಬಂಧ ರಚನೆಗೆ ಬಳಸಿಕೊಳ್ಳಲಾಗಿದೆ.

೦೨. ಆನುಷಂಗಿಕ ಆಕರ ಸಾಮಗ್ರಿ

ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಸಂದರ್ಶನ, ಧ್ವನಿಗ್ರಹಣ, ಛಾಯಾಚಿತ್ರಣ ಮೂಲ ಆಕರ ಸಾಮಗ್ರಿಗಳಾದರೆ, ಇದಕ್ಕೆ ಸಹಕಾರಿಯಾಗುವಂತೆ ಆನುಷಂಗಿಕ ಆಕರ ಸಾಮಗ್ರಿಗಳಾದ ಪ್ರಕಟಿತ, ಅಪ್ರಕಟಿತ ಸಾಹಿತ್ಯ ಕೃತಿಗಳು, ಸಂಶೋಧನಾ ಕಿರುಪ್ರಬಂಧಗಳು, ಮಹಾಪ್ರಬಂಧಗಳು, ವಿಶ್ವಕೋಶಗಳು, ಗೆಜೆಟೀಯರ್‌ಗಳು, ಪುರಾಣ, ಇನ್ನಿತರ ಸಂಬಂಧಿಸಿದ ಗ್ರಂಥಗಳು, ನಿಘಂಟುಗಳು, ಲೇಖನಗಳು, ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳು ಅಲ್ಲದೇ ಬೇರೆ ಬೇರೆ ಸ್ಥಳಗಳಲ್ಲಿನ ಗ್ರಂಥಾಲಯಗಳಿಗೆ, ವಸ್ತು ಸಂಗ್ರಹಾಲಯಗಳಿಗೆ, ಕಲಾಶಾಲೆಗಳಿಗೆ ಮತ್ತು ಕಲಾಕಮ್ಮಟಗಳಿಗೆ, ಕಲಾವಿದರಿಗೆ ಸಂದರ್ಶನ ನೀಡಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿ, ಮಹಾಪ್ರಬಂಧವನ್ನು ರಚನೆ ಮಾಡಲಾಗಿದೆ.

❖❖❖



ಅಧ್ಯಾಯ – ಎರಡು
ಗಂಜೀಫಾ ಚಿತ್ರಕಲೆಯ ಐತಿಹಾಸಿಕ ಹಿನ್ನೆಲೆ

'ಕಲೆ ಎಂದರೆ ತಮಗಾಗುವ ಭಾವನೆಗಳನ್ನು ಅಭಿವ್ಯಕ್ತಿಸುವುದು. ಜೀವಿಗಳ ಒಂದು ಸಾಮಾನ್ಯ ಗುಣ.[೧] ಕಲೆ ಪದವನ್ನು ಆಂಗ್ಲ ಭಾಷೆಯ ಆರ್ಟ್ಸ್ ಶಬ್ದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಸಲಾಗುತ್ತದೆ. ಸಂಸ್ಕೃತದ ಕಲಾ ಕನ್ನಡದಲ್ಲಿ ಕಲೆಯಾಗಿದೆ. ಚಂದ್ರಕಲಾ ಅಥವಾ ಚಂದ್ರಕಲೆ ಎಂದು ಬಳಸುವಲ್ಲಿ ಕಲಾ ಪದಕ್ಕೆ ಚಂದ್ರನ ಹದಿನಾರನೆಯ ಒಂದಂಶವೆಂಬ ಅರ್ಥವಿದೆ. "ಕಲಾತು ಷೋಡಶೋ ಭಾಗೋ" ಎನ್ನುತ್ತದೆ ಅಮರಕೋಶ. 'ಕಲಾ' ಶಬ್ದಕ್ಕೆ ಗತಿ, ನಡೆ, ಅರ್ಥ, ಜ್ಞಾನ, ತಿಳುವಳಿಕೆ ಎಂಬ ಅರ್ಥಗಳುಂಟು. 'ಕ' ಕಾರವು ಬ್ರಹ್ಮವಾಚಕವಾದುದರಿಂದ ಸೃಷ್ಟಿಯನ್ನು 'ಲ'ಕಾರವು 'ಲಯ'ವನ್ನು ಸೂಚಿಸುವುದರಿಂದ ಕಲೆಯು ಸೃಷ್ಟಿ, ಸ್ಥಿತಿ, ಸಂಹಾರ ರೂಪವಾದದ್ದು.[೨] ಈ ಅಭಿಪ್ರಾಯಗಳು ಮನೋಜ್ಞಕ್ಕೆ ಸಂಬಂಧಪಟ್ಟ ವ್ಯಾಖ್ಯಾನುಗಳಾಗಿವೆ.

ಭಾರತದಲ್ಲಿ ಗಂಜೀಫಾ ಆಟದ ಎಲೆಗಳನ್ನು ಕ್ರೀಡೆಯನ್ನು 'ಗಂಜೀಫಾ' ಗಂಜಾಫೆ, ಗಂಜೆಫಾ, ಕಂಜೇಫೇ, ಕಂಜಪಾ, ಕಂಜಫಾ, ಓರಿಸ್ಸಾದಲ್ಲಿ ಗಂಜಪಾ ಅಥವಾ ಗಂಜಪ್ಪ ಎಂದು ಕರೆಯುತ್ತಾರೆ. ಇರಾನ, ನೇಪಾಳ, ಟರ್ಕಿ ಮತ್ತು ಕೆಲ ಅರಬ್ ದೇಶಗಳಲ್ಲಿ ಕೂಡಾ ಈ ಆಟಕ್ಕೆ ಅದೇ ಪದವಿದೆ. ಆದರೆ ಗಂಜೀಫಾ ಅಥವಾ ಕಂಜೇಫಾ ಶಬ್ದದ ಮೂಲ ಇನ್ನೂ ಅಸ್ಪಷ್ಟವಾಗಿಯೇ ಇದೆ. ಕೆಲ ವಿದ್ವಾಂಸರು ಅದು ಪರ್ಶಿಯಾದ ಪದವಿರಬಹುದೆಂದು ಆಲೋಚಿಸುತ್ತಿದ್ದಾರೆ. 'ಗಂಜ್' ಎಂದರೆ ಸಂಪತ್ತು, ನಿಧಿ ಅಥವಾ ರಾಶಿ ಎನ್ನುವ ಅರ್ಥವೂ ಇದೆ. ಮತ್ತೊಂದು ವಿದ್ವಾಂಸರ ತಂಡವು ಇದು ಪರ್ಶಿಯಾ, ಅರಬಿಕ್ ಅಥವಾ ತುರ್ಕಿದೇಶದ ಪದವಲ್ಲ. ಅದೊಂದು ಕಾಲಘಟ್ಟದಲ್ಲಿ ಹುಟ್ಟಿಕೊಂಡ ಪದವಾಗಿದೆ ಎನ್ನುತ್ತಾರೆ.

೦೧. ಟಿ. ಗೋವಿಂದರಾಜು : ಚಿತ್ತಾರಗೊಂಬೆ ಕಲೆ, ೨೦೦೪, ಪುಟ–೧
೦೨. ಡಾ. ಎಸ್. ಶ್ರೀಕಂಠಶಾಸ್ತ್ರಿ : ಭಾರತೀಯ ಸಂಸ್ಕೃತಿ, ಪುಟ–೯

ಗಂಜ್ ಎಂದರೆ ಶಬ್ದವನ್ನುಂಟು ಮಾಡು ಗದ್ದಲದ ಧ್ವನಿ ಮಾಡು, ಇತ್ಯಾದಿ ಅರ್ಥವಿದೆ. ಏಕೆಂದರೆ ಆಟದ ಸಮಯದಲ್ಲಿ ವಿಜೇತರ ಸದಾ ಕಾಲ ಕೂಗುತ್ತಿರುತ್ತಾರೆ. ಎದುರಾಳಿ ಒಪ್ಪಲಿ, ಒಪ್ಪದಿರಲಿ ಈ ಉತ್ಸಾಹ ಹಾಗೇ ಇರುತ್ತದೆ. ಮೊಘಲರು, ಪರ್ಶಿಯನ್ನರು ಮತ್ತು ಇತರರು ಗಂಜೀಫಾ ಅಥವಾ ಗಂಜಿಗ ಸಂಪತ್ತು ಎಂಬ ಪದವನ್ನು ಅರ್ಥೈಸುತ್ತಾರೆ.[೩] ಅಲ್ಲದೆ ತಾಂತ್ರಿಕತೆಯಿಂದಾದ ಹೆಸರಿನಿಂದ ಕೂಡಾ ಇದನ್ನು ಲೋಹ ಅಥವಾ ಲೋಹದ ನಾಣ್ಯ ಎಂದೇ ಭಾವಿಸುತ್ತಿದ್ದರು. ಉದಾಹರಣೆಗಾಗಿ, ಸಫೇದ ಮತ್ತು ಸುರ್ಖ್ರಾ ಮತ್ತು ಪರ್ಶಿಯಾದ ಟಂಕಾ ಮತ್ತು ಅಶ್ರರಫಿ ಪದಗಳು ಬೆಳ್ಳಿ ಮತ್ತು ಬಂಗಾರ ಅಥವಾ ನಾಣ್ಯಗಳೆಂದೇ ಪ್ರಸಿದ್ಧವಾಗಿವೆ.

೧೭ನೇ ಶತಕದಲ್ಲಿದ್ದ ಹಣದ ಸಂಕೇತದ ಕಾರ್ಡುಗಳು ೧೩ನೇ ಶತಮಾನದಲ್ಲಿ ಇದ್ದುದರ ಬಗ್ಗೆ ತಿಳಿದು ಬಂದಿಲ್ಲ. ಆದರೆ ಇನ್ನೊಂದು ಮೂಲದ ಪ್ರಕಾರ ಚೀನಾ ದೇಶದಲ್ಲಿ ಕ್ರಿ.ಶ. ೯೦೦ರ ಸುಮಾರಿಗೆ ಗಂಜೀಫಾ ಆಟವು ಬಳಕೆಯಲ್ಲಿತ್ತು. ಚೀನಾದ ಮೇಲೆ ಮಂಗೋಲಿಯನ್ನರ ದಾಳಿಯ ಬಳಿಕ ಮಧ್ಯ ಏಷಿಯಾ, ಪಶ್ಚಿಮ ಏಶಿಯಾಗಳಿಗೆ ಸಂಪರ್ಕ ಪಡೆಯಿತು. ಹಣದ ಗುರುತಿನ ಚೀನಾದ ಕಾರ್ಡುಗಳು ೧೩ನೇ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರಕ್ಕೆ ಬಂದವು. ಚೀನಾದವರು ಕ್ರಿ.ಶ.೧೦೦೦ರಲ್ಲಿಯೇ ಗಂಜೀಫಾವನ್ನು ಉಪಯೋಗಿಸಿದ್ದಾರೆ.

ಕ್ರಿ.ಶ. ೧೧೨೦ರಲ್ಲಿ ಚೀನಾ ಚಕ್ರವರ್ತಿಯೊರ್ವನು ತನ್ನ ಉಪಪತ್ನಿಯ ಮನೋರಂಜನೆಗಾಗಿ ಗಂಜೀಫಾ ಎಲೆಗಳನ್ನು ಬಳಸಿದ ಉಲ್ಲೇಖವು ಕ್ರಿ.ಶ. ೧೬೭೮ರ ಚೀನಾದ ನಿಘಂಟು ಚಿಂಗತ್ಸೆ ತುಂಗ[೪]ದಲ್ಲಿ ಕಂಡುಬರುತ್ತದೆ. ಚೀನಾ ದೇಶದಲ್ಲಿ ಪುರಾತನ ಟಾಂಗ ವಂಶದವರು ಕಾಗದದ ಹಣವನ್ನು ಚಲಾವಣೆಗೆ ತಂದರು. ಈ ಹಣಕ್ಕೂ ಗಂಜೀಫಾ ಎಲೆಗೂ ಬಹುಮಟ್ಟಿಗೆ ಸಾಮ್ಯವಿದೆ.

ಕ್ರಿ.ಶ. ೧೩೦೦ರಲ್ಲಿ ದೊರೆತ ಮಾಮ್ಲುಕ್ ಕಾರ್ಡ್ಸ್, ಇಟಲಿಯಲ್ಲಿ ದೊರಕಿದ ಕಾರ್ಡಗಳು, ಇರಾನ್ ಮತ್ತು ಭಾರತದ ಗಂಜೀಫಾಗಳು ಮೂಲದಲ್ಲಿ ಒಂದೇ ಇರುವುದು ಕಂಡುಬರುತ್ತದೆ. ನಾಲ್ಕು ವಿಧಾನದಲ್ಲಿ ೩ ಮತ್ತು ಎರಡು ಕಾರ್ಡು ನೋಡಬಹುದಾಗಿದೆ. ಮೊದಲ ಮೂರರಲ್ಲಿ ಮಾಮ್ಲುಕ್ ಇಟಾಲಿಯನ್ ಎರಡರಲ್ಲಿ ಇರಾನ್ ಮತ್ತು ಭಾರತಕ್ಕೆ ಸಂಬಂಧಿಸಿದ ಸೂಟಗಳಲ್ಲಿ ೧ರಿಂದ ೧೦ ಸಂಖ್ಯೆಯನ್ನು ಹೊಂದಿದೆ. ಮಾಮ್ಲುಕ್ ಇಟಾಲಿಯನ್ ಪ್ಯಾಕನಲ್ಲಿ ೪ ಸೂಟಗಳಿವೆ. ಇರಾನ್ ಮತ್ತು ಭಾರತದಲ್ಲಿ ೮ ಸೂಟಗಳನ್ನು ಕಾಣಬಹುದು.

ಡಮಾಸ್ಕಸ್‌ನ ಮಾಮ್ಲುಕ್ ಅಧಿಕಾರಿ ತನ್ನ ಸಂಗಡಿಗರೊಂದಿಗೆ ಗಂಜೀಫಾ ಆಟವಾಡಿ ಅಪಾರ ಹಣವನ್ನು ಗಳಿಸಿದನು. ಈತನು ಮುಂದೆ ಸುಲ್ತಾನನಾದನು ಎಂದು ಒಂದು ಕಡೆಯಿಂದ ತಿಳಿದು ಬರುತ್ತದೆ. ಗಂಜೀಫಾ ಹೆಸರು ಇಸ್ತಾನಬುಲ್‌ನಲ್ಲಿರುವ ಟೋಪಕಪಿ ಸರೇ ಮ್ಯೂಜಿಯಂನಲ್ಲಿ ಮಾಮ್ಲು ಸಟ್ಟಿನ ಮೇಲೆ ದಾಖಲಾಗಿದೆ. ಎಲ್. ಎ. ಮೋಯರ್ ಅವರು ಪ್ರಥಮಬಾರಿಗೆ ಇವುಗಳನ್ನು ಪ್ರಸಿದ್ಧಿಗೆ ಬರುವಂತೆ ಮಾಡಿದ್ದಾರೆ. ಅಂದಿನಿಂದ ಇವು ಪೌರ್ವಾತ್ಯ ದೇಶದಲ್ಲಿ ಹುಟ್ಟಿದ ಬಗ್ಗೆ ಚರ್ಚೆ ಇದೆ. ವಿದ್ವಾಂಸರು ಗಂಜೀಫಾ ತುಣುಕುಗಳ ಅಧ್ಯಯನದಿಂದ ಕ್ರಿ.ಶ. ೧೩೦೦ರಲ್ಲಿ ಪ್ರಾರಂಭವಾಗಿರಬಹುದಾಗಿ ಅಭಿಪ್ರಾಯ ಪಡುತ್ತಾರೆ. ಯುರೋಪಿನಲ್ಲಿ ಗಂಜೀಫಾಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ೧೩೭೭ರ ಸುಮಾರಿಗೆ ದೊರೆಕಿದ ಇಸ್ತಾನಬುಲ್ ಸೆಟ್ಟು ನಾಲ್ಕು ಸೂಟಗಳಲ್ಲಿ ಅಂದರೆ ಕಪ್ಪುಗಳು, ಬಿಡ್ಡಗಳು, ನಾಣ್ಯಗಳು, ಮತ್ತು ಪೋಲೋಕೋಲುಗಳು ಪ್ರತಿ ಸೆಟ್ಟಿನಲ್ಲಿ ೧೩ರಂತೆ ಅದರಲ್ಲೊಂದು

೦೩. Dr. Sarala Chopra : Ganjifa, PP -6
೦೪. Dr. Sarala Chopra : Ganjifa, PP - 7

ರಾಜ ಮತ್ತು ನಾಯಿಬ್ ಮತ್ತು ಧನಿ ನಾಯಿಬ್. ಕಂಜಿಫಾಹ್ ಅರಬ್ ಭಾಷೆಯಿಂದ ಬಂದದ್ದು ಆಟ ನಶಿಸುವುದರೊಂದಿಗೆ ಹೆಸರೂ ಮಾಯವಾಯಿತು. ಇತ್ತೀಚೀನ ನಿಘಂಟಿನಲ್ಲಿ ಈ ೪ ಸೂಟುಗಳು ಮಾಮ್ಲಕ ಆಸ್ಥಾನದ ನಾಲ್ಕು ಜನ ಅಧಿಕಾರಿಗಳ ಕರ್ತವ್ಯವನ್ನು ಸೂಚಿಸುತ್ತದೆ. ಕಪ್ಪು ಹಿಡಿವ, ಅರಮನೆ ರಕ್ಷಕ, ಖಜಾಂಚಿ ಮತ್ತು ಪೋಲೋಮಾಸ್ಟರ್[೫] ಅವರ ಗುರುತು ಯಾವುದೇ ಮಾಮ್ಲಕ್ ಕಾರ್ಡಗಳ ಮೇಲೆ ನೋಡಬಹುದಾಗಿದೆ.

ಗಂಜೀಫಾ ಬೇರೆ ಬೇರೆ ಉಚ್ಚಾರಣೆ ಹೊಂದಿದ್ದರೂ ಆಟದ ಎಲೆಗಳು ಎಂಬುದನ್ನು ಸೂಚಿಸುತ್ತದೆ. ಇದು ಭಾರತ, ನೇಪಾಳ, ಇರಾಕ್, ಇರಾನ್ ಮತ್ತು ಕೆಲವು ಅರಬ್ ದೇಶಗಳಲ್ಲಿ ಪ್ರಚಲಿತವಿತ್ತು. ಮೊದಲ ಬಾರಿಗೆ ಯುಷಪ್ ಇಲ್ ಬರಲೀ ಇವರ ಆನಲ್ಸ್‌ಕೆ ಹಿಸ್ಟರಿ ಆಪ್ ಈಜಿಪ್ತ್ ಆ್ಯಂಡ್ ಸಿರಿಯಾ ಎಂಬ ಪುಸ್ತಕದ ಒಂದು ಕಥೆಯಲ್ಲಿ(ಸುಮಾರು ೧೩೯೯–೧೪೧೨) ಗಂಜೀಫಾ, ಕಂಫಾಸ್ ಎಂಬ ಹೆಸರು ದೊರಕುತ್ತದೆ.

ಯುರೋಪಿನಲ್ಲಿ ೧೪ನೇ ಶತಮಾನದಲ್ಲಿ ಅರಬ್ ರಾಷ್ಟ್ರಗಳ ಮೂಲಕ ಗಂಜೀಫಾ ಆಟಗಳು ಪ್ರವೇಶಿಸಿದವು. ಯುರೋಪಿನಲ್ಲಿ ಚಿತ್ರಿತಗೊಂಡ ಅತ್ಯಂತ ಪ್ರಾಚೀನ ಗಂಜೀಫಾ ಎಲೆಗಳೆಂದರೆ ಇಟಲಿಯ ೧೩೭೮ 'ಟ್ಯೂರೊ' ವರ್ಣಮಯ ೨೨ ಗಂಜೀಫಾ ಎಲೆಗಳು ಭೌತಿಕ ಶಕ್ತಿ ಹಾಗೂ ಪ್ರಕೃತಿಯ ಮೂಲದ್ರವ್ಯಗಳ ಸಂಕೇತಗಳಾಗಿರುತ್ತವೆ. ೧೬ನೇ ಶತಮಾನದಲ್ಲಿ ಪಾದ್ರಿಗಳು ಗಂಜೀಫಾ ವಾಕ್ಯ, ಸಂದೇಶಗಳನ್ನು ಬರೆದು ಧಾರ್ಮಿಕ ಉದ್ದೇಶಗಳಿಗೆ ಬಳಸಿಕೊಂಡಿದ್ದು ತಿಳಿದುಬರುತ್ತದೆ.[೬] ೧೪ನೆಯ ಲೂಯಿಸನು ಭೂಗೋಳ, ಇತಿಹಾಸವನ್ನು ಗಂಜೀಫಾ ಎಲೆಗಳ ಮೂಲಕ ಕಲಿತ ವಿವರವಿದೆ. ಶಿಕ್ಷಣದ ಮಾಧ್ಯಮವಾಗಿ ಇಂದ್ರಜಾಲ, ಯಕ್ಷಿಣಿ, ಮುಂತಾದ ವಿದ್ಯೆಗಳಿಗೆ ಗಂಜೀಫಾ ಎಲೆಗಳು ಬಳಕೆಯಾಗಿವೆ ಕ್ರಿ. ಶ. ೧೬೫೫ರಲ್ಲಿ ಕೆನಡಾ ದೇಶವು ಗಂಜೀಫಾ ಎಲೆಗಳನ್ನು ಕಾಗದದ ನಾಣ್ಯದಂತೆ ಉಪಯೋಗಿಸಿತು. ಕ್ರಿ.ಶ ೧೭೬೫ರಲ್ಲಿ ಪೆನ್ಸಿಲ್ವೆನಿಯಾ[೭] ವಿಶ್ವವಿದ್ಯಾಲಯವು ಪ್ರವೇಶ ಪತ್ರ ರೂಪದಲ್ಲಿ ಗಂಜೀಫಾ ಎಲೆಗಳನ್ನು ಬಳಸಿತು. ಪ್ರಾಚೀನ ಅಮೇರಿಕಾದಲ್ಲಿ ಫ್ರೆಂಚ್ ಕ್ರಾಂತಿಯ ವೇಳೆಗೆ ರೇಶನ್‌ಕಾರ್ಡನ ರೂಪದಲ್ಲಿ ಗಂಜೀಫಾ ಚಿತ್ರಕಲೆಯ ಎಲೆಗಳನ್ನು ಬಳಸಿದ್ದು ಕಂಡುಬರುತ್ತದೆ.

ಪೋರ್ಚುಗೀಸರು ಅರಬ್‌ದ ಸಾಂಬಾರ ವ್ಯಾಪಾರವನ್ನು ಮುರಿಯುವದಕ್ಕಾಗಿ ಗುಡ್ ಹೋಪ್ ಭೂಶಿರವನ್ನು ಸುತ್ತಿ ಕ್ಯಾಲಿಕಟ್‌ಗೆ ೧೪೪೮ರಲ್ಲಿ ಬಂದರು. ಹನ್ನೆರಡು ವರ್ಷದೊಳಗೆ ಅವರು ನೌಕಾನೆಲೆ ಮತ್ತು ಭೂನೆಲೆಗಳನ್ನು ಸ್ಥಾಪಿಸಿಕೊಂಡರು. ಗೋವಾ ೧೫೧೦ರಲ್ಲಿ ಇವರ ವಶವಾಯಿತು. ಪರ್ಶಿಯಾದ ದಕ್ಷಿಣದಲ್ಲಿ ಓರ್ಮುಜ ವಶವಾಯಿತು. ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ೧೫೪೨ರಲ್ಲಿ ಧರ್ಮ ಪ್ರಚಾರಕ್ಕಾಗಿ ಬಂದಾಗ ನಾವಿಕರು ಗಂಜೀಫಾ ಆಡುವುದರ ಬಗ್ಗೆ ತನ್ನ ಜುಗುಪ್ಸೆ ವ್ಯಕ್ತಪಡಿಸಿದನು.

ಅವರ ಅತೀ ಆಟದ ಪ್ರೀತಿಯು ಈತನೂ ಆಟವನ್ನು ನೋಡುವಂತೆ ಮಾಡಿತು. ಈತನ ಇರುವಿಕೆ ಆಟಕ್ಕೆ ಮೆರಗು ಕೊಟ್ಟಿರಬೇಕು. ಪೋರ್ಚುಗೀಸರ ಇಟಲಿ ಸ್ಪಾನಿಶ ಸೂಟಗಳ ಸಂಕೇತಗಳಾದ ಕಪ್ ಬಡ್ಗಿ, ನಾಣ್ಯ, ಸ್ಪೇನ್ ಮತ್ತು ರೀ, ಕಲಾಲೊ, ಸೋಟಾ ಎಂಬ ಕೋವರ ಕಾರ್ಡಗಳ ಚಿತ್ರಗಳು ೧೬ರ ಶತಕದಲ್ಲಿ ಕೊಂಕಣನಾಡಿನಲ್ಲಿ ಪ್ರಚಾರವಿದ್ದಿರಬೇಕು. ಈ ಕಾರ್ಡುಗಳನ್ನು ಭಾರತೀಯ ರೀತಿಯಲ್ಲಿ

೦೫. R and N. Y. Leyden : The Playing Cards of India, PP-8

೦೬. ಟಿ. ಜಿ. ಶೆಟ್ಟಿ : ಟ್ಯಾರೋ, ತರಂಗ, ೨೦೧೦, ಪುಟ-೩೫

೦೭. ಎಚ್ಕೆ ಕರ್ಕೇರ : ಇಸ್ಪೇಟ್ ಎಲೆಗಳ ಮಹಲಿನ ಬಾದಷಾ, ತರಂಗ, ೧೯೯೫, ಪುಟ-೨೪

ಪರಿವರ್ತಿಸಿ ಶ್ರೀಮಂತರು ರಾಜಸ್ಥಾನದಲ್ಲಿ ಮತ್ತು ದಕ್ಷಿಣ ಭಾರತದಲ್ಲಿ ಆಟ ಆಡಿದ ಮಾಹಿತಿ ತಿಳಿದುಬರುತ್ತದೆ. ಒಟ್ಟಾರೆ ಪಾಶ್ಚಾತ್ಯ ಕಾರ್ಡ್ ಎಂದೂ ಸೂಚಿಸಿ ಕಾರ್ಡಗಳ ಮೇಲೆ ಪ್ರಭಾವ ಬೀರಿಲ್ಲವೆಂದು ಹೇಳಬಹುದು. ಇದರ ಹಿನ್ನೆಲೆಯುನ್ನು ಮಧ್ಯಏಷಿಯಾ, ಇರಾನ್ ಮತ್ತು ಮಂಗೋಲಿಯದಿಂದ ಪಡೆಯಬಹುದು. ೧೪ನೇ ಶತಕದಲ್ಲಿ ಪ್ರಪಂಚದ ಸಾಂಸ್ಕೃತಿಕ ವಾತಾವರಣವು ಪೌರ್ವಾತ್ಯ ದೇಶದಿಂದ ಪಶ್ಚಿಮದ ಕಡೆಗೆ ಹೊಸ ವಿಚಾರಗಳು ಹರಿಯತೊಡಗಿದವು. ನಮ್ಮ ಊಹೆ ನಿಜವಾಗಿದ್ದರೆ ಈ ಆಟದೆಲೆಗಳು ಮಧ್ಯ ಏಷಿಯಾದಿಂದ ಮೆಡಿಟೇರಿಯನ್ ಪ್ರದೇಶಕ್ಕೆ ಹೋಗಿರಬೇಕು. ನಂತರ ಪರ್ಷಿಯಾ ಮತ್ತು ಭಾರತವನ್ನು ಪ್ರವೇಶಿಸಿರಬೇಕು. ಅರ್ಧ ಶತಕದಲ್ಲಿ ಇಡೀ ಯುರೋಪಿನಲ್ಲಿ ಪ್ರಚಾರಗೊಂಡಿತು. ೧೦೦ ವರ್ಷಗಳ ನಂತರ ಪೋರ್ಚಗೀಸರು ಪರ್ಶಿಯಾ, ಭಾರತ ಮತ್ತು ಜಪಾನಿಗೆ ಬಂದಿದ್ದರು. ಅಲ್ಲಿ ಇಂತಹ ಅನೇಕ ಗಂಜೀಫಾ ಆಟಗಳನ್ನು ನೋಡಿದರು. ಮಧ್ಯ ಏಶಿಯಾದಿಂದ ತನ್ನ ಹಿರಿಯರ ಬಳಿಯಿದ್ದ ೮ ಸೂಟಿನ ಗಂಜೀಫಾವನ್ನು ಅಕ್ಬರ್ ತನ್ನ ಫತೇಪುರ ಸಿಕ್ರಿ ಅರಮನೆಯ ಪ್ರಾಂಗಣದಲ್ಲಿ ಆಡುತ್ತಿದ್ದ ಬಗ್ಗೆ ಪೋರ್ಚುಗೀಸರು ತೆಂಗಿನ ಮರದ ನೆರಳಿನಲ್ಲಿ ಗೋವಾದ ಕುಡಿತದ ಅಡ್ಡೆ ಬಳಿ ಆಟವಾಡುತ್ತಿದ್ದ ಉಲ್ಲೇಖಗಳಿವೆ.

'ಗಂಜೀಫಾ' ಪದವು ಮೊದಲ ಬಾರಿಗೆ ಈಜಿಪ್ಟ್ ಮತ್ತು ಸಿರಿಯಾದೇಶದ ತಗಾರಿ ಪಕ್ಷಿಗಳ ಬದುಕಿನ ಚರಿತ್ರೆಯಲ್ಲಿ ದೊರೆಯುವುದು. ಕಂಜೀಫಾ ಎಂಬ ಪದವನ್ನು ಮಮ್ಲುಕ್ ಎಲೆಗಳ ಆಟದ ಸಂಪುಟದ ಮೇಲೆ ಬರೆಯಲಾಗಿತ್ತು. ಅದನ್ನು ಇಸ್ತಾಂಬುಲ್‌ದ ಟಾಪಕಾಪಿ ಸರೇ ವಸ್ತು ಸಂಗ್ರಹಾಲಯದಲ್ಲಿ ಕಾಯ್ದಿರಿಸಲಾಗಿದೆ. ಪರ್ಶಿಯಾ ದೇಶದ ಕವಿ ಅಹಲಿ ಶಿರಾಝಿಯು ತನ್ನ ರುಭಾಯತ್-ಏ-ಗಂಜೀಫಾ್ (೧೫೧೪-೧೫) ದಲ್ಲಿ ಎಂಟು ಗಂಜೀಫಾ ಕಟ್ಟುಗಳ ಮೇಲೆ ೯೬ ಗಂಜೀಫಾಗಳಲ್ಲಿ ನಾಲ್ಕು ಸಾಲಿನ ಪದ್ಯಗಳ ಮುಖಾಂತರ ಅಂದವಾಗಿ ವರ್ಣಿಸಿದ್ದಾನೆ.

ಈ ಆಟದಲ್ಲಿ ಎಲೆಗಳನ್ನು ಬಳಸಿರುವ ಮೊದಲಿನ ಉಲ್ಲೇಖವೆಂದರೆ ಬಾಬರನ ನೆನಪುಗಳ ಗಂಜೀಫಾ ಆಟದಲ್ಲಿ. ಆತ ತನ್ನ ನೆನಪುಗಳನ್ನು ದಾಖಲಿಸುತ್ತಾ ಹೀಗೆ ಬರೆಯುತ್ತಾನೆ: "ಅಂದಿನ ರಾತ್ರಿಯೇ ನಾವು ಆ ಗ್ರಾಮವನ್ನು ಬಿಟ್ಟೆವು. ಯೋಧ ಮೀರಅಲಿಯನ್ನು ಶಹ ಹಸನನ ಹತ್ತಿರ ಚೂರು-ಪಾರು ಸಾಮಾನುಗಳೊಂದಿಗೆ ಗಂಜೀಫಾ ಆಟದ ಎಲೆಗಳನ್ನು ತರಲು ಕಳಿಸಲಾಯಿತು. ಅವನು ಅವುಗಳನ್ನು ಮೆಚ್ಚಿಕೊಂಡಂತೆ ಅವುಗಳ ವಿವರವನ್ನು ಕೇಳಿದ ಮೊಘಲ್ ಸಾಮ್ರಾಟ್ ಹುಮಾಯೂನನ ಸಹೋದರಿ ಬೇಗಂ ಗುಲಬದನ್ ಈ ಆಟದ ಕಥೆಯನ್ನು ಮುಂದುವರೆಸಿದಳು. ಆಕೆ ತಾನು ರಚಿಸಿರುವ 'ಹುಮಾಯೂನ-ನಾಮಾ' ಗ್ರಂಥದಲ್ಲಿ ಈ ಆಟದ ಎಲೆಗಳನ್ನು 'ವರ್ಖ'[೧೦] ಎಂದು ಪದ ಬಳಸಿದ್ದಾಳೆ. ಆಕೆಯು ಈ ಆಟವನ್ನು ಕುರಿತು ಹೀಗೆ ಬರೆಯುತ್ತಾಳೆ. ಹಲವು ಮನೋರಂಜನೆಯ ಈ ಆಟವು ವಿನೋದದಿಂದ ತುಂಬಿದೆ. ಹನ್ನೆರಡು ಜನರ ಮಧ್ಯದಲ್ಲಿ ಪ್ರತಿಯೋರ್ವರಿಗೆ ಇಪ್ಪತ್ತು ಎಲೆಗಳನ್ನು ಮತ್ತು ಇಪ್ಪತ್ತು ಶಾರಾಖಿಗಳು ಹಾಳಾಗದಂತೆ ಆಡಬೇಕು. ಯಾರು ಇಪ್ಪತ್ತು ಶಾರಾಖಿಗಳನ್ನು ಕಳೆದುಕೊಳ್ಳುವರೋ ಅವರಿಗೆ ಐದು ಮಿಸ್ ಖಾಲಗಳನ್ನು ಮಾಡಬೇಕು. ಪ್ರತಿಯೊಬ್ಬ ಆಟಗಾರ ತನ್ನ ಸ್ವಂತಕ್ಕೆ ತುಂಬಿಕೊಳ್ಳುತ್ತಲೇ ವಿಜೇತರಿಗೆ ಇಪ್ಪತ್ತು ಶಾರಾಖಿಗಳನ್ನು ನೀಡಬೇಕು ಎನ್ನಲಾಗಿದೆ.

---

೦೮. Kishor Govardhan Das:Cards of Honour, Deccan Herald, 2008, PP-5
೦೯. Kishor Govardhan Das:Chad.Mysore Playing Cards, Ludica, 2004, PP-2
೧೦. R and N. Y. Leyden : The Playing Cards of India, PP-11

ಕ್ರಿ.ಶ. ೧೫೪೨ರಲ್ಲಿ ಕ್ರೈಸ್ತ ಸಂಸ್ಥೆಯ ಸಂತ ಪ್ರಾನ್ಸಿಸ್ ಜೇವಿಯರನು ಪೋರ್ಚುಗೀಸ್ ನಾವಿಕರು ಜೂಜಿನ ಈ ಎಲೆಯಾಟದಲ್ಲಿ ಪಾಲ್ಗೊಂಡಿರುವುದರ ವಿರುದ್ಧ ದೂರುತ್ತಾನೆ. ಅಬುಲ್ ಫಝಲ್ (೧೫೬೫)ನು ತನ್ನ 'ಐನ್-ಎ-ಅಕ್ಬರಿ' ಕಾವ್ಯದಲ್ಲಿ ವಿವಿಧ ವರ್ಣನೆಗಳೊಂದಿಗೆ ಈ ಆಟವನ್ನು ಬಣ್ಣಿಸಿರುವಂತೆ ಸಾಮ್ರಾಟ ಅಕ್ಬರನು ಆ ಆಟ ಆಡಿದ ವಿವರಗಳನ್ನು ನೀಡುತ್ತಾನೆ. 'ಗಂಜೀಫಾ' ಕಟ್ಟಿನಲ್ಲಿ ೧೪೪ ಎಲೆಗಳಿದ್ದವು. ಅದನ್ನು ಅಕ್ಬರ್ ದೊರೆಯು ೮ ತಂಡಗಳನ್ನಾಗಿ ೯೬ ಎಲೆಗಳಿಗೆ ನಿಗದಿಪಡಿಸಿದುದನ್ನು ಆತ ವಿವರಿಸುತ್ತಾನೆ. ಜಹಾಂಗೀರ ದೊರೆಯ ವಜೀರನ ಹಿರಿಯ ಅಣ್ಣನಾಗಿದ್ದ ಆಘಾ ಮಹ್ಮದ ತಾಹೀರ ವಾಸ್ಲಿ (೧೬೦೦)ಯು ತನ್ನ ಕೃತಿಯಾಗಿರುವ 'ದಿವಾನೆ-ಎ-ವಸ್ಲೀ'ಯಲ್ಲಿ ಎಂಟು ಪುಟಗಳ ಗಂಜೀಫಾ ಕಟ್ಟಿನ ಬಗ್ಗೆ ವಿವರಿಸುತ್ತಾನೆ. ಅದರಲ್ಲಿ ಆತ 'ನಕ್ಸ' ಎಂಬ ಪದವನ್ನು ಬಳಸಿಕೊಂಡು ಈ ಎಲೆಗಳ ಹೊಂದಾಣಿಕೆಯಲ್ಲಿ ಯಶ ಪಡೆಯುವಲ್ಲಿ ಯತ್ನಿಸುತ್ತಾನೆ. ಜಹಾಂಗೀರ ದೊರೆಯ ಮತ್ತೊಬ್ಬ ಉದ್ಯೋಗಿ ಮಿರ್ಜಾ-ಎಂ-ಸಾಧಿಕ್ ನು ಬರೆದಿರುವ 'ಶಹೀದ-ಎ-ಸಾಧಿಕ್' (೧೬೯-೦೫) ಕೃತಿ[೧೧]ಯಲ್ಲಿ ೬೪ ವಿಭಾಗಗಳಿದ್ದು, ಅದರಲ್ಲಿ ಗಂಜೀಫಾದ ಚರಿತ್ರೆಯೊಂದಿಗೆ ಇಬ್ಬರಿಂದ ನಾಲ್ಕು ಜನರು ಆಡುವ ವಿಧಾನವನ್ನು ವಿವರಿಸುತ್ತಾನೆ.

ಅನೇಕ ಕುಟುಂಬಗಳು ಗಂಜೀಫಾ ಕಟ್ಟುಗಳನ್ನು ಇಂದಿಗೂ ಇಟ್ಟುಕೊಂಡಿವೆ. ಅದರಲ್ಲೂ ದರಬಾರಿ ಮತ್ತು ಬಜಾರಿ ಗಂಜೀಫಾ ಕಟ್ಟುಗಳನ್ನು ಹೊಂದಿದ್ದವು. ಸಾಮಾನ್ಯವಾಗಿ ಬಜಾರಿ ಕಟ್ಟುಗಳು ಒರಟಾಗಿರುವ ಕಾರಣ ಅವುಗಳನ್ನು ನಿತ್ಯ ಬಳಸದಂತೆ ದರಬಾರಿ ಕಟ್ಟುಗಳನ್ನು ವಿಶೇಷ ಸಂದರ್ಭಗಳಲ್ಲಿ ಬಳಸುತ್ತಿದ್ದರು. ಇನ್ನೊಂದು ವಿಶೇಷವೆಂದರೆ ಈ ಗಂಜೀಫಾಗಳನ್ನು ಸಮಾರಂಭಗಳಲ್ಲಿ ಕಾಣಿಕೆಗಳನ್ನಾಗಿ ಮತ್ತು ನೆನಪಿನ ಕಾಣಿಕೆಗಳನ್ನಾಗಿ ಕೊಡುವ ಪದ್ಧತಿ ಇತ್ತು. ಆದ್ದರಿಂದ ಮಾರುಕಟ್ಟೆಯಲ್ಲಿ ಖರೀದಿಗಾಗಿ ಇಡುತ್ತಿದ್ದರು. ಬಾಬರ್-ನಾಮಾ ಗ್ರಂಥದ ಮಾಹಿತಿಯಿಂದ ಗಂಜೀಫಾ ಕಟ್ಟುಗಳನ್ನು ಕಾಣಿಕೆ ಕೊಡುವುದಕ್ಕೆ ಕ್ರಿ.ಶ. ೧೫೨೭ರಲ್ಲಿ ಉಪಯೋಗಿಸಿದ್ದರ ಮಾಹಿತಿ ದೊರಕುತ್ತದೆ. ಪ್ರಸ್ಥಬಾ-ಚಿಂತಾಮಣಿ, ಇದೊಂದು ಓರಿಯಾ ದೇಶದ ಪಠ್ಯವಾಗಿದ್ದು, ಅದರಲ್ಲಿ ಗಂಜೀಫಾ ಕಟ್ಟುಗಳನ್ನು ಸಾಬೂನು ಮತ್ತು ಇತರ ವಸ್ತುಗಳಂತೆ ಮಾರಾಟಕ್ಕೆ ಇಟ್ಟ ವಿವರ ದೊರೆಯುವುದು. ಗಂಜೀಫಾ ಕಟ್ಟುಗಳನ್ನು ಓರಿಸ್ಸಾ ರಾಜ್ಯಕ್ಕೆ ಬರುವ ಪ್ರವಾಸಿಕರು ತಮ್ಮ ನೆನಪುಗಳಿಗಾಗಿ ಮತ್ತು ಕಾಣಿಕೆ ಕೊಡಲು ಖರೀದಿಸುತ್ತಿದ್ದರು. ವಿಶೇಷವೇನೆಂದರೆ ಗಂಜೀಫಾ ಕಟ್ಟುಗಳನ್ನು ಮದುವೆಯ ಸಂದರ್ಭದಲ್ಲಿ ಮದುಮಗಳ ವರದಕ್ಷಿಣೆ ನೀಡಲು ಬಳಸುತ್ತಿದ್ದರು. ಮಹಾರಾಷ್ಟ್ರದ ಬ್ರಾಹ್ಮಣ ಕುಟುಂಬದಲ್ಲಿ ಅವರು ಹೋದೆಡೆಯಲ್ಲೆಲ್ಲಾ ಬಳಸುವುದಕ್ಕಾಗಿ ವಧುವಿನ ಉಡುಗೊರೆಯಂತೆ ಬಳಸಲಾಗುತ್ತಿತ್ತೆಂದು ತಿಳಿದುಬರುತ್ತದೆ. ಕಾರ್ತಿಕ ಮಾಸದಲ್ಲಿ ಮದುವೆಯಾದ ವಧುವನ್ನು ಗಂಡನ ಮನೆಗೆ ಕಳಿಸುವಾಗ ಗಂಜೀಫಾದ ಕಟ್ಟುಗಳನ್ನು ಗಂಚುವಾದ ಹೆಸರಿನಲ್ಲಿ ಹಲವು ಕಾಣಿಕೆಗಳೊಂದಿಗೆ ನೀಡಲಾಗುತ್ತಿತ್ತು.[೧೨] ಆದುದರಿಂದ ಗಂಜೀಫಾವು ಬರೀ ಕ್ರೀಡೆಯಲ್ಲದೆ ಧಾರ್ಮಿಕತೆಗೆ ಹೆಚ್ಚು ಪ್ರಾಧಾನ್ಯವನ್ನು ನೀಡಿದ ಒಂದು ಆಟವಾಗಿದೆಯೆಂದು ಹೇಳಬೇಕಾಗುತ್ತದೆ.

ಇರಾನಿನಲ್ಲಿ ಗಂಜೀಫಾ ದಾಖಲೆಗಳು

೧೫೧೪-೧೫ರಲ್ಲಿ ತಾಬ್ರಿಜನಲ್ಲಿ ವಾಸಿಸುತ್ತಿದ್ದ ಪರ್ಶಿಯನ್ ಕವಿ ಅಸ್ಸಿಶಿರಾಜ್ ಜಬಾಯಿಕ್

---

೧೧. R and N. Y. Leyden : The Playing Cards of India, PP-11
೧೨. Dr. Sarala Chopra : Ganjifa, PP - 10

ಗಂಜೀಫಾ ಎಂಬ ಕಾವ್ಯವನ್ನು ರಚಿಸಿದ. ಈ ರಚನೆ ೯೬ ಸಾಲುಗಳ ಕಾವ್ಯವಾಗಿತ್ತು. ೮ ಸೂಟನ ೯೬ ಕಾರ್ಡುಗಳಿಗೆ ಒಂದೇ ಒಂದು ಪದ್ಯ ರಚನೆಯಾಗಿತ್ತು. ಈ ಪದ್ಯಗಳು ಪ್ರೇಮದ ವಿಷಯವನ್ನು ಹೊಂದಿದ್ದವು. ಆದರೆ ಈ ಕಾರ್ಡಗಳ ಕುರಿತು ಯಾವುದೇ ಉಲ್ಲೇಖಗಳು ಕಂಡುಬಂದಿಲ್ಲ. ಮೊದಲ ಬಾರಿಗೆ ೮ ಸೂಟುಗಳಿಗೆ ಹೆಸರು ನೀಡಿದ್ದು ಕಂಡುಬಂದಿದೆ ಹೀಗೆ :

ಗುಲಾಮ	ಸೇವಕ
ತಾಜ್	ಕಿರೀಟ
ಶಂಶೇರ	ಖಡ್ಗ
ಅಶ್ರಫ್	ಬಂಗಾರದ ನಾಣ್ಯ
ಚಾಂಗ್	ವಾದ್ಯ
ಬರಾತ್	ಲೇಖ
ಟಂಕಾ	ಬೆಳ್ಳಿನಾಣ್ಯ
ಕಿಮಾಶ	ಸ್ಟೋರ್ಸ್

ಅಶ್ರಫಿ ಮತ್ತು ಟಂಕಾಗಳು ಇರಾನ್ ಮತ್ತು ಮಧ್ಯ ಏಷಿಯಾದಲ್ಲಿ ಬಳಕೆಯಲ್ಲಿದ್ದವು. ಇರಾನಿನ ಮೊದಲ ರಾಜ ಇಸ್ಮಾಯಿಲ್‌ನ ಸಫಾಯಿಜ್‌ಗೆ ಗಂಜೀಫಾ ಆಟವೆಂದರೆ ಪ್ರಾಣ. ಆದ್ದರಿಂದ ಅವನ ಕಾಲದಲ್ಲಿ ಗಂಜೀಫಾ ಆಟವು ಹೆಚ್ಚಿನ ಪ್ರೋತ್ಸಾಹ ಪಡೆಯಿತು. ಅಸ್ಸಿಸಿರಾಜ ಆಟದ ಬಗ್ಗೆ ಬರೆದ ೮ ವಿಶಿಷ್ಟವಾದ ಅರಗಿನ ಬಣ್ಣದ ಎಲೆಗಳು ಇದರ ಪ್ರೋತ್ಸಾಹಕ್ಕೆ ಸಾಕ್ಷಿಯಾಗಿವೆ. ಇವು ವಿಯೆನ್ನಾದ ನ್ಯಾಶನಲ್ ಲೈಬ್ರರಿಯಲ್ಲಿ ದೊರೆಕುತ್ತವೆ. ಈ ವರ್ಣಚಿತ್ರಗಳು ೫೦ ವರ್ಷಗಳ ಹಿಂದೆ ಪ್ರಕಟವಾದವು. ಡಾ. ಡೊರೋಕಿಯ ಡೂಡಾ ಅವರು ಈ ಎಲೆಗಳ ಆಟಕ್ಕೆ ಸಂಬಂಧಿಸಿದ ಬಗ್ಗೆ ಇಸ್ಲಾಂ ಪುಸ್ತಕಗಳ ಕ್ಯಾಟಲಾಗಲ್ಲಿ ಪ್ರದರ್ಶನಸಂದರ್ಭದಲ್ಲಿ ಸೂಚಿಸಿದ್ ದಾರೆ.[೧೩] ೧೯೮೦ರ ವಿಯೆನ್ನಾದಲ್ಲಿನ ಕೈಬರಹ ಪತ್ರಿಕೆಯಲ್ಲೂ ಇವುಗಳ ವಿವರಗಳಿವೆ.

೮ ವರ್ಣಚಿತ್ರಗಳನ್ನೊಳಗೊಂಡ ಗಂಜೀಫಾ ಕಟ್ಟನ್ನು ಅಲ್ಬರಿ ಸುಲ್ತಾನ ಮುರದ ಈತನಿಗೆ ಇಸ್ತಾನ ಬುಲ್‌ನಲ್ಲಿ ೧೫೭೨-೭೪ರಲ್ಲಿ ನೀಡಲಾಗಿದೆ. ಅವುಗಳು ೧೩೦ x ೯೫, ೧೧೨-೧೨೮ ಎಂ.ಎಂ. ಅಳತೆಯಲ್ಲಿವೆ. ಆಟ ಆಡಲು ದೊಡ್ಡಗಾತ್ರವನ್ನು ಹೊಂದಿದ್ದವು. ಈ ಎಲ್ಲ ವರ್ಣಚಿತ್ರಗಳು ಫಫಾವಿದ್ ರಾಜರಿಗಿಂತ ಹಿಂದಿನವು. ಮತ್ತು ಜೆಹ್‌ಜದ ಪ್ರಭಾವವನ್ನು ಹೊಂದಿವೆ. ಇವುಗಳ ಕಾಲ ೧೫೨೫-೩೦ ಆಗಿದ್ದು ವರ್ಣಚಿತ್ರಗಳು ಕಮಾನಿನ ಒಳಗಿದ್ದ ಚಿನ್ನದ ಹೂಗಳಿಂದ ಅಲಂಕೃತವಾಗಿವೆ. ಬಹಳಷ್ಟು ಭಾರತೀಯ ಗಂಜೀಫಾ ಎಲೆಗಳು ಆಯತ ಆಕಾರವನ್ನು ಹೊಂದಿದ್ದು ಕಮಾನುಗಳನ್ನು ಒಳಗೊಂಡಿವೆ. ಒಂದು ಎಲೆಗೆ ಪೋಲೋ ಆಟಗಾರನನ್ನು ಚಿತ್ರಿಸಲಾಗಿದೆ. ಅವನ ಜೊತೆಗೆ ಇಬ್ಬರನ್ನು ಕಾಣಬಹುದು. ಅವರು ಪೋಲೋ ಸ್ಟಿಕ್ ಹಿಡಿದಿದ್ದಾರೆ. ಇದರ ರಚನೆ ಭಾರತೀಯ ಗಂಜೀಫಾದ ವಜೀರ ಕಾರ್ಡನಂತಿದೆ. ಮಮ್ಲುಕ್ ಪ್ಯಾಕಿನ ಪೋಲೊ ಆಟಗಾರರು ನೆನಪಿಗೆ ಬರುತ್ತಾರೆ. ಉಳಿದ ಗಂಜೀಫಾ ಚಿತ್ರಗಳು ಅನೇಕ ಗುಂಪು ಚಟುವಟಿಕೆಗಳಲ್ಲಿರುವುದು ಕಂಡು ಬರುತ್ತದೆ. ಸಂಖ್ಯೆಯುಳ್ಳವು ಬಿಲ್ಲುಗಾರರು, ಗೋಧಿ ರಾಶಿ ಮಾಡುವವರು, ಹಣ್ಣು ಮಾರುವವರು ಸೂಟಿನ ಎರಡು ಕಾರ್ಡುಗಳಿವೆ.

---

೧೩. R and N. Y. Leyden : The Playing Cards of India, PP-11

ಹತ್ತರ ಜೊತೆಗೆ ಒಂದು ಇನ್ನೊಂದು ಮೂರು ಪ್ರಾಣಿಗಳೊಂದಿಗೆ ಮತ್ತು ಒಂದು ಕಾರ್ಡೆ ಅಲಂಕೃತ ಹೋರಿಯದು, ಗಂಜೀಫಾ ಪ್ಯಾಕ್ ಪ್ರಾಣಿಚಿತ್ರಗಳನ್ನು ಹೊಂದಿರುವುದು ಅಪರೂಪವೇನಲ್ಲ. ಕೊನೆಗೆ ಒಂದು ಟ್ಯಾಬ್ಲಟ್ ಇಬ್ಬರು ರಾಕ್ಷಸರನ್ನು (ಜಿನ್) ತೋರಿಸುತ್ತದೆ. ಈ ಇರಾನಿ ಕಾರ್ಡಗಳು ಅಕ್ಬರಕಾಲದ ಹನ್ನೆರಡು ಸೂಟಗಳನ್ನು ಹೊಂದಿದ ಅಸುರಪಟ್ಟಿಯನ್ನು ಹೋಲುತ್ತದೆ.[೧೪] ಈ ವರ್ಣಚಿತ್ರಗಳು ಆಟದೆಲೆಗಳಾಗಿದ್ದ ಪಕ್ಷದಲ್ಲಿ ಗಂಜೀಫಾ ಹಿನ್ನೆಲೆಯಲ್ಲಿ ರಚಿಸಲಾಗಿದೆ. ಅಸ್ಲಿಶಿರಾಜ್ ಹೇಳಿದ ಚಿತ್ರಗಳಿಗೆ ಇವು ಹೊಂದಾಣಿಕೆಯಾಗುವುದಿಲ್ಲ. ಅಸ್ಲಿ ಶಿರಾಜನು ಈ ಚಿತ್ರಕಾರನ ಸಮಕಾಲೀನನಾಗಿರಬೇಕು. ಅಸ್ಲಿಶಿರಾಜನ ಕಾವ್ಯ ಹೇಗೆ ಅರಸನಿಗಾಗಿ ಬರೆದುದೊ ಹಾಗೆ ಅರಗಿನ ಗಂಜೀಫಾ ಕೃತಿಗಳು ಅರಸನಿಗಾಗಿ ರಚಿತವಾದವುಗಳಾಗಿವೆ.

ಗಂಜೀಫಾ ಆಟದ ಕರ್ಮ ಮತ್ತು ಗಂಜೀಫಾ ಆಟದ (೧೬೦೦) ಬಗ್ಗೆ ಸಂಸ್ಕೃತ ಕಾವ್ಯದಲ್ಲಿ ಎಂಟು ಘಟಕದ ಗಂಜೀಫಾ ಕಟ್ಟಿನ ಬಗ್ಗೆ ವಿವರವಿದೆ. ಓರಿಸ್ಸಾ ರಾಜ್ಯದ ೧೮ನೇ ಶತಮಾನದ ಪ್ರಸ್ಥಭಾ ಚಿಂತಾಮಣಿ ಗ್ರಂಥದಲ್ಲಿ ಗಂಜೀಫಾವನ್ನು ಕಂಜೀಫಾ ಎಂದು ಬರೆಯಲಾಗಿದೆ. ಗಂಜೀಫಾ ಗಾಂಧರ್ವಿ ೧೮ನೇ ಶತಮಾನದ ಹಿಂದೀಕವನಗಳ ಈ ಸಂಕಲನದಲ್ಲಿ ಫಿರಂಗಿಯವರು ಗಂಜಪಾ ಎಂದು ವಿವರಣೆ ನೀಡಿದ್ದಾರೆ. ಅದರಲ್ಲಿ ನಲವತ್ತು ಎಲೆಗಳ ಬಗ್ಗೆ ವಿವರಣೆ ಇದೆ. ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರರ (೧೭೯೪-೧೮೬೮) ಶ್ರೀತತ್ವನಿಧಿಯು ಕೊನೆಯ ಅಧ್ಯಾಯವಾಗಿರುವ ಕೌತುಕನಿಧಿಯಲ್ಲಿ ಗಂಜೀಫಾದ ಹದಿಮೂರು ಕಟ್ಟುಗಳ ವಿವರಣೆಯನ್ನು ನೀಡುತ್ತದೆ. ದಾಜಿ ಜ್ಯೋತಿರ್ವಿದನು ೧೮೭೯ರ ವಿಕ್ರಮ ಸಂವತ್ಸರದಲ್ಲಿ (೧೮೨೨) ಬರೆದ 'ಶಟ ವಿನೋದ' ಕೃತಿಯಲ್ಲಿ ಅರವತ್ತು ವಿನೋದಾವಳಿಯನ್ನು ವಿವರಿಸಿ ಅದರಲ್ಲಿ ದಶಾವತಾರ ಅಥವಾ ಚಂಗಾಂಚನ ಕೃತಿಯಲ್ಲಿ ಗಂಜೀಫಾ ವಿವರಣೆ ಇದೆ. ಆನೆಯ ವೀರಾಸ್ವಾಮಿ (೧೮೩೦)ಯು ಗಂಜೀಫಾದ ಎಲೆಗಳು ನಿಜಾಂಬಾದ ಜಿಲ್ಲೆಯ ಬಾಲಕೊಂಡಾದಲ್ಲಿ ತಯಾರಾಗುವ ವಿವರವನ್ನು ನೀಡಿದ್ದಾನೆ. ಮತ್ತು ಅವುಗಳನ್ನು ಮಾರಾಟಕ್ಕಾಗಿ ಹೈದರಾಬಾದಿಗೆ ಕಳಿಸಿದ ವಿವರವನ್ನು ನೀಡುತ್ತಾನೆ. ಹರಿಕೃಷ್ಣ ಕವಿಯು ಕ್ರೀಡಾ ಕೌಶಲ್ಯಮ್[೧೫] (೧೮೭೧) ಕೃತಿಯಲ್ಲಿ ಮೂರು ವಿಧದ ಆಟದ ಎಲೆಗಳ ಚಿತ್ರರಚನೆಗಳ ಬಗ್ಗೆ ವಿವರಿಸುತ್ತಾನೆ. ಚಂಗ ಕಾಂಚನದಲ್ಲಿ ೯೬ ಎಲೆಗಳಿರುವ ವಿವರ ನೀಡುತ್ತಾನೆ. ಆತನ ಹೂಣ ದೇಶದ ಕ್ರೀಡಾಪತ್ರ ಕೃತಿಯಲ್ಲಿ ೫೨ ಎಲೆಗಳು ಮತ್ತು ದಶಾವತಾರ ಗಂಜೀಫಾದಲ್ಲಿ ೧೨೦ ಎಲೆಗಳ ವಿವರವಿದೆ. ಭಗವಾನ್ ಗಂಗಾಧರ ಪಾಂಡೆ (೧೯೦೦)ಯ ಮರಾಠಿ ಕೃತಿಯಲ್ಲಿ ಗಂಜೀ ಪಾಂಚ ಖೇಲ ಮತ್ತು ದಶಾವತಾರ ಗಂಜೀಫಾ ಮತ್ತು ಅದರ ನಿಯಮಗಳ ಕುರಿತು ವಿವರಣೆ ಇದೆ.

ರುಡಾಲ್ಫ್ ಲೆಡನ್‌ನ ಪ್ರಕಾರ, ಸಾಹಿತ್ಯ ಮತ್ತು ಕೇಳಿಕೆಯ ಮಾತುಗಳು ಸಮ್ಮಿಲನಗೊಂಡು ಈ ಆಟಕ್ಕೆ ಹಲವು ದಂತಕತೆಗಳು ಮೂಲವಾಗಿದೆ. ಹಲವು ಸಿದ್ಧಾಂತಗಳು ಪರ್ಯಾಯ ಆಲೋಚನೆಗಾಗಿ ಮತ್ತು ಹಲವಾರು ದೇಶಗಳಾದ ಭಾರತ, ಚೀನಾ, ಜಪಾನ್, ಪರ್ಶಿಯಾ, ಈಜಿಪ್ಟ್‌ಗಳ ಉದ್ದೇಶವೆಂದರೆ ಆ ಆಟದ ಪಾಲಕತ್ವವನ್ನು ಪಡೆಯುವುದಾಗಿರುತ್ತದೆ. ಕೆಲ ವಿದ್ವಾಂಸರು ಚೀನಾದೇಶವೇ ಅದರ ಮೂಲವಾಗಿರಬೇಕೆಂದು ಯೋಚಿಸುತ್ತಿದ್ದಾರೆ. ಅವರ ಸಂಶೋಧನೆಯ ವಾದದ ತಳಹದಿ ಎಂದರೆ ಕಾಗದ ಮತ್ತು ಮುದ್ರಣಗಳು ಚೀನಾದೇಶದಿಂದಲೇ ಪ್ರಾರಂಭಗೊಂಡವು ಎಂದು ಇದರ ಪರಿಚಯದ

೧೪. Dr. Sarala Chopra : Ganjifa, PP - 10
೧೫. R and N. Y. Leyden : The Playing Cards of India, PP- 09

ಸ್ಥಾಪನೆಗೆ ಕಾರಣವೆಂದರೆ ಚೀನಾದೇಶದ ಹುಂಡಿಯ ಎಲೆಯು ಈ ಆಟದ ಎಲೆಯೇ ಆಗಿತ್ತು. ಮತ್ತೊಂದು ವಿದ್ವಾಂಸರ ತಂಡವು ಪ್ರತಿ ಆಟದಲ್ಲಿಯ ನಾಲ್ಕು ಘಟ್ಟಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು ಇದರ ಮೂಲ ಭಾರತವಾಗಿರಬೇಕೆಂದು ಊಹಿಸುತ್ತಾರೆ. ಈ ಘಟ್ಟಗಳನ್ನು ಪರಿಚಯಿಸುತ್ತಾ ಸಾಂಕೇತಿಕವಾಗಿ ಅರ್ಧನಾರೀಶ್ವರನ ಲಕ್ಷಣಗಳನ್ನು, ನಾಲ್ಕು ದಿಕ್ಪಾಲಕರನ್ನು ಮತ್ತು ನಾಲ್ಕು ದಿಸೆಗಳಲ್ಲಿಯ ಭಾರತದ ದಾಳಗಳಾಟದ ಕುರಿತು ಚದುರಂಗವನ್ನು ಲಕ್ಷ್ಯದಲ್ಲಿರಿಸಿಕೊಂಡು ಈ ವಾದವನ್ನು ಮಂಡಿಸುತ್ತಾರೆ.

ಇತ್ತೀಚಿನ ಭಾರತೀಯ ವಿದ್ವಾಂಸರ ಪರ್ಯಾಲೋಚನೆಯಂತೆ, ಈ ಆಟದ ಎಲೆಗಳ ಮೂಲವು ಹರಪ್ಪಾ ನಾಗರಿಕತೆಯಲ್ಲಿ ಕಂಡುಬರುತ್ತದೆ ಎಂಬುದನ್ನು ಪತ್ತೆ ಹಚ್ಚಿದ್ದಾರೆ. ಶ್ರೀಯುತ ಶಂಕರ ಮೊಕಾಶಿ ಪುಣೇಕರ ಅವರು ನಾಲ್ಕು ಹಂತಗಳಲ್ಲಿ ಹೊಸ ಎಲೆಗಳಲ್ಲಿ ಗುರುತಿಸುತ್ತಾರೆ. ಸಲಿಕೆ, ವಜ್ರ, ಕೂಟ ಮತ್ತು ಹೃದಯದ ಚಿಹ್ನೆಗಳನ್ನು ಅವರು ಹರಪ್ಪನ್ ಲಿಪಿಗಳಲ್ಲಿ ಈ ರೀತಿಯಾಗಿ ಗುರುತಿಸುತ್ತಾರೆ. ಓ.ಪ.ಕಾ ಮತ್ತು ಔ ಅವರು ಆಸಕ್ತಿಯಿಂದ ಈ ವಾದವನ್ನು ಸಮರ್ಥಿಸಿಕೊಳ್ಳುವರಲ್ಲದೆ ಅವರು ಭಾರತೀಯ ಚರಿತ್ರೆಯ ಕೆಲ ಹೇಳಿಕೆಗಳನ್ನು ಮತ್ತು ಕೆಲ ಘಟನೆಗಳನ್ನು ಪರಿಗಣಿಸಿ ತಮ್ಮ ವಿಚಾರವನ್ನು ನಮ್ಮ ಮುಂದೆ ಇಡುತ್ತಾರೆ. ಅಬುಲ್ ಫಿರಜ್‌ಲ್‌ರ ಹೇಳಿಕೆಯಂತೆ ಈ ಆಟವು ಪ್ರಾಚೀನ ಋಷಿ, ಮುನಿಗಳ ಶೋಧನೆಯಾಗಿದೆ ಎಂದು ಒಂದು ವಿಧದಲ್ಲಿ ಹೇಳಿದರೆ, ಮತ್ತೊಂದು ರೀತಿಯಲ್ಲಿ ಇದು ವೇದಕಾಲದ ಹತ್ತು ಜನ ಅರಸರ ಸಮರವಾಗಿದೆ ಎಂದು ಸೂಚಿಸುವರಲ್ಲದೆ ಈ ಆಟದ ಮೂಲವು ಸಾಂದರ್ಭಿಕವಾಗಿ ನಡೆದ ಬಹು ದೊಡ್ಡ ಯುದ್ಧವಾಗಿದೆ ಎನ್ನುವರು. ಅವರದೆ ಮಾತುಗಳಲ್ಲಿ ಈ ರೀತಿ ಹೇಳುವರು. ಈ ಆಟವೆ ಒಂದು ಸಮರಾಂಗಣವಾಗಿದ್ದು ಅದರಲ್ಲಿ ರಾಜ, ರಾಣಿ, ಮಂತ್ರಿ, ಸೇನಾಪತಿಗಳೊಂದಿಗೆ ಹತ್ತು ಜನ ಸೈನಿಕರಿರುತ್ತಾರೆ.

ಚಿಂಗತ್ಸೆತುಂಗ ನಿಘಂಟನ್ನು ಕ್ರಿ.ಶ ೧೬೭೮ರಲ್ಲಿ ಸಂಪಾದಿಸಲಾಯಿತು. ಅದರಲ್ಲಿ ಈ ಆಟದ ಎಲೆಗಳನ್ನು ಕ್ರಿ.ಶ. ೧೧೨೦ರಲ್ಲಿ ಕಂಡು ಹಿಡಿಯಲಾಯಿತು ಎಂಬ ವಿವರವನ್ನು ಅದು ನೀಡುತ್ತದೆ. ಅದು ಅರಸರು ಇಟ್ಟುಕೊಂಡಿದ್ದ ಪ್ರೇಯಸಿಯರ ಉಪಯೋಗಕ್ಕೆ ಅವಶ್ಯಕವಾಗಿತ್ತು.

ಚೀನಾದೇಶದ ದಂತಕತೆಯೊಂದರ ಪ್ರಕಾರ ಚೀನಾದೇಶದ ರಾಣಿಯರು ತಮ್ಮ ಸಮಯವನ್ನು ಕಳೆಯುವುದಕ್ಕೆ ಮತ್ತು ಅವರ ಹಣೆಬರಹ ಅರಿಯಲು ಅವರೆ ಕಂಡುಹಿಡಿದ ಎಲೆಯ ಆಟವಾಗಿದೆ. ಅಂದಿನ ಅರಸರ ಅಂತಃಪುರದಲ್ಲಿ ಅನೇಕ ರಾಣಿಯರು ಇರುತ್ತಿದ್ದರು. ಅವರಲ್ಲಿ ಯಾರು ಅರಸರ ಸಂಗಡ ಇರಬೇಕೆಂಬುದನ್ನು ಹೇಳಲು ಈ ಎಲೆಗಳನ್ನು ಬಳಸುತ್ತಿದ್ದರಂತೆ.

ಸಾಂಪ್ರದಾಯಿಕ ಗಂಜೀಫಾ ಆಟದ ಮೂಲವೂ ತುಂಬಾ ಅಚ್ಚರಿಕಾರಕವಾಗಿದೆ. ಒಂದು ತಂಡವು, ಆ ಆಟದ ಕ್ರಮವನ್ನು ಕಂಡುಹಿಡಿದ ಕೀರ್ತಿಯು ಪರ್ಶಿಯಾದ ಮೀರ-ಗೀಯಾ ಉದ್ದಾನ್-ಮನಸೂರ-ಸಿರಾಜ್ (೧೫೩೩-೮೧)ಗೆ ಸಲ್ಲಬೇಕು ಎನ್ನುತ್ತದೆ. ಆತ ಅದನ್ನು ಪ್ರಾಂಕ ಅಥವಾ ಯುರೋಪಿಯನ್ನರಿಂದ ಪ್ರತಿ ಮಾಡಿಸಿದ. ವೀರೇಶ್ವರರು ತಮ್ಮ 'ಗಂಜೀಫಾ ಖೇಲನಾಕ್ರಮ' ಕೃತಿಯಲ್ಲಿ ಈ ಕುರಿತು ಕೆಲವು ಸುಳುವು ನೀಡುತ್ತಾರೆ. ಅದೇನೆಂದರೆ ಶಹ ತಮಾಜ್ ಮತ್ತು ಶಹಬಾಜ್‌ಖಾನರ ಚಿಕ್ಕಮ್ಮನ ಮಗಳು ತುಂಬಾ ಚೆಲುವೆಯಾಗಿದ್ದಳು. ಆಕೆಗಾಗಿ ಈ ಆಟವನ್ನು ಕಂಡು ಹಿಡಿಯಲಾಯಿತು. ಓರಿಸ್ಸಾ ರಾಜ್ಯದ ಗಂಜಾಪಾಡಾ ಜಿಲ್ಲೆಯ ಗೆಜಿಟಿಯರ್ ದಾಖಲಾತಿಯಂತೆ ಗಂಜೀಫಾ ಎಲೆಗಳ ಸಂಶೋಧನೆಯ ಸಾಧ್ಯತೆಯು ಗಂಜಾಪಾಡಾದವರಿಗೆ ಸಲ್ಲಬೇಕೆಂದು ಲೇಖಕರು ಹೇಳುತ್ತಾರೆ. ಲೇಖಕರ ಅಭಿಪ್ರಾಯದಂತೆ

ಈ ಆಟವು ಬಹುಶಃ ಗಂಜೀಫಾ ಆಗಲು ಅದರ ಶೋಧಕರಾದ ಗಂಜಾಪಾಡಾದವರೆ ಕಾರಣ. ಭಗವಾನ್ ಗಂಗಾಧರ ಪಾಂಡೆಯವರು ಹೇಳುವಂತೆ ದಶಾವತಾರದ ಗಂಜೀಫಾ ಆಟವು ದಕ್ಷಿಣದ್ದಾಗಿದ್ದು ಅದು ಪೇಶ್ವೆಯವರ ಕಾಲದಲ್ಲಿ ಪ್ರಸಿದ್ಧವಾಗಿತ್ತು. ಹರಿಪ್ರಸಾದ ಶಾಸ್ತ್ರೀಯವರು ದಶಾವತಾರ ಗಂಜೀಫಾದ ಮೂಲ ಎಂಟನೇ ಶತಮಾನವೆಂದು ಪತ್ತೆಹಚ್ಚಿದ್ದಾರೆ. ಅದರಲ್ಲಿ ವಿಷ್ಣುಪುರದ ಮಲ್ಲದೊರೆಗಳನ್ನು ಬುದ್ಧ ದೇವನೊಂದಿಗೆ ಅವತರಿಸಲ್ಪಟ್ಟ ಐದನೆಯವರೆಂದು ತೋರಿಸಲಾಗಿದೆ. ಆತನ ಚಿಹ್ನೆಯು ಆ ಕಟ್ಟುಗಳ ಮೇಲಿದ್ದು ಅದರ ಮೇಲೆ ಈ ರೀತಿ ಬರೆಯಲಾಗಿದೆ. ಈ ಆಟದ ಎಲೆಗಳನ್ನು ಬುದ್ಧನನ್ನು ಅವತಾರಿ ಪುರುಷ ಎಂದು ಪರಿಗಣಿಸುವ ಸಾಂಪ್ರದಾಯಿಕ ಯಾದಿಯನ್ನು ತಯಾರಿಸುವ ಮೊದಲೇ ಕಂಡು ಹಿಡಿಯಲಾಗಿದೆ. ಸಾದಾ ಎಲೆಯ ಮೇಲಿನ ಕಮಲವು ಬುದ್ಧನನ್ನು ಪ್ರತಿನಿಧಿಸುವುದು. ಆದುದರಿಂದ ಈ ಎಲೆಯನ್ನು ಬುದ್ಧ ಪದ್ಮಪಾಣಿಯಾದಾಗ ಇದನ್ನು ಕಂಡು ಹಿಡಿದಿರಬೇಕು. ಬುದ್ಧನ ಮಹಾಯಾನ ಪಂಥವು ಬಂಗಾಲದಲ್ಲಿ ಪಾಲ್‌ದೊರೆಗಳು ಕ್ರಿ.ಶ. ೮೦೦-೧೨೦೦ ಆಳ್ವಿಕೆಗೆ ಬಂದ ಹತ್ತಿರದಲ್ಲಿಯೇ ಜಾರಿಗೆ ಬಂದಿದೆ.

ಚೀನಾದೇಶದ ದಂತಕತೆಯೊಂದರ ಆಧಾರದಂತೆ ಈ ಆಟದ ಎಲೆಗಳು ಮಹಾರಾಣಿಯಾದ ಚಾಂಗ ಅವರಿಗಾಗಿ ಕಂಡು ಹಿಡಿಯಲಾಯಿತು. ಏಕೆಂದರೆ ಆಕೆಯ ಅರಸನು ಚರ್ಮದ ತುರಿಕೆ ಕಾಯಿಲೆಯಿಂದ ಬಳಲುತ್ತಿದ್ದ, ಸದಾ ಕಾಲ ತುರಕಿಯಿಂದ ಕೆರೆದುಕೊಳ್ಳುತ್ತಿದ್ದನಲ್ಲದೇ ತನ್ನ ಗಡ್ಡವನ್ನು ಕೀಳುತ್ತಿದ್ದ. ಆತನ ಅನುಕೂಲತೆಗಾಗಿ ಮತ್ತು ಆತನ ಬೆರಳುಗಳಿಗೆ ಕಾರ್ಯ ಕೊಡುವುದಕ್ಕಾಗಿಯೇ ಈ ಆಟವನ್ನು ಪ್ರಾರಂಭಿಸಲಾಯಿತು. ಮತ್ತೊಂದು ಕತೆಯ ವಿವರಣೆಯಂತೆ ಅರಸನು ತನ್ನ ಸಾಮ್ರಾಜ್ಯ ಕಳೆದುಕೊಂಡ ಬಳಿಕ ವನವಾಸದಲ್ಲಿ ನಿರುತ್ಸಾಹಗೊಂಡಾಗ ಮತ್ತು ಖಿನ್ನತೆಯ ಸ್ಥಿತಿಯಲ್ಲಿದ್ದಾಗ ಆತ ನೊಣಗಳನ್ನು ಹಿಡಿದು ಅವುಗಳ ರೆಕ್ಕೆ ಕೀಳುವುದರಲ್ಲಿಯೇ ದಿನಗಳನ್ನು ಕಳೆಯುತ್ತಿದ್ದ. ಆತನ ಮತಿಹೀನಸ್ಥಿತಿಯಲ್ಲಿ ಆತನ ಮಂತ್ರಿಯೊಬ್ಬ ಅರಸನೊಂದಿಗೆ ಈ ಆಟದಲ್ಲಿ ತೊಡಗಿಕೊಂಡಾಗ ಅರಸನಲ್ಲಾದ ಬದಲಾವಣೆ ಕಂಡು ಮಂತ್ರಿಗೆ ಅಚ್ಚರಿಯಾಯಿತಂತೆ. ಆತ ತನ್ನ ದೊರೆಯ ಲಕ್ಷ್ಯವನ್ನು ಬೇರೆ ಕಡೆ ಸೆಳೆಯಲು ಮತ್ತು ಆತನ ಕರ ಮತ್ತು ಶಿರಗಳು ಆಟದಲ್ಲಿ ತಲ್ಲೀನನಾಗಿರಲಿ ಎನ್ನುವುದಕ್ಕಾಗಿ ಈ ಗಂಜೀಫಾ ಆಟ ಕಂಡು ಹಿಡಿಯಲಾಯಿತು ಎನ್ನುವುದು ಒಂದು ದಂತಕಥೆ.

ಹಲವಾರು ಸಿದ್ಧಾಂತ ಮತ್ತು ಪರ್ಯಾಲೋಚನೆಗಳು ಇದ್ದರೂ ಈ ಮೇಲೆ ತಿಳಿಸಿದ ಎಲ್ಲ ವಿಚಾರಗಳು ಸಂಪೂರ್ಣತೆಯ ಕೊರತೆಯ ಕಾರಣ ಈ ಆಟದ ಮೇಲಿನ ಇತಿಹಾಸ ವಿಚಿತ್ರವಾಗಿಯೇ ಉಳಿದುಕೊಂಡಿದೆ. ಚೀನಿಯ ಹುಂಡಿ ಆಟದ ಎಲೆಯ ಸಂಬಂಧ ಕೂಡಾ ಸಂಶಯಾಸ್ಪದವಾಗಿದೆ. ಏಕೆಂದರೆ ಚೀನಿಯ ಹಣದ ಎಲೆಗಳು ಅರಸರ ಎಲೆಗಳು ಪ್ರತಿಯೊಂದು ವೈಯಕ್ತಿಕವಾಗಿ ಗುರುತು ಮಾಡಲ್ಪಟ್ಟಿವೆ. ಆದುದರಿಂದ ಅವುಗಳ ವರ್ಗೀಕರಣ ಅಥವಾ ಸಂಖ್ಯಾಧಾರಿತ ಸಭಾ ಕಾರ್ಡುಗಳು ವಿಭಾಗೀಕೃತಗೊಂಡಂತಾಗಿವೆ. ಆದುದರಿಂದ ಈ ವಿಚಾರ ಕೂಡಾ ಸಂಶೋಧಕರಿಗೆ ಒಂದುಸವಾಲಾಗಿದೆ. ದಂತಕಥೆಗಳು ಮತ್ತು ವಿದ್ವಾಂಸರ ಮೂಲಕ ವ್ಯಕ್ತಪಡಿಸಿದ ಮೊಘಲರ ಅಥವಾ ದಶಾವತಾರದ ಗಂಜೀಫಾಗಳು ಈ ಆಟದ ವಿಸ್ಮಯವನ್ನು ಹೊರಹಾಕಲು ಅಸಾಧ್ಯವನ್ನಾಗಿಸಿವೆ.

ಈ ಮೇಲೆ ಹೇಳಿದ ಹಲವಾರು ದಂತಕತೆಗಳಲ್ಲಿ ನಾವು ನಿರ್ಣಯಕ್ಕೆ ಬರುವ ಒಂದೇ ಒಂದು ಸಾಧ್ಯತೆ ಎಂದರೆ ಈ ಆಟದ ಎಲೆಗಳನ್ನು ಆಸ್ಥಾನದ ಜನರೇ ರೂಪಿಸಿದ್ದಾರೆ. ಅದೇನೆ ಇರಲಿ,

ಅವುಗಳನ್ನು ಯಾರೇ ರೂಪಿಸಲಿ, ಅದಕ್ಕೆ ಯಾವುದೇ ಕಾರಣವಿರಲಿ ಅವುಗಳು ಆವಿಷ್ಕಾರವಾಗಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಅವುಗಳ ಜನಪ್ರಿಯತೆಯು ವಿಶ್ವದಾದ್ಯಂತ ಹರಡಿಕೊಂಡಿದೆ. ಈ ಆಟದ ಎಲೆಗಳ ವಿಚಾರವನ್ನು ಒಳಗೊಂಡಿರುವ ಬಾಬರ-ನಾಮಾ, ಹುಮಾಯೂನ ನಾಮಾ ಮತ್ತು ಐನ್-ಎ-ಅಕ್ಬರಿಗಳು ಈ ಎಲೆಗಳಿಗಿರುವ ಖ್ಯಾತಿಗೆ ನಿದರ್ಶನವಾಗಿವೆ. ಅದೇ ೧೬ನೇ ಶತಮಾನದಲ್ಲಿ ಅದಕ್ಕೂ ಮೊದಲು ಭಾರತದಲ್ಲಿ ಪ್ರಸಿದ್ಧವಾಗಿರುವುದನ್ನು ಋಜುವಾತು ಪಡಿಸುತ್ತವೆ. ಐನ್-ಎ-ಅಕ್ಬರಿಯು[೧೬] ನೀಡುವ ಮಾಹಿತಿಯ ಮಹತ್ವದ್ದಾಗಿದ್ದು ಅದು ಮೊಘಲ್ ಸಾಮ್ರಾಟ ಅಕ್ಬರ ದೊರೆಯು ಎಲೆಗಳ ಆಟವನ್ನು ಆಡುವ ವಿಚಾರದೊಂದಿಗೆ ಆತ ಆಟದ ಹಳೆಯ ವಿಧಾನವನ್ನು ಹೊಸತಾಗಿ ಬದಲಾಯಿಸಿದ ಕ್ರಮದ ವಿಚಾರ ಮಹತ್ವದ್ದಾಗಿದೆ. ಆದುದರಿಂದ ನಾವು ಸಾಧಿಸಬೇಕಾದಂತಹ ಸಂಶಯ ಏನೇ ಇರಲಿ ಮೊಘಲ್ ದೊರೆಗಳು ಈ ಆಟದ ಬಗ್ಗೆ ತುಂಬಾ ಪ್ರೀತಿಯನ್ನು ಹೊಂದಿದ್ದರು ಎಂಬುದು ಸಂತಸದ ವಿಷಯವಾಗಿದೆ.

ಗಂಜೀಫಾ ಮಧ್ಯಕಾಲೀನ ಭಾರತದ ಸಾಮಾಜಿಕ ಬದುಕಿನಲ್ಲಿ ತುಂಬಾ ಜನಪ್ರಿಯತೆಯನ್ನು ಗಳಿಸಿತ್ತು ಮತ್ತು ಅವುಗಳಿಗೆ ಎತ್ತರದ ಘನತೆಯನ್ನು ನೀಡಲಾಗಿತ್ತು. ೧೮ ಮತ್ತು ೧೯ನೆಯ ಶತಮಾನದ ಕಲಾಕೃತಿಗಳು ಜನರು ಗಂಜೀಫಾ ಎಲೆಗಳೊಂದಿಗೆ ಆಟ ಆಡುವುದನ್ನು ತೋರಿಸುತ್ತವೆ. ೧೮ನೇ ಶತಮಾನದ ಎರಡು ಕಲಾಕೃತಿಗಳು ಮೇವಾಡದ ದೊರೆಗಳಾದ ಮಹಾರಾಣಾ ಸಂಗ್ರಾಮ ಸಿಂಗ್ ಮತ್ತು ಮಹಾರಾಜಾ ಸಿಂಗರು ತಮ್ಮ ಸಭಾಜನರೊಂದಿಗೆ ಆಯತಾಕೃತಿಯ ಗಂಜೀಫಾ ಎಲೆಗಳನ್ನು ಆಡುತ್ತಿರುವುದನ್ನು ತೋರಿಸುತ್ತವೆ. ಮತ್ತೊಂದು ಪಹಾಡಿ ಶೈಲಿಯ ಅದೇ ಶತಮಾನದ ಚಿತ್ರಕಲಾಕೃತಿಯಲ್ಲಿ ರಾಜಮನೆತನದ ಅಥವಾ ಘನತೆವೆತ್ತ ಮಹಿಳೆಯೋರ್ವಳು ಆಯತಾಕೃತಿಯಲ್ಲಿ ಗಂಜೀಫಾ ಎಲೆಯನ್ನು ಆಡುತ್ತಿರುವುದನ್ನು ಕಾಣಬಹುದು. ಆ ಕೃತಿಯು ಬನಾರಸದ ಭಾರತ ಕಲಾಭವನದಲ್ಲಿದೆ. ಕರ್ನಲ್ ಜಂಟಿಲರ ಸಚಿತ್ರ ಅಲ್ಬಮ್‌ದಲ್ಲೂ ಈ ಕುರಿತು ಮಾಹಿತಿ ಇದೆ. ಈ ಅಲ್ಬಮನ್ನು ಲಂಡನ್ನದ ವಿಕ್ಟೋರಿಯಾ ಮತ್ತು ಅಲ್ಬರ್ಟ್ ವಸ್ತು ಸಂಗ್ರಹಾಲಯಗಳು ಕಾಯ್ದಿರಿಸಿವೆ. ಅದೇ ರೀತಿ ಅರಿಸ್ಸಾನ್ ಸಂಪುಟ ಡೆಬಿಸ್ಟಾನ ವಸ್ತುಸಂಗ್ರಹಾಲಯದಲ್ಲಿದ್ದು ಜನರು ದುಂಡನೆಯ ಕಾರ್ಡುಗಳಲ್ಲಿ ಎಲೆ ಆಡುವುದನ್ನು ಕಾಣಬಹುದು. ಸಂಸ್ಕೃತ ಮತ್ತು ಮರಾಠಿ ಪಠ್ಯಗಳಲ್ಲಿ ಸಂಗ್ರಹಿಸಿರುವ ೧೯ನೇ ಶತಮಾನದ ಚಿತ್ರಗಳಲ್ಲಿ ಬ್ರಾಹ್ಮಣರು ಮತ್ತು ಇತರರು ಆಟ ಆಡುವುದು ದುಂಡನೆಯ ದಶಾವತಾರದ ಗಂಜೀಫಾ ಎಲೆಗಳಲ್ಲಿ ಕಾಣಬಹುದು. ಈ ವಿವರಗಳು ನಮ್ಮ ಸಂಶಯವನ್ನು ನಿವಾರಿಸುತ್ತದೆಯಲ್ಲದೆ ೧೮-೧೯ನೇ ಶತಮಾನದಲ್ಲಿ ಈ ಎಲೆ ಆಟವು ಅರಸು ಮನೆತನದವರ ಮತ್ತು ಸಾಮಾನ್ಯ ವರ್ಗದಲ್ಲೂ ಜನಾನುರಾಗಿಯಾಗಿತ್ತು ಎಂಬುದನ್ನು ತೋರಿಸುವುದು. ಪುರುಷ ಮತ್ತು ಮಹಿಳೆಯರು ಈ ಆಟದಲ್ಲಿ ಪಾಲ್ಗೊಂಡಿರುವುದನ್ನು ಕಾಣಬಹುದು. ಈ ಕ್ರೀಡೆಯು ಮಕ್ಕಳಲ್ಲೂ ಜನಾನುರಾಗಿಯಾಗಿತ್ತು. ಗಂಜೀಫಾ ಲೇಖನದಲ್ಲಿ ಸ್ಪಷ್ಟವಾದ ಮಾತುಗಳಲ್ಲಿ ಗಿರಿಧರನು ಈ ರೀತಿಯಾಗಿ ಹೇಳುತ್ತಾನೆ ಗಂಜೀಫಾ ಆಟ ಮಕ್ಕಳು ಕೂಡಾ ಬಯಸುವಂತಾದ ಕ್ರೀಡೆಯಾಗಿದೆ.

ರಾಜಕುಮಾರರು, ರಾಜಮನೆತನದ ಮುಖ್ಯಸ್ಥರು, ಆಳುವ ವರ್ಗದವರು ಚದುರಂಗ ಆಡಿದರೆ, ಖಾಜಿಗಳು ಗಂಜೀಫಾ ಆಡುತ್ತಿದ್ದರು. ಮೇಲುನೋಟದಲ್ಲಿ ಮೇಲ್ದರ್ಜೆಯವರಲ್ಲಿ ಗಂಜೀಫಾ

೧೬. Dr. Sarala Chopra : Ganjifa, PP - 14

ಕಂಡಂತೆ ಸಾಮಾನ್ಯರಲ್ಲೂ ಗಂಜೀಫಾ ಇತ್ತು. ಮೇಲು ಅಂತಸ್ತಿಗರಲ್ಲಿ ಈ ಆಟ ಜನಪ್ರಿಯವಾಗಿತ್ತು ಎಂದರೆ ಅದು ಜನಸಾಮಾನ್ಯರಿಂದ ಕೂಡಾ ದೂರ ಆಗಿರಲಿಲ್ಲ.

ಅಧಿಕ ಸಂಖ್ಯೆಯಲ್ಲಿ ಗಂಜೀಫಾಎಲೆಗಳ ಕಟ್ಟುಗಳು ದೊರೆತಿದ್ದು, ಅವುಗಳೆಲ್ಲ ಎರಡೂ ದರ್ಜೆಯವರಲ್ಲಿ, ವಿಶೇಷವಾಗಿ ಆಳುವ ವರ್ಗದಲ್ಲಿ ಇದ್ದದ್ದು ಕಾಣುತ್ತದೆ. ಹರಿಕೃಷ್ಣನು ಕ್ರೀಡಾ ಕಾಲದಲ್ಲಿ ಈ ಆಟಕ್ಕೆ ನ್ಯಾಯ ಒದಗಿಸುವುದಕ್ಕಾಗಿಯೇ ಈ ರೀತಿ ವಿವರಿಸುತ್ತಾನೆ: ಅದೊಂದು ಪಾಪನಿವಾರಣೆಯ ಪ್ರತಿಭೆಯಂತಿದೆ. ಗಿರಿಧರನು ಮುಂದುವರೆದು ಗಂಜೀಫಾ ಖೇಲದ ೨೮-೩೦ ಸಂಧಿಯಲ್ಲಿ ಹೀಗೆ ಹೇಳುತ್ತಾನೆ: ಅಂತಿಮವಾಗಿ ಅದು ಆನಂದವನ್ನು ನೀಡುವುದರಿಂದ ಈ ಕ್ರೀಡೆಯಲ್ಲಿ ದೋಷವೇ ಇಲ್ಲ. ಅದನ್ನೆ ಈ ರೀತಿ ಶ್ಲೋಕದಲ್ಲಿ ಹೇಳಿರುವನು. ಇದು ಪರಿಪೂರ್ಣವಾದ ಅಡಕಗಳಿದ್ದು ಆಡಲು ಆರೋಗ್ಯಕರವಾಗಿದೆ. ವಿಶೇಷವಾಗಿ ಸಂತಸಕ್ಕಾಗಿ ಅಥವಾ ಆನಂದಕ್ಕಾಗಿ ಇದ್ದು, ಅದು ಆನಂದಮೂಲವೇ ಆಗಿದೆ. ಕಮಲ ಕೆಸರಿನಲ್ಲಿ ಹುಟ್ಟಿದರೂ ಅದು ನಿರ್ಮಲವಾಗಿರುವಂತೆ ಅದು ಆಟದ ಎಲ್ಲ ಲಾಭಗಳಿಗೂ ಕಾರಣೀಭೂತವಾಗಿದೆ. ಅದು ಮನಸ್ಸಿನ ಜಡತೆಯನ್ನು ನಿವಾರಿಸುವುದು. ಆಟದಲ್ಲಿ ತಾಳ್ಮೆ ಮತ್ತು ಜಾಣತನ ನೀಡುವುದು. ಜಾಣತನವಿಲ್ಲದಿದ್ದಲ್ಲಿ ಆಟದಲ್ಲಿ ಜಯವೇ ಇರದು.

ಸಿದ್ಧಾರ್ಥ ವೈ. ವೇರ್ಣೆಕರ ಈ ಗಂಜೀಫಾ ಆಟದ ಬಗ್ಗೆ ತಮ್ಮ ಅಭಿಪ್ರಾಯವನ್ನು ಈ ರೀತಿ ಹೇಳುತ್ತಾರೆ: ಈ ಆಟ ವಿಶೇಷವಾಗಿ ಅರಸು ಮನೆತನದ ಕ್ರೀಡೆಯಾಗಿತ್ತು ಮತ್ತು ಅವರ ಹತ್ತಿರದವರೇ ಪಾಲ್ಗೊಳ್ಳುತ್ತಿದ್ದರು. ಆದರೆ ಸಾಮಾನ್ಯ ಪ್ರಜೆಗಳಲ್ಲಿ ಅಷ್ಟೊಂದು ಪ್ರಸಿದ್ಧಿಯಾಗಿರಲಿಲ್ಲ. ಮುಂದುವರೆದು ಆತ ಹೀಗೆ ವಿವರಿಸುತ್ತಾನೆ, ಈ ಕ್ರೀಡೆ ರಾಜ ಮನೆತನದವರ ಪೋಷಣೆಯಲ್ಲಿತ್ತು. ಅದೇ ರೀತಿ ರಾಜಮನೆತನದವರ ಮತ್ತು ಅವರ ಹತ್ತಿರ ಸಂಬಂಧಿಕರ ಆಟವಾಗಿತ್ತು. ಆದುದರಿಂದ ಅದನ್ನು ಮೇಲು ವರ್ಗದವರ ಕ್ರೀಡೆ ಎಂದು ಕರೆಯಬಹುದು. ಅದರ ಕೆಲ ಲಕ್ಷಣದ ಅವಶೇಷಗಳು ಮಾತ್ರ ಸಾಮಾನ್ಯರ ಹತ್ತಿರದಲ್ಲಿದ್ದು ಅದಕ್ಕೆ ವಿಶೇಷವಾಗಿ ಬೇಡಿಕೆಯೂ ಇರಲಿಲ್ಲ. ಉತ್ಪಾದನೆಯು ಚಿಕ್ಕ ಪ್ರಮಾಣದಲ್ಲಿದ್ದು, ಆಟದ ನಿಯಮಗಳು ಆಗಾಗ ಬದಲಾಗುತ್ತಿದ್ದ ಕಾರಣ ಇದು ಸಾಮಾನ್ಯರಲ್ಲಿ ಜನಪ್ರಿಯವಾಗಿರಲಿಲ್ಲ ಮತ್ತು ಈ ಎಲೆಗಳು ತುಂಬಾ ಬೆಲೆಯುಳ್ಳದ್ದಾಗಿದ್ದ ಕಾರಣ ಜನಸಾಮಾನ್ಯರು ಖರೀದಿಸುವಂತಿರಲಿಲ್ಲ. ಎತ್ತರದ ಬೆಲೆ ಮತ್ತು ಎಲ್ಲವನ್ನೂ ಕರದಿಂದಲೇ ನಿರ್ಮಿಸುತ್ತಿದ್ದ ಕಾರಣ ಸಾಮಾನ್ಯ ಜನರಿಗೆ ತಲುಪದಿರಲು ಅದೂ ಒಂದು ಕಾರಣ. ಆದರೆ ಇರುವ ಸ್ಥಿತಿ ಬೇರೆಯೆ ಕಾಣುತ್ತಿತ್ತು. ಸಾಮಾನ್ಯ ಶೈಲಿಯ ಅನೇಕ ಎಲೆಗಳನ್ನು ಸಂಗ್ರಹಿಸಿರುವುದು ಒಂದು ಅದರ ಜನಪ್ರಿಯತೆಗೆ ನಿದರ್ಶನದಂತಿದೆ. ಕಲಾವಿದರು ಈ ಎಲೆಗಳ ಕಟ್ಟುಗಳನ್ನು ದರಬಾರ ಮತ್ತು ಬಜಾರುಗಳಲ್ಲಿ ಸಿದ್ಧಪಡಿಸುತ್ತಿದ್ದರು. ಜನರ ಅತೀ ಬೇಡಿಕೆಯ ಕಾರಣದಿಂದಾಗಿ ಹಲವಾರು ವಿವಿಧ ಕುಟುಂಬಗಳ ಮಹಿಳೆಯರು, ಮಕ್ಕಳು ಸೇರಿಕೊಂಡು ಈ ಆಟದ ಕಟ್ಟುಗಳನ್ನು ಸಿದ್ಧಪಡಿಸುತ್ತಿದ್ದರು. ದರಬಾರದ ಕಟ್ಟುಗಳು ಅರಸುಮನೆತನದ ಬೇಡಿಕೆಗಳನ್ನು ಪೂರೈಸುತ್ತಿದ್ದವು. ಮೇಲು ಜನಾಂಗದವರು ಕಡಿಮೆ ಇದ್ದರೂ ದೇಶಿ ಅಥವಾ ಬಜಾರು-ಕಟ್ಟುಗಳಲ್ಲಿ ಸಾಮಾನ್ಯ ಜನರೇ ಅಧಿಕವಾಗಿದ್ದರು. ಈ ಅಂಶವು ಗಂಜೀಫಾದ ಜನಪ್ರಿಯತೆ ಮತ್ತು ಸಾಮಾನ್ಯರಿಗೆ ತಯಾರಿಸುವ ಕಟ್ಟುಗಳು ನಿರ್ಧರಿಸುತ್ತಿದ್ದವು. ಜನರು ವೈಯಕ್ತಿಕವಾಗಿ ಕಟ್ಟುಗಳನ್ನು ಹೊಂದಿರುತ್ತಿದ್ದರು.

ಗಂಜೀಫಾ ಕಟ್ಟುಗಳು ಸಾಮಾಜಿಕ ಕ್ಷೇತ್ರಗಳಲ್ಲಿಯೂ ಸೇವೆ ಸಲ್ಲಿಸಿವೆ. ಈ ಮುಂದಿನ ಉದಾಹರಣೆಯ ಪಠ್ಯದ ವಿಷಯವು ದೃಢೀಕರಿಸುವುದೇನೆಂದರೆ, ದರಬಾರಿ ಕಾಲಂನ ಮೇಲೆ ಚಿತ್ರಿಸಿದ ಕೃತಿಗಳು ಚಿಕಣಿಯ ಚಿತ್ರಗಳಂತಿವೆ. ಇವುಗಳೆಲ್ಲವು ತಕ್ಷಣವೇ ತ್ರುಟಿತಗೊಳ್ಳಬಲ್ಲ ವಸ್ತುಗಳಾಗಿವೆ. ಅರಗಿನ ಕಟ್ಟುಗಳು ಸಹಜವಾಗಿಯೇ ಮುರಿಯಬಲ್ಲವಾಗಿವೆ. ಅವುಗಳನ್ನು ಆಟಕ್ಕಾಗಿಯೇ ಎಂದು ಸಿದ್ಧಪಡಿಸಿದಂತಹವುಗಳಾಗಿವೆ. ವಾರಾಣಾಸಿಯ ಭಾರತ ಕಲಾಭವನದಲ್ಲಿರುವ ಮೊಘಲ ಕಾಲದ ಗಂಜೀಫಾ ಕಟ್ಟುಗಳು ಅತ್ಯಂತ ಜಾಣ್ಮೆಯಿಂದ ರಚಿಸಿದ ಸೂಕ್ಷ್ಮ ಕಿರು ಚಿತ್ರಗಳಂತಿವೆ. ಅವುಗಳನ್ನು ಕೇವಲ ಪ್ರದರ್ಶನ, ಕಾಣಿಕೆ ಅಥವಾ ಸಂಗ್ರಹಕ್ಕಾಗಿ ಸಿದ್ಧಪಡಿಸಿದ್ದು, ಆಟಗಳಿಗಾಗಿ ಅಲ್ಲ. ಕ್ರೀಡೆಗಾಗಿ ರಚಿಸಿದರೂ ಅವು ಕಲೆಗಾಗಿ, ಕಾಣಿಕೆಗಳಿಗಾಗಿಯೇ ರಚಿಸಿದವುಗಳಾಗಿವೆ. ಇಲ್ಲಿ ಕಲಾವಿದನು ಸಾಮಾನ್ಯ ಮನುಷ್ಯನ ಜೇಬಿನ ಶಕ್ತಿಯನ್ನು ಗಮನಿಸಿಯೇ ರಚಿಸಿದಂತಿದೆ. ಯಾತ್ರಾರ್ಥಿಗಳು ಗಂಜೀಫಾ ಕಟ್ಟುಗಳನ್ನು ತಮ್ಮ ಸ್ಮರಣೆಗಾಗಿ ಖರೀದಿಸಿದ್ದವಾಗಿರುತ್ತವೆಯಲ್ಲದೇ ಅವು ಸಾಮಾನ್ಯ ಜನರ ಜನಪ್ರಿಯತೆಗಾಗಿ ಅಲ್ಲ ಎಂಬುದನ್ನು ಗಮನಿಸಬೇಕು. ಆದರೂ ಗಮನಿಸಬೇಕಾದ ಅಂಶವೆಂದರೆ ಇವು ಸಾಮಾನ್ಯರ ಮಟ್ಟಕ್ಕೆ ನಿಲುಕಬಹುದಾದವುಗಳಾಗಿವೆ.

ಪ್ರಾರಂಭಿಕ ಕಾಲದಲ್ಲಿ ಸಮಾಜದ ಮೇಲುವರ್ಗದವರು ಅಂದರೆ ಅರಸರು, ಪುರೋಹಿತರು, ಮುಂತಾದವರು ಈ ಆಟದ ರುಚಿಯನ್ನು ಅರಿತಿದ್ದರು. ಆದರೆ ಆಟದ ಸರಳತೆಯು ಮಧ್ಯಮ ವರ್ಗದ, ಕೆಳವರ್ಗದ ಸಾಮಾನ್ಯ ಜನರು ಕಾಲಕ್ಷೇಪಕ್ಕಾಗಿ ಆಡುವ ನೆಚ್ಚಿನ ಕ್ರೀಡೆಯಾಗಿತ್ತು. ನಾವು ಕ್ರೀಡಾಕೌಶಲ್ಯವ್ ಪಠ್ಯದಲ್ಲಿ ಈ ಕ್ರೀಡೆಯು ಅರಸರ ಮತ್ತು ಸಭಾಸದಸ್ಯರ ಮನೋರಂಜನೆಗಾಗಿದೆ. ಆದರೂ ಕೂಡಾ ಈ ಆಟವನ್ನು ಸಾಮಾನ್ಯ ಜನರು ಮದುವೆ ಸಮಾರಂಭಗಳ ಮನೆಯಲ್ಲಿ ಮತ್ತು ತೋಟಗಳಿರುವ ಮನೆಗಳಲ್ಲಿ ಆಡುತ್ತಿದ್ದರು. ಈ ಆಟವು ಸಮಾಜದ ಎಲ್ಲ ವರ್ಗದ ಜನರ ಜನಪ್ರಿಯ ಆಟವಾಗಿತ್ತು. ಪುರುಷ, ಸ್ತ್ರೀ, ಮಕ್ಕಳು, ಅರಸರು, ಸಭಾಸದಸ್ಯರು, ಗೃಹಿಣಿಯರು, ಪುರೋಹಿತರು ಎಲ್ಲರೂ ಈ ಆಟವನ್ನು ಸಂತಸದಿಂದ ಆಡುತ್ತಿದ್ದರು. ದಶಾವತಾರ ಮತ್ತು ಗಂಜೀಫಾ ಕಟ್ಟುಗಳು ನೇಪಾಳ, ಭಾರತದಾದ್ಯಂತ ಜನಪ್ರಿಯ ಗಂಜೀಫಾ ಕಟ್ಟುಗಳಾಗಿವೆ. ಛದ್ ಕಟ್ಟುಗಳು ಅಲ್ಪ ಅವಧಿಯದಾಗಿದ್ದರೂ, ಅವು ಮೈಸೂರಲ್ಲಿ ಜನಪ್ರಿಯವಾಗಿವೆ. ಏಕೆಂದರೆ ಈ ಕಟ್ಟುಗಳು ಕೆಲ ಸಂಕೀರ್ಣ ಕಟ್ಟುಪಾಡುಗಳನ್ನು ಹೊಂದಿರುವ ಕಾರಣ ಜನಸಮುದಾಯದಲ್ಲಿ ಜನಾನುರಾಗಿಯಾಗಲಿಲ್ಲ. ನಕ್ಷಾ-ಕಟ್ಟು ಎನ್ನುವುದು ಜನಾನುರಾಗಿ ಗಂಜೀಫಾ ಕವಳಿಗೆಯಾಗಿದ್ದು ಜನ ವಿಶೇಷವಾಗಿ ದೀಪಾವಳಿ ಸಮಾರಂಭದಲ್ಲಿ ಭಾರತ ಮತ್ತು ನೇಪಾಳ ದೇಶಗಳಲ್ಲಿ ಆಡುತ್ತಾರೆ. ದಶಾವತಾರದ ಕಟ್ಟು ಕೂಡಾ ಜನಪ್ರಿಯವಾದಂತಹ ಕಟ್ಟು ಆಗಿದ್ದು ಯುರೋಪಿನ ಬಟ್ಟೆ ಕಾರ್ಖಾನೆಯವರು ಅದನ್ನು ಕರವಸ್ತ್ರದ ಕಲಾಕೃತಿಯಂತೆ ಹೆಣಿಗೆಗಾಗಿ ಬಳಸಿಕೊಂಡಿದ್ದಾರೆ. ಇಂಗ್ಲೆಂಡಿನ ವಿಕ್ಟೋರಿಯಾ ಮತ್ತು ಅಲ್ಬಂಟ ವಸ್ತು ಸಂಗ್ರಹಾಲಯಗಳು ಮತ್ತು ಕ್ಯಾಲಿಕೆ ವಸ್ತು ಸಂಗ್ರಹಾಲಯ, ಅಹಮದಾಬಾದ್ ವಸ್ತುಸಂಗ್ರಹಾಲಯ ೧೯ನೆಯ ಶತಮಾನದ ಅರಳೆಯ ಕರವಸ್ತ್ರಗಳ ಮೇಲಿರುವ ಸಾವಂತವಾಡಿಯ ದಶಾವತಾರಿ ಗಂಜೀಫಾ ನಕ್ಷೆಗಳನ್ನು ಕಾಯ್ದಿಟ್ಟುಕೊಂಡಿವೆ. ಒಬ್ಬರಿಂದ ಮತ್ತೊಬ್ಬರ ಹಸ್ತಗಳಲ್ಲಿ ಕಾಣುವ ಈ ವಿನ್ಯಾಸವು ಗಂಜೀಫಾದ ಜನಪ್ರಿಯತೆಯನ್ನು ತೋರಿಸುವುದು. ಇದರಿಂದ ಪ್ರಭಾವಿತರಾಗಿರುವ ವಿದೇಶಿಗರು ತಮ್ಮ ಔದ್ಯೋಗಿಕ ಉತ್ಪನ್ನಕ್ಕೆ ಮಾದರಿಯನ್ನಾಗಿ ಬಳಸಿಕೊಂಡಿದ್ದಾರೆ.

ಇಪ್ಪತ್ತನೆಯ ಶತಮಾನದ ಎರಡು ಅಥವಾ ಮೂರನೆಯ ದಶಕದ ಅವಧಿಯಲ್ಲಿ ಈ ಕ್ರೀಡೆಯು ಜನಸಾಮಾನ್ಯರ ಮೇಲಿದ್ದ ತನ್ನ ಸ್ವಾಮ್ಯವನ್ನು ಕಳೆದುಕೊಳ್ಳಲು ಪ್ರಾರಂಭಿಸಿತು. ಅತಿಯಾದ ಬೆಲೆ ಮತ್ತು ಅಧಿಕ ಸಂಖ್ಯೆಯ ಕಟ್ಟುಗಳೆ ಇಪ್ಪತ್ತನೆಯ ಶತಮಾನದಲ್ಲಿ ಅವು ನಮ್ಮಿಂದ ಕಣ್ಮರೆಯಾಗಲು ಕಾರಣಗಳು. ಭಾರಯುತವಾದ ಅದರ ದರವೇ ಸಾಮಾನ್ಯ ಜನರು ಗಂಜೀಫಾ ಕಟ್ಟುಗಳಿಂದ ದೂರಸರಿಯಲು ಮುಖ್ಯ ಕಾರಣಗಳು. ಎರಡನೆಯ ಕಾರಣವೇನೆಂದರೆ ಕ್ರಮವಾಗಿ ಈ ಆಟವು ಕಣ್ಮರೆಯಾಗುತ್ತ ಸಾಗಿರುವುದು ವಿಶೇಷವಾಗಿ ದಶಾವತಾರ ಗಂಜೀಫಾ ಕಟ್ಟುಗಳು. ಅವು ತಾವು ಹುಟ್ಟಿದ ಸ್ಥಳದಲ್ಲಿಯೆ ಅಧಿಕ ಸಂಖ್ಯೆಗಳಲ್ಲಿ ಹೊರಬಂದುದು. ೯೬, ೧೨೦, ೧೬೦, ೩೬೦ ಇತ್ಯಾದಿಯಾಗಿ ಇದ್ದು ಅವು ಕೈಯಲ್ಲಿ ಹಿಡಿಯಲಾರದಂತಾದವುಗಳಾಗಿದ್ದವು. ಬಹುಶಃ ಇದು ಕೂಡ ಉತ್ತಮವಾದಂತಹ ನೆನಪಿನ ಯಶಸ್ಸಿನ ಸಂಗತಿಯಾಗಿದೆ. ಈ ಅವಧಿಯಲ್ಲಿ ಈ ಆಟವು ರಾಜ ಕುಟುಂಬದವರ ಅರ್ಹತೆಯನ್ನು ಕಳೆದುಕೊಂಡಂತೆ ಕ್ರಮವಾಗಿ ತನ್ನೆಲ್ಲ ಅಸ್ತಿತ್ವವನ್ನು, ರೂಢಿಯನ್ನು ತಪ್ಪಿಸಿಕೊಂಡು ಹಳತಾಗಿ ಹೋಯಿತು. ಒಂದು ಕಟ್ಟಿನಲ್ಲಿ ಅಧಿಕವಾದ ಸಂಖ್ಯೆಯಲ್ಲಿ ಎಲೆಗಳು ಸೇರಿರುವುದೇ ಅದರ ಜನಪ್ರಿಯತೆ ಕುಂದಲು ಮೂಲ ಕಾರಣವಾಯಿತು. ಆದರೆ ಗಂಜೀಫಾದ ಜನಪ್ರಿಯತೆ ಕುಂದಲು ಬರೇ ಅದರ ಸಂಖ್ಯೆಯೊಂದೇ ಕಾರಣವಲ್ಲ. ಮುಖ್ಯ ಕಾರಣವೆಂದರೆ, ಯುರೋಪಿನಿಂದ ಹೊಸ ವಿನ್ಯಾಸಗಳಲ್ಲಿ ಮುದ್ರಿತಗೊಂಡು ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಿದ ವಿದೇಶಿ ಎಲೆಗಳು ಕಾರಣವಾಗಿವೆ. ಬ್ರಿಟೀಷರ ಆಡಳಿತದಲ್ಲಿ ಭಾರತದ ಸಾಂಪ್ರದಾಯಿಕ ಕಲೆ ಮತ್ತು ಕುಶಲಕಲೆಗಳು ಸಾಕಷ್ಟು ಹಾನಿಯನ್ನು ಅನುಭವಿಸಿದವು. ಅವುಗಳಲ್ಲಿ ಢಾಕಾದ ಮಿಲ್ಲಿನ ಬಟ್ಟೆಯ ಉದ್ದಿಮೆಗಳು ಶಾಶ್ವತವಾಗಿ ಕಣ್ಮರೆಯಾದವು.

ಭಾರತೀಯ ಸಾಮಾಜಿಕ ವಸ್ತುಗಳನ್ನೆ ವ್ಯಾಪಾರಕ್ಕಾಗಿ ಪಾಶ್ಚಿಮಾತ್ಯಕರಣಗೊಳಿಸಲಾಯಿತು. ಪ್ರತಿಯೊಂದು ಭಾರತೀಯ ವಸ್ತುಗಳನ್ನು ಪಾಶ್ಚಿಮಾತ್ಯ ದೃಷ್ಟಿಯಿಂದಲೇ ನೋಡುವಂತಹ ಹೊಸತನದ ಹೆಸರಿನಲ್ಲಿ ಪ್ರಾರಂಭವಾಯಿತು. ಇದು ಭಾರತೀಯ ಸಾಂಪ್ರದಾಯಿಕ ಕಲೆಗಳಿಗೆ ಏರಿಳಿತವನ್ನುಂಟು ಮಾಡಿತು. ಭಾರತೀಯ ಚಿತ್ರಕಲೆಯ ಆದರ್ಶಗಳು ಬದಲಾದವು. ಪಾಶ್ಚಿಮಾತ್ಯ ಕಲೆಯು ಜನಪ್ರಿಯವಾಯಿತು. ಭಾರತೀಯ ಕಲೆಯ ಪುನರುತ್ಥಾನದ ಕಾಲವು ಇ.ಬಿ. ಹ್ಯಾವೆಲ್ ಮತ್ತು ಅವನೀಂದ್ರನಾಥ ಎನ್. ಠಾಕೂರರರಿಗೆ ಒಂದು ಸವಾಲಾಗಿತ್ತು. ಈ ಹೊತ್ತಿಗಾಗಲೇ ಭಾರತದ ಮಾರುಕಟ್ಟೆಯಲ್ಲಿ ಪಾಶ್ಚಿಮಾತ್ಯರಿಂದ ಮುದ್ರಿತ ಎಲೆಗಳ ಮಹಾಪೂರವೆ ನೆರೆದಿತ್ತು. ಅವು ಕೈಯಿಂದ ನಿರ್ಮಿಸಿದ ಗಂಜೀಫಾದ ಎಲೆಗಳಿಗಿಂತ ಅಗ್ಗವಾಗಿದ್ದವು. ಆದುದರಿಂದ ೨೦ನೆ ಶತಮಾನದಲ್ಲಿ ಗಂಜೀಫಾ ಕಲೆಯ ಅವನತಿಗೆ ಕಾರಣವಾಯಿತು. ಯುರೋಪಿಯನ್ನರ ಯಂತ್ರನಿರ್ಮಿತ ಹೊಸ ವಿನ್ಯಾಸದ ಎಲೆಗಳು ಹೊಸತಾಗಿ ಮಾರುಕಟ್ಟೆಗೆ ಬರಲಾರಂಭಿಸಿದವು. ಈ ಕುರಿತು ಆರ್. ವಿ. ಲ್ಯಾಡಿನ್‌ರು[೧೭] ಅಧಿಕೃತವಾಗಿ ಹೇಳುತ್ತಾರೆ. ಆಧುನಿಕವಾಗಿ ಮುದ್ರಣಗೊಂಡಿರುವ ಕಟ್ಟುಗಳು ಸ್ಥಳೀಯವಾಗಿ ಕೈಗಳಿಂದ ಸಿದ್ಧಪಡಿಸಿದ ಎಲೆಗಳನ್ನು ಓಡಿಸುವಲ್ಲಿ ಅವುಗಳೊಂದಿಗೆ ಆಟವಾದವು. ಮತ್ತು ಮಿತವ್ಯಯದ ಮುದ್ರಿತ ಎಲೆಗಳು ಯುರೋಪಿನಿಂದ ಭಾರತಕ್ಕೆ ಅಧಿಕ ಸಂಖ್ಯೆಯಲ್ಲಿ ಆಮದು ಆದವು. ಮುಂದೆ ಅವು ಭಾರತದಲ್ಲಿಯೇ ಮುದ್ರಣಗೊಂಡವು. ಇದರಿಂದ ಹಳೆಯ ಆಟಗಳು ಅಂತ್ಯಗೊಂಡಂತೆ ಚಿತ್ರಕಾರರ ಮಾರುಕಟ್ಟೆಯು ಒಣಗಿ ಹೋಯಿತು.

೧೭. R and N. Y. Leyden : The Playing Cards of India, PP- 14-16

ಗಂಜೀಫಾ ಆಟವು ನಶಿಸಿ/ಬಾಡಿ ಹೋಯಿತು ಎಂದರೆ ಗಂಜೀಫಾ ಆಟವು ಸಂಪೂರ್ಣವಾಗಿ ಭಾರತೀಯ ಕಲೆಯಿಂದ ಮತ್ತು ಭಾರತೀಯರ ಸಾಮಾಜಿಕ ಜೀವನದಿಂದಲೇ ಎಂದು ಅರ್ಥವಲ್ಲ. ಇಂದಿಗೂ ಗಂಜೀಫಾ ಎಲೆಗಳನ್ನು ಮಾಡುತ್ತಿರುವ ಕಲಾವಿದರನ್ನು ಓರಿಸ್ಸಾದ ಪುರಿ ಮತ್ತು ಪಶ್ಚಿಮ ಬಂಗಾಳದ ಬಂಕುರಾ ಜಿಲ್ಲೆಗಳಲ್ಲಿ ಕಾಣಬಹುದು. ಸಾವಂತವಾಡಿಯ ಹಿಂದಿನ ಮಹಾರಾಜರು ತಮ್ಮ ಅರಮನೆಯಲ್ಲಿಯೇ ಒಂದು ಕಾರ್ಯಾಗಾರ ಮಾಡಿ ಗಂಜೀಫಾ ಎಲೆಗಳನ್ನು ಮಾರುಕಟ್ಟೆಗೆ ಸಿದ್ಧಗೊಳಿಸಿದರು. ಅದರಲ್ಲೂ ವಿಶೇಷವಾಗಿ ರಫ್ತಿಗಾಗಿ ಸಿದ್ಧಗೊಳಿಸಿದರು. ಈ ಕಟ್ಟುಗಳು ಆಧುನಿಕ ನಕ್ಷೆಗಳೊಂದಿಗೆ ಸಾಂಪ್ರದಾಯಿಕ ವಿನ್ಯಾಸಗಳನ್ನು ಹೊಂದಿದ್ದವು. ಇವನ್ನು ಆಟದ ನಿಯಮಾವಳಿಗಳಿಗಿಂತ ಕಲೆ ಮತ್ತು ಮಾರುಕಟ್ಟೆದೃಷ್ಟಿಯಿಂದ ವರ್ಣಮಯಗೊಳಿಸಲಾಗಿತ್ತು. ಅಲ್ಲದೆ ಅಂದಿನ ಆಕರ್ಷಕ ಸಭಾಭವನಗಳ ಆಕರ್ಷಕ ಚಿತ್ರಗಳೊಂದಿಗೆ ಸಂಖ್ಯೆಗಳಿಗನುಗುಣವಾಗಿ ಚಿತ್ರಿಸಲಾಗಿತ್ತಲ್ಲದೆ ಆಟ ಆಡುವ ಪದ್ಧತಿಗಿಂತ ಅವುಗಳನ್ನು ಮಾರುವುದಕ್ಕಾಗಿಯೇ ನಿರ್ಮಿಸಲಾಗಿತ್ತು. ಆದುದರಿಂದ ಈ ವಿಷಯಕ್ಕೆ ಕಲಾವಿದರನ್ನು ದೂರುವಂತಿಲ್ಲ. ಓರಿಸ್ಸಾ, ಬಂಗಾಲ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಹೋಗುವ ಪ್ರವಾಸಿಗರು ಅವುಗಳನ್ನು ಒಳಾಂಗಣದ ಆಟದ ವಸ್ತುಗಳೆಂದು ಖರೀದಿಸಿದೆ, ತಮ್ಮ ಪ್ರವಾಸದ ನೆನಪಿಗೆ, ಭೇಟಿಯ ಘಟನೆ ಸ್ಮರಣೆಗಾಗಿ ಖರೀದಿಸುತ್ತಾರೆ. ಹಲವು ರೀತಿಗಳಲ್ಲಿ ಸಿದ್ಧವಾಗುತ್ತಿರುವ ಈ ಆಟದ ಕಟ್ಟುಗಳು ಈ ದೇಶದ ಸಾಂಪ್ರದಾಯಿಕ ಆಟಗಳ ನೆನಪುಗಳು ಎನ್ನುವುದಕ್ಕಾಗಿಯೇ ಇಂದಿಗೂ ಗಂಜೀಫಾ ಕಲಾವಿದರ ಕರಗಳಲ್ಲಿ ಈ ಎಲೆಗಳು ಜೀವಂತವಾಗಿವೆ.

ಗಂಜೀಫಾ ಚಿತ್ರಕಲೆಯ ಇತಿಹಾಸವನ್ನು ಪರಿಶೀಲಿಸಲಾಗಿ ನಾವು ಆಟದ ಎಲೆಗಳ ಇತಿಹಾಸದಲ್ಲಿ ಆಸಕ್ತಿ ಹೊಂದಿದ್ದರೆ, ಆಟದ ರೀತಿ ನೀತಿಗಳು ಅಷ್ಟಾಗಿ ನಮಗೇನೂ ತಿಳಿಸುವುದಿಲ್ಲ ಎಂದು ಅನಿಸುತ್ತದೆ. ಆದರೆ ಇದು ಸತ್ಯಕ್ಕೆ ದೂರವಾದ ಸಂಗತಿ. ಏಕೆಂದರೆ ಆಟದ ಎಲೆಗಳ ಐತಿಹಾಸಿಕ ಸಂಗತಿಗಳನ್ನು ಶೋಧಿಸುವುದರಲ್ಲಿ ಸಂಸ್ಕೃತಿಯು ಹೇಗೆ ಹಸ್ತಾಂತರವಾಯಿತೆನ್ನುವ ವಿಷಯವೂ ಒಳಗೊಂಡಿದೆ. ಗಂಜೀಫಾ ಆಟದ ಎಲೆಗಳ ಇತಿಹಾಸದಲ್ಲಿ ಎರಡು ಮಹತ್ವದ ಅಂಶಗಳಿವೆ. ಡಿಫ್ಯೂಜನ್ ಮತ್ತು ತನ್ನದೇ ಆದ ರೀತಿಯಲ್ಲಿ ಉತ್ಕ್ರಾಂತಿ. ಒಂದು ಪ್ರದೇಶದಲ್ಲಿ ಆಟವು ನೆಲೆಗೊಂಡಲ್ಲಿ ಉಳಿದೆಡೆಯಲ್ಲಿ ಬದಲಾವಣೆಯ ಪರಿಣಾಮವನ್ನು ಲೆಕ್ಕಿಸದೆ ಮುಂದುವರೆಯುವುದು. ಏಕೆಂದರೆ ಇದು ಸ್ಥಳೀಯರ ಸಾಂಸ್ಕೃತಿಕ ಹಕ್ಕಾಗುತ್ತದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಆಟಗಳು ಇತ್ತೀಚಿನ ಬೆಳವಣಿಗೆಗಳು, ಗಂಜೀಫಾ ಆಟವು ಸಾಮಾನ್ಯವಾಗಿ ಒಂದು ಪ್ರದೇಶಕ್ಕೆ ಸೀಮಿತವಾಗಿತ್ತು. ಆದ್ದರಿಂದ ಮೂಲ ಆಟದ ಸ್ವರೂಪ ಅಸ್ಪಷ್ಟವಾಗಿದೆ. ಇಷ್ಟಾದರೂ ಈ ಆಟ ಯಾವುದೇ ಸಾಂಸ್ಕೃತಿಕ ಆಟದಂತೆ ಬಹು ಪ್ರಚಾರಗೊಂಡಿದೆ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ, ಒಂದು ದೇಶದಿಂದ ಇನ್ನೊಂದು ದೇಶಕ್ಕೆ, ಒಂದು ಖಂಡದಿಂದ ಇನ್ನೊಂದು ಖಂಡಕ್ಕೆ ಜಗತ್ತಿನ ಎಲ್ಲ ಭಾಗದಲ್ಲಿಯೂ ಆಯಾ ಪ್ರಾದೇಶಿಕ ಆಟದ ವಿಶೇಷತೆಯ ಬಗ್ಗೆ ಅಭಿಮಾನವಿದೆ. ಆದರೂ ಹೊರಗಿನಿಂದ ಬಂದು ಒಳಸೇರಿದ ಅಂಶಗಳು ಹೆಚ್ಚು ಮಹತ್ವ ಪಡೆದಿವೆ. ಇದು ಆಟಕ್ಕೂ ಆಟದೆಲೆಗಳಿಗೂ ಅನ್ವಯವಾಗುತ್ತದೆ. ಹೀಗಾಗಿದ್ದ ಪಕ್ಷದಲ್ಲಿ ಬ್ರಿಟನ್ ಮತ್ತು ಯು.ಎಸ್.ಎ.ಗಳಲ್ಲಿ ಪ್ರಚಲಿತವಿದ್ದ ವಿಶಿಷ್ಟ ಪದ್ಧತಿಯು ಇತರಡೆಗಳಲ್ಲಿ ಪಾಲಿಸದೇ ಹೋಗುತ್ತಿತ್ತು. ಮೂಲತಃ ಬ್ರಿಟಿಷರು ರೋಮನ್‌ರಿಂದ ಕಾರ್ಡ್‌ರಚನೆಯನ್ನು ಕಲಿತರು. ಆಟದೆಲೆಗಳ ರಚನೆಯು ಆಟದ ಪರಿಚಯವಿಲ್ಲದ ದೇಶಗಳಲ್ಲಿ ಹರಡಿತು. ಇದಕ್ಕೆ ಉದಾಹರಣೆಯಾಗಿ ಆಟದೆಲೆಗಳು ಭಾರತಕ್ಕೆ ಪರಿಚಯವಾದ ಪ್ರಸಂಗವನ್ನೇ ಕೊಡಬಹುದು.

ಗಂಜೀಫಾ ಆಟವು ಭಾರತದಲ್ಲಿ ಮೊಘಲರ ಆಳ್ವಿಕೆ ಅಥವಾ ಅದಕ್ಕೂ ಹಿಂದಿನ ಮುಸ್ಲಿಂ ಅರಸರಾಳ್ವಿಕೆಯಲ್ಲಿ ರೂಢಿಗತವಾಗಿ ಬಂದಿರಬಹುದು. ಇದರ ಪರಿಣಾಮವು ಮೊದಲ ಪರಿಚಯವಷ್ಟೇ ಅಲ್ಲ, ಆಟದ ಬಳಕೆಗೆ ಒಂದು ಪುಡಿಕೆಯನ್ನು ತೆರೆದಾಗ ಹಿಂದೆ ಉಪಯೋಗಿಸಿದ್ದಕ್ಕಿಂತಲೂ ಭಿನ್ನವಾಗಿರುತ್ತಿತ್ತು. ಒಂದು ಪುಡಿಕೆ(ಪೆಟ್ಟಿಗೆ) ಒಂದು ಆಟಕ್ಕೆ ಸೀಮಿತವಾಗುತ್ತಿತ್ತು. ಹೀಗೆ ಪೋರ್ಚುಗೀಸ್ ಮತ್ತು ಬ್ರಿಟೀಷ್ ಪುಡಿಕೆಗಳು[೧೮] ಪ್ರಚಲಿತವಾದವು. ಮೊದಲಿಗೆ ಅವು ಸ್ಥಳೀಯ ಶೈಲಿಗೆ ಹೊಂದುವಂತೆ ಮಾರ್ಪಾಡು ಹೊಂದಿದವು. ಆಟದ ಪ್ರಸಾರವು ಆಟದೆಲೆಗಳು ರಚನೆಗೊಂಡ ನೆಲೆಯನ್ನೇ ಅವಲಂಬಿಸಿದವು. ಆದರೆ ಅದೇ ಖಚಿತವಾಗಿರಬೇಕೆಂದೆನಿಸಲಿಲ್ಲ. ಆಂಗ್ಲೋ ಅಮೇರಿಕನ್ ಶೈಲಿಯ ಬ್ರಿಜ್, ಪೋರಕ್ ಮತ್ತು ರಮ್ಮಿ ಆಟಗಳು ಮುಂದೆ ಅಂತಾರಾಷ್ಟ್ರೀಯ ಮಟ್ಟಕ್ಕೇರಿದವು.

ಗಂಜೀಫಾ ಆಟದೆಲೆಗಳ ಇತಿಹಾಸ ಮತ್ತು ಆಡುತ್ತಿದ್ದ ಪದ್ಧತಿ, ಸಾಂಸ್ಕೃತಿಕ ಕೊಡುಕೊಳ್ಳುವಿಕೆ ಬಹಳ ರೋಚಕವಾಗಿದೆ. ಇತಿಹಾಸವಿದ್ಯಾರ್ಥಿಗಳು ಗಂಜೀಫಾ ಚಿತ್ರಗಳು ಮತ್ತು ಆಟಗಳ ಬಗ್ಗೆ ಹೆಚ್ಚು ಗಮನ ಹರಿಸಬೇಕಾಗಿದೆ. ಒಂದು ಚಿಕ್ಕ ಉದಾಹರಣೆ ಇದರ ಮಹತ್ವವನ್ನು ಸಾರುತ್ತದೆ. ಡಾ. ವಾನ್ ಲೇಡನ್ ಅವರ ಸಂಗ್ರಹವನ್ನು ಪರಿಶೀಲಿಸಿದಾಗ ಗಂಜೀಫಾ ಪ್ಯಾಕಗಳ ರಚನೆ ಒಂದೇ ಬಗೆಯದಾಗಿದೆ. ಎರಡೂ ಪ್ರಸಂಗಗಳಲ್ಲಿ ಪ್ರತಿ ಪ್ಯಾಕನ್ನು ಸೂಟಗಳಾಗಿ ಪುನರ್‌ವಿಂಗಡಿಸಲಾಗಿದೆ. ಸೂಕ್ತ ವಿಶಿಷ್ಟ ಸಂಕೇತಗಳಿಂದ ಮತ್ತು ಸೂಟ್ ಎಸ್ ದಿಂದ ೧೦ರವರೆಗೆ ಆರು ಜನರನ್ನು ಮುಖ್ಯವಾಗಿರುವ ಚಿತ್ರಪತ್ರಗಳನ್ನು ಹೊಂದಿದೆ. ಭಾರತೀಯ ಆಟದೆಲೆಗಳು ೮-೧೦-೧೨ ಸೂಟ್‌ಗಳಲ್ಲಿರುವುದು ನಿಜ. ಯುರೋಪಿನಲ್ಲಿ ನಾಲ್ಕರಷ್ಟಿದೆ. ಸೂಟ್ ಸಂಕೇತಗಳು ವಿಭಿನ್ನವಾಗಿವೆ. ಮೂರರ ಬದಲಾಗಿ ಎರಡೇ ಕೋರ್ಟ್ ಕಾರ್ಡಗಳಿವೆ. ಆದರೆ ಅವು ಒಂದೇ ರೀತಿಯದಾಗಿದೆ. ಇದು ಹೇಗೆ ಉಂಟಾಗಿರಬಹುದು? ಎಷ್ಟು ಸಾಮೀಪ್ಯ? ಯುರೋಪಿನ ಕಾರ್ಡ್ ಭಾರತದಿಂದ ಬಳಕೆಗೆ ಬಂದಿವೆ. ಅಥವಾ ಭಾರತದ ಕಾರ್ಡ್ ಯೂರೋಪಿನಿಂದ ಬಳಕೆಗೆ ಬಂದಿವೆಯೋ ಅಥವಾ ಬೇರೆ ಮೂಲವಿದೆಯೋ ಎಂಬುದು ಇನ್ನೂ ತಜ್ಞರಲ್ಲಿ ಚರ್ಚೆಗೆ ಒಳಗಾಗಿರುವ ವಿಷಯವಾಗಿದೆ.

ಗಂಜೀಫಾ ಆಟದ ಬಗ್ಗೆ ಅನೇಕ ಸಿದ್ಧಾಂತಗಳಿವೆ. ಅನೇಕರು ಕೆಲವು ದೇಶಗಳನ್ನು ಗುರುತಿಸುತ್ತಾರೆ. ಆಟದ ಎಲೆಗಳ ಸಾಹಿತ್ಯವು ಸುಮಾರು ೨೭೫ ವರ್ಷಗಳ ಇತಿಹಾಸವನ್ನು ಹೊಂದಿದೆ. ಫ್ರಾನ್ಸ್, ಜರ್ಮನಿ, ಇಟಲಿ, ಸ್ಪೇನ್, ನೇದರಲ್ಯಾಂಡ್, ಈಜಿಪ್ತ, ಭಾರತ, ಚೈನಾದೇಶಗಳು ಈ ಬೌದ್ಧಿಕ ಆಟದ ಸಾಧನ ಮಾಡಿಕೊಂಡ ಗೌರವಕ್ಕೆ ಪಾತ್ರವಾಗುತ್ತವೆ. ವಿಲ್‌ಶೈರ್ ಮತ್ತು ಮೊರ್ಗೆ ಇಟಾಲಿಯನ್ ಸೂಟಿನ ಸಂಕೇತಗಳ ಕುರಿತು ಭಾರತದ ಅರ್ಧನಾರೀಶ್ವರ ಮೂರ್ತಿಯನ್ನು ಉದಾಹರಿಸುತ್ತಾರೆ. ಶಿವನ ಡಮರು ಕಸ್ ಆಗಿದೆ. ಬಸ್ತೋನಿ ತ್ರಿಶೂಲವಾಗಿದೆ. ವಿಷ್ಣುವಿನ ಸಂಕೇತಗಳು ಅನೇಕ ಉದ್ದೇಶಗಳನ್ನು ಸಾಧಿಸಿವೆ. ಬನ್ ಹಾರ್ಡಿ ತಮ್ಮ ಲೇಖನದಲ್ಲಿ ನಾಲ್ಕು ಜನ ದಿಕ್ಪಾಲಕರಾದ ಇಂದ್ರ, ಯಮ, ವರುಣ ಮತ್ತು ಕುಬೇರ ಇವರನ್ನು ಚೆಸ್ ಬೋರ್ಡ್‌ನ ನಾಲ್ಕು ದಿಕ್ಕಿಗೆ ಗುರುತಿಸಿ ೪ ಸೂಟ್ಸ್ ಗಂಜೀಫಾ ಎಲೆಗಳಿಗೆ ಮೂಲ ಪುರುಷರೆಂದು ಗುರುತಿಸಿದ್ದಾರೆ.

ಕಾರ್ಡುಗಳಲ್ಲಿ ಇತಿಹಾಸವನ್ನು ತಿಳಿಯುತ್ತಿದ್ದಂತೆ ಭಾಗಶಃ ಸಮುದ್ರವನ್ನಾವರಿಸಿದ ಖಂಡಗಳ ಸಮೀಕ್ಷೆಯನ್ನು ಮಾಡಿದಂತಾಗುತ್ತದೆ. ತತ್ತಿ ಮಾಂಸಗಳು ದ್ವೀಪ ಉಳಿದಂತೆ ಉಳಿದಿವೆ. ಉಳಿದವು

---

೧೮. Dr. Sarala Chopra : Ganjifa, PP - 12

ಎಷ್ಟೋ ತಮ್ಮ ಅಂಶಗಳನ್ನು ಉಳಿಸದಂತೆ ನಶಿಸಿದೆ. ಬೆಡಿಬ್ರೈಟ್ ಕೋಫರಿಂದ ಹಿಡಿದು ಇಲ್ಲಿಯವರೆಗೆ ಗಂಜೀಫಾ ಕಾರ್ಡಗಳ ಅಧ್ಯಯನ ಮಾಡಿದ ಎಲ್ಲರೂ ಇದರ ಮೂಲದ ಬಗ್ಗೆ ಆಕರ್ಷಿತರಾಗಿದ್ದಾರೆ. ಇದು ಒಂದೇ ಪ್ರಶ್ನೆಯಲ್ಲ, ಜೊತೆಗೆ ಪ್ರಶ್ನೆ ಎಲ್ಲಿ ಹೇಗೆ ಉದಯಿಸಿತು ಎಂಬುದು ಮೊದಲ ಪ್ರಶ್ನೆ. ಯುರೋಪ್ ಕಾರ್ಡಗಳ ಬಗ್ಗೆ, ಗಂಜೀಫಾ ಎಲೆಗಳ ಮೂಲದ ಬಗ್ಗೆ ಇದುವರೆಗೂ ಉತ್ತರ ಸಿಕ್ಕಿಲ್ಲ. ವಿದ್ವಾಂಸರ ಪ್ರಕಾರ ಮೊದಲು ಕಾರ್ಡುಗಳು ಚೀನಾದೇಶದಲ್ಲಿ ಹುಟ್ಟಿರಬೇಕು. ಚೀನಾದವರು ಕಾಗದ ಕಂಡು ಹಿಡಿದವರಾದ್ದರಿಂದ ಇದೇನೂ ಆಶ್ಚರ್ಯವಲ್ಲ. ಮೊದಲು ಹೊರಟ ಕಾರ್ಡುಗಳು ಡಾ. ಮೀನೋ ಕಾರ್ಡಗಳಾಗಿವೆ. ಪ್ರತಿಯೊಂದು ಪ್ರತ್ಯೇಕ ಡಾಯಿನೋವನ್ನು ಹೊಂದಿದೆ. ವಿಶಿಷ್ಟ ಸೂಟ ಸೈಜಉಳ್ಳಂತೆ ಯಾರು ಮೊದಲು ಪ್ಯಾಕನ್ನು ವಿಭಾಗಿಸಿ ಸೂಟನ್ನು ನಿರ್ಮಿಸಿದರೆಂದು ನಿರ್ಧರಿಸಬೇಕಾಗಿದೆ. ಕೋರ್ಟ ಕಾರ್ಡ ಮತ್ತು ಸಂಖ್ಯಾ ಕಾರ್ಡಗಳು ಹೇಗೆ ರಚನೆಗೊಂಡಿರಬೇಕು. ಅನೇಕ ಸಿದ್ಧಾಂತ ರಚಿಸುವುದರಲ್ಲಿ ಪರಿಚಿತರು ಸಂತೋಷ ಹೊಂದಿದ್ದಾದರೂ ಸಮಸ್ಯೆಗೆ ಪರಿಹಾರ ಸಿಗಲಿಲ್ಲ. ಇತ್ತೀಚಿನ ೩೦ ವರ್ಷಗಳಲ್ಲಿ ಗಮನಾರ್ಹವಾದ ಪ್ರಯತ್ನ ಮಾಡಲಾಗಿದೆ. ಭಾರತ, ಚೀನಾ, ಯುರೋಪ್ ಮತ್ತು ಇಸ್ಲಾಂ ರಾಷ್ಟ್ರಗಳಲ್ಲಿ ಗಂಜೀಫಾ ಬಗೆಗಿನ ಸಂಬಂಧವನ್ನು ಹುಡುಕಿ ತೆಗೆದರೆ ಸಮಸ್ಯೆಗೆ ಉತ್ತರ ಸಿಗಬಹುದು, ಹುಡುಕುವುದು ಪ್ರಗತಿದಾಯಕವಾಗಿ ನಡೆದಿದೆ. ಮುಖ್ಯವಾಗಿ ಕಾರ್ಡಗಳು ಇಸ್ಲಾಂ ರಾಷ್ಟ್ರದಲ್ಲಿ ದೊರೆತಿವೆ. ಅವುಗಳು ಮಧ್ಯಕಾಲೀನದ್ದಾಗಿವೆ. ೧೯೩೯ರಲ್ಲಿನ ಮೊದಲ ಶೋಧನೆಯೆಂದರೆ ಇಸ್ತಾನಬುಲ್ ಮ್ಯೂಜಿಯಂದಲ್ಲಿ ಐ.ಎ.ಮೇಯರ್ ಅವರಿಗೆ ಮಾಮ್ಲುಕ ಪೂರ್ಣ ಪ್ಯಾಕ್ ದೊರಕಿದೆ.

ಭಾರತದಿಂದ ಗಂಜೀಫಾ ಕಾರ್ಡಗಳ ಕುರಿತು ಬಹಳಷ್ಟು ತಿಳಿದುಕೊಳ್ಳಬೇಕಾಗಿದೆ. ಇದರ ಪೂರ್ವ ಇತಿಹಾಸವನ್ನು ತಿಳಿದುಕೊಳ್ಳಲು ಪ್ರಾಚೀನ ಗಂಜೀಫಾ ಕಾರ್ಡಗಳ ಬಗ್ಗೆ ಹೆಚ್ಚಿನ ಅಧ್ಯಯನ ಮಹತ್ವದ್ದಾಗಿದೆ. ಭಾರತೀಯ ಗಂಜೀಫಾ ಕಾರ್ಡಗಳು ಅನೇಕ ವರ್ಷಗಳ ಸಂಶೋಧನೆಗೆ ಮಾರ್ಗದರ್ಶಿಯಾಗಿದೆ. ಭಾರತ ಹಾಗೂ ಇತರ ದೇಶಗಳ ಸಂಬಂಧದ ಬಗ್ಗೆ ಇದು ಬೆಳಕು ಚೆಲ್ಲುತ್ತದೆ ಎಂದು ನಾವು ಸೂಚಿಸಬೇಕಿಲ್ಲ. ಪ್ರಾಚೀನ ಭಾರತೀಯ ಗಂಜೀಫಾಗಳು ಮನಕ್ಕೆ ಆನಂದವನ್ನು ನೀಡಬಲ್ಲವಾಗಿವೆ. ಎಲ್ಲ ವರ್ಗದ ಗಂಜೀಫಾ ಕಾರ್ಡಗಳು ಆಕರ್ಷಿತವಾಗಿವೆ. ಇವುಗಳ ಅಧ್ಯಯನದಿಂದ ಭಾರತೀಯ ಸಂಸ್ಕೃತಿಯ ಗೊತ್ತಿರದ ಅಂಶಗಳ ಜೊತೆಗೆ ಈಗಾಗಲೇ ಪ್ರಚಾರವಾಗಿರುವ ಜಾನಪದ ಮತ್ತು ಹಿಂದೂ ಸಾಂಕೇತಿಕತೆಗಳನ್ನು[೧೯] ತಿಳಿದುಕೊಳ್ಳಲು ಸಹಾಯವಾಗಿದೆ. ಭಾರತ ಮತ್ತು ಅದರ ಪರಂಪರೆ ಬಗ್ಗೆ ಆಸಕ್ತಿಯುಳ್ಳವರಿಗೆ ಈ ಗಂಜೀಫಾ ಕಾರ್ಡಗಳ ಇತಿಹಾಸ ಮಹತ್ವದ್ದಾಗಿದೆ.

ಭಾರತದಲ್ಲಿ ಗಂಜೀಫಾ ಇತಿಹಾಸ

ಷಾ ಅಬ್ಬಾಸರ ಕಾಲದಲ್ಲಿ (೧೧೫೭-೧೬೨೮) ಗಂಜೀಫಾ ಆಟ ಪರ್ಶಿಯಾದಲ್ಲಿ ಪ್ರಚಲಿತವಿತ್ತು. ಧಾರ್ಮಿಕತೆಯುಳ್ಳ ಎರಡನೆಯ ಅಬ್ಬಾಸನ ಕಾಲದಲ್ಲಿ ಇದನ್ನು ಅಲಕ್ಷಿಸಿದ್ದರಿಂದ ಇರಾನಿನಲ್ಲಿ ಗಂಜೀಫಾ ಕಾಣದಾಯಿತು, ಫ್ರೆಂಚ್ ಪ್ರವಾಸಿಗರಾದ ಟ್ರಾವನಿರ್ ಮತ್ತು ಜಾರ್ಡಿನ್ ಆಟಧ ಕುರಿತು ವರದಿ ಮಾಡಿದ್ದಾರೆ. ಈ ಆಟವನ್ನು ಕೇವಲ ಕೆಳದರ್ಜೆಯ ಜನರು ಆಡುತ್ತಿದ್ದರೆಂದು ಜಾರ್ಡಿನ್ ಹೇಳಿದ್ದಾನೆ. ೧೮೨೦ರಲ್ಲಿ ಖಜಾರ ನಮೂನೆಯ ಅರಗಿನ ಬಣ್ಣದ ಗಂಜೀಫಾ ಕಾರ್ಡುಗಳು ಇದ್ದುದು ತಿಳಿದು ಬರುವದಲ್ಲದೆ ಈ ಗಂಜೀಫಾ ಕಾರ್ಡುಗಳು ದಖನಿ ಕಾರ್ಡುಗಳಿಂದ ಪ್ರಭಾವಿತವಾಗಿರುವುದು. ಕಂಡುಬರುತ್ತದೆ.

---

೧೯. R and N. Y. Leyden : The Playing Cards of India, PP- 15-16

ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನದ ಸುಮಾರಿಗೆ ಭಾರತೀಯ ಗಂಜೀಫಾ ಎಲೆಗಳ ಆಟ, ಪಾಶ್ಚಿಮಾತ್ಯರ ಗಮನಕ್ಕೆ ಬಂದಿರಬಹುದು. ಇದಕ್ಕೂ ಮೊದಲು ಬೌದ್ಧ ಮತದ ಪ್ರಚಾರ ಹಿನ್ನೆಲೆಯಲ್ಲಿ ಚೀನಾದ ಕಡೆಗೆ ತಿರುಗಿರಬೇಕು. ಕೊನೆಗೆ ಯುರೋಪಿನಲ್ಲಿ ಜನಪ್ರಿಯಗೊಂಡು ಇಸ್ಪೇಟು ಎಲೆಗಳ ರೂಪ ತಾಳಿ, ಅಂತಾರಾಷ್ಟ್ರೀಯ ಕ್ರೀಡೆಯಾಗಿ ಭಾರತಕ್ಕೆ ಬಂದಿರಬಹುದೆಂದು ಊಹಿಸಬಹುದಾಗಿದೆ.

ಭಾರತದ ಗಂಜೀಫಾ ಚಿತ್ರಕಲೆಯಲ್ಲಿ ವೈವಿಧ್ಯಕ್ಕೆ ಎಣೆಯಿಲ್ಲ. ಪ್ರಾದೇಶಿಕ ಶೈಲಿಗಳಲ್ಲದೆ ಸ್ತ್ರೀಯರು ಆಯಾ ಅರಸರು ಅವರ ಮಂತ್ರಿಗಳು, ಅಂತಃಪುರದ ಸ್ತ್ರೀಯರು, ಜಾಗೀರದಾರರು ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ಚಿತ್ರಗಳನ್ನು ಮಾಡಿಸಿಕೊಳ್ಳುತ್ತಿದ್ದರು.[೨೦] ದೇವತೆಗಳು, ದೈವಿಕ ಸಂಕೇತಗಳಿಂದ ಹಿಡಿದು ಶೃಂಗಾರ ಚಿತ್ರಗಳು, ತಾಂತ್ರಿಕ ವಿನ್ಯಾಸದ ಎಲೆಗಳು, ಗಂಜೀಫಾ ಆಟ ಆಡುವಾಗ ನುಡಿಸುವ ವಾದ್ಯ (ಬಾಂಗ್, ಯಾರ್ಝ್ ಎಂಬ ವೀಣೆ) ವಿನ್ಯಾಸಗಳನ್ನು ಆಯಾ ಪ್ರದೇಶಗಳ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅನೇಕ ಶೈಲಿಯ ಗಂಜೀಫಾ ಚಿತ್ರಗಳಲ್ಲಿ ಚಿತ್ರಿಸಿರುವುದು ಕಂಡು ಬರುತ್ತದೆ.

ಕ್ರೀಡಾ ಪ್ರಧಾನವಾಗಿ ಆಟವಾಡುತ್ತಿದ್ದ ಈ ಕಲೆಗೆ ಮೊಘಲರ ಪೂರ್ವದಲ್ಲಿ ದೇವರು, ಪುರಾಣ, ಮೊದಲಾದವು ಗಂಜೀಫಾ ಚಿತ್ರಗಳ ವಸ್ತುಗಳಾಗಿದ್ದವು, ಈ ಆಟಕ್ಕೆ ಸ್ಫೂರ್ತಿ ಶಿವನ ಡಮರು, ವಿಷ್ಣುವಿನ ಶಂಖ, ಚಕ್ರ, ಅಷ್ಟದಿಕ್ಪಾಲಕರು (ಇಂದ್ರ, ಯಮ, ವರುಣ, ಕುಬೇರ, ಅಗ್ನಿ, ನಿರ್ಋತಿ, ವಾಯು, ಸೋಮ) ಸಂಖ್ಯಾಶಾಸ್ತ್ರ ಹಿನ್ನೆಲೆಯಲ್ಲಿ ದಶಾವತಾರಗಳಿಂದ ಗಂಜೀಫಾ ಎಲೆಗಳು ಅಲಂಕೃತವಾಗುತ್ತಿದ್ದವು.

ಮೊಘಲರ ಕಾಲದಲ್ಲಿ ಗಂಜೀಫಾ ಚಿತ್ರಗಳಲ್ಲಿ ಹಲವು ಹೊಸ ಪ್ರಯೋಗಗಳೇ ನಡೆದವು. ಮೊಘಲ್ ಸಾಮ್ರಾಜ್ಯದ ಬಾಬರನು ಪರ್ಶಿಯನ್ ಪ್ರೇಮಿ, ಭಾರತದ ವೈವಿಧ್ಯಕ್ಕೆ ಅನುಗುಣವಾಗಿ ಗಂಜೀಫಾ ಚಿತ್ರಕಲೆಯನ್ನು ಪ್ರೋತ್ಸಾಹಿಸಿದನು. ಉದಾತ್ತ ಭಾವನೆಗಳ ಅಕ್ಬರನಂತೂ ಸ್ವತಃ ಗಂಜೀಫಾ ಚಿತ್ರಕಲೆಯನ್ನು ಅಭ್ಯಾಸ ಮಾಡುವುದರೊಂದಿಗೆ ಅದರ ಪೋಷಕನಾಗಿ ಈ ಕಲೆಯನ್ನು ಬೆಳೆಸಿದನು. ಮೊಘಲರ ಕಾಲದಲ್ಲಿ ಗಂಜೀಫಾ ಚಿತ್ರಕಲೆ ಪ್ರವರ್ಧಮಾನಕ್ಕೆ ಬಂದಿತು ಎಂಬುದಕ್ಕೆ ಸಾಕ್ಷಿ ಹಲವು ದಾಖಲೆಗಳಿಂದ ಸಿಗುತ್ತವೆ. "ಬಾಬರ ನಾಮಾ"ದಲ್ಲಿ ಗಂಜೀಫಾ ಉಲ್ಲೇಖಗಳು ಕಂಡುಬರುತ್ತವೆ. "ಕಾಬೂನೆ ಇಸ್ಲಾಂ ಐನ್ ಈ ಅಕ್ಬರಿ"[೨೧]ಯಲ್ಲಿ ಗಂಜೀಫಾ ಕುರಿತು ಸಾಕಷ್ಟು ವಿವರಗಳಿವೆ. ಗಂಜೀಫಾ ಚಿತ್ರಕಲೆ ಆಟ ಮೊಘಲರ ೩೩೨ ವರ್ಷಗಳ ಆಳ್ವಿಕೆಯಲ್ಲಿ ಹೆಚ್ಚಿನ ಆಯಾಮವನ್ನು ಪಡೆಯಿತು.

ಬಾಬರ ಹುಮಾಯೂನ ಕಾಲದ ಆಟದ ಎಲೆಗಳು

ಉತ್ತರ ಭಾರತವನ್ನು ಆಳಿದ ಬಾಬರ (೧೫೨೭) ತನ್ನ ದಿನಚರಿಯಲ್ಲಿ ದಾಖಲಿಸಿದ್ದು ಹೀಗೆ. ನಾವು ರಾತ್ರಿ ಆಗ್ರಾವನ್ನು ಬಿಟ್ಟೆವು. ಟಾಟ್ವಾದಲ್ಲಿಯ ಷಾ ಹಸನ್ ಬಯಸಿದ್ದರಿಂದ ಒಬ್ಬ ಪೈಕನೊಂದಿಗೆ ಕೊಟ್ಟು ಕಳಿಸಲಾಯಿತು. ಸಿಂಧದ ಈ ಗೆಳೆಯನಿಗೆ ಎಂತಹ ಗಂಜೀಫಾ ಕಾರ್ಡು ಕಳುಹಿಸಿದ್ದನೆಂದು ತಿಳಿದು ಬಂದಿಲ್ಲ. ಬಸ್ತಕ ಎಂಟು ಗಂಜೀಫಾ ಕಾರ್ಡುಗಳನ್ನು ಕಳುಹಿಸಿರಬೇಕೆಂದು ತೋರುತ್ತದೆ. ಬಾಬರ್ ಈ ಕಾರ್ಡುಗಳನ್ನು ಮಧ್ಯ ಏಶಿಯಾ, ಇರಾನ್ ಅಥವಾ ಭಾರತದಿಂದ ದೊರಕಿಸಿಕೊಂಡ ಬಗ್ಗೆಯೂ ತಿಳಿದು ಬಂದಿಲ್ಲ. ಬಾಬರನ ಮಗಳಾದ ಬೇಹು ಗುಲಬದನ ೧೫೪೫ರಲ್ಲಿ, ಜನರು ತರತರಹದ ಆಟಗಳನ್ನು ಆಡುತ್ತಿದ್ದರು ಎಂದು ದಾಖಲಿಸಿದ್ದಾಳೆ.

೨೦. R and N. Y. Leyden : The Playing Cards of India, PP- 15-16

೨೧. ಸಂತೋಷಕುಮಾರ ಗುಲ್ವಾಡಿ : ಗಂಜೀಫಾ ಕಲೆ, ಪುಟ–೨೨

೧೭ ಮತ್ತು ೧೮ನೆಯ ಶತಮಾನದಲ್ಲಿ ಗಂಜೀಫಾ ಎಲೆಗಳ ಆಟವು ಜನಪ್ರಿಯ ಹವ್ಯಾಸವಾಯಿತು. ಚಕ್ರವರ್ತಿಯ ಅರಮನೆ, ಸುಲ್ತಾನರು, ನವಾಬರು, ಸುಬೇದಾರರು, ರಾಜರು, ಜಹಗೀರದಾರರು, ಅವರ ಅಧಿಕಾರಿಗಳೂ ಸಹ ಆಟ ಆಡುತ್ತಿದ್ದರು. ಜವಾನರು ಸಹಿತ ತಮ್ಮ ಬೇಸರ ಕಳೆದುಕೊಳ್ಳಲು ಗಂಜೀಫಾ ಆಟದ ಮೊರೆ ಹೋದರು. ಕವಿಗಳು, ತತ್ವಜ್ಞಾನಿಗಳು ಗಂಜೀಫಾ ಕುರಿತು ಬರೆಯತೊಡಗಿದರು. ಕಲಾವಿದರು ಸುಂದರವಾಗಿ ಗಂಜೀಫಾಗಳನ್ನು ರಚನೆ ಮಾಡಿದರು. ಆಳುವವರು ಮತ್ತು ಕೆಳಗಿನವರು ತರತರಹದ ಆಟವನ್ನು ಕಟ್ಟಿದರು. ಮೊಘಲರ ಕಾಲದಲ್ಲಿ ರೂಢಿಯಲ್ಲಿದ್ದ ತೊಂಭತ್ತಾರು ಗಂಜೀಫಾ ಕಾರ್ಡುಗಳು ಎಂಟು ಸೂಟನ ಆಟ ಭಾರತದಲ್ಲೆಲ್ಲಾ ಪ್ರಚಲಿತವಾಯಿತು. ಆದರೆ ತೀರ ಕೆಳಗಿನ ದಕ್ಷಿಣ ಪ್ರಾಂತಗಳಾದ ತಮಿಳುನಾಡು, ಕೇರಳವನ್ನು ತಲುಪಲಿಲ್ಲ.

ಗಂಜೀಫಾ ಎಲೆಗಳಲ್ಲಿ ಹಿಂದುತ್ವವನ್ನು ಅಳವಡಿಸಿದ್ದರಿಂದ ದಶಾವತಾರ ಗಂಜೀಫಾ ಎಲ್ಲಿ ಹೇಗೆ ಪ್ರಾರಂಭವಾಯಿತು ಎಂಬುದು ಇಂದಿಗೂ ನಿಗೂಢವಾಗಿದೆ. ಆದರೂ ಕೆಲವರು ೧೮ನೇ ಶತಮಾನದಲ್ಲಿ ಪ್ರಾರಂಭವಾಗಿರಬೇಕೆಂದು ಊಹಿಸುತ್ತಾರೆ. ವಿಷ್ಣು ಮುಖ್ಯವಾಗಿರುವ ಹತ್ತು ಅವತಾರಗಳು, ರಾಜಸ್ಥಾನ, ಆಂಧ್ರ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಜನಪ್ರಿಯವಾಯಿತು. ಮಹಾರಾಷ್ಟ್ರದ ಬ್ರಾಹ್ಮಣರು ಬಹಳ ಉತ್ಸುಕತೆ ತೋರಿದ್ದಾರೆ. ಅವುಗಳ ನಿಯಮಗಳನ್ನು ಅಂಚುಗಳಲ್ಲಿ ಸೂಚಿಸಿದ್ದಾರೆ. ೮, ೯, ೧೦, ೧೧, ೧೨ ಸೂಟಿನ ಹಿಂದುತ್ವ ಅಂಶಗಳನ್ನು ಹೊಂದಿದ ಕಾರ್ಡುಗಳನ್ನು ನಿರ್ಮಿಸಲು ಪ್ರಯತ್ನಿಸಿದ್ದಾರೆ.[೨೨] ಕರ್ನಾಟಕಕ್ಕೆ ಗಂಜೀಫಾ ಚಿತ್ರಕಲೆಯ ಶ್ರೀಮಂತ ಸಂಪ್ರದಾಯವಿದೆ. ವಿಜಯನಗರ ಸಾಮ್ರಾಜ್ಯವು ವೈಭವದ ದಿನಗಳಲ್ಲಿದ್ದಾಗ, ಅಲ್ಲಿ ಹರಳುಗಟ್ಟಿದ ಈ ಕಲಾಸಂಪ್ರದಾಯವು ಮೈಸೂರಿನಲ್ಲಿಯೂ ಮುಂದುವರೆಯಿತು.

ಕರ್ನಾಟಕದಲ್ಲಿ ಗಂಜೀಫಾ

ಟಿಪ್ಪು ಸುಲ್ತಾನನ ಕಾಲಕ್ಕೆಯೇ ಮೈಸೂರಿನಲ್ಲಿ ಗಂಜೀಫಾ ಕಲೆ, ಆಟ ಎರಡೂ ಇದ್ದವು. ಆದರೆ ನಿತ್ಯ ನಿರಂತರ ಯುದ್ಧ ಮತ್ತು ಬ್ರಿಟಿಷರ ವಿರುದ್ಧ ಹೋರಾಟಗಳಲ್ಲೇ ನಿರತನಾದ ಟಿಪ್ಪುವಿಗೆ ಚಿತ್ರಕಲೆಗಳ ಕುರಿತು ಹೆಚ್ಚು ಗಮನ ಕೊಡುವುದು ಆಗಲಿಲ್ಲ. ಟಿಪ್ಪುವನ್ನು ಬ್ರಿಟೀಷರು ಮೇ ೪, ೧೭೯೯ರಲ್ಲಿ ಶ್ರೀರಂಗಪಟ್ಟಣದಲ್ಲಿ ಅವನ ಮಂತ್ರಿ ಮೀರಸಾದಿಕನ ಪಿತೂರಿಯ ಸಹಾಯದಿಂದ ಕೊಂದು ಮೈಸೂರನ್ನು ವಶಪಡಿಸಿಕೊಂಡರು. ಅಲ್ಲಿಗೆ ಹೈದರಲಿ ಮತ್ತು ಟಿಪ್ಪುವಿನ ೩೦ ವರ್ಷಗಳ ಆಳ್ವಿಕೆ ಕೊನೆಗೊಂಡಿತು.[೨೩] ಮೈಸೂರನ್ನು ಮತ್ತೆ ಯದುವಂಶದ ಮೈಸೂರು ಅರಸರಿಗೆ ಒಪ್ಪಿಸಲಾಯಿತು.

ವಿಜಯನಗರ ಪತನಾನಂತರ ಮೈಸೂರಿನ ಒಡೆಯರ ರಾಜವಂಶವು ಗಂಜೀಫಾ ಚಿತ್ರಕಲೆಗೆ ಅಪಾರ ಕಾಣಿಕೆಯನ್ನು ನೀಡಿತು. ಕ್ರಿ.ಶ. ೧೮ನೇ ಶತಮಾನದ ವೇಳೆಗೆ ಗಂಜೀಫಾ ಚಿತ್ರಕಲೆ ಮೈಸೂರಿನ ಒಡೆಯರ್ ಮತ್ತು ತಂಜಾವೂರಿನ ಸರ್ವೋಜಿ ವಂಶದವರ ಉದಾರ ಪ್ರೋತ್ಸಾಹದಿಂದ ಸಾಂಪ್ರದಾಯಿಕ ಮೈಸೂರು ಮತ್ತು ತಂಜಾವೂರುಶೈಲಿಗಳೆಂಬ ಹೆಸರನ್ನು ಪಡೆದುಕೊಂಡವು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಿರ್ಮಿಸಲ್ಪಟ್ಟ ಅನೇಕ ದೇವಾಲಯಗಳ ಒಳಗೋಡೆಗಳ ಮೇಲೆ ಮೈಸೂರು ಶೈಲಿಯ ಚಿತ್ರಕಲೆಯ ವಿವಿಧ ವರ್ಣಚಿತ್ರಗಳನ್ನು ನಾವು ನೋಡಬಹುದಾಗಿದೆ. ಈ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಕೆಲವು ಹೆಸರಾಂತ ಚಿತ್ರಕಲಾವಿದರು ಜಾವಗಲ್ ನರಸಿಂಹಯ್ಯ, ನಗುವನಹಳ್ಳಿ ನಾರಣಪ್ಪ,

---

೨೨. R and N. Y. Leyden : The Playing Cards of India, PP-25
೨೩. ಸಂತೋಷಕುಮಾರ ಗುಲ್ವಾಡಿ : ಗಂಜೀಫಾ ಕಲೆ, ಪುಟ-೧೨

ಎಲ್ಲಯ್ಯ, ವೀರಣ್ಣ, ಅಳಸಿಂಗಾರ್ಯ, ಸುಂದರಯ್ಯ, ನೆಲಮಂಗಲದ ರಂಗಪ್ಪ, ಹುಲಿಯೂರುದುರ್ಗದ ಕೃಷ್ಣಪ್ಪ, ಗುರಿಕಾರ ತಿಪ್ಪಣ್ಣ, ತಂಜಾವೂರು ಕೊಂಡಯ್ಯ ಮತ್ತು ವೆಂಕಟಸುಬ್ಬಯ್ಯ[೨೪] ಮುಂತಾದ ಕಲಾವಿದರು ಇಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಮೈಸೂರು ಸಂಸ್ಥಾನದಾದ್ಯಂತ ಅನೇಕ ಚಿತ್ರಕಲಾವಿದರು ದೇವಾಲಯಗಳು, ವಿವಿಧ ಮಠಗಳು ಮತ್ತು ಅರಮನೆಗಳ ಭಿತ್ತಿಚಿತ್ರಗಳನ್ನಲ್ಲದೆ ಅನೇಕ ಪ್ರಮುಖ ಸಾರ್ವಜನಿಕರ ಭಾವಚಿತ್ರಗಳನ್ನೂ ರಚಿಸಿದರು. ಓಲೆಗರಿಗಳ, ಕಾಗದದ ಹಸ್ತಪ್ರತಿಗಳ ಮೇಲೆಯೂ ವರ್ಣಚಿತ್ರಗಳನ್ನು ಬರೆಯುತ್ತಿದ್ದರು.

ಮುಮ್ಮಡಿ ಕೃಷ್ಣರಾಜ ಒಡೆಯರ "ಶ್ರೀತತ್ವನಿಧಿ" ಎಂಬ ಚಿತ್ರಮಯ ಗ್ರಂಥ, ಕೃತಿಕರ್ಮ, ಕೌಶಲಗಳ ಸಾಕ್ಷಿಯಾದ ವಸ್ತುಪ್ರಾವೀಣ್ಯ, ಶಾಸ್ತ್ರಪಾಂಡಿತ್ಯದಿಂದ ಕೂಡಿ ಸುಮಾರು ೧,೮೮೮ ವರ್ಣಚಿತ್ರಗಳು ಮತ್ತು ೪೫೮ ರೇಖಾಚಿತ್ರಗಳನ್ನು ಹೊಂದಿರುವ ಅದ್ಭುತವಾದ ಕೃತಿ. ಶ್ರೀ ತತ್ವನಿಧಿಯನ್ನು ಮೈಸೂರು ಚಿತ್ರಕಲಾ ಶೈಲಿಯ ಕೋಶವೆಂದು ಕರೆಯುವುದರಲ್ಲಿ ತಪ್ಪೇನಿಲ್ಲ. ಈ ಅವಧಿಯಲ್ಲಿ ಗಂಜೀಫಾ ಕಲೆಯು ವಿಕಾಸಗೊಂಡಿತು. ಇದು ರಾಜಮನೆತನದ ಸದಸ್ಯರು ಆಡಲು ಬಳಸುತ್ತಿದ್ದ ದಪ್ಪ ರಟ್ಟಿನ ಮೇಲೆ ಬರೆದ ಸೂಕ್ಷ್ಮ ಪ್ರತಿರೂಪ ಚಿತ್ರಲೇಖನ. ಮುಮ್ಮಡಿ ಕೃಷ್ಣರಾಜ ಒಡೆಯರು ಚಾಮುಂಡೇಶ್ವರಿ ಗಂಜೀಫಾ, ಜಗನ್ಮೋಹನ ಗಂಜೀಫಾ, ಪಂಚಪಾಂಡವ ಗಂಜೀಫಾ, ನವಗ್ರಹ ಗಂಜೀಫಾ, ದಿಕ್ಪಾಲ ಗಂಜೀಫಾ ಮುಂತಾಗಿ, ಅದರ ವಿಶೇಷ ಕಲೆಗೆ ಕಾರಣರಾದವರು ಎಂದರೆ ತಪ್ಪಲ್ಲ. ಮುಮ್ಮಡಿ ಕೃಷ್ಣರಾಜ ಒಡೆಯರು ಹಲವು ವಿದೇಶಿ ಚಿತ್ರಕಾರರು ಮತ್ತು ಕಲಾವಿದರಾದ ಗೆರಾಲ್ಡೈನ್, ಜರ್ಮನಿಯ ವ್ಯಾಂಡ್ಡಿಲ್, ಸ್ಪರ್ಲಿಂಗ್ ರಾಬರ್ಟ್ ಕಾಟನ್, ಗ್ರೇಟ್ ಬ್ರಿಟನ್ನಿನ ವೆಕ್‌ಸ್ಲರ್[೨೫] ಮೊದಲಾದವರಿಗೂ ಪ್ರೋತ್ಸಾಹವನ್ನು ನೀಡಿ ಆದರಿಸಿದ್ದು ಗಮನಾರ್ಹವಾದ ಅವರ ಕಲಾವೈಶಾಲ್ಯದೃಷ್ಟಿಯೆಂದು ಹೇಳಬೇಕು.

ವಿಜಯನಗರವು ಪತನ ಹೊಂದಿದ ಮೇಲೆ ಮೈಸೂರು ಮತ್ತು ತಂಜಾವೂರು ಸಾಂಪ್ರದಾಯಿಕ ಕಲೆಯ ಕೇಂದ್ರಗಳಾದವು. ಅಲ್ಲಿಂದ ವಲಸೆಬಂದ ಕಲಾವಿದರಿಗೆ ಮತ್ತು ಕುಶಲಕರ್ಮಿಗಳಿಗೆ ಮೈಸೂರಿನ ಒಡೆಯರು ಆಶ್ರಯ ನೀಡಿದರು. ಅವರಲ್ಲಿ ಹಲವರು ರಾಜಧಾನಿಯಾದ ಮೈಸೂರಿನಲ್ಲಿ ನೆಲೆಸಿದರು. ಸಂಗೀತ, ಚಿತ್ರಕಲೆ, ಶಿಲ್ಪಕಲೆ, ಚಿತ್ರಕಲೆ, ರೇಖಾಚಿತ್ರಣ, ಸಾಹಿತ್ಯ ಇವುಗಳಿಗೆ ಉದಾರ ಆಶ್ರಯ ನೀಡಿದ ಮುಮ್ಮಡಿ ಕೃಷ್ಣರಾಜ ಒಡೆಯರು[೨೬] ೧೮೯೮ರಲ್ಲಿ ಒಂದು ನೂತನ ಯುಗಕ್ಕೆ ನಾಂದಿ ಹಾಡಿದರು.

ಮುಮ್ಮಡಿ ಕೃಷ್ಣರಾಜ ಒಡೆಯರು ಶ್ರೇಷ್ಠ ಕಲಾಪ್ರೇಮಿಯಾಗಿದ್ದರು. ಜೊತೆಗೆ ಉತ್ತಮ ಅಭಿರುಚಿಯುಳ್ಳ ಶ್ರೇಷ್ಠ ವಿದ್ವಾಂಸರೂ ಆಗಿದ್ದರು. ಕಾವ್ಯ, ಸಂಗೀತ, ನರ್ತನ, ಚಿತ್ರಕಲೆ ಮತ್ತು ಶಿಲ್ಪಕಲೆ ಹೀಗೆ ಎಲ್ಲಾ ಪ್ರಕಾರಗಳಲ್ಲಿ ಅವರಿಗೆ ಬಹಳ ಆಸಕ್ತಿಯಿತ್ತು. ಅವರ ಬಳಿ ಬಹುಸಂಖ್ಯೆಯಲ್ಲಿ ಚಿತ್ರಕಲಾವಿದರಿದ್ದರು. ಮೈಸೂರು ಶೈಲಿಯ ಚಿತ್ರಕಲೆಯ ವಸ್ತು ಸಾಂಪ್ರದಾಯಿಕವಾಗಿದ್ದಂತೆಯೇ ಲೌಕಿಕವೂ ಆಗಿರುತ್ತಿದ್ದವು. ದೇವಾಲಯ, ಮಠ ಮತ್ತು ಅರಮನೆಗಳ ಭಿತ್ತಿಚಿತ್ರಗಳಲ್ಲದೆ ಪ್ರಮುಖ ವ್ಯಕ್ತಿಗಳ ಭಾವಚಿತ್ರಗಳೂ ಇರುತ್ತಿದ್ದವು. ಓಲೆಗರಿಗಳು ಮತ್ತು ಕಾಗದದ ಹಸ್ತ ಪ್ರತಿಗಳ ಮೇಲೆಯೂ ವರ್ಣಚಿತ್ರಗಳನ್ನು ಬರೆಯುತ್ತಿದ್ದಂತೆ ಗಂಜೀಫಾ ಆಟದ ಚಿತ್ರಗಳನ್ನು ಹೇರಳವಾಗಿ ಚಿತ್ರಿಸಿದ್ದಾರೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿ ಮೈದಳೆದ ಗಂಜೀಫಾ ಚಿತ್ರಕಲಾ ಪ್ರಕಾರವನ್ನು

---

೨೪. ಡಾ. ಆರ್. ಗೋಪಾಲ್, ಡಾ. ಎಸ್. ನರೇಂದ್ರ ಪ್ರಸಾದ (ಸಂ.) : ಮುಮ್ಮಡಿ ಕೃಷ್ಣರಾಜ ಒಡೆಯರು : ಒಂದು ಚಾರಿತ್ರಿಕ ಅಧ್ಯಯನ, ಪುಟ-೯೯
೨೫. ಡಾ. ಆರ್. ಗೋಪಾಲ್, ಡಾ. ಎಸ್. ನರೇಂದ್ರ ಪ್ರಸಾದ (ಸಂ.) : ಮುಮ್ಮಡಿ ಕೃಷ್ಣರಾಜ ಒಡೆಯರು : ಒಂದು ಚಾರಿತ್ರಿಕ ಅಧ್ಯಯನ, ಪುಟ-೧೦೦
೨೬. ಸಂತೋಷಕುಮಾರ ಗುಲ್ವಾಡಿ : ಗಂಜೀಫಾ ಕಲೆ, ಪುಟ-೧೩

ಯಾವುದೊಂದು ನಿರ್ದಿಷ್ಟ ಶೈಲಿಯ ಒಂದು ಘಟ್ಟವೆಂದಾಗಲಿ, ಫಲವೆಂದಾಗಲಿ ಹೇಳುವಂತಿಲ್ಲ. ಇದಕ್ಕಿದ್ದಂತೆ ಯಾವ ಪೂರ್ವೋತ್ತರವೂ ಇರದೆ ಕಾಣಿಸಿಕೊಂಡದ್ದೂ ಅಲ್ಲ. ಆಗ ಸಿದ್ಧವಾಗಿ ಈಗ ಉಳಿದು ಬಂದಿರುವ ಕಲಾಕೃತಿಗಳನ್ನು ಪರಿಶೀಲಿಸಿದರೆ ಕೆಲವು ವಿವರಗಳು ಸ್ಪಷ್ಟವಾಗುತ್ತವೆ. ರಾಜಸ್ಥಾನ ಕಲಾಸಂಪ್ರದಾಯದಂತೆ ೧೭, ೧೮ನೇ ಶತಮಾನಗಳಲ್ಲಿ ಬಸ್ಸೋಲಿ, ಗುಲೇರ್, ಕಾಂಗರಾ ಪರ್ವಾಲ್, ಮಹಾಭಾರತ, ರಾಮಾಯಣ, ಕೃಷ್ಣಲೀಲೆ ಮೊದಲಾದ ಗ್ರಂಥಗಳಿಗೆ ಚಿತ್ರಗಳಾಗಿಯೂ ರಾಗ-ರಾಗಿಣಿ ಶೃಂಗಾರಪ್ರಧಾನವಾದ ಚಿತ್ರಗಳಾಗಿಯೂ ಬಹುಮಟ್ಟಿಗೆ ಕಾಣಿಸಿಕೊಂಡಿವೆ. ಇವುಗಳಲ್ಲದೆ ಇಲ್ಲಿ ಸ್ವತಂತ್ರವಾದ ದೇವತಾ ಚಿತ್ರಗಳು (ವಿಷ್ಣುವಿನ ಅವತಾರ, ಶಿವನ ಲೀಲಾಮೂರ್ತಿಗಳು, ದೇವಿರೂಪಗಳು) ಚಿತ್ರಕಲೆಯ ವಸ್ತುಗಳಾಗಿವೆ.

ಹೀಗೆ ಮುಮ್ಮಡಿ ಕೃಷ್ಣರಾಜ ಒಡೆಯರು ಅನೇಕ ಲಲಿತಕಲೆಗಳ ಹುಟ್ಟಿಗೆ ಕಾರಣವಾದರು. ಅದರಲ್ಲಿ ವಿಶೇಷವಾಗಿ ಪಾಶ್ಚಿಮಾತ್ಯರಿಂದ ದಖನಿಗೆ ಬಂದ ಗಂಜೀಫಾಕಲೆಯನ್ನು ತಾವೇ ರಚಿಸಿ ಪುನಃ ಆಟದಲ್ಲಿ ವೈವಿಧ್ಯವನ್ನು ಕಂಡು ಹಿಡಿದರು.

ಮೈಸೂರಿನಲ್ಲಿ ೧೯ನೇ ಶತಮಾನದ ಮೊದಲ ಭಾಗದಲ್ಲಿ ಗಂಜೀಫಾ ಕಲೆಯು ವಿನಾಶಗೊಂಡಿತು. ಇದು ರಾಜಮನೆತನದ ಸದಸ್ಯರು ಆಡಲು ಬಳುಸುತ್ತಿದ್ದ ಕಾರ್ಡುಗಳ ಮೇಲೆ ಬರೆದ ಸೂಕ್ಷ್ಮ ಪ್ರತಿರೂಪದ ಕಿರುರೂಪ ಚಿತ್ರಗಳು. ಇದು ಮೊಘಲ್ ರಾಜ್ಯದಿಂದ ಹದಿನೆಂಟನೆಯ ಶತಮಾನದಲ್ಲಿ ದೇಶಾದ್ಯಂತ ಹರಡಿತು. ಮುಮ್ಮಡಿ ಕೃಷ್ಣರಾಜ ಒಡೆಯರು ಇದು ಮೊಘಲ್ ಮೂಲದ ಕಲೆ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಮುಮ್ಮಡಿಯವರು ಚಾಮುಂಡೇಶ್ವರಿ, ಜಗನ್ಮೋಹನ ಗಂಜೀಫಾ, ಪಂಚಪಾಂಡವರ ಗಂಜೀಫಾ, ನವಗ್ರಹ ಗಂಜೀಫಾ, ದಿಕ್ಪಾಲ ಗಂಜೀಫಾ, ಗಾಂಧಾರ ಗಂಜೀಫಾ, ನವರತ್ನ ಗಂಜೀಫಾ, ದೇವಿ, ದಶಾವತಾರ ಗಂಜೀಫಾ ಮತ್ತು ಸರ್ವಮಂಗಳ ಗಂಜೀಫಾ ಹೀಗೆ ಬಗೆ ಬಗೆಯ ಗಂಜೀಫಾ ಚಿತ್ರಗಳನ್ನು ಸ್ವತಃ ತಾವೇ ರಚಿಸುವುದರ ಮುಖಾಂತರ ಆಟಗಳನ್ನು ಸೃಷ್ಟಿಸಿದ್ದಾರೆ.

ಮೈಸೂರು, ಶ್ರೀರಂಗಪಟ್ಟಣ, ನಾಗಮಂಗಲ, ನಂಜನಗೂಡು, ಚನ್ನಪಟ್ಟಣ ಮೊದಲಾದ ಕಡೆಗಳಲ್ಲಿ ಗಂಜೀಫಾ ಕಲೆಯು ಬೆಳೆಯಲು ಅವಕಾಶವಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರರ ಕಲಾ ಪ್ರೇಮದಲ್ಲಿ ಗಂಜೀಫಾ ಚಿತ್ರಕಲೆ ಮತ್ತು ಆಟಗಳು ಸಮರ್ಥವಾಗಿ ಬೆಳೆದವು. ಮೈಸೂರು ಗಂಜೀಫಾ ಕಲೆ "ದೇವರ ಆಟ" ರೂಪದಲ್ಲಿ ಸ್ವತಂತ್ರ ರೂಪದಲ್ಲಿ ಬೆಳೆದು ಬಂದಿರುವುದಕ್ಕೆ ಮುಮ್ಮಡಿ ಕೃಷ್ಣರಾಜರೇ ಮುಖ್ಯ ಕಾರಣರಾದರು. ಮುಮ್ಮಡಿ ಕೃಷ್ಣರಾಜರಿಂದ ಮೈಸೂರಿಗೆ ಬಂದ ಗಂಜೀಫಾ ಮೊಘಲ್ ಪ್ರಭಾವ ಕಡಿಮೆಯಾಗಿ ಮತ್ತೆ ಹಿಂದೂತ್ವದ ಹಿನ್ನೆಲೆಯಲ್ಲೇ ಮೈಸೂರಿನ ಪ್ರಾದೇಶಿಕ ಹಿನ್ನೆಲೆಯಲ್ಲಿ ಗಂಜೀಫಾ ಚಿತ್ರಗಳ ವಸ್ತು ವಿಷಯಗಳು ಮೂಡಿಬಂದವು. ಮುಮ್ಮಡಿ ಕೃಷ್ಣರಾಜರು ರಚಿಸಿದ ಗಂಜೀಫಾ ಚಿತ್ರಗಳು ಮತ್ತು ಅವರ ಕಾಲಕ್ಕೆ ಬರೆದ ಗ್ರಂಥಗಳು, ಅವುಗಳ ಚಿತ್ರಗಳನ್ನು ಗಮನಿಸಿದಾಗ ವಿಶಿಷ್ಟವಾದ ಮೈಸೂರು ಶೈಲಿಯೊಂದು ತನ್ನ ವರ್ಣವೈಖರಿಯೊಂದಿಗೆ ಬೆಳೆದು ಬಂದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಚಾಮುಂಡಿ ಬೆಟ್ಟದ ದೇವಸ್ಥಾನವನ್ನು ಮಹತ್ವದ ಪುಣ್ಯಕ್ಷೇತ್ರವನ್ನಾಗಿ ಬೆಳೆಸಿದ ಮುಮ್ಮಡಿ ಕೃಷ್ಣರಾಜರು ಶ್ರೀ ಚಾಮುಂಡೇಶ್ವರಿ ತ್ರಿಶತೀ ಚಾಮುಂಡೀ ಮಂಗಲಮಾಲಿಕಾ ಸ್ತೋತ್ರ ರಚನೆ ಮಾಡಿದ್ದಾರೆ. ಶ್ರೀ ಚಾಮುಂಡಿ ಬೆಟ್ಟಕ್ಕೆ ನಿಕಟವಾದ ಬಾಂಧವ್ಯ ಬೆಳೆದದ್ದೇ ಮುಮ್ಮಡಿಯವರ ಕಾಲಕ್ಕೆ. ಮುಮ್ಮಡಿಯವರಿಗೆ 'ಚಾಮುಂಡಾ ಕೃಪಾಪೂರ್ಣ' ಎಂಬ ಬಿರುದು ದೊರೆಯುವಷ್ಟರ ಮಟ್ಟಿಗೆ ಪ್ರಸಿದ್ಧಿ ಪಡೆಯಿತು.

ಮುಮ್ಮಡಿ ಕೃಷ್ಣರಾಜರು ಕಡಿಮೆಯೆಂದರೂ ಹದಿನೆಂಟು ಆಟಗಳನ್ನು ರೂಪಿಸಿದರು. ಚಾಮುಂಡೇಶ್ವರಿ ಅಲ್ಲದೆ ಪಂಚಪಾಂಡವ, ಜಗನ್ಮೋಹನ, ನವಗ್ರಹ, ನವರತ್ನ, ನವೀನರಾಮ, ಸಾಮ್ರಾಜ್ಯ ಸದ್ಯೋಜಾತ, ಅಷ್ಟದಿಕ್ಪಾಲ, ದೇವಿ ದಶಾವತಾರ, ಸರ್ವಮಂಗಳಾ, ಅಷ್ಟೈಶ್ವರ್ಯ, ಮನೋಹರ ಮೊದಲಾದ ಪೇಟಿಕಾಗಳನ್ನು ಸೃಷ್ಟಿಸಿದರು.


ಹೊಸ ಹೊಸ ಆಟಗಳನ್ನು ಸೃಷ್ಟಿಸುವಾಗ ಮುಮ್ಮಡಿಯವರು ಕಲಾವಿದರನ್ನು ಕರೆಸಿ ಅವರೊಂದಿಗೆ ಸಮಾಲೋಚಿಸುತ್ತಿದ್ದರು. ಗಂಜೀಫಾ ಕಲಾವಿದರನ್ನು ಅವರು ಗೌರವಿಸಿದರು. ಈ ಹೊಸ ಆವಿಷ್ಕಾರಗಳು ಕಲಾವಿದರಿಗೆ ನೂತನ ಪ್ರಯೋಗಗಳನ್ನು ಮಾಡಲು ಪ್ರಚೋದನೆ, ಸ್ಫೂರ್ತಿಕೊಟ್ಟವು. ಮೈಸೂರಿನ ಇತಿಹಾಸದಲ್ಲಿ ಯಾವ ಕಾಲಕ್ಕೂ ಕಲಾವಿದರು ಇಷ್ಟೊಂದು ಮಹತ್ವ ಪಡೆದಿರಲಿಲ್ಲ.

ಮುಮ್ಮಡಿಯವರ ಕಾಲಕ್ಕೆ ಪ್ರಕಟವಾದ ಶ್ರೀತತ್ವನಿಧಿ ಗ್ರಂಥವನ್ನು ನೋಡಿದರೆ ಅವುಗಳಲ್ಲಿ ಮೈಸೂರು ಶೈಲಿಯ ಅಪ್ಪಟತನ ಕಾಣುತ್ತದೆ. ಪುಸ್ತಕದ ರೇಖಾಚಿತ್ರಗಳ ವಿನ್ಯಾಸ ಕೂಡ ಗಂಜೀಫಾ ಚಿತ್ರಕಲೆಯನ್ನೇ ಹೋಲುತ್ತದೆ[೨೭] ಎಂದರೆ ಗಂಜೀಫಾಕ್ಕೆ ಈ ಅರಸರು ನೀಡಿದ ಮಹತ್ವವನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ.

ಹೀಗೆ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದ ಗಂಜೀಫಾ ಚಿತ್ರಕಲೆ ಮತ್ತು ಆಟ ಇಂದು ನಮ್ಮ ನಡುವೆ ನಶಿಸಿ ಹೋದಂತಾಗಿದೆ. ಒಂದು ಕಾಲಘಟ್ಟದಲ್ಲಿ ದೇವಾನುದೇವತೆಗಳನ್ನು ಚಿತ್ರಿಸಿಕೊಂಡು ಆಟ ಆಡುವ ಪದ್ಧತಿ ಮುಂಚೂಣಿಯಲ್ಲಿತ್ತು. ಆದರೆ ಇಂದು ಗಂಜೀಫಾ ಕಲೆ, ಕಲಾವಿದರು, ಆಟ ಆಡುವವರು ಕಾಣಸಿಗುವುದಿಲ್ಲ. ಕರ್ನಾಟಕದಲ್ಲಿ ಶ್ರೀಮತಿ ಸುಧಾ ವೆಂಕಟೇಶ್, ಶ್ರೀಮತಿ ಚಂದ್ರಿಕಾ ಪದ್ಮನಾಭನ್ ಮತ್ತು ರಘುಪತಿ ಭಟ್ ಅಂತಹ ಮೂವರು ಕಲಾವಿದರು ಈ ಚಾರಿತ್ರಿಕ ಹಿನ್ನೆಲೆಯುಳ್ಳ ಗಂಜೀಫಾ ಚಿತ್ರಕಲೆಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ.

❖❖❖

೨೭. ಡಾ. ಆರ್. ಗೋಪಾಲ್, ಡಾ ಎಸ್. ನರೇಂದ್ರ ಪ್ರಸಾದ್., ಮುಮ್ಮಡಿ ಕೃಷ್ಣರಾಜ ಒಡೆಯರು –ಒಂದು ಚಾರಿತ್ರಿಕ ಅಧ್ಯಯನ, ಪುಟ–೩೪–೩೬



ಅಧ್ಯಾಯ – ಮೂರು
ಗಂಜೀಫಾ ಚಿತ್ರಕಲೆಯ ಸಿದ್ಧತೆ ಮತ್ತು ರಚನಾ ವಿಧಾನ

ಗಂಜೀಫಾ ರಚನಾ ಪದ್ಧತಿಯಲ್ಲಿ ಒಂದು ಚೌಕಟ್ಟಿನ ಮೈ ಪಾತಳಿಯಲ್ಲಿ ಚಿತ್ರಿಸಿ ವರ್ಣಲೇಪನ ಮಾಡಿ ಒಂದು ನಿರ್ದಿಷ್ಟ ಚೌಕಟ್ಟಿಗೆ ಅಲಂಕರಿಸುವುದು. ಗಂಜೀಫಾ ಕಲಾವಿದರು ಈ ವರ್ಣ ಪದ್ಧತಿಯನ್ನು ಅನುಸರಿಸುವುದರ ಜೊತೆಗೆ ಚಿತ್ರವು ಇನ್ನೂ ಸುಂದರವಾಗಿ ಕಾಣುವಂತಾಗಲು ಬೆಳ್ಳಿ ಬಂಗಾರದ ಬಣ್ಣಗಳನ್ನು ಬಳಸಿರುವುದು ಕಾಣಬಹುದು. ಹೀಗೆ ವಿದೇಶಿ ಹಾಗೂ ದೇಶಿಯ ಕಲಾವಿದರು ರಚಿಸಿದ ಗಂಜೀಫಾ ಚಿತ್ರಗಳ ರಚನಾ ವಿಧಾನ ಹಾಗೂ ಪರಿಕರಗಳನ್ನು ವಿಂಗಡಿಸಿಕೊಂಡು ಇಲ್ಲಿ ಚರ್ಚಿಸಲಾಗಿದೆ.

೧ ಕಾಗದ – ರಟ್ಟು
೨ ಬಣ್ಣಗಳು
೩ ರೇಖಾ ಚಿತ್ರಗಳು
೪ ಪಾರದರ್ಶಕ ಕಾಗದಗಳು (ಟ್ರಸಿಂಗ್ ಪೇಪರ್ಸ್)
೫ ವಿವಿಧ ಲೇಖನಿಗಳು
೬ ಬಗೆ ಬಗೆಯ ಕುಂಚಗಳು
೭ ಬಂಧಕಗಳು

ಕಾಗದ – ರಟ್ಟು

ಕಾಗದವು ಚಿತ್ರರಚನಾ ಆಧಾರ ಪರಿಕರವಾಗಿದೆ. ಗಂಜೀಫಾ ಚಿತ್ರ ರಚನೆಯಲ್ಲಿ ಮುಖ್ಯ ಪರಿಕರದಲ್ಲಿ ಒಂದು ಚೀನಾ ದೇಶದ "ತ್ಸಾಯ್ಲುಫ್" ಎಂಬುವನು ಕ್ರಿ.ಶ. ೧೦೨ರಲ್ಲಿ ಕಾಗದವನ್ನು ಕಂಡುಹಿಡಿದನು ಎನ್ನಲಾಗಿದೆ. ಅತಿ ಹಳೆಯ ಕಾಗದ ಕ್ರಿ.ಶ೧೨೨೦ರ ಸುಮಾರಿನಲ್ಲಿ ಕಂಡು ಬಂದಿದೆ ಎಂಬ ಅಭಿಪ್ರಾಯವಿದೆ. ಮಹಮ್ಮದೀಯರ ಮೂಲಕ ಭಾರತಕ್ಕೆ ಬಂದ ಕಾಗದ, ಕ್ರಿ.ಶ. ೧೪ನೇ ಶತಮಾನದಲ್ಲಿ ಕರ್ನಾಟದಲ್ಲಿ

ಪ್ರವೇಶ ಪಡೆಯಿತು ಎಂದು ತಿಳಿದುಬರುತ್ತದೆ. ಮೊಘಲರ ಆಡಳಿತಾವಧಿಯಲ್ಲಿ ಕಾಗದದ ಮೇಲೆ ಚಿತ್ರರಚನೆ ಪ್ರೋತ್ಸಾಹ ಪಡೆದುಕೊಂಡಿತ್ತು. ರಾಜಸ್ಥಾನಿ, ಮೊಗಲ್, ಡೆಕ್ಕನ್, ಮೈಸೂರು, ತಂಜಾವೂರ, ಗಂಜೀಫಾ ಶೈಲಿಗಳಂತಹ ಕಿರುರೂಪ ಚಿತ್ರಗಳು ರಚನೆಯಾಗಿವೆ. ಗಂಜೀಫಾ ಚಿತ್ರಗಳನ್ನು ಮೊದಲು ಪೂರ್ಣ ರೇಖಾಚಿತ್ರ ಬರೆದುಕೊಂಡು ತಾವೇ ತಯಾರಿಸಿದ ಕುಂಚಗಳಿಂದ ವರ್ಣಗಳನ್ನು ಹಾಕುತ್ತಿದ್ದರು.

ಗಂಜೀಫಾ ಕಲಾವಿದರು ಚಿತ್ರಗಳನ್ನು ರಚಿಸಲು ನೇರವಾಗಿ ಹೊಸ ಹೊಸ ಹಾಳೆಗಳನ್ನು ಬಳಸುತ್ತಿರಲಿಲ್ಲ. ಬದಲಾಗಿ ಕಚ್ಚಾ ಸಾಮಗ್ರಿಗಳನ್ನೇ ಹೆಚ್ಚಾಗಿ ಉಪಯೋಗಿಸಿಕೊಂಡು ಸುಂದರವಾದ ಚಿತ್ರಗಳನ್ನು ರಚಿಸಿ ಆಟಕ್ಕೆ ಬಿಡುತ್ತಿದ್ದರು. ಉದಾಹರಣೆ ೧೮ನೇ ಶತಮಾನದ ಸೇನೆಯ ದಾಖಲೆಗಳ ಹಾಳೆಗಳನ್ನು ತೆಗೆದುಕೊಂಡು ಗಂಜೀಫಾ ಎಲೆಗಳನ್ನಾಗಿ ಪರಿವರ್ತಿಸಿ ಚಿತ್ರಗಳನ್ನು ರಚಿಸಿದ್ದಾರೆ. ಅಲ್ಲದೆ ಭಾರತೀಯ ಲೆಕ್ಕಪತ್ರ ಮತ್ತು ಶಾಲೆಯ ಎಕ್ಸರ್ಸೈಜ ಪುಸ್ತಕದ ಹಾಳೆಗಳನ್ನು ಬಳಸಿ ವೃತ್ತಾಕಾರದಲ್ಲಿ ಗಂಜೀಫಾ ಎಲೆಗಳನ್ನು ಪರಿವರ್ತಿಸಿ ಸುಂದರವಾದ ಚಿತ್ರಗಳನ್ನು ಚಿತ್ರಿಸಿದ್ದಾರೆ.

ಕಾಗದಗಳನ್ನು ಇಲ್ಲವೆ ಕಟ್ಟುಗಳನ್ನು ವೃತ್ತಾಕಾರವಾಗಿಯೋ, ಚೌಕಾಕಾರವಾಗಿಯೋ, ಅಥವಾ ಆಯತಾಕಾರವಾಗಿ ಕತ್ತರಿಸಿಕೊಂಡು ಅಕ್ಕಿಯ ಹಿಟ್ಟಿನಿಂದ ತಯಾರಿಸಿದ ಗಂಜಿಯಿಂದ ೮ ಹಾಳೆಗಳನ್ನು ಒಂದರ ಮೇಲೊಂದನ್ನು ಅಂಟಿಸಿ, ತಮಗೆ ಬೇಕಾದ ಹಾಗೆ ದಪ್ಪ, ಅಥವಾ ತೆಳುವಾದ ಎಲೆಗಳನ್ನು ತಯಾರಿಸಿಕೊಳ್ಳುತ್ತಿದ್ದರು. ನಂತರ ಅದರ ಮೇಲೆ ಶುಭ್ರವಾದ ಕಾಗದವನ್ನು ಅಂಟಿಸಿ ತಮಗೆ ಬೇಕಾದ ಆಕಾರಗಳಲ್ಲಿ ಎಲೆಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಕಾಗದ, ರಟ್ಟುಗಳಲ್ಲದೇ ಬಟ್ಟೆಯ ತುಂಡುಗಳಿಂದಲೂ ತಮಗೆ ಬೇಕಾದ ಆಕೃತಿಯಲ್ಲಿ ಕತ್ತರಿಸಿ ಅಕ್ಕಿ ಹಿಟ್ಟಿನ ಗಂಜಿಯಿಂದ ಒಂದರ ಮೇಲೊಂದನ್ನು ಅಂಟಿಸಿ ಕೊನೆಗೆ ಕಾಗದವನ್ನು ಅಂಟಿಸಿ ತಮಗೆ ಬೇಕಾದ ಆಕಾರಗಳಲ್ಲಿ ಎಲೆಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಈ ಎಲೆಗಳು ಎರಡು ಇಂಚುಗಳಿಂದ ನಾಲ್ಕು ಇಂಚುಗಳ ಅಳತೆಯಲ್ಲಿರುತ್ತಿದ್ದವು. ಚರ್ಮ, ಕಟ್ಟಿಗೆಯ ತೆಳ್ಳನೆಯ ಹಾಳೆಗಳನ್ನು ಹಾಗೂ ಇನ್ನಿತರ ವಸ್ತುಗಳನ್ನು ಬಳಸಿ ಗಂಜೀಫಾ ಎಲೆಗಳನ್ನು ದುಂಡಾಗಿ ಮೊದಲನೆಯ ಹಂತದ ಬಿಲ್ಲೆಗಳನ್ನು ಕರ್ನಾಟಕದಲ್ಲಿ ತಯಾರಿಸುತ್ತಿದ್ದರು.

ಜೈಪುರದಲ್ಲಿ ಕೊರೆದ ಹಿತ್ತಾಳೆ ತಟ್ಟೆಯಾಕಾರದ ಎಲೆಗಳನ್ನು ಕಡ್ಡಿ, ಕಾಗದ, ರದ್ದಿ ಚಿಂದಿ ಬಟ್ಟೆಗಳು, ಚರ್ಮ, ಮೀನಿನ ಪೋರೆ ಮತ್ತು ತಾಳೆ ಮರದ ಎಳೆಗಳನ್ನು ಉಪಯೋಗಿಸಿ ಗಂಜೀಫಾ ಎಲೆಗಳನ್ನು ತಯಾರಿಸುತ್ತಿದ್ದರು. ದಕ್ಷಿಣ ಭಾರತ, ಪಶ್ಚಿಮ ಭಾರತದಲ್ಲಿ ಅನುಪಯುಕ್ತ ಹಾಳೆಗಳನ್ನು ಉಪಯೋಗಿಸಿ ಎಲೆಗಳನ್ನು ತಯಾರಿಸುತ್ತಿದ್ದರು.

ಬೆಲೆಬಾಳುವ ಗಂಜೀಫಾ ಎಲೆಗಳು

ದುಬಾರಿ ವಸ್ತುಗಳನ್ನು ಬಳಸಿ ಬೆಲೆಬಾಳುವ ಗಂಜೀಫಾ ಎಲೆಗಳನ್ನು ತಯಾರಿಸಲು ದಂತ, ಆಮೆ ಚಿಪ್ಪು, ಮದರ್ – ಆಫ್ – ಪರ್ಲ, ಕಪ್ಪೆ ಚಿಪ್ಪು, ಒಳ ಭಾಗದಲ್ಲಿ ನಯವಾದ ಹಾಗೂ ಮೇಲ್ಮೈಯುಳ್ಳ ಬಣ್ಣ ಸೂಸುವ ಹೊಳಪುಳ್ಳ ಪದರ ಮತ್ತು ಎನಾಮಲ್ ಪ್ರಸಕ್ತ ಲೋಹಗಳನ್ನು ಉಪಯೋಗಿಸುತ್ತಿದ್ದರು. ದಂತದ ಎಲೆಗಳು, ಕೊರೆದವು ಅಥವಾ ಕೆತ್ತನೆ ಮಾಡಿದವುಗಳಾಗಿದ್ದವು.

ಅಗ್ಗದ ಗಂಜೀಫಾಗಳು

ಅಗ್ಗದ ವಸ್ತುಗಳನ್ನು ಬಳಸಿ ಕಡಿಮೆ ಖರ್ಚಿನ ಎಲೆಗಳನ್ನು ಕಡ್ಡಿ, ಕಾಗದ, ರದ್ದಿ, ಚಿಂದಿ

ಬಟ್ಟೆಗಳು, ಚರ್ಮ, ಮೀನಿನ ಪೊರೆ ಮತ್ತು ತಾಳೆಮರದ ಎಲೆಗಳನ್ನು ಉಪಯೋಗ ಮಾಡಿ ಗಂಜೀಫಾ ಎಲೆಗಳನ್ನು ತಯಾರಿಸುತ್ತಿದ್ದರು.[೧]

ಬಣ್ಣಗಳು

ಚಿತ್ರಕಲೆಯ ಪ್ರಕಾರಗಳಿಗೆ ಬಳಸುವ ಬಣ್ಣ ತಯಾರಿಕೆಯ ಕುರಿತು ನಮಗೆ ಸಿಗುವ ಲಭ್ಯ ಆಕರಗಳಲ್ಲಿ ಪುನಃ ಪ್ರಾಚೀನ ಶಾಸ್ತ್ರಗ್ರಂಥಗಳಿಗೆ ಮೊರೆ ಹೋಗಬೇಕಾಗುತ್ತದೆ. ಅವುಗಳಿಂದ ಸಿಗುವ ವಿವರಗಳು ಗಮನಾರ್ಹವಾಗಿವೆ. ಬ್ರಹ್ಮನ ಹೊಕ್ಕಳದಿಂದ ಬಂದ ಕಮಲದ ದಂಟಿನಿಂದ ಎಲೆಗಳನ್ನು ಪಡೆದು ದೇವಲ ಮಹರ್ಷಿ ಬರುತ್ತಿದ್ದಾಗ ಎದುರಾದ ಐವರು ರಾಕ್ಷಸರನ್ನು ಕೊಂದನಂತೆ. ಆಗ ಅವರ ಶರೀರದಿಂದ ಹಳದಿ, ಕೆಂಪು, ಬಿಳಿ, ಹಸಿರು ಮತ್ತು ಕಪ್ಪು ಬಣ್ಣದ ರಕ್ತ ಬಂದಿತೆಂದು, ಅದರಲ್ಲಿ ಬ್ರಹ್ಮ ನೀಡಿದ ಎಲೆಗಳನ್ನು ದೇವಲ ಮಹರ್ಷಿ ಅದ್ದಿ ಮೊದಲ ಬಾರಿಗೆ ವರ್ಣಯುಕ್ತ ನೂಲನ್ನು ತಯಾರಿಸಿದನೆಂದು ಬಣ್ಣದ ಮೂಲದ ಬಗ್ಗೆ ದೇವಾಂಗಜನರಲ್ಲಿ ಪೌರಾಣಿಕ ಕಥೆಯೊಂದು ಪ್ರಚಲಿತವಿದೆ.[೨] ಜಲದಿಂದ ಬಿಳುಪು, ಅಗ್ನಿಯಿಂದ ಕೆಂಪು, ಭೂಮಿಯಿಂದ ಹಳದಿ, ವಾಯುವಿನಿಂದ ಕಪ್ಪು ವರ್ಣಗಳು ಉತ್ಪನ್ನವಾಗಿವೆ. ಬಿಳುಪಿಗೆ ವಿಷ್ಣು, ಕೆಂಪಿಗೆ ಮಹೇಶ್ವರ, ಹಳದಿಗೆ ಗೌರಿ ದೇವಿ, ಕಪ್ಪು ಬಣ್ಣಕ್ಕೆ ರುದ್ರ ಅಧಿದೇವತೆಯಾಗಿದ್ದಾರೆ ಎಂದು ಕಾಶ್ಯಪಶಿಲ್ಪಶಾಸ್ತ್ರ[೩] ಹೇಳುತ್ತದೆ.

ಗಂಜೀಫಾ ಎಲೆಯ ಮೇಲೆ ಚಿತ್ರಗಳನ್ನು ರಚಿಸಿದ ನಂತರ ಬಗೆ ಬಗೆಯ ಬಣ್ಣಗಳನ್ನು ಚಿತ್ರಕ್ಕೆ ಸಂಬಂಧಿಸಿದಂತೆ ಬಳಸಿಕೊಳ್ಳುತ್ತಿದ್ದರು. ಸ್ಥಳೀಯವಾಗಿ ದೊರೆಯುವ ಸಸ್ಯ, ಹೂ, ಹಣ್ಣು, ಮುಂತಾದ ನೈಸರ್ಗಿಕ ವಸ್ತುಗಳಿಂದಲೂ ಖನಿಜಗಳಿಂದಲೂ ಸಂಗ್ರಹಿಸಿ ಟೆಂಪರಾ ವರ್ಣ, ಕಪ್ಪು ಬಣ್ಣ, ಬಿಳಿ ವರ್ಣ, ಕೆಂಪುವರ್ಣ, ನೀಲಿ, ಹಳದಿ ಮೊದಲಾದ ಬಣ್ಣಗಳನ್ನು ಸ್ವತಃ ಕಲಾವಿದರೆ ತಯಾರಿಸಿಕೊಳ್ಳುತ್ತಿದ್ದರು. ಬೇರೆ ಬೇರೆ ಮಣ್ಣು, ಗಿಡ, ಮರ, ಸಸ್ಯಾದಿಗಳ ರಸ, ಗುಲಗಂಜಿ ಮೊದಲಾದವುಗಳೆಲ್ಲ ಈ ಕಲಾವಿದರಿಗೆ ಬೇಕಾದ ವರ್ಣದ್ರವ್ಯಗಳನ್ನೊದಗಿಸುವ ವಸ್ತುಗಳಾಗಿದ್ದವು. ಅಂಟವಾಳಕಾಯಿಯ ರಸ, ಮೇಣ ಹಾಗೂ ಕೋಳಿ ಮೊಟ್ಟೆಯ ಬಿಳಿಯ ಲೋಳೆ ಮೊದಲಾದವುಗಳನ್ನು ಬಂಧಕಗಳಾಗಿ ಬಳಸಲಾಗಿತ್ತು.

ಟೆಂಪರಾ ವರ್ಣ

ಟೆಂಪರಾ ವರ್ಣವನ್ನು ಗಂಜೀಫಾ ಚಿತ್ರರಚನೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಬಳಸಿರುವುದನ್ನು ಇಂದು ಲಭ್ಯವಾಗಿರುವ ಹಳೆಯ ಗಂಜೀಫಾಗಳಿಂದ ಅಥವಾ ಇತಿಹಾಸದಿಂದ ತಿಳಿಯಬಹುದು. ಮೊಟ್ಟೆಯ ಬಿಳಿಯ ಭಾಗದೊಂದಿಗೆ ಯಾವುದೇ ಮೂಲದ ಬಣ್ಣಗಳನ್ನು ಬೆರೆಸಿ ಬೇಕಾದ ರೀತಿಯಲ್ಲಿ ತಯಾರಿಸಿಕೊಂಡು ಚಿತ್ರಕ್ಕೆ ಬಣ್ಣ ತುಂಬುವ ವಿಧಾನವನ್ನು 'ಟೆಂಪರಾ' ಎಂದು ಕರೆಯುತ್ತೇವೆ. ಇದನ್ನು ತೆಳುವಾಗಿ, ಮಂದವಾಗಿ ಹಾಗೂ ಗಟ್ಟಿಯಾಗಿಯೂ ಬಳಸಬಹುದು, ನೈಸರ್ಗಿಕವಾಗಿ ದೊರೆಯುವ ಬಣ್ಣಗಳ ಹೆಂಟೆ ಮತ್ತು ಪುಡಿವರ್ಣಗಳನ್ನು ಮೊಟ್ಟೆ ಅಥವಾ ಅಂಟು ಪದಾರ್ಥಗಳಲ್ಲಿ ಬೆರೆಸಿ ಚಿತ್ರ ರಚಿಸುತ್ತಿದ್ದರು. ಈಜಿಪ್ತಿಯನ್ನರು, ರೋಮನ್ನರು ಹಾಗೂ ಗ್ರೀಕರು ಉಪಯೋಗಿಸಲ್ಪಟ್ಟ ಹಳೆಯ ಚಿತ್ರಗಳ ವಿಧಾನ ಟೆಂಪರಾ ವರ್ಣಪದ್ಧತಿಯೇ ಆಗಿತ್ತು. ಇದು ಗಂಜೀಫಾ ಚಿತ್ರರಚನೆಗೆ, ಕ್ಯಾನವಾಸ್ ಚಿತ್ರದ ರಚನೆಗೆ ಹಾಗೂ ಕಟ್ಟಿಗೆ, ಗಾಜುಗಳಂತಹ ಫಲಕಗಳ ಮೇಲೆ ಚಿತ್ರರಚನೆಗೆ ಬಳಸಬಹುದಾದಂತಹ

---

೦೧. R and N. Y. Leyden : The Playing Cards of India, page-15

೦೨. ಡಾ. ಅ.ಲ. ನರಸಿಂಹನ್ : ಕರ್ನಾಟಕದ ಭಿತ್ತಿಚಿತ್ರ ಪರಂಪರೆ, ಪುಟ- ೧೪೬

೦೩. ಜೆ. ಜ್ಞಾನಾನಂದ (ಅನು): ಕಾಶ್ಯಪ ಶಿಲ್ಪಶಾಸ್ತ್ರ, ಅಧ್ಯಾಯ ೮೮, ಪುಟ- ೬೫೭

ಮಾಧ್ಯಮ. ಮೊಟ್ಟೆ ಬೆರೆಸಿದ ಟೆಂಪರಾವನ್ನು ನೀರಿನಿಂದ ತೆಳುಗೊಳಿಸಿ ರಚಿಸಿದ ಚಿತ್ರಕ್ಕೆ ಹೊಳಪಿನ ಲೇಪನ ಮಾಡಿದರೆ ಅದು ಜಲವರ್ಣದಂತೆ ಕಾಣುತ್ತದೆ. ಟೆಂಪರಾ ಬಣ್ಣಗಳಿಗೆ ಬಿಳಿ ಬಣ್ಣ ಮಿಶ್ರಣ ಮಾಡಿದರೆ ಅದರಲ್ಲಿ ಪೇಸ್ಟಲನ ನಾಜೂಕು ಕಂಡು ಬರುತ್ತದೆ. ಇದಕ್ಕೆ ತೈಲದಂತಹ ಪದಾರ್ಥ (ಅಗಸೆ, ಕುಸಬಿ, ಸೆಂಗಾದಂತಹ ಎಣ್ಣೆಕಾಳಿನ ಜಿಗುಟು ತೈಲ) ಮಿಶ್ರಣ ಮಾಡಿದರೆ ತೈಲದಂತಹ ಟೆಂಪರಾ ಸಿದ್ಧವಾಗುತ್ತದೆ.

ಚಿತ್ರರಚನೆಯಲ್ಲಿ ತೆಳುವಾಗಿ ಲೇಪಿಸಿದ ಟೆಂಪರಾ ಮೇಲೆ ವಾರ್ನಿಸಿನ ಒಂದು ಪದರ ಲೇಪಿಸಿದರೆ ಅದು ತೈಲವರ್ಣಕ್ಕೆ ಅತ್ಯುತ್ತಮ ತಳಪಾಯ ನೀಡುತ್ತದೆ. ಜನಸಾಮಾನ್ಯರು ತೈಲವರ್ಣವೆಂದು ಭಾವಿಸುವ ಮಧ್ಯಯುಗದ ಅನೇಕ ಕೃತಿಗಳು ವಾಸ್ತವದಲ್ಲಿ ಮೇಲೆ ಹೇಳಿದಂತೆ ರಚಿಸಿದ ಟೆಂಪರಾಗಳಲ್ಲಿ ಮೂಲತಃ ಹೊಳಪಿಲ್ಲದ ಟೆಂಪರಾಗಳೇ. ಹೊಳಪಿಲ್ಲದ ಟೆಂಪರಾಗಳಿಗೆ ವಾರ್ನಿಸ್ ಹೋಳಪು ನೀಡುವುದರಿಂದ ಮೂಲತಃ ಟೆಂಪರಾವರ್ಣಗಳು ಆಕರ್ಷಕ ತೈಲವರ್ಣಚಿತ್ರಗಳಂತೆ ಕಾಣುತ್ತದೆ. 'ಟೆಂಪರಾ' ತೈಲ ವರ್ಣದ ಮೂಲ ವರ್ಣವಾಗಿರುವುದರಿಂದ ೧೯ನೇ ಶತಮಾನದಲ್ಲಿ ರಾಸಾಯನಿಕ ತೈಲವರ್ಣ ಜನ್ಮ ತಾಳಿತು, ಟೆಂಪರಾದ ಬೇಡಿಕೆ ಕಡಿಮೆಯಾಯಿತು. ೨೦ನೇ ಶತಮಾನದ ಕಲೆಯಲ್ಲಿ ಟೆಂಪರಾಗೆ ವಿಶೇಷ ಸ್ಥಾನ ಕೊಟ್ಟವನು ಅಂಧ್ರುವೈತ್, ಆತನ ಚಿತ್ರ 'ಕ್ರಿಸ್ಟಿನಾಸ್ ವರ್ಲ್ಡ್, ಅಮೂರ್ತ ಕಲೆಯ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ರಿಯಾಲಿಸ್ಟಿಕ್ ಮಾದರಿಯಲ್ಲಿ'ದ್ದ ಈ ಕೃತಿಯು ಅತ್ಯಂತ ಮೇರು ಕೃತಿಯೆಂದು ಪರಿಗಣಿಸಲ್ಪಟ್ಟಿತ್ತು. ಟೆಂಪರಾ ಯಾವುದೇ ಆಧಾರದ ಮೇಲೆ ಬರೆಯಬಹುದಾದದ್ದರಿಂದ ಆ ಸಂದರ್ಭದಲ್ಲಿ ಗಂಜೀಫಾ ಚಿತ್ರಕಲಾವಿದರು ಸಮರ್ಪಕವಾಗಿ ಬಳಸಿಕೊಂಡಿದ್ದಾರೆ.

ಬಹುತೇಕ ಕರ್ನಾಟಕದಲ್ಲಿ ಲಭ್ಯವಿರುವ ಗಂಜೀಫಾ ಚಿತ್ರರಚನೆಗೆ ಆ ದಿನಗಳಲ್ಲಿ ಬಳಸಲಾಗುತ್ತಿದ್ದ ಟೆಂಪರಾ ವರ್ಣಗಳಲ್ಲಿ ನೈಸರ್ಗಿಕ ಮೂಲಕ ವೈವಿಧ್ಯಮಯವಾದ ಬಂಧಕಗಳನ್ನು ಬಳಸಿಕೊಂಡು ಗಂಜೀಫಾ ಎಲೆಗಳ ಮೇಲೆ ವಿಶಿಷ್ಟವಾಗಿ ಚಿತ್ರಿಸಿದ್ದಾರೆ. ಚಿತ್ರಗಳಲ್ಲಿ ನೆರಳು ಬೆಳಕನ್ನು ತರಲು ಪ್ರಯತ್ನಿಸಿದ್ದಾರೆ. ಈ ವರ್ಣಗಳು ನೋಡುಗರ ಕಣ್ಣಿಗೆ ತಂಪನ್ನು ಹಾಗೂ ಆನಂದವನ್ನು ಕೊಡುತ್ತವೆ.[೪]

ಕಪ್ಪು ಬಣ್ಣ

ಗಂಜೀಫಾ ಚಿತ್ರ ರಚನೆಯಲ್ಲಿ ಪ್ರಧಾನವಾಗಿ ಕಪ್ಪು, ಕೆಂಪು, ಹಳದಿ, ನೀಲಿ, ಹಸಿರು, ಬಿಳಿಯಂತಹ ಪ್ರಾಥಮಿಕ ವರ್ಗದ ಬಣ್ಣಗಳು ಕಂಡು ಬರುತ್ತವೆ. ಇಲ್ಲಿ ಕಪ್ಪು ವರ್ಣವನ್ನು ಚಿತ್ರಗಳಲ್ಲಿ ರೇಖೆ ಬರೆಯಲು ಉಪಯೋಗಿಸಲಾಗುತ್ತಿತ್ತು. ಗಂಜೀಫಾ ಚಿತ್ರಗಳಲ್ಲಿ ಕಪ್ಪು ಬಣ್ಣದ ರೇಖೆಗಳದೇ ಪ್ರಾಧಾನ್ಯ ಪಾತ್ರವಾಗಿದೆ. ಇನ್ನುಳಿದ ವರ್ಣಗಳನ್ನು ನೇರವಾಗಿಯೂ ಬಳಸಿದ್ದಾರೆ ಹಾಗೂ ಬೇರೆ ಬೇರೆ ವರ್ಣಗಳನ್ನು ಬೆರೆಸಿ ದ್ವಿತೀಯ ವರ್ಗದ ಬಣ್ಣಗಳನ್ನು ಈ ಚಿತ್ರಕಾರರು ಬಳಸಿದ್ದಾರೆ.

ಕಪ್ಪು ಬಣ್ಣವನ್ನು ನೈಸರ್ಗಿಕವಾಗಿಯೂ ಹಾಗೂ ರಾಸಾಯನಿಕವಾಗಿಯೂ ಪಡೆದುಕೊಳ್ಳಬಹುದಾಗಿದೆ. ಇದರ ತಯಾರಿಕೆಯ ಕುರಿತು ಅನೇಕ ಆಧಾರಗಳು ದೊರೆಯುತ್ತವೆ. "ಮಾನಸೋಲ್ಲಾಸದಲ್ಲಿ ಕಪ್ಪು ವರ್ಣವನ್ನು ದೀಪದ ಕಡ್ಡಿಯಿಂದ ತಯಾರಿಸಬಹುದೆಂದು ಹೇಳಿದೆ. ಶಿಲ್ಪರತ್ನದಲ್ಲಿ ಕಪ್ಪು ವರ್ಣವನ್ನು ಮಣ್ಣಿನ ಪಾತ್ರೆಗೆ ಆಕಳ ಸೆಗಣಿಯನ್ನು ಸಾರಿಸಿ ಒಣಗಿದ ನಂತರ ಎಣ್ಣೆ ಹಾಕಿ ದೊಡ್ಡ ದೀಪವನ್ನು

೦೪. ಕೆ.ವಿ. ಕಾಳೆ : ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ, ಪುಟ – ೩೯-೪೦

ಹೊತ್ತಿಸಿ ಆ ಪಾತ್ರೆಯನ್ನು ದೀಪದ ಮೇಲೆ ಬೋರಲಾಗಿ ಇಡಬೇಕು. ಇದರಿಂದ ದೀಪದ ಕಾಡಿಗೆಯು ಸಂಗ್ರಹವಾಗುತ್ತದೆ. ಈ ಕಾಡಿಗೆಗೆ ಬೇವಿನ ಗಿಡದ ರಸವನ್ನು ಬೆರೆಸಿ ಕಪ್ಪು ಬಣ್ಣವನ್ನು ತಯಾರಿಸಲಾಗುತ್ತದೆ."

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಕಪ್ಪು ವರ್ಣವನ್ನು ತಯಾರಿಸುವ ರೀತಿಯು ಅನೇಕ ಬಗೆಯಿಂದ ತಿಳಿದುಬರುತ್ತದೆ. ಬೆಳಗಾವಿ ಭಾಗದಲ್ಲಿ ಬರಗ-ಭಾಗ, ಹೊನಗನ್ನೆ, ಮರವರಿಗೆ ಮಣಿ, ತುಂಬೆ, ಹಾಗಲಕಾಯಿ ಎಲೆಯ ರಸ, ಚಪ್ಪರದ ರಸ, ಕಿರುಗೋಣೆ ಸೊಪ್ಪು, ಹಚ್ಚೇ ಗಿಡದ ಸೊಪ್ಪು ಇತ್ಯಾದಿಗಳಿಂದ ಕಪ್ಪು ಬಣ್ಣವನ್ನು ಪಡೆಯುತ್ತಿದ್ದರು. ಬಿಜಾಪುರ, ಬಾಗಲಕೋಟೆ, ಕಲಬುರ್ಗಿ, ಬೀದರ ಭಾಗದಲ್ಲಿ ಜೋಳದ ತೆನೆಯ ಕಾಡಿಗೆಯಿಂದ ಕಪ್ಪುವರ್ಣವನ್ನು ತಯಾರಿಸುತ್ತಾರೆ. ಧಾರವಾಡ, ಕಾರವಾರದ ಕಡೆಗೆ ಔಡಲ ಎಣ್ಣೆ, ಅರಿಷಿನ ಪುಡಿ ಮಿಶ್ರಣ ಮಾಡಿ ಇದಕ್ಕೆ ದೀಪದ ಕಪ್ಪು ಕಾಡಿಗೆಯ ಪುಡಿಯನ್ನು ಬೆರೆಸಿ ಹಸಿರುಮಿಶ್ರಿತ ಕಪ್ಪುವರ್ಣವನ್ನು ತಯಾರಿಸುವರು.

ಬಳ್ಳಾರಿಯ ಕಡೆಗೆ ಕಪ್ಪುಬಣ್ಣವನ್ನು ಈ ರೀತಿಯಾಗಿ ತಯಾರಿಸುವರು: ಇವರು ಹೊಸಗಡಿಗೆಯ ಕಂಠವನ್ನು ಒಡೆದು ಅದರ ಒಳಭಾಗಕ್ಕೆ ಹಚ್ಚೆ ಸೊಪ್ಪು, ಒಣ ಅಂಚರಿಕೆ ಸೊಪ್ಪು, ಅರಿಷಿಣಗಳನ್ನು ಸಮನಾಗಿ ಕೂಡಿಸಿ ಕುಟ್ಟಿ ನೀರು ಬೆರೆಸಿ ಮಂದವಾದ ದ್ರಾವಣವನ್ನು ಲೇಪಿಸಿ ಒಳ್ಳೆಣ್ಣೆಯ ಅಥವಾ ಔಡಲೆಣ್ಣೆಯ ದೀಪದ ಕುಡಿಯಿಂದ ಕಾಡಿಗೆಯನ್ನು ಸಂಗ್ರಹಿಸುತ್ತಾರೆ. ಈ ಮಿಶ್ರಣದಿಂದ ಒಳ್ಳೆಯ ಮಂದವಾದ ಕಪ್ಪುವರ್ಣ ತಯಾರಿಸುತ್ತಾರೆ. ದಕ್ಷಿಣ ಕನ್ನಡದ ಭಾಗದಲ್ಲಿ ವಿಳ್ಳೆದೆಲೆಯ ರಸ ಹಾಗೂ ಸೆಗಣಿಯನ್ನು ಸೇರಿಸಿ ಪಾತ್ರೆಗೆ ಬಳಸಿ ದೀಪದ ಕಾಡಿಗೆಯಿಂದ ಕಪ್ಪು ಬಣ್ಣವನ್ನು ತಯಾರಿಸುತ್ತಾರೆ.

ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ವಿವಿಧ ಮೂಲಗಳಿಂದ ಕಪ್ಪು ಬಣ್ಣಗಳನ್ನು ತಯಾರಿಸಲಾಗುತ್ತದೆ. ಅವರೆ ಸೊಪ್ಪು, ನೆಲ್ಲಿ ಸೊಪ್ಪು, ವಿಳ್ಳೆದೆಲೆ ರಸ, ಹಾಗಲ ರಸ, ಚಪ್ಪರದವರೇ ರಸ ಮುಂತಾದವುಗಳನ್ನು ಮಣ್ಣಿನ ಪಾತ್ರೆಗೆ ಸವರಿ ದೀಪದ ಕಾಡಿಗೆಯಿಂದ ಕಪ್ಪು ಬಣ್ಣವನ್ನು ತಯಾರಿಸಲಾಗುತ್ತಿತ್ತು. ನೇಯ್ಗೆ ಕಲೆಯಲ್ಲಿ ನೇಕಾರರು ನೂಲಿಗೆ ಬಣ್ಣ ಹಾಕಲು ನೈಸರ್ಗಿಕವಾಗಿ ತಯಾರಿಸುವ ಕಪ್ಪುಬಣ್ಣವನ್ನು ಬಳಸುವರು. ಈ ಕಪ್ಪುವರ್ಣವನ್ನು ಗಂಜೀಫಾ ಚಿತ್ರಗಳಲ್ಲಿ ಬಾಹ್ಯರೇಖೆ ಹಾಕಲು, ಕೂದಲು ಬರೆಯಲು, ಕಣ್ಣು, ಹುಬ್ಬು ಹಾಗೂ ಬೇಕಾದಲ್ಲಿ ಚಿತ್ರದ ಹಿನ್ನೆಲೆಗೆ ಕಪ್ಪು ಬಣ್ಣ ತುಂಬಲು ಕಲಾವಿದರು ಬಳಸಿದ್ದಾರೆ.[೫]

ಬಿಳಿವರ್ಣ

ಬಿಳಿವರ್ಣವನ್ನು ಗಂಜೀಫಾ ಚಿತ್ರಕಾರರು ವಿಪುಲವಾಗಿ ಬಳಸಿದ್ದಾರೆ. ಈ ವರ್ಣವನ್ನು ಬೇರೆ ಬೇರೆ ಮೂಲಗಳಿಂದ ತಯಾರಿಸಲಾಗುತ್ತಿದೆ. ಬಿಳಿಮಣ್ಣು, ಶಂಖದ ಚಿಪ್ಪಿನಿಂದ ಬಿಳಿವರ್ಣವನ್ನು ತಯಾರಿಸುತ್ತಿದ್ದರು. ಬಿಳಿವರ್ಣದಲ್ಲಿ ಬಂಗಾರದ ಬಿಳಿ, ಆನೆ ದಂತದ ಬಿಳಿ, ಗಂಧದ ಬಿಳಿ, ಶರದೃತುವಿನ ಮೋಡದ ಬಿಳಿ ಮತ್ತು ಚಂದರನ ಬಿಳಿ ಎಂದು ಐದು ವಿಧದ ಬಿಳಿ ವರ್ಣಗಳಿವೆ. ಶಾಸ್ತ್ರಗ್ರಂಥಗಳಲ್ಲಿಯೂ ಬಿಳಿವರ್ಣದ ಕುರಿತು ಅನೇಕ ವಿವರವಣೆಗಳನ್ನು ನೀಡಿರುವುದು ಕಂಡು ಬರುತ್ತದೆ.

ಕಾಶ್ಯಪಶಿಲ್ಪಶಾಸ್ತ್ರದ 'ವರ್ಣಸಂಸ್ಕಾರ ಲಕ್ಷಣಂ' ಎಂಬ ಅಧ್ಯಾಯದಲ್ಲಿ ಬಿಳಿವರ್ಣದ ವೈವಿಧ್ಯದ ಕುರಿತು ವಿವರಗಳಿವೆ. ಬಿಳಿವರ್ಣದಲ್ಲಿ ಶ್ವೇತ, ಶುಕ್ಲ, ಧವಳ, ಅವಧಾತ ಎಂದು ನಾಲ್ಕು ಬಗೆಗಳಿವೆ. ಶ್ವೇತವರ್ಣದಲ್ಲಿ ಮತ್ತೆ 'ಮುಕ್ತಾಭ, ವರ್ಣಾಭ' ಎಂಬ ಎರಡು ಬಗೆಗಳಿವೆ. ಶಂಖದ ಬಣ್ಣದೊಂದಿಗೆ ಸಮನಾಗಿರುವ ಬಣ್ಣವನ್ನು ಶುಕ್ಲವರ್ಣವೆಂದು ಕರೆಯುವರು. ಬೆಳ್ಳಿಯ ವರ್ಣದೊಂದಿಗೆ

೦೫. ಟಿ. ಕೆ. ಶ್ರೀ. ಗೊಂಡೇಕರ್ (ಸಂ) : ಮಾನಸೋಲ್ಲಾಸ ಭಾಗ-೨, ಅಧ್ಯಾಯ -೧, ಶ್ಲೋಕ-೧೫೭.

ಸಮಾನವಾದುದನ್ನು 'ರಜತ್' ಎಂದೂ, ಹಸುವಿನಂತೆ ಬಣ್ಣವುಳ್ಳದ್ದನ್ನು 'ಅವಧಾತ' ಎಂದು ಬಿಳಿ ವರ್ಣದ ಕುರಿತು ತಿಳಿಸುತ್ತದೆ. ಅಲ್ಲದೇ ಬಿಳಿವರ್ಣದಲ್ಲಿ 'ಶುಕ್ಲ' ಮತ್ತು 'ಏಳಕ್ಷ' ಎಂದು ಎರಡು ಪ್ರಭೇದಗಳಿದ್ದು ಶಂಖದ ಬಿಳಿಪು, ಹಸುವಿನ ಹಾಲಿನ ಬಿಳಿಪು, ವಜ್ರದ ಬಿಳಿಪುಗಳು 'ಏಳಕ್ಷ' ಬಿಳುಪುಗಳಾಗಿವೆ. ಹಾಗೆಯೇ ಹಳದಿ ಛಾಯೆಯ ಬಿಳಿ, ಹಂಸಪಕ್ಷಿಯ ಬಿಳಿ, ಕಮಲದ ಹೂವಿನ ಬಿಳಿ ಎಂದೂ ಮೂರು ಪ್ರಕಾರದ ಬಿಳಿ ಬಣ್ಣಗಳು ಪ್ರಾಚೀನ ಸಾಹಿತ್ಯ ಕೃತಿಯಲ್ಲಿ ಉಲ್ಲೇಖಿಸಿದ್ದು ತಿಳಿಯುತ್ತದೆ.[೬]

ಕೆಂಪು ವರ್ಣ

ಕೆಂಪು ವರ್ಣವು ಗಂಜೀಫಾ ಚಿತ್ರಕಲೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಬಳಕೆಯಾಗಿರುವುದು ಕಂಡು ಬರುತ್ತದೆ. ಮುಖ್ಯವಾಗಿ ಡ್ರ್ಯಾಪರಿ, ಆಕೃತಿಗಳ ಉಡುಗೆ ತೊಡುಗೆಗಳಲ್ಲಿ ಹಾಗೂ ಹಿನ್ನೆಲೆ ಚಪ್ಪಟೆಯಾಗಿ ಮತ್ತು ವರ್ಣಛಾಯೆಯನ್ನಾಗಿ ಬಳಸಿದ್ದಾರೆ. ಬಹುತೇಕ ಟೆಂಪರಾದಂತಹ ಕೆಂಪು ವರ್ಣನೆಗಳನ್ನೇ ಈ ಕಲಾವಿದರು ಉಪಯೋಗಿಸಿದ್ದಾರೆ. ಕಬ್ಬಿಣದ ಆಕ್ಸೈಡ್, ಮ್ಯಾಂಗನೀಸ್, ಹೆಮಟೈಟಗಳ ಸಂಯುಕ್ತಗಳಿಂದ ಕೆಂಪುಬಣ್ಣವನ್ನು ಪಡೆಯುತ್ತಿದ್ದರು. ಕೆಂಪು ಮಣ್ಣು ಮತ್ತು ಕೆಂಪು ಕಲ್ಲುಗಳಿಂದ ಈ ಬಣ್ಣವನ್ನು ತಯಾರಿಸುತ್ತಿದ್ದರು.[೭] ಶಿಲ್ಪರತ್ನದಲ್ಲಿ 'ಗೆರಿಶಾ' ಎಂಬ ಕೆಂಪು ಮಣ್ಣಿನ ಪುಡಿಯನ್ನು ಸ್ವಚ್ಛ ನೀರಿನೊಡನೆ ಮಿಶ್ರಣ ಮಾಡಿಕೊಂಡು ಒಂದು ದಿನದವರೆಗೆ ಬಸಿಯಲು ಬಿಟ್ಟು ತಳದಲ್ಲಿ ಸಂಗ್ರಹಗೊಂಡ ಮಂದ ಮಿಶ್ರಣದಲ್ಲಿ ವರ್ಣಬಂಧಕವನ್ನು ಬೆರೆಸಿ ಉಪಯೋಗಿಸಬೇಕು. ಸೀಸವನ್ನು ಕಾಯಿಸಿ ಅದರಿಂದ ಕೆಂಪುಬಣ್ಣವನ್ನು ಪಡೆಯುತ್ತಿದ್ದರು. ಕಾಶ್ಯಪದಲ್ಲಿ ಹಳದಿ ಬಣ್ಣದ ಕಲ್ಲನ್ನು ಚೆನ್ನಾಗಿ ಕುಟ್ಟಿ ಪುಡಿ ಮಾಡಿಕೊಂಡು ಅದಕ್ಕೆ ಟೆಂಗಿನ ಕಾಯಿಯ ನೀರು ಬೆರೆಸಿ ಕಾಯಿಸಿದರೆ ಕೆಂಪುಬಣ್ಣ ತಯಾರಾಗುತ್ತದೆ.[೮]

'ಮ್ಯಾಡರ್' ಎಂಬ ಸಸ್ಯದಿಂದಲೂ ಕೆಂಪು ವರ್ಣವನ್ನು ಪಡೆಯಲಾಗುತ್ತಿತ್ತು. ಮ್ಯಾಡರ ಎಂಬ ಸಸ್ಯದ ಬೇರಿನಿಂದ ದೊರೆಯುತ್ತಿದ್ದ ಕೆಂಪುವರ್ಣಕ್ಕಾಗಿ ಈ ಸಸ್ಯವನ್ನು ಫ್ರಾನ್ಸ, ಹಾಲೆಂಡ್, ಇಟಲಿ, ಟರ್ಕಿ, ಈಜಿಪ್ತ, ಪರ್ಶಿಯಾ ಹಾಗೂ ಭಾರತದಲ್ಲಿ ವಿಪುಲವಾಗಿ ಸಾಗುವಳಿ ಮಾಡುತ್ತಿದ್ದುದು ಪ್ರಾಚೀನ ಕಾಲದಿಂದಲೇ ತಿಳಿದು ಬರುತ್ತದೆ. ಇಂಗಳಿಕದಿಂದಲೂ ಕೆಂಪುವರ್ಣವನ್ನು ಪಡೆಯಲಾಗುತ್ತಿತ್ತು. ಇದನ್ನು ಚೆನ್ನಾಗಿ ಕುಟ್ಟಿ ಅದರ ಪುಡಿಯನ್ನು ನೀರಿನಲ್ಲಿ ಕಲಕಿ ನಂತರ ಅದನ್ನು ಬೇವಿನ ಅಂಟಿನೊಂದಿಗೆ ಬೆರೆಸಿ ಈ ಬಣ್ಣವನ್ನು ತಯಾರಿಸುತ್ತಿದ್ದರು. ಹೀಗೆ ಅನೇಕ ಮೂಲಗಳಿಂದ ಈ ಕೆಂಪು ಬಣ್ಣವನ್ನು ತಯಾರಿಸುತ್ತಿದ್ದರು.[೯] ಹೀಗೆ ಅನೇಕ ಮೂಲಗಳಿಂದ ಈ ಕೆಂಪು ಬಣ್ಣವನ್ನು ತಯಾರಿಸಿ ಗಂಜೀಫಾ ಕಲಾವಿದರು ಚಿತ್ರ ರಚನೆ ಮಾಡುತ್ತಿದ್ದರು.

ಹಸಿರು ವರ್ಣ

ಹಸಿರು ವರ್ಣವನ್ನು ನೀಲಿ ಮತ್ತು ಹಳದಿಯ ಮೂಲ ವರ್ಣಗಳಿಂದ ಪಡೆಯಲಾಗುತ್ತಿತ್ತು. ಸಸ್ಯಗಳ ಮೂಲದಿಂದ ಹಾಗೂ ಖನಿಜಗಳ ಮೂಲದಿಂದ ಆ ಕಲಾವಿದರು ಹಸಿರು ಬಣ್ಣವನ್ನು ತಯಾರಿಸುತ್ತಿದ್ದರು. ಟೆರ್ರಾವರ್ಟ, ಮಲಟೈಟ್, ವೆರ್ಡ್‌ದೊಂಟಾನಾ, ಕ್ರಾಯಿ ಸೋಕೋಲ್ಲಾ ಮತ್ತು

---

೦೬. ಹೆಚ್. ಓಲ್ಡೆನ್ ಬರ್ಗ್ ಹರ್ಷ ಚರಿತ, ಪುಟ- ೨೯೩
೦೭ Jayant Chakravarti: Techniques in Indian Mural Painting, PP-48
೦೮. ಗಣಪತಿ ಟಿ. ಶಾಸ್ತ್ರಿ (ಸಂ) : ಶಿಲ್ಪರತ್ನ ಭಾಗ-೧, ಅಧ್ಯಾಯ-೪೬, ಶ್ಲೋಕ ೧೧೯
೦೯. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೧೫೩
೧೦.Jayant Chakravarti: Techniques in Indian Mural Painting, PP-53

ಅಜುರೈಟ್ ಖನಿಜಗಳಿಂದ ಹಸಿರು ಬಣ್ಣವನ್ನು ತಯಾರಿಸುತ್ತಿದ್ದುದು ತಿಳಿದು ಬರುತ್ತದೆ.[೧೦] ಅದೇ ರೀತಿ ಅಳ್ಳಿಕಾಯಿ, ಕಾಕಡಸಿಂಬಿಗಳನ್ನು ಉಪಯೋಗಿಸಿ ಹಸಿರು ಬಣ್ಣವನ್ನು ತಯಾರಿಸುತ್ತಿದ್ದರು. ಹಸಿರು ವರ್ಣದಲ್ಲಿ ಗಿಳಿ ಹಸಿರು, ಪ್ಲಾಂಟೇನ್ ಎಲೆಯ ಹಸಿರು, ಪಚ್ಚೆ ಹಸಿರು, ಎಂಬ ಅನೇಕ ವಿಧಗಳನ್ನು ಕುರಿತು ನಮ್ಮ ಪ್ರಾಚೀನ ಶಾಸ್ತ್ರ ಗ್ರಂಥಗಳು ತಿಳಿಸುತ್ತವೆ. ಈ ರೀತಿಯಲ್ಲಿ ತಯಾರಿಸಲಾದ ಹಸಿರನ್ನು ಗಂಜೀಫಾ ಚಿತ್ರ ರಚನೆಯಲ್ಲಿ ಬಳಸುತ್ತಿದ್ದರು.

ನೀಲಿ ವರ್ಣ

ನೀಲಿ ಬಣ್ಣವನ್ನು ನೈಸರ್ಗಿಕ ಮೂಲವಾಗಿ ಪ್ರಾಚೀನ ಕಲಾವಿದರು ತಯಾರಿಸಿ ಉಪಯೋಗಿಸುತ್ತಿದ್ದ ವಿವರಗಳು ಅನೇಕ ರೀತಿಯಿಂದ ದೊರೆಯುತ್ತಿವೆ. ಇಂಡಿನೋ, ಫೆರಾ ಎಂಬ ಸಸ್ಯದಿಂದ ನೀಲಿ ಬಣ್ಣವನ್ನು ತಯಾರಿಸಲಾಗುತ್ತಿತ್ತು.[೧೧] ನೀಲಿಕಲ್ಲು ಮತ್ತು ಮಣ್ಣುಗಳಿಂದಲೂ ಈ ಬಣ್ಣವನ್ನು ಪಡೆಯಲಾಗುತ್ತಿತ್ತು. ಈ ಬಣ್ಣ ತಯಾರಿಕೆಯಲ್ಲಿ 'ಲ್ಯಾಫೀಜ್ ಲಾಜುಲಿ' ಎಂಬ ಖನಿಜವಸ್ತು ಪ್ರಮುಖವಾಗಿತ್ತು. ಪ್ರಾಚೀನ ಶಾಸ್ತ್ರಗಳಲ್ಲಿ ಈ ಲ್ಯಾಫೀಜ್ ಲಾಜುಲಿ ಖನಿಜವನ್ನೇ 'ರಾಜಾವರ್ತ' ಎಂದು ಕರೆಯಲಾಗಿದೆ.[೧೨] ಲ್ಯಾಫೀಜ್ ಲಾಜುಲಿ ಎಂಬ ಹರಳುರೂಪದ ವರ್ಣದ್ರವ್ಯವನ್ನು ಪರ್ಷಿಯಾದಿಂದ ಭಾರತಕ್ಕೆ ಆಮದು ಮಾಡಿಕೊಳ್ಳಲಾಗುತ್ತಿತ್ತು. ಜರ್ಮನ್‌ದ ವಿಜ್ಞಾನಿ ಅಡೂಲ್ಫವಾನ್ ಎಂಬುವವ ಮೊದಲ ಬಾರಿಗೆ ಕೃತಕ ನೀಲಿವರ್ಣ ತಯಾರಿಸಿದ ನಂತರ ಪ್ರಾಚೀನ ಪದ್ಧತಿಯ ವಿಧಾನದ ನೀಲಿಬಣ್ಣವನ್ನು ಬಳಸುವುದು ಕಡಿಮೆಯಾಯಿತು.[೧೩] ಕರ್ನಾಟಕದ ಕೆಲವು ಭಾಗಗಳಲ್ಲಿ ಜನಪದ ಚಿತ್ರಕಲಾವಿದರು ನೀಲಿವರ್ಣವನ್ನು ತುಂಬೆ ಹೂವು ಮತ್ತು ಎಲೆಗಳನ್ನು ಬಳಸಿ ತಯಾರಿಸಿಕೊಳ್ಳುತ್ತಿದ್ದರು.[೧೪] ನೀಲಿ ಬಣ್ಣದ ಬಳಕೆ ಗಂಜೀಫಾ ಚಿತ್ರಗಳಲ್ಲಿ ಹೆಚ್ಚು ಹೆಚ್ಚು ಪ್ರಮಾಣಗಳಲ್ಲಿ ಕಾಣಸಿಗುತ್ತದೆ. ನೀಲಿಯ ವಿವಿಧ ವರ್ಣಛಾಯೆಯನ್ನು ಗಂಜೀಫಾ ಚಿತ್ರಗಳಲ್ಲಿ ಕಾಣಬಹುದಾಗಿದೆ.

ಹಳದಿ ವರ್ಣ

ಗಂಜೀಫಾ ಚಿತ್ರಕಾರರು ಚಿತ್ರ ರಚನೆಯಲ್ಲಿ ಹಳದಿ ಬಣ್ಣವನ್ನು ಬಳಸಿದ್ದು ಕಂಡು ಬರುತ್ತದೆ. ಈ ಹಳದಿ ಬಣ್ಣವನ್ನು ವಿವಿಧ ಛಾಯೆಯಾಗಿ ಬಳಸಿದ್ದಾರೆ. ಹಳದಿಯ ವರ್ಣವನ್ನು ಬೇರೆ ಬೇರೆ ಮೂಲಗಳಿಂದ ಪಡೆದುಕೊಂಡು, ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ. ಇದರ ಕುರಿತು ಅನೇಕ ವಿವರಗಳು ದೊರೆಯುತ್ತವೆ. ಹಳದಿ ವರ್ಣವು ಆಕರ್ಷಕ ವರ್ಣವಾಗಿರುವುದರಿಂದ ಕಲಾವಿದರು ಚಿತ್ರರಚನೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಬಳಸಿರುವುದು ಕಂಡು ಬರುತ್ತದೆ.

'ಶಿಲ್ಪರತ್ನ'ದಲ್ಲಿ ಹಳದಿ ವರ್ಣವನ್ನು ವಿಶಿಷ್ಟ ಸಸ್ಯ ಪರ್ವತಗಳಲ್ಲಿ, ನದಿಯ ದಂಡೆಗಳಲ್ಲಿ ದೊರೆಯುವ ವಸ್ತುಗಳನ್ನು ಸಂಗ್ರಹಿಸಿ ಶುದ್ಧ ನೀರಿನಿಂದ ತೊಳೆದು ಅದನ್ನು ಪುಡಿ ಮಾಡಿ ನೀರಲ್ಲಿ ನೆನೆಹಾಕಿ ಅದರಿಂದ ಬರುವ ವರ್ಣದ್ರವ್ಯವನ್ನು ಶೇಖರಿಸಿ ಅಂಟುದ್ರಾವಕವನ್ನು ಬೆರೆಸಿ ಸಿದ್ಧಪಡಿಸಲಾದ ವರ್ಣವು ಹಳದಿ ವರ್ಣವಾಗಿದೆ. ವಿಷ್ಣುಧರ್ಮೋತ್ತರದಲ್ಲಿ ಹಳದಿವರ್ಣಕ್ಕಾಗಿ ಹರಿದಾಳವನ್ನು ಹೇಳಿದೆ.[೧೫] 'ಕಾಶ್ಯಪಶಿಲ್ಪಶಾಸ್ತ್ರ'[೧೬]ದಲ್ಲಿ ಸ್ವರ್ಣ, ಪಿಶಂಗ, ಪೀತ, ಹರಿತ ಎಂದು ನಾಲ್ಕು ಬಗೆಯ ಹಳದಿಯ

೧೧. ಜಿ. ಎ. ಕಲ್ಲೂರು : ಬಣ್ಣಗಳು ಮತ್ತು ಬಣ್ಣ ಹಾಕುವ ಕಲೆ, ಪುಟ-೮
೧೨. Motichandra : Jain miniature paintings from western India, PP- 82
೧೩ Jayant Chakravarti: Techniques in Indian Mural Painting, PP-50
೧೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೧೭೯
೧೫. ಜಿ. ಕೆ. ಶ್ರೀ. ಗೊಂಡೇಕರ್ (ಸಂ) : ಮಾನಸೋಲ್ಲಾಸ, ಭಾಗ-೨, ಅಧ್ಯಾಯ-೧, ಶ್ಲೋಕ-೧೬೨
೧೬ ಜಿ. ಜ್ಞಾನಾನಂದ (ಅನು) : ಕಾಶ್ಯಪ ಶಿಲ್ಪ ಶಾಸ್ತ್ರ, ಅಧ್ಯಾಯ- ೮೮, ಪುಟ- ೬೫೯

ಕುರಿತು ಹೇಳಲಾಗಿದೆ. ಬಂಗಾರದಂತೆ ಇರುವ ಅರಿಷಿಣಬೇರಿನ ಬಣ್ಣವುಳ್ಳದ್ದು ಹರಿತವೆಂದೂ ಅರಿದಾಳದ ಬಣ್ಣದ ಹಳದಿಯನ್ನು ಪೀತವೆಂದೂ ಹೇಳಲಾಗಿದೆ. ಅಲ್ಲದೇ ಹಳದಿವರ್ಣದಲ್ಲಿ ಇನ್ನೂ ಎರಡು ವಿಧಗಳನ್ನು ಗುರುತಿಸಲಾಗಿದೆ.[೧೭] ಅವು ಹರಿತ ಮತ್ತು ಪೀತವೆಂದು ಮಣಿಶಿಲೆಯ ಬಣ್ಣವೂ, ಅರುದಾಳದ ವರ್ಣವೂ ಹರಿತವೆಂದೂ, ಹಳದಿ ವರ್ಣಕ್ಕೆ ಸೇರಿದರೆ ಅರಿಷಿಣ ಹಳದಿ ಮತ್ತು ಕುಂಕುಮ ಕೇಸರಿಯ ಹಳದಿ ಛಾಯೆಯು ಪೀತವೆನಿಸಿಕೊಳ್ಳುತ್ತದೆ.[೧೮]

ಮಿಶ್ರ ವರ್ಣಗಳು

ಮೂಲವರ್ಣಗಳಾದ ಕೆಂಪು, ನೀಲಿ, ಹಳದಿ, ಕಪ್ಪು, ಬಿಳಿ ವರ್ಣಗಳನ್ನು ಒಂದನ್ನೊಂದು ಸೇರಿಸಿ ಅವುಗಳಿಂದ ಉಂಟಾಗುವ ದ್ವಿತೀಯ, ತೃತೀಯ ಹಾಗೂ ಚತುರ್ಥವರ್ಗಗಳ ಬಣ್ಣಗಳನ್ನು ಬಳಸಿದ್ದು ಗಂಜೀಫಾ ಚಿತ್ರಗಳಲ್ಲಿ ಕಾಣುತ್ತೇವೆ. ಈ ಕಲೆಯ ಕಲಾವಿದರೂ ಯಾವ ಬಣ್ಣಕ್ಕೆ ಇನ್ನೊಂದು ಬಣ್ಣವನ್ನು ಎಷ್ಟು ಪ್ರಮಾಣಗಳಲ್ಲಿ ಮಿಶ್ರಣ ಮಾಡಿದರೆ ಯಾವ ಛಾಯೆ ಉಂಟಾಗುತ್ತದೆ ಎಂಬುದನ್ನು ಚೆನ್ನಾಗಿ ತಿಳಿದವರಾಗಿದ್ದರು.

ದೇವಾನುದೇವತೆಗಳ ಅಕೃತಿಗಳಿಗೆ, ಸಾಮಾನ್ಯ ಸ್ತ್ರೀ ಆ ಪುರುಷರ ಆಕೃತಿಗಳಿಗೆ, ಚಿತ್ರಗಳಲ್ಲಿ ಬಳಸಲಾದ ಪ್ರಾಣಿಗಳಿಗೆ, ವಿವಿಧ ವಸ್ತುಗಳಿಗೆ ಮತ್ತು ಪ್ರಕೃತಿಗೆ ಹಾಗೂ ಚಿತ್ರದ ಹಿನ್ನೆಲೆಗೆ, ಡ್ರ್ಯಾಪರಿಗೆ, ವೇಷಭೂಷಣಗಳಿಗೆ, ಆಭರಣಗಳಿಗೆ ಹೊಂದಾಣಿಕೆಯಾಗುವಂತೆ ವರ್ಣಗಳನ್ನು ಬಳಸಿರುವರು. ಆಕೃತಿಗಳ ಮೈಬಣ್ಣಗಳಲ್ಲಿ ಬಿಳಿವರ್ಣವು ಪ್ರಧಾನವಾಗಿದ್ದು ಅದಕ್ಕೆ ತಕ್ಕದಾದ ಹಳದಿಮಿಶ್ರಿತ ಬಿಳಿಯ ಬಣ್ಣ, ಗುಲಾಬಿಮಿಶ್ರಿತ ಬಿಳಿಯ ಬಣ್ಣ. ಕಂದುಮಿಶ್ರಿತ ಬಿಳಿಯ ಬಣ್ಣ, ಹಸಿರುಮಿಶ್ರಿತ ಬಿಳಿಯ ಬಣ್ಣಗಳನ್ನು ಅತ್ಯಂತ ಸೊಗಸಾಗಿ ಲೇಪಿಸಿದ್ದಾರೆ. ರಾಮನ ಚಿತ್ರಗಳಲ್ಲಿ ರಾಮನನ್ನು ಹೆಚ್ಚಾಗಿ ಹಸಿರುಮಿಶ್ರಿತ ಬಣ್ಣವನ್ನು ಬಳಸಿ ರಚಿಸಿದ್ದು, ಬಹು ಸಂಖ್ಯೆಯ ಗಂಜೀಫಾ ಚಿತ್ರಗಳಲ್ಲಿ ಕಾಣುತ್ತೇವೆ.

'ಕೃಷ್ಣನ ಆಕೃತಿ'ಗೆ ನೀಲಿಮಿಶ್ರಿತ ಬಿಳಿ ಬಣ್ಣವನ್ನು ಬಳಸಿದ್ದು ಚಿತ್ರಗಳಲ್ಲಿ ಕಾಣುತ್ತೇವೆ. ಇನ್ನೂ ಕೆಲವು ಚಿತ್ರಗಳಲ್ಲಿ ಕೃಷ್ಣನಿಗೆ ಸಾಮಾನ್ಯರ ಮೈಬಣ್ಣದ ಕಲ್ಪನೆ ನೀಡಿದ್ದಾರೆ. ಕೆಂಪು, ಕಂದು, ಹಳದಿ, ಗುಲಾಬಿಮಿಶ್ರಿತ ಬಿಳಿಯ ಬಣ್ಣವನ್ನು ಬಳಸಿದ್ದಾರೆ. ಇಲ್ಲಿ ಗಮನಿಸಬೇಕಾದುದು ಎರಡು ವರ್ಣಗಳ ನಡುವಿನ ವರ್ಣಛಾಯೆಯನ್ನು ಮಾತ್ರ. ಏಕೆಂದರೆ ಎರಡು ವರ್ಣಗಳ ನಡುವಿನ ಮಿಶ್ರಣದಲ್ಲಿ ಯಾವುದೇ ರೀತಿಯ ಸಣ್ಣ ತೆಪೆಗಳು (Stroke) ಕಾಣುವುದಿಲ್ಲ. ಅಷ್ಟೊಂದು ಸೂಕ್ಷ್ಮತರವಾದ ಛಾಯೆಯನ್ನು ತಂದಿದ್ದಾರೆ. ಆ ಕಲಾವಿದನ ತಾಳ್ಮೆ ಹಾಗೂ ಅನುಭವವು ಎದ್ದು ಕಾಣುತ್ತದೆ.

ಗಂಜೀಫಾ ಚಿತ್ರದ ಹಿನ್ನೆಲೆಗೆ ಬಹುತೇಕ ಮೂಲವರ್ಣಗಳಾದ ನೀಲಿ, ಕೆಂಪು, ಹಳದಿ, ಕಪ್ಪು, ಬಿಳಿ, ಹಸಿರು ಬಣ್ಣಗಳನ್ನು ಏಕವರ್ಣವಾಗಿ, ಚಪ್ಪಟೆ(Flate Colors)ಯಾಗಿ ಬಳಸಿದ್ದಾರೆ. ಅದರಂತೆ ಆಕೃತಿಗಳ ಕೂದಲಿಗೆ (ಕೇಶ), ಬಾಹ್ಯರೇಖೆಗಳಿಗೆ, ಕಣ್ಣುಗಳಿಗೆ, ಚಪ್ಪಟೆಯಾಗಿ ಕಪ್ಪುವರ್ಣವನ್ನೇ ಬಳಸಿದ್ದಾರೆ. ಆಕೃತಿಗಳ ಉಡುಗೆ-ತೊಡುಗೆಗಳಿಗೆ ಚಪ್ಪಟೆಯಾಗಿಯೂ, ವರ್ಣಛಾಯೆಯಾಗಿಯೂ ಬಣ್ಣಗಳನ್ನು ಲೇಪನ ಮಾಡಿರುವರು. ಚಿತ್ರಗಳ ಹಿನ್ನೆಲೆಯ ಡ್ರ್ಯಾಪರಿ(ಪರದೆ)ಗಳಿಗೆ ಪ್ರಥಮವರ್ಗದ ಬಣ್ಣಗಳನ್ನು ನೀಡಿ ವಿವಿಧ ಛಾಯೆಯ ಕಲ್ಪನೆಯನ್ನು ತಂದಿದ್ದಾರೆ.[೧೯]

---

೧೭ C. Shivaram murti, Chitrasusutra of the Vishnudharmottara, PP-50

೧೮. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೧೫೩

೧೯. ಎನ್ ಎಂ. ಅಂಗಡಿ., ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ (ಅಪ್ರಕಟಿತ ಪಿಹೆಚ್.ಡಿ ಪ್ರಬಂಧ), ಪು-೬೫-೬೭

ಗಂಜೀಫಾ ಚಿತ್ರಕಾರರು ಬಣ್ಣಗಳನ್ನು ಚಪ್ಪಟೆಯಾಗಿ (೨ಡಿ) ಹಾಗೂ ದುಂಡುತನ ತರಲು ವಿವಿಧ ವರ್ಣ (೩ಡಿ) ಛಾಯೆಗಳಾಗಿ ಚಿತ್ರರಚನೆಯಲ್ಲಿ ತರಲು ಪ್ರಯತ್ನಿಸಿದ್ದಾರೆ.

ಮಿಶ್ರವರ್ಣಗಳ ಕುರಿತು ಮಾನಸೋಲ್ಲಾಸ ಹಾಗೂ ಶಿಲ್ಪರತ್ನಗಳಲ್ಲಿ ಸಾಕಷ್ಟು ವಿವರಗಳನ್ನು ನೀಡಿದೆ. ಮಾನಸೋಲ್ಲಾಸವು[೨೦] ಮಿಶ್ರವರ್ಣಗಳ ಕುರಿತು ಈ ರೀತಿ ವಿವರಿಸುತ್ತದೆ :

- ಇಂಗಳಿಕದ ಕೆಂಪು ಮತ್ತು ಶಂಖದ ಬಿಳಿ ಕೂಡಿದರೆ ಕೆಂಪು ಕಮಲದ ಹೂವಿನ ವರ್ಣ.
- ಲಾಕ್ಷಾರಸದ ಕೆಂಪು ಮತ್ತು ಶಂಖದ ಬಿಳಿ ಸೇರಿದರೆ ಕಮಲದ ವರ್ಣವಾಗುವುದು.
- ಮಾಸಲು ಕೆಂಪು ಮತ್ತು ಶಂಖದ ಬಿಳಿ ಸೇರಿದರೆ ಗೌರವರ್ಣ
- ದೀಪದ ಕಪ್ಪು ಮತ್ತು ಶಂಖದ ಬಿಳಿ ಸೇರಿದಾಗ ಪಾರಿವಾಳದ ಬೂದು ವರ್ಣವಾಗುವುದು.
- ಬೂದು ವರ್ಣ ಮತ್ತು ರಾಜವರ್ತ ಸೇರಿದರೆ ಆತನೇ ಹೂವಿನ ಬಣ್ಣವಾಗುವುದು.
- ಇಂಡಿಗೋ ನೀಲಿ ಮತ್ತು ಹಳದಿ ವರ್ಣ ಸೇರಿದಾಗ ಹಸಿರು ವರ್ಣ ಬರುವುದು.
- ದೀಪದ ಕಪ್ಪು ಮತ್ತು ಮಾಸಲು ಕೆಂಪು ಸೇರಿಸಿದಾಗ ದಟ್ಟ ಕಂದು ಬಣ್ಣವಾಗುವುದು.
- ಲಾಕ್ಷಾರಸದ ಕೆಂಪು ಮತ್ತು ನೀಲಿ ಕೂಡಿಸಿದಾಗ ಪಾಟಲ ಎಂಬ ಕಂದು ವರ್ಣವಾಗುವುದು.
- ಲಾಕ್ಷಾರಸದ ಕೆಂಪು ಮತ್ತು ನೀಲಿಯನ್ನು ಕೂಡಿಸಿದಾಗ ದಟ್ಟ ಮಾವು ವರ್ಣವಾಗುವುದು. ಇದು ಜಂಬು ಹಣ್ಣಿನ (ನೀರಲಹಣ್ಣು) ವರ್ಣವಾಗುತ್ತದೆ.

'ಶಿಲ್ಪರತ್ನ'[೨೧]ದಲ್ಲಿ ಮಿಶ್ರವರ್ಣಗಳ ಕುರಿತು ಅನೇಕ ವಿವರಗಳನ್ನು ನೀಡಿದ್ದು, ಈ ಕೆಳಗಿನಂತೆ ವಿವರಿಸಬಹುದು :

- ಬಿಳಿವರ್ಣ ಮತ್ತು ಕೆಂಪು ವರ್ಣ ಸೇರಿಸಿದಾಗ ಗೌರವರ್ಣ ಉಂಟಾಗುವುದು.
- ಬಿಳಿವರ್ಣ, ದೀಪದ ವರ್ಣ ಮತ್ತು ಹಳದಿ ಈ ಮೂರು ವರ್ಣಗಳು ಸೇರಿದಾಗ ಹಳದಿಮಿಶ್ರಿತ ಬೂದು ವರ್ಣವಾಗುವುದು.
- ಬಿಳಿ ಮತ್ತು ಕಪ್ಪು ಸಮ ಪ್ರಮಾಣದಲ್ಲಿ ಕೂಡಿದಾಗ ಆನೆಯ ಬೂದು ಬಣ್ಣ ಬರುವುದು.
- ಕೆಂಪು ಮತ್ತು ಹಳದಿ ಸಮ ಪ್ರಮಾಣದಲ್ಲಿ ಸೇರಿಸಿದಾಗ ಬಕುಳದ ಹಣ್ಣಿನ ವರ್ಣವಾಗುವುದು.
- ಹಳದಿ ಬಿಳಿಯ ಬಣ್ಣದ ಜೊತೆಗೆ ಭಾಗದಷ್ಟು ಪ್ರಮಾಣದಲ್ಲಿ ಬೆರೆತಾಗ ಹಳದಿಮಿಶ್ರಿತ ಬಿಳಿವರ್ಣ ಬರುವುದು.
- ಹಳದಿ ಮತ್ತು ಕಪ್ಪು ವರ್ಣಗಳು ಸಮ ಪ್ರಮಾಣದಲ್ಲಿ ಬೆರೆತಾಗ ಮನುಷ್ಯನ ದೇಹದ ವರ್ಣವಾಗುವುದು.
- ಹಳದಿ ವರ್ಣವು ಹೆಚ್ಚು ಪ್ರಮಾಣದ ನೀಲಿ ವರ್ಣದೊಂದಿಗೆ ಬೆರೆತಾಗ ಗಿಳಿಯ ರೆಕ್ಕೆಯ ವರ್ಣವಾಗುವುದು.
- ಲಾಕ್ಷಾರಸದ ಕೆಂಪು ಮತ್ತು ಕಪ್ಪು ಬೆರೆತಾಗ ಜಂಬುಫಲದ ಬಣ್ಣ ಉಂಟಾಗುವುದು.
- ಲಾಕ್ಷಾರಸದ ಕೆಂಪು ಮತ್ತು ಬಿಳಿ ಸಮ ಪ್ರಮಾಣದಲ್ಲಿ ಬೆರೆತಾಗ ಉಚ್ಚುಕುಲದ ಜನರ ವರ್ಣವಾಗುವುದು.

---

೨೦. ಜಿ. ಕೆ. ಶ್ರೀ. ಗೊಂಡೇಕರ್ (ಸಂ) : ಮಾನಸೋಲ್ಲಾಸ, ಭಾಗ-೨, ಅಧ್ಯಾಯ-೧, ಶ್ಲೋಕ-೧೫೮-೧೬೪

೨೧. ಗಣಪತಿ ಟಿ. ಶಾಸ್ತ್ರಿ (ಸಂ) : ಶಿಲ್ಪರತ್ನ ಭಾಗ-೧, ಅಧ್ಯಾಯ-೪೬, ಶ್ಲೋಕ ೧೩೪-೧೪೨

- ಕಪ್ಪು ಮತ್ತು ನೀಲಿ ಬೆರೆತಾಗ ಕೂದಲಿನ ವರ್ಣವಾಗುವುದು.
- ನೀಲಿ ಮತ್ತು ಬಿಳಿ ಬೆರೆತರೆ ಹೊಗೆಯ ಬಣ್ಣ ಉಂಟಾಗುತ್ತದೆ.
- ಹಳದಿ ಮತ್ತು ನೀಲಿ ಕೂಡಿದರೆ ಹಸಿರು ವರ್ಣವಾಗುವುದು ಎಂದು ಹೇಳುತ್ತದೆ.

ಕೆಂಪು ಮತ್ತು ನೀಲಿ ಕೂಡಿಸಿದರೆ ಮಾವು ವರ್ಣವಾಗುವುದು ಎಂದು ಬಾಣನ ಕಾದಂಬರಿಯಲ್ಲಿರುವ ಮಿಶ್ರವರ್ಣಗಳ ಬಗೆಗಿನ ವಿವರವನ್ನು ಸಿ. ಶಿವಮೂರ್ತಿಯವರು ಪ್ರಸ್ತಾಪಿಸುತ್ತಾರೆ.[೨೨]

ಹೀಗೆ ನಮ್ಮ ಪ್ರಾಚೀನ ಶಾಸ್ತ್ರ ಗ್ರಂಥಗಳಲ್ಲಿ, ಕಾವ್ಯಗಳಲ್ಲಿ ಹಾಗೂ ಜನಪದರಲ್ಲಿ ವರ್ಣಗಳ ತಯಾರಿಕೆ ಹಾಗೂ ಮಿಶ್ರವರ್ಣಗಳ ತಯಾರಿಕೆಯ ವಿವರಗಳಿವೆ. ಈ ವರ್ಣಪದ್ಧತಿಯನ್ನು ಪ್ರಾಚೀನ ಕಲಾವಿದರು ಚಾಚೂ ತಪ್ಪದೇ ಅನುಸರಿಸುತ್ತಿದ್ದರು ಮತ್ತು ಅನೇಕ ಪ್ರಯೋಗಗಳನ್ನು ಮಾಡುತ್ತಿದ್ದರು ಎಂಬುದಕ್ಕೆ ಈ ಮೇಲಿನ ಅಂಶಗಳೇ ನಿದರ್ಶನವೆನ್ನಬಹುದು.

ಕುಂಚಗಳು

ಯಾವುದೇ ಚಿತ್ರರಚನೆ ಮಾಡಬೇಕಾದರೆ ಬಣ್ಣಗಳ ತಯಾರಿಕೆ ಹಾಗೂ ಅವುಗಳನ್ನು ಬಳಸುವ ವಿಧಾನವು ಎಷ್ಟು ಪ್ರಾಮುಖ್ಯವೋ ಅದೇ ರೀತಿ ಆ ಬಣ್ಣಗಳನ್ನು ಹಚ್ಚಲು ಬಳಸುವ ಕುಂಚಗಳು ಅಷ್ಟೇ ಪ್ರಮುಖವಾಗಿವೆ. ಈ ಕುಂಚಗಳ ಇತಿಹಾಸ ಅಮಾದಿಕಾಲದ ಮಾನವಕಲಾವಿದನಿಂದಲೇ ಪ್ರಾರಂಭವಾಗುತ್ತದೆ. ಕೈಯ ಬೆರಳಿನಿಂದ ಹಿಡಿದು ಇಂದಿನ ಆಧುನಿಕ ರೀತಿಯ ಕುಂಚಗಳ ಬೆಳವಣಿಗೆಯು ಅಗಾಧವಾದುದು. ಗಂಜೀಫಾಚಿತ್ರಗಾರರು ಪ್ರಾಚೀನ ಕಾಲದಿಂದಲೂ ತಮ್ಮ ಕುಂಚಗಳನ್ನು ಅತ್ಯಂತ ಉಪಯುಕ್ತ ರೀತಿಯಲ್ಲಿ ತಯಾರಿಸಿಕೊಳ್ಳುತ್ತಿದ್ದರು. ಈ ಕುಂಚಗಳಿಗೆ ದಕ್ಷಿಣ ಭಾರತದಲ್ಲಿ ಅಳಿಲಿನ ಕೂದಲುಗಳನ್ನು ಉಪಯೋಗಿಸುತ್ತಿದ್ದರು. ಬಿದಿರು ಅಥವಾ ಸೂಕ್ತವಾದ ಮರದ ಕಡ್ಡಿಗಳನ್ನು ತಕ್ಕನಾಗಿ ತಯಾರಿಸಿಕೊಳ್ಳುತ್ತಿದ್ದರು. ನಂತರ ಮೇಣ ಸವರಿದ ದಾರದಿಂದ ಅಳಿಲುಕೂದಲುಗಳನ್ನು ಕಡ್ಡಿಯ ಕೊನೆಗೆ ಅಳವಡಿಸಿಕೊಂಡು ಅದರ ಮೇಲೆ ದಾರವನ್ನು ಸುತ್ತಿ ರೋಮಗಳನ್ನು ಚಿತ್ರರಚನೆಗೆ ಹೊಂದುವಂತೆ ಮಾಡಿಕೊಳ್ಳುತ್ತಿದ್ದರು. ಈ ಕುಂಚಗಳ ವಿಶೇಷವೆಂದರೆ ತನ್ನ ಒಡಲಿನಲ್ಲಿ ವರ್ಣದ ಮಿಶ್ರಣವನ್ನು ಹೆಚ್ಚಿನ ಪ್ರಮಾಣದಲ್ಲೂ ಕೂಡಿಟ್ಟುಕೊಳ್ಳಬಲ್ಲದು. ಕಲಾವಿದನು ರೇಖೆಗಳನ್ನಾಗಲಿ ಅಥವಾ ಮೇಲ್ಮೈ ಜಾಗದಲ್ಲಿ ವರ್ಣವನ್ನು ಹಚ್ಚುವುದಕ್ಕೆ ಉಪಯುಕ್ತವಾಗುತ್ತದೆ.[೨೩] ಕುಂಚದ ಕೊನೆಯಲ್ಲಿ ಅತೀ ಸೂಕ್ಷ್ಮ ಹಂಚನ್ನು ತನ್ನಷ್ಟಕ್ಕೆ ತಾನೇ ಹೊಂದಿರುವುದು ಅತೀ ಅವಶ್ಯಕವಾದ ವಿಚಾರವಾಗಿದೆ.

ಆಯಾ ಕಾಲಮಾನದ ಕಲಾವಿದನು ತಾನು ಕಂಡುಕೊಂಡಿದ್ದ ಕುಂಚಗಳ ತಯಾರಿಕೆಯನ್ನು ಅತ್ಯಂತ ಸಮರ್ಪಕವಾಗಿ ಚಿತ್ರರಚನೆಯಲ್ಲಿ ಬಳಕೆ ಮಾಡಿಕೊಂಡಿರುವನು. ಪ್ರಾಚೀನ ಮಾನವನು ತಾನು ತಯಾರಿಸಿದ ವರ್ಣಗಳನ್ನು ಕೈಯ ಬೆರಳಿನಿಂದ, ವಿವಿಧ ಜಾತಿಯ ಮರದ ಕಡ್ಡಿಗಳಿಂದ, ಪ್ರಾಣಿಗಳ ಎಲುಬಿನಿಂದ, ನಂತರದಲ್ಲಿ ವಿವಿಧ ಪ್ರಾಣಿಗಳ ಕೂದಲುಗಳನ್ನು ಒಂದು ಆಧಾರಕ್ಕೆ ಸುತ್ತಿಕೊಂಡು ಅದನ್ನು ಬರೆಯುವ ಸಾಧನವಾಗಿ ಮಾಡಿಕೊಂಡು ಚಿತ್ರ ರಚಿಸುತ್ತಿದ್ದನು. ಪ್ರಾಚೀನ ಮಾನವನು ಬಣ್ಣಗಳನ್ನು ಹಚ್ಚಲು ಬಹಳ ಕೀಳ್ತಾರನಾದ ಕುಂಚಗಳನ್ನು ಉಪಯೋಗಿಸುತ್ತಿದ್ದನು. ಬರಿಯ ಕೈಯಿಂದಲೂ ಮತ್ತು ಕೆಲವು ವೇಳೆ ಒಂದು ಕೋಲಿನ ತುದಿಗೆ ಚರ್ಮವನ್ನು ಸುತ್ತಿ ಅದನ್ನು ಬಣ್ಣದಲ್ಲಿ ಅದ್ದಿ ಚಿತ್ರ ಬರೆಯುತ್ತಿದ್ದನು. ಗಿಡದ ರೆಂಬೆಯ ತುದಿಯನ್ನು ಸರಿಯಾಗಿ ಜಜ್ಜಿ ತೊಗಟೆಯು ಹೋಗುವಂತೆ

---

೨೨. C. Shivaram murti, Chitrasusutra of the Vishnudharmottara, PP-61

೨೩. ಎಂ. ಎಸ್. ನಂಜುಂಡರಾವ್., ಚಿತ್ರಕಲಾ ಪ್ರಪಂಚ, ಪುಟ-೨೫೫

ಮಾಡಿ, ಕೂದಲಿನಂತಹ ನಾರುಗಳನ್ನು ಬಿಡಿಸಿ ಕುಚ್ಚಿನಂತೆ ಮಾಡಿ ಅದನ್ನು ಕುಂಚದಂತೆ ಬಳಸುತ್ತಿದ್ದನು. ಪ್ರಾಚೀನ ಜನರು ನಿಸರ್ಗದತ್ತವಾಗಿ ದೊರೆಯುತ್ತಿದ್ದ ಉದ್ದನೆಯ ಕೈಗೆಟುವ ವಸ್ತುಗಳನ್ನು ಕುಂಚಗಳನ್ನಾಗಿ ಮಾಡಿಕೊಂಡು ಚಿತ್ರ ಬರೆಯುತ್ತಿದ್ದರು.

ಕರಕುಶಲ ಕಲೆಗಳಾದ ನೇಯ್ಗೆಯ ಬಣ್ಣ ಹಾಕುವವರು, ಗೋಕಾಕ, ಕಲಘಟಗಿ, ಕಿನ್ನಾಳದ ಗೊಂಬೆ ತಯಾರಕರು, ಅನೇಕ ಪ್ರಾಣಿಗಳ ತುಪ್ಪಳಗಳಿಂದ ತಮಗೆ ಬೇಕಾದ ಸೂಕ್ಷ್ಮತರ ಹಾಗೂ ಸ್ಥೂಲವಾದ ಕುಂಚಗಳನ್ನು ತಯಾರಿಸಿಕೊಂಡು ಚಿತ್ರ ಬರೆಯುತ್ತಿದ್ದರು. ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿರುವ ವೈವಿಧ್ಯಮಯ ಕುಂಚಗಳನ್ನು ಬಳಸುತ್ತಿದ್ದಾರೆ.

ಜನಪದರೂ ಕೂಡಾ ಹಬ್ಬ ಹರಿದಿನಗಳಂತಹ ಸಂದರ್ಭಗಳಲ್ಲಿ ವಿವಿಧ ಸಾಧನಗಳನ್ನು ಕುಂಚಗಳಂತೆ ಬಳಸಿಕೊಂಡು ಚಿತ್ರ ಬರೆಯುತ್ತಿರುವುದನ್ನು ಕಾಣಬಹುದು. ಕಾರಹುಣ್ಣಿಮೆಯಲ್ಲಿ ಹುರಮಂಜು, ಸುಣ್ಣಗಳನ್ನು ಬಳಸಿಕೊಂಡು ಕೈಯ ಬೆರಳಿನಿಂದ ವಿವಿಧ ಚಿತ್ತಾರಗಳನ್ನು ಬರೆಯುವರು. ಕಡ್ಡಿಯ ತುದಿಗೆ ಬಟ್ಟೆಯನ್ನು, ಹತ್ತಿಯನ್ನು ಸುತ್ತಿ ತಮಗೆ ಬೇಕಾದ ಚಿತ್ತಾರಗಳನ್ನು ಬಿಡಿಸುತ್ತಿರುವರು. ಸೀಗೆ ಹುಣ್ಣಿಮೆ, ಗೌರಿಹುಣ್ಣಿಮೆಯಂತಹ ಹಬ್ಬಗಳಲ್ಲಿ ಮಹಿಳೆಯರು ಮಣ್ಣಿನ ಗಡಿಗೆಗೆ ಸುಣ್ಣದಿಂದ ವಿವಿಧ ಚಿತ್ತಾರಗಳನ್ನು ಈ ಒಂದು ಸಾಧನಗಳನ್ನು ಬಳಸಿಕೊಂಡು ಬರೆಯುವುದನ್ನು ನೋಡುತ್ತೇವೆ. ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಅಲ್ಲಿ ಆಚರಿಸಲಾಗುವ ಹಬ್ಬ ಆಚರಣೆಯ ಸಂದರ್ಭಗಳಲ್ಲಿ ತಮಗೆ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ಕುಂಚಗಳಂತೆ ಮಾಡಿ ಸಾಂದರ್ಭಿಕ ಚಿತ್ತಾರಗಳನ್ನು ಬರೆಯುತ್ತಿದ್ದಾರೆ.

ಪ್ರಾಚೀನ ಶಾಸ್ತ್ರಗಳಲ್ಲಿ ಕುಂಚಗಳ ಉಲ್ಲೇಖ

ಹಿಂದಿನ ಚಿತ್ರಕಾರರಿಗೆ ಚಿತ್ರ ರಚನೆಯ ಸಿದ್ಧತೆ, ವರ್ಣ ತಯಾರಿಕೆ, ವರ್ಣಗಳ ಮಿಶ್ರಣ, ಬಳಸುವ ಪದ್ಧತಿ, ರೂಪರಚನೆ ಎಷ್ಟು ಮುಖ್ಯವಾಗಿತ್ತೋ, ಅಷ್ಟೇ ಮುಖ್ಯತೆ ಅವರು ಬಳಸುತ್ತಿದ್ದ ಕುಂಚಗಳಿಗಿತ್ತು. ಅವರು ಕುಂಚ ತಯಾರಿಕೆಯಲ್ಲಿ ತೋರಿರುವ ಜಾಣ್ಮೆಯು ವಿಶಿಷ್ಟವಾದುದು. ವಿಷ್ಣುಧರ್ಮೋತ್ತರದಲ್ಲಿ ಕುಂಚದ ಕುರಿತು ಹೆಚ್ಚು ಪ್ರಸ್ತಾಪವಾಗಿಲ್ಲವಾದರೂ ಒಂದು ಕಡೆ ಪ್ರಾಣಿಗಳ ತೊಗಲಿನಿಂದ ಕುಂಚಗಳನ್ನು ಮಾಡುವ ವಿಷಯವನ್ನು ತಿಳಿಸುತ್ತದೆ. ಅಭಿಲಷಿತಾರ್ಥದಲ್ಲಿ ಎರಡು ಬಗೆಯ ಕುಂಚಗಳನ್ನು ಕಾಣುತ್ತೇವೆ. ವರ್ತಿಕ ಮತ್ತು ಲೇಖನಿ ಎಂದು. ಈ ಎರಡು ಬಗೆಯಲ್ಲಿ ಸ್ಥೂಲ, ಮಧ್ಯಮ ಮತ್ತು ಸೂಕ್ಷ್ಮ ಎಂಬ ಮೂರು ಉಪವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಕೈ ಬೆರಳಿನ ಗಾತ್ರದ ಒಂದು ಬಿದಿರಿನ ಕಡ್ಡಿಯನ್ನು ಆರಿಸಿಕೊಳ್ಳಬೇಕು. ಅನಂತರ ಬಾರ್ಲಿ ಕಾಳಿನಷ್ಟು ಗಾತ್ರದ ಒಂದು ಮೊಳೆಯನ್ನು ಈ ಬಿದಿರು ಕಡ್ಡಿಗೆ ಸಿಕ್ಕಿಸಬೇಕು. ಅನ್ನದೊಡನೆ ಮಿಶ್ರ ಮಾಡಿದ ದೀಪದ ಕಾಡಿಗೆಯ ಅಂಟನ್ನು ಅದರ ಮೇಲೆ ಉಜ್ಜಬೇಕು. ಇದನ್ನೇ ವರ್ತಿಕ ಎನ್ನುವುದು. ಕರುವಿನ ಕಿವಿಯ ಕೂದಲನ್ನು ಈ ಕಡ್ಡಿಗೆ ಅರಗಿನ ಮೇಣದ ಸಹಾಯದಿಂದ ಸಿಕ್ಕಿಸಬೇಕು. ಇದನ್ನೇ ಲೇಖನಿ ಎಂದು ಕರೆಯುವರು.

'ಶಿಲ್ಪರತ್ನ'ವು ಕುಂಚದ ಕುರಿತು ಮಂದವಾದ, ಮಧ್ಯಮವಾದ ಮತ್ತು ಅತೀ ನವಿರಾದ ಕುಂಚಗಳೆಂದು ಮೂರು ಬಗೆಯಲ್ಲಿ ತಿಳಿಸುತ್ತದೆ. ಸ್ಥೂಲವಾದ ಕುಂಚಕ್ಕೆ ಕರುವಿನ ಕಿವಿಯ ಮೇಲಿನ ಒರಟು ಕೂದಲುಗಳು ಅಥವಾ ಮೇಕೆಯ ಉದರದ ಮೇಲಿನ ಕೂದಲುಗಳನ್ನು ಒಂದು ಬಾರ್ಲಿ ಕಾಳಿನಷ್ಟು ಗಾತ್ರ ಸಿಕ್ಕಿಸಬೇಕು. ಸೂಕ್ಷ್ಮತರವಾದ ನವಿರಾದ ಕುಂಚಕ್ಕೆ ಕಸ್ತೂರಿ ಇಲಿಯ ಬಾಲದ ಕೂದಲುಗಳನ್ನು ದಾರ ಅಥವಾ ಮೇಣವನ್ನು ಕೂಡಿರುವ ತುದಿಗೆ ಅಂಟಿಸಬೇಕು.[೨೪]

೨೪. ಗಣಪತಿ ಟಿ. ಶಾಸ್ತ್ರಿ (ಸಂ) : ಶಿಲ್ಪರತ್ನ ಭಾಗ-೧, ಅಧ್ಯಾಯ-೪೬, ಶ್ಲೋಕ ೫೩-೫೮

ಮಾನಸೋಲ್ಲಾಸ[೨೫]ದಲ್ಲಿಯೂ ಈ ಕುಂಚದ ಕುರಿತು ತಿಳಿಸಲಾಗಿದೆ. ಕರುವಿನ ಕಿವಿಯಲ್ಲಿ ಹುಟ್ಟಿದ ಕೂದಲುಗಳನ್ನು ಬಿದಿರಿನ ಕಡ್ಡಿಯ ಕೊನೆಗೆ ಅರಗಿನಿಂದ ಕಟ್ಟಿ ಲೇಖನಿಯನ್ನು ತಯಾರಿಸುತ್ತಿದ್ದರು. ಇದನ್ನು ಸ್ಥೂಲ, ಮಧ್ಯಾ, ಸೂಕ್ಷ್ಮಾ ಎಂದು ಮೂರು ವಿಧಗಳಲ್ಲಿ ತಯಾರಿಸಲಾಗುತ್ತಿತ್ತು. ಹೀಗೆ ನಮ್ಮ ಪ್ರಾಚೀನ ಶಾಸ್ತ್ರ ಗ್ರಂಥಗಳಲ್ಲಿ ಮತ್ತು ಕಾವ್ಯಗಳಲ್ಲಿ ಕುಂಚದ ಕುರಿತು ಅನೇಕ ಕಡೆ ಪ್ರಸ್ತಾಪ ಮಾಡಿದೆ. ಇದರಿಂದ ಕಲಾವಿದರೂ ಚಿತ್ರರಚನೆಗೆ ಬೇಕಾಗುವ ಪರಿಕರಗಳನ್ನು ತಯಾರಿಸುವುದನ್ನು ಮತ್ತು ಅವುಗಳನ್ನು ಹೇಗೆ ಬಳಸುತ್ತಿದ್ದರೆಂಬುದನ್ನು ತಿಳಿದುಕೊಳ್ಳಬಹುದಾಗಿದೆ.

ಆಧುನಿಕ ಕುಂಚಗಳು

೧೮ಮತ್ತು ೧೯ನೆಯ ಶತಮಾನಗಳಲ್ಲಿ ಉತ್ಕೃಷ್ಟವಾದ ಹಾಗೂ ವೈವಿಧ್ಯಮಯವಾದ ಆಧುನಿಕ ರೀತಿಯ ಕುಂಚಗಳು ಬಳಕೆಯನ್ನು ಕಾಣಬಹುದು. ಈ ಹಂತದ ಕಲಾವಿದರು ತಮಗೆ ಬೇಕಾದ ಚಪ್ಪಟೆಯಾದ, ದುಂಡಾದ ಕುಂಚಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಇದಕ್ಕೆ ಬೇಕಾದ ಬೇರೆ ಬೇರೆ ಪ್ರಾಣಿಗಳ ಕೂದಲುಗಳನ್ನು, ತಪ್ಪಲುಗಳನ್ನು ಉಪಯೋಗಿಸುತ್ತಿದ್ದರು. ೨೦ನೆಯ ಶತಮಾನದ ಪ್ರಥಮಾರ್ಧದ ಹೊತ್ತಿಗೆ ಕುಂಚಗಳನ್ನೇ ತಯಾರಿಸುವ ಕುಶಲಕರ್ಮಿಗಳು ಹುಟ್ಟಿಕೊಂಡರು. ಕಲಾವಿದರಿಗೆ ಅನುಕೂಲವಾಗುವಂತಹ ಸ್ಥೂಲವಾದ, ನವಿರಾದ, ಸೂಕ್ಷ್ಮಾತಿ ಸೂಕ್ಷ್ಮವಾದ ಕುಂಚಗಳನ್ನು ಒದಗಿಸತೊಡಗಿದರು. ಸೂಕ್ಷ್ಮವಾದ ಚಿತ್ರ ರಚನೆಗೆ ಮೃದು ತುಪ್ಪಳದ, ಕೂದಲಿನ ಕುಂಚಗಳನ್ನು, ಚಪ್ಪಟೆಯಾಗಿ ಬಣ್ಣ ಹಚ್ಚಲು ಗಡಸು ಕೂದಲು ಹೊಂದಿದ ಸ್ಥೂಲವಾದ ಕುಂಚಗಳನ್ನು ತಯಾರಿಸುತ್ತಿದ್ದರು. ಈ ರೀತಿಯಾಗಿ ತಯಾರಾಗುತ್ತಿದ್ದ ಕುಂಚಗಳನ್ನು ಕಲಾವಿದರು ತಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸುತ್ತಿದ್ದರು. ಈ ಕುಂಚಗಳನ್ನು ಕಲಾವಿದರು ಹಿಡಿಕೆಯು ಸಹ ಉದ್ದವಾದ, ಗಿಡ್ಡವಾದ, ಚಿತ್ರ ಬರೆಯಲು ಅನುಕೂಲವಾಗುವಂತೆ ಕಟ್ಟಿಗೆಯಿಂದ ತಯಾರಿಸುತ್ತಿದ್ದರು. ಸ್ಥೂಲ ಕುಂಚಗಳಿಗೆ ದಪ್ಪ ಕಟ್ಟಿಗೆಯನ್ನು, ಸೂಕ್ಷ್ಮತರ ಕುಂಚಗಳಿಗೆ ಸಣ್ಣ ಕಟ್ಟಿಗೆಯನ್ನು ಅತ್ಯಂತ ನವುರಾಗಿ (ನೈಜವಾಗಿ) ಸಿದ್ಧ ಪಡಿಸಿ ಬಳಸುತ್ತಿದ್ದರು.

ಇಂದು ಮಾರುಕಟ್ಟೆಯಲ್ಲಿ ವಿವಿಧ ರೀತಿಯ ಕುಂಚಗಳು ಲಭ್ಯವಿವೆ. ವಿವಿಧ ಪ್ರಾಣಿಗಳ ಕೂದಲು, ತುಪ್ಪಳಗಳಿಂದ ತಯಾರಿಸಿದ ಹಾಗೂ ಪ್ಲಾಸ್ಟಿಕ್ ಕೂದಲಿನಿಂದ ತಯಾರಾದ ಚಪ್ಪಟೆಯಾದ ಹಾಗೂ ದುಂಡಾದ ಕುಂಚಗಳು ಲಭ್ಯವಿವೆ. ಸೂಕ್ಷ್ಮವಾದ ಹಾಗೂ ಸ್ಥೂಲವಾದ ಕುಂಚಗಳನ್ನು ಕಲಾವಿದನಿಗೆ ಅನುಕೂಲವಾಗುವಂತೆ ಕುಂಚ ತಯಾರಿಕೆಯ ಕಂಪನಿಗಳು ಇಂದು ತಯಾರಿಸುತ್ತಲಿವೆ. ಇಂದು ಬೆಂಗಳೂರಿನಲ್ಲಿರುವ 'ತಾಜ್ ಬ್ರಶ್'[೨೬] ಕಂಪನಿಯೂ ಸುಮಾರು ಎರಡು ಸಾವಿರ ನಮೂನೆಯ ಬ್ರಶ್‌ಗಳನ್ನು ತಯಾರಿಸುತ್ತಲಿದೆ. ಗಂಜೀಫಾ ಚಿತ್ರಕಲಾವಿದರೂ ವೈವಿಧ್ಯಮಯವಾದ ಕುಂಚಗಳನ್ನು ಸ್ವತಃ ತಾವೇ ಸಿದ್ಧಪಡಿಸಿಕೊಂಡು, ಚಿತ್ರರಚನೆ ಮಾಡುತ್ತಿರುವರು.

ಲೇಖನಿಗಳು

'ಲೇಖನಿ' ಎಂದರೆ ಬರೆಯುವ ಸಾಧನ. ಇಲ್ಲಿ ಎರಡು ರೀತಿ ಸಾಧನಗಳನ್ನಾಗಿ ವಿಂಗಡಿಸಿ ಹೇಳಬಹುದು. ಒಂದು ಘನರೂಪದಲ್ಲಿ ಬಳಸುವ ಲೇಖನಿಗಳು ಇನ್ನೊಂದು ದ್ರವರೂಪದ ಬಣ್ಣಗಳನ್ನು

---

೨೫. ಮಲ್ಲೇಪುರಂ ಜಿ. ವೆಂಕಟೇಶ (ಸಂ) : ಶಿವತತ್ವ ರತ್ನಾಕರ, ಪುಟ-೩೫೬

೨೬. ಎಸ್ ಎಂ. ಅಂಗಡಿ., ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ (ಅಪ್ರಕಟಿತ ಪಿಹೆಚ್.ಡಿ ಪ್ರಬಂಧ), ಪುಟ-೬೯-೭೦

ಬೇರೆ ಬೇರೆ ಸಾಧನಗಳ ಆಧಾರದ ಮೇಲೆ ಅದ್ದಿ ಬರೆಯುವ ಲೇಖನಿಗಳು. ಘನರೂಪದಲ್ಲಿ ಬಳಸಲಾಗುವ ಲೇಖನಿಗಳು ಬಳಪದಕಲ್ಲು, ಸುಣ್ಣದಕಲ್ಲು ಹಾಗೂ ವಿವಿಧ ಕಲ್ಲುಗಳು. ಇರದಲ್ಲಿಯೇ ಮೃದುವಾದ ಘನರೂಪದ ಲೇಖನಿಗಳನ್ನು ಹೆಸರಿಸಬಹುದು: ಮೇಣದಿಂದ ಕೂಡಿದ ಬಣ್ಣದ ಲೇಖನಿಗಳು, ಗ್ರಾಫೈಟ್ ಮತ್ತು ಜೇಡಿಮಣ್ಣಿನಿಂದ ತಯಾರಿಸಿದ ಪೆನ್ಸಿಲ್ಸ್ ಇತ್ಯಾದಿ. ಈ ರೀತಿಯಾದ ಲೇಖನಿಗಳನ್ನು ದಪ್ಪ (ಸ್ಥೂಲ)ನಾದ ರೇಖೆ ಎಳೆಯಲು, ಸೂಕ್ಷ್ಮತರನಾದ ರೇಖೆ ಎಳೆಯಲು ಬಳಸಲಾಗುತ್ತಿತ್ತು. ಇವುಗಳನ್ನು ಕಲಾವಿದರು ತಮಗೆ ಹೇಗೆ ಬೇಕೋ ಹಾಗೆ ತಯಾರಿಸಿಕೊಳ್ಳುತ್ತಿದ್ದರು.

ಯಾವುದೇ ತೆರನಾದ ಚಿತ್ರ ಬರೆಯಬೇಕಾದರೆ ಅದಕ್ಕೆ ಮೊದಲು ರೇಖಾಚಿತ್ರ ಬರೆಯಬೇಕಾಗುತ್ತಿತ್ತು. ನಂತರ ಬೇಕಾದ ವರ್ಣಸಂಯೋಜನೆ ಮಾಡಿ ನಂತರ ಅಂತಿಮವಾದ ರೇಖೆಯನ್ನು ಹಾಕಲಾಗುತ್ತಿತ್ತು. ಇದಕ್ಕೆ ನಮ್ಮ ಸಾಂಪ್ರದಾಯಿಕ ಚಿತ್ರಗಳು ಉದಾಹರಣೆಯಾಗಿವೆ.

ಗಂಜೀಫಾ ಚಿತ್ರ ಕಲಾವಿದರು ನೇರವಾಗಿ ಗಂಜೀಫಾ ಎಲೆಯ ಮೇಲೆ ಚಿತ್ರ ಬರೆಯದೇ ಮೊದಲು ಪ್ರತ್ಯೇಕ ರೇಖಾ ಚಿತ್ರಗಳನ್ನು ಬರೆದುಕೊಂಡು, ಅದರ ಕರಡನ್ನು ಕಾರ್ಡಿನ ಮೇಲೆ ಚಿತ್ರಿಸಿಕೊಂಡು ಚಿತ್ರ ಬರೆಯುತ್ತಿದ್ದರು. ಒಮ್ಮೆ ಒಂದು ರೇಖಾ ಚಿತ್ರ ಸಿದ್ಧಪಡಿಸಿಕೊಂಡರೆ ಅದರ ಸಹಾಯದಿಂದ ಸೂಟ್‌ಗೆ ಸಂಬಂಧಪಟ್ಟ ಎಲ್ಲ ಚಿತ್ರಗಳ ಪ್ರತಿಕೃತಿ ಮಾಡಿ ಚಿತ್ರಗಳನ್ನು ರಚಿಸುತ್ತಿದ್ದರು. ಇಂಥ ರೇಖಾಚಿತ್ರಗಳನ್ನು ಸೂಕ್ಷ್ಮತರನಾದ ವಿವಿಧ ಬಣ್ಣಗಳ ಲೇಖನಿ, ಮೇಣದಂತಹ ಲೇಖನಿ, ಗ್ರಾಫೈಟ್‌ನಿಂದ ತಯಾರಾದ ಲೇಖನಿಗಳನ್ನು ಬಳಸಿ ರಚಿಸುತ್ತಿದ್ದರು. ಇಂದು ಮಾರುಕಟ್ಟೆಯಲ್ಲಿ ವಿವಿಧ ತರಹದ ಲೇಖನಿಗಳು ಲಭ್ಯವಿವೆ.[೨೭]

ಅಂಟು ದ್ರಾವಕಗಳು (ಬಂಧಕಗಳು)

ಗಂಜೀಫಾ ಚಿತ್ರಗಳ ರಚನೆಯಲ್ಲಿ ಚಿತ್ರಕಲಾವಿದರು ಬೇರೆ ಬೇರೆ ಮೂಲದಿಂದ ತಯಾರಿಸಲಾದ ಅಂಟು ದ್ರಾವಕಗಳನ್ನು ಬಳಸಿರುವರು. ಮರಗಳಿಂದ ಸ್ವಾಭಾವಿಕವಾಗಿ ಉತ್ಪತ್ತಿಯಾದ ಅಂಟು ಪದಾರ್ಥವನ್ನು ಗಾಜಿನ ಚೂರಿನಂತೆ ಮಾರ್ಪಡಿಸಿ ಮಾರುಕಟ್ಟೆಯಲ್ಲಿ ಇಂದು ಮಾರಲಾಗುತ್ತಿದೆ. ಇದನ್ನು ಮೀನುಸರಿ ಎಂದು ಕರೆಯುವರು. ಈ ಮೀನುಸರಿಯನ್ನು ಚೆನ್ನಾಗಿ ಕಾಯಿಸಿ ಹುಡಿವರ್ಣಗಳೊಂದಿಗೆ ಬೆರೆಸಿ ವರ್ಣಗಳನ್ನು ತಯಾರು ಮಾಡುತ್ತಾರೆ. ಈ ರೀತಿ ತಯಾರಿಸಿದ ಬಣ್ಣವನ್ನು ಯಾವುದೇ ಆಧಾರದ ಮೇಲೆ ಬಳಸಲಾಗುತ್ತಿದೆ. ಹೆಚ್ಚಾಗಿ ಬೇವಿನಮರದ ಅಂಟು, ಜಾಲಿಮರದ ಅಂಟನ್ನು ಬಳಸಲಾಗುತ್ತಿದೆ. ಜಾಲಿಮರದ ಅಂಟುದ್ರಾವಕವನ್ನು ಬೇರೆ ಬೇರೆ ಪದಾರ್ಥಗಳನ್ನು ತಯಾರು ಮಾಡಲು ಬಳಸುತ್ತಾರೆ. ಬೇವಿನ ಮರದ ಅಂಟು ವಿಷವಾಗಿರುವುದರಿಂದ ಚಿತ್ರ ಕಲಾವಿದರು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸುತ್ತಾರೆ.

ಬೇರೆ ಬೇರೆ ಸಸ್ಯ, ಮರದ ಬೀಜಗಳಿಂದ ಅಂಟುದ್ರಾವಕಗಳನ್ನು ತಯಾರಿಸಲಾಗುತ್ತಿದೆ. ಎಣ್ಣೆ ಬೀಜಗಳಾದ ಆಗಸೆ, ಪೆರಿಲ್ಲಾ, ಟಂಗೆ, ಆಮ್ಟಿ ಸಿಕಾ, ಗಸಗಸೆ ಇತ್ಯಾದಿಗಳನ್ನು ಬಳಸಿಕೊಂಡು ಪೈಂಟ್ಸ್ ಮತ್ತು ವಾರ್ನಿಷ್‌ಗಳನ್ನು ತಯಾರಿಸಲಾಗುತ್ತದೆ. ಗಂಜೀಫಾ ಕಲಾವಿದರು ತೈಲಬಂಧಕಗಳನ್ನು ಬಣ್ಣಗಳ ಸಂಯೋಜನೆಯಲ್ಲಿ ಬಳಸಿದರೆ, ನೀರುಬಂಧಕಗಳನ್ನು ಬೇಕಾದ ವಸ್ತುಗಳನ್ನು ಅಂಟಿಸಲು ಬಳಸಿದ್ದಾರೆ. ಗೋಲ್ಡ್ ಲೀಫ್‌ಗಳನ್ನು ಅಂಟಿಸಲು ಈ ಪಾರದರ್ಶಕ ಅಂಟುದ್ರಾವಕವನ್ನು ಬಳಸಿದ್ದು ವಿಶೇಷ.

೨೭. ಎಸ್ ಎಂ. ಅಂಗಡಿ., ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ (ಅಪ್ರಕಟಿತ ಪಿಹೆಚ್.ಡಿ ಪ್ರಬಂಧ), ಪುಟ-೭೦

ಇಂದು ಮಾರುಕಟ್ಟೆಯಲ್ಲಿ ಲಭ್ಯವಿರುವ ಅಂಟುದ್ರಾವಕಗಳನ್ನು ಚಿತ್ರರಚನೆಯಲ್ಲಿ ಬಳಸುತ್ತಿದ್ದಾರೆ. ಪ್ರಾಚೀನ ಮಾನವನು ಪ್ರಾಣಿಗಳ ಕೊಬ್ಬನ್ನು ಶೇಖರಿಸಿ ಬಣ್ಣದಲ್ಲಿ ಬೆರಕೆ ಮಾಡಿ ಚಿತ್ರರಚಿಸುತ್ತಿದ್ದನೆಂದು ಇತಿಹಾಸದಿಂದ ತಿಳಿಯುತ್ತದೆ. ಪ್ರಾಣಿಗಳ ಚರ್ಮವನ್ನು, ಅದರ ಕೊಬ್ಬನ್ನು ಚೆನ್ನಾಗಿ ಕುದಿಸಿ ತಯಾರಿಸಿದ ದ್ರಾವಣವನ್ನು 'ಮರವಜ್ರ'[೨೮] ಎನ್ನುವರು. ಇದನ್ನು ಕಲಾವಿದರು ಚಿತ್ರ ರಚನೆಯಲ್ಲಿ ಚೆನ್ನಾಗಿ ಬಳಸಿಕೊಂಡಿದ್ದಾರೆ.

ಬಣ್ಣ ಮಿಶ್ರಣ ಮಾಡುವ ತಟ್ಟೆ

ಪ್ರಾಗೈತಿಹಾಸಿಕ ಮಾನವರು ಬಣ್ಣಗಳನ್ನು ಮಿಶ್ರಣ ಮಾಡಿಕೊಳ್ಳುವುದಕ್ಕೆ ಇಂತಹುದೇ ವಸ್ತುವನ್ನು ಬಳಸಿಕೊಂಡಿದ್ದಾರೆ ಎಂದು ಹೇಳುವುದು ಕಷ್ಟ. ಪ್ರಾರಂಭದಲ್ಲಿ ಕುಂಬಳಕಾಯಿ ಬಳ್ಳಿಯಂತಹ ಎಲೆಗಳನ್ನು ಹೊಂದಿದ ಬಳ್ಳಿಗಳ, ಗಿಡಗಳ, ದೊಡ್ಡ ಎಲೆಗಳಿಂದ ದೊಣ್ಣೆಗಳನ್ನು ಮಾಡಿಕೊಂಡು ಉಪಯೋಗಿಸಿಕೊಂಡಿದ್ದಾರೆ. ಅಲ್ಲದೇ ಬಿದಿರುಗಳ ಟೊಳ್ಳುಗಳು, ಎಲುಬಿನ ಟೊಳ್ಳುಭಾಗಗಳನ್ನು ಬಳಸಿದ್ದು ನಂತರದ ಕಾಲದಲ್ಲಿ ಮಣ್ಣಿನಿಂದ ಸುಟ್ಟು ಮಾಡಿದ ಪಾತ್ರೆಗಳನ್ನು ಬಳಸಿದಂತೆ ತೋರುತ್ತದೆ ಎಂಬಂತಹ ವಿವರಗಳು ತಿಳಿದುಬರುತ್ತದೆ. ವರ್ಣ ಲೇಪಿಸಿಕೊಂಡ ಕಾಡೆಮ್ಮೆಯ ಹೆಗಲ ಮೂಳೆಗಳು, ಕೆಲವಡೆ ಕಲ್ಲಿನಿಂದ ಕಡಿದಿಟ್ಟುಕೊಂಡ ಅಗಲಬಾಯಿಯ ಬಟ್ಟಲುಗಳು ಪ್ರಾಚೀನ ನೆಲೆಗಳಲ್ಲಿ ದೊರೆಯುತ್ತಿದ್ದು, ಇವುಗಳಲ್ಲಿ ಬಣ್ಣಗಳನ್ನು ಕಲಿಸಿಕೊಂಡಿದ್ದ ಕುರುಹುಗಳು ಕಂಡು ಬರುತ್ತವೆ[೨೯] ಎನ್ನಲಾಗಿದೆ. ಹಾಗೆ ಸೋರೆಕಾಯಿ, ಬಿಲ್ವಪತ್ರಿಕಾಯಿಗಳ ಓಡುಗಳನ್ನು ಬಣ್ಣ ಮಿಶ್ರಣ ಮಾಡಿಕೊಳ್ಳುವ ಸಾಧನಗಳಾಗಿ[೩೦] ಪ್ರಾಚೀನರು ಬಳಸಿಕೊಂಡಿದ್ದು ತಿಳಿದುಬರುತ್ತದೆ.

ಶಿಷ್ಟ ಪರಂಪರೆಯ ಕಾಲಕ್ಕಾಗಲೇ ಮಣ್ಣಿನ ಪಾತ್ರೆಗಳು ಬಳಕೆಗೆ ಬಂದಿದ್ದು, ಇವುಗಳ ಜೊತೆಗೆ ಲೋಹದ ಪಾತ್ರೆಗಳನ್ನು ಬಳಸಿರಬೇಕು. ಜನಪದ ಚಿತ್ರಕಾರರು ಈಗಲೂ ಮಣ್ಣಿನ ಪಾತ್ರೆಗಳನ್ನೇ ಉಪಯೋಗಿಸುತ್ತಾರೆ. ಅಲ್ಲದೇ ತೆಂಗಿನ ಚಿಪ್ಪು, ಲೋಹ, ಚೀನಿ ಮಣ್ಣಿನ ಪಾತ್ರೆ ಉಪಯೋಗಿಸಿದರೂ ನಿರ್ದಿಷ್ಟವಾಗಿ ಇಂತಹುದೇ ವರ್ಣವನ್ನು ಮಿಶ್ರಣ ಮಾಡಲು ಬಳಸುತ್ತಾರೆಂದು ಖಚಿತವಾಗಿ ಹೇಳಲು ಅಸಾಧ್ಯ. ಜನಪದರು ತಕ್ಷಣಕ್ಕೆ ಲಭ್ಯವಾದ ಯಾವುದೇ ಯೋಗ್ಯವಸ್ತುವನ್ನು ಬಳಸಿರುವ ಸಾಧ್ಯತೆಯಿದೆ.

ಪಾರದರ್ಶಕ ಕಾಗದಗಳು

ಪಾರದರ್ಶಕ ಕಾಗದಗಳನ್ನು ರೇಖಾಚಿತ್ರಗಳ ಪ್ರತಿಕೃತಿ ಮಾಡಿಕೊಳ್ಳಲು ಬಳಸಲಾಗುತ್ತದೆ. ಗಂಜೀಫಾ ಚಿತ್ರಕಾರರು ನೇರವಾಗಿ ಯಾವುದೇ ಚಿತ್ರಗಳನ್ನು ಕಾರ್ಡನ ಮೇಲೆ ಬರೆಯದೇ ಮೊದಲು ಚಿತ್ರದ ರೇಖಾಚಿತ್ರವನ್ನು ಬರೆದುಕೊಂಡು ನಂತರ ಪಾರದರ್ಶಕ ಕಾಗದಗಳ ಸಹಾಯದಿಂದ ಕಾರ್ಡಿನ ಮೇಲೆ ರೇಖಾಚಿತ್ರವನ್ನು ಬರೆಯುತ್ತಿದ್ದರು. ಬಹುತೇಕ ಗಂಜೀಫಾ ಚಿತ್ರಗಳು ಚಿಕಣಿ ಚಿತ್ರಗಳನ್ನು ಅನುಕರಿಸುತ್ತವೆ. ಗಂಜೀಫಾ ಚಿತ್ರಕಲಾವಿದರು ಈ ಸಾಂಪ್ರದಾಯಿಕ ಚಿತ್ರಗಳನ್ನು ಪಾರದರ್ಶಕ ಕಾಗದಗಳ ಮೇಲೆ ಪರಿವರ್ತಿಸಿಕೊಂಡು ತಮ್ಮ ಅನುಕೂಲಕ್ಕೆ ತಕ್ಕಂತೆ ಚಿತ್ರ ರಚನೆಗೆ ಬಳಸಿಕೊಂಡಿದ್ದಾರೆ. ಈ ಪಾರದರ್ಶಕ ಕಾಗದಗಳನ್ನು ರೇಖಾಚಿತ್ರದಲ್ಲಿ ಕುಶಲ ಕಲಾವಿದರು ಹೆಚ್ಚು ಬಳಸಿಕೊಂಡು ಈ ಚಿತ್ರವೃತ್ತಿಯನ್ನು ಮಾಡುತ್ತಿದ್ದರು.

---

೨೮. ಎಸ್ ಎಂ. ಅಂಗಡಿ., ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ (ಅಪ್ರಕಟಿತ ಪಿಹೆಚ್.ಡಿ ಪ್ರಬಂಧ), ಪುಟ–೬೯–೭೦
೨೯. ಎಸ್. ಕೆ. ರಾಮಚಂದ್ರರಾವ್ : ಕರ್ನಾಟಕದ ಕಲೆಗಳು, ಸಂಪುಟ–೧, ಪುಟ–೪೦
೩೦. ಡಾ. ಶಿವರಾಮ ಕಾರಂತ : ಕರ್ನಾಟಕ ಚಿತ್ರಕಲೆ, ಪುಟ–೨೧

ರೇಖಾ ಚಿತ್ರಗಳು

ಗಂಜೀಫಾ ಚಿತ್ರಕಾರರು ಕಾರ್ಡಿನ ಮೇಲೆ ಯಾವುದೇ ಚಿತ್ರ ಬರೆಯುವ ಮೊದಲು ಆ ಚಿತ್ರದ ರೇಖಾಚಿತ್ರವನ್ನು ರಚಿಸಿಕೊಂಡು ಅದನ್ನು ಕಾರ್ಡಿನ ಮೇಲೆ ಇಟ್ಟು ಪ್ರತಿಕೃತಿಯನ್ನು ಮಾಡಿಕೊಳ್ಳುತ್ತಿದ್ದರು. ಈ ಕೆಲಸ ಮುಗಿದ ನಂತರ ಆ ರೇಖಾಚಿತ್ರವನ್ನು ಎಸೆಯುತ್ತಿರಲಿಲ್ಲ. ಅದೇ ಮೂಲ ರೇಖಾ ಚಿತ್ರವನ್ನು ಬಳಸಿಕೊಂಡು ಅದಕ್ಕೆ ಸಂಬಂಧಪಟ್ಟ ಆಟದ ಸೂಟ್‌ಗಳ ಚಿತ್ರಗಳನ್ನು ರಚನೆ ಮಾಡುತ್ತಿದ್ದರು. ಹೀಗಾಗಿ ಬಹುತೇಕ ಗಂಜೀಫಾ ಚಿತ್ರಗಳಲ್ಲಿ ಒಂದೇ ಚಿತ್ರವಿನ್ಯಾಸ ಹೊಂದಿದ ದೃಶ್ಯಗಳು ಬಹು ಸಂಖ್ಯೆಯಲ್ಲಿ ರಚನೆಗೊಂಡಿವೆ. ಒಂದು ದೃಶ್ಯದ ರೇಖಾಚಿತ್ರವನ್ನು ಸಶಕ್ತವಾಗಿ ನಿರ್ಮಿಸಿಕೊಂಡು ಸುರಕ್ಷಿತವಾಗಿ ಇಟ್ಟುಕೊಳ್ಳುತ್ತಿದ್ದರು. ಆ ಚಿತ್ರಗಳ ಆಟ ಹೆಚ್ಚಾದಂತೆ ರೇಖಾಚಿತ್ರಗಳನ್ನು ಬಳಸಿಕೊಂಡು ಬಹುಸಂಖ್ಯೆಯಲ್ಲಿ ಚಿತ್ರಗಳನ್ನು ತಯಾರಿಸುತ್ತಿದ್ದರು.

ಮೈಸೂರಿನ ಚಿತ್ರಕಲಾವಿದರ ಚಿತ್ರಗಳು ಸಹ ಒಂದೇ ರೀತಿಯಲ್ಲಿ ಪ್ರತಿಕೃತಿಗೊಂಡಿವೆ. ಈ ಕಲಾವಿದರು ಸಹಿತ ಮೊದಲು ರೇಖಾಚಿತ್ರಗಳನ್ನು ಸಿದ್ಧಪಡಿಸಿಕೊಂಡು ನಂತರ ಮೇಲೆ ಚಿತ್ರರಚನೆ ಮಾಡುತ್ತಿದ್ದರು. ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಸಂಗ್ರಹವಿರುವ ಕೆಲವು ಗಂಜೀಫಾ ಚಿತ್ರಗಳು ಈ ರೀತಿ ಪ್ರತಿಕೃತಿಗೊಂಡಿದ್ದನ್ನು ಗಮನಿಸಬಹುದು. ಆದರೆ ನಮ್ಮ ಸಂಪ್ರದಾಯದ ಚಿತ್ರಗಳಾದ ಕೃಷ್ಣ, ಯಶೋದೆ – ಕೃಷ್ಣ, ರಾಮ, ಲಕ್ಷ್ಮೀ, ಗಣಪತಿ ಹಾಗೂ ಕೆಲವು ವ್ಯಕ್ತಿಚಿತ್ರಗಳು ಬಹಳಷ್ಟು ಸಂಖ್ಯೆಯಲ್ಲಿ ಪ್ರತಿಕೃತಿಗೊಂಡಿವೆ.

ಇಂದು ಸಹಿತ ಗಂಜೀಫಾ ಚಿತ್ರದ ರಚನೆಯಲ್ಲಿ ತೊಡಗಿರುವ ಅನೇಕ ಕಲಾವಿದರು ಮೊದಲು ರೇಖಾಚಿತ್ರಗಳನ್ನು ಸಿದ್ಧಪಡಿಸಿಕೊಂಡು ನಂತರ ತಮಗೆ ಬೇಕಾದ ಆಕಾರದಲ್ಲಿ ಪರಿವರ್ತಿಸಿಕೊಂಡು ಚಿತ್ರರಚನೆ ಮಾಡುತ್ತಿರುವರು. ಈ ರಚನಾಪದ್ಧತಿಯಲ್ಲಿ ರೇಖಾಚಿತ್ರಗಳ ಮಹತ್ವ ಬಹಳವಿದೆ.

ಗಂಜೀಫಾ ಚಿತ್ರಕಲೆ ಸಿದ್ಧತೆ

ಸಾಮಾನ್ಯವಾಗಿ ರಾಜ–ಮಹಾರಾಜರು, ಶ್ರೀಮಂತಕುಟುಂಬದವರು ಮನೋರಂಜನೆಗಾಗಿ ಆಡುವ ಆಟ ಗಂಜೀಫಾ. ಇಲ್ಲಿ ಪ್ರತಿಯೊಬ್ಬರೂ ತಮ್ಮಲ್ಲಿರುವ ಎಲೆಗಳು ಹೆಚ್ಚು ಕಲಾತ್ಮಕವಾಗಿರಬೇಕೆಂದು ಬಯಸುತ್ತಿದ್ದರು. ಅರಸರ ಈ ಬಯಕೆ ಅನೇಕ ಗಂಜೀಫಾ ಕಾರ್ಡು ತಯಾರಿಸುವ ಕಲಾವಿದರಿಗೆ ಉಪಜೀವನದ ಮಾರ್ಗವನ್ನು ಕಲ್ಪಿಸಿಕೊಟ್ಟಿತು. ಜನಪದ ಕಲಾವಿದರಿಂದ ನಿರ್ಮಾಣವಾದ ಈ ಗಂಜೀಫಾ ಚಿತ್ರಾಂಕಿತ ಎಲೆಗಳು ಉನ್ನತವರ್ಗದವರು ಆಡುವ ಆಟದ ವಸ್ತುಗಳಾಗಿದ್ದವು.

ಗಂಜೀಫಾದ ಎಲೆಗಳನ್ನು ಆಯಾ ಪ್ರದೇಶದಲ್ಲಿ ಸಿಗುವ ವಸ್ತುಗಳ ಮೂಲಕ ತಯಾರಿಸಲಾಗುತ್ತಿದ್ದಿತು. ಕೈಯಿಂದ ತಯಾರಿಸಿದ ಕಾಗದ, ದಪ್ಪನೆಯ ಕಾರ್ಡುಗಳನ್ನು ಗಂಜಿಯಿಂದ ಅಥವಾ ಅಂಟಿನಂತಹ ದ್ರವಪದಾರ್ಥದಿಂದ ಒಂದರ ಮೇಲೊಂದು ಅಂಟಿಸಿ, ಸ್ವಲ್ಪ ದಪ್ಪವಾದ ನಂತರ ಅದರ ಮೇಲೆ ಶುಭ್ರವಾದ ಹಾಳೆಯನ್ನು ಲೇಪಿಸಿ, ಇನ್ನುಳಿದ ಭಾಗಗಳನ್ನು ದುಂಡಗೆ, ಆಯತ, ಚೌಕಾಕಾರ ಹೀಗೆ ತಮಗೆ ಬೇಕಾದ ರೀತಿಯಲ್ಲಿ ಕತ್ತರಿಸಿಕೊಳ್ಳುತ್ತಿದ್ದರು. ಬಟ್ಟೆಯದಾದರೆ, ತೆಳ್ಳನೆಯ ಬಟ್ಟೆಯನ್ನು ಒಂದರ ಮೇಲೊಂದು ಅಂಟಿಸಿ, ನಿರ್ದಿಷ್ಟವಾದ ಗಾತ್ರದ ಅಳತೆಯಲ್ಲಿ, ಮೇಲೆ ಹೇಳಿದ ಆಕಾರಗಳಲ್ಲಿ ಕತ್ತರಿಸಿ ತಯಾರಿಸಿಕೊಳ್ಳುತ್ತಿದ್ದರು. ಕೆಲವು ಸಂದರ್ಭದಲ್ಲಿ ಮರ್ಚ ಹಾಗೂ ಕಟ್ಟಿಗೆಯಿಂದ ತೆಳುವಾಗಿ ತಯಾರಿಸಿದ ಹಾಳೆಯ ಮೇಲೆಯೂ ಗಂಜೀಫಾ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಹೀಗೆ ತಯಾರಾದ ಕಾರ್ಡುಗಳು

ಸಾಮಾನ್ಯವಾಗಿ ಎರಡು ಅಂಗುಲವ್ಯಾಸದಿಂದ ಐದು ಅಂಗುಲ ವ್ಯಾಸದವರೆಗೆ ಇರುತ್ತಿದ್ದವು. ಕರ್ನಾಟಕದಲ್ಲಿ ಹೆಚ್ಚಾಗಿ ದುಂಡನೆಯ ಆಕಾರದ ಗಂಜೀಫಾ ಕಾರ್ಡುಗಳೇ ರಚನೆಯಾಗಿವೆ.

ಮೊದಲನೆಯ ಹಂತದಲ್ಲಿ ಗಂಜೀಫಾದ ಬಿಲ್ಲೆಗಳನ್ನು ಸಿದ್ಧಗೊಳಿಸಿಕೊಳ್ಳುತ್ತಾರೆ. ಎರಡನೆಯ ಹಂತದಲ್ಲಿ ಬಿಲ್ಲೆಗಳನ್ನು ಬೇಕಾದ ಗಾತ್ರಕ್ಕೆ ಕತ್ತರಿಸಿ, ವರ್ಣಲೇಪನ ಮಾಡಲು ಮೇಲ್ಗಡೆಯ ಭಾಗವನ್ನು ರೇಖಾಂಕನ ಮಾಡಿ, ತಮಗೆ ಬೇಕಾದ ವಿಷಯದ ರೇಖಾಚಿತ್ರಗಳನ್ನು ಬಿಡಿಸುವರು. ಒಂದು ರೀತಿಯಲ್ಲಿ ಇದು ಸ್ಕೆಚ್‌ನ ಕಚ್ಚಾ ಮಾದರಿ. ಮೂರನೆಯ ಹಂತದಲ್ಲಿ ವರ್ಣಗಾರಿಕೆ. ಅಂದರೆ ತಮಗೆ ಬೇಕಾದ ವರ್ಣಗಳನ್ನು ಆಯ್ದುಕೊಂಡು, ಕೆಲವು ಸಲ ಸಮ್ಮಿಶ್ರಣ ಮಾಡಿ, ವಿವಿಧ ಬಗೆಯ ವರ್ಣಗಳನ್ನು ಸಿದ್ಧಪಡಿಸಿಕೊಂಡು, ಕುಂಚದ ಸಹಾಯದಿಂದ ವರ್ಣಲೇಪನ ಮಾಡುತ್ತಾರೆ. 049305

ಈ ವರ್ಣಚಿತ್ರಗಳಿಗೆ ಬಳಸುವ ಕಪ್ಪು, ಕಂದು, ಬಿಳಿ, ಹಳದಿ ಮೊದಲಾದ ವರ್ಣಗಳನ್ನು ಕಲಾವಿದರೇ ತಯಾರಿಸಿಕೊಳ್ಳುತ್ತಿದ್ದರು. ಬೇರೆ ಬೇರೆ ಬಣ್ಣದ ಮಣ್ಣು, ವಿವಿಧ ಗಿಡ–ಸಸ್ಯಾವಳಿಗಳ ರಸ, ಗುಲಗಂಜಿ, ಕಾಯಿ, ಬೀಜ ಮುಂತಾದ ನೈಸರ್ಗಿಕ ವಸ್ತುಗಳಿಂದ ಈ ಬಣ್ಣಗಳನ್ನು ತಯಾರಿಸುತ್ತಿದ್ದರು. ಕೆಲವು ಸಲ ಬಂಗಾರ, ಬೆಳ್ಳಿಗಳನ್ನು ಚಿತ್ರಕ್ಕಾಗಿ ಉಪಯೋಗಿಸುತ್ತಿದ್ದರು. ಬಣ್ಣ ಸರಿಯಾಗಿ ಕೂಡಿಕೊಳ್ಳಲು ಅಂಟವಳಕಾಯಿಯ ರಸ, ಮೇಣ, ಕೋಳಿಯ ತತ್ತಿ ಹೀಗೆ ಬೇರೆ ವಸ್ತುಗಳನ್ನು ಉಪಯೋಗಿಸಿಕೊಳ್ಳುತ್ತಿದ್ದರು.

ಗಂಜೀಫಾ ಕಾರ್ಡುಗಳ ಒಂದು ಬದಿಯನ್ನು ಕೆಂಪು ಹುರಮಂಜಿನಿಂದ ಬಳಿದರೆ, ಇನ್ನೊಂದು ಬದಿಯಲ್ಲಿ ಚಿತ್ರಗಳನ್ನು ಬಿಡಿಸುತ್ತಿದ್ದರು. ಕುಶಲಕಲೆಗಾರರಾದ ಚಿತ್ರಗಾರರು ಕೇವಲ ಎಲೆಯ ಮೇಲೆ ಚಿತ್ರ ತೆಗೆಯುವುದಲ್ಲದೆ, ಆ ಎಲೆಗಳನ್ನಿಡಲು ಉತ್ಕೃಷ್ಟ ಕಟ್ಟಿಗೆಯ ಪೆಟ್ಟಿಗೆಯನ್ನೂ ನಿರ್ಮಿಸುತ್ತಿದ್ದರು.[೩೧] ಅವರು ದಶಾವತಾರ, ರಾಮಾಯಣ ಮುಂತಾದ ಕಥಾನಕಗಳನ್ನು ಬಲ್ಲವರಾಗಿದ್ದರು. ಅಂಥವರು ಮಾತ್ರ ಈ ಚಿತ್ರಗಳನ್ನು ತೆಗೆಯುತ್ತಿದ್ದರು. ಶ್ರದ್ಧೆ, ಭಯ, ಭಕ್ತಿ, ಕಲಾಕೌಶಲಗಳೆಲ್ಲ ಈ ಚಿತ್ರರಚನೆಯ ಹಿಂದೆ ಕೆಲಸ ಮಾಡುತ್ತಿದ್ದವೆಂಬುದನ್ನು ಗಮನಿಸಬೇಕು. ಹೀಗಾಗಿ ಗಂಜೀಫಾ ತಯಾರಿಸುವವರು ಅದು ದೇವರಾಟವೆಂಬ ಭಾವನೆ ತಾಳುವಂತಾಯಿತು.

ದಕ್ಷಿಣಭಾರತಕ್ಕೆ ಬಂದಂತೆ ಗಂಜೀಫಾ ಎಲೆಗಳ ಬಣ್ಣದಲ್ಲಿ ಕಂದುಮಿಶ್ರಿತ ಕಡುವರ್ಣ ಹೆಚ್ಚಾಗುವುದನ್ನು ಕಾಣುತ್ತವೆ. ಮೈಸೂರಿನ ಚದ್‌ಗಳಲ್ಲಿ ಈ ಸಿದ್ಧತೆ ಹೆಚ್ಚು. ಉತ್ತರ ಭಾರತದ ಕಲಮ್‌ಗಳು ಹೆಚ್ಚು ವರ್ಣಮಯ ಹಾಗೂ ಪ್ರಕಾಶದಿಂದ ಕೂಡಿರುವುದಕ್ಕೆ ಇತಿಹಾಸದಲ್ಲಿ ಅಲ್ಲಿ ಆಗಿರುವ ಹೋರಾಟಗಳೇ ಕಾರಣವಾಗಿರಬಹುದು. ದಖ್ಖನ್ ಪೀಠಭೂಮಿಯ ಕರಿಮಣ್ಣು ಇಲ್ಲಿಯ ಗಂಜೀಫಾಗಳಲ್ಲಿ ಒಡಮೂಡಿದೆ.

ಕಾಶ್ಮೀರದ ನಿಸರ್ಗ ಸೊಗಸು, ಹಸಿರು ಹೂ ಬಳ್ಳಿ ಅಲ್ಲಿಯ ಗಂಜೀಫಾಗಳಲ್ಲಿ ಒಡಮೂಡಿದರೆ, ರಾಜಸ್ಥಾನದ ಗಂಜೀಫಾಗಳು ಅಲ್ಲಿಯ ಉಡುಪು, ಉಸುಕುಗಳ ಪ್ರಭಾವವನ್ನು ವರ್ಣರಂಜಿತವಾಗಿ ತೋರಿಸುತ್ತವೆ. ಗಂಜೀಫಾ ಎಲೆಗಳ ಚಿತ್ರರಚನೆಯಲ್ಲಿ ಮೋಘಲ್‌ಕಾಲಕ್ಕೆ ಹಲವು ಹೊಸ ಪ್ರಯೋಗಗಳಾದವು. ಅದುವರೆಗೆ ಹಿಂದೂ ದೇವ – ದೇವತೆಗಳ ಚಿತ್ರಗಳಿದ್ದ ಕಡೆ ಈಗ ಸೈನ್ಯ, ಆಯುಧ, ವಾಹನ, ಪಶು, ಪಕ್ಷಿಗಳೂ ಚಿತ್ರಿತವಾಗಿ ಹೊಸ ಹೊಸ ಆಟಗಳು ಬೆಳೆದವು. ಅರಸರ, ಋಷಿಗಳ ದ್ಯೋತಕವಾಗಿ ನಗ್ನಸುಂದರಿಯರ ಚಿತ್ರಗಳು ಸಹ ಈ ಎಲೆಗಳಲ್ಲಿ ಮೂಡಿ ಬಂದವು. ಚಿತ್ರರಚನಾ ಕಾರ್ಯಕ್ಕೆ ಹೆಚ್ಚಿನ ಪ್ರಾಧಾನ್ಯ ಬರಲಿಕ್ಕೆ ಇದೂ ಒಂದು ಕಾರಣವಿರಬಹುದು.

ಅದುವರೆಗೆ ಕೇವಲ ದುಂಡು ಆಕಾರದಲ್ಲಿದ್ದ ಗಂಜೀಫಾ ಎಲೆಗಳು ಚೌಕ, ಆಯತ, ಅಂಡಾಕಾರದಲ್ಲೂ

---

೩೧. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೧೫೯–೧೬೦

ಬಂದವು. ಎಲೆಗಳ ಕಟ್ಟನ್ನು ಜೋಪಾನವಾಗಿ ರಕ್ಷಿಸಿಡುವಂತೆ ಸುಂದರ, ಆಕರ್ಷಕ ಪೆಟ್ಟಿಗೆಗಳನ್ನೂ ತಯಾರಿಸಿ, ಆ ಪೆಟ್ಟಿಗೆಗಳ ಮೇಲೂ ಚಿತ್ರರಚನೆ ಮಾಡಿದ್ದರು. ಮೊಘಲ್ ಗಂಜೀಫಾ, ಆಂಧ್ರ ಪ್ರದೇಶದ ನಿರ್ಮಲನಲ್ಲಿದ್ದ ಗಂಜೀಫಾಗಳು ಸುಮಾರು ೧೮೫೦ರಲ್ಲಿ ಕಾಗದದಲ್ಲಿ ತಯಾರಿಸಿ, ಬಣ್ಣ ಮತ್ತು ಅರಗಿನ ಲೇಪದೊಡನೆ ತಯಾರಿಸಿದೆ. ಹಸಿರು, ಬಿಳಿಬಣ್ಣ, ಸಹಿತ ಕೆಂಪು ಅಂಚಿನ ಗೆರೆಗಳು ಮತ್ತು ಪುಷ್ಪಾ ಕೃತಿಯ ಅಲಂಕಾರ ಇವುಗಳ ಮಧ್ಯದಲ್ಲಿದೆ. ಇದರ ಸುತ್ತಳತೆ ೫.೩ ಮಿ.ಮೀಟರ್‌ನಲ್ಲಿ ಕಂಡು ಬರುತ್ತದೆ.

ಹದಿನೆಂಟನೆಯ ಶತಮಾನದಲ್ಲಿ ನಿರ್ಮಲ್ ಆಟದ ಎಲೆಗಳ ತಯಾರಿಕೆ ಕೇಂದ್ರದ ಚಿತ್ರಗಾರರು ಬಡಗಿಗಳಾಗಿದ್ದು, ನಕ್ಷ ಎಂದು ಕರೆಯಲ್ಪಟ್ಟ ಚಿತ್ರಿತ ಬರಹಗಳ ಎಲೆಗಳನ್ನು ತಯಾರಿಸಿದ್ದರು. ಇದು ೯೬ ಎಲೆಗಳ ಸೆಟ್ಟನ್ನು ಹೊಂದಿದೆ. ನಿರ್ಮಲ್ ಎಲೆಗಳಲ್ಲಿ ಧಾರಾಳವಾಗಿ ಚಿನ್ನದ ರಂಗನ್ನು ಉಪಯೋಗಿಸಿದ್ದಾರೆ. ಪ್ರಾಣಿಗಳು, ಪಶು-ಪಕ್ಷಿಗಳಿಗೆಲ್ಲ ಯಥೇಚ್ಛವಾಗಿ ಚಿನ್ನದ ಬಣ್ಣವನ್ನು ಉಪಯೋಗಿಸಿದ್ದಾರೆ.

ಕಿತ್ತಳೆ ಹಾಗೂ ಕೆಂಪು ವರ್ಣದ ೪೭ ಮಿ. ಮಿ. ಸುತ್ತಳತೆಯ ೧೨೦ ಎಲೆಗಳಲ್ಲಿ ಪ್ರಾಣಿ ಹಾಗೂ ಪಶುಪಕ್ಷಿಗಳನ್ನು ಚಿತ್ರಿಸಲಾಗಿದೆ.

೦೧. ತಾಜ್, ತೆಳು, ಕಂದು ಬಣ್ಣದ ಬಿಳಿ ಪಾಳಿವಾಳಗಳು.

೦೨. ಸಫೇದ, ಕಪ್ಪು, ಬಿಳಿ ತಟ್ಟೆ, ಹಂಸಗಳು

೦೩. ಷಂಷೇರ ಕ್ರಿಂಸನ್ (ಕಡುಗೆಂಪು) ಖಡ್ಗಗಳು

೦೪. ಗುಲಾಮ್, ಚಿನ್ನ ಮಾನವರ ಒಂದು ಅಥವಾ ಎರಡು ಸಾಲು

೦೫. ಚಾಂಗ್, ಕಡುಹಸಿರು, ಹಾರ್ಪ್, ಮಯೂರಗಳು

೦೬. ಸುರ್ಕ್ಯಾ, ಕೆಂಪು, ಚಿನ್ನ ತಟ್ಟೆ (ದುಂಡು ವಸ್ತು) ಹಸಿರು

೦೭. ಬರಾತ್, ಕಡುಕೆಂಪು, ದೀರ್ಘ ಚತುರಸ್ರ ಮೀನು

೦೮. ಕಿಮಾಷ್, ಅಲಿವ್ ವೃಕ್ಷ, ಹಸಿರು, ಅಂಡಾಕಾರ, ಅಳಿಲುಗಳು

೦೯. ಅಶ್ವ, ಕೆಂಪು, ಚಿನ್ನದ ಪುಷ್ಪ

೧೦. ವರಹ, ಚಿನ್ನದ ಬಣ್ಣ

ಗಂಜೀಫಾ ಕಲಾಕೃತಿಗಳನ್ನು ಚಿತ್ರಿಸುವ ಕಲಾವಿದರು ವಿಷ್ಣುವಿನ ದಶಾವತಾರ ಪ್ರಸಂಗಗಳು, ಮಹಾಭಾರತ, ಭಾಗವತ, ರಾಮಾಯಣ, ನವಗ್ರಹಗಳು, ರಾಶಿಗಳು ಮೊದಲಾದ ಧಾರ್ಮಿಕ ಗ್ರಂಥಗಳಲ್ಲಿ ಅಡಕವಾದ ಕಥಾ ಪ್ರಸಂಗಗಳು ಮೊದಲಾದವುಗಳನ್ನು ತಿಳಿದುಕೊಂಡಿರುವುದು ಅಗತ್ಯವಾಗಿತ್ತು. ಏಕೆಂದರೆ ಗಂಜೀಫಾ ಆಟಗಳಲ್ಲಿ ದಶಾವತಾರ, ನವಗ್ರಹ, ಚಾಮುಂಡೇಶ್ವರಿ, ರಾಶಿಕೂಟ, ಪಂಚ ಪಾಂಡವರು, ಜಗನ್ಮೋಹಿನಿ, ನವೀನ ದಶಾವತಾರ ಮುಂತಾದ ಆಟಗಳು ಬೇರೆ ಬೇರೆ ತೆರನಾಗಿದ್ದು ನವೀನ ರಾಮಾಯಣ, ಜಗನ್ಮೋಹಿನಿ, ಚಾಮುಂಡೇಶ್ವರಿ, ಗಂಜೀಫಾ ಆಟಗಳನ್ನು ಮೈಸೂರಿನ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರೇ ರಚಿಸಿದರೆಂದು ಪ್ರತೀತಿಯಿದೆ.

ಗಂಜೀಫಾ ಕಲಾಕೃತಿಗಳು ಕೇವಲ ಧಾರ್ಮಿಕ ವಸ್ತುಗಳಿಗೆ ಮಾತ್ರ ಸೀಮಿತವಾಗಿರದೇ ಇನ್ನಿತರ ವಸ್ತುಗಳಿಂದಲೂ ಸಮಾವೇಶಗೊಂಡಿವೆ. ದೇವರು ಧರ್ಮಗಳನ್ನು ಹೊರತುಪಡಿಸಿ ಗಿಡ, ಮರ, ಬಳ್ಳಿಗಳು, ಪಶು, ಪಕ್ಷಿಗಳು, ಬಿಲ್ಲು, ಬಾಣಗಳು, ಕತ್ತಿ, ಕೊಡಲಿಗಳು, ಧ್ವಜ, ಕತ್ತರಿ, ಮೀನು, ಸಿಂಹ ಮೊದಲಾದ ವಸ್ತುಗಳನ್ನು ಆಯಾ ಆಟಗಳಿಗೆ ತಕ್ಕಂತೆ ಹೊಂದಿಕೆಯಾಗುವಂತೆ ಚಿತ್ರಿಸಿರುವುದನ್ನು ಕಾಣಬಹುದು. ವೃತ್ತಾಕಾರದ ಎಲೆಯ ಮಧ್ಯದಲ್ಲೊಂದು ವೃತ್ತವನ್ನು ಅದರ ಹೊರಭಾಗದಲ್ಲಿ ಪರಿಘಕ್ಕೆ ಸಮಾನಾಂತರದಲ್ಲಿ ಮತ್ತೊಂದು ವೃತ್ತವನ್ನು ರಚಿಸಿ ಮಧ್ಯದ ವೃತ್ತದಲ್ಲಿ ನಕ್ಷೆಗಳನ್ನು ಚಿತ್ರಿಸಿ ಎಲೆಯ ಅಂದವನ್ನು ಹೆಚ್ಚಿಸಿದ್ದಾರೆ.

ಗಂಜೀಫಾ ಚಿತ್ರಕಲೆ ನಿಸರ್ಗಕ್ಕೆ ಅತ್ಯಂತ ಹತ್ತಿರವಾದುದು. ಅದು ಭಾರತೀಯ ಮೂಲ ಎಂಬುದಕ್ಕೆ ಒಂದು ಮುಖ್ಯ ಕಾರಣ ಜಲವರ್ಣ ಮತ್ತು ರೇಖಾವಿನ್ಯಾಸ. ವನಸ್ಪತಿಗಳಿಂದಲೇ ಬಣ್ಣಗಳನ್ನು ಸಿದ್ಧಪಡಿಸಿ, ಅತ್ಯಂತ ನೈಸರ್ಗಿಕ ರೀತಿಯಲ್ಲಿ ಅವುಗಳ ಮಿಶ್ರಣ ಮಾಡಿ ಕಲಾವಿದರು ತಾವೇ ತಯಾರಿಸಿದ (ಅಳಿಲು, ಉಡ, ಒಂಟೆಗಳ) ಕೂದಲಿನ ಕುಂಚವನ್ನು ಉಪಯೋಗಿಸಿ ಚಿತ್ರಬಿಡಿಸಿದ್ದಾರೆ. ಅಳಲೆಕಾಯಿ, ದಾಳಿಂಬೆ ಹಣ್ಣಿನ ಸಿಪ್ಪೆ, ಹುಣಸೆಬೀಜ, ಅರಿಷಿಣ, ಶ್ರೀಗಂಧ, ಹೂವುಗಳು, ಎಲೆಗಳು, ತೊಗಟೆಗಳು, ಬೇರುಗಳು ಇವುಗಳಿಂದ ತಯಾರಿಸಿದ ಬಣ್ಣ ಸಾವಿರಾರು ವರ್ಷವಾದರೂ ಕೆಡುವುದಿಲ್ಲವೆಂಬುದಕ್ಕೆ ಈಗಿನ ಹಳೆಯ ಗಂಜೀಫಾಗಳೇ ಸಾಕ್ಷಿ.

ಮೈಸೂರು ಗಂಜೀಫಾಗಳಲ್ಲಿ ಈ ಬಣ್ಣಗಳ ಮಿಶ್ರಣವನ್ನು ಅಚ್ಚ ಕನ್ನಡದಲ್ಲಿ ಹೇಳುವ ಕಲಾವಿದರು ಈಗಲೂ ಇದ್ದಾರೆ. ಶ್ರೀತತ್ವ ನಿಧಿಯಲ್ಲಿ ಹೇಳಿದಂಥ ಬಣ್ಣಗಳ ಹೆಸರುಗಳು :

೦೧. ಚಿಂನದ ಬಂಣ	೦೨. ಯಿಂಗಲೀಕದ ಬಂಣ
೦೩. ಜಂಗಾಲು ಬಂಣ	೦೪. ಪಿಸ್ತಾ ಬಂಣ
೦೫. ಸಂಪಿಗೆ ಬಂಣ	೦೬. ಚಂದ್ರ ಬಂಣ
೦೭. ಗುಲಡಾ ಬಂಣ	೦೮. ಕಪ್ಪು ಪಚ್ಚೆ ಬಂಣ
೦೯. ನೀಲ ಬಂಣ	೧೦. ವರ್ತಿಕ ಬಂಣ

ಗಂಜೀಫಾದ ಚಿತ್ರರಚನೆಯಾದ ಬಳಿಕ ಅದಕ್ಕೆ ಮೆರಗೆಣ್ಣೆ (ಗಚ್ಚಿ ಎಣ್ಣೆ) ಬಳಿದು ಹೊಳೆಯುವಂತೆ ಮಾಡಲಾಗುತ್ತದೆ. ಇದು ಗಂಜೀಫಾದ ರಕ್ಷಣೆಗೆ ಮಾತ್ರವಲ್ಲ, ಆಟ ಆಡುವವರಿಗೆ ಅದು ಸರಿಯಾಗಿ ಜಾರುವ ಹಾಗೆ ಮಾಡುವ ಕ್ರಮವಾಗಿದೆ. ಆಂಧ್ರದಲ್ಲಿ ಗಂಜೀಫಾಗೆ ಹೀಗೆ 'ತಗರರ'[೩೩] ಎಂಬ ಹೊಳಪು ಕೊಡುವ ಕ್ರಮವಿದೆ. ಅದರಿಂದ ಚಿನ್ನದ ಲೇಪ ಕೊಟ್ಟಂತೆ ಮಿನುಗುತ್ತದೆ.

ಯಾವುದೇ ರೀತಿಯ ಚಿತ್ರಕಲೆಯ ರಚನಾವಿಧಾನವು ಆಯಾ ಪರಿಕರಗಳ ಹಾಗೂ ಕಲಾವಿದರ ಮೇಲೆ ಅವಲಂಬಿತವಾಗಿರುತ್ತದೆ. ಭಿತ್ತಿ, ಕಾಗದ, ಕಟ್ಟಿಗೆ, ಲೋಹ ಹಾಗೂ ಕ್ಯಾನ್ವಾಸಗಳಂತಹ ಫಲಕಗಳ ಮೇಲೆ ಚಿತ್ರ ಬರೆಯುವ ವಿಧಾನ ಒಂದೇಯಾಗಿದ್ದರೂ ಬಳಸುವ ರೀತಿ–ನೀತಿಗಳು ಹಾಗೂ ಕಲಾವಿದರ ಕಲ್ಪನೆಯಲ್ಲಿ ವೈವಿಧ್ಯಗಳು ಕಂಡು ಬರುತ್ತವೆ. ಅದೇ ಗಂಜೀಫಾದಂತಹ ಫಲಕದ ಮೇಲೆ ಚಿತ್ರ

---

೩೨. R and N. Y. Leyden : The Playing Cards of India, PP-25

೩೩. ಎಸ್. ಕೆ. ರಾಮಚಂದ್ರರಾವ್., ಶ್ರೀತತ್ವನಿಧಿ ಸಂಪುಟ–೧, ಪು–೫೨

ಬರೆಯುವ ಪರಿಕರಗಳು ಹಾಗೂ ರಚನಾ ಕ್ರಮಗಳು ವಿಭಿನ್ನವಾಗಿರುವುದನ್ನು ನೋಡಬಹುದು. ಇಲ್ಲಿ ಗಂಜೀಫಾ ೫ ಇಂಚು ವೃತ್ತಾಕಾರದ ಕಾರ್ಡನಲ್ಲಿ ಕಲಾಕಾರ ಒಂದೇ ಮೈಪಾತಳಿಯನ್ನು ಬಳಸಿಕೊಂಡು, ಅದಕ್ಕೆ ಹೊಂದಾಣಿಕೆಯಾಗುವಂತಹ ಪರಿಕರಗಳನ್ನು ಬಳಸಿ, ವೈವಿಧ್ಯಮಯ ಬಣ್ಣಗಳನ್ನು ಸಂಯೋಜಿಸಿ ಆ ಕೃತಿಯನ್ನು ರಚಿಸಿದ್ದಾನೆ.

❖❖❖❖



ಅಧ್ಯಾಯ - ನಾಲ್ಕು
ಗಂಜೀಫಾ ಆಟದ ನೀತಿ ನಿಯಮಗಳು

ಆಧ್ಯಾತ್ಮಿಕ ಬಲವಿದ್ದ, ದಾರ್ಶನಿಕ ಭಾವದ ಕವಿ, ಡಿ.ವಿ.ಜಿಯವರು ತಮ್ಮ ಪ್ರಸಿದ್ದ "ಮಂಕುತಿಮ್ಮ ಕಗ್ಗ"ದಲ್ಲಿ ಜೀವನವನ್ನೇ ಗಂಜೀಫಾದ ಅಟದೊಂದಿಗೆ ಹೋಲಿಸಿ ಏಳು ಪದ್ಯಗಳನ್ನು ತಾತ್ವಿಕ ದರ್ಶನ ಮಾಡುವಂತೆ ರಚಿಸಿದ್ದಾರೆ.

ಜೀವಿಸಂಘವಿದೇನು? ಗಂಜೀಫೆ ನೆಲೆಕಟ್ಟು ।
ದೈವ ಪೌರುಷ ಪೂರ್ವವಾಸನೆಗಳೆಂಬಾ ॥
ಮೂವರದನಾಡುವರು, ಚದರಿಸುತೆ, ಬೆರಸಿಡುತೆ ।
ನಾವೆಲ್ಲರಾಟದೆಲೆ - ಮಂಕುತಿಮ್ಮ ॥[೧]

ಪ್ರಪಂಚದ ಜೀವನವನ್ನು ಒಂದು ಗಂಜೀಫನ (ಇಸ್ಪೇಟ್‌ನ) ಆಟಕ್ಕೆ ಹೋಲಿಸಿದ್ದಾರೆ. ಈ ಜೀವನವೇ ಒಂದು ಇಸ್ಪೇಟ್ ಎಲೆಗಳ ಕಟ್ಟು. ಈ ಇಸ್ಪೇಟ್ ಆಟವನ್ನಾಡುವವರು, ದೈವ ಪೌರುಷ ಮತ್ತು ಪೂರ್ವಜನ್ಮದ ವಾಸನೆಗಳು. ಈ ಮೂರು ಆಟದ ಎಲೆಗಳನ್ನು ಚದುರಿಸಿ, ಬೆರಸಿ ಆಟವಾಡುತ್ತಾರೆ. ನಾವುಗಳೇ ಆ ಆಟದ ಎಲೆಗಳು, ಅವರು ಹೇಗೆ ಆಡುತ್ತಾರೋ ನಾವು ಹೇಗೆ ಆಡಲ್ಪಡುತ್ತೇವೆ.

ಎಲೆಕಟ್ಟನಾಗಾಗ ಕಲಿಸಿಕೊಡುವುದೆ ಸೃಷ್ಟಿ ।
ಬಳಿಕೆಲೆಯ ಗತಿಯಂತೋ ಎಲ್ಲಿ ಸೇರುವುದೋ ! ॥
ಬಳಸುತಿಹುದೊಂದೊಂದು, ಮುಂದೊಂದು ದಿಕ್ಕಿನಲ್ಲಿ ।
ಅತಿಯುವೆವು ನಾವಂತು- ಮಂಕುತಿಮ್ಮ ॥[೨]

ಆಗಾಗ ಈ ಇಸ್ಪೇಟಿನ ಎಲೆಗಳ ಕಟ್ಟನ್ನು ಸೃಷ್ಟಿ ಕಲಿಸಿಕೊಡುತ್ತದೆ. ಆನಂತರ ಆ ಎಲೆಗಳು ಎಲ್ಲಿ ಹೋಗುತ್ತಿವೆಯೋ, ಯಾರಕ್ಕೈ ಸೇರುತ್ತವೆಯೋ, ಯಾರಿಗೆ ಗೊತ್ತು? ಒಂದೊಂದು ಎಲೆಯನ್ನು ಒಂದೊಂದು

---

೦೧. ಲೇಖಕ ಡಿ.ವಿ.ಜಿ. : ಮಂಕುತಿಮ್ಮನ ಕಗ್ಗ (ತಾತ್ಪರ್ಯ), ಪುಟ ೧೧೧.
೦೨. ಲೇಖಕ ಡಿ.ವಿ.ಜಿ. : ಮಂಕುತಿಮ್ಮನ ಕಗ್ಗ (ತಾತ್ಪರ್ಯ), ಪುಟ ೧೧೩.

ಒಂದೊಂದು ದಿಕ್ಕಿನಲ್ಲಿ ಅದು ಉಪಯೋಗಿಸಿಕೊಳ್ಳುತ್ತದೆ. ನಾವೆಲ್ಲರೂ ಆ ಎಲೆಗಳಾದ್ದರಿಂದ ಆ ಬಳಸುವಿಕೆಗೆ ಸರಿಯಾಗಿ, ಈ ಪ್ರಪಂಚದಲ್ಲಿ ಅಲೆದಾಡುತ್ತೇವೆ.

ನಿಲದೆ ನಡೆವುದು ಮೊದಲು ಕೊನೆಯಲ್ಲದೀಯಾಟ ।
ಕಳೆವುವದರಲಿ ನಮ್ಮ ಜನುಮಜನುಮಗಳು ॥
ಗೆಲವಾರ್ಗೊ! ಸೋಲಾರ್ಗೊ! ಲೆಕ್ಕ ನೋಡುವುದೆಂದೊ! ।
ಫಲವು ಬರಿಯಾಟವೆಲೊ – ಮಂಕುತಿಮ್ಮ ॥[೩]

ಈ ರೀತಿಯಾಗಿ ಜಗತ್ತಿನ ಆಟ ಮೊದಲು ಕೊನೆಯಿಲ್ಲದೆ ನಡೆಯುತ್ತಲೇ ಇರುತ್ತದೆ. ಈ ಆಟದಲ್ಲಿ ನಮ್ಮ ಹಲವಾರು ಜನ್ಮಗಳು ಕಳೆದುಹೋಗುತ್ತವೆ. ಇದರಲ್ಲಿ ಗೆದ್ದವರು ಯಾರು? ಸೋತವರು ಯಾರು? ಎಂದು ಲೆಕ್ಕ ನೋಡುವುದು ಯಾವಾಗಲೋ ಏನೋ? ಕೇವಲ ಆಟ ಆಡಿದ್ದೇ ಲಾಭ.

ಆಟಕ್ಕೆ ಫಲವೇನು? ಕೌತುಕದ ರುಚಿಯೆ ಫಲ ।
ಚೀಟಿ ತಾಂ ಬೀಳನೆನಲ್ ಆಟ ಸಾಗುವುದೆ? ॥
ಏಟಾಯ್ತೆ ಗೆಲುವಾಯ್ತೆಯೆಂದು ಕೇಳುವುದೇನು? ।
ಆಟದೋಟವೆ ಲಾಭ – ಮಂಕುತಿಮ್ಮ ॥[೪]

ನಿರಂತರವಾಗಿ ನಡೆಯುತ್ತಿರುವ ಈ ಆಟಕ್ಕೆ ಫಲ ಏನು? ಕುತೂಹಲದಿಂದ (ಕೌತುಕದ) ಈ ಆಟವನ್ನು ಆಡುತ್ತೇವಲ್ಲ? ಅದೇ ಆದರ ಫಲ. ಎಲೆ ಬೀಳದಿದ್ದರೆ ಆಟ ಮುಂದುವರಿಯಲಾರದು. ಆಟ ಆಡುವಾಗ ಪೆಟ್ಟು ತಿಂದೆಯೇನು? ಅಥವಾ ಗೆದ್ದೆಯೇನು? ಎಂದು ಕೇಳುವುದು ಏಕೆ? ಆಟ ನಡೆಯುತ್ತಿದೆಯಲ್ಲಾ, ಅದೇ ನಮಗೆ ಲಾಭ.

ಸತ್ಯ ಶಿವ ಸುಂದರರದ ಸಚ್ಚಿದಾನಂದನದ ।
ಭಿತ್ತಿಯಲ್ಲಿ ಬಣ್ಣ ಬಣ್ಣದ ಜೀವಚಿತ್ರ ॥
ನಿತ್ಯ ನೀನದ ನೆನದು ಚಿತ್ರದಲ್ಲಿ ಮನವಿರಿಸೆ ।
ವೃತ್ತಿ ತನ್ಮಯವಹುದೋ– ಮಂಕುತಿಮ್ಮ ॥

ಸತ್ ಚಿತ್ ಮತ್ತು ಆನಂದ ಇವು ಪರಮಾತ್ಮನ ನಿಜ ಸ್ವರೂಪ ಮತ್ತು ನಮ್ಮದೂ ಹೌದು. ಇದೇ ಸತ್ಯ, ಶಿವ ಮತ್ತು ಸುಂದರ. ಇವುಗಳನ್ನು ಪರಮಾತ್ಮನು ತಾನು ಸೃಷ್ಟಿಸಿರುವ ಈ ಪ್ರಪಂಚವೆಂಬ ಚಿತ್ರಪಟದಲ್ಲಿರಿಸಿದ್ದಾನೆ. ಅದರಲ್ಲಿ ವಿಧ ವಿಧವಾದ ಬಣ್ಣಗಳಿವೆ. ನೀನು ಪ್ರತಿನಿತ್ಯವೂ ಇದು ಅವನು ನಿರ್ಮಿಸಿದ ಲೋಕವೆಂದು ತಿಳಿದು ಅದರಲ್ಲಿ ನಿನ್ನ ಮನಸ್ಸನ್ನಿಟ್ಟರೆ ನೀನು ಮಾಡುವ ಕಾರ್ಯ ಅವನನ್ನು ಸೇರುತ್ತದೆ.[೩]

ಸತ್ಯವೆಂಬುದುದೆಲ್ಲಿ? ನಿನ್ನಂತರಂಗದೊಳೊ ।
ಸುತ್ತ ನೀನನುಭವಿಪ ಬಾಹ್ಯ ಚಿತ್ರದೊಳೋ ॥
ಯುಕ್ತಿಯಿಂದೊಂದನೊಂದರೆ ತೊಡಿಸಿ ಸರಿನೋಡೆ ।
ತತ್ವದರ್ಶನವಹುದು – ಮಂಕುತಿಮ್ಮ ॥[೫]

ನಿಜವೆನ್ನುವುದು ನಿನ್ನಂತರಂಗದಲ್ಲಿಯೋ? ಅಥವಾ ನಿನ್ನ ಸುತ್ತಮುತ್ತ ನೀನನುಭವಿಸುವ ಬಾಹ್ಯ ಪ್ರಪಂಚದಲ್ಲಿದೆಯೋ? ನಿನ್ನ ಬುದ್ಧಿಶಕ್ತಿಯನ್ನು ಪ್ರಯೋಗಿಸಿ ನೀನು ನಿನ್ನಂತರಂಗದ ಸತ್ಯವನ್ನು ಬಾಹ್ಯ ಪ್ರಪಂಚಕ್ಕೆ ಓದಿಸಿ ನೋಡಿದರೆ ತತ್ವದ ದರ್ಶನವಾಗುತ್ತದೆ.

---

೦೩. ಡಿ.ವಿ.ಜಿ. : ಮಂಕುತಿಮ್ಮನ ಕಗ್ಗ (ತಾತ್ಪರ್ಯ), ಪುಟ ೧೧೩.

೦೪. ಡಿ.ವಿ.ಜಿ.ಯವರ : ಮಂಕುತಿಮ್ಮನ ಕಗ್ಗ (ತಾತ್ಪರ್ಯ), ಪುಟ ೧೧೩

೦೫. ಅದೇ.

ಸತ್ಯಾನುಭವವೆಲ್ಲ ಲಿಂಗಮೊಂದೆಂತಹುದು? ।
ಬೆಟ್ಟದಡಿಯೊಳಗೊಬ್ಬ, ಕೋಡಬಳಿಯೊಬ್ಬ ॥
ಎತ್ತರದ ದೃಶ್ಯ ಕಣಿವೆಯೊಳಿಹನಿಗಾದೀತೆ ।
ನೇತ್ರದಂದದೆ ನೋಟ– ಮಂಕುತಿಮ್ಮ ॥[೬]

ಅವರವರನುಭವಗಳಿಗೆ ತಕ್ಕಂತೆ ಸತ್ಯದ ಅನುಭವ ಉಂಟಾಗುತ್ತದೆ. ಎಲ್ಲರಿಗೂ ಅದು ಒಂದೇ ರೀತಿಯಲ್ಲಿ ಆಗುವುದಿಲ್ಲ. ಒಬ್ಬ ಮನುಷ್ಯ ಬೆಟ್ಟದ ತುತ್ತತುದಿಯಲ್ಲಿ ನಿಂತುಕೊಂಡು, ಮತ್ತೊಬ್ಬ ಮನುಷ್ಯ ಆಚೆ ಬೆಟ್ಟದ ತಪ್ಪಲಿನಲ್ಲಿ ನಿಂತುಕೊಂಡು, ಒಂದೇ ದೃಶ್ಯವನ್ನು ನೋಡಿದರೆ, ಒಬ್ಬೊಬ್ಬನ ಕಣ್ಣಿಗೆ ಒಂದೊಂದು ತರಹ ಗೋಚರವಾಗುತ್ತದೆ. ಅಂತೆಯೇ ಈ ಜಗತ್ತಿನ ನೋಟ ಸಹ ಬೇರೆ ಬೇರೆಯಾಗಿ ಅವರವರ ಕಣ್ಣಿಗೆ ಎಟುಕಿದಂತೆ ಕಾಣುತ್ತದೆ.

ಮಾನವ ತನ್ನ ಖುಷಿಗಾಗಿ ಸಾವಿರಾರು ಆಟಗಳನ್ನು ಹುಡುಕಿದ್ದಾನೆ. ಅವುಗಳಲ್ಲಿ ಗಂಜೀಫಾ ಆಟವು ಒಂದು. ಪ್ರಪಂಚದ ವಿವಿಧ ಭಾಗಗಳಲ್ಲಿ ಆಡುವ ಆಟಗಳ ನಡುವಿನ ಸಂಬಂಧವನ್ನು ಅರಿಯುವುದಕ್ಕೆ ಅವುಗಳ ವಿಸ್ತಾರ, ಹರಡುವಿಕೆ ಮತ್ತು ಸಾಮರಸ್ಯದ ಸಿದ್ಧಾಂತವನ್ನು ತಿಳಿಯಬೇಕು. ಆಟದ ಸುಳಿವುಗಳನ್ನು ಎಚ್ಚರಿಕೆಯಿಂದ ಬಿಡಸಬೇಕಾಗುತ್ತದೆ.[೭] ಏಕೆಂದರೆ ಒಮ್ಮೆ ಆಟದ ಎಲೆಗಳು ಬಿಡುಗಡೆಯಾದವೆಂದರೆ ಸಾಕು, ಮೂಲ ಸ್ಥಳದಲ್ಲಿಯ ಆಟದ ನಿಯಮಗಳಿಗಿಂತ ವಿಭಿನ್ನವೇ ಆದ ಆಟದ ವ್ಯವಸ್ಥೆ ಬೇರೆ ಕಡೆಗೆ ಹುಟ್ಟಿಕೊಳ್ಳುತ್ತದೆ.

ಜಪಾನ್ ಇದಕ್ಕೆ ಆಶ್ಚರ್ಯಕರ ಉದಾಹರಣೆಯಾಗಿದೆ. ಚೈನಾ ಮಾದರಿ ಎಲೆಗಳು ಜಪಾನಿನಲ್ಲಿ ಮೊದಲು ಕಂಡು ಬಂದರೂ, ಅವುಗಳಿಗೆ ವಿಭಿನ್ನ ರೀತಿಯ ಎಲೆಗಳನ್ನು ಅವರು ಉಪಯೋಗಿಸುತ್ತಿದ್ದರು. ಇದಲ್ಲದೇ ಜಪಾನಿನ ಪ್ರಸಿದ್ಧ ಆಟ ಹಚಿ–ಹಚಿಯ ಪೋರ್ಚುಗೀಜರ ಮಾದರಿಗಿಂತ ವಿಭಿನ್ನವಾಗಿದೆ. ಆದರೆ ವಿಸ್ತಾರವಾಗಿ ಹರಡಿದ ಚೀನಾದ ಎಲೆಗಳಿಗೆ ಸಮೀಪದ ಹೋಲಿಕೆಯನ್ನು ಹೊಂದಿದೆ. ಆದರೆ ಭಾರತದ ಗಂಜೀಫಾಗೆ ಆ ರೀತಿಯ ಯಾವುದೇ ಗೊಂದಲಗಳಿಲ್ಲ. ಅವು ತಮ್ಮದೆ ಆದ ಮೂಲವನ್ನು ಹೊಂದಿವೆ.

ಭಾರತೀಯ ಗಂಜೀಫಾ ಎಲೆಗಳು ಎರಡು ಕುಟುಂಬಕ್ಕೆ ಸೇರಿದವಾಗಿವೆ. ಒಂದು ನಕ್ಷ ಆಟಗಳು ಮತ್ತು ಗಂಜೀಫಾ. ವಿಶೇಷವಾಗಿ ಭಾರತದಲ್ಲಿ ನಂತರ ಸಮಯದಲ್ಲಿ ವಿವರವಾಗಿ ಉಪಯೋಗಿಸಿದ ಹೊಸದೆಂದರೆ ಗಂಜೀಫಾ. ಗಂಜೀಫಾಗಳು ಮೊದ ಮೊದಲು ಕೆಲವೆ ಕೆಲವು ಆಟಗಳಿಗೆ ಸೀಮಿತವಾಗಿದ್ದವು. ದಶಾವತಾರಿ ಗಂಜೀಫಾ ಹಾಗೂ ಮೊಘಲ್ ಗಂಜೀಫಾಗಳ ನಡುವೆ ವ್ಯತ್ಯಾಸಗಳಿದ್ದವು. ಇದೇನೇ ಆದರೂ ಅತಿ ವಿರಳವಾಗಿ ಈ ಎಲೆಗಳಿಂದ ಒಂದೇ ಆಟವನ್ನು ಆಡಿದ್ದು ಕಂಡು ಬರುತ್ತದೆ.

೧೭ನೆಯ ಶತಮಾನದಲ್ಲಿ ಮೀರಜಾ ಸಾದಿಕ್‌ನು ಎಂಟು ಸೂಟಿನೊಂದಿಗೆ ಆಡಿದ ವಿವಿಧ ಆಟಗಳನ್ನು ಪಟ್ಟಿ ಮಾಡಿದ್ದಾನೆ. ಆಶ್ಚರ್ಯವೆಂದರೆ, ಇದರಲ್ಲಿನ ಎಲೆಗಳಲ್ಲಿ ಒಂದೇ ಹೆಸರು ಇದ್ದವು. ಅದೆಂದರೆ ಹಮ್ರಾಂಗ್. ಇದು ಸೋಪುರದ ಮಹಾರಾಜನೂ ಹೊಂದಿದ್ದ.

ಆಟದ ಸಾಮಾನ್ಯ ತತ್ವಗಳು

ಸವಿಸ್ತಾರವಾದ ಗಂಜೀಫಾ ನಿಯಮಾವಳಿಗಳು ಭಾರತದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ

---

೦೬. ಡಿ.ವಿ.ಜಿ.ಯವರ : ಮಂಕುತಿಮ್ಮನ ಕಗ್ಗ (ತಾತ್ಪರ್ಯ), ಪುಟ ೧೧೩

೦೭. ಸಂತೋಷಕುಮಾರ ಗುಲ್ವಾಡಿ : ಗಂಜೀಫಾ, ಪುಟ–೬

ಬೇರೆ ಬೇರೆ ಆಟಗಳಾಗಿ ಪರಿವರ್ತನೆ ಹೊಂದುತ್ತವೆ. ಕೆಲವು ನಿರ್ದಿಷ್ಟ ಆಟಗಳನ್ನು ನಿದರ್ಶನಕ್ಕಾಗಿ ವಿವರಿಸಲಾಗಿದೆ. ಇದಕ್ಕೆ ಆಧಾರವೆಂದರೆ ಪುನಾದಲ್ಲಿ ೧೮೮೪ರಲ್ಲಿ ಬಿಡುಗಡೆಯಾದ ಮರಾಠಿ ಕೃತಿ, ಉಪಯುಕ್ತ ಚಮತ್ಕಾರ ಸಂಗ್ರಹ. ಇದರ ಪ್ರತಿಯು Guidhali Library,Londonನಲ್ಲಿ ಸಿಗುತ್ತದೆ.

ಗಂಜೀಫಾವು ವಿಶಾಲ ವಿಭಾಗದ ತಂತ್ರಗಾರಿಕೆಯ ಆಟಗಳಲ್ಲಿ ಒಂದಾಗಿದೆ. ಯೂರೋಪ್ ಆಟಗಳಿಗೆ ಹೋಲಿಸಿದರೆ ಇದು ಪೈಪೋಟಿ ಹೊಂದುತ್ತದೆ. ಅದರ ಪ್ರಕಾರ ಪ್ರತಿಯೊಬ್ಬ ಆಟಗಾರನು ಸಮಾನ ಸಂಖ್ಯೆಯ ಎಲೆಗಳೊಂದಿಗೆ ಆಟವನ್ನು ಪ್ರಾರಂಭಿಸುತ್ತಾನೆ. ಒಬ್ಬರಿಗೊಂದು ಕೈ, ಆಟವು ತಂತ್ರಗಾರಿಕೆ/ಉಪಾಯವನ್ನು ಹೊಂದಿರುತ್ತದೆ. ಪ್ರತಿಯೊಬ್ಬರಿಗೂ ಅಂಥದೊಂದು ಅವಕಾಶವಿರುತ್ತದೆ. ಪ್ರತಿಯೊಬ್ಬ ಆಟಗಾರನೂ ಮುಂದಾಳತ್ವ ಪಡೆದುಕೊಳ್ಳಬೇಕು. ಅವರು ಒಂದು ಎಲೆಯನ್ನು ಟೇಬಲ್ಲಿನ ಮೇಲೆ ಅಥವಾ ನೆಲದ ಮೇಲೆ ಹಾಕಬೇಕು. ಪ್ರತಿಯೊಬ್ಬರು ಹೀಗೆ ಮಾಡುತ್ತಾ ಹೋಗುತ್ತಾರೆ.

ಬ್ರೀಟನ್ನಿನಲ್ಲಿ ದುಂಡಾಕಾರವಾಗಿ ಎಲೆಗಳನ್ನು ಬಿಡುತ್ತಾ ಬರುವ ವ್ಯವಸ್ಥೆಯು ಯಾವಾಗಲೂ ಗಡಿಯಾರದ ಮುಳ್ಳು ತಿರುಗುವ ಶೈಲಿಯಲ್ಲಿರುತ್ತದೆ. ಗಂಜೀಫಾ ಆಟದಲ್ಲಿ ಇದು ವಿರುದ್ಧವಾಗಿತ್ತು. ಇಟಲಿ ಮತ್ತು ಸ್ಪೇನ್‌ನಲ್ಲಿ ಇದೇ ರೀತಿಯಾಗಿರುತ್ತಿತ್ತು. ನಿಯಮಗಳ ಪ್ರಕಾರ ಒಂದು ತಂತ್ರಗಾರಿಕೆಯ ಎಲೆಯು ಇನ್ನೊಂದು ಸೂಟು ಎಲೆಯನ್ನು ಸೋಲಿಸುತ್ತದೆ. ಈ ಎಲೆಯನ್ನು ಆಡಿದವನು ಆಟವನ್ನು ಗೆಲ್ಲುತ್ತಾನೆ. ಆತನು ಎತ್ತಿ ತೋರಿಸಿದ ಎಲೆಗಳನ್ನು ಪಕ್ಕಕ್ಕೆ ಸರಿಸಲಾಗುತ್ತದೆ ಹಾಗೂ ಮತ್ತೆ ಅವುಗಳನ್ನು ಆ ಆಟದಲ್ಲಿ ಸೇರಿಸುವುದಿಲ್ಲ. ಹೀಗೆ ತಂತ್ರಗಾರಿಕೆಯಿಂದ ಕೂಡಿದ ಎಲೆಗಳನ್ನು ಬೇರೆಯಿಟ್ಟು ಕೂಡಿಸಿ ಕೊನೆಗೆ ಯಾರು ಗೆದ್ದರು, ಯಾರು ಸೋತರು ಎಂದು ನಿರ್ಧರಿಸಲಾಗುತ್ತದೆ. ಈ ಹಿಂದಿನದು ತಂತ್ರಗಾರಿಕೆಯ ಅಥವಾ ವಂಚನೆಯ ಆಟವು ಮುಖ್ಯವಲ್ಲ, ಮುಂದೆ ಕೆಲವು ಲಕ್ಷಣಗಳು ಹಲವಾರು ಆಟಗಳಿಗೆ ಹೊಲಿಕೆ ನೀಡುತ್ತವೆ. ಅದರಲ್ಲಿ ಒಂದೆಂದರೆ ಒಂದು trick ಸೂಟ ಎಲೆಯ ಇನ್ನೊಂದು ಅದೇ ಸೂಟಿನ ಎಲೆಯಿಂದ ಮಾತ್ರ ಗೆಲ್ಲಲ್ಪಡುತ್ತದೆ. ಆಟಗಾರರು ಕೆಲವು ಬಾರಿ ಇದಕ್ಕೆ ವಿರೋಧ ತೆಗೆಯುವುದುಂಟು. ಏಕೆಂದರೆ ಇದು ಸಾಧ್ಯವಾಗುವುದು ಇಸ್ಪೇಟನ trup suit (ಹುಕುಮು ಅಥವಾ ವಂಚನಾ ಎಲೆ) ಇಲ್ಲದಿರುವಾಗ, ಇದರಲ್ಲಿ ಒಂದು ಸೂಟನ್ನು ಟ್ರಂಪ್ ಸೂಟ (ಗೆಲ್ಲುವ ಸೂಟ) ಎಂದು ಕರೆಯಲಾಗುತ್ತದೆ.[೮] ಅದು ಎಲ್ಲಾ ಎಲೆಗಳನ್ನು ಹೊಡೆದು ಹಾಕುವ ಸಾಮರ್ಥ್ಯವನ್ನು ಹೊಂದಿರುತ್ತದೆ.

ಯಾವುದೇ ಎಲೆಯು ಯಾವುದೆ ಶ್ರೇಷ್ಠ ಶ್ರೇಣಿಯದಾಗಲಿ, ಅದಕ್ಕೆ ಸಂಬಂಧವಿಲ್ಲ. ಇದು ಮೂಲತತ್ವಗಳ ಗೊಂದಲಕ್ಕೆ ಕಾರಣವಾಗಿದೆ. ಅದೆಂದರೆ ಐರೋಪ್ಯರ ಸಿದ್ಧಾಂತಕ್ಕೆ ವಿರುದ್ಧವಾದ ಗೊಂದಲ ಯುರೋಪದಲ್ಲಿ ಇಲ್ಲ. ಹೀಗಾಗಿ ಮೀರಜಾ ಸಾದಿಕ್‌ನ ಗಂಜೀಫಾ ಎಲೆಗಳು ಯುರೋಪದಿಂದ ಬೆಳಕಿಗೆ ಬಂದವು ಎನ್ನುವ ತತ್ವ ಸುಳ್ಳಾಗುತ್ತದೆ.

Trik-taking game (ಸೂಟ/ವಂಚನೆ/ತಂತ್ರಗಾರಿಕೆ) ಹೊಂದಿರುವ ಆಟಗಳನ್ನು "ಸರಳ" ಮತ್ತು "ಗೊಂದಲಮಯ" ಎಂದು ಎರಡು ವಿಧಗಳಲ್ಲಿ ವಿಂಗಡಿಸಬಹುದಾಗಿದೆ.

ಗಂಜೀಫಾ ಆಟದ ಲಕ್ಷಣಗಳು

ವಿದೇಶಿಯ ಗಂಜೀಫಾ ಆಟದಲ್ಲಿ ನಾವು ಅನೇಕ ಗಂಜೀಫಾ ಆಟದ ಲಕ್ಷಣಗಳನ್ನು ನಾವು ಕಾಣುತ್ತೇವೆ. ಅನೇಕ ಹೋಲಿಕೆಗಳ ಜೊತೆ ಜೊತೆಗೆ ಗಂಜೀಫಾವನ್ನು ಯುರೋಪ್ ಎಲೆಗಳಿಗೆ

೦೮. R and N. Y. Leyden : The Playing Cards of India, PP- 02

ಹೋಲಿಸಿದರೆ ಅನೇಕ ವೈವಿಧ್ಯಗಳನ್ನು ಹೊಂದಿದ್ದು ಗಮನಕ್ಕೆ ಬರುತ್ತದೆ. ಮೂಲಭೂತ ನಿರ್ದಿಷ್ಟ ಲಕ್ಷಣಗಳು ಎಲ್ಲಾ ಗಂಜೀಫಾಗಳಿಗೆ ಸಮನಾಗಿದ್ದು, ಎಲ್ಲಾ ರೀತಿಯ ವಿವಿಧ ಆಟಕ್ಕೆ ಮತ್ತು ಎಲ್ಲಾ ಕಡೆಗೆ ಒಂದೇ ಆಗಿವೆ.

ಯುರೋಪ್ ಆಟಗಳಲ್ಲಿ ಒಬ್ಬ ಆಟಗಾರ ಹೆಚ್ಚು (Lead) ಬಿಲ್ಲೆಯನ್ನು ಹೊಂದಿದ್ದರೆ ಅವನು trick ಆಟವನ್ನು ಆಡಬಹುದು. ಅವನು ಸೂಟನ್ನು (suit) ಅನುಸರಿಸಬೇಕಾಗುತ್ತದೆ. ಈ ಕರಾರು ಯುರೋಪ ಗಂಜೀಫಾದಲ್ಲಿ ಇಲ್ಲ ಎಂಬುದು ಕಂಡುಬರುತ್ತದೆ. ಒಂದು ವೇಳೆ ಆಟಗಾರನು trick ಆಟವನ್ನು ಆಡಲಾಗದಿದ್ದಲ್ಲಿ ಅವನು ಯಾವುದೇ ಕಡಿಮೆ ಪ್ರಮಾಣದ ಎಲೆಯೊಂದಿಗೆ ಆಟವನ್ನು ಆಡಬಹುದು. ಆಟಗಾರರ ಕೈಯಲ್ಲಿ ಅನೇಕ ಎಲೆಗಳು ಇರುತ್ತಿರುವುದರಿಂದ ಅವರಿಗೆ trick ಕೊಡುವ ಎಲೆಯು ಯಾವುದೆಂದು ಊಹಿಸಿ ಬಿಡುವಷ್ಟು ಸಮಯಾವಕಾಶ ಇರುತ್ತಿತ್ತು. ಅವುಗಳನ್ನು ವಿಭಿನ್ನವಾಗಿ ಬಳಸುವುದರ ಮೂಲಕ ಅವುಗಳ ಆಟವಾಡಿ, ಆ ತಂತ್ರಗಾರಿಕೆಯ ಮುಖಾಂತರ ಆಟವನ್ನು ಬೇರೆಯವರು ಗೆಲ್ಲದಂತೆ ನೋಡಿಕೊಳ್ಳುತಿದ್ದರು. ಇದು ಗಂಜೀಫಾದ ಲಕ್ಷಣ.

ಅದೇನೇ ಇರಲಿ, ಒಂದು ನಿರ್ಬಂಧಿತ ಆಚರಣೆ ಆಟದ ಯಾವುದೆ ಹಂತದಲ್ಲಿ ಅತೀ ಹೆಚ್ಚು ಬೆಲೆಯ ಎಲೆಯನ್ನು ಮೊದಲೇ ಆಡಲ್ಪಟ್ಟ ಎಲೆಗಳನ್ನು ಬಿಟ್ಟು, ಹುಕ್ಮ ಎಂದು ಕರೆಯುತ್ತಿದ್ದರು. ಯಾರಲ್ಲಿ ಹುಕ್ಮ ಇರುತ್ತದೆಯೋ ಅವರು ಗೆಲ್ಲುವುದು ಖಚಿತ. ಒಂದು ವೇಳೆ, ಅದು ಹುಕ್ಮ ಎಂಬುದನ್ನು ಮರೆತು ಬಿಟ್ಟರೆ ಅದರ ಎಲೆ ಕಡಿಮೆ ಬೆಲೆಯದಾಗುತ್ತದೆ. ಹಾಗೂ ಅವನಿಗೆ ತಂತ್ರಗಾರಿಕೆಯ ಎಲೆ ಕಳೆದು ಹೋಗುತ್ತದೆ ಮತ್ತು ಅದು ಮತ್ತೆ ಉಪಯೋಗಕ್ಕೆ ಬರುವುದಿಲ್ಲ.

ಈ ನಿಯಮವು ಯುರೋಪ್ trick taking ಆಟಕ್ಕೆ ಅಪರಿಚಿತವಾದದ್ದಕ್ಕಾಗಿ ಅಲ್ಲಿ ಗೆಲ್ಲುವ ಎಲೆಯನ್ನು ಹಿಡಿದಿಟ್ಟುಕೊಳ್ಳುವ ಅವಕಾಶವೇ ಇಲ್ಲ. ಹಾಗಾಗಿ ಆಟಗಾರ ತಾನು ಗೆಲ್ಲುವುದಿಲ್ಲ ಎಂದು ಗೊತ್ತಾದಾಗ ಯಾವುದೇ ಎಲೆ ಹಾಕಿದರೂ ಆಟಗಾರನಿಗೆ ಕೇಡಾಗುವುದಿಲ್ಲ.[೯] ಎರಡನೆ ಬಹುಮುಖ್ಯ ಅಂಶವೆಂದರೆ ಲೀಡ್ ಎಲೆಗಳ ಮತ್ತು ಅದರ trick (ತಂತ್ರಗಾರಿಕೆ)ಗೆ ಸಂಬಂಧಿಸಿದಂತೆ, ಯಾರ ಬಳಿ ಲೀಡ್ ಈ ಎಲೆಗಳಿಗಿಂತ ಭಿನ್ನ ಮತ್ತು ಹೆಚ್ಚಿನ ಎಲೆ ಇರುತ್ತದೊ ಅವರು ಯಾವ ಎಲೆಯನ್ನು ಬೇಕಾದರೂ ಆಯ್ಕೆ ಮಾಡಿಕೊಂಡು ಆಟ ಮುಂದುವರಿಸಬಹುದು. ಇದು ಯುರೋಪ್ ಮಾದರಿ.

ಕೆಲವು ಗಂಜೀಫಾ ಆಟಗಳಲ್ಲಿ ಹೀಗೆ ಆಯ್ಕೆ ಮಾಡಿಕೊಳ್ಳುವಲ್ಲಿ ಕೆಲವು ನಿರ್ಬಂಧಗಳಿವೆ. ಗಂಜೀಫಾದಲ್ಲಿ ವೈವಿಧ್ಯವೆಂಬಂತೆ ಕೆಲವು ನಿಯಮಗಳು ತಂತ್ರಗಾರಿಕೆಯ ಎಲೆಗಳಿಗೆ ಅನ್ವಯಿಸುವುದಿಲ್ಲ. ಇಲ್ಲಿ ಕೆಲವು ನಿರ್ಬಂಧನೆಗಳಂತೆ ಕೆಲವು ಎಲೆಗಳನ್ನು ಹಾಕಬಹುದು ಹಾಗೂ ತಂತ್ರಗಾರಿಕೆಯಿಂದ ಕೈಯಲ್ಲೆ ಇಟ್ಟುಕೊಳ್ಳಬಹುದು.

ಈ ರೀತಿಯಾದ ನಿಯಮಗಳನ್ನು ಯುರೋಪ್ ಆಟಕ್ಕೆ ಹೋಲಿಸಿದರೆ ಅದೂ ತಂತ್ರಗಾರಿಕೆ ಆಟಕ್ಕೆ ಹೋಲಿಸಿದರೆ ಎಲ್ಲೂ ಸಂಬಂಧ ತೋರಿಬರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ತಂತ್ರಗಾರಿಕೆ ಆಟಗಳಿಗೆ ಸಂಬಂಧಿಸಿದಂತೆ ಅವು ಒಮ್ಮೆ ಮಾತ್ರ ಹುಟ್ಟು ಹಾಕಲಾಗಿದ್ದು ಯುರೋಪ್ ಆಟಗಳಿಗೆ ಹಾಗೂ ಗಂಜೀಫಾಗಳಿಗೂ ಹೋಲಿಸಲಾಗದು. ಅತೀ ಪೂರ್ವ ಹಂತದಲ್ಲಿಯೇ ಅವುಗಳನ್ನು ಬೇರ್ಪಡಿಸಬಹುದು.

ಗಂಜೀಫಾ ಆಡುವ ವ್ಯಕ್ತಿ ಅತಿ ಹೆಚ್ಚು ಮೌಲ್ಯದ ಎಲೆಯನ್ನು ಬಹಳ ಹೊತ್ತು ತನ್ನ ಕೈಯಲ್ಲಿಯೇ

೦೯ R and N. Y. Leyden : The Playing Cards of India, PP- 35

ಹಿಡಿದಿಟ್ಟುಕೊಂಡು ಬೇರೆಯವರ ಆಟವನ್ನು ಹಾಳುಮಾಡುವಂತೆ ತಡೆಗಟ್ಟುವುದಕ್ಕೂ ನಿಯಮಗಳಿವೆ. ಆಟದ ಇನ್ನರ್ಧ ಭಾಗದಲ್ಲಿ ಪರಿಸ್ಥಿತಿಯು ಬದಲಾಗುತ್ತಾ ಹೋಗುತ್ತದೆ. ಏಕೆಂದರೆ ಹುಕ್ಮ್ ಇದ್ದವನೇ ಯಾವಾಗಲೂ ಗೆಲ್ಲಲಾಗದು. ಅದು ಆಟ ಬೆಳೆದಂತೆ ಅಲ್ಲಿಗೆ ನಿರ್ಬಂಧಿತನಾಗಿ ಆಟ ಅಷ್ಟಕ್ಕೇ ನಿಂತು ಹೋಗಬಹುದು. ಹೀಗೆಂದು ಅನುಪಯುಕ್ತ ಅಥವಾ ಮುಖ್ಯ ಅಲ್ಲವೆಂದು ಆಟಗಾರರು ಎಲೆಗಳನ್ನು ಎಸೆಯುತ್ತಾ ಹೋಗುತ್ತಾರೆ. ಹೀಗಾಗಿ ಯಾವ ಎಲೆಗಳೊಂದಿಗೆ ಹುಕ್ಮನ್ನು ಹೊಂದಿಸಿ ಆಟವನ್ನು ಮುಗಿಸಬೇಕು ಎಂಬುದಕ್ಕೆ ಗೊಂದಲವಾಗುತ್ತದೆ. ಪ್ರತಿ ಸೂಟಿನ ಎಷ್ಟು ಎಲೆಗಳನ್ನು ಉಪಯೋಗಿಸಿ ಆಟ ಆಡುತ್ತಿದ್ದೇವೆ ಎಂಬುದು ಆಟಗಾರರಿಗೆ ತಿಳಿಯದೆ ಹೋದಲ್ಲಿ ಎರಡನೆ ಅರ್ಧ ಆಟದಲ್ಲಿ ಅವರಿಗೆ ನಿರ್ಧಾರ ಕೈಗೊಳ್ಳುವುದು ಕಷ್ಟವಾಗುತ್ತದೆ.

ಪ್ರತಿಯೊಂದು ಸೂಟನಲ್ಲಿ ಹೆಚ್ಚಿನ ಮೌಲ್ಯದ ಅಥವಾ ದೊಡ್ಡ ಎಲೆಯೆಂದರೆ ರಾಜ, ಎರಡನೆಯ ದೊಡ್ಡ ಎಲೆಯೆಂದರೆ ವಜೀರ, ಮೊದಲ ಐದು ಶ್ರೇಣಿಯ ಎಲೆಗಳು ಈ ರೀತಿಯಾಗಿ ಸಾಗುತ್ತವೆ.

ರಾಜಾ (ದೊಡ್ಡ ಎಲೆ)

ವಜೀರ (ಎರಡನೆಯ ಶ್ರೇಷ್ಠ ಎಲೆ)

ಎಕ್ಕಾ ೨, ೩, ೪, ೫, ೬, ೭, ೮, ೯, ೧೦ (ಕೆಳದರ್ಜೆ ಎಲೆಗಳು) ಮತ್ತು ಇನ್ನೊಂದು ಸೂಟನಲ್ಲಿ ಅಂದರೆ ಕೆಳದರ್ಜೆಯ ಸೂಟನಲ್ಲಿ ರಾಜಾ–ವಜೀರ್, ೧೦, ೯, ೮, ೭, ೬, ೫, ೪, ೩, ೨ ಮತ್ತು ಎಕ್ಕಾ. ಈ ವಿಶಿಷ್ಟವಾದ ಶ್ರೇಣಿಯು ಚಿತ್ತಾಕರ್ಷಕವಾಗಿದ್ದು ಆಟವನ್ನು ಎಲ್ಲೂ ಗೊಂದಲಕ್ಕೆ ಸಿಕ್ಕಿಸುವುದಿಲ್ಲ. ಗಂಜೀಫಾದಲ್ಲಿ ಇದು ನಿರ್ದಿಷ್ಟ ಶ್ರೇಣಿಯಂಚಿನಲ್ಲಿದ್ದು ಕೆಲವು ಗಂಜೀಫಾಗಳಲ್ಲಿ ಎರಡು ದರ್ಬಾರು ಎಲೆಗಳು ಯಾವಾಗಲೂ ಹೆಚ್ಚು ಶ್ರೇಣಿ ಹೊಂದಿದ್ದು, ಇನ್ನರ್ಧ ಭಾಗವು ೮, ೧೦, ೧೨ ಸೂಟನ ಆಟವೇ ಆದರೂ ಸರಿ ಅಂಕಿಗಳಿಂದ ಕೂಡಿದ್ದು ೧೦ರಿಂದ ಒಂದು ಮಾತ್ರ ಒಂದರಿಂದ ಹತ್ತು ಬಗೆಯ ಭಿನ್ನತೆಯನ್ನು ಹೊಂದಿದೆ. ಈ ರೀತಿಯಾದ ರೂಢಿಯು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಏಕೆಂದರೆ ಈ ರೀತಿಯಾದ ಪದ್ಧತಿ ಯುರೋಪದಲ್ಲಿ ಕಂಡುಬರುತ್ತದೆ.[೧೦]

ಎಕ್ಕಾ ಎಲೆಯು ೧೬ನೆಯ ಶತಮಾನದಿಂದ ಈಚೆಗೆ ಆವಿಷ್ಕಾರವಾದದ್ದು. ಅದು ಒಂದು ಸಾಮಾನ್ಯ ಎಲೆಯೇ ಆಗಿದೆ. ಎಲ್ಲೆಲ್ಲಿ ಆಟವು ಮುಟ್ಟಗೋಲು ಹಾಕಲ್ಪಟ್ಟರೆ ಅಲ್ಲಿ ನಾವು ಎಕ್ಕ ಮತ್ತು ಹತ್ತುಗಳ ಸ್ಥಾನಪಲ್ಲಟವನ್ನು ಕಾಣಬಹುದು. ಯುರೋಪ್ ಮತ್ತು ಭಾರತದ ಆಟಗಳು ಸಾಮಾನ್ಯ ಪ್ರಾಚೀನತೆಯನ್ನು ಹೊಂದಿದ್ದು ಎಲೆಗಳ ಕಲೆ, ವಿನ್ಯಾಸದಿಂದಲ್ಲ. ಆದರೆ ಅವುಗಳನ್ನು ಆಟದಲ್ಲಿ ಉಪಯೋಗಿಸುತ್ತಿದ್ದ ಬಣ್ಣಗಳಿಂದ ಎಂಬುದು. ಇದರಿಂದ ತಿಳಿದು ಬರುವ ಇನ್ನೊಂದು ಸಂಗತಿಯೆಂದರೆ ಸ್ಪೇನ್ ಮತ್ತು ಇಟಾಲಿಯನ್ ಆಟಗಾರರ ಶ್ರೇಣಿಯು ಮುಸ್ಲಿಂ ಆಟಗಾರರ ಶ್ರೇಣಿವ್ಯವಸ್ಥೆಗಿಂತ ಭಿನ್ನವಾಗಿದೆ.

ಆಟದ ನಿಯಾಮಾವಳಿಗಳನ್ನು ನಿರ್ಧರಿಸಲು ಹಲವಾರು ವಿಧಗಳನ್ನು ಬಳಕೆಗೆ ತರಲಾಯಿತು. ಮೊದಲನೆಯದು Lead trick (ಹೆಚ್ಚಿನ ತಂತ್ರಗಾರಿಕೆ)ಗೆ ಸಂಬಂಧಿಸಿದಂತೆ ಯುರೋಪ್ ಆಟಗಳಲ್ಲಿ ಹೆಚ್ಚಿನ ತಂತ್ರಗಾರಿಕೆ (Lead taking) ಆಟಗಾರ ಪ್ರಾರಂಭದ ಎಲೆ ಏನಾಗುತ್ತದೆ ಎಂಬುದರ ಮೇಲೆ ಆಟದಲ್ಲಿ ಅವರ ಸ್ಥಾನಮಾನ ನಿರ್ಧರಿತವಾಗುತ್ತದೆ. ಗಂಜೀಫಾ ಆಟದಲ್ಲಿ ಆಟಗಾರನು ಬೇರೆಯ ರೀತಿಯಲ್ಲಿ ನಿರ್ಧರಿಸಲ್ಪಡುತ್ತಾನೆ. ಅವು "ರಾಜ" ನನ್ನ ಕೈಯಲ್ಲಿ ಹೊಂದಿದ್ದರೂ ಅವನ ಸ್ಥಾನ

೧೦. R and N. Y. Leyden : The Playing Cards of India, page- 36

ಗಟ್ಟಿಯಾಗಿರುತ್ತದೆ. ಆಟವು ಹಗಲು ಹೊತ್ತಿನಲ್ಲಿ ಆಡಲ್ಪಟ್ಟರೆ 'ರಾಜನು' (ರಾಮನಾಗಿರುತ್ತಾನೆ. ಒಂದು ವೇಳೆ ರಾತ್ರಿ ಹೊತ್ತು ಆಟವನ್ನು ಆಡಿದರೆ ಅದು ಕೃಷ್ಣ ಆಗಿರುತ್ತದೆ.) ಆಟಗಾರನು ಒಳ್ಳೆಯ ಸ್ಥಾನದಲ್ಲಿದ್ದಾನೆಂದು ಅರ್ಥ.

ಹುಕ್ಮ :– ಎಂಬ ಪದದ ವಿವರಣೆಯನ್ನು 'ರಾಜ' ಇದ್ದು ವಜೀರ್ ಕೈಯಲ್ಲಿ ಇರದೇ ಇದ್ದ ಪಕ್ಷದಲ್ಲಿ ಆ ಸೂಟ (suit)ನ್ನು ಷೇನಿ ಎಂದು ಕರೆಯಲಾಗುತ್ತಿತ್ತು. ಒಂದು ವೇಳೆ ವಜೀರ್‌ನಿದ್ದು 'ರಾಜ'ನನ್ನು ಹೊಂದದೆ ಇದ್ದ ಪಕ್ಷದಲ್ಲಿ ಅದನ್ನು ದೇನಿ ಎಂದು ಕರೆಯಲಾಗುತ್ತದೆ. ಇದು ರಾಜನನ್ನು ಅವನು ಪಡೆಯುವ ತನಕ ಚಾಲ್ತಿಯಲ್ಲಿರುತ್ತದೆ. ಈ ಕಾರಣಕ್ಕಾಗಿ "ವಜೀರನೇ ರಾಜ ಎಂದು ಭಾವಿಸಲಾಗುತ್ತಿತ್ತು". ಸುರ್ಕ್ಯಾ ಸೂಟನಲ್ಲಿ ಹಾಗೂ ಆ ಸೂಟಿನ ಹತ್ತನೇ ಸಂಖ್ಯೆಯ ಎಲೆಗಳನ್ನು ವಜೀರನೆಂದು ಪರಿಗಣಿಸಲಾಗುತ್ತಿತ್ತು. ಯಾವುದೇ ಸೂಟಿನಲ್ಲಿ ಹೆಚ್ಚಿನ ಶ್ರೇಯಾಂಕದ ಎಲೆಯನ್ನು ಬಂದಾ ಎಂದು, ಕಡಿಮೆ ಬೆಲೆಯ ಎಲೆಯನ್ನು ಪದಬಂದ ಎಂದು ಕರೆಯುವರು. ಎಕ್ಕಾವು ಮೇಲ್ದರ್ಜೆಯ ಎಲೆಯಲ್ಲಿ ಹಾಗೂ ಹತ್ತು ಕೆಳದರ್ಜೆಯ ಎಲೆಗಳಲ್ಲಿ ಪ್ರಥಮ ಸ್ಥಾನ ಹೊಂದಿರುತ್ತಿದ್ದವು.

ಗಂಜೀಫಾ ಎಲೆಯ ಹಂಚಿಕೆ

ಗಂಜೀಫಾ ಆಟದ ಎಲೆಯ ಹಂಚಿಕೆಯಲ್ಲಿ ಮೂರು ಜನರು ಭಾಗವಹಿಸುತ್ತಾರೆ. ಆಟವನ್ನು ಹಂಚಿಕೆ ಮಾಡುವುದು (deal) ಮತ್ತು ಆಡುವವರು ಗಡಿಯಾರದ ಮುಳ್ಳು ತಿರುಗುವ ಶೈಲಿಯಲ್ಲಿ ಎಲೆಗಳನ್ನು ಹಂಚಿಕೊಳ್ಳುತ್ತಾರೆ. ಎಲ್ಲರೂ ಎಲೆಗಳನ್ನು ಹಿಂದೂ ಮುಂದೂ ಮಾಡುವಲ್ಲಿ ಭಾಗಿಗಳಾಗುತ್ತಾರೆ. ಪ್ರಾರಂಭ ಮಾಡಿದವನ ಎಡಕ್ಕೆ ಇರುವ ವ್ಯಕ್ತಿಯ ಮೇಲಿನ ಕೆಲವು ಎಲೆಗಳನ್ನು ಎತ್ತಿ ಪಕ್ಕಕ್ಕೆ ಇಡುತ್ತಾನೆ ಮತ್ತು ಅವುಗಳನ್ನು ಕದಲಿಸುವುದಾಗಲಿ, ಅದಲು ಬದಲು ಮಾಡುವುದಾಗಲಿ ಮಾಡುವುದಿಲ್ಲ.[೧೧] ಹೀಗೆ ಮಾಡುವಾಗ ಕೆಳಗಡೆಯಿರುವ ಎಲೆಯನ್ನು ನೋಡುತ್ತಾನೆ. ಒಂದು ವೇಳೆ ಆ ಎಲೆಯು 'ರಾಜ' ಆಗಿದ್ದಲ್ಲಿ ಅದನ್ನು ಮತ್ತೆ ಅದಲು ಬದಲು ಮಾಡುತ್ತಾನೆ. ಹಂಚಿಕೆದಾರನು (deal) ಮಾಡುವ ವ್ಯಕ್ತಿಯು ಮುಟ್ಟದೇ ಇರುವ ಎಲೆಗಳ ಸೆಟ್‌ನ್ನು ತೆಗೆದುಕೊಂಡು ಆಟ ಶುರು ಮಾಡುತ್ತಾನೆ. ತನ್ನ ಬಲಗಡೆಯ ಆಟಗಾರನಿಂದ ಪ್ರತಿಯೊಬ್ಬರಿಗೂ ನಾಲ್ಕು ಎಲೆಗಳಂತೆ ಮೂರು ಬಾರಿ ಹಂಚಿಕೆಮಾಡಿ ಆಟ ಪ್ರಾರಂಭಿಸುತ್ತಾನೆ. ಮೊದಲನೇ ಮೂರು ಎರಡನೆಯ ಸುತ್ತಿನಲ್ಲಿ ಎಲೆಗಳ ಮುಖವನ್ನು ಮೇಲ್ಭಾಗ ಮಾಡಿ ಮೂರು ಮತ್ತು ನಾಲ್ಕನೆಯ ಸುತ್ತಿನಲ್ಲಿ ಅವುಗಳ ಮುಖವನ್ನು ಕೆಳಭಾಗ ಮಾಡಿ ಹಾಕಲಾಗುತ್ತದೆ. ಆಗ ಆಟದ ಎಲೆಗಳನ್ನು ತೆಗೆದುಕೊಂಡು "ರಾಜ"ವನ್ನು ನೋಡುತ್ತಾರೆ. ಯಾರ ಹತ್ತಿರವೂ 'ರಾಜ' ಇಲ್ಲದ ಪಕ್ಷದಲ್ಲಿ ಮಾತ್ರ ಹಂಚಿಕೆದಾರನು ಆಟದ ಎಲೆಗಳನ್ನು ಮರು ಹಂಚಿಕೆ ಮಾಡುತ್ತಾನೆ.

ಮೊದಲನೆಯ ತಂತ್ರ :

ಸುರ್ಖ್ಯಾ –ಹೊಂದಿರುವ ಆಟಗಾರನು ಯಾವುದೇ ಕೆಳದರ್ಜೆಯ ಎಲೆಯೊಂದಿಗೆ ಆಟವನ್ನು ಪ್ರಾರಂಭಿಸುತ್ತಾನೆ. ಈ ರೀತಿಯಾದ ಪ್ರಾರಂಭವು ಗಂಜೀಫಾದಲ್ಲಿ ಸರ್ವೇಸಾಮಾನ್ಯವಾಗಿದ್ದು, ಯಾವುದೇ ರೀತಿಯ ಪೊಟ್ಟಣಗಳಿರಲಿ ಅದಕ್ಕೆ ಅನ್ವಯವಾಗುತ್ತದೆ. ಕೇವಲ ಪದಜ್ಞಾನ ಮಾತ್ರ ಬೇರೆಯಾಗುತ್ತದೆ. ಪ್ರಸ್ತುತ ಗಂಜೀಫಾದಲ್ಲಿ ಹೇಳುವುದಾದರೆ ಕೆಳದರ್ಜೆಯ ಎಲೆಯ ಸಾಂಗತ್ಯ ಹೊಂದಿರುವ 'ಸುರ್ಖ್ಯಾ'ವನ್ನು ಕೀರಿಟವೆಂದು ಕರೆದರೆ ಇನ್ನೊಂದು ಗಂಜೀಫಾದಲ್ಲಿ ಸುರ್ಖ್ಯಾ ಎಂದೇ ಕರೆಯಲಾಗುತ್ತದೆ. ಇನ್ನುಳಿದ

---

೧೧. R and N. Y. Leyden : The Playing Cards of India, page- 38

ಇಬ್ಬರು ಆಟಗಾರರು ಕೆಳದರ್ಜೆಯ ಎಲೆಗಳಿಂದಲೇ ತಂತ್ರಗಾರಿಕೆ ಹೂಡಿ ಗೆಲ್ಲಬೇಕು. ಹೀಗೆ ಗೆದ್ದವರು ಎಲೆ ಹಂಚಿಕೆಯ ಅವಕಾಶ ಪಡೆಯುತ್ತಾರೆ.

ಆಟಗಾರರು ಆರು ಎಲೆಗಳನ್ನು ಎತ್ತಿಕೊಳ್ಳುವ ಮುನ್ನ ಒಬ್ಬರಿಗೊಬ್ಬರು ಮರು ಪರಿಶೀಲನೆ ಮಾಡುತ್ತಾರೆ. ಇದು ಕಡ್ಡಾಯವಲ್ಲದಿದ್ದರೂ ಕೆಲವು ಬಾರಿ ಮಾಡಲಾಗುತ್ತದೆ. ಒಬ್ಬ ಆಟಗಾರನು ಮೊದಲೇ ದೇನಿ ಎಲೆಯನ್ನು ಕೊಳ್ಳಬಹುದು. ಆದರೆ ಇದನ್ನು ತನ್ನ ಕೈಯಲ್ಲಿರುವ ಎಲೆಗಳನ್ನು ಹಾಕಿ ತೆಗೆದುಕೊಳ್ಳುವಂತಿಲ್ಲ. ಅವನು ಸುರ್ಖ್ಯಾವನ್ನು ತೆಗೆದುಕೊಳ್ಳಲು ಹಾಗೆ ಬರುವುದಿಲ್ಲ. ಎರಡನೆ ಸುತ್ತಿನಲ್ಲಿ ಯಾರ ಬಳಿಯಾದರೂ ದೇನಿ ಇದ್ದರೆ ಅದಕ್ಕೆ ಜೊತೆಗೆ ಅವನು 'ದೇನಿ' ಯನ್ನು ತನ್ನ ಇತರೆ ಎಲೆಗಳನ್ನು ಕೊಟ್ಟು ಪಡೆಯಬಹುದು. ಆದರೆ ಈ ಅನುಕೂಲತೆ ಅಥವಾ ಭಾಗ್ಯ ಎರಡನೆ ಹಂತದಲ್ಲಿ ಯಾರಿಗೂ ಸಿಗುವುದಿಲ್ಲ. ಸುರ್ಖ್ಯಾವನ್ನು ಹೊಂದಿದ ಆಟಗಾರನು ಮುಂದಿನ ಆಟವನ್ನು ಆಡುವಲ್ಲಿ ಈ ಕೆಳಗಿನ ನಿಯಮಗಳನ್ನು ಪಾಲಿಸಬೇಕು.

ಆಟದ ಮೊದಲ ಹಂತ :

ಪ್ರಸ್ತುತ ಆಟದಲ್ಲಿ ಮೊದಲನೆಯ ಹಂತ ಮತ್ತು ಆಟದ ಎರಡನೆ ಹಂತಗಳು ವಿಭಿನ್ನವಾಗಿವೆ. ಎರಡನೆ ಹಂತದಲ್ಲಿ ಮೊದಲನೆ ಹಂತದಲ್ಲಿ ಮುಂದಾಳಾಗಿರುವ ಆತ ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆಯುತ್ತಾನೆ. ಈ ಎರಡರ ನಡುವಿನ ಕೊನೆಯ ಅಂಚಿ(tigasta)ನಿಂದ ಗುರುತಿಸಲಾಗುತ್ತದೆ. ಯಾವ ಹಂತದಲ್ಲಿ ಎಂದರೆ ಪ್ರತಿಯೊಬ್ಬ ಆಟಗಾರನೂ ಕೆಲವು ಸಮಯವನ್ನು ಕಳೆದಿದ್ದು ಕ್ರಮೇಣ ಮುಂದಾಳತ್ವವನ್ನು ಕಳೆದುಕೊಂಡಿರುತ್ತಾನೆಯೋ ಆಗ tigastaದ ಪೂರ್ವದಲ್ಲಿ ಅಳವಡಿಸುವ ನಿಯಮಾವಳಿಗಳು ಬಹಳ ನೇರವಾಗಿ ಇವೆ. ಮುಂದಾಳು ಆಗಿರುವ ಆಟಗಾರನು ಮೊದಲು "ದಖ್ವಾಲ್" ಎಲೆ ಇದೆಯೋ ಇಲ್ಲವೋ ಎನ್ನುವುದನ್ನು ಖಾತರಿ ಮಾಡಿಕೊಳ್ಳಬೇಕು, ಹೆಸರಿಗೆ ಹೇಳುವುದಾದರೆ 'ಹುಕ್ಮ್' ಯಾವುದೇ ಎಲೆಯ ಜೊತೆಗೆ ಅಥವಾ ಯಾವುದೇ ಹೊಂದಿಕೆ ಜೊತೆ ಇದ್ದರೂ ಸರಿ, ಹೀಗಿದ್ದಲ್ಲಿ ಅವನು 'ದಖ್ವಾಲ್'ನ್ನು ಆಡಲು ತಕರಾರು ಇಲ್ಲ.

ತನ್ನಲ್ಲಿರುವ ಎಲ್ಲಾ 'ದಖ್ವಾಲ್'ಗಳನ್ನು ಆಡಿದ ನಂತರ ಆಟಗಾರನು ತನ್ನಲ್ಲಿ ದೇನಿ ಇದೆಯೋ ಇಲ್ಲವೋ ನೋಡಿಕೊಳ್ಳಬೇಕು. ಹಾಗಾದಲ್ಲಿ ಅವನು ದೇನಿ ಕೊಡುವುದಕ್ಕೆ ತಕರಾರುಗಳಿವೆ ಎಂದರ್ಥ. ದೇನಿಯನ್ನು ಕೆಳದರ್ಜೆಯ ಎಲೆಯಿಂದ ಹಿಡಿದು ಕೊಡಲಾಗುತ್ತದೆ. ದೇನಿ ಇದ್ದ ಆಟಗಾರನು ಆಟವನ್ನು ಆಡಿ 'ದೇನಿ'ಯನ್ನು 'ಹುಕ್ಮ್' ಎಂದು ಪರಿಗಣಿಸಲ್ಪಟ್ಟವನು ಆಟವನ್ನು ಗೆಲ್ಲುತ್ತಾನೆ.

ದೇನಿ ಇದ್ದ ವ್ಯಕ್ತಿಗೆ ದೇನಿಯನ್ನು ಕೊಟ್ಟರೆ ಅದು ಅವನಿಗೆ ಐಚ್ಛಿಕವಾಗುತ್ತದೆ. ಅವನು ಅದನ್ನು ಉಪಯೋಗಿಸಬಹುದು ಅಥವಾ ಇಲ್ಲ ಮತ್ತು ಅವನು ದೇನಿ ಮೂಲಕವೇ ತನ್ನ ತಂತ್ರಗಾರಿಕೆಯ ಆಟವನ್ನು ಆಡಬಹುದು.[೧೨] ಅಕ್ಬರನ ಕಾಲದಲ್ಲಿ ಗಂಜೀಫಾ ಆಟಕ್ಕೆ ೯೬ ಎಲೆಗಳಿದ್ದು, ಅದರಲ್ಲಿ ೮ ವಿವಿಧ ರಂಗುಗಳಿದ್ದು, ಒಂದೊಂದು ರಂಗಿನಲ್ಲೂ ೧೨ ಎಲೆಗಳಿದ್ದವು. ರಾಜನ ಆಸ್ಥಾನದಲ್ಲಿ ಎರಡು ರೀತಿಯ ಕಾರ್ಡುಗಳಿದ್ದವು. ಷಾಮೀರ್ ಮತ್ತು ವಜೀರ್. ಇದರಲ್ಲಿ ೧೦ ಸಾಮಾನ್ಯ ಎಲೆಗಳಿದ್ದವು ಮೊಘಲರ ಆಳ್ವಿಕೆಯ ಕಾಲದಲ್ಲಿ ಗಂಜೀಫಾ ಆಟವು ಉತ್ತರ ಭಾರತದಲ್ಲೆಲ್ಲಾ ಹರಡಿತ್ತು.

ದಕ್ಷಿಣ ಭಾರತದ ಹಿಂದೂ ಪೌರಾಣಿಕ ಕಥೆಗಳನ್ನು ಅನುಸರಿಸಿ ತಯಾರಿಸಿದ ಸಾಂಪ್ರದಾಯಿಕ ಗಂಜೀಫಾ ಆಟ ಬಹಳ ಕಾಲದ ಹಿಂದೆಯೇ ಪ್ರಚಲಿತದಲ್ಲಿತ್ತು. ಇದನ್ನು ಎಲ್ಲರೂ ದಶವತಾರ

---

೧೨. R and N. Y. Leyden : The Playing Cards of India, page- 42



ಗಂಜೀಫಾ ಆಟದಲ್ಲಿ ನಿರತರಾದ ಮೊಗಲರು



ಸಂಗ್ರಹ ; ಕರ್ನಾಟಕ ಚಿತ್ರಕಲಾ ಪರಿಷತ್ ಗ್ರಂಥಾಲಯ, ಬೆಂಗಳೂರು

ಗಂಜೀಫಾ ಎಂದೇ ಕರೆಯುತ್ತಿದ್ದರು. ಈ ಆಟವು ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಒರಿಸ್ಸಾ, ನೇಪಾಳ, ಬಂಗಾಳದ ತದನಂತರ ರಾಜಸ್ಥಾನದಲ್ಲೂ ಪ್ರಚಲಿತವಾಯಿತು. ಈ ದಶಾವತಾರದ ಗಂಜೀಫಾದಲ್ಲಿ ೧೨೦ ಎಲೆಗಳಿದ್ದು ಅದು ೧೦ ರಂಗುಗಳಿಂದ ಕೂಡಿದ್ದು ಒಂದೊಂದು ರಂಗಿನಲ್ಲೂ ೧೨ ಎಲೆಗಳಿದ್ದವು. ರಾಜನ ಆಸ್ಥಾನದಲ್ಲಿ ಎರಡು ರೀತಿಯ ಕಾರ್ಡುಗಳಿದ್ದವು. ರಾಜ ಮತ್ತು ಮಂತ್ರಿ ಮೇಲೆ ತಿಳಿಸಿದ ಹತ್ತು ಎಲೆಗಳು ಚಿಹ್ನೆಗಳಾಗಿದ್ದವು. ಉದಾಹರಣೆಗೆ, ಬಿಲ್ಲು ಬಾಣ ರಾಮನನ್ನೂ ನೇಗಿಲು ಪರಶುರಾಮನನ್ನೂ ಇದರಲ್ಲಿ ೫ ಗುಂಪು ಬಲಶಾಲಿಯೂ ಮಿಕ್ಕ ೫ ಅಶಕ್ತವೂ ಆಗಿದ್ದವು. ಬೆಳಿಗ್ಗೆ ಕೃಷ್ಣಾವತಾರದ ಕಾರ್ಡುಗಳೂ, ರಾತ್ರಿ ರಾಮಾವತಾರದ ಕಾರ್ಡುಗಳೂ ಶಕ್ತಿಯುತವಾಗಿರುತ್ತವೆ. ಪ್ರಾರಂಭದಲ್ಲಿ ೧೦ ಯುದ್ಧ ಕಾರ್ಡುಗಳ ನಂತರ ೧೨, ೧೬ ಆಗಿ ನಂತರ ಇಪ್ಪತ್ತು ಆಯಿತು. ನಂತರ ೮ ದಿಕ್ಪಾಲಕರು ಮತ್ತು ೯ ಗ್ರಹಗಳನ್ನು ಆಟಗಳಿಗೆ ಸೇರಿಸಲಾಯಿತು.

ಗಂಜೀಫಾ ಆಟದಲ್ಲಿ ಸಂಶೋಧನೆಯನ್ನು ನಡೆಸಿ ಅತಿ ಹೆಚ್ಚು ಕಾರ್ಡುಗಳನ್ನು ಬಳಸಿ, ಲೀಲಾಜಾಲವಾಗಿ ಆಡುವ ಸಾಮರ್ಥ್ಯ ಮತ್ತು ಚತುರತೆಯನ್ನು ಪಡೆದಿದ್ದವರು, ಮೈಸೂರು ಮಹೀಪಾಲರಾದ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು. ಇವರು ಈ ಆಟದಲ್ಲಿ ೩೬೦ ಗಂಜೀಫಾ ಎಲೆಗಳನ್ನು ಉಪಯೋಗಿಸಿ ಪ್ರತಿ ವಿಭಾಗಕ್ಕೆ ವಿವಿಧ ದೇವತೆಗಳ ಹೆಸರಿನ್ನಿಟ್ಟು ಆಟ ಆಡುತ್ತಿದ್ದರು.[೧೩] ಈ ಆಟವನ್ನು ಮುಮ್ಮಡಿಯವರು ಸ್ವಬಂಧುಗಳೊಂದಿಗೆ ಆಡುತ್ತಿದ್ದರು.

ಕರ್ನಾಟಕದ ಗಂಜೀಫಾ ಆಟ

ಒಂದು ಸಾಮಾನ್ಯ ಪರಿಕಲ್ಪನೆಯಂತೆ ಮೈಸೂರಿನ ಮೊಘಲ್ ಹಾಗೂ ಗಂಜೀಫಾ ಇಸ್ಪೇಟ್ ಎಲೆಗಳು ದಕ್ಷಿಣದ ಎಲೆಗಳನ್ನು ಹೋಲುತ್ತವೆ. ಆದರೆ ಶೈಲಿಯಲ್ಲಿ ಮಾತ್ರ ಮಧುರೈನ ನಾಯಕ್ ಶೈಲಿಯನ್ನು ಹೋಲುತ್ತವೆ. ಈ ಶೈಲಿಯು ೧೮ ಮತ್ತು ೧೯ನೆಯ ಶತಮಾನದಲ್ಲಿ ಪೂರ್ಣ ದಕ್ಷಿಣ ಭಾರತದಲ್ಲೇ ಹಿಡಿತವನ್ನು ಸಾಧಿಸಿತ್ತು. ಚಿತ್ರಣಗಳು ಹಾಗೂ suit ಚಿಹ್ನೆಗಳು ಎಲೆಯಲ್ಲಿ ಸಂಪೂರ್ಣವಾಗಿ ಚಿತ್ರಿಸಲ್ಪಟ್ಟಿದ್ದು ಎಲ್ಲೂ ಖಾಲಿ ಜಾಗ ಕಂಡು ಬರುತ್ತಿರಲಿಲ್ಲ.

ಸಾಮಾನ್ಯ ಗಂಜೀಫಾ ಅಲ್ಲದೇ ೧೯ನೆಯ ಶತಮಾನದಲ್ಲಿ ಮೈಸೂರು ದೊಡ್ಡ ಪ್ರಮಾಣದಲ್ಲಿ 'ಛಡ್ಡು' ಎಲೆಗಳನ್ನು ಹಾಗೂ ಪೊಟ್ಟಣಗಳನ್ನು ತಯಾರಿಸುತ್ತಿದ್ದರು. ಇವು ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ರೂಪತಾಳಿದವು. Tippu Sultanನ ಸೋಲಿನ ನಂತರ ಇವನು ಆಸ್ಥಾನಕ್ಕೆ ಏರಿದನು (೧೭೯೯). ಆಗ ಅವನು ಐದು ವರ್ಷದವನಾಗಿದ್ದನು. ಆಡಳಿತವು ಓರ್ವ ಬ್ರಾಹ್ಮಣಮಂತ್ರಿಯ ಮೂಲಕ ನಡೆಯುತ್ತಿತ್ತು. ೧೮೧೧ರಲ್ಲಿ ಮುಮ್ಮಡಿ ಕೃಷ್ಣರಾಜನು ಪಟ್ಟಕ್ಕೇರಿದನು. ಮುಮ್ಮಡಿ ಕೃಷ್ಣರಾಜ ಒಡೆಯರು ೧೭೯೪-೧೮೬೮ರಲ್ಲಿ ೩೬೦ ಕಾರ್ಡಿನ 'ಛದ್' (Chhadu) ಆಟವನ್ನು ಕಟ್ಟಿದರು. ಅದರಲ್ಲಿ ದಕ್ಷಿಣ ಭಾರತದ ಎಲ್ಲಾ ದೇವತೆಗಳನ್ನು ಉಪಯೋಗಿಸಿಕೊಂಡು ಚಿತ್ರ ರಚಿಸಿದ್ದಾರೆ.

ಕೃಷ್ಣರಾಜನು ತಮ್ಮಷ್ಟಕ್ಕೆ ತಾವೇ ಆಧ್ಯಾತ್ಮಿಕ, ಧಾರ್ಮಿಕ ಮತ್ತು ತತ್ವಶಾಸ್ತ್ರಿಕ ಅಧ್ಯಯನದಲ್ಲಿ ತೊಡಗಿಸಿಕೊಂಡರು. ಅವರು ಒಂದು ವಿಶ್ವಕೋಶವನ್ನು ಹೊರತಂದರು. ಅದರ ಹೆಸರು 'ಶ್ರೀತತ್ವನಿಧಿ'. ಅದರಲ್ಲಿ ಅನೇಕ ಪಗಡೆಯಾಟಗಳು, ಎಲೆ ಮತ್ತು ಮೋಜಿನಾಟಗಳನ್ನು ಅವರು ಪರಿಚಯಿಸಿದರು. ಇದರಲ್ಲಿ ಕೆಲವನ್ನು ಮೈಸೂರಿನ ಜಗನ್ಮೋಹನ ಪ್ಯಾಲೇಸ್ (ಅರಮನೆ)ನಲ್ಲಿ ಚಿತ್ರಿಸಲಾಗಿದೆ. ಈ ಎಲ್ಲಾ ಆಟಗಳು ಈಗಾಗಲೇ ಲಭ್ಯವಿದ್ದ/ಜಾರಿಯಲ್ಲಿದ್ದ ಆಟದ ಮುಂದುವರಿದ ಭಾಗದಂತಿದ್ದು, ಅದರಲ್ಲಿ

೧೩. R and N. Y. Leyden., The Playing Cards of India, page- 46

ತಾಂತ್ರಿಕ ಹಾಗೂ ಪೌರಾಣಿಕ ವಿಚಾರಗಳನ್ನು ಅಡವಡಿಸಲಾಗಿತ್ತು. ಮಹಾರಾಜನು ದೊಡ್ಡ ಪ್ರಮಾಣದಲ್ಲಿ ಅನೇಕ ಜನ ಚಿತ್ರಕಾರರನ್ನು ನೇಮಕ ಮಾಡಿ ಅವರಿಗೆ ಕೆಲಸ ಕೊಟ್ಟನು. ಕೆಲವರು ಇನ್ನೂ ಅದೇ ವೃತ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಈತನು ಸೃಷ್ಟಿಸಿದ ಆಟದ ಎಲೆಗಳ ಪೊಟ್ಟಣ ೩೨೦ರಿಂದ ೩೬೦ ಎಲೆಗಳನ್ನು ಹೊಂದಿದ್ದು, ದಕ್ಷಿಣ ಭಾರತದ ಅನೇಕ ದೇವತೆಗಳ ಚಿತ್ರಣಗಳನ್ನು ಹೊಂದಿದ್ದವು.

'ಭದ್' ಎಂದರೆ ಎಲೆಯೆಂದೂ ಹಾಗು ಆಟ ಎಂದೂ ಅರ್ಥ ಕೊಡುತ್ತದೆ. ಹೇಗೆಂದರೆ, 'ಗಂಜೀಫಾ' ಎಂದರೆ ಎಲೆಯೆಂದೂ ಮತ್ತು ಆಟವೆಂದೂ ಅರ್ಥಕೊಡುವಂತೆ. ಇದೇನೆ ಇರಲಿ, ಇವುಗಳ ವಿನ್ಯಾಸವು 'ಗಂಜೀಫಾ'ದ ವಿನ್ಯಾಸದಂತೇ ಇದ್ದು ದರ್ಬಾರಿನ ಎಲೆಗಳು ಹಾಗೂ ಸಂಖ್ಯಾತ್ಮಕ ಎಲೆಗಳ ಸಂಯೋಗ ಹೊಂದಿವೆ. ಅನೇಕ 'ಭದ್' ಎಲೆಗಳು ಆರು ದರ್ಬಾರ ಎಲೆಗಳನ್ನು ಹೊಂದಿದ್ದು ಅವುಗಳ ಹೆಸರು ಹೀಗಿವೆ: ೧. ರಾಜ– ಸಿಂಹಾಸನದ ಮೇಲೆ ಅಥವಾ ಆನೆಯ ಮೇಲೆ ಕುಳಿತಿದ್ದು, ೨. ರಾಣಿ, ೩. ಅಮಾತ್ಯ ಅಥವಾ ಮಂತ್ರಿ, ೪. ಸೇನಾನಿ–ಕುದುರೆಯ ಮೇಲೆ, ೫. ಪದಾತಿ ಅಥವಾ ಸೇವಕ (ಪಾದಚಾರಿ ಸೈನಿಕ) ಮತ್ತು ಕೊನೆಯದು ೬. ಧ್ವಜ– (Flag or Banner) ಸಂಖ್ಯಾತ್ಮಕ ಎಲೆಗಳ ಸಂಖ್ಯೆ ೧ಲಕ್ಕೆ ಮುಟ್ಟಬಹುದು ಹಾಗೂ ಒಟ್ಟು ಸಂಖ್ಯಾತ್ಮಕ ಎಲೆಗಳ ಸಂಖ್ಯೆಯೂ ಅಲ್ಲಿಗೆ ಬರುವುದು. ಕೆಲವು ಎಲೆಗಳಲ್ಲಿ ಚಕ್ರವರ್ತಿ ಎಲೆಗಳು ಇರುತ್ತಿದ್ದವು. ಇವುಗಳು ಮೊದಲ ಎರಡು ತಾಂತ್ರಿಕ ಆಟಕ್ಕೆ ಕಾರಣವಾಗುತ್ತಿದ್ದವು. 'ಚಾಮುಂಡೇಶ್ವರಿ' ಎಲೆಯು trick taking (ತಂತ್ರಗಾರಿಕೆಯ) ಎಲೆಯಾಗಿದ್ದು ಆಟವನ್ನು ಪ್ರಾರಂಭಿಸುತ್ತಿತ್ತು.

'ಶ್ರೀತತ್ವನಿಧಿ' ಅಥವಾ 'ಕೌತುಕನಿಧಿ' ಯ ಒಂಭತ್ತನೆಯ ಅಧ್ಯಾಯವು 'ಭದ್' ಆಟಗಳ ಸಂಪೂರ್ಣ ವಿವರಣೆ/ವರ್ಣನೆಯನ್ನು ಹೊಂದಿದೆ. ಎಲ್ಲಾ ೧೩ ಭದ್‌ಗಳನ್ನು ಇಲ್ಲಿ ವರ್ಣಿಸಲಾಗಿದೆ.

ಆರು ಭಡ್ಡಾ ಎಲೆಗಳು (೨೩ನೇset) ಮತ್ತು ಕೈಬರಹ ಸಿಕ್ಕ ಎಲೆಗಳು –೨೪, Mysore, Karnataka

'ಭದ್' ಎಂದರೆ ಎಲೆಗಳು ಅಥವಾ ಇಸ್ಪೇಟ್ ಎಲೆಗಳೆಂದೂ ಹಾಗೂ ಆಟಗಳು ಎಂದೂ ಅರ್ಥ ಮಾಡಿಕೊಳ್ಳಬೇಕು. 'ಗಂಜೀಫಾ'[೧೪] ಎಂದರೆ ಆಟವೆಂದೂ ಎಲೆಯೆಂದೂ ಅರ್ಥೈಸಲಾಗುತ್ತದೆ.

ಮೈಸೂರಿನ ಆರು ಭದ್ ಎಲೆಗಳು

ಹಿಂಭಾಗ–ಕೆಂಪು ಹಾಳೆಯಿಂದ ತಯಾರಿಸಿದವು.

ಸುತ್ತಳತೆ– ೬೩–೬೬mm. ಸಂಖ್ಯೆ– ೬ ಎಲೆಗಳು, ವಿಭಿನ್ನ ಪೊಟ್ಟಣಗಳಲ್ಲಿ ಈ ಆರು ಎಲೆಗಳ ಪೈಕಿ ಮೊದಲ ಮೂರು ಬಿಡಿ ಎಲೆಗಳು ವಿಭಿನ್ನ ಚಾಮುಂಡೇಶ್ವರಿ ಭದ್‌ಗೆ ಸೇರಿದ್ದವುಗಳಾಗಿವೆ. ಚಾಮುಂಡೇಶ್ವರಿ ಒಡೆಯರ ಆರಾಧ್ಯದೈವ. ಚಾಮುಂಡೇಶ್ವರಿ ಭದ್‌ದ ಮೊದಲ ಎಲೆಯಾಗಿದೆ. ಚಾಮುಂಡೇಶ್ವರಿ ಎಲೆಯನ್ನು ಹೊಂದಿರುವಂತೆ ಇತರೆ ಮೂರು ಆಟಗಾರರಿಂದ ತಲಾ ಎರಡು ಎಲೆಗಳನ್ನು ಪಡೆಯುವದರೊಂದಿಗೆ ಆಟವನ್ನು ಪ್ರಾರಂಭಿಸುತ್ತಾನೆ. ಈ ಎಲೆಯನ್ನು ಇತರೆ ಎಲೆಗಳಿಂದ ಬೇರ್ಪಡಿಸಬಹುದಾಗಿದೆ. ಅದರ ಬಣ್ಣ ಬಂಗಾರದ ಕಂದು ಬಣ್ಣದ್ದಾಗಿದ್ದು ಸಾಮಾನ್ಯವಾಗಿ ನಿರ್ಮಲ್ ಎಲೆಯಂತೆ ಕಂಡುಬರುತ್ತದೆ.

೧೪. R and N. Y. Leyden., The Playing Cards of India, page- 82

೧. ದೇವಿ ಚಾಮುಂಡಿಯು ಆಸನಾರೂಢಳಾಗಿ ಕುಳಿತಿದ್ದನ್ನು ಚಿತ್ರಿಸಲಾಗಿದೆ. ತಲೆ ಹಿಂದೆ ಒಂಭತ್ತು ಹೆಡೆಯ ಹಾವು ಇದೆ. ಅವಳು ತನ್ನ ಎಂಟೂ ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದಾಳೆ. ಮಹಿಷಾಸುರನನ್ನು ಕೊಲ್ಲಲು ತ್ರಿಶೂಲವನ್ನು ಬಳಸುತ್ತಿದ್ದಾಳೆ. ಮಹಿಷಾಸುರನು ಅವಳ ಮೊಣಕಾಲಿನ ಮೇಲೆ ಅಡ್ಡಲಾಗಿ ಬಿದ್ದಿದ್ದಾನೆ. ಕೋಣವು ಆತನ ಕೆಳಗಡೆ ಬಿದ್ದಿರುವುದು ಕಾಣುತ್ತದೆ. ದೇವಿಯು ಹೊಳೆಯುವ ಕಿರೀಟವನ್ನು ಹೊಂದಿದ್ದಾಳೆ.

೨. **ಮನ್ಮಥ – ಕಾಮಧೇನು** – ೧೫ ಮತ್ತು ೧೬ನೆಯ ಶತಮಾನದ ಎಲೆಗಳಲ್ಲಿ ಬಹು ಮುಖ್ಯವಾದ ಸ್ಥಾನವನ್ನು ಹೊಂದಿದ್ದಾನೆ. ಈ ಎಲೆ ಹುಕ್ಮುಗಳು ಅಥವಾ ದರ್ಬಾರಿ ಎಲೆಗಳನ್ನು ಪ್ರತಿನಿಧಿಸುತ್ತದೆ. ಇದರ ಸುತ್ತಲ ಬಣ್ಣವು ಬಂಗಾರ ಬಣ್ಣವಾಗಿದೆ. ಕಾಮದೇವನು ಕಬ್ಬಿನ ಗಣಿಕೆಯ ಬಿಲ್ಲನ್ನು ಹಿಡಿದಿದ್ದಾನೆ. ಅವನಲ್ಲಿ ವಿವಿಧ ಬಗೆಯಿದ್ದು ಅವನ ಬಣ್ಣ ಹಸಿರಾಗಿದೆ.

೩. **ಮೋಹಿನಿ ಮಿಯಾ** – ಇದು ಚಾಮುಂಡೇಶ್ವರಿ ಚಡ್ಡಾದ ಕೊನೆಯ suitನ ಕೊನೆಯ ಎಲೆಯಾಗಿದೆ. ಇದು ವಿಶೇಷ ಪ್ರಾಮುಖ್ಯವನ್ನು ಹೊಂದಿದೆ. ಹೇಗೆಂದರೆ ಯಾವುದೇ ಆಟಗಾರನು ತನ್ನ ತಂತ್ರಗಾರಿಕೆಯಲ್ಲಿ ಈ ಎಲೆಯೊಂದಿಗೆ ಗೆದ್ದನೆಂದರೆ, ಯಾರೇ ಯಾವುದೇ ತಂತ್ರಗಾರಿಕೆಯಿಂದ ಮುಂದಿದ್ದರೂ ಅವರು ಸೋಲುತ್ತಾರೆ.

ಮೋಹಿನಿಯು ವಿಷ್ಣುವಿನ ಸ್ತ್ರೀರೂಪಧಾರಿಯಾಗಿದ್ದು ಸುತ್ತಲೂ ನಾಲ್ಕು ಮೀನುಗಳಿಂದ ಚಿತ್ರಿಸಲಾಗಿದೆ. ಈ ಛದ್ ಎಲೆಗಳಲ್ಲಿ ಸಂಖ್ಯಾ ಎಲೆಗಳನ್ನು ಮರುಕಳಿಸಿದ ಸಂಖ್ಯೆಗಳಿಂದ ಮುದ್ರಿಸಲಾಗಿಲ್ಲ. ಬದಲಾಗಿ ರಾಶಿ ಚಿಹ್ನೆಗಳನ್ನು ಉಪಯೋಗಿಸಲಾಗಿದೆ. ಒಂದರಿಂದ ಹನ್ನೆರಡರವರೆಗೆ ಹೀಗೆ ಉಪಯೋಗಿಸಲಾಗಿದೆ.

೪. **ಆಲದೆಲೆಯ ಮೇಲೆ ಮಲಗಿದ ಬಾಲಕೃಷ್ಣ** – ಕೌತುಕ ನಿಧಿಯ ಪ್ರಕಾರ ಜಗನ್ಮೋಹನ ಛದ್‌ದ ಈ ಎಲೆಯು ಸ್ವತಂತ್ರ, ಚಕ್ರವರ್ತಿ ಸ್ಥಾನದ ಮತ್ತು ೧೨ನೇ ಎಲೆಯಾಗಿದೆ. ಈ ಎಲೆಯಲ್ಲಿ ಬಾಲಕೃಷ್ಣನು ಮಲಗಿರುವ ಚಿತ್ರಣವಿದೆ. ಇದು ಒಂದು ಪೊಟ್ಟಣದಲ್ಲಿ ೩೬೦ ಎಲೆಗಳನ್ನು ಹೊಂದಿದೆ. ಈ ೩೬೦ ಎಲೆಗಳ ಪೈಕಿ ೨೭ ಚಕ್ರವರ್ತಿ ಎಲೆಗಳಿವೆ. ಇವುಗಳನ್ನು ಆಟದ ಮೊದಲ ಭಾಗದಲ್ಲಿಯೇ ಆಡಬೇಕು. ಈ ಎಲೆಗಳು ಯಾವುದೇ suitಗೆ ಹೊಂದಿರುವುದಿಲ್ಲವಾದ ಕಾರಣ ಇವುಗಳನ್ನು ಸ್ವತಂತ್ರ ಎಲೆಗಳೆಂದು ಕರೆಯುವರು. ಈ ಎಲೆಗಳು ಇತರೆ ಎಲೆಗಳಿಗಿಂತ ಭಿನ್ನವಾಗಿದ್ದು ವಿಶೇಷವಾಗಿ ಬಣ್ಣ ಬಳಿದು, ಇವುಗಳ ಅಂಚು ವೈಭವವಾಗಿ ಚಿತ್ರಿಸಲ್ಪಟ್ಟಿರುತ್ತದೆ. ಈ ಎಲೆಗಳ ಚಿತ್ರಕಲೆ ೧೮ನೇ ಶತಮಾನದ ನಾಯಕ್ ಶೈಲಿಯ ಪ್ರಭಾವಕ್ಕೆ ಒಳಪಟ್ಟಿರುವುದನ್ನು ಕಾಣಬಹುದು.

೫. **ಸರ್ಪದ ಚಿತ್ರ** – ಎರಡು ರೆಕ್ಕೆಯನ್ನು ಹೊಂದಿರುವ ಸರ್ಪದ ಚಿತ್ರವಿರುವ ಎಲೆಗಳು ಜಗನ್ಮೋಹನ ಪೊಟ್ಟಣಕ್ಕೆ ಸೇರಿದವುಗಳಾಗಿವೆ. ಈ ಪೊಟ್ಟಣದ ಐದನೇ suitನ ಛದ್‌ವು ಚಂಡೇಶ್ವರನ ಅಧ್ಯಕ್ಷತೆಯನ್ನು ಹೊಂದಿದೆ. ಚಂಡೇಶ್ವರ ಶಿವನ ಅವತಾರ/ಇನ್ನೊಂದು ರೂಪ. ಇಲ್ಲಿ ಶಿವನು ನಟರಾಜನ ವೇಷದಲ್ಲಿದ್ದಾನೆ. ಈ ಛದ್‌ದ ಚಿಹ್ನೆಯು ಇತರೆ ಛದ್‌ಗಳಲ್ಲಿ ಕಂಡುಬರುತ್ತದೆ.

೬. **ಚಕ್ರವರ್ತಿ**– ಚಕ್ರವರ್ತಿ ಎಲೆಗಳ ಹೊರತಾಗಿ ಛದ್ ಪೊಟ್ಟಣಗಳಲ್ಲಿ ಇನ್ನೊಂದು ಬಗೆಯ ಎಲೆಯನ್ನು ಕಾಣಬಹುದು. ಇವುಗಳನ್ನು tribute ಎಲೆಗಳು ಎನ್ನುವರು. ಅಂದರೆ ಗೌರವಾನ್ವಿತ ಕಾಣಿಕಾ ಎಲೆಗಳು ಎಂದೂ ಸಾಂಧರ್ಭಿಕವಾಗಿ ಹೇಳಲಾಗುತ್ತದೆ. ಇವು ಸಹ ಸ್ವತಂತ್ರ ಎಲೆಗಳಾಗಿದ್ದು, ಬಹು ಮುಖ್ಯವಾದ ಪಾತ್ರ ವಹಿಸುತ್ತವೆ. ಈ ಮೇಲೆ (ಒಂದರಲ್ಲಿ) ಹೇಳಿದಂತೆ ಚಾಮುಂಡೇಶ್ವರಿ

ಎಲೆಯಿಂದ ಆಟ ಪ್ರಾರಂಭವಾಗಿ, ಆಟ ಪ್ರಾರಂಭ ಮಾಡಿದ ವ್ಯಕ್ತಿಯು ಇತರೆ ಮೂರು ಆಟಗಾರರಿಂದ ತಲಾ ಎರಡು ಎಲೆಗಳನ್ನು ಪಡೆಯುತ್ತಾನೆ.[೧೫] ಇಲ್ಲಿ ಈ tribute ಎಲೆಗಳು ಮುಖ್ಯವಾಗುತ್ತವೆ.

ಮೈಸೂರು ಗಂಜೀಫಾ ಆಟಗಳು

ಗಂಜೀಫಾ ಆಟದಲ್ಲಿ ಅನೇಕ ಪ್ರಕಾರಗಳಿವೆ. ಒಂದೊಂದು ಆಟಕ್ಕೆ ಒಂದೊಂದು ರೀತಿಯ ವಿಧಾನಗಳಿವೆ. ಕರ್ನಾಟಕದ ಮಟ್ಟಿಗೆ ಮೈಸೂರು ಅರಮನೆಯ ಸಂಪರ್ಕವಿದ್ದ ಜನರಿಗೆ ಮಾತ್ರ ಗಂಜೀಫಾ ಆಟದ ಪರಿಚಯವಿದೆ. ಸಾವಂತವಾಡಿಯಲ್ಲಿ ಗಂಜೀಫಾ ಕಲಾವಿದರ ಒಂದು ಓಣಿಯೇ ಇದ್ದು, ಇಲ್ಲಿಯ ಕೆಲವರಿಗೆ ಕೆಲವು ಆಟದ ಮಾಹಿತಿ ಇದೆ. ಮಂಡ್ಯ ಜಿಲ್ಲೆಯ ನಾಗಮಂಗಲದ ಶ್ರೀ ರಘುಪತಿ ಭಟ್ ಮತ್ತು ಬೆಂಗಳೂರಿನ ಹಿರಿಯ ಕಲಾವಿದೆ ಶ್ರೀಮತಿ ಸುಧಾ ವೆಂಕಟೇಶ್ ಮತ್ತು ಮೈಸೂರಿನ ಚಂದ್ರಿಕಾ ಪದ್ಮನಾಭನ್ ಅವರು ಗಂಜೀಫಾದ ಕೆಲವೊಂದು ಆಟದ ವಿಧಾನ ಕಲಿತಿರುವುದಲ್ಲದೆ ಗಂಜೀಫಾಕಲೆಯ ಕಲಾವಿದರೂ ಆಗಿದ್ದಾರೆ. ನಾಡಿನ ಹಿರಿಯ ತಲೆಮಾರಿನ ಇನ್ನೂ ಕೆಲವು ಜನರಿಗೆ ಈ ಆಟದ ಪರಿಚಯವಿರಬೇಕೆನಿಸುತ್ತದೆ. ನಾಡಿನಲ್ಲಿ ಎಲ್ಲೆಲ್ಲಿ ರಾಜರ ಆಳ್ವಿಕೆ ಇತ್ತೋ ಆ ಸಂಸ್ಥಾನಗಳಲ್ಲಿ ಸಾಮಾನ್ಯವಾಗಿ ಗಂಜೀಫಾ ಆಟ ಬಳಕೆಯಲ್ಲಿದ್ದಿರಬಹುದು. ಈ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ. ಈ ಆಟವೀಗ ಸಂಪೂರ್ಣ ನಿಂತಿದ್ದರೂ ಗಂಜೀಫಾ ಎಲೆಗಳ ನಿರ್ಮಾಣ ಮಾತ್ರ ಆಗುತ್ತಲಿದೆ. ಗಂಜೀಫಾ ಆಟದ ಬಗೆಗೆ ಸಂಪೂರ್ಣ ಪರಿಚಯವಿರುವವರು ತೀರ ವಿರಳ, ಆದರೆ ಅಲ್ಪ ಸ್ವಲ್ಪ ಗೊತ್ತಿದ್ದವರೇ ಹೆಚ್ಚು.

ಮೈಸೂರು ರತ್ನಮ್ಮ ಅವರ ಕುಟುಂಬದ ಸಂಬಂಧಿಗಳು ಮೈಸೂರಿನ ಅರಮನೆಯ ಸಂಪರ್ಕ ಉಳ್ಳವರಾಗಿದ್ದುದಾಗಿಯೂ ತಿಳಿದುಬರುತ್ತದೆ. "ನನ್ನ ತಾಯಿ-ತಂದೆಯ ಕಡೆಯ ಹಿರಿಯರು ರೀಜೆಂಟ್ ವಾಣಿವಿಲಾಸ ಸನ್ನಿಧಾನದವರ ಬಳಿ ಕೆಲಸದಲ್ಲಿದ್ದರು. ದೊಡ್ಡಪ್ಪ, ತಾತ ಮೊದಲಾದವರು ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದರು. ನಾನು ಚಿಕ್ಕ ಹುಡುಗಿಯಾಗಿದ್ದಾಗ ದೊಡ್ಡಪ್ಪ ಮತ್ತು ಇತರರು ಆಡುವ ಗಂಜೀಫಾ ಆಟ ನೋಡಿದ್ದೆ. ಆಟಕ್ಕೆ ಸಹಾಯ ಮಾಡುತ್ತಿದ್ದೆ. ಅತ್ಯಂತ ಬುದ್ಧಿಶಕ್ತಿ, ಚಮತ್ಕಾರ, ಪುರಾಣಗಳ ಕೂಲಂಕುಷ ಅಧ್ಯಯನ, ಸರಿ ಎಂದು ಸಾಧಿಸುವ ತಾರ್ಕಿಕ ಶಕ್ತಿ, ಮಹಾಕಾವ್ಯ, ನಾಟಕಗಳೆಲ್ಲ ಕಂಠಪಾಠವಾಗಿರುವ ಅದ್ಭುತ ಪಾಂಡಿತ್ಯವುಳ್ಳ ಮಹವಿದ್ವಾಂಸರು ಆಡುತ್ತಿದ್ದ ಆಟ. ಭಗವದುಪಾಸನೆಯ ವೈವಿಧ್ಯಮಯ ಆಟವಿದು.

ದಶಮಿ, ಏಕಾದಶಿ, ಉಪಾಹಾರವಾದ ನಂತರ ಆಟಗಾರರು ಕಡೆಯ ಪಕ್ಷ ನಾಲ್ಕು ಜನ (ಹೆಚ್ಚಿಗೆ ಎಷ್ಟು ಜನ ಬೇಕಾದರೂ ಇರಬಹುದು) ಆಟಕ್ಕೆ ತೊಡಗುತ್ತಿದ್ದರು. ಆರಂಭದಲ್ಲಿ ಶ್ರೀಗಂಧದ ಮರದ ಪೆಟ್ಟಿಗೆಯಿಂದ ಗಂಜೀಫಾ ಎಲೆಗಳ ಕಟ್ಟನ್ನು ನಾಯಕರು ಹೊರಗೆ ತೆಗೆಯುತ್ತ ವೇದಸೂಕ್ತ ಪಠಿಸುತ್ತಿದ್ದರು. ಅರಳಿ ಎಲೆಯ ಆಕಾರದ, ಅಂಗೈ ಅಗಲದ ಹಸ್ತಿದಂತದ ಹಾಳೆಗಳಲ್ಲಿ ಒಂದಡೆ ಕಲಾತ್ಮಕಚಿತ್ರ. ಇನ್ನೊಂದೆಡೆ ಸಂಕೇತಾರ್ಥ ದಶಾವತಾರದ ಚಿತ್ರಗಳು ಇರುತ್ತವೆ. ನಾಯಕ ಎಲೆಗಳನ್ನು ದೊಡ್ಡ ಬೆಳ್ಳಿ ತಟ್ಟೆಗೆ ತುಂಬಿಕೊಂಡು ಸಿದ್ಧರಾಗುತ್ತಿದ್ದರು. ಆಟದಲ್ಲಿ ಹಣವಿಟ್ಟಾಗ ಎಲ್ಲಾ ಆಟಗಾರರು ಎದ್ದು ಹೊರಕ್ಕೆ ಹೋಗುತ್ತಿದ್ದರು. ಚಿಕ್ಕ ಹುಡುಗಿಯೊಬ್ಬಳು ಮಾತ್ರ ಅಲ್ಲಿ ಕುಳಿತಿರುತ್ತಿದ್ದಳು ಬಳಿಕ ನಾಯಕ ಬೆಳ್ಳಿ ತಟ್ಟೆಯನ್ನು ಕೇರುತ್ತಿದ್ದರು. ಬಿದ್ದ ಎಳೆಗಳನ್ನು ಹುಡುಗಿ ಒಂದೊಂದಾಗಿ ಆರಿಸಿ ಒಬ್ಬೊಬ್ಬರಿಗೆ ೧೫-೨೦ ಎಲೆಗಳನ್ನು ಹಂಚುತ್ತಿದ್ದಳು. ಆಗ ಕಲಾತ್ಮಕ ಚಿತ್ರ ಹೊರಮೈಯಲ್ಲಿ, ಸಂಕೇತಾರ್ಥ ಒಳಮೈಯಲ್ಲಿ

೧೫. ಎಂ. ಎಲ್. ಶಿವಶಂಕರ್ : ಗಂಜೀಫಾ, ಪು: ೭-೮

ಬರಬೇಕು. ಆಟ ಕಠಿಣವಾದಾಗ ಹುಡುಗಿ ಕಣ್ಣುಮುಚ್ಚಿ ಎಲೆಗಳನ್ನು ತೆಗೆಯುತ್ತಿದ್ದಳು. ನಾಯಕ ಸಹ ಕಣ್ಣು ಮುಚ್ಚಿ ಎಲೆಗಳನ್ನು ಜೋಡಿಸುವುದು ರೂಢಿ. ಬಳಿಕ ಒಳಕ್ಕೆ ಬಂದ ಆಟಗಾರರು ಸ್ಥಾನಪಲ್ಲಟ ಮಾಡಿ ಕುಳಿತುಕೊಳ್ಳುತ್ತಿದ್ದರು. ಆಟದ ಎಲೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದರು. ಹುಡುಗಿಯಿಂದ ಚೀಟಿ ತೆಗೆಸಿ, ಬಂದ ಚೀಟಿಯಲ್ಲಿರುವ ಅವತಾರವನ್ನೇ ಮುಖ್ಯ ಬಾಜಿ ಎಂದು ನಿರ್ಧರಿಸುತ್ತಿದ್ದರು.

ಹೀಗೆ ಆಟ ಆರಂಭವಾಗುತ್ತಿತ್ತು. ನಾಯಕ ಸುಮಾರು ೧೦–೧೫ ಎಲೆಗಳನ್ನು ಒಂದು ಕಡೆ ಜೋಡಿಸುತ್ತಿದ್ದನು. ಇದು ಪಣತ. ಬಳಿಕ ನಾಯಕ ತನ್ನ ಬಳಿ ಇದ್ದ ಒಂದು ಎಲೆಯನ್ನು ಬೆಳ್ಳಿ ತಟ್ಟೆಗೆ ಎಸೆಯುತ್ತಿದ್ದರು. ಆ ಎಲೆ ಕೂರ್ಮಾವತಾರಕ್ಕೆ ಸಂಬಂಧಪಟ್ಟಿದ್ದಾದರೆ ಅದಕ್ಕೆ ಸಂಬಂಧಿಸಿದ ಶ್ಲೋಕ ಹೇಳಿ, ಆ ಎಲೆಯನ್ನು ಮತ್ತೊಬ್ಬ ವೀರ (ನಾಯಕ) ಎತ್ತಿಕೊಳ್ಳಬಹುದು.[೧೬] ಆ ಎಲೆಯ ಅರ್ಥವನ್ನು ಶ್ಲೋಕದಲ್ಲಿ ಹೇಳಿದಲ್ಲಿ, ಇನ್ನೊಂದು ಎಲೆ ಎತ್ತಿಕೊಂಡು ಮತ್ತೆ ಅವರೇ ಆಟ ಮುಂದುವರಿಸಬಹುದು. ಇಲ್ಲಿ ಅರ್ಥ ಹೇಳಿದ ಬೇರೊಬ್ಬ ವೀರ ಎಲ್ಲರ ಒಪ್ಪಿಗೆ ಪಡೆದಲ್ಲಿ, ಎಲೆ ಎತ್ತಿಕೊಂಡು ಆಟ ಮುಂದುವರಿಸಬಹುದು. ಪ್ರಖ್ಯಾತ ಶ್ಲೋಕ ನೆನಪಿಗೆ ಬರದಿದ್ದಲ್ಲಿ, ಆಶುಕವನ, ಶ್ಲೋಕ ಕಟ್ಟಿ ಹೇಳಬಹುದಿತ್ತು. ಹೀಗೆ ಇಂದಿನ ರೆಮಿ, ಚದುರಂಗ, ಡ್ರಾಪ್ಸ್, ಪಗಡೆ ಎಲ್ಲ ಆಟಗಳ ನಿಯಮಗಳನ್ನು ಒಳಗೊಂಡು, ಆಟ ಒಂದು ಒಂದೂವರೆ ಗಂಟೆ ಕಾಲ ನಡೆಯುತ್ತಿತ್ತು.

ಮಹಾವಿದ್ವಾಂಸರು ನರಸಿಂಹಾವತಾರದ ೧೦–೧೧ ಎಲೆಗಳಲ್ಲಿ ಕಟ್ಟ ಬೇಕಾದುದನ್ನು ೧೫–೨೦ ಎಲೆಗಳಲ್ಲಿ ಕಟ್ಟುತ್ತಿದ್ದರು. ತನ್ನ ವಾಕ್‌ಸಾಮರ್ಥ್ಯದಿಂದ ಮತ್ಸ್ಯಾವತಾರದ ಒಂದು ಎಲೆಯನ್ನು ನರಸಿಂಹನ ಧ್ವಜ ಎಂದು ಸಾಧಿಸಿ, ಸಾಮಾನ್ಯರಿಗೆ ಗೊತ್ತಿಲ್ಲದ 'ರುದ್ರಯಾಮಳಿ' ಅಥವಾ 'ಆಪಸ್ತಂಭ' ಅಥವಾ ಜೈನರ ಪದ್ಮಾವತಿ, ಭೈರವಕಲ್ಪ ಗ್ರಂಥದಿಂದ ಶ್ಲೋಕ ಹೇಳಿದಲ್ಲಿ, ಎಲ್ಲರೂ ಒಪ್ಪಿದಲ್ಲಿ, ಮತ್ಸ್ಯಾವತಾರದ ಎಲೆಗಳ ಜೋಡಣೆ ಕಡಿಮೆಯಾಗಿ ಆ ಆಟಗಾರ ಸೋಲುತ್ತಾನೆ. ರಾಮಾವತಾರದ ಮುರಿದ ಬಿಲ್ಲಿನ (ಗಂಜೀಫಾ) ಹಾಳೆಯನ್ನು ತೆಗೆದುಕೊಂಡು ನರಸಿಂಹಾವತಾರದಲ್ಲಿ ನರಸಿಂಹ ಹಿರಣ್ಯಕಶ್ಯಪುವಿನ ಬಿಲ್ಲು ಮುರಿದನೆಂದು ಸಿಂಹಾಚಲ ಮಾಹಾತ್ಮ್ಯದಿಂದ ಶ್ಲೋಕ ಹೇಳಿದಲ್ಲಿ, ರಾಮಾವತಾರದ ಜೋಡಣೆ ಕಡಿಮೆಯಾಗುತ್ತದೆ. ಮಡಿಕೆ ಚಿತ್ರ (ಕೃಷ್ಣಾವತಾರ)ದ ಎಲೆಯನ್ನು ಎತ್ತಿಕೊಂಡು ನರಸಿಂಹ ಕುಡಿದ ಪಾನಕ ಕುಂಭವೆಂದು ಸಾಧಿಸಿ, ಶಾರದಾಕಲ್ಪ ಮಹಾಪುರಾಣದಿಂದ ಶ್ಲೋಕ ಹೇಳಿದಲ್ಲಿ ಎಲ್ಲರೂ ಬಾಯಿ ಮುಚ್ಚುತ್ತಿದ್ದರು.

ಹೀಗೆ ನರಸಿಂಹಾವತಾರದ ಎಲೆಗಳನ್ನು ೧೫–೨೦ ಜೋಡಿಸಿದವರು ಪಣ ಗೆಲ್ಲುತ್ತಿದ್ದರು. ಪಣದ ಹಣವನ್ನು ಎತ್ತಿ ಕೊಳ್ಳುತ್ತಿದ್ದರು. ಮಾರನೆಯ ದಿನದಂದು ಆ ಹಣ ಖರ್ಚು ಮಾಡಿ, ಭಾರೀ ಊಟವನ್ನು ಎಲ್ಲರಿಗೂ ನೀಡುತ್ತಿದ್ದರು. ಇನ್ನು ಶ್ರೀ ಚಾಮುಂಡಾಂಬಿಕ ಕ್ರೀಡಾ 'ಸಮೂಹ ಮಾಧ್ಯಮ'ದ ಆಟ. ಬಹುಶಃ ಈ ಆಟ ಆಡುವ ವಿದ್ವಾಂಸರಿಂದಲೇ ಶ್ರೀ 'ತತ್ವನಿಧಿ' ಅಥವಾ 'ಶ್ರೀ ಶಕ್ತಿನಿಧಿ' ಗ್ರಂಥಗಳು ರೂಪುಗೊಂಡಿರಬೇಕು. ಇದು ಸುಮಾರು ೩–೪ ಗಂಟೆ ಕಾಲ ಹಿಡಿಯುವ ಆಟ. ಶ್ಲೋಕ ಹೇಳುವಾಗ ಅರ್ಥಕ್ಕೆ ಪ್ರಾಧಾನ್ಯ ಇರುತ್ತಿತ್ತೇ ಹೊರತು ಭಾಷೆ, ಮತಗಳಿಗಲ್ಲ, ವಿದ್ವಾಂಸರಲ್ಲಿ ಜಾತಿಭೇದವಿರುತ್ತಿರಲಿಲ್ಲ. ಆಟದ ಸಮಯದಲ್ಲಿ ನಾಯಕರ ಮಾತಿಗೆ ಪೂರ್ಣ ಗೌರವವಿರುತ್ತಿತ್ತು. ಅಂದು ಎಲ್ಲರೂ ಪ್ರಾಮಾಣಿಕವಾಗಿ ಈ ಆಟವನ್ನು ಆಡುತ್ತಿದ್ದರು. ಎಸ್. ರತ್ನಮ್ಮ ಅವರು ನೀಡಿದ

---

೧೬. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪು : ೧೬೨–೧೬೫

ಈ ವಿವರಣೆ ತುಂಬ ಮೌಲಿಕವಾಗಿದೆ. ಸಾವಂತವಾಡಿಯಲ್ಲಿ ಇಷ್ಟು ದೀರ್ಘವಾದ ಗಂಜೀಫಾ ಆಟದ ವಿವರ ದೊರೆಯುವುದಿಲ್ಲ.

ಈ ಆಟವನ್ನು ಕುರಿತು "ಸಾವಂತವಾಡಿಯ ಗಂಜೀಫಾ 'ದಶಾವತಾರ' ವಿಷಯದ ಮೇಲೆಯೇ ಆಧಾರಿತವಾದವು. ಪ್ರತಿ ಅವತಾರದ ಹನ್ನೆರಡು ಎಲೆಗಳು ಇದ್ದು, ಒಟ್ಟಿನಲ್ಲಿ ನೂರಿಪ್ಪತ್ತು ಎಲೆಗಳಿರುತ್ತವೆ. ಹನ್ನೆರಡು ಎಲೆಗಳಲ್ಲಿ ಒಂದು ಮುಖ್ಯ ಎಲೆ, ಇನ್ನೊಂದು ಉಪಮುಖ್ಯ ಎಲೆ (ವಝೀರ) ಹಾಗೂ ಗುಣಾನುಕ್ರಮವಾಗಿ ಬೇರೆ ಹತ್ತು ಎಲೆಗಳು ಇರುವವು. ಕಡಿಮೆಯೆಂದರೆ ಮೂವರು ವ್ಯಕ್ತಿಗಳು ಕುಳಿತು ಇದನ್ನು ಆಡುತ್ತಿದ್ದರು. ಗುಣಾನುಕ್ರಮದಲ್ಲಿ ಮೊದಲಿನ ೫ ಎಲೆಗಳಿಗೆ ಹೆಚ್ಚಿನ ಗುಣಗಳುಂಟು, ಮೊದಲಿನ ೫ ಗುಂಪಿನಲ್ಲಿ ಇಲ್ಲಿ ಒಂದಕ್ಕೆ ಕಡಿಮೆ ಗುಣ. ೧೦ಕ್ಕೆ ಹೆಚ್ಚು ಗುಣಗಳು. ಇದೇ ಎರಡನೇ ಐದರ ಗುಂಪಿನಲ್ಲಿ ಎಣಿಕೆ ವಿರುದ್ಧವಾಗಿರುತ್ತದೆ. ಇಲ್ಲಿ ಒಂದಕ್ಕೆ ಹೆಚ್ಚಿನ ಗುಣಗಳು. ಹಗಲು ಆಡುವಾಗ ಮುಖ್ಯ ಎಲೆ 'ರಾಮಾವತಾರ' ಇಲ್ಲವೇ 'ನರಸಿಂಹ ಅವತಾರ'ಕ್ಕೆ ಸಂಬಂಧಿಸಿದ್ದಾಗಿದ್ದರೆ, ಇರುಳಲ್ಲಿ ಆಡುವಾಗ 'ಕೃಷ್ಣಾವತಾರ'ಕ್ಕೆ ಸಂಬಂಧಿಸಿದ್ದೇ ಮುಖ್ಯ ಎಲೆಯಾಗಿರುತ್ತದೆ" ಎಂದು ಹೇಳುವ ಎಸ್.ಸಿ. ದೇಸಾಯಿಯವರ ವಿವರಗಳು ಉತ್ತರ ಕರ್ನಾಟಕದ ಗಂಜೀಫಾ ಆಟದ ವಿಧಾನಗಳನ್ನು ತಿಳಿಸುತ್ತವೆ. ಗಂಜೀಫಾ ಭಾರತೀಯ ಮಟ್ಟದ ಆಟವಾದರೂ ಇದರಲ್ಲಿ ಪ್ರಾದೇಶಿಕ ಭೇದಗಳಿವೆ. ಇದರಲ್ಲಿ ೧೬ ಎಲೆಗಳಿಂದ ೩೬೦ ಎಲೆಗಳವರೆಗಿನ ಆಟಗಳೂ ಇದ್ದವು. ಹಳೆಯ ಮೈಸೂರಿನಲ್ಲಿ ಇವುಗಳನ್ನು ದೇವರಾಟದ ಎಲೆ (ದಶಾವತಾರದ ಚಿತ್ರಗಳು)ಗಳೆನ್ನುತ್ತಾರೆ. "ದೇವರಾಟದ ಎಲೆ ಎಂದು ವಿಷ್ಣುವಿನ ದಶಾವತಾರದ ಪ್ರತಿಯೊಂದು ಅವತಾರದ ಚಿತ್ರಗಳಿರುವ ದುಂಡು ಎಲೆಗಳನ್ನು" ಈ ಆಟದಲ್ಲಿ ಉಪಯೋಗಿಸುತ್ತಿದ್ದರು. ಈ ಒಂದು ಆಟದ ಎಲೆಗಳ ಕಟ್ಟಿನಲ್ಲಿ ಒಂದುನೂರಾ ಇಪ್ಪತ್ತು ಎಲೆಗಳು ಬಳಸಲ್ಪಡುತ್ತಿದ್ದವು. ಪ್ರತಿ ಅವತಾರದ ಹತ್ತು ಎಲೆಗಳು ಹಾಗೂ ಹನ್ನೊಂದು ಮತ್ತು ಹನ್ನೆರಡನೆಯ ಎಲೆಗಳು ಹಾಗೂ ಹನ್ನೊಂದು ಮತ್ತು ಹನ್ನೆರಡನೆಯ ಎಲೆಗಳು ರಾಜ ಮತ್ತು ಮಂತ್ರಿಗಳನ್ನು ಬಳಸಿ ಒಟ್ಟು ಒಂದು ಅವತಾರದ ಹನ್ನೆರಡು ಎಲೆಗಳು ಹಾಗೂ ಹತ್ತು ಅವತಾರದಿಂದ ಒಟ್ಟು ೧೨೦ ಎಲೆಗಳು. ಯಾವ ಎಲೆಗಳ ಮೇಲೂ ಸಂಖ್ಯೆಗಳಿರುತ್ತಿರಲಿಲ್ಲ. ಬದಲಾಗಿ ಪ್ರತಿ ಎಲೆಯ ಸಂಖ್ಯೆ ಮೇಲಿನ ವಿಷ್ಣುವಿನ ಅವತಾರದ ಸಂಖ್ಯೆಗಳನ್ನು ಚಿತ್ರಿಸುವ ಮೂಲಕ ಆ ಬಿಡಿ ಎಲೆಯ ಸಂಖ್ಯೆ ಹಾಗೂ ಬಣ್ಣದ (ಅಥವಾ ಗುಂಡಿನ) ಗುರುತು ಸಿಕ್ಕುತ್ತಿತ್ತು. ಉದಾಹರಣೆಗೆ, ಮತ್ಸ್ಯಾವತಾರದ ಒಂದು ಎಲೆಯಲ್ಲಿ ಐದು ಮತ್ಸ್ಯಾವತಾರದ ಚಿತ್ರಗಳಿದ್ದರೆ, ಆ ಬಿಡಿ ಎಲೆ ಮತ್ಸ್ಯಾವತಾರದ ಬಣ್ಣದ ಐದನೆಯ ಎಲೆ ಎಂದು ಗುರುತಿಸಲ್ಪಡುತ್ತಿತ್ತು. ಮತ್ಸ್ಯಾವತಾರದ ಹತ್ತನೆಯ ಎಲೆಯಲ್ಲಿ ಹೀಗೆ ಹತ್ತು ಮತ್ಸ್ಯದ ಚಿತ್ರಗಳಿರುತ್ತಿದ್ದವು. ಸಾಮಾನ್ಯವಾಗಿ ಪ್ರತಿ ಅವತಾರದ ಮೊದಲನೆಯ ಎಲೆಯಲ್ಲಿ ಅವತಾರದ ಪೂರ್ಣ ಚಿತ್ರ ಮತ್ತು ಅದರ ಮುಂದಿನ ಎಲೆಗಳಲ್ಲಿ ಸಂಖ್ಯೆಗೆ ಅನುಗುಣವಾಗಿ ಸಂಕೇತಗಳು ಮಾತ್ರ ಚಿತ್ರಿಸಲ್ಪಡುತ್ತಿದ್ದವು. ಉದಾಹರಣೆಗೆ, ಪರುಶುರಾಮನವತಾರದ ಮೊದಲನೆಯ ಎಲೆಯಲ್ಲಿ ಪರಶುರಾಮನ ಚಿತ್ರಣ ಮಾತ್ರ ಇರುತ್ತಿತ್ತು. ದೇವರಾಟವೆಂಬ ಹಿನ್ನೆಲೆ ಇದ್ದುದರಿಂದ ಈ ಆಟದ ಪ್ರಾರಂಭಕ್ಕೆ ಹಾಗೂ ಮುಕ್ತಾಯಕ್ಕೆ ಎಲೆಗಳನ್ನು ಭಕ್ತಿ, ಗೌರವದಿಂದ ನಮಸ್ಕರಿಸಿ ಗೌರವ ಸಲ್ಲಿಸುತ್ತಿದ್ದರು. ಆ ಗೌರವದಲ್ಲಿ ತಮಗೆ ಯಶ ದೊರೆಯಲಿ ಎಂಬ ಆಶಾಪೂರಿತ ನಂಬಿಕೆಯೂ ಇದ್ದುದುಂಟು. ಹೀಗೆ ಚಿತ್ರಗಳ ಮೂಲಕವಾಗಿ, ಕೆಲವುಸಲ ಚಿತ್ರದ ಸಂಕೇತಗಳ ಮೂಲಕವಾಗಿ ಗಂಜೀಫಾ ಆಟವನ್ನು ಆಡುತ್ತಿದ್ದರು. ಈ ಆಟದ ಮೂಲ ಜೀವಾಳ ಚಿತ್ರಗಳು.

ಗಂಜೀಫಾ ಆಟದಲ್ಲಿ ಚಿತ್ರಾಂಕಿತವಾದ ಗಂಜೀಫಾ ಎಲೆಗಳದೇ ಮಹತ್ವದ ಪಾತ್ರವೆಂಬುದನ್ನು ಮರೆಯಬಾರದು.[೧೭]

ಈ ಕ್ರೀಡೆ ಒಂದು ಸಾವಿರ ವರ್ಷದ ಭಾರತೀಯ ಆಟ, ಭಾರತದಲ್ಲಿ ಹುಟ್ಟಿದ ಕ್ರೀಡಾಪತ್ರ, ಪಾಶ್ಚಿಮಾತ್ಯ ದೇಶದವರು ತಮಗೆ ಬೇಕಾದಂತೆ ಹೆಸರಿಸಿ ಮಾರ್ಪಾಡುಗಳನ್ನು ಮಾಡಿ ಗಂಜೀಫ, ಇಸ್ಪೇಟ್ ಹೀಗೆ ಮುಂತಾದ ಹೆಸರುಗಳಿಂದ ಕರೆದರು. ಈ ಎಲೆಗಳು ಆಯತಾಕಾರ, ವೃತ್ತಾಕಾರ, ಮೊಟ್ಟೆಯಾಕಾರಗಳಲ್ಲದೆ, ಮೈಸೂರು ಶೈಲಿ ಗಂಜೀಫಾಗಳು ಆಯತಾಕಾರ ಮತ್ತು ವೃತ್ತಾಕಾರಗಳಲ್ಲಿವೆ. ಕ್ರೀಡಾಪತ್ರದ ಆಟವನ್ನು ವಿಶೇಷ ಚಮತ್ಕಾರಗಳೊಂದಿಗೆ ಆಡುತ್ತಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ (೧೭೭೯-೧೮೬೮) ಬರೆದ ಶ್ರೀತತ್ವನಿಧಿ ಗ್ರಂಥ (ಕೈಯಲ್ಲಿ ಬರೆದ, ಕಲಾವಿದರಿಂದ ಕಲಾಕೃತಿಯನ್ನು ನಿರ್ಮಿಸಿದ ಪುಸ್ತಕ ೧೮೩ ವರ್ಷ ಹಳೆಯದು) ದಲ್ಲಿ ಸರ್ವಸಾಮ್ರಾಜ್ಯ ಪೇಟಿಕಾ ಎಂಬ ೬೦೦ ಎಲೆಗಳ ಸುಂದರ ಆಟ ಮತ್ತು ಆಟಕ್ಕೆ ಬೇಕಾದಂತೆ ಚಿತ್ರಗಳ, ಚಕ್ರವರ್ತಿಗಳ ಹೆಸರು ಮತ್ತು ಶ್ಲೋಕಗಳಿವೆ.

ಮೈಸೂರು ಗಂಜೀಫಾ ಕಟ್ಟುಗಳಲ್ಲಿ ದುರ್ಗಾಸಪ್ತಶತಿ, ರಾಮಾಯಣ, ಶಿವಪುರಾಣ, ಮಹಾಭಾರತ ಮೊದಲಾದ ಸುಂದರವಾದ ಚಿತ್ರಗಳನ್ನು ಕಾಣಬಹುದು. ಭಾಗವತ ಮುಂತಾದವುಗಳಿಂದ ಚಿತ್ರಗಳನ್ನು ಆಯ್ಕೆ ಮಾಡಿ ಒಂದೊಂದು ಆಟವನ್ನು ನಿರ್ಮಿಸಿದ್ದಾರೆ. ಗಂಜೀಫಾ ಎಲೆಗಳಲ್ಲಿನ ಕಲಾಕೃತಿಗಳು ವಿಶೇಷತೆಗಳಿಂದ ಕೂಡಿದ್ದಾಗಿವೆ. ಎದುರು ಋಜ್ವಾಗತ ಭಂಗಿಗಳಲ್ಲಿ ಕಲಾಕೃತಿಗಳು ಹೆಚ್ಚಾಗಿ ಚಿತ್ರಿತವಿದ್ದು ಮೈಬಣ್ಣಗಳು ಉಬ್ಬನೆ ಆಕಾರವನ್ನು ಪಡೆದುಕೊಂಡಿವೆ. ಆಭರಣದ ಜಾಗ ತಗ್ಗಾಗಿದ್ದು ಕೈಯಿಂದ ಕಲಾಕೃತಿಯನ್ನು ಹೆಚ್ಚಿಗೆ ಮುಟ್ಟುವುದರಿಂದ ಚಿನ್ನ ತಗ್ಗಾದ ಆಭರಣ ಸವೆಯದಿರಲಿ ಮತ್ತು ಮುಟ್ಟಿದಾಗ ಸ್ಪರ್ಷವಾಗುವ ರೀತಿಯಲ್ಲಿ ಮತ್ತು ಮೈಬಣ್ಣ ಉಬಿರುವುದರಿಂದ ಹೆಚ್ಚು ಆಟವನ್ನು ಆಡಿದರೂ ಸವೆಯದಿರಲಿ ಎಂದು ವಿಶೇಷ ಸೂತ್ರಗಳೊಂದಿಗೆ ಗಂಜೀಫಾ ಕಲಾಕೃತಿಗಳು ಸೂಕ್ಷ್ಮ ಚಿಕಣಿ ಕೆಲಸ ಹೊಂದಿದ್ದು ಒಂದೊಂದು ಎಲೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಭಾರತದ ಗಂಜೀಫಾಗಳಲ್ಲಿ ಮೈಸೂರು ಗಂಜೀಫಾಗಳು ಸುಂದರವಾಗಿದ್ದನ್ನು ಗಮನಿಸಬಹುದು.

ಈ ಶ್ರೀ ಮುಮ್ಮಡಿ ಕೃಷ್ಣರಾಜ ಕಂಠೀರವೇಂದ್ರ ದಶಕ ೧೭೭೧ನೇ ಸೌಮ್ಯ ಸಂವತ್ಸರದ ಜ್ಯೇಷ್ಠ ಶುದ್ಧ ಒಂದರಲ್ಲೂ ವಿರಚಿತವಾದ ೬೩೬ ಎಲೆ ಸರ್ವ ಸಾಮ್ರಾಜ್ಯ ಪೀಠಿಕಾ ಗಂಜೀಫಾಗೆ ಬಾಜೂ ೩೦ಕ್ಕೆ ದರ ೧೮ ಎಲೆಯ ಮೇರೆಗೆ ೫೪೦ ಚಕ್ರವರ್ತಿಗಳು ೬೪ ನವಿಲು-೭ ಹಂಸ ೭ ಗಿಣಿ ಎಲೆ ೧೧ ಚೇಟಿಕಾ ಸ್ತ್ರೀಯರ ಎಲೆ ೭ ಗಂಜೀಫಾ ನಿರ್ಮಾಣ ಮಾಡುವುದಕ್ಕೆ ಶ್ಲೋಕಗಳು. ಇದು ಗಂಜೀಫಾ ಸರ್ವ ಸಾಮ್ರಾಜ್ಯ ಪೇಟಿಕಾದ ಮುಮ್ಮಡಿ ಕೃಷ್ಣರಾಜ ಒಡೆಯರು ರಚಿಸಿದ ಪುಸ್ತಕ ಪ್ರಾರಂಭ. ಗಂಜೀಫಾ ನಿರ್ಮಾಣಕ್ಕೆ ಶ್ಲೋಕಗಳು ಮತ್ತು ಆಟದ ವಿವರಗಳೊಂದಿಗೆ ಚಿತ್ರಿಸುತ್ತಿದ್ದು ತಿಳಿದುಬರುತ್ತದೆ. ಪ್ರತಿಯೊಂದು ಗಂಜೀಫಾ ಕಲಾಕೃತಿಯನ್ನು ಶ್ಲೋಕದ ಹಿನ್ನೆಲೆಯಲ್ಲಿ ವರ್ಣ ಮತ್ತು ಅಳತೆಯ ಪ್ರಮಾಣಗಳೊಂದಿಗೆ ಚಿತ್ರಿಸಲಾಗುತ್ತಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರು ಅತ್ಯಂತ ಸುಂದರವಾದ ೧೮ ಆಟಗಳನ್ನು ಸ್ವತಃ ನಿರ್ಮಾಣ ಮಾಡಿದ್ದಾರೆ. ಎಲ್ಲಾ ಆಟಗಳನ್ನು ಶ್ಲೋಕದೊಂದಿಗೆ ಕಲಾಕೃತಿಯನ್ನು ರಚಿಸಲಾಗಿದೆ. ಈ

೧೮ ಆಟಗಳು ಹೀಗಿವೆ:

೧. ಚಾಮುಂಡೇಶ್ವರಿ	– ೩೨೦	೧೦. ದೇವಿ ದಶಾವತಾರ	– ೧೮೦
೨. ಜಗನ್ಮೋಹನ	– ೩೬೦	೧೧. ದಿಕ್ಪಾಲ	– ೧೬೦

೩. ಮಹೀಷ ಮರ್ಧಿನಿ	– ೨೧೬	೧೨. ಮನೋಹರ	– ೧೬೦
೪. ನವೀನ ದಶಾವತಾರಿ	– ೨೪೦	೧೩. ಸರ್ವಮಂಗಳ	– ೧೬೦
೫. ನವೀನ ರಾಮ	– ೩೬	೧೪. ನವರತ್ನ	– ೧೬೦
೬. ನವಗ್ರಹ	– ೨೧೬	೧೫. ರಾಮಾಯಣ	– ೯೬
೭. ಸದ್ಯೋಜಾತ	– ೭೨	೧೬. ದಶಾವತಾರ	– ೧೨೦
೮. ಶ್ರೀ ಕೃಷ್ಣರಾಜ	– ೭೨	೧೭. ಸರ್ವಸಾಮ್ರಾಜ್ಯ	– ೬೩೬
೯. ಪಂಚಪಾಂಡವ	– ೨೧೬	೧೮. ಅಷ್ಟೈಶ್ವರ್ಯ	– ೩೨೦

ಈ ಗಂಜೀಫಾಗಳು ಮೈಸೂರಿನ ಮುಮ್ಮಡಿ ಕೃಷ್ಣರಾಜರು ತಯಾರಿಸಿದ ಆಟಗಳು. ಮೇಲಿನ ಆಟದ ಎಲ್ಲಾ ಕಟ್ಟುಗಳು ವೃತ್ತಾಕಾರ ಮತ್ತು ಆಯತಾಕಾರವಾಗಿದ್ದು, ತೇಳುವಾದ ಪೇಪರ್, ಬಟ್ಟೆ, ಗಂಧ, ಹಾಳೆಗಳಿಂದ ರಚಿಸಿ ಚಿತ್ರಿಸಲಾಗಿದೆ. ಈ ಚಿತ್ರಗಳನ್ನು ಕಟ್ಟು ಕಟ್ಟಿ ಒಂದೊಂದು ಆಟದ ಕಟ್ಟುಗಳನ್ನು ಒಂದೊಂದು ಡಬ್ಬಿಯಲ್ಲಿ ಇರಿಸುತ್ತಿದ್ದರು. ಇವುಗಳನ್ನು ಆಟ ಆಡುವಾಗ ರಾತ್ರಿ ಮತ್ತು ಹಗಲು ಎಂದು ಎರಡು ವಿಭಾಗ ಮಾಡಲಾಗುತ್ತಿತ್ತು. ಮೈಸೂರು ಛದ್, ಮೈಸೂರು ಆಟದ ಎಲೆ ಅಥವಾ ದೇವರ ಆಟ ಎಂದು ಇವುಗಳನ್ನು ಕರೆಯುತ್ತಿದ್ದರು. ಸರ್ವಸಾಮ್ರಾಜ್ಯ ಪೇಟಿಕಾ, ಚಾಮುಂಡೇಶ್ವರಿ ಮುಂತಾದ ದೇವಿ ಚಕ್ರವರ್ತಿಗಳ ಎಲೆಗಳನ್ನು ಗೌರವದಿಂದ ದೇವರು ಎಂದು ಸಂಬೋಧಿಸುತ್ತಿದ್ದರು. ಈ ಆಟಗಳಲ್ಲಿ ಸಂಖ್ಯೆಗಳನ್ನು ಸೇರಿಸಿ, ಜೋಡಿಸಿ, ಏರಿಸಿ, ಚಕ್ರವರ್ತಿಗಳ ಸಭೆಗಳನ್ನು ಸೇರಿಸಿ, ಸೈನಿಕರನ್ನು ಸೇರಿಸಿ, ಜೋಡಿಸಲಾಗದ್ದನ್ನು ತೆಗೆದುಹಾಕಿ ಆಟಗಳನ್ನು ಆಡುತ್ತಿದ್ದರು.

ಗಂಜೀಫಾ ಆಟ ಆಗ ಎಲ್ಲಾ ಪ್ರಾಂತಗಳಲ್ಲಿ ಪ್ರಚಲಿತದಲ್ಲಿತ್ತು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಬಳಕೆಯಲ್ಲಿದ್ದ ಗಂಜೀಫಾ ಕೆಲವು ಪ್ರಾಂತಗಳಲ್ಲಿ ದಶಾವತಾರ ೧೨೦ ಎಲೆ, ಮತ್ತು ರಾಮಾಯಣ ೯೬ ಎಲೆ ಸಾಮಾನ್ಯವಾಗಿ ಬಳಕೆಯಲ್ಲಿದ್ದವು. ಇದರೊಂದಿಗೆ ಅವರವರ ಭಾಷೆ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಶೈಲಿಗಳು ಮತ್ತು ಆಟಗಳು ನಿರ್ಮಾಣವಾಗುತ್ತಿದ್ದವು. ಉದಾಹರಣೆಗೆ ಒರಿಸ್ಸಾ–ನವಗುಂಜಾರ, ಕಾಶ್ಮೀರ–ದೇವಿ ಸರಸ್ವತಿ ಮುಂತಾದವುಗಳು, ಆಯಾ ಪ್ರಾಂತ್ಯದಲ್ಲಿ ದೊರಕುವ ಪದಾರ್ಥಗಳಿಂದಲೇ ಬಣ್ಣಗಳನ್ನು ತಯಾರಿಸುತ್ತಿದ್ದುದು ಕಾಣಬಹುದಾಗಿದೆ. ಕೆಲವು ಪ್ರದೇಶಗಳಲ್ಲಿ ಇವುಗಳನ್ನು ಕಥೆ ಹೇಳಲು, ಜ್ಯೋತಿಷ್ಯ ತಿಳಿಯಲು ಉಪಯೋಗಿಸುವುದನ್ನು ಕಾಣಬಹುದಾಗಿದೆ.

೨೪ ಸಹಸ್ರ ಶ್ಲೋಕಗಳಿಂದ ರಾಮಾಯಣ ರಚನೆಯಾಗಿರುವದರ ಹಿನ್ನೆಲೆಯಲ್ಲಿ ೯೬ ಎಲೆಗಳ ಗಂಜೀಫಾ ರಾಮಾಯಣ ಆರಂಭವಾಗಿದೆ ಎನ್ನಬಹುದು. ಇಬ್ಬರು ಆಡಲು ಅವಕಾಶವಿದ್ದು ೯೬ ಎಲೆಗಳು, ಭಾರತದ ಎಲ್ಲಾ ರಾಜ್ಯಗಳಲ್ಲಿಯೂ ರಾಮಾಯಣದ ಕಟ್ಟುಗಳು ೯೬ ಎಲೆಗಳನ್ನು ಹೊಂದಿವೆ. ಮೊಘಲರು ಬಂದ ನಂತರ ರಾಮಾಯಣ ಗಂಜೀಫಾದ ೯೬ ಎಲೆಗಳನ್ನು ಅವರ ಧರ್ಮಕ್ಕೆ ಅನುಗುಣವಾಗಿ ಗಜಾಧಿಪತಿ, ಅಶ್ವಾಧಿಪತಿ, ಮುಂತಾದುವುಗಳಾಗಿ ಬದಲಾಯಿಸಿ ಬಳಕೆಗೆ ತಂದರು. ಮೊಘಲ್ ಗಂಜೀಫಾ ಭಾರತದ ಎಲ್ಲಾ ಪ್ರದೇಶದ ಮುಸಲ್ಮಾನರ ಆಟವಾಗಿದ್ದರೂ ಒಂದೊಂದು ಪ್ರಾಂತದಲ್ಲಿ ಬೇರೆ ಬೇರೆ ಶೈಲಿಗಳಲ್ಲಿ ಹಿಂದೂ ಗಂಜೀಫಾಗಳಂತೆಯೇ ಮಾರ್ಪಾಡು ಮಾಡುತ್ತಿದ್ದರು. ಮೈಸೂರು ಶ್ರೀರಂಗಪಟ್ಟಣದಲ್ಲಿ ಒಂದು ಇಂಚು ಸುತ್ತಳತೆಯ ಮೊಘಲ್ ಗಂಜೀಫಾವನ್ನು ಹೈದರಲಿಯ ಮತ್ತು ಟಿಪ್ಪು ಕಾಲಕ್ಕೆ ತಯಾರಿಸಿದ್ದರು. ೯೬ ಉಳಿದವುಗಳು ದಂತ, ಹಾಳೆ, ಚರ್ಮಗಳಿಂದ

ತಯಾರಿಸುತ್ತಿದ್ದರು. ೯೬ ಎಲೆಗಳು ಮೊಘಲರ ಅತಿ ಮುಖ್ಯ ಆಟದ ಸಂಖ್ಯೆಯಾಯಿತು. ಹೀಗೆ ಅವರದೇ ಆದ ಶೈಲಿಗಳಲ್ಲಿ ಪ್ರಾಣಿಗಳು, ಪಕ್ಷಿಗಳನ್ನು ಗಂಜೀಫಾ ಚಿತ್ರಗಳಲ್ಲಿ ಚಿತ್ರಿಸಿ, ಕಟ್ಟುಗಳನ್ನು ರಚಿಸಿ, ತಮ್ಮದೆ ಶೈಲಿಯಲ್ಲಿ ಆಟ ಆಡುವುದನ್ನು ರೂಢಿಸಿಕೊಂಡಿದ್ದರು.[೧೭]

ಗಂಜೀಫಾ ಇಸ್ಪೇಟಿನಂಥ ಒಂದು ಆಟ ಇದಕ್ಕೆ ಭದ್ ಎಂಬ ಇನ್ನೊಂದು ಹೆಸರೂ ಇದೆ. ಬಾಬರ್ ನಾಮ, ಐನೆ ಆಕ್ಬರಿ, ಕಾಬೂನೆ ಇಸ್ಲಾಮ್, ಗಿರಿಧರಕೃತ ಗಂಜೀಫಾ ಲೇಖನ, ಶ್ರೀತತ್ತ್ವ ನಿಧಿ ಇತ್ಯಾದಿ ಗ್ರಂಥಗಳಲ್ಲಿ ಇದರ ವರ್ಣನೆ ಇದೆ. ಆಟದ ಪ್ರಕಾರ ವಿವರಣೆಗಳಲ್ಲಿ ಒಂದು ಗ್ರಂಥಕ್ಕೂ ಇನ್ನೊಂದು ಗ್ರಂಥಕ್ಕೂ ವ್ಯತ್ಯಾಸವಿದೆ. ತೊಂಭತ್ತಾರು ಎಲೆಗಳನ್ನು ಉಪಯೋಗಿಸಿಕೊಂಡು ಆಡುವ ಆಟಗಳಲ್ಲಿ ಚಂಗ್, ಬರಾತ್, ಕಿಮಾಸ್, ಘಮ್‌ಶೇರ್ ಇತ್ಯಾದಿಯಾಗಿ ಎಂಟು ಪ್ರಕಾರಗಳಿವೆ. ಶ್ರೀತತ್ವ ನಿಧಿ ಗ್ರಂಥದ ಒಂಭತ್ತನೆಯ ನಿಧಿಯಾದ ಕೌತುಕನಿಧಿಯಲ್ಲಿ ಇದರ ಉಲ್ಲೇಖವಿದ್ದು ಚಾಮುಂಡೇಶ್ವರಿ, ಜಗನ್ಮೋಹನ, ನವೀನ ದಶಾವತಾರ, ನವಗ್ರಹ, ಪಂಚಪಾಂಡವ, ಅಷ್ಟೈಶ್ವರ್ಯ, ಕಲ್ಯಾಣ, ಅಷ್ಟನಿಧಿ, ರಾಶಿಕೂಟಗಳ ಗಂಜೀಫಾ, ನವಗ್ರಹ ಗಂಜೀಫಾ, ಭಾಗವತ, ಸರ್ವಮಂಗಳ, ಸಾಮ್ರಾಜ್ಯ ಪೇಟಿಕಾ ಗಂಜೀಫಾ ಇತ್ಯಾದಿ ಹದಿಮೂರು ಆಟಗಳ ಉಲ್ಲೇಖವಿದ್ದು, ಪ್ರಾರಂಭದಲ್ಲಿ ಬರುವ ಸಾಮ್ರಾಜ್ಯ ಪೇಟಿಕಾ ಗಂಜೀಫಾದ ವಿಭಾಗದಲ್ಲಿ ಚಾಮುಂಡೇಶ್ವರಿ, ಜಗನ್ಮೋಹಿನಿ, ದಶಾವತಾರ, ಅಷ್ಟೈಶ್ವರ್ಯ, ಕಲ್ಯಾಣ, ಅಷ್ಟಸಿದ್ಧಿ, ಸಾರಸಂಗ್ರಹ ಎಂಬ ಏಳು ಪ್ರಕಾರಗಳ ಆಟಗಳ ಆಡುವ ಕ್ರಮವನ್ನು ವಿವರಿಸಲಾಗಿದೆ.

ಇಲ್ಲಿ ಹದಿನಾಲ್ಕು ವಿಭಿನ್ನ ಶೈಲಿಯ ಗಂಜೀಫಾ ಆಟಗಳ ವಿವರಣೆಯನ್ನು ನೀಡಲಾಗಿದೆ :

೦೧. ಸಾಮ್ರಾಜ್ಯ ಪೇಟಿಕಾ ಗಂಜೀಫಾ ಆಟ
೦೨. ದಶಾವತಾರಿ ಗಂಜೀಫಾ ಆಟ
೦೩. ಚಾಮುಂಡೇಶ್ವರಿ ಗಂಜೀಫಾ ಆಟ
೦೪. ಚಾಮುಂಡೇಶ್ವರಿ ಭದ್ ಆಟ
೦೫. ಜಗನ್ಮೋಹನ ಗಂಜೀಫಾ ಆಟ
೦೬. ನವೀನ ದಶಾವತಾರ ಗಂಜೀಫಾ ಆಟ
೦೭. ನವಗ್ರಹ ಗಂಜೀಫಾ ಆಟ
೦೮. ಪಂಚಪಾಂಡವ ಗಂಜೀಫಾ ಆಟ
೦೯. ದೇವಿದಶಾವತಾರ ಗಂಜೀಫಾ ಆಟ
೧೦. ದಿಕ್ಪಾಲ ಗಂಜೀಫಾ ಆಟ
೧೧. ಮನೋಹರ ಗಂಜೀಫಾ ಆಟ
೧೨. ಸರ್ವಮಂಗಳ ಗಂಜೀಫಾ ಆಟ
೧೩. ನವರತ್ನ ಗಂಜೀಫಾ ಆಟ
೧೪. ಕೃಷ್ಣರಾಜ ಪೇಟ್ ಗಂಜೀಫಾ ಆಟ

---

೧೭. ರಘುಪತಿ ಭಟ್, ಎಸ್. ಎಂ. ಜಂಬುಕೇಶ್ವರ ಅಭಿನಂದನಾ ಗ್ರಂಥ, ಪು : ೧೫೩-೧೫೬

೦೧. ಸಾಮ್ರಾಜ್ಯ ಪೇಟಿಕಾ ಗಂಜೀಫಾ ಆಟ

ಆಟಕ್ಕೆ ಒಟ್ಟು ೬೩೬ ಎಲೆಗಳು ಬೇಕು. ಇದರಲ್ಲಿ ಬಾಜು ೩೦ ಮತ್ತು ದರ ೧೮ ಮೇರೆಗೆ ೫೪೦ ಎಲೆಗಳು ಮತ್ತು ಚಕ್ರವರ್ತಿ ಎಲೆ ೬೪, ಗಿಣಿ ಎಲೆ ೧೧, ಹಂಸ ಎಲೆ ೭, ನವಿಲು ಎಲೆ ೭, ಚೇಟಿ ಸ್ತ್ರೀಯರ ಎಲೆ ೭, ಈ ರೀತಿ ಒಟ್ಟು ೯೬ ಎಲೆಗಳಿರುತ್ತವೆ. ಅಂದರೆ ೩೦ x ೧೮ =೫೪೦+೬೪+೧೧+೭+೭+೭=೬೩೬. ಬಾಜು ೩೦ ಮತ್ತು ದರ ೧೮೫ ಎಲೆಗಳ ವಿವರ ಈ ರೀತಿ ಇದೆ : ಬಾಜು ೩೦ ಅಂದರೆ ಚಾಮುಂಡೇಶ್ವರಿ, ವಿಷ್ಣು, ಈಶ್ವರ, ವಿನಾಯಕ ಇತ್ಯಾದಿ ೩೦ ದೇವತೆಗಳ ಹೆಸರಿನಲ್ಲಿರುವಂಥವು. ಈ ಒಂದೊಂದು ಬಾಜುವಿನಲ್ಲೂ ತಲಾ ೧೮ ದರ ಎಲೆಗಳಿರುತ್ತವೆ. ಪ್ರತಿ ಹದಿನೆಂಟು ಎಲೆಗಳಲ್ಲಿ ೬ ಹುಕುಮಿ ಎಲೆಗಳು, ೧೨ ಖರ್ಚಿ ಎಲೆಗಳಿರುತ್ತವೆ. ಚಾಮುಂಡೇಶ್ವರಿ ಬಾಜುವಿನ ಹುಕುಮಿ ಎಲೆಗಳ ವಿವರ ಹೀಗಿದೆ : ಮೊದಲ ಎಲೆಯಲ್ಲಿ ಚಾಮುಂಡೇಶ್ವರಿ, ಎರಡನೆಯ ಎಲೆಯಲ್ಲಿ ಸಿಂಹದ ಮೇಲೆ ಕುಳಿತಿರುವ ರಾಣಿ, ಮೂರನೆಯ ಎಲೆಯಲ್ಲಿ ರಥಾರೂಢನಾದ ಮಂತ್ರಿ, ನಾಲ್ಕನೆಯ ಎಲೆಯಲ್ಲಿ ಅಶ್ವಾರೂಢನಾದ ಸೇನಾಪತಿ, ಐದನೆಯ ಎಲೆಯಲ್ಲಿ ಚೌಕಿನ ಮೇಲೆ ಕುಳಿತ ಪದಾತಿ, ಆರನೆಯ ಎಲೆಯಲ್ಲಿ ಬುರುಜಿನ ಮೇಲೆ ಧ್ವಜ ಹಿಡಿದು ಕುಳಿತಿರುವ ದೇವತೆ – ಇವರ ಚಿತ್ರಗಳೂ ಅದೇ ಬಾಜುವಿನ ಉಳಿದ ಖರ್ಚಿ ಎಲೆ ೧೨ರಲ್ಲೂ ಚಾಮುಂಡೇಶ್ವರಿ ಚಿತ್ರವಿದ್ದು ಅದರ ಕೆಳಗೆ ಮೇಷ, ವೃಷಭ, ಮಿಥುನ, ಕರ್ಕಾಟಕ ಇತ್ಯಾದಿ ೧೨ ರಾಶಿಗಳ ಲಾಂಛನವನ್ನು ಎಲೆಗೊಂದರಂತೆ ಚಿತ್ರಿಸಲಾಗಿರುತ್ತದೆ. ಉಳಿದ ೨೯ ಬಾಜುಗಳಿಗೆ ವಿಷ್ಣು, ಈಶ್ವರ, ವಿಘ್ನೇಶ್ವರ ಇತ್ಯಾದಿ ೨೯ ದೇವತೆಗಳ ಚಿತ್ರವಿದ್ದು, ಇಲ್ಲಿಯೂ ಪ್ರತಿಯೊಂದಕ್ಕೂ ೬ ಹುಕುಮಿ ಎಲೆ, ೧೨ ಖರ್ಚಿ ಎಲೆಗಳಿರುತ್ತವೆ. ಇಲ್ಲಿಯ ವೈಶಿಷ್ಟ್ಯವೆಂದರೆ ಆಯಾ ದೇವತೆಗಳು ಆನೆಯ ಮೇಲೆ ಕುಳಿತಿರುವಂತೆ ಚಿತ್ರಿತವಾಗಿರುತ್ತದೆ. ಅವರವರ ರಾಣಿಯರು ಪಲ್ಲಕ್ಕಿಯಲ್ಲೂ ಮಂತ್ರಿಗಳು ರಥದ ಮೇಲೂ ಸೇನಾಪತಿಗಳು ಕುದುರೆಯ ಮೇಲೂ ಪದಾತಿಗಳು ಚೌಕಿಯ ಮೇಲೂ, ಧ್ವಜವನ್ನು ಹಿಡಿದಿರುವ ದೇವತೆಗಳು ಕೋಟೆಬುರುಜಿನ ಮೇಲೂ ಇರುತ್ತಾರೆ. ಖರ್ಚಿ ಎಲೆಗಳಲ್ಲಿ ಆಯಾ ಪ್ರಧಾನ ದೇವತೆಗಳು, ಅವುಗಳ ಅಡಿಗೆ ಎಲೆಗೊಂದರಂತೆ ಮೇಷಾದಿಗಳು ಚಿತ್ರಿತವಾಗಿರುತ್ತವೆ.

ಉಳಿದ ೭೬ ಎಲೆಗಳ ವಿಷಯ ಹೀಗಿದೆ : ಸುಲಭವಾಗಿ ಗುರುತಿಸಲು ಈ ಎಲೆಗಳ ಅಂಚಿನಲ್ಲಿ ಚಿಹ್ನೆಯೊಂದನ್ನು ತೋರಿಸಲಾಗುತ್ತದೆ. ೬೪ ಚಕ್ರವರ್ತಿ ಎಲೆಗಳಿಗೆ ರಾಜರಾಜೇಶ್ವರಿ, ಕಾಳಿ, ಲಕ್ಷ್ಮಿ, ಸರಸ್ವತಿ, ಬ್ರಾಹ್ಮೀ, ವೈಷ್ಣವಿ, ಇಂದ್ರಾಣಿ, ದಂಡಿನಿ, ಮಂತ್ರಿಣಿ, ಯೋಗನಿದ್ರಾ, ಬಾಲಾಭುವನೇಶ್ವರಿ ಇತ್ಯಾದಿ ೬೪ ದೇವತೆಗಳ ಲಾಂಛನವಿರುತ್ತದೆ. ಉಳಿದವು ಗಿಣಿ ಎಲೆ ೧೧, ಹಂಸ ಎಲೆ ೭, ನವಿಲು ಎಲೆ. ೭, ೩, ೪, ೬, ಜನರು ಕುಳಿತು ಆಡಬಹುದು. ಸಾಮ್ರಾಜ್ಯ ಪೇಟಿಕಾ ಗಂಜೀಫಾನಲ್ಲಿ ಹಗಲು ಮತ್ತು ರಾತ್ರಿ ಎರಡರ ಆಟದಲ್ಲೂ ಚಾಮುಂಡೇಶ್ವರಿಯೇ ಅಧಿ ದೇವತೆಯಾಗಿರುತ್ತಾಳೆ. ಆದ್ದರಿಂದ ಆ ಎಲೆ ಇರುವವನೇ ಆಟವನ್ನು ಪ್ರಾರಂಭಿಸುತ್ತಾನೆ.[೧೯]

೦೨. ದಶಾವತಾರಿ ಗಂಜೀಫಾ ಆಟ

ಹೆಚ್ಚು ಬಳಕೆಯಲ್ಲಿರುವ ದಶಾವತಾರಿ ಗಂಜೀಫಾ ಆಟದ ವಿವರ ಈ ರೀತಿ ಇದೆ : ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರುಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಈ ಹತ್ತು ಅವತಾರಗಳಿಗೆ ಪ್ರತಿಯೊಂದಕ್ಕೂ, ರಾಜಾ, ವಜೀರ ಮತ್ತು ಎಕ್ಕಾದಿಂದ ಹತ್ತು, ಈ ಪ್ರಕಾರ ೧೨

೧೯. ಕನ್ನಡ ವಿಶ್ವಕೋಶ, ಸಂಪುಟ–೫, ಪುಟ–೮೮೧

ಎಲೆಗಳನ್ನು ಸೇರಿಸಿ ಒಟ್ಟು ೧೨೦ ಎಲೆಗಳನ್ನು ಉಪಯೋಗಿಸುತ್ತಾರೆ. ಮೂರು ಜನ ಆಟಗಾರರು ಸರತಿಯಂತೆ ಎಲೆಗಳನ್ನು ಹಂಚಿಕೊಳ್ಳುತ್ತಾರೆ. ಹಗಲಿನಲ್ಲಿ ಆಟ ಪ್ರಾರಂಭಿಸಿದರೆ ಯಾರ ಕೈಯಲ್ಲಿ ರಾಮ-ರಾಜಾ ಎಲೆ ಬಂದಿರುತ್ತದೋ ಅವನು ಆಟವನ್ನು ಮೊದಲು ಪ್ರಾರಂಭಿಸುತ್ತಾನೆ. ಆತನಿಗೆ ಸೂರ್ಕ್ಸಾ ಎಂದು ಹೆಸರು. ಆತ ಪ್ರಥಮವಾಗಿ ರಾಮ-ರಾಜಾ ಮತ್ತು ಅದೇ ವರ್ಗದ ಇನ್ನೊಂದು ಆಟಗಾರರು ತಮ್ಮ ಕೈಯಲ್ಲಿದ್ದ ಎರಡೆರಡು ಹಲ್ಕಾ ಎಲೆಗಳನ್ನು ಮೊದಲಿನ ಎಲೆಯ ಮೇಲೆ ಇಳಿಸುತ್ತಾರೆ. ಈ ಪ್ರಕಾರ ಬಿದ್ದ ಆರು ಎಲೆಗಳನ್ನು ಸುರ್ಕ್ಯಾ ಹೊಂದುತ್ತಾನೆ. ಇದೇ ರೀತಿ ತನ್ನಲ್ಲಿ ಹುಕುಮಿ ಎಲೆಗಳಿರುವವರೆಗೂ ಆಡಿ ಅನೇಕ ಎಲೆಗಳನ್ನು ಪಡೆಯುತ್ತಾನೆ. ಒಬ್ಬನ ಆಟ (ಡಾವ್) ಮುಗಿದ ಅನಂತರ ಇನ್ನೊಬ್ಬ ಆಟಗಾರ ತನ್ನಲ್ಲಿರುವ ಹುಕುಮಿ ಎಲೆಗಳಿಂದ ಆಟ ಆರಂಭಿಸಿ ಉಳಿದವರಿಂದ ಎಲೆಗಳನ್ನು ಪಡೆಯುತ್ತಾ ಹೋಗುತ್ತಾನೆ. ಕೊನೆಯಲ್ಲಿ ಹೆಚ್ಚಿನ ಎಲೆಗಳನ್ನು ಯಾರು ಪಡೆಯುತ್ತಾರೊ ಅವರು ಗೆದ್ದ ಹಾಗೆ, ಗಂಜೀಫಾ ಆಟಗಳ ವಿಧಾನ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತದೆ.[೨೦]

೦೩. ಚಾಮುಂಡೇಶ್ವರಿ ಗಂಜೀಫಾ ಆಟ

ಚಾಮುಂಡಾ, ವಿಷ್ಣು, ಈಶ್ವರ, ಬ್ರಹ್ಮ, ಗಣಪತಿ, ಸ್ಕಂದ, ವೀರಭದ್ರ, ರಾಮ, ಕೃಷ್ಣ, ಶೇಷ, ಇಂದ್ರ, ರವಿ, ಹಿಮಾಲಯ, ಸಮುದ್ರ, ಮನ್ಮಥ ಮತ್ತು ಮೋಹಿನಿ ಎಂದು ಕ್ರಮವಾಗಿ ೧೬ ದೇವತೆಗಳು ಚಾಮುಂಡೇಶ್ವರಿ ಗಂಜೀಫಾ ಆಟದಲ್ಲಿ ಕಂಡುಬರುತ್ತವೆ. ೧೬ ದೇವತೆಗಳು ಒಂದೊಂದು ದೇವತೆಗೂ ಬೇರೆಯಾಗಿ ೧೮ ಗಂಜೀಫಾ ಎಲೆಗಳು, ರಾಜ, ರಾಣಿ, ರಥ, ಕುದುರೆ, ಕಾಲಾಳು ಮತ್ತು ಧ್ವಜ, ಮೇಷದಿಂದ ಮೀನದವರೆಗೆ ಆಯಾ ದೇವತೆಗಳ ಚಿಹ್ನೆಯಿಂದ ಕೂಡಿರುತ್ತದೆ.

ಮೇಲೆ ಚಕ್ರವರ್ತಿಯ ಸ್ಥಾನದಲ್ಲಿರುವ ೧೫ ರಾಜರಾಜೇಶ್ವರಿ, ಕಾಳಿ, ಲಕ್ಷ್ಮೀ, ಸರಸ್ವತಿ, ಬ್ರಾಹ್ಮಿ, ಮಹೇಶ್ವರಿ, ಕೌಮಾರೀ, ವೈಷ್ಣವೀ, ವರಾಹೀ, ಇಂದ್ರಾಣಿ, ದಂಡಿನೀ, ಮಂತ್ರಿಣಿ, ಯೋಗನಿದ್ರಾ, ಬಾಲಾ, ಭುವನೇಶ್ವರಿ, ಇಂದ್ರಾಕ್ಷೀ, ಅನ್ನಪೂರ್ಣಾ ಮತ್ತು ೬ ಚಕ್ರದೇವತೆಗಳು, ಮನ್ಮಥನ ಪತ್ನಿಯಾದ ರತಿ.

ಚಾಮುಂಡಿಕಾ ದೇವಿಗೆ ಹಂಸಗಳು ೭, ಒಟ್ಟು ೩೨ ಎಲೆಗಳು. ಆಯಾ ಸಂಖ್ಯೆಯ ಮೇರೆಗೆ ಬುದ್ಧಿವಂತರು ಆಡಬೇಕು. ಖಡ್ಗ, ಚಕ್ರ, ನಂದಿ, ಹಂಸ, ಮೂಷಿಕ, ನವಿಲು, ದಕ್ಷನ ಮುಖ, ಹನುಮಂತ, ಆಲದ ಎಲೆಯಲ್ಲಿ ಮಲಗಿರುವುದು, ಸರ್ಪ, ಐರಾವತ, ರವಿಯ ಬಿಂಬ, ಮರಗಳು, ಮೊಸಳೆ, ಐದು ಬಾಣಗಳು, ಕೈಯಲ್ಲಿರುವ ಗಿಳಿ-ಚಿಹ್ನೆಗಳನ್ನು ಚಾಮುಂಡಿಕಾ ಅಥವಾ ಮುಂತಾದ ಎಲೆಗಳಲ್ಲಿ ಬರೆಯಬೇಕು.

ಚಿನ್ನ, ಅತಿಕೆಂಪು, ಬಿಳಿಗೆಂಪು, ಬಿಳುಪು, ಹಸಿರುಬಳ್ಳಿ, (ಕಾವಿ) ಗೈರಿಕೆ, ಸಂಪಿಗೆ, ಸಿಂಧೂರ (ಚಂದ್ರ), ಥಳಥಳ, ಹಸಿರು, ಕಪ್ಪು ಹಸಿರು, ಇಂದ್ರ ನೀಲ, ವರ್ತಿಗೌರ, ಕೆಂಪು, ಅತಿಕೆಂಪು, ಹಳದಿ, ಕಪ್ಪು ಇವು ಕ್ರಮವಾಗಿ ಚಾಮುಂಡಿಕಾ ಮುಂತಾದವುಗಳ ಬಣ್ಣಗಳು. ಅವುಗಳ ಜಾತಿಯ ಎಲೆಗಳಿಗೂ ಅದೇ ಬಣ್ಣಗಳಿರುತ್ತವೆ. ರಾಜರಾಜೇಶ್ವರಿ ಗಂಜೀಫಾ ಮುಂತಾದ ೨೫ ಎಲೆಗಳಿಗೆ ಇಂಗುದೀವರ್ಣವಿರುತ್ತದೆ. ಗಿಳಿಯ ಎಲೆಗೆ ಕೆಂಪು. ಎಲ್ಲಾ ಆಟದಲ್ಲಿಯೂ ಎಲೆಯನ್ನು ಹಿಂಬದಿಯಾಗಿ ಹಿಡಿಯಬೇಕು.

ಚಾಮುಂಡಿಯ ಆಟದಲ್ಲಿ ಚಂಡಿಕೆಯೇ ಪ್ರಧಾನ. ನಾಲ್ವರು ಆಟವಾಡಬೇಕೆ ಹೊರತು ಹೆಚ್ಚಾಗಲಿ ಕಡಿಮೆಯಾಗಲಿ ಇರುವಂತಿಲ್ಲ. ಒಬ್ಬೊಬ್ಬರಿಗೆ ಒಂದೊಂದು ಎಲೆಯಂತೆ ನಾಲ್ವರಿಗೆ ಹಂಚಬೇಕು. ಹೀಗೆ ನಾಲ್ಕು ರಾಶಿಗಳಾಗುತ್ತವೆ. ೨೦ ಎಲೆಗಳನ್ನು ನಾಲ್ವರು ಸ್ವೀಕರಿಸಬೇಕು. ಒಬ್ಬನು ಇನ್ನೊಬ್ಬನಿಗೆ ಎಲೆಗಳನ್ನು ತೋರಿಸಬಾರದು.

೨೦. ಕನ್ನಡ ವಿಶ್ವಕೋಶ, ಸಂಪುಟ-೫, ಪುಟ-೮೮೧

ರಾಜನಿಂದ ವೀಣದವರೆಗೆ ದುರ್ಬಲ ಹಂಸವು ಇಲ್ಲದಿದ್ದರೆ ಅದನ್ನು ತೆಗೆದುಕೊಳ್ಳಬೇಕು. ತನ್ನ ಭಾಗದಲ್ಲಿ ಶ್ರೇಷ್ಠವಾದ ಎಲೆಯನ್ನು ಹಾಕಬೇಕು. ಚಾಮುಂಡಿಗೆ ಹಂಸಪತ್ರಗಳನ್ನು ಸಮರ್ಪಿಸಬೇಕು. ಆಟದ ಆರಂಭದಲ್ಲಿ ಯಾರ ಕೈಯಲ್ಲಿ ಚಂಡಿಕೆ ಇದೆಯೋ ಅವನು ಆ ಎಲೆಯನ್ನು ಹಾಕಬೇಕು. ಯಾರು ಭಾಗವನ್ನು ತೆಗೆದುಕೊಳ್ಳುತ್ತಾರೋ ಅವರು ಆಟ ಆರಂಭಿಸಬೇಕು. ಪ್ರಬಲವಾದದ್ದು ಯಾರ ಕೈಯಲ್ಲಿದೆ ಅವರು ಆ ಎಲೆಯನ್ನು ಸ್ವೀಕರಿಸಬೇಕು. ಕೊನೆಯಲ್ಲಿ ಯಾರು ಎಲೆಯನ್ನು ನೀಡುತ್ತಾರೆ ಅವರು ಆಟವನ್ನು ಗೆದ್ದಂತೆ ಎಂದು ತಿಳಿಯಬೇಕು.

ಮೊದಲಿಗೆ ಸಂಸ್ಕೃತ ಪದ್ಯಗಳಲ್ಲಿ ಈ ಆಟದ ಕ್ರಮವನ್ನು ಹೇಳಿದ್ದಾರೆ. ಅದರಲ್ಲಿ ಕೊನೆಯ ಪದ್ಯ ಹೀಗಿದೆ :

ಶಕೆ ಶಾಲಿವಾಹನಸ್ಯ ಜಗತೀಂದು ಮಿತೇಶುದ್ಧೇ ಆಷಾಢೇ

ಚಿತ್ರಭಾನೋಸ್ತು ಶುಕ್ಲೇಕಾದಶತೇರವೌ॥

ಕೃಷ್ಣರಾಜ ಮಹೇಂದ್ರೇಣ ಚಾಮುಂಡಾಪೇಟಿಕಾ ಕೃತಾ॥

ಚಾಮುಂಡೇಶ್ವರಿ ಗಂಜೀಫಾಗೆ ಬಾಜುಗಳು ೧೬ಕ್ಕೆ ಒಟ್ಟು ಎಲೆಗಳು ೩೨೦ಕ್ಕೆ ೧. ಚಾಮುಂಡೇಶ್ವರಿ ಬಾಜು ೧ಕ್ಕೆ ೧೮ ಎಲೆಗಳು, ಚಿನ್ನದ ಬಣ್ಣ ೨. ವಿಷ್ಣುವಿನ ಬಾಜು ೧ಕ್ಕೆ ೧೮ ಎಲೆಗಳು, ಇಂಗಲೀಕದ ಬಣ್ಣ. ಈ ಮೇಲೆ ಬಾಜುಗಳು ೧೬ಕ್ಕೆ ಎಲೆಗಳು ೨೮೮. ಸೂಟ ಚಕ್ರವರ್ತಿಗಳ ಎಲೆಗಳು ೨೫ಕ್ಕೆ ೧ ಮಹಾಕಾಳಿ, ೧ ಮಹಾಲಕ್ಷ್ಮಿ, ಒಟ್ಟು ಈ ೨೫ ಎಲೆಗಳಿಗೂ ಇಂಗಲೀಕದ ಬಣ್ಣ. ಚಾಮುಂಡೇಶ್ವರಿ ವೀರಾ ಬಂದವರ ಆಟವೆ ಮೊದಲಾಗುವುದರಿಂದ ಚಾಮುಂಡೇಶ್ವರಿ ಹುಕುಮಿಗೆ ಕೊಡತಕ್ಕ ಇಂಗಳೀಕದ ಬಣ್ಣವುಳ್ಳ ಹಂಸ ಎಲೆಗಳು ೭.

ಒಟ್ಟು ೩೨೦ ಎಲೆಗಳ ಈ ಗಂಜೀಫಾದಲ್ಲಿ ಚಕ್ರವರ್ತಿಗಳು ವೋಕ್ತ್ಯಾರಿ ಹುಕುಂ ಆದ್ದರಿಂದ ಅವುಗಳನ್ನು ಮೊದಲು ಇಸಿದುಕೊಳ್ಳಬೇಕು. ಬಾಜು ಜೋಡಿಸುವ ಕ್ರಮ, ರಾಜಾ, ರಾಣಿ–ರಥ–ವಜೀರ–ಪದಾತಿ–ಧ್ವಜ. ಚಾಮುಂಡೇಶ್ವರಿ ಬಾಜುವಿಗೆ ಮಾತ್ರ ರಾಣಿಸ್ಥಾನಕ್ಕೆ ಸಿಂಹವಾಹಿನೀ.

ಶಾಕಿನೀ, ಕಾಕಿನೀ, ತಾಕಿನೀ, ರಾಶಿನೀ, ಹಾಕಿನೀ, ವಾಗಿಶ್ವರೀ, ಕಲಿದೇವಿ ಇಂಗಳದ ಬಣ್ಣವನ್ನು ಹೊಂದಿರುತ್ತವೆ. ಚಾಮುಂಡೇಶ್ವರಿ ಎಲೆ ಬಂದವರು ಮೊದಲು ಎಲೆಯನ್ನು ಹಾಕಬೇಕು. ಬಾಜು ಜೋಡಿಸುವ ಕ್ರಮ, ರಾಜ, ರಾಣಿ, ರಥ, ಕುದುರೆ, ಕಾಲಾಳು ಮತ್ತು ಧ್ವಜ ಚಾಮುಂಡೇಶ್ವರೀ ಬಾಜುವಿಗೆ ಮಾತ್ರ ರಾಣಿಯ ಸ್ಥಾನಕ್ಕೆ ಸಿಂಹವಾಹಿನಿ ಇವು ಹುಕುಂ ಎಲೆಗಳಾಗಿರುತ್ತವೆ. ಮೇಷದಿಂದ ಮೀನದವರೆಗೆ ರಾಶಿಗಳನ್ನು ಬರೆದು ಆಯಾ ಬಾಜುವಿನ ವಿಗ್ರಹಗಳ ಗುರುತುಗಳನ್ನು ಬರೆದಿರುವ ಖರ್ಚಿ ಎಲೆಗಳು ೧೨. ಚಾಮುಂಡಿ ಗಂಜೀಫಾ ಆಟದಲ್ಲಿ ಒಟ್ಟು ೩೬೦ ಎಲೆಗಳು. ೧೬ ದೇವತೆಗಳು ಬರುತ್ತವೆ. ಅದರಲ್ಲಿ ಒಂದೊಂದು ದೇವತೆಗೂ ೧೮ ಎಲೆಗಳು ಬರುತ್ತವೆ. ಇವುಗಳ ಕುರಿತು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ :

೦೧.	ಚಾಮುಂಡೇಶ್ವರಿ ಬಾಜು	೧೮ ಎಲೆಗಳು	ಚಿನ್ನದ ಬಣ್ಣ
೦೨.	ವಿಷ್ಣು ಬಾಜು	೧೮ ಎಲೆಗಳು	ಇಂಗಲೀಕದ ಬಣ್ಣ
೦೩.	ಈಶ್ವರ ಬಾಜು	೧೮ ಎಲೆಗಳು	ಜಂಗಾಲು ಬಣ್ಣ
೦೪.	ಬ್ರಹ್ಮ ಬಾಜು	೧೮ ಎಲೆಗಳು	ಪಿಸ್ತಾ ಬಣ್ಣ
೦೫.	ವಿಘ್ನೇಶ್ವರ ಬಾಜು	೧೮ ಎಲೆಗಳು	ಬೆಳ್ಳಿ ಬಣ್ಣ

೦೬.	ಷಣ್ಮುಖ ಬಾಜು	೧೮ ಎಲೆಗಳು	ಕಾವಿ ಬಣ್ಣ
೦೭.	ವೀರಭದ್ರ ಬಾಜು	೧೮ ಎಲೆಗಳು	ಸಂಪಿಗೆ ಬಣ್ಣ
೦೮.	ರಾಮ ಬಾಜು	೧೮ ಎಲೆಗಳು	ಚಂದ್ರ ಬಣ್ಣ
೦೯.	ಕೃಷ್ಣನ ಬಾಜು	೧೮ ಎಲೆಗಳು	ಗುಲಡಾ ಬಣ್ಣ
೧೦.	ಮಹಾಶೇಷ ಬಾಜು	೧೮ ಎಲೆಗಳು	ಕಪ್ಪು ಪಟ್ಟೆ ಬಣ್ಣ
೧೧.	ಇಂದ್ರ ಬಾಜು	೧೮ ಎಲೆಗಳು	ನೀಲಿ ಬಣ್ಣ
೧೨.	ಸೂರ್ಯ ಬಾಜು	೧೮ ಎಲೆಗಳು	ವರ್ತಿ ಬಣ್ಣ
೧೩.	ಪರ್ವತರಾಜ ಬಾಜು	೧೮ ಎಲೆಗಳು	ಬಿಳಿ ವರ್ಣ
೧೪.	ಸಮುದ್ರರಾಜ ಬಾಜು	೧೮ ಎಲೆಗಳು	ಬೂದು ಬಣ್ಣ
೧೫.	ಮನ್ಮಥ ಬಾಜು	೧೮ ಎಲೆಗಳು	ಹಳದಿ ಬಣ್ಣ
೧೬.	ಮೋಹಿನಿ ಬಾಜು	೧೮ ಎಲೆಗಳು	ಕಪ್ಪು ಬಣ್ಣ

ಒಟ್ಟು ೨೮೮ ಎಲೆಗಳು ಚಕ್ರವರ್ತಿ ಎಲೆಗಳು ಮಹಾಲಕ್ಷ್ಮೀ, ಮಹಾಸರಸ್ವತಿ, ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಮಂತ್ರಿಣಿ, ಶ್ಯಾಮಲಾ, ದಂಡಿನೀ.[೨೧]

೦೪. ಚಾಮುಂಡೇಶ್ವರಿ ಭದ್

ಮೊದಲಿಗೆ ಸಂಸ್ಕೃತ ಪದ್ಯಗಳಲ್ಲಿ ಈ ಆಟದ ಕ್ರಮವನ್ನು ಹೇಳಿದ್ದಾರೆ. ಅದರಲ್ಲಿ ಕೊನೆಯ ಪದ್ಯ ಹೀಗಿದೆ.

ಶಕೆ ಶಾಲಿವಾಹನಸ್ಯ ಜಗತೀಂದು ಮಿತೇಶುದ್ಧೇ ಆಷಾಢೇ

ಚಿತ್ರಭಾನೋಸ್ತು ಶುಕ್ಲೇಕಾದಶತೇರವೌ॥

ಕೃಷ್ಣರಾಜ ಮಹೇಂದ್ರೇಣ ಚಾಮುಂಡಾಪೇಟಿಕಾ ಕೃತಾ॥

ಚಾಮುಂಡೇಶ್ವರಿ ಗಂಜೀಫಾಗೆ ಬಾಜುಗಳು ೧೬ಕ್ಕೆ ಒಟ್ಟು ಎಲೆಗಳು ೩೨೦ಕ್ಕೆ ೧. ಚಾಮುಂಡೇಶ್ವರಿ ಭಾಜು ೧ಕ್ಕೆ ೧೮ ಎಲೆಗಳು. ಚಿನ್ನದ ಬಣ್ಣ ೨. ವಿಷ್ಣುವಿನ ಬಾಜು ೧ಕ್ಕೆ ೧೮ ಎಲೆಗಳು ಇಂಗಲೀಕದ ಬಣ್ಣ. ಈ ಮೇಲೆ ಬಾಜುಗಳು ೧೬ಕ್ಕೆ ಎಲೆಗಳು ೨೮೮ ಸೂಟ ಚಕ್ರವರ್ತಿಗಳ ಎಲೆಗಳು ೨೫ಕ್ಕೆ ೧ ಮಹಾಕಾಳಿ, ೧ ಮಹಾಲಕ್ಷ್ಮಿ, ಒಟ್ಟು ಈ ೨೫ ಎಲೆಗಳಿಗೂ ಇಂಗಲೀಕದ ಬಣ್ಣ. ಚಾಮುಂಡೇಶ್ವರಿ ವೀರಾ ಬಂದರ ಆಟವೆ ಮೊದಲಾಗುವುದರಿಂದ ಚಾಮುಂಡೇಶ್ವರಿ ಹುಕುಮಿಗೆ ಕೊಡತಕ್ಕ ಇಂಗಳೀಕದ ಬಣ್ಣವುಳ್ಳ ಹಂಸ ಎಲೆಗಳು ೭. ಒಟ್ಟು ೩೨೦ ಎಲೆಗಳ ಈ ಗಂಜೀಫಾದಲ್ಲಿ ಚಕ್ರವರ್ತಿಗಳು ವೋಕ್ತ್ಯಾರಿ ಹುಕುಂ ಆದ್ದರಿಂದ ಅವುಗಳನ್ನು ಮೊದಲು ಇಳಿಸಿಕೊಳ್ಳಬೇಕು ಬಾಜು ಜೋಡಿಸುವ ಕ್ರಮ, ರಾಜಾ, ರಾಣಿ–ರಥ–ವಜೀರ–ಪದಾತಿ–ಧ್ವಜ ಚಾಮುಂಡೇಶ್ವರಿ ಬಾಜುವಿಗೆ ಮಾತ್ರ ರಾಣಿಸ್ಥಾನಕ್ಕೆ ಸಿಂಹವಾಹಿನೀ. ಶಾಕಿನೀ, ಕಾಕಿನೀ, ತಾಕಿನೀ, ರಾಶಿನೀ, ಹಾಕಿನೀ, ವಾಗಿಶ್ವರೀ, ಕಲಿದೇವಿ ಇಂಗಳದ ಬಣ್ಣವನ್ನು ಹೊಂದಿರುತ್ತವೆ. ಚಾಮುಂಡೇಶ್ವರಿ ಎಲೆ ಬಂದವರು ಮೊದಲು ಎಲೆಯನ್ನು ಹಾಕಬೇಕು. ಬಾಜು ಜೋಡಿಸುವ ಕ್ರಮ, ರಾಜ, ರಾಣಿ, ರಥ, ಕುದುರೆ, ಕಾಲಾಳು ಮತ್ತು ಧ್ವಜ. ಚಾಮುಂಡೇಶ್ವರೀ ಬಾಜುವಿಗೆ ಮಾತ್ರ ರಾಣಿಯ ಸ್ಥಾನಕ್ಕೆ ಸಿಂಹವಾಹಿನಿ. ಇವು ಹುಕುಂ ಎಲೆಗಳಾಗಿರುತ್ತವೆ. ಮೇಷದಿಂದ ಮೀನದವರೆಗೆ ರಾಶಿಗಳನ್ನು ಬರೆದು ಆಯಾ ಬಾಜುವಿನ ವಿಗ್ರಹಗಳ ಗುರುತುಗಳನ್ನು ಬರೆದಿರುವ ಖರ್ಚೆ ಎಲೆಗಳು ೧೨.[೨೨]

---

೨೧. ಶ್ರೀ ತತ್ವನಿಧಿ, ಅಧ್ಯಾಯ–೯ ಕೌತುಕನಿಧಿಯಲ್ಲಿ ವಿವರಣೆ ನೋಡಿ, ಪುಟ–೮೮೧
೨೨. ಶ್ರೀ ತತ್ವನಿಧಿ, ಅಧ್ಯಾಯ–೯ ಕೌತುಕನಿಧಿಯಲ್ಲಿ ವಿವರಣೆ ನೋಡಿ, ಪುಟ–೮೮೧

೦೫. ಜಗನ್ಮೋಹನ ಗಂಜೀಫಾ ಆಟ

ಜಗನ್ಮೋಹನ ಗಂಜೀಫಾದಲ್ಲಿ ೩೬೦ ಎಲೆಗಳು ಬರುತ್ತವೆ. ಅವುಗಳಲ್ಲಿ ಮುಖ್ಯವಾಗಿ ಚಾಮುಂಡಾ, ದಕ್ಷಿಣಾ ಮೂರ್ತಿ, ಉಮೇಶ, ಶರಭ, ತಾಂಡವ, ಕಂಕಾಳ, ಮತ್ಸ್ಯ, ಬ್ರಹ್ಮ, ಇಂದ್ರ ಮುಂತಾದ ೧೦ ಅವತಾರಗಳು ಬರುತ್ತವೆ. ಇಲ್ಲಿ ಮುಖ್ಯವಾಗಿ ೧೮ ದೇವತೆಗಳು, ಒಂದೊಂದು ದೇವತೆಗೆ ೧೮ ಎಲೆಗಳು. ರಾಜ, ರಾಣಿ, ಮಂತ್ರಿ, ಸೇನಾಪತಿ, ಸೇವಕ, ಧ್ವಜ, ಸ್ತ್ರೀಯರು, ವೀಣೆ ಮತ್ತು ಶರಭ, ಡಮರು, ಜಿಂಕೆ, ಮತ್ಸ್ಯ, ಕೂರ್ಮ, ವರಾಹ, ಸಿಂಹ, ಕಮಂಡಲು, ಕೊಡಲಿ, ಮಂಗ, ನೇಗಿಲು, ಗರುಡ, ಕುದುರೆ, ಹಂಸ, ಆನೆ ಇವೆಲ್ಲವುಗಳು ಚಾಮುಂಡಾದ ಚಿಹ್ನೆಗಳು. ವಿನಾಯಕ, ಶ್ರೀಕಂಠ, ಕಾಳೀ, ಲಕ್ಷ್ಮೀ, ಸರಸ್ವತಿ, ಬ್ರಾಹ್ಮೀ, ಮಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣಿ, ಆಲದ ಮೇಲೆ ಮಲಗಿರುವ ವಿಷ್ಣು, ರಂಗನಾಥ, ವೆಂಕಟೇಶ, ಯದುಶೈಲೇಶ, ಷಣ್ಮುಖ, ವೈಕುಂಠೇಶ, ಹರಿಹರ, ಅರ್ಧನಾರೀಶ್ವರ, ಮನ್ಮಥ, ಚಂದ್ರಶೇಖರ, ವೀರಭದ್ರ, ಶಿಂಶುಮಾರ, ತ್ರಿವಿಕ್ರಮ, ವಾಮನ, ಲಿಂಗೋದ್ಭವ, ಗಜಾರಿ, ರಾಜಗೋಪಾಲ ಇಲ್ಲಿ ೨೬ ದೇವತೆಗಳನ್ನು ಕಾಣಬಹುದು.

ಗಿಳಿ ಚಿತ್ರವಿರುವ ೯ ಎಲೆಗಳನ್ನು ಮೊದಲು ಚಾಮುಂಡಿಗೆ ಅರ್ಪಿಸಬೇಕು. ಒಟ್ಟು ಎಲ್ಲವೂ ಸೇರಿ ೩೬೦ ಎಲೆಗಳು. ಆಯಾ ಚಿಹ್ನೆಗಳನ್ನು ಅನುಸರಿಸಿ ಆಟವನ್ನು ಆಡಬೇಕು. ಚಂಡಿ ಮತ್ತು ಮುಂತಾದ ಹದಿನೆಂಟು ಎಲೆಗಳಿಗೆ ಕ್ರಮವಾಗಿ ಹಗಲು-ರಾತ್ರಿಗಳನ್ನು ಕಲ್ಪಿಸಬೇಕು. ಚಂಡಿಯು ಪ್ರಧಾನವಾಗಿ ಉಳಿದಿದ್ದು ಹಿಂದಿನಂತೆ ಯಾರ ಕೈಯಲ್ಲಿ ಚಾಮುಂಡಿ ಇದೆಯೋ ಅವನಿಗೆ ಗಿಳಿಯ ಎಲೆಯನ್ನು ಕೊಡಬೇಕು. ಯಾರ ಕೈಯಲ್ಲಿ ಗಿಳಿಯಿಲ್ಲವೋ ಅವನು ಬೇರೆಯವನಿಂದ ತೆಗೆದುಕೊಳ್ಳಬೇಕು. ಈ ಆಟದಲ್ಲಿ ೪ ಅಥವಾ ೫ ಆಟಗಾರರು ಇರುತ್ತಾರೆ. ನಾಲ್ವರು ಆಟಗಾರರು ಇರುವಾಗ ಒಬ್ಬನಿಗೆ ೯೦ ಎಲೆಗಳು, ೪ ಎಲೆಗಳ ಕ್ರಮದಿಂದ ೨೦ ಭಾಗಗಳಾಗುವವು. ೨ ಪತ್ರಿಕೆಗಳು ಲೀಲಾಶುಕದ ಚಿಹ್ನೆಯಿಂದ ಚಿತ್ರಿತವಾಗಿರುತ್ತವೆ. ಚಕ್ರವರ್ತಿ ಇವು ಹುಕುಂನ ಎಲೆಗಳು. ಮೇಷಾದಿ ಮೀನಪರ್ಯಂತ ರಾಶಿಗಳನ್ನು ಬರೆದು ಆಯಾ ಬಾಜುವಿನ ವಿಗ್ರಹಗಳ ಗುರುತುಗಳನ್ನು ಬರೆದು ಇರುವ ಖರ್ಚಿ ಎಲೆಗಳು, ಈ ಮೇಲೆ ೧೬ ಬಾಜುಗಳನ್ನು ಜೋಡಿಸಿಕೊಂಡು ಮೊಗಲಾಯಿ ಗಂಜೀಫಿನ ಮೇರೆಗೆ ತಲಬಾತಲಾಬಿ ನಾತವಾನಿ ತೇಚವಾನಿ ಮುಂತಾದ್ದು ಮಾಡುತ್ತಾ ಬರುವುದು. ಹಂಸ ಎಲೆಯು ಯಾರ ಬಳಿಯಲ್ಲಿ ಬಂದಿರುತ್ತದೆಯೋ ಅವರಿಗೆ ಹಂಸ ಎಲೆಯು ಬಾರದೇ ಇದ್ದವರು ಎಲೆಗೆ ಯತಿಯನ್ನು ಕೊಟ್ಟು ಹಂಡ ಎಲೆಯನ್ನು ಬಾಜು ತೆಗೆದುಕೊಂಡು ಮೊದಲು ಚಾಮುಂಡೇಶ್ವರೀ ಮೀರಾಕ್ಕೆ ಕೊಡಬೇಕು. ಬಾಜು ಕೊಡತಕ್ಕವರಿಗೆ ಮೀರಾ ಇದ್ದಾಗ್ಯೂ ಕೊಡತಕ್ಕ ಬಾಜುವನ್ನು ಕೊಡಬೇಕು.

ಬಾಟಾಣಿ ಮಾಡುವ ವಿವರ=ಜನರು ೪ಕ್ಕೆ ಜನ ೧ಕ್ಕೆ ದಸ್ತು ೧ಕ್ಕೆ ಎಲೆಗಳು ೪ರಲ್ಲೂ ದಸ್ತು ೨೦ಕ್ಕೆ ೮೦ ಎಲೆಗಳ ಮೇರೆಗೆ ಹಂಚಿಕೊಂಡು, ಆಖೈರು ಮೊಹಿನೀ ಬಾಜುವಿನಲ್ಲಿ, ಆಖೈರು ಮೀನು ಇರುವ ಎಲೆಯನ್ನು ಅಖೈರು ಯಾರು ಹುಕುಂ ಇಳಿಯುತ್ತಾರೊ; ಅವರ ಆಟ ಗೆದ್ದು ಮಿಕ್ಕದವರ ಆಟ ಖಿಲಾಲೆಂಬುದಾಗಿ ಬುದ್ಧಿವಂತರು ನಿಷ್ಕರ್ಷೆಯನ್ನು ಮಾಡಿ ಕೊಂಡಾಡಬೇಕು.

ಈ ಗಂಜೀಫಾ ಬಾಟಾಣಿ (ಹಂಚಿಕೆ) ವಿವರ- ಜನರು ೪ಕ್ಕೆ ೯೦ ರಲ್ಲು, ಜನ ೧ಕ್ಕೆ ಅವ್ವಲ ಅಖೈರ ದಸು ಮಾತ್ರದಲ್ಲಿ ಎಲೆಗಳು ೧ ಜನರು ೫ಕ್ಕೆ ಹಂಚಿಕೆ ಮಾಡುವ ವಿವರ. ಈ ಮೇರೆಗೆ ಎಷ್ಟು ಜನಗಳು ಆಡಬೇಕಾದರೂ ಜನಕ್ಕೆ ಸರಿಯಾಗಿ ಹಂಚಿಕೊಂಡು ೪ ಜನರು ಆಡುವಲ್ಲಿ ಲೀಲಾಶುಕ

ಎಂಬುದಾಗಿ ಬರೆದಿರುವ ಚಿನ್ನದ ಬಣ್ಣದ ಗಿಣಿಯಲೆಗಳನ್ನು ಚಕ್ರವರ್ತಿ ಎಲೆಗಳಿಗೆ ಸೇರಿಸಿ ೨೯ ಚಕ್ರವರ್ತಿಗಳನ್ನು ಮಾಡಿಕೊಂಡು ಗಿಣಿ ಎಲೆಯಲ್ಲಿ ಮೋಹಿನಿಯು ಕೂತುಕೊಂಡು ಇಕ್ಷುಚಾಪ ಪುಷ್ಪ ಶರಗಳಿಂದ ಗರುಡನನ್ನು ಭೇದಿಸುವಂತೆ ಬರೆದಿರುವ ಎಲೆಯನ್ನು ಅಖ್ಯೆರು ಹುಕುಮಾಗಿ ಯಾರು ಇಳಿಸುತ್ತಾರೆಯೋ ಅವರ ಆಟ ಗೆದ್ದು ಮಿಕ್ಕದವರ ಆಟ ಖಿಲಾಲ್‌ಬುದಾಗಿ ತಿಳಿಯುವುದು.

ಇದರಿಂದ ೨೯ ಚಕ್ರವರ್ತಿಎಲೆಗಳಾಗುತ್ತವೆ. ಚಿನ್ನ, ಚಿತ್ರ, ಬಿಳಿಕೆಂಪು, ಸಂಪಿಗೆ, ಕಪ್ಪು, ವರ್ತಿ, ಅತಿಗೆಂಪು, ಹಳದಿ, ವರ್ತಿ, ಬಿಳಿಹಸಿರು, ಚಂದ್ರ, ಹಳದಿ, ಗೈರಿಕ, ಅತಿಗೆಂಪು, ಕಪ್ಪು, ಹಸಿರು-ಬಿಳಿಯಿಂದ ಕೂಡಿದ್ದು, ಬಿಳಿಗೆಂಪು ಎಂದು ೧೮ ಬಣ್ಣಗಳು ೧೮ ಜಾನ್ವಿಗಳಿಗೆ ಉಕ್ತವಾಗಿದೆ. ಉಳಿದ ಭಾಗದಲ್ಲಿ ೫ ಎಲೆಗಳು. ಐವರು ಆಟಗಾರರಿದ್ದರೆ ಪ್ರತ್ಯೇಕವಾಗಿ ೭೦ ಎಲೆಗಳು, ೪ ಅಥವಾ ೫ ಎಲೆಗಳಿಂದ ವಿಭಾಗವನ್ನು ಲೆಕ್ಕ ಮಾಡಬೇಕು. ಹೀಗಾದರೆ ಆಟಗಾರರನ್ನನುಸರಿಸಿ ೧೮ ಭಾಗಗಳಾಗುತ್ತವೆ. ಹೀಗೆ ಔಚಿತ್ಯವನ್ನನುಸರಿಸಿ ಹೆಚ್ಚು ಆಟಗಾರರನ್ನು ತೆಗೆದುಕೊಳ್ಳಬಹುದು. ಕಪ್ಪು ಜಾತಿಯ ವಿಭಾಗಗಳಲ್ಲಿ ಕೊನೆಯ ಪತ್ರದ ಎಲೆಯಲ್ಲಿ ಮೋಹಿನಿಯು ಕುಳಿತಿರುತ್ತಾಳೆ. ಅವಳು ಕಬ್ಬಿನ ಜಲ್ಲೆ ಹಿಡಿದಿರುವ ಮನ್ಮಥನೊಂದಿಗೆ ಹೋರಾಡುತ್ತಿರುತ್ತಾಳೆ. ಕೊನೆಯಲ್ಲಿ ಗರುಡನ ಎಲೆಯನ್ನು ಕೊಟ್ಟವನು ಗೆಲ್ಲುತ್ತಾನೆ. ಉಳಿದವರು ಸೋಲುತ್ತಾರೆ. ಈ ಜಗನ್ಮೋಹನ ಗಂಜೀಫಾವನ್ನು ೧೭೪೨ನೆಯ ಶಾಲಿವಾಹನ ಶಕೆ ಚಿತ್ರಭಾನು ಸಂ. ೦೧ ಕೃಷ್ಣಾಷ್ಟಮಿ ಶನಿವಾರ ದಿವಸ ಮುಮ್ಮಡಿ ಕೃಷ್ಣರಾಜ ಒಡೆಯರ ರಚಿಸಿದ್ದಾರೆ.

ಗಂಜೀಫಾ ಎಲೆಗಳ ಹೊಂದಾಣಿಕೆ

ಜಗನ್ಮೋಹನ ಗಂಜೀಫಾ ಆಟದಲ್ಲಿ ೧೮ ದೇವತೆಗಳು. ಒಂದೊಂದು ದೇವತೆಗೆ ೧೮ ಎಲೆಗಳು ಹಂಚಿಕೆಯಾಗುತ್ತವೆ. ಅವುಗಳನ್ನು ಈ ಕೆಳಗೆ ಹೆಸರಿಸಲಾಗಿದೆ. ಒಟ್ಟು ೩೬೦ ಎಲೆಗಳು :

೦೧. ಚಾಮುಂಡೇಶ್ವರಿ ಬಾಜು	೧೮ ಎಲೆಗಳು	ಚಿನ್ನದ ಬಣ್ಣ
೦೨. ದಕ್ಷಿಣಾಮೂರ್ತಿ ಬಾಜು	೧೮ ಎಲೆಗಳು	ಚಂದ್ರ ಬಣ್ಣ
೦೩. ಉಮಾ ಮಹೇಶ್ವರ ಬಾಜು	೧೮ ಎಲೆಗಳು	ಜಂಗಾಲ ಬಣ್ಣ
೦೪. ಶರಭ ಬಾಜು	೧೮ ಎಲೆಗಳು	ಸಂಪಿಗೆ ಬಣ್ಣ
೦೫. ತಾಂಡವೇಶ್ವರ ಬಾಜು	೧೮ ಎಲೆಗಳು	ಕಪ್ಪು ಬಣ್ಣ
೦೬. ಕಂಕಾಲ ಬಾಜು	೧೮ ಎಲೆಗಳು	ವರ್ತಿ ಬಣ್ಣ
೦೭. ಮತ್ಸ್ಯ ಬಾಜು	೧೮ ಎಲೆಗಳು	ಇಂಗಳೀಕದ ಬಣ್ಣ
೦೮. ಕೂರ್ಮ ಬಾಜು	೧೮ ಎಲೆಗಳು	ಕಾವಿ ಬಣ್ಣ
೦೯. ವರಾಹ ಬಾಜು	೧೮ ಎಲೆಗಳು	ಹಳದಿ ಬಣ್ಣ
೧೦. ನರಸಿಂಹ ಬಾಜು	೧೮ ಎಲೆಗಳು	ವರ್ತಿ ಬಣ್ಣ
೧೧. ವಾಮನ ಬಾಜು	೧೮ ಎಲೆಗಳು	ಪಿಸ್ತಾ ಬಣ್ಣ
೧೨. ಪರಶುರಾಮ ಬಾಜು	೧೮ ಎಲೆಗಳು	ಚಂದ್ರ ಬಣ್ಣ
೧೩. ಶ್ರೀರಾಮ ಬಾಜು	೧೮ ಎಲೆಗಳು	ಹಳದಿ ಬಣ್ಣ
೧೪. ಬಲರಾಮ ಬಾಜು	೧೮ ಎಲೆಗಳು	ಕಾವಿ ಬಣ್ಣ
೧೫. ಕೃಷ್ಣ ಬಾಜು	೧೮ ಎಲೆಗಳು	ಇಂಗಳದ ಬಣ್ಣ

೧೬.	ಕಲ್ಕಿ ಬಾಜು	೧೮ ಎಲೆಗಳು	ಕಪ್ಪು ವರ್ಣ
೧೭.	ಬ್ರಹ್ಮ ಬಾಜು	೧೮ ಎಲೆಗಳು	ಪಿಸ್ತಾ ಪಚ್ಚೆ ಬಣ್ಣ
೧೮.	ಇಂದ್ರ ಬಾಜು	೧೮ ಎಲೆಗಳು	ಜಂಗಾಲು ಬಣ್ಣ

ಚಕ್ರವರ್ತಿ ಎಲೆಗಳು ೨೮. ವಿನಾಯಕ, ನಂಜುಂಡೇಶ್ವರ, ಮಹಾಕಾಳಿ, ಮಹಾಲಕ್ಷ್ಮೀ, ಮಹಾಸರಸ್ವತಿ, ಬ್ರಾಹ್ಮೀ, ಮಾಹೇಶ್ವರಿ, ಕೌಮಾರೀ, ವೈಷ್ಣವೀ, ವರಾಹೀ, ಇಂದ್ರಾಣಿ, ಚಂದ್ರಶೇಖರ, ವೀರಭದ್ರ ವಟಪತ್ರಶಾಯೀ, ರಂಗನಾಥ, ವೆಂಕಟಾಚಲಪತಿ, ಚಲುವರಾಯ, ಷಣ್ಮುಖ, ವೈಕುಂಠ ನಾರಾಯಣ, ಹರಿಹರ, ಅರ್ಧನಾರೀಶ್ವರ, ಮನ್ಮಥ, ಶಿಂಶುಮಾರ, ತ್ರಿವಿಕ್ರಮ, ನಿಗೂಢ್ಭವ, ಗಜಾಸುರಹರ, ರಾಜಮನ್ನಾರು ಕೃಷ್ಣ, ಈ ಎಲ್ಲ ಎಲೆಗಳು ಚಿನ್ನದ ಬಣ್ಣವನ್ನು ಹೊಂದಿರುತ್ತವೆ.

ಚಾಮುಂಡಿ ಎಲೆ ಬಂದವರೇ ಆಟವನ್ನು ಪ್ರಾರಂಭಿಸುವದರಿಂದ ಅದಕ್ಕೆ ಹೊಂದಿಕೆಯಾಗುವಂತೆ ಚಿನ್ನದ ಬಣ್ಣದ/ಗಿಳಿಯ ಎಲೆಗಳನ್ನು ಚಾಮುಂಡಿ ಬಾಜುವಿಗೆ ಕ್ರಮವಾಗಿ ಸ್ತ್ರೀ, ವೀಣೆ, ವೃಷಭ, ಶರಭ, ಶರಭ, ಡಮರು, ಹಲ್ಲಿ, ಮತ್ಸ್ಯ, ಕೂರ್ಮ, ಸಿಂಹ, ಕಮಂಡಲು, ಪರಶು, ಕೃಷಿ, ನೇಗಿಲು, ಗರುಡ, ಕುದುರೆ, ಹಂಸ, ಆನೆ ಗುರುತುಗಳನ್ನು ಹಾಕಬೇಕು.[೨೩]

೦೬. ನವೀನ ದಶಾವತಾರ ಗಂಜೀಫಾ ಆಟ

ನವೀನ ದಶಾವತಾರದಲ್ಲಿ ಪ್ರಧಾನವಾಗಿ ೧೨ ದೇವತೆಗಳು. ಚಾಮುಂಡಾ, ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಬಲರಾಮ, ಶ್ರೀಕೃಷ್ಣ, ಕಲ್ಕಿ, ಮೋಹಿನಿ. ಒಂದೊಂದು ದೇವತೆಗೆ ೧೮ ಎಲೆಗಳು ಬರುತ್ತವೆ. ರಾಜ, ರಾಣಿ, ರಥ, ಕುದುರೆ, ಕಾಲಾಳು, ಪತಾಕೆ, ಮೇಷಾದಿ ಮೀನಪರ್ಯಂತ ಆಯಾ ದೇವತೆಯ ಚಿಹ್ನೆಯಿರುತ್ತವೆ. ಚಕ್ರವರ್ತಿ ಎಲೆಗಳು ರಾಜರಾಜೇಶ್ವರಿ, ಬ್ರಹ್ಮ, ವಿಷ್ಣು, ಮಹೇಶ್ವರ, ಗಣಪತಿ, ಸ್ಕಂದ, ಸೂರ್ಯ, ಚಂದ್ರ, ದಿಕ್ಪಾಲಕರು, ಮನ್ಮಥ. ೧೭ ಎಲೆಗಳು ಸ್ವತಂತ್ರವಾಗಿ ಉಕ್ತವಾಗಿವೆ. ದೇವಿಗೆ ಛತ್ರಿ ಮುಂತಾದವುಗಳನ್ನು ಹಿಡಿದಿರುವ ೭ ದಾಸಿಯರ ಒಟ್ಟು ಎಲೆಗಳು ೨೪೦. ಇಲ್ಲಿ ಆಯಾ ಚಿಹ್ನೆಯನ್ನು ಅನುಸರಿಸಿ ಆಟವಾಡಬೇಕು. ಇಲ್ಲಿ ೪ ಅಥವಾ ೩ ಆಟಗಾರರು ಇರುತ್ತಾರೆ. ಮೂವರು ಆಟಗಾರರಾದರೆ ಸೇವಕಿಯರ ೨ ಎಲೆಗಳು ಚಕ್ರವರ್ತಿಗಳಿಗೆ ಇರುತ್ತವೆ. ಇದರಿಂದ ೧೯ ಚಕ್ರವರ್ತಿ ಎಲೆಗಳಾಗಿರುತ್ತವೆ. ಸೇವಕಿಯರ ಎಲೆಗಳನ್ನು ಚಂಡಿಕೆಗೆ ಸಮರ್ಪಿಸಬೇಕು. ಯಾರ ಕೈಯಲ್ಲಿ ಚಂಡಿಕೆಯಿರುವುದೋ ಅವನು ಆಟವನ್ನು ಆರಂಭಿಸಬೇಕಾಗುತ್ತದೆ. ಮೋಹಿನಿ ಜಾತಿಯ ಭಾಗದಲ್ಲಿ ಕೊನೆಯಲ್ಲಿ ಮೀನದ ಚಿಹ್ನೆಯಿರುವ ಎಲೆಯನ್ನು ಆಡುವವನು ಗೆಲ್ಲುತ್ತಾನೆ. ಉಳಿದವರು ಸೋಲನ್ನು ಅನುಭವಿಸುವರು.

ಎಲೆಗಳ ಬಾಜು ೧೨, ಒಂದಕ್ಕೆ ೧೮ರಂತೆ ಒಟ್ಟು ೨೧ ಎಲೆಗಳು. ಚಕ್ರವರ್ತಿ ಎಲೆಗಳು ೧೭, ದಾಸಿಯ ಎಲೆಗಳು ೭, ಆಟಗಾರರು ೪, ಹಗಲು ರಾತ್ರಿಗಳಿಗೆ ಚಾಮುಂಡೇಶ್ವರಿಯೇ ಅಧಿದೇವತೆ. ಈ ಎಲೆ ಇರುವವನು ಮೊದಲು ಆಟ ಪ್ರಾರಂಭಿಸಬೇಕು. ಮೋಹಿನಿ ಬಾಜುವಿನಲ್ಲಿ ಮೀನರಾಶಿಯ ಎಲೆಯನ್ನು ಕೊನೆಯಲ್ಲಿ ಆಟ ಆಡುವವನು ಗೆಲ್ಲುತ್ತಾನೆ.

೦೭. ನವಗ್ರಹ ಗಂಜೀಫಾ ಆಟ

ಚಾಮುಂಡಾ, ವಿಷ್ಣು, ಶಿವ, ಸೂರ್ಯ, ಸೇರಿದಂತೆ ಒಂದೊಂದು ದೇವತೆಗೆ ೧೮ ಎಲೆಗಳು.

---

೨೩. ಶ್ರೀ ತತ್ವನಿಧಿ, ಅಧ್ಯಾಯ-೯ ಕೌತುಕನಿಧಿಯಲ್ಲಿ ವಿವರಣೆ ನೋಡಿ, ಪುಟ-೮೮೧

ರಾಜ, ರಾಣಿ, ರಥ, ಕುದುರೆ, ಕಾಲಾಳು, ಪತಾಕೆ, ಮೇಷದಿಂದ ಮೀನದವರೆಗೆ. ಮುಂದಿನ ಎಲೆ ಹಿಂದಿನದಕ್ಕಿಂತ ದುರ್ಬಲ, ಚಂದ್ರಹಾಸ, ಚಕ್ರ, ಶೂಲ, ಗ್ರಹಗಳು, ಮಂಡಳಗಳು ಈ ಚಿಹ್ನೆಯನ್ನು ಅನುಸರಿಸಿ ಎಲೆಗಳನ್ನು ಹಾಕಬೇಕು. ಚಿನ್ನ ಅತಿಗೆಂಪು, ಬಿಳಿಗೆಂಪು, ಕುಸುಂಬ, ಬೆಳ್ಳಿ, ಕೆಂಪು, ಹಸಿರು, ಹಳದಿ, ಬೆಳ್ಳಿ, ಕಪ್ಪು, ನೀಲಿ ಕಪ್ಪು ಇವು ೧೨ ಜಾತಿಯ ಎಲೆಗಳ ಕ್ರಮವಾದ ಬಣ್ಣಗಳು ಒಂದು ಜಾತಿಗೆ ೧೮ ಎಲೆಗಳು ೪ ಅಥವಾ ೩ ಆಟಗಾರರು. ಅಹೋರಾತ್ರಿ ಚಂಡಿಕೆಯನ್ನು ಆರಿಸಿ ಕೇತುವಿನ ಜಾತಿಯಲ್ಲಿ ಮೀನದ ಎಲೆಯನ್ನು ಆಟದ ಕೊನೆಯಲ್ಲಿ ಕೊಡುವವನು ಆಟವನ್ನು ಗೆಲ್ಲುತ್ತಾನೆ.

ನವಗ್ರಹ ಗಂಜೀಫಾ ಎಲೆಗಳಲ್ಲಿ ೧೨ ದೇವತೆಗಳಿಗೆ ಅಂದರೆ ಒಂದೊಂದು ದೇವತೆಗೆ ೧೮ ಎಲೆಗಳ ಒಟ್ಟು ೨೧೬ ಎಲೆಗಳು, ೩ ಜನ ಆಟಗಾರರಿದ್ದರೆ ಒಬ್ಬರಿಗೆ ೭೨ ಎಲೆಗಳು ಮತ್ತು ೪ ಜನ ಆಟಗಾರರಿದ್ದರೆ ಒಬ್ಬರಿಗೆ ೫೪ ಎಲೆಗಳನ್ನು ಹಂಚಬೇಕು. ಹಗಲು ರಾತ್ರಿ ಚಾಮುಂಡೇಶ್ವರಿಯ ಆದಿ ದೇವತೆಯ ಕೊನೆಯಲ್ಲಿ ಕೇತುವಿನ ಎಲೆಯ ಬಾಜುವಿನಲ್ಲಿ ಮೀನರಾಶಿಯ ಎಲೆಗಳನ್ನು ಹಾಕುವವನು ಆಟವನ್ನು ಗೆಲ್ಲುತ್ತಾನೆ.[೨೪]

೦೮. ಪಂಚಪಾಂಡವ ಗಂಜೀಫಾ ಆಟ

ಪಂಚಪಾಂಡವ ಗಂಜೀಫಾ ಎಲೆಗಳು ಒಟ್ಟು ೨೧೬. ಈ ಆಟದಲ್ಲಿ ೧೨ ಎಲೆಗಳು ಪ್ರಮುಖ ನಾಯಕರದ್ದು. ಕೃಷ್ಣ, ಶಿವ, ಧರ್ಮರಾಜ, ಭೀಮ, ಅರ್ಜುನ, ನಕುಲ, ಸಹದೇವ, ಕೌರವರು, ಭೀಷ್ಮ, ದ್ರೋಣ, ಕರ್ಣ, ಶಲ್ಯ. ಒಬ್ಬ ನಾಯಕರಿಗೆ ೧೬ ಎಲೆಗಳು. ನಾಯಕ, ಅವನ ಪತ್ನಿ, ರಥ, ಕುದುರೆ, ಸೈನಿಕ, ಪತಾಕೆ, ಅಂಬಾರಿ, ೧೨ ರವರೆಗೆ ಚಕ್ರ, ತ್ರಿಶೂಲ, ಅಂಕುಶ, ಗದೆ, ಬಿಲ್ಲು, ಗುದ್ದಲಿ, ಚೂರಿ, ಮುಷ್ಟಿ, ಬಾಣ, ಹಗ್ಗ, ಸರ್ಪ, ಬಾರಕೋಲು ಇವು ಎಲೆಯ ಪಕ್ಕದಲ್ಲಿಯ ಕ್ರಮವಾದ ಚಿಹ್ನೆಗಳು, ಪಾಂಡವರಿಗೆ ಕೃಷ್ಣನು ಪ್ರಭು, ಉಳಿದವರಿಗೆ ಶಿವನು ಪ್ರಭು, ಹಗಲು ಕೃಷ್ಣನನ್ನು, ರಾತ್ರಿ ಶಿವನನ್ನು ಮುಂದು ಮಾಡಿಕೊಳ್ಳಬೇಕು. ಎಲೆಯ ಬಣ್ಣಗಳು ಅತಿಗೆಂಪು, ಬಿಳಿಕೆಂಪು, ಬಿಳಿ, ಕೆಂಪು, ಹಳದಿ, ಹಸಿರು, ಹೊಂಬಣ್ಣ, ಹಳದಿ, ನೀಲಿ ಆಗಿರುತ್ತವೆ.

೪ ಅಥವಾ ೩ ಜನ ಆಟಗಾರಿದ್ದು ಕೊನೆಯಲ್ಲಿ ವಿಷ್ಣುವಿನ ಜಾತಿಯ ಎಲೆಯನ್ನು ಮೋಹಿನಿಗೆ ಕೊಟ್ಟವನು ಆಟವನ್ನು ಗೆಲ್ಲುತ್ತಾನೆ. ಉಳಿದಿದ್ದು ಚಾಮುಂಡೇಶ್ವರಿ ಗಂಜೀಫಾ ಆಟದಂತೆ. ಈ ಆಟದಲ್ಲಿ ೧೨ ಪ್ರಧಾನ ಚಿತ್ರಗಳಿಗೆ ೧೮ ಎಲೆಗಳಂತೆ ಹಾಕಬೇಕು. ಮೂವರು ಆಟವನ್ನು ಪ್ರಾರಂಭಿಸಿದರೆ ಒಬ್ಬರಿಗೆ ೭೨ ರಂತೆ ಎಲೆ ಹಂಚಿಕೊಳ್ಳಬೇಕು ಮತ್ತು ನಾಲ್ಕು ಜನ ಆಟಗಾರರಿದ್ದರೆ ಒಬ್ಬರಿಗೆ ೫೪ ಎಲೆಗಳನ್ನು ಹಂಚಿಕೊಳ್ಳಬೇಕು. ಹಗಲು ಆಟಕ್ಕೆ ವಿಷ್ಣುವಿನ ಚಿತ್ರ, ರಾತ್ರಿ ಆಟಕ್ಕೆ ಈಶ್ವರನು ಪ್ರಧಾನ ದೇವತೆ. ವಿಷ್ಣುವಿನ ಭಾಜುವಿನಲ್ಲಿ ಚಕ್ರ ಮೋಹಿನಿ ಎಲೆಯನ್ನು ಕೊನೆಯಲ್ಲಿ ಹಾಕುವವನು ಆಟವನ್ನು ಗೆಲ್ಲುತ್ತಾನೆ.

೦೯. ದೇವಿದಶಾವತಾರ ಗಂಜೀಫಾ ಆಟ

ಈ ಆಟದಲ್ಲಿ ಪ್ರಮುಖವಾಗಿ ಹತ್ತು ದೇವತೆಗಳಿದ್ದು ಅವು ಚಾಮುಂಡಿ, ಮಹಾಕಾಳಿ, (ಹತ್ತುಮುಖ ದಶಾನೆ) ಮಹಾಲಕ್ಷ್ಮೀ (ಕಮಲದಲ್ಲಿರಳುವಳು), ವೀಣಾವಾಹಿನಿಯಾದ ಮಹಾಸರಸ್ವತಿ, ಬ್ರಾಹ್ಮಿ, ಮಹೇಶ್ವರಿ, ಕೌಮಾರೀ, ವೈಷ್ಣವಿ, ವರಾಹೀ, ಇಂದ್ರಾಣಿ, ಒಂದೊಂದು ದೇವತೆಗೆ ೧೮ ಎಲೆಗಳನ್ನು ಹಾಕಬೇಕು. ಅವು ಮಹಾರಾಣಿ, ಯುವರಾಣಿ, ಮಂತ್ರಿಣಿ, ದಂಡಿನೀ, ಪದಾತಿ, ಪತಾಕೆ, ಚಕ್ರ, ಶಂಖ, ಸಿಂಹ, ಆನೆ, ಹುಲಿ, ಕುದುರೆ, ಜಿಂಕೆ, ಹಂಸ, ನವಿಲು, ಹಾವು, ಬಕ, ಮೀನು. ಇವುಗಳಲ್ಲಿ

೨೪. ಶ್ರೀ ತತ್ವನಿಧಿ, ಅಧ್ಯಾಯ-೯ ಕೌತುಕನಿಧಿಯಲ್ಲಿ ವಿವರಣೆ ನೋಡಿ, ಪುಟ-೮೮೧

ಮುಂದಿನದು ಕ್ರಮವಾಗಿ ದುರ್ಬಲವಾಗಿರುತ್ತವೆ. ಚಿನ್ನ, ಕೆಂಪು, ಹಳದಿ, ಹಸಿರು, ಕಪ್ಪು, ಸಿಂಧೂರ, ಬಿಳಿ, ಸಂಪಿಗೆ, ಬಿಳಿಗೆಂಪು, ಗರಿಕೆಯ ಕಪ್ಪು, ಇವು ಎಲ್ಲವೂ ಎಲೆಯ ಬಣ್ಣಗಳಾಗಿರುತ್ತವೆ. ಈ ಆಟವನ್ನು ವರ್ಷವನ್ನನುಸರಿಸಿ ಆಡಬೇಕು. ಇಲ್ಲಿ ಒಟ್ಟು ೧೮೦ ಎಲೆಗಳು. ಖಡ್ಗ, ದಶಾನೆ, ಕಮಲ, ವೀಣೆ, ಹಂಸ, ಎತ್ತು, ನವಿಲು, ಗರುಡ, ಕೋಣ, ಆನೆ, ಇವುಗಳೆಲ್ಲವೂ ೧೦ ಜಾತಿಯ ಚಿಹ್ನೆಗಳು. ೩ ಅಥವಾ ೮ ಆಟಗಾರರಿದ್ದು ಹಗಲು ರಾತ್ರಿ ರಾಣಿಯಾದ ಚಂಡಿಕೆ ಯಾರ ಕೈಯಲ್ಲಿ ಇರುವುದೋ ಅವರು ಈ ಆಟವನ್ನು ಪ್ರಾರಂಭಿಸಬೇಕು. ಈ ಆಟ ಇಂದ್ರಾಣಿಯಿಂದ ಕೊನೆಗೊಳ್ಳುತ್ತದೆ. ಕೊನೆಗೆ ಯಾರು ಮೀನದ ಚಿಹ್ನೆಯನ್ನು ಹಾಕುವರೊ ಅವರು ಆಟವನ್ನು ಗೆಲ್ಲುತ್ತಾರೆ.

ಈ ಆಟದಲ್ಲಿ ೧೦ ದೇವತೆಗಳಿಗೆ ಬಾಜು ೧೮ ಎಲೆಗಳಂತೆ ಹಾಕಬೇಕು. ಮೂವರು ಆಟಗಾರರಿದ್ದರೆ ೬೦ ಎಲೆ ಹಂಚಿಕೆಯಾಗಬೇಕು ಅಥವಾ ನಾಲ್ಕು ಆಟಗಾರರಿದ್ದರೆ ಒಬ್ಬರಿಗೆ ೪೫ ರಂತೆ ಹಂಚಿಕೆಯಾಗಬೇಕು. ಚಾಮುಂಡೇಶ್ವರಿಯ ಕೊನೆಯಲ್ಲಿ ಇಂದ್ರಾಣಿ ಬಾಜುವಿನಲ್ಲಿ ಮೀನ ರಾಶಿಯ ಎಲೆಗಳನ್ನು ಹಾಕುವವರು ಆಟವನ್ನು ಗೆಲ್ಲುತ್ತಾರೆ.[೨೫]

೧೦. ದಿಕ್ಪಾಲ ಗಂಜೀಫಾ ಆಟ

ಈ ಆಟದಲ್ಲಿ ಹತ್ತು ದೇವತೆಗಳು ಪ್ರಧಾನವಾಗಿರುತ್ತವೆ. ಚಾಮುಂಡಾ, ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈಶಾನ, ಮೋಹಿನೀ, ಒಂದೊಂದು ದೇವತೆಗೆ ಇಲ್ಲಿ ೧೬ ಎಲೆಗಳು. ಒಟ್ಟು ೧೬೦ ರಾಜ, ರಾಣಿ, ರಥ, ಕುದುರೆ, ಕಾಲಾಳು, ಪತಾಕೆಗಳು ಇರುತ್ತವೆ. ಹಿಂದಿನ ಎಲೆಗಳಿಗಿಂತ ಮುಂದಿನ ಎಲೆಗಳು ದುರ್ಬಲ. ಸಿಂಹ, ಆನೆ, ಆಡು, ಕೋಣ, ಮನುಷ್ಯ, ಜಿಂಕೆ, ಸಾರಂಗ, ಕುದುರೆ, ಎತ್ತು, ಗಿಳಿ ಈ ದೇವತೆಗಳ ಚಿಹ್ನೆಗಳಾಗಿವೆ. ಇಲ್ಲಿ ಚಿಹ್ನೆಗಳನ್ನು ಅನುಸರಿಸಿ ಆಟಮಾಡಬೇಕು. ಚಿನ್ನ, ಕೆಂಪು, ಹಳದಿ, ಬಿಳಿ, ಹಳದಿ, ಹಸಿರು, ಅತಿಗೆಂಪು, ಬಿಳಿಗೆಂಪು, ಹಳದಿ, ಬತ್ತಿ, ಬೆಳ್ಳಿ ಎಲೆಗಳ ಬಣ್ಣಗಳಾಗಿವೆ. ಸಿಂಹ, ತಾವರೆಯ ಆಸನ, ವೀಣೆ, ಕಮಂಡಲು, ಚಕ್ರ, ತ್ರಿಶೂಲ, ಇಮ್ಮುಖ ಬದಿಗಳಲ್ಲಿ ಒಂದು ತಲೆಗಳು, ಸೂರ್ಯ ಚಂದ್ರರ ಬಿಂಬಗಳು ಜಾತಿ ಚಿಹ್ನೆಗಳಾಗಿರುತ್ತವೆ. ಈ ಆಟದಲ್ಲಿ ೪ ಅಥವಾ ೫ ಆಟಗಾರರು ಹಗಲು ರಾತ್ರಿಯೂ ಚಂಡಿಕೆಯೇ ಕಾಣೆಯಾದುದರಿಂದ ಆ ಎಲೆ ಇರುವವರು ಆಟ ಪ್ರಾರಂಭಿಸಬೇಕು. ಹೀಗೆಯೇ ಮೋಹಿನಿಜಾತಿಯ ಗಿಳಿಯ ಎಲೆಯನ್ನು ಕೊನೆಗೆ ಹಾಕುವವನು ಆಟ ಗೆಲ್ಲುತ್ತಾನೆ. ಉಳಿದುದು ಚಾಮುಂಡಿ ಗಂಜೀಫಾದಂತೆ ಇರುತ್ತದೆ.

ಈ ಆಟದಲ್ಲಿ ೪ ಜನರಿದ್ದರೆ ಒಬ್ಬರಿಗೆ ೪೦ ಎಲೆಗಳಂತೆ, ಐದು ಜನ ಆಟಗಾರರಿದ್ದರೆ ಒಬ್ಬರಿಗೆ ೩೨ ಎಲೆಗಳಂತೆ ಹಂಚಬೇಕು. ಆಟದ ಕೊನೆಯ ಮೋಹಿನಿ ಬಾಜುವಿನಲ್ಲಿ ಸುಖಮೋಹಿನೀ ಎಲೆಯನ್ನು ಹಾಕುವನು ಅವನು ಆಟವನ್ನು ಗೆಲ್ಲುತ್ತಾನೆ.[೨೬]

೧೧. ಮನೋಹರ ಗಂಜೀಫಾ ಆಟ

ಈ ಆಟದಲ್ಲಿ ೯ ದೇವತೆಗಳು ಪ್ರಧಾನವಾಗಿರುತ್ತವೆ. ಚಾಮುಂಡಾ, ಶಿವ, ರಾಮ, ಕೃಷ್ಣ, ಬ್ರಹ್ಮ, ಹಯಗ್ರೀವ, ಸ್ಕಂದ, ಇಂದ್ರ, ಮನ್ಮಥ, ಒಂದೊಂದು ದೇವತೆಗೂ ೧೬ ಎಲೆಗಳು. ಒಟ್ಟು ೧೬೦

---

೨೫. ಶ್ರೀ ತತ್ವನಿಧಿ, ಅಧ್ಯಾಯ-೯ ಕೌತುಕನಿಧಿಯಲ್ಲಿ ವಿವರಣೆ ನೋಡಿ, ಪುಟ-೮೮೧
೨೬. ಶ್ರೀ ತತ್ವನಿಧಿ, ಅಧ್ಯಾಯ-೯ ಕೌತುಕನಿಧಿಯಲ್ಲಿ ವಿವರಣೆ ನೋಡಿ, ಪುಟ-೮೮೧

ಎಲೆಗಳು. ರಾಜ, ರಾಣಿ, ಮಂತ್ರಿ, ಸೇನಾಪತಿ, ಸೇವಕ, ಪದಾತಿ, ಒಂದರಿಂದ ೧೦ರವರೆಗೆ ಎಲೆಗಳು ಬರುತ್ತವೆ. ಮುಂದಿನ ಎಲೆಗಳು ದುರ್ಬಲವಾಗಿರುತ್ತವೆ. ಸಿಂಹ, ನಂದಿ, ಹನುಮ, ಮಂಗ, ಗರುಡ, ಹಂಸ, ಕುದುರೆ, ನವಿಲು, ಐರಾವತ, ಗಿಳಿ, ರಾಜರಾಜೇಶ್ವರಿ, ಶಿವ, ಶರಭ, ದಕ್ಷಿಣಾಮೂರ್ತಿ, ಆಲದ ಎಲೆಯಲ್ಲಿ ಮಲಗಿರುವ ವಿಷ್ಣು, ಗಣಪತಿ, ತಾಂಡವ, ಸೂರ್ಯ ಚಂದ್ರರು ದೇವತೆಗಳ ಚಿಹ್ನೆಗಳಾಗಿರುತ್ತವೆ. ಆಟದಲ್ಲಿ ೯ ಚಕ್ರವರ್ತಿ ಎಲೆಗಳು. ೭ ಕಮಲದ ಎಲೆಗಳನ್ನು ಚಾಮುಂಡಿಗೆ ಅರ್ಪಿಸಬೇಕು.

ಬಿಳಿಗೆಂಪು, ಹಳದಿ, ಅತಿಗೆಂಪು, ಬಿಳಿಹಸಿರು, ಬಿಳಿ, ಗೈರಿಕ, ಬಿಳಿಗೆಂಪು, ಹಳದಿ ಇವುಗಳು ಆಟದ ಎಲೆಗಳ ಬಣ್ಣಗಳಾಗಿರುತ್ತವೆ. ಆಟಗಾರನ ಹತ್ತಿರ ತಾವರೆಯ ಎಲೆ ಇರದಿದ್ದರೆ ಬೇರೆ ಆಟಗಾರನಿಂದ ತೆಗೆದುಕೊಳ್ಳಬಹುದು. ತನ್ನಲ್ಲಿರುವ ಉತ್ತಮವಾದ ಎಲೆಯನ್ನು ಕೊಡಬೇಕು. ಆಟಗಾರನು ೪ ಚಕ್ರವರ್ತಿಯ ಎಲೆಯಿಂದ ಆಟವನ್ನು ಪ್ರಾರಂಭಿಸುತ್ತಾನೆ.

ಒಂಭತ್ತು ದೇವತೆಗಳ ಒಂದರ ಬಾಜು ೧೯ ಎಲೆಗಳಂತೆ ೧೪೪ ಎಲೆಗಳು, ಚಕ್ರವರ್ತಿ ಎಲೆಗಳು ೧೯, ಪದ್ಮದ ಎಲೆಗಳು ೭, ಒಟ್ಟು ೧೬೦ ಎಲೆಗಳು. ಚಾಮುಂಡೇಶ್ವರಿಯೇ ಪ್ರಧಾನ ದೇವತೆ. ಅದಕ್ಕೆ ಪದ್ಮದ ಎಲೆಯನ್ನು ಕೊಡತಕ್ಕದ್ದು. ಅದು ಇಲ್ಲದಿದ್ದರೆ, ಬೇರೆಯವರಿಂದ ತೆಗೆದುಕೊಂಡು ಆಡಬಹುದು. ಕೊನೆಯಲ್ಲಿ ಮನ್ಮಥ ಎಲೆಯ ಬಾಜುವಿನಲ್ಲಿ ಸುಖಮೋಹಿನಿ ಎಲೆಯನ್ನು ಹಾಕುವವನು ಆಟವನ್ನು ಗೆಲ್ಲುತ್ತಾನೆ.

೧೨. ಸರ್ವಮಂಗಳ ಗಂಜೀಫಾ ಆಟ

ಈ ಆಟದಲ್ಲಿ ೦೮ ದೇವತೆಗಳು ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ. ಶ್ರೀ ಚಾಮುಂಡಾ, ಶಿವ, ನಾರಾಯಣ, ಬ್ರಹ್ಮ, ಇಂದ್ರ, ರವಿ, ಚಂದ್ರ, ಮನ್ಮಥ. ಒಂದೊಂದು ದೇವತೆಗೆ ೧೮ ಎಲೆಗಳಿದ್ದು ರಾಜ, ರಾಣಿ, ಮಂತ್ರಿ, ಸೇನಾಪತಿ, ಸೇವಕ, ಪತಾಕೆ, ಮೇಷದಿಂದ ಮೀನದವರೆಗೆ ಅದರದೇ ಆದ ಚಿಹ್ನೆಗಳನ್ನು ಹೊಂದಿರುತ್ತವೆ. ಶ್ರೀಕಂಠ, ಗಣಪತಿ, ಸ್ಕಂದ, ವಟಪತ್ರಶಾಯಿ, ತಾಂಡವ, ದಕ್ಷಿಣಾಮೂರ್ತಿ, ಮತ್ಸ್ಯ ಮುಂತಾದ ೧೦ ಅವತಾರಮೂರ್ತಿಗಳನ್ನು ಕಾಣಬಹುದು. ೧೬ ಚಕ್ರವರ್ತಿ ಎಲೆಗಳು ಸೇರಿ ಒಟ್ಟು ೧೬೦ ಎಲೆಗಳು ಈ ಆಟದಲ್ಲಿರುತ್ತವೆ. ಸಿಂಹ, ತ್ರಿಶೂಲ, ಚಕ್ರ, ಹಂಸ, ವಜ್ರ, ಅರುಣ, ಜಿಂಕೆ, ಇವು ಕ್ರಮವಾದ ಚಿಹ್ನೆಗಳು. ಚಕ್ರವರ್ತಿ ಎಲೆಗಳಿಗೆ ಚಿನ್ನದ ಬಣ್ಣವಿದ್ದರೆ ಚಿನ್ನ. ಅತಿಗೆಂಪು, ಹಳದಿ, ಬಿಳಿ, ಹಸಿರು, ಕಪ್ಪು, ಬತ್ತಿ, ಬಿಳಿಗೆಂಪು, ಸಿಂಧೂರ ಬಣ್ಣಗಳನ್ನು ಉಳಿದ ಎಲೆಗಳಲ್ಲಿ ಕಾಣಬಹುದು. ಎಂಟು ದೇವತೆಗಳ ಬಾಜು ೧೮ ಎಲೆಗಳಂತೆ ೧೪೪ ಎಲೆಗಳು ಮತ್ತು ೧೬ ಬಿಳಿ ಬಣ್ಣದ ಎಲೆಗಳು ಸೇರಿ ೧೦ ಎಲೆಗಳು.

೦೧	ಚಾಮುಂಡೇಶ್ವರಿ ಎಲೆಯ ಬಾಜು	ಚಿನ್ನ ಬಣ್ಣ
೦೨	ಈಶ್ವರ ಎಲೆಯ ಬಾಜು	ಇಂಗಳದ ಬಣ್ಣ
೦೩	ವಿಷ್ಣುವಿನ ಎಲೆಯ ಬಾಜು	ಪಿಸ್ತಾಪಚ್ಚೆ ಬಣ್ಣ
೦೪	ಇಂದ್ರನ ಎಲೆಯ ಬಾಜು	ಕಪ್ಪು ಬಣ್ಣ
೦೫	ಸೂರ್ಯನ ಎಲೆಯ ಬಾಜು	ವರ್ತಿ ಬಣ್ಣ
೦೬	ಚಂದ್ರನ ಎಲೆಯ ಬಾಜು	ಜಂಗಾಲು ಬಣ್ಣ
೦೭	ಮನ್ಮಥನ ಎಲೆಯ ಬಾಜು	ಚಂದ್ರ ಬಣ್ಣ

ಈ ಆಟದಲ್ಲಿ ಮನ್ಮಥನ ಜಾತಿಯ ಎಲೆಯಾದ ಮೀನ ಎಲೆಯನ್ನು ಕೊನೆಯಲ್ಲಿ ಹಾಕುವವನು ಆಟವನ್ನು ಗೆಲ್ಲುತ್ತಾನೆ.[೨೭]

೧೩. ನವರತ್ನ ಗಂಜೀಫಾ ಆಟ

ಈ ಆಟದಲ್ಲಿ ೦೯ ದೇವತೆಗಳು ಪ್ರಧಾನವಾಗಿರುತ್ತವೆ. ಮಹಾಚಾಮುಂಡಿ, ಮಹಾಲಕ್ಷ್ಮೀ, ವೀಣಾವಾಹಿನಿ, ಮಹಾಸರಸ್ವತಿ, ಬ್ರಹ್ಮ, ವಿಷ್ಣು, ಶಿವ, ಸೂರ್ಯ, ಚಂದ್ರ, ಈ ಆಟದಲ್ಲಿ ಮೂವರ ತಂಡ ಮೂರು ಗುಂಪುಗಳಾಗಿ ಒಂದು ತಂಡ ೩ ದೇವತೆಗಳಂತೆ ೯ ದೇವತೆಗಳನ್ನು ಹಂಚಿಕೊಂಡು, ಒಂದು ದೇವತೆಯ ೧೬ ಎಲೆಗಳನ್ನು ತೆಗೆದುಕೊಳ್ಳಬೇಕು. ರಾಜ, ರಾಣಿ, ಮಂತ್ರಿ, ಸೇನಾಪತಿ, ಸೈನಿಕ, ಪತಾಕೆ. ಇವೆಲ್ಲ ಅವತಾರದ ಚಿಹ್ನೆಗಳು. ಈ ಎಲೆಗಳಲ್ಲಿ ಹಿಂದಿನ ಎಲೆಗಿಂತ ಮುಂದಿನ ಎಲೆಗಳು ದುರ್ಬಲವಾಗಿರುತ್ತವೆ. ಹಿಂದೆ ಹೇಳಿದ ದೇವತೆಗಳು ಆಯಾ ಚಿಹ್ನೆಗಳಿಂದ ರಮ್ಯವಾಗಿರುತ್ತವೆ. ರಾಜರಾಜೇಶ್ವರಿ, ದಂಡಿನೀ, ಮಂತ್ರಿನಿ, ಬ್ರಾಹ್ಮೀ, ಮಾಹೇಶ್ವರಿ, ಕೌಮಾರೀ, ವೈಷ್ಣವಿ, ವರಾಹೀ, ಇಂದ್ರಾಣೀ, ಇವು ಸ್ವತಂತ್ರವಾದ ೯ ಶಕ್ತಿದೇವತೆಗಳು. ಮೊದಲು ೭ ಸಿಂಹದ ಎಲೆಗಳನ್ನು ಚಾಮುಂಡಿಗೆ ಅರ್ಪಿಸಬೇಕು. ಎಲ್ಲಾ ಎಲೆಗಳು ಸೇರಿ ೧೬೦ ಎಲೆಗಳು. ಆಯಾ ಚಿಹ್ನೆಯನ್ನು ಅನುಸರಿಸಿ ಆಟವನ್ನು ಆಡಬೇಕು. ಚಿನ್ನ, ನೀಲ, ಹಳದಸಿ, ಬತ್ತಿ, ಹಳದಿ, ಬಿಳಿಗೆಂಪು, ಕಪ್ಪು, ಹಸಿರು, ಸಂಪಿಗೆ, ಚಂದ್ರಬಣ್ಣ ಎಂದು ಈ ಬಣ್ಣಗಳನ್ನು ಎಲೆಗಳಲ್ಲಿ ಕಾಣಬಹುದು. ಚಕ್ರವರ್ತಿ ಮತ್ತು ಸಿಂಹದ ಎಲೆಗಳಿಗೆ ಬೆಳ್ಳಿ ಬಣ್ಣವಿರುತ್ತದೆ. ಚಾಮುಂಡಿ ಎಲೆ ಇರುವವನು ಆಟವನ್ನು ಆರಂಭಿಸಬೇಕು. ಈ ಆಟವನ್ನು ೪ ಜನ ಆಡಬೇಕು. ಆಟದಲ್ಲಿ ಚಾಮುಂಡಿಯು ರಾಣಿಯಾಗಿದ್ದು ಅವಳಿಗೆ ಸಿಂಹದ ಎಲೆಯನ್ನು ಕೊಡಬೇಕು. ಯಾರ ಕೈಯಲ್ಲಿ ಸಿಂಹದ ಎಲೆ ಇಲ್ಲವೋ ಅವರು ಬೇರೆಯವರಿಂದ ತೆಗೆದುಕೊಳ್ಳಬಹುದು.

ಶಕ್ತಿತ್ರಯ, ಮೂರ್ತಿತ್ರಯ, ತೇಜಸ್ತ್ರಯ ಇವು ಆಟದ ಸ್ವರೂಪವಾಗಿವೆ. ಒಂಭತ್ತು ದೇವತೆಗಳಲ್ಲಿ ಒಂದು ದೇವತೆಗೆ ಬಾಜು ೧೬ ಎಲೆಗಳು ಸೇರಿ ೧೪೪ ಎಲೆಗಳು, ಅಲ್ಲದೆ ಚಕ್ರವರ್ತಿ ಎಲೆಗಳು ೯, ಸಿಂಹದ ಎಲೆಗಳು ೭, ಎಲ್ಲಾ ಎಲೆಗಳು ಸೇರಿ ಒಟ್ಟು ೧೬೦ ಎಲೆಗಳು.

೦೧.	ಚಾಮುಂಡೇಶ್ವರಿ ಎಲೆಯ ಬಾಜು	೧೬ ಎಲೆಗಳು	ಚಿನ್ನದ ಬಣ್ಣ
೦೨.	ಮಹಾಲಕ್ಷ್ಮೀ ಎಲೆಯ ಬಾಜು	೧೬ ಎಲೆಗಳು	ಜಂಗಾಲು ಬಣ್ಣ
೦೩.	ಮಹಾಸರಸ್ವತಿ ಎಲೆಯ ಬಾಜು	೧೬ ಎಲೆಗಳು	ವರ್ತಿ ಬಣ್ಣ
೦೪.	ಬ್ರಹ್ಮನ ಎಲೆಯ ಬಾಜು	೧೬ ಎಲೆಗಳು	ಹಳದಿ ಬಣ್ಣ
೦೫.	ವಿಷ್ಣುವಿನ ಎಲೆಯ ಬಾಜು	೧೬ ಎಲೆಗಳು	ಇಂಗಲೀಕ ಬಣ್ಣ
೦೬.	ಈಶ್ವರನ ಎಲೆಯ ಬಾಜು	೧೬ ಎಲೆಗಳು	ಕಪ್ಪು ಬಣ್ಣ
೦೭.	ಅಗ್ನಿ ಎಲೆಯ ಬಾಜು	೧೬ ಎಲೆಗಳು	ಪಿಸ್ತಾ ಪಚ್ಚೆ ಬಣ್ಣ
೦೮.	ಸೂರ್ಯ ಎಲೆಯ ಬಾಜು	೧೬ ಎಲೆಗಳು	ಸಂಪಿಗೆ ಬಣ್ಣ
೦೯.	ಚಂದ್ರನ ಎಲೆಯ ಬಾಜು	೧೬ ಎಲೆಗಳು	ಚಂದ್ರ ಬಣ್ಣ

ಚಕ್ರವರ್ತಿ ಎಲೆಗಳು, ಸಿಂಹದ ಎಲೆಗಳು ೧೬. ಇವುಗಳಿಗೆ ಬೆಳ್ಳಿಬಣ್ಣದ ಲೇಪನವಿರುತ್ತದೆ. ಈ ಆಟದಲ್ಲಿ ಚಂದ್ರ ಜಾತಿಯು ಕೊನೆಯ ಎಲೆಯಾಗಿದ್ದರಿಂದ ಅದನ್ನು ಹಾಕುವವನು ಆಟವನ್ನು ಗೆಲ್ಲುತ್ತಾನೆ.[೨೮]

---

೨೭. ಶ್ರೀ ತತ್ವನಿಧಿ, ಅಧ್ಯಾಯ-೯ ಕೌತುಕನಿಧಿಯಲ್ಲಿ ವಿವರಣೆ ನೋಡಿ, ಪುಟ-೮೮೧
೨೮. ಶ್ರೀ ತತ್ವನಿಧಿ, ಅಧ್ಯಾಯ-೯ ಕೌತುಕನಿಧಿಯಲ್ಲಿ ವಿವರಣೆ ನೋಡಿ, ಪುಟ-೮೮೧

೧೪. ಕೃಷ್ಣರಾಜ ಪೇಟ್ ಗಂಜೀಫಾ ಆಟ

ಈ ಆಟದಲ್ಲಿ ೪ ಪ್ರಮುಖ ದೇವತೆಗಳಿದ್ದು ಶ್ರೀಕೃಷ್ಣ, ಶಂಕರ, ಬ್ರಹ್ಮ, ಇಂದ್ರ, ಒಂದೊಂದು ದೇವತೆಗೆ ೧೮ ಎಲೆಗಳು, ಒಟ್ಟು ೭೨ ಎಲೆಗಳು. ಈ ಆಟದಲ್ಲಿ ರಾಜ, ರಾಣಿ, ಮಂತ್ರಿ, ಸೈನಿಕ, ಪತಾಕೆ, ಚಕ್ರ, ಶಂಖ, ಗರುಡ, ಹನುಮ, ಭೇರುಂಡ, ಸಾಲ್ವ, ಶರಭ, ಸಿಂಹ, ಮದ್ದಾನೆ, ಕುದುರೆ, ವರಾಹ, ಮೊಸಳೆ, ಮೀನು. ಹಿಂದಿನ ಎಲೆಗಳಿಂದ ಮುಂದಿನ ಎಲೆಗಳು ದುರ್ಬಲವಾಗಿರುತ್ತವೆ. ಕೃಷ್ಣ, ಶಿವ, ಬ್ರಹ್ಮ, ಇಂದ್ರ ಇವು ೪ ಜಾತಿಯ ಎಲೆಗಳು, ಈ ಆಟದಲ್ಲಿ ೩ ಜನ ಅಥವಾ ೪ ಜನರಿದ್ದು ಆಟವಾಡಬಹುದು. ರಾತ್ರಿಯ ಆಟದಲ್ಲಿ ಕೃಷ್ಣನೇ ರಾಜನಾಗಿರುತ್ತಾನೆ. ಮೊದಲು ಕೃಷ್ಣನ ಎಲೆಯನ್ನು ಹೊಂದಿರುವವನು ಆಟವನ್ನು ಪ್ರಾರಂಭಿಸಬೇಕು.

ಆಡುವವನು ನಿಶ್ಚಿತ ಸಂಖ್ಯೆಯನ್ನು ಪೂರ್ತಿಗೊಳಿಸಬೇಕು. ಎಲೆಗಳ ಸಂಖ್ಯೆ ರಾಜನಿಗೆ–೧೨, ರಾಣಿ–೧೦, ಮಂತ್ರಿಗೆ–೫, ಸೈನಿಕನಿಗೆ–೪, ಪತಾಕೆ–೧. ಆಟದ ಕೊನೆಯಲ್ಲಿ ಕಪ್ಪು ಬಣ್ಣದ ೨ ಮೀನು ಜಾತಿಯ ಎಲೆ ಹಾಕುವವನು ಆಟವನ್ನು ಗೆಲ್ಲುತ್ತಾನೆ.[೨೯]

ಗಂಜೀಫಾ ಚಿತ್ರಕಲೆ ಮತ್ತು ಆಟವನ್ನು ಕೆಲವು ಸಾಂಪ್ರದಾಯಿಕ ಮನೆತನಗಳು ದಶಾವತಾರ ಮತ್ತು ಮೊಘಲ್ ಗಂಜೀಫಾಗಳ ಬಗ್ಗೆ ತಿಳಿದುಕೊಂಡಿದ್ದರು. ಆರ್. ವಿ. ಲೇಡನ್ ಅವರು ತಿಳಿಸುವಂತೆ, ಮುಂಬೈಯಲ್ಲಿಯ ಪಾರ್ಸಿ ಮನೆತನಗಳು ಮತ್ತು ಹೈದರಾಬಾದಿನ ನವಾಬ್ ಮನೆತನಗಳು ಈ ಗಂಜೀಫಾ ಆಟವನ್ನು ಆಡುತ್ತಿದ್ದರು. ಪೋರ್ಚಿನ ಬ್ರಾಹ್ಮಣರು ದೇವಾಲಯಗಳಲ್ಲಿ, ಬೀದಿಗಳಲ್ಲಿ ಆಡುತ್ತಿದ್ದರು. ಅಲ್ಲದೇ ಕೂಲಿಕಾರರು ವಿಸ್ತರಿತ ದಶಾವತಾರದ ೧೪೪ ಎಲೆಗಳನ್ನು ಆಡುತ್ತಿದ್ದರು. ಓರಿಸ್ಸಾ ರಾಜ್ಯದ ರಾಣಿಯರು ಮತ್ತು ಅವರ ತಾಯಂದಿರು ಮೊಘಲ್ ಗಂಜೀಫಾ ಆಡುತ್ತಿದ್ದರು. ಬರ್ಮಾರಾಜ್ಯದಲ್ಲಿ ರಾಣಿಯರು, ಸೇವಕಿಯರು ತಮ್ಮ ಹಳೆಯ ಸಖಿಯರೊಂದಿಗೆ ಈ ಆಟವನ್ನು ಆಡುತ್ತಿದ್ದರು. ಓರಿಸ್ಸಾ ರಾಜ್ಯದ ದಕ್ಷಿಣ ಭಾಗದ ಗಜಾಮ್ ಜಿಲ್ಲೆಯ ಜನರು ಮೊಘಲ್ ಗಂಜೀಫಾ ಆಡುತ್ತಿದ್ದರು. ಪಶ್ಚಿಮ ಬಂಗಾಲದ ವಿಷ್ಣುಪುರದಲ್ಲಿ ಗಂಜೀಫಾ ಆಟವನ್ನು ಆಡುತ್ತಿದ್ದರು. ೧೯೬೦ರವರೆಗೂ ಹಳ್ಳಿಯ ಜನರು ಮಧ್ಯಾಹ್ನದ ವೇಳೆಯಲ್ಲಿ ಹೊತ್ತು ಕಳೆಯಲು ಈ ಆಟವನ್ನು ಆಡುತ್ತಿದ್ದರೆಂದು ಆರ್. ವಿ. ಲೇಡನ್ ಅವರು ತಿಳಿಸುತ್ತಾರೆ.[೩೦]

ಗಂಜೀಫಾ ಚಿತ್ರಕಲೆ ಮತ್ತು ಆಟದ ಕುರಿತು ಎಲ್ಲಿಯವರೆಗೆ ವಿಶೇಷ ಕ್ರಮ ಕೈಗೊಳ್ಳುವರೋ ಅಲ್ಲಿಯವರೆಗೆ ಅದು ಬದುಕಿರುತ್ತದೆ. ಈ ಹಿಂದೆ ಯಾವ ಕೆಲವೇ ಕೆಲವು ಜನರು ಈ ಆಟವನ್ನು ಬಲ್ಲವರಾಗಿದ್ದರೋ ಅವರು ಮತ್ತು ಕಲಾವಿದರು ಇಂದು ಕಳೆದುಹೋಗಿದ್ದಾರೆ. ಗಂಜೀಫಾ ಆಟವು ಇತಿಹಾಸದ ಪುಟಗಳಲ್ಲಿ ಉಳಿದ ಆಟವಾಯಿತು. ಜೀವಂತ ಆಟವಿಂದು ಬಂಧಿತವಾಯಿತು. ಆದರೆ ನಾವು ಅದರ ಕಳೆದ ವೈಭವದ ದಿವಸಗಳನ್ನು ಕಡೆಗಾಣಿಸುವಂತಿಲ್ಲ.

❖❖❖

---

೨೯. ಶ್ರೀ ತತ್ವನಿಧಿ, ಅಧ್ಯಾಯ–೯ ಕೌತುಕನಿಧಿಯಲ್ಲಿ ವಿವರಣೆ ನೋಡಿ, ಪುಟ–೮೮೧

೩೦. R and N. Y. Leyden., The Playing Cards of India, page- 2



ಅಧ್ಯಾಯ – ಐದು
ಗಂಜೀಫಾ ಚಿತ್ರಕಲೆಯ ವಸ್ತು ವಿಷಯಗಳು

ದಶವತಾರ ಚಿತ್ರಗಳು

ತ್ರಿಮೂರ್ತಿ ದೇವರುಗಳಲ್ಲಿ ಒಬ್ಬನಾದ ವಿಷ್ಣುದೇವನ ಹತ್ತು ಅವತಾರಗಳನ್ನು ಗಂಜೀಫಾ ಕಲಾವಿದರು ಆಟದ ರೂಪದಲ್ಲಿ ಬಳಸಿಕೊಂಡು ಚಿತ್ರಿಸಿರುವುದು ಕಂಡು ಬರುತ್ತದ್ಯೆ ಇಲ್ಲಿ ಕಲಾವಿದರು ಈ ದೇವತೆಯನ್ನು ಆಟದ ಸಂಕೇತವಾಗಿ ಬಳಸಿಕೊಂಡಿರುವುದು ಇಲ್ಲಿ ವಿಶೇಷವೆನಿಸುತ್ತದ್ಯೆ ಇಲ್ಲಿ ವಿಷುವಿನ ಸಾಂಕೇತಿಕ ಬಾಹ್ಯರೂಪ ಲಕ್ಷಣಗಳನ್ನು ಬಿಂಬಿಸಲಾಗಿದ್ದು, ಪ್ರತಿಯೊಂದು ಅವತಾರಗಳನ್ನು ಈ ಹಿನ್ನೆಲೆಯಗಿಯೇ ಚಿತ್ರಣ ಮಾಡಲಾಗಿದ್ದು ಕಂಡು ಬರುತ್ತದೆ. ವಿಶೇಷವೆಂದರೆ ಹತ್ತು ಅವತಾರಗಳಲ್ಲಿ ರಾಶಿ ಕುಂಡಲಗಳನ್ನು ಬಳಸಿಕೊಂಡು ಚಿತ್ರಿಸಲಾಗಿದೆ.

ವಿಷ್ಣುವಿನ ದಶಾವತಾರಗಳಲ್ಲಿ ಮೊದಲನೆಯ ಅವತಾರವೇ ಮತ್ಸ್ಯ ಅವತಾರ. ಪುರಾಣ ಕಥೆಗಳಲ್ಲಿ ಮತ್ಸ್ಯ ಅವತಾರದ ಪರಿಕಲ್ಪನೆಯನ್ನು ಕಲ್ಪಿಸಿದ್ದು ಬಹುತೇಕ ತಿಳಿದಿರುವ ಸಂಗತಿ. ಇಲ್ಲಿ ಗಂಜೀಫಾ ಕಲಾವಿದರು ಅವತಾರದ ಪರಿಕಲ್ಪನೆಯನ್ನು ತಿಳಿಸುವ ಗೋಜಿಗೆ ಹೋಗಿಲ್ಲ. ಗಂಜೀಫಾ ಆಟಕ್ಕೆ ಸಹಾಯಕವಾಗಲು ಪ್ರಧಾನವಾಗಿ ವಿಷ್ಣುವಿನ ಮತ್ಸ್ಯ ರೂಪವನ್ನೂ, ಹನ್ನೆರಡು ರಾಶಿಗಳ ಮೂಲಕ ಸಂಯೋಜಿಸಿ ಆಟದ ಎಲೆಗಳನ್ನಾಗಿ ಮಾಡಲಾಗಿದೆ.

ಇಲ್ಲಿ ಕಂಡು ಬರುವ ದಶಾವತಾರಗಳ ಚಿತ್ರಗಳಲ್ಲಿ ೪ ಇಂಚು ವೃತ್ತಾಕಾರದ ೧೨ ಗಂಜೀಫಾ ಎಲೆಗಳಲ್ಲಿ ಪ್ರಧಾನವಾಗಿ ವಿಷ್ಣುವಿನ ಮೊದಲ ಮತ್ಸ್ಯ ಅವತಾರ ರೂಪದ ಕೆಳಗೆ ರಾಶಿಗಳ ಸಂಕೇತ ಚಿತ್ರಗಳನ್ನು ಬರೆದಿದ್ದಾರೆ. ಮೀನು ರಾಶಿಯ ಎಲೆಯಲ್ಲಿ ಮತ್ಸ್ಯ ರೂಪವನ್ನು ಚಿತ್ರಿಸಿದ್ದು, ಇಲ್ಲಿ ದೇವತೆಯು ಮುಕುಟಧಾರಿಯಾಗಿದ್ದು, ಚತುರ್ಭುಜಗಳಲ್ಲಿ ಎರಡು ಕೈಗಳಲ್ಲಿ ಶಂಖ ಚಕ್ರಗಳನ್ನು ಹಿಡಿದಿದ್ದು ಇನ್ನೆರಡು ಕೈಗಳನ್ನು ಅಭಯ ಹಸ್ತವಾಗಿ ಬಿಂಬಿತಗೊಂಡಿದ್ದಾನೆ. ಕೊರಳಲ್ಲಿ ಸ್ವರ್ಣಾಭರಣ, ಕರ್ಣಕುಂಡಲ,

ಗಂಜೀಫಾ ಚಿತ್ರಗಳ ವರ್ಗೀಕರಣ

ದಶಾವತಾರ ಚಿತ್ರಗಳು

೦೧. ಮತ್ಸ್ಯಾವತಾರ
೦೨. ಕೂರ್ಮ ಅವತಾರ
೦೩. ವರಾಹ ಅವತಾರ
೦೪. ನರಸಿಂಹ ಅವತಾರ
೦೫. ವಾಮನ ಅವತಾರ
೦೬. ಪರಶುರಾಮ ಅವತಾರ
೦೭. ರಾಮ ಅವತಾರ
೦೮. ಕೃಷ್ಣ ಅವತಾರ
೦೯. ಬಲರಾಮ ಅವತಾರ
೧೦. ಕಲ್ಕಿ ಅವತಾರ

ನವಗ್ರಹಗಳು

೦೧. ಸೂರ್ಯಗ್ರಹ
೦೨. ಚಂದ್ರ ಗ್ರಹ
೦೩. ಮಂಗಳ ಗ್ರಹ (ಕುಜ)
೦೪. ಬುಧಗ್ರಹ
೦೫. ಗುರುಗ್ರಹ
೦೬. ಶುಕ್ರಗ್ರಹ
೦೭. ಶನಿಗ್ರಹ
೦೮. ರಾಹು
೦೯. ಕೇತು

ಧಾರ್ಮಿಕ ಚಿತ್ರಗಳು

೦೧. ಚಾಮುಂಡಿ
ಶಿವ ಸೂಟ್
ಪರ್ವತರಾಜ ಸೂಟ್
ಇಂದ್ರ ಸೂಟ್
ಕೃಷ್ಣರಾಜ ಸೂಟ್
೦೨. ಚಾಮುಂಡೇಶ್ವರಿ ಸೂಟ್
ಚಾಮುಂಡೇಶ್ವರಿ
ಸಮುದ್ರರಾಜ ಸೂಟ್
ಕೃಷ್ಣರಾಜ ಛದ್
ಬ್ರಹ್ಮ ಸೂಟ್
ಶಿವ ಸೂಟ್
ಇಂದ್ರ ಸೂಟ್
ಮೋಹಿನಿ ಎಲೆಗಳು
ಸೂರ್ಯಗ್ರಹ
ವೀರಭದ್ರ ಸೂಟ್
ನಾಗಾ ಸೂಟ್
ಷಣ್ಮುಗ ಸೂಟ್
೦೩. ನವೀನ್ ರಾಮ್ ಛದ್
೦೪. ಕಲ್ಯಾಣ ಗಂಜೀಫಾ
೦೫. ದೇವಿ ದಶಾವತಾರ

ಧಾರ್ಮಿಕೇತರ ಚಿತ್ರಗಳು

ರಾಶಿಗಳು
ಪ್ರಾಣಿ, ಪಕ್ಷಿ
ಕತ್ತಿ, ಕೊಡಲಿ
ಬಿಲ್ಲು, ಬಾನ
ಧ್ವಜ,

ಕಂಕಣಾಭರಣ, ಭುಜಕೀರ್ತಿಯನ್ನು ಹೊಂದಿದ್ದು, ಅಲಂಕಾರಿಕ ಕೆಂಪುವರ್ಣದ ಉತ್ತರೀಯವನ್ನು ಧರಿಸಿದ್ದಾನೆ. ದೇಹದ ಅರ್ಧಭಾಗವನ್ನು ಮೀನಿನ ಆಕಾರವಾಗಿ ನೈಜ ರೂಪದಲ್ಲಿ ಚಿತ್ರಿಸಲಾಗಿದೆ. ದೇವತೆಯ ಹಿಂದೆ ಅಲಂಕಾರಿಕ ದಿಂಬನ್ನು ಚಿತ್ರಿಸಿ, ಚಿತ್ರಪಟ್ಟಕಗಳನ್ನು ಸಂಯೋಜಿಸಲಾಗಿದೆ. ದೇವತೆಯ ದೈಹಿಕ ಲಕ್ಷಣವು ದುಂಡುತನದಿಂದ ಕೂಡಿದ್ದು, ಉತ್ತಮ ಭಾವನೆಯು ಅಭಿವ್ಯಕ್ತಗೊಂಡಿದೆ. ಈ ಎರಡು ಮೀನುಗಳು ಅತ್ಯಂತ ಚಲನೆಯಿಂದ ಬಿಂಬಿತಗೊಂಡಿವೆ. ವೃತ್ತಾಕಾರದ ಎಲೆಗಳ ಅಂಚು ಹೂವು ಬಳ್ಳಿಗಳ ನಕ್ಷಾವಿನ್ಯಾಸದಿಂದ ಕೂಡಿದ್ದು, ಕೆಂಪು, ಬಿಳಿ, ಹಳದಿ ಹಾಗೂ ಕಪ್ಪು, ಬಿಳೀವರ್ಣಗಳಿಂದ ಸಂಯೋಜನೆಗೊಂಡಿದೆ. ಚಿತ್ರದಲ್ಲಿ ಸೂಕ್ಷ್ಮತರದ ರೇಖೆ, ಚಿಕ್ಕ ಚಿಕ್ಕ ಚುಕ್ಕಿಗಳು ಹಾಗೂ ಪಟ್ಟಿಕೆಗಳನ್ನು ಸಂಯೋಜಿಸಲಾಗಿದೆ. ಇದೇ ರೀತಿ ಸಿಂಹರಾಶಿಯ ಎಲೆಯಲ್ಲಿ ದೇವತೆಯನ್ನು ಹಾಗೂ ಹಿನ್ನೆಲೆಯನ್ನು ಯಥಾವತ್ತಾಗಿ ಚಿತ್ರಿಸಲಾಗಿದ್ದು, ದೇವತೆಯ ಕೆಳಗೆ ಸಿಂಹದ ಚಿತ್ರವನ್ನು ಅಲಂಕಾರಿಕವಾಗಿ ಶ್ವೇತವರ್ಣದಿಂದ ಸಂಯೋಜಿಸಲಾಗಿದೆ. ಸಿಂಹವು ಸ್ಪಷ್ಟವಾಗಿ ಕಾಣಲು ಹಿನ್ನೆಲೆಗೆ ಕಪ್ಪು ಬಣ್ಣವನ್ನು ಬಳಿಯಲಾಗಿದೆ. ಇಲ್ಲಿ ಅಲಂಕಾರಿಕ ರೇಖಾವಿನ್ಯಾಸವು ರೂಪುಗೊಂಡಿದ್ದು ಇತರ ಭಾಗವು ಹಿಂದಿನ ಎಲೆಯಂತೆ ಚಿತ್ರಿಸಲಾಗಿದೆ. ಅದರಂತೆ ಕುಂಭ ರಾಶಿಯಲ್ಲಿ ಸ್ವರ್ಣವರ್ಣದ ಕುಂಭ, ಮಕರ ರಾಶಿಯ ಎಲೆಯಲ್ಲಿ ಹಸಿರು ವರ್ಣದ ಮಕರ (ಮೊಸಳೆ)ವನ್ನು, ತುಲಾರಾಶಿಯ ಎಲೆಯಲ್ಲಿ ತಕ್ಕಡಿಯ ಚಿತ್ರವನ್ನು ತಿಳಿ ನೀಲಿಬಣ್ಣದ ಹಿನ್ನೆಲೆಯಲ್ಲಿ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ದೇವತೆಯ ಮತ್ಸ್ಯದ ಭಾಗವನ್ನು ತಿಳಿಗೆಂಪು ಬಣ್ಣದಿಂದ ಸಂಯೋಜಿಸಲಾಗಿದೆ. ಉತ್ತರಾರ್ಧಿಯಲ್ಲಿ ಕಪ್ಪುಬಣ್ಣವು ಪ್ರಧಾನವಾಗಿದೆ. ಇಲ್ಲಿ ಹನ್ನೆರಡು ರಾಶಿಗಳಲ್ಲಿ ಮೇಲಿನ ಐದು ರಾಶಿಗಳ ಎಲೆಗಳು ಲಭ್ಯವಾಗಿದ್ದು, ಆ ಎಲೆಗಳ ಚಿತ್ರಗಳನ್ನು ಮಾತ್ರ ಇಲ್ಲಿ ವಿವೇಚಿಸಲಾಗಿದೆ. ಈ ಐದು ರಾಶಿಯ ಎಲೆಗಳು ಪ್ರಸ್ತುತ ಧರ್ಮಸ್ಥಳದ ಮಂಜೂಷಾವಸ್ತು ಸಂಗ್ರಹಾಲಯದಲ್ಲಿ ಲಭ್ಯವಿವೆ. ಈ ಐದು ಎಲೆಯ ಚಿತ್ರಗಳು ಕೆಂಪು, ಕಪ್ಪು, ಬಿಳಿ, ಹಳದಿ, ತಿಳಿನೀಲಿ, ಹಸಿರು ಬಣ್ಣಗಳ ಮಿಶ್ರಣದಿಂದ ಸಂಯೋಜಿತಗೊಂಡಿವೆ. ರೇಖಾವಿನ್ಯಾಸ ಅಲಂಕಾರಿಕವಾಗಿ ಚಿತ್ರಗೊಂಡಿದೆ. ಆ ಕೃತಿಗಳ ಸಂಯೋಜನೆ ಹಾಗೂ ಭಾವನಾನಿರೂಪಣೆಯು ಉತ್ತಮವಾಗಿ ಅಭಿವ್ಯಕ್ತಗೊಂಡಿದ್ದು, ಚಿತ್ರಗಳು ಆಟದ ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ರಚನೆಗೊಂಡಿವೆ.

ದಶಾವತಾರ ಚಿತ್ರಗಳಲ್ಲಿ ಎರಡು ರೀತಿಯ ಸಾಂಕೇತಿಕ ಎಲೆಗಳನ್ನು ಕಾಣಬಹುದು. ಒಂದು, ರಾಶಿಗಳನ್ನು ಬಳಸಿಕೊಂಡು ಚಿತ್ರಿಸಿದ ಎಲೆಗಳು ಕಂಡು ಬಂದರೆ ಇನ್ನೊಂದು ಬಗೆಯಲ್ಲಿ ಸಾಂಕೇತಿಕವಾಗಿ ಪ್ರಾಣಿಗಳನ್ನು, ಆಯುಧಗಳನ್ನು ಮತ್ತು ಪಕ್ಷಿಗಳನ್ನು ಬಳಸಿಕೊಂಡು ಚಿತ್ರಿಸಿದ ಎಲೆಗಳು ಕಂಡು ಬರುತ್ತವೆ. ಎರಡನೆಯ ಬಗೆಯ ಎಲೆಯಲ್ಲಿ ಪ್ರಧಾನ ದೇವತೆಯನ್ನು ಸ್ವರ್ಣಪೀಠದ ಮೇಲೆ ಹಾಗೂ ಅಶ್ವಾರೂಢನಾಗಿ ಕುಳಿತ ಭಂಗಿಯಲ್ಲಿ ಚಿತ್ರಿಸಲಾಗಿದೆ. ಇನ್ನುಳಿದ ಹತ್ತು ಎಲೆಗಳಲ್ಲಿ ಒಂದರಿಂದ ಹತ್ತರಂತೆ ಪ್ರಾಣಿ, ಪಕ್ಷಿ ಹಾಗೂ ಆಯುಧಗಳನ್ನು ಸಂಯೋಜಿಸಲಾಗಿದೆ. ಅವನ್ನು ಇಲ್ಲಿ ವಿವೇಚಿಸಿದೆ.

ದಶಾವತಾರ

ಕರ್ನಾಟಕ ಗಂಜೀಫಾ ಚಿತ್ರಗಳಲ್ಲಿ ದಶಾವತಾರವು ಪ್ರಮುಖವಾದುದು. ದಶಾವತಾರದ ಚಿತ್ರಗಳನ್ನು ಕರ್ನಾಟಕೇತರ ಪ್ರದೇಶಗಳಿಗೆ ಹೋಲಿಕೆ ಮಾಡಿದಾಗ ಮೈಸೂರಿನ ದಶಾವತಾರ ಚಿತ್ರಗಳು ಸ್ಪಷ್ಟವಾಗಿ ಚಿತ್ರಿಸಲ್ಪಟ್ಟಿವೆ. ಕರ್ನಾಟಕೇತರ ಪ್ರದೇಶಗಳ ಗಂಜೀಫಾ ಚಿತ್ರಗಳಲ್ಲಿ ಸ್ಪಷ್ಟತೆ ಕಾಣಸಿಗುವುದಿಲ್ಲ. ಮೈಸೂರಿನ ಮಹಾರಾಜರು ವಿಶೇಷವಾಗಿ ದಶಾವತಾರ ಕಟ್ಟುಗಳನ್ನು ರಚನೆ ಮಾಡಿ ಆಟವನ್ನು ಹುಟ್ಟು ಹಾಕಿದರು.

೧. ದಶಾವತಾರ

ದಶಾವತಾರ ಚಿತ್ರಗಳಲ್ಲಿ ವಿಷ್ಣುವಿನ ಮತ್ಸ್ಯಾವತಾರ, ಕೂರ್ಮಾವತಾರ, ವರಾಹಾವತಾರ, ನರಸಿಂಹಾವತಾರ, ವಾಮನಾವತಾರ, ಪರಶುರಾಮವತಾರ, ರಾಮಾವತಾರ, ಕೃಷ್ಣಾವತಾರ, ಬುದ್ಧಾವತಾರ ಮತ್ತು ಕಲ್ಕಿ ಅವತಾರದ ಚಿತ್ರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಶ್ರೀ ಮನ್ನಾರಾಯಣನು ಭೂಮಿಯಲ್ಲಿ ಹತ್ತು ರೀತಿಯಿಂದ ಜನ್ಮ ಪಡೆದು ಪ್ರತಿಯುಗದಲ್ಲಿಯೂ ಒಂದೊಂದು ವಿಧದಲ್ಲಿ ಅವತಾರ ಹೊಂದಿದವನು. ಯಾವುದೇ ಅವತಾರವನ್ನು ಹೊಂದಿ ಬಂದರೂ ಕರುಣಾಳುವಾದ ಶ್ರೀ ಹರಿಯು ಭಕ್ತರನ್ನು ಉದ್ಧಾರ ಮಾಡುವ ಅವಕಾಶ ಹೊಂದಿದವನಾಗಿದ್ದು, ಧರ್ಮರಾಜನು ಸಹಜ ಕುತೂಹಲದಿಂದ ದಶಾವತಾರದ ಮಹಿಮೆ ಕುರಿತು ಮಾರ್ಕಂಡೇಯ ಮಹರ್ಷಿಗಳನ್ನು ಕೇಳಿದಾಗ ಅವರು ವಿಸ್ತಾರವಾಗಿ ಹತ್ತು ಅವತಾರಗಳ ಕುರಿತು ವಿವರಣೆ ನೀಡಿದರು. ಈ ರೀತಿಯಲ್ಲಿ ತಮೋಗಣ, ಅದರ ಪರಿಣಾಮವನ್ನು ನಿಯಂತ್ರಿಸುವುದು, ಸತ್ವಗುಣವನ್ನು ಉಳಿಸುವುದು ಶ್ರೀಹರಿಯ ಅವತಾರಗಳಲ್ಲಿನ ಮುಖ್ಯ ಕಾರ್ಯವೆನಿಸಿದೆ.

ಮತ್ಸ್ಯ ಕೂರ್ಮವರಾಹಶ್ಚ ನಾರಸಿಂಹಶ್ಚ ವಾಮನಃ ।
ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧ ಕಲ್ಕಿ ನಮೋ ನಮಃ ॥

ಶ್ರೀ ಹರಿಯು ಲೋಕಕಲ್ಯಾಣಕ್ಕಾಗಿ ಹತ್ತು ಅವತಾರಗಳನ್ನು ತಾಳಿದ ವಿವರಣೆಯನ್ನು ಈ ಶ್ಲೋಕವು ತಿಳಿಸುತ್ತದೆ. ಮತ್ಸ್ಯ, ವರಾಹ, ನರಸಿಂಹ, ರಾಮ, ಪರಶುರಾಮ, ವಾಮನ, ಕೃಷ್ಣ, ಬುದ್ಧ ಮತ್ತು ಕಲ್ಕಿ ಇವು ಶ್ರೀಮನ್ನಾರಾಯಣನ ಹತ್ತು ಅವತಾರಗಳಾಗಿವೆ. ಪರಬ್ರಹ್ಮಸ್ವರೂಪನಾದ ಜಗದೀಶ್ವರನು ತನ್ನ ಇಚ್ಛೆಯಂತೆ ಸತ್ವ, ರಜ ಮತ್ತು ಮೂರು ಗುಣಗಳಿಂದ ಸುಂದರವಾದ ಈ ಪ್ರಪಂಚವನ್ನು ಸೃಷ್ಟಿ ಮಾಡಿದನು. ಸತ್ವಗುಣಕ್ಕೆ ಅಭಿಮಾನಿ ದೇವತೆ ವಿಷ್ಣುವು ಲೋಕ ರಕ್ಷಣೆಯ ಕಾರ್ಯವನ್ನು ನೋಡಿಕೊಂಡನು. ಬ್ರಹ್ಮನು ರಜೋಗುಣದ ದೇವತೆಯಾಗಿ ಸೃಷ್ಟಿಯ ಕಾರ್ಯ ಕೈಗೊಂಡನು. ಮಹೇಶ್ವರನು ತಮೋಗುಣದ ದೇವತೆಯಾಗಿ ನಾಶದ ಕಾರ್ಯವನ್ನು ನೋಡಿಕೊಂಡನು. ಹೀಗೆ ಒಬ್ಬನೆ ಪರಮಾತ್ಮನ ತ್ರಿಮೂರ್ತಿರೂಪವನ್ನು ನಾವು ನೋಡುತ್ತೇವೆ.

ಜಗತ್ತಿನ ಕರ್ತೃವಾದ ಪರಮಾತ್ಮನನ್ನು ಜನರು ನಾನಾ ರೀತಿಯಿಂದ ಆರಾಧಿಸಿದ್ದಾರೆ. ದೇವನೊಬ್ಬ ನಾಮ ಹಲವು "ಏಕಂ ಹಿ ಸತ್ ವಿಪ್ರಾ ಬಹುಧಾ ವದಂತಿ" ಎಂಬಂತೆ "ಏಕೋ ದೇವಃ ಸರ್ವಭೂತೇಷು ಗೂಢಃ, ಸರ್ವವ್ಯಾಪೀ ಸರ್ವಭೂತಾಂತರಾತ್ಮಾ" ಎಂದು ಪರಮಾತ್ಮನ ಶಕ್ತಿಯ ಕುರಿತು ವಿವರಿಸಲಾಗಿದೆ. ಹೀಗೆ ಒಂದೇ ಶಕ್ತಿಯನ್ನು ಹಲವು ಹೆಸರಿನಿಂದ ಪೂಜೆ ಮಾಡಿ ಗೌರವಿಸಿದ ಹರಿ, ವಿಷ್ಣು, ನಾರಾಯಣ, ಶಿವ, ಶಂಕರ, ಗಣಪತಿ, ಸ್ಕಂದ, ಸೂರ್ಯ, ಆದಿಶಕ್ತಿ ಎಂದು ನಾನಾ ರೂಪದಿಂದ ಸಕಾರವಾಗಿ ಉಪಾಸನೆ ಮಾಡಿದ ಜನರು ಮೂಲದಲ್ಲಿ ಒಬ್ಬನೇ ದೇವನೆಂಬುದನ್ನು ಸಹ ಒಪ್ಪಿಕೊಂಡಿದ್ದಾರೆ. ಪೂಜಿಸುವ ಹೆಸರು, ದಾರಿ, ಲೀಲೆ ಬೇರೆ ಬೇರೆಯಾದರೂ ಎಲ್ಲರ ಉದ್ದೇಶವು ಸಚ್ಚಿದಾನಂದ ರೂಪನಾದ ಪರಮಾತ್ಮನ ಆರಾಧನೆಯೇ ಆಗಿದೆ. ಈ ವಿಷಯವನ್ನು ವೇದ, ಉಪನಿಷತ್ತು, ಸ್ಮೃತಿಗಳು, ಇತಿಹಾಸ ಶಾಸ್ತ್ರಗಳು ಸಮರ್ಥಿಸುತ್ತವೆ.

ಶ್ರೀ ಹರಿಯ ಹತ್ತು ಅವತಾರಗಳು, ಪರಮಶಿವನ ಅನೇಕ ಅವತಾರಗಳು ಇತಿಹಾಸ, ಪುರಾಣಗಳಲ್ಲಿ ಕಂಡುಬರುತ್ತವೆ. ಆದಿಶಕ್ತಿಯ ನಾನಾ ರೂಪಗಳ ಆರಾಧನೆಯೂ ಸಹ ಕಂಡುಬರುವುದು. ಈ

ಅವತಾರಗಳ ಉದ್ದೇಶವು ಜಗತ್ತಿನ ಹಿತವನ್ನೇ ರಕ್ಷಿಸುವುದು, ದುಷ್ಟರ ನಾಶ ಮತ್ತು ಶಿಷ್ಟರನ್ನು ರಕ್ಷಿಸುವುದಾಗಿದೆ. ಭಗವದ್ಗೀತೆಯಲ್ಲಿ

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಎಂದು ಶ್ರೀ ಕೃಷ್ಣನು ಅರ್ಜುನನಿಗೆ ಅವತಾರದ ಉದ್ದೇಶದ ಬಗ್ಗೆ ತಿಳಿಸಿದ್ದಾನೆ. ಪರಮಾತ್ಮನು ಅವತಾರದ ಮೂಲಕವಾಗಿ ದುಷ್ಟರಿಗೆ ಶಿಕ್ಷೆ ಕೊಟ್ಟು ಭಕ್ತರನ್ನು ಉದ್ಧರಿಸಿದ್ದಾನೆ. ಪುರಾಣಗಳಲ್ಲಿನ ವಿವರಣೆಯಂತೆ ದಶಾವತಾರಗಳಿಗೆ ಕಾರಣವೂ ಒಂದು ಘಟನೆಯನ್ನಾಧರಿಸಿದೆ. ಜಗದೀಶ್ವರನಾದ ಪ್ರಜಾವತ್ಸಲ ಕರುಣಾಳು ಪರಮಾತ್ಮನ ಇಚ್ಛೆಯಂತೆ ಈ ಸೃಷ್ಟಿಯ ನಿರ್ಮಾಣವಾಯಿತು. ಮೊದಲು ಆಕಾಶ, ವಾಯು, ಅಗ್ನಿ, ನೀರು, ಭೂಮಿ ಹೀಗೆ ಸೃಷ್ಟಿಯಾಯಿತು. ಭೂಮಿ ಮತ್ತು ನೀರಿನಲ್ಲಿ ಮೊದಲು ವನಸ್ಪತಿಗಳು ಹುಟ್ಟಿ ನಂತರದಲ್ಲಿ ಕ್ರಿಮಿ-ಕೀಟಗಳಿಂದಾರಂಭಿಸಿ ಮಾನವನವರೆಗೆ ಎಲ್ಲ ವಿವಿಧ ರೀತಿಯ ಸಸ್ಯ, ಪ್ರಾಣಿಗಳ ನಿರ್ಮಾಣದ ಬಗ್ಗೆ ತಿಳಿದು ಬರುತ್ತದೆ. ಅನಂತರ ಕೋಟಿ ಜೀವರಾಶಿಗಳು ಈ ಜಗತ್ತಿನಲ್ಲಿವೆ. ಭೂಮಿ, ನೀರು ಮತ್ತು ಗಾಳಿ ಇರುವ ಮೂರು ಲೋಕವನ್ನು "ತ್ರಿಲೋಕ"ವೆಂದು ಕರೆದಿರುವರು. ಹೀಗೆ ಮೂರು ಲೋಕದಲ್ಲಿ ವ್ಯಾಪಕವಾಗಿ ಪರಮಾತ್ಮನು ವಾಸ ಮಾಡಿರುವನೆಂದು ಉಪನಿಷತ್ತುಗಳಲ್ಲಿ ವರ್ಣಿಸಿದ್ದಾರೆ. "ಈಶಾವಾಸ್ಯವಿಂದಂ ಸರ್ವಂ" ಎಂದು ಸಹ ವರ್ಣಿಸಿರುವರು.

ಈ ರೀತಿಯಲ್ಲಿ ಪರಮಾತ್ಮನು ಬೇರೆ ಬೇರೆ ರೂಪದಲ್ಲಿ ಆವಿರ್ಭವಿಸಿ ಲೋಕಕ್ಕೆ ಹಿತವನ್ನು ಉಂಟು ಮಾಡಿರುವುದು ಭಾಗವತ, ಸ್ಕಂದ ಪುರಾಣ ಹಾಗೂ ಇತರ ಪುರಾಣಗಳಲ್ಲಿ ವಿವರಿಸಲ್ಪಟ್ಟಿದೆ. ದಶಾವತಾರಗಳ ಉದ್ದೇಶವು ಒಂದೇ ಎಂದು ತಿಳಿದು ಬರುವುದು. ಇನ್ನು ದಶಾವತಾರದ ಹತ್ತು ಅವತಾರಗಳಲ್ಲಿ ಪ್ರತಿಯೊಂದು ಅವತಾರದ ಕುರಿತು ಚರ್ಚಿಸಲಾಗಿದೆ.

ವಿಷ್ಣು

"ಧರ್ಮವು ನಾಲ್ಕು ಪ್ರಾಥಮಿಕ ವಿಷಯಗಳನ್ನು ಒಳಗೊಂಡಿದೆ. ಅವುಗಳೆಂದರೆ ಪುಣ್ಯಕರ್ಮಗಳಿಂದ ಕೂಡಿದ ಧಾರ್ಮಿಕ ಚಟುವಟಿಕೆಗಳು, ಆರ್ಥಿಕ ಅಭಿವೃದ್ಧಿ, ಇಂದ್ರಿಯಗಳ ತೃಪ್ತಿ ಹಾಗೂ ಅಂತಿಮವಾಗಿ ಐಹಿಕ ಪ್ರಪಂಚದ ಬಂಧನಗಳಿಂದ ಮುಕ್ತಿ. ಆ ಧಾರ್ಮಿಕ ಜೀವನ ಒಂದು ಬರ್ಬರ ಸ್ಥಿತಿ. ಅಂತೆಯೇ ಧರ್ಮದೊಂದಿಗೆ ಮಾನವನ ಜೀವನವು ಪ್ರಾರಂಭವಾಗುತ್ತದೆ. ಆಹಾರ, ನಿದ್ರೆ, ಭಯ ಮತ್ತು ಮೈಥುನ ಇವು ಮೃಗೀಯ ಜೀವನದ ನಾಲ್ಕು ತತ್ವಗಳು. ಇವು ಮಾನವರಿಗೂ ಮತ್ತು ಮೃಗಗಳಿಗೂ ಸಮಾನವಾದವು. ಆದರೆ ಕ್ರಿಯಾ ವಿಶೇಷ ಧರ್ಮರಹಿತವಾಗಿರುವ ಮಾನವ ಪ್ರಾಣಿ ಜೀವನಕ್ಕಿಂತ ಉತ್ತಮವಾದುದಲ್ಲ. ಆದ್ದರಿಂದಲೇ ಮಾನವನ, ಸಮಾಜ ಸಮುದಾಯಗಳಲ್ಲಿ ಆತ್ಮಸಾಕ್ಷಾತ್ಕಾರದ ಧ್ಯೇಯವುಳ್ಳ ಹಾಗೂ ಭಗವಂತನೊಂದಿಗೆ ಮನುಷ್ಯನ ಶಾಶ್ವತ ಸಂಬಂಧವನ್ನು ಪ್ರಸ್ತಾಪಿಸುವ ಧರ್ಮವು ಯಾವುದಾದರೊಂದು ರೂಪದಲ್ಲಿ ಇದ್ದೇ ಇರುತ್ತದೆ.[೧]

ಸೃಷ್ಟಿಯ ಆರಂಭದಲ್ಲಿ ಭಗವಂತನು ಮೊದಲು ತನ್ನನ್ನು ವಿಶ್ವರೂಪದ ಪುರುಷಾವತಾರವಾಗಿ ವಿಸ್ತರಿಸಿಕೊಂಡನು. ಅಲ್ಲದೇ ಹೀಗೆ ಭೌತಿಕ ಸೃಷ್ಟಿಗೆ ಅಗತ್ಯವಾದ ಎಲ್ಲ ದ್ರವ್ಯಗಳನ್ನೂ ವ್ಯಕ್ತಪಡಿಸಿದನು. ಹೀಗೆ ಭೌತಿಕ ಕ್ರಿಯೆಯ ಹದಿನಾರು ಮೂಲಭೂತ ದ್ರವ್ಯಗಳು ಮೊದಲು ಸೃಷ್ಟಿಯಾದವು. ಭೌತಿಕ

೦೧. ಶ್ರೀ. ಶ್ರೀಮದ್ ಎ.ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು (ಸಂ) : ಶ್ರೀ ಮದ್ಭಾಗವತಮ್ : ಅಧ್ಯಾಯ-೧, ಶ್ಲೋಕ ೨

ಜಗತ್ತಿನ ಸೃಷ್ಟಿಯು, ಈ ಕ್ರಿಯೆಯ ಉದ್ದೇಶವಾಗಿತ್ತು. ಒಟ್ಟಾರೆ ಭೌತಿಕ ಸೃಷಿಟಯಲ್ಲಿ ಮೂರು ಪುರುಷಾಭಿವ್ಯಕ್ತಿಗಳಿವೆ. ಅವು ಕ್ರಮವಾಗಿ ಕಾರಣೋದಕಶಾಯೀ ವಿಷ್ಣುಮೂರ್ತಿಯ ರೋಮಕೂಪಗಳಿಂದ ಉದ್ಭೂತವಾಗಿವೆ ಹಾಗೆ ಉದ್ಭೂತವಾದ ಪ್ರತಿಯೊಂದು ಬ್ರಹ್ಮಾಂಡದಲ್ಲೂ ಭಗವಂತನೂ ಗರ್ಭೋದಶಾಯೀ ವಿಷ್ಣುವಾಗಿ ಅಂತರ್ಗತನಾಗಿರುತ್ತಾನೆ".[೨]

ಕಾರಣೋದಕಶಾಯೀ ವಿಷ್ಣುವೇ ಮೊದಲನೆಯ ಪುರುಷ, ಅವನ ರೋಮ ರಂಧ್ರಗಳಿಂದ ಅಸಂಖ್ಯಾತ ಬ್ರಹ್ಮಾಂಡಗಳು ಹೊರಹೊಮ್ಮುತ್ತವೆ. ಹಾಗೆ ಹೊಮ್ಮಿದ ಪ್ರತಿಯೊಂದು ಬ್ರಹ್ಮಾಂಡದಲ್ಲೂ ಪುರುಷನು ಗರ್ಭೋದಕಶಾಯಿ ವಿಷ್ಣುವಾಗಿ ಪ್ರವೇಶಿಸುತ್ತಾನೆ. ಬ್ರಹ್ಮಾಂಡದ ಅರ್ಧಭಾಗದಲ್ಲಿ ಅವನು ಪವಡಿಸಿದ್ದಾನೆ. ಆ ಭಾಗವೆಲ್ಲಾ ಅವನ ದೇಹದ ಜಲದಿಂದ ಪೂರಿತವಾಗಿದೆ. ಗರ್ಭೋದಕಶಾಯೀ ವಿಷ್ಣುವಿನ ನಾಭಿಯಿಂದ ಕಮಲಪುಷ್ಪದ ನಾಳವೊಂದು ಹೊರ ಹೊಮ್ಮಿದೆ. ಈ ಕಮಲಪುಷ್ಪವು ಸಕಲಜೀವಿಗಳ ತಂದೆಯಾದ ಬ್ರಹ್ಮನ ಜನ್ಮಸ್ಥಾನ, ಬ್ರಹ್ಮನಾದರೋ ಬ್ರಹ್ಮಾಂಡದ ಸಂಪರ್ಕ ವ್ಯವಸ್ಥೆ ಮತ್ತು ನಿರ್ಮಾಣದಲ್ಲಿ ನಿರತರಾದ ಯಂತ್ರ ಶಿಲ್ಪಿಗಳಾಗಿರುವ ದೇವತೆಗಳ ಒಡೆಯ. ಕಮಲನಾಳದೊಳಗೆ ಹದಿನಾಲ್ಕು ವ್ಯೂಹಗಳು ಅಡಕವಾಗಿವೆ. ಈ ಲೋಕವು ಕಮಲನಾಳದ ಮಧ್ಯಭಾಗದಲ್ಲಿ ಸ್ಥಾಪಿತವಾಗಿದೆ. ಊರ್ಧ್ವಭಾಗದಲ್ಲಿ ಇನ್ನೂ ಉತ್ತಮ ಲೋಕಗಳಿವೆ. ಎಲ್ಲಕ್ಕಿಂತ ಮೇಲಿರುವ ಲೋಕವು ಬ್ರಹ್ಮಲೋಕ ಅಥವಾ ಸತ್ಯಲೋಕವೆಂದು ಪ್ರಸಿದ್ಧವಾಗಿದೆ. ಭೂಲೋಕದಿಂದ ಕೆಳಗೆ ಏಳು ಅಧೋಲೋಕಗಳಿವೆ. ಆ ಲೋಕಗಳಲ್ಲಿ ಅಸುರ ಮೊದಲಾದ ಪ್ರಾಪಂಚಿಕರ ವಾಸ್ತವ್ಯವಿದೆ.

ಸರ್ವಾಂತರ್ಯಾಮಿಯಾದ ದೇವೋತ್ತಮ ಪುರುಷನು ಪರಮಾತ್ಮನಾಗಿ ಪ್ರತಿಯೊಂದು ಜೀವಿಯ ಹೃದಯದಲ್ಲಿ ವಾಸಿಸುತ್ತಾನೆ. ಅಂತರ್ಯಾಮಿಯದ ದೇವೋತ್ತಮಪುರುಷನನ್ನು ಅನಾಮಿಕದಿಂದ ಅಂಗುಷ್ಟದವರೆಗಿನ ವಿಸ್ತಾರದಲ್ಲಿ ಸುಮಾರು ಎಂಟು ಅಂಗುಲಗಳಲ್ಲಿ ಅಳೆಯಲಾಗಿದೆ. ಬಲಗಡೆಯ ಹಸ್ತದಲ್ಲಿ ಕೆಳಗಿನಿಂದ ಪದ್ಮ, ರಥಚಕ್ರ, ಎಡಗಡೆಯ ಹಸ್ತದಲ್ಲಿ ಮೇಲಿಂದ ಶಂಖ, ಗಧಾ ಧರಿಸಿದ ಜನಾರ್ದನ ಎಂದು ಕರೆಯಲಾಗಿದೆ. ಭಗವಂತನ ರೂಪವನ್ನು ವರ್ಣಿಸಲಾಗಿದೆ. ಅದು ಸಾಮಾನ್ಯ ಜೀವ ಸಮೂಹವನ್ನು ನಿಯಂತ್ರಿಸುವ ಭಗವಂತನ ಸಾರಾಂಶವಾಗಿದೆ. ಪದ್ಮ, ಶಂಖ ಮುಂತಾದ ಸಂಕೇತಗಳ ನಾನಾ ಕ್ರಮಗಳಿಂದ ಭಗವಂತನಿಗೆ ಇತರ ಅನೇಕ ರೂಪಗಳು ಇವೆ. ಅವುಗಳನ್ನು ಪ್ರತ್ಯೇಕವಾಗಿ ಪುರುಷೋತ್ತಮ, ಅಚ್ಯುತ, ನರಸಿಂಹ, ತ್ರಿವಿಕ್ರಮ, ಹೃಷೀಕೇಶ, ಕೇಶವ, ಮಾಧವ, ಅನಿರುದ್ಧ, ಪ್ರದ್ಯುಮ್ನ, ಶ್ರೀಧರ, ವಾಸುದೇವ, ದಾಮೋದರ, ಜನಾರ್ಧನ, ನಾರಾಯಣ, ಹರಿ, ಪದ್ಮನಾಭ, ವಾಮನ, ಮಧೂಸೂದನ, ಗೋವಿಂದ, ಕೃಷ್ಣ, ವಿಷ್ಣುಮೂರ್ತಿ, ಅಧೋಕ್ಷಜ, ಉಪೇಂದ್ರ ಎಂಬ ನಾಮಾಂಕಿತಗಳಿಂದ ಜನಸಾಮಾನ್ಯರಿಂದ ಆಕರ್ಷಿತನಾಗಿರುವನು.

ಭಗವಂತನ ಇನ್ನೊಂದು ರೂಪವೇ ವಿಷ್ಣು ಆಗಿರುವನು. ವಿಷ್ಣುವಿನ ಮುಖ ಸಂತಸವನ್ನು ಸೂಚಿಸುತ್ತದೆ. ಕಣ್ಣುಗಳು ಕಮಲದ ದಳಗಳಂತೆ ವಿಶಾಲವಾಗಿವೆ. ಅವನ ಉಡುಗೆ, ಕದಂಬಕುಸುಮದ ಕೇಸರದಂತೆ ಹಳದಿ ಬಣ್ಣದ್ದಾಗಿದ್ದು, ಅಮೂಲ್ಯವಾದ ರತ್ನಾಭರಣಗಳಿಂದ ಅಲಂಕೃತವಾಗಿದೆ. ಅವನ ಬಂಗಾರದ ಆಭರಣಗಳು ಖಚಿತವಾಗಿವೆ. ಭಗವಂತನು ತನ್ನ ಪಾದಕಮಲಗಳನ್ನು ಮಹಾಯೋಗಿಗಳ ಹೃತ್ಕಮಲದ ಎಸಳಿನ ಮೇಲಿಟ್ಟು ಸ್ಥಾನಗ್ರಹಣ ಮಾಡಿರುವನು. ಅವನ ಎದೆಯ ಮೇಲೆ ಶ್ರೀವತ್ಸ

೦೨. ಶ್ರೀ. ಶ್ರೀಮದ್ ಎ.ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುದಾಸರು (ಸಂ) : ಶ್ರೀ ಮದ್ಭಾಗವತಮ್ : ಅಧ್ಯಾಯ-೧, ಶ್ಲೋಕ ೧

ಲಾಂಛನವುಳ್ಳ ಕೌಸ್ತುಭಮಣಿಯಿದೆ. ಹೆಗಲಿನ ಮೇಲೆ ಇತರ ರತ್ನಾಭರಣಗಳಿವೆ. ಸೊಂಟದಲ್ಲಿ ಉಂಗುರಗಳು ಶೋಭಿಸುತ್ತಿವೆ. ಭಗವಂತನ ಕಾಲ್ಬಳೆಗಳು, ಕಡು ನೀಲಿವರ್ಣದ ಸ್ನಿಗ್ಧ ಗುಂಗುರು ಕೂದಲು, ಸುಂದರ ನಗುಮುಖ ಇವೆಲ್ಲ ತುಂಬಾ ಆನಂದದಾಯಕವಾಗಿವೆ.

ವಿಷ್ಣುವಿನ ಮುಖವು ದುಂಬಿಗಳು ಹಾರಾಡುತ್ತಿರುವ ಕಮಲ ಪುಷ್ಪದಂತೆ ತೋರುತ್ತದೆ. ವಿಷ್ಣು ಧರಿಸಿರುವ ಸ್ವರ್ಣಾಭರಣಗಳ ಕಾಂತಿಯು ಅರುಣರಾಗದ ಕರಗಿದ ಚಿನ್ನದಂತೆ ಥಳಥಳಿಸುತ್ತದೆ. ಉದಯಿಸುತ್ತಿರುವ ಸೂರ್ಯನಂತೆಯೇ ಭಗವಾನ್ ವಿಷ್ಣುವು ವಿಶ್ವವನ್ನು ಕಾಪಾಡುವ ಸಲುವಾಗಿ ಪ್ರತ್ಯಕ್ಷನಾಗುತ್ತಾನೆ. ಕೈಗಳಲ್ಲಿನ ವಿವಿಧ ಆಯುಧಗಳು ಭಕ್ತರನ್ನು ಕಾಪಾಡುವುದಕ್ಕಾಗಿಯೇ ಅವನು ಹಿಡಿದು ಕೊಂಡಿರುವಂತಹದು. ಸಾಮಾನ್ಯವಾಗಿ ವಿಷ್ಣುವಿನ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳಿರುತ್ತವೆ. ರಾಕ್ಷಸರನ್ನು, ದುರ್ಜನರನ್ನು ಶಿಕ್ಷಿಸುವುದರ ಕುರುಹಾಗಿ ಗದೆ ಮತ್ತು ಚಕ್ರ, ಭಕ್ತರನ್ನು ರಕ್ಷಿಸುವುದಕ್ಕಾಗಿ ಶಂಖ ಮತ್ತು ಪದ್ಮ. ಸಾಮಾನ್ಯವಾಗಿ ಮಾನವರಲ್ಲಿ ಎರಡು ವರ್ಗ, ಭಕ್ತರು ಮತ್ತು ರಾಕ್ಷಸರು. ಭಗವದ್ಗೀತೆಯಲ್ಲಿ ದೃಢಪಟ್ಟಿರುವಂತೆ (ಪರಿತ್ರಾಣಾಯ ಸಾಧೂನಾಮ್) ಭಗವಂತನು ತನ್ನ ಭಕ್ತರನ್ನು ರಕ್ಷಿಸಲು ಮತ್ತು ದುರ್ಜನರನ್ನು ಶಿಕ್ಷಿಸಲು ಸದಾ ಸಿದ್ಧನಿರುತ್ತಾನೆ.[೩]

ಮಂದಹಾಸದಿಂದ ಕೂಡಿದ ಭಗವಾನ್ ವಿಷ್ಣುವಿನ ಮುಖವು ಜಗತ್ತಿಗೆ ಸಂತೋಷದಾಯಕವಾದದ್ದು. ಭಕ್ತರು ಮಾತ್ರವಲ್ಲದೇ ಭಕ್ತರಲ್ಲದವರೂ ಆ ಮೋಹಕ ಮುಗುಳು ನಗೆಯಿಂದ ಆಕರ್ಷಿತರಾಗುತ್ತಾರೆ. ಸೂರ್ಯ, ಚಂದ್ರ, ಅಷ್ಟದಳ, ಕಮಲ, ಚಾಮರಗಳು, ತಲೆಯ ಮೇಲಿರುವ ಛತ್ರ, ತೂಗುವ ಕರ್ಣಕುಂಡಲ, ಕಪ್ಪನೆಯ ಕೂದಲು ಇವು ವಿಷ್ಣುವಿನ ಸೌಂದರ್ಯದ ಪ್ರತೀಕದಂತಿವೆ. ಇಂತಹ ಸುಂದರ ವ್ಯಕ್ತಿತ್ವದ ವಿಷ್ಣುವಿನ ಅನೇಕ ಚಿತ್ರಗಳನ್ನು ಗಂಜೀಫಾ ಚಿತ್ರಗಳಲ್ಲಿ ಅಧ್ಯಯನ ಮಾಡಲಾಗಿದೆ.

೧. ಮತ್ಸ್ಯಾವತಾರ

ದೇವೋತ್ತಮ, ಪರಮಪುರುಷನ ಅನುಗ್ರಹವನ್ನು ಸಂಪಾದಿಸಲು ರಾಜಾ ಸತ್ಯವ್ರತನು ಕೇವಲ ನೀರನ್ನು ಮಾತ್ರ ಆಹಾರವಾಗಿ ತೆಗೆದುಕೊಳ್ಳುವಂತಹ ಒಂದು ವ್ರತವನ್ನು ಆಚರಿಸತೊಡಗಿದನು. ಒಮ್ಮೆ ಅವನು ಕೃತಮೂಲ ನದಿಯ ದಡದಲ್ಲಿ ಈ ವ್ರತವನ್ನು ಆಚರಿಸುತ್ತಿದ್ದಾಗ ಜಲಾಂಜಲಿಯನ್ನು ಅರ್ಪಿಸುವಾಗ ಒಂದು ಸಣ್ಣ ಮೀನನ್ನು ಕಂಡನು. ಆ ಮೀನು ರಾಜನಿಗೆ ತನ್ನನ್ನು ಸುರಕ್ಷಿತವಾದ ಸ್ಥಳದಲ್ಲಿಟ್ಟು ರಕ್ಷಿಸುವಂತೆ ವಿನಂತಿಸಿತು. ರಾಜನಿಗೆ ಆ ಸಣ್ಣ ಮೀನು ದೇವೋತ್ತಮ ಪರಮ ಪುರುಷನೆ ಎಂದು ತಿಳಿಯದೇ ಇದ್ದರೂ ಕೂಡಾ ತಾನೊಬ್ಬ ರಾಜನಾಗಿ ಆ ಮೀನಿಗೆ ಆಶ್ರಯ ಕೊಡುವ ಸಲುವಾಗಿ ಅದನ್ನು ಒಂದು ಕಮಂಡಲುವಿನಲ್ಲಿ ಇರಿಸಿದನು. ದೇವೋತ್ತಮ ಪರಮ ಪುರುಷನಾದ ಆ ಮೀನು ತನ್ನ ಶಕ್ತಿಯನ್ನು ರಾಜಾ ಸತ್ಯವ್ರತನಿಗೆ ತೋರಿಸಲು ಬಯಸಿ ತನ್ನ ದೇಹವನ್ನು ಕಮಂಡಲಿನಲ್ಲಿ ಹಿಡಿಯಲಾರದಷ್ಟು ದೊಡ್ಡದಾಗಿಸಿದನು. ಅನಂತರ ರಾಜನು ಅದನ್ನು ಭೂಮಿಗೆ ಬಿಟ್ಟನು.

ಆದರೆ ಆ ಮೀನಿಗೆ ಭೂಮಿಯು ತುಂಬಾ ಚಿಕ್ಕದಾಯಿತು. ಆ ಮೇಲೆ ರಾಜನು ಒಂದು ಸರೋವರದಲ್ಲಿ ಇರಿಸಿದನು. ಆದರೆ ಸರೋವರವು ಕೂಡಾ ಅದಕ್ಕೆ ಸಾಲದಾಯಿತು. ಆಗ ರಾಜನು ಆ ಮೀನು ದೇವೋತ್ತಮ ಪರಮ ಪುರುಷನಲ್ಲದೇ ಬೇರಾರೂ ಅಲ್ಲ ಎಂಬುದನ್ನು ಅರಿತನು. ಆಗ ಅವನಲ್ಲಿ ಬೇಡಿಕೊಂಡು ಮತ್ಸ್ಯಾವತಾರದಲ್ಲಿ ಬಂದ ಕಾರಣವೇನೆಂದು ತಿಳಿಸುವಂತೆ ಪ್ರಾರ್ಥಿಸಿದನು. ರಾಜನ

೦೩. ಡಾ. ಆನಂದ ಕೆ. ಪೂಜಾರ್., ಕರ್ನಾಟಕದ ಕರಾವಳಿ ಚಿತ್ರಕಲೆ (ಅಪ್ರಕಟಿತ ಡಿಲಿಟ್ ಮಹಾಪ್ರಬಂಧ) ಪು: ೧೧೪–೧೧೫

ವಿಷಯದಲ್ಲಿ ಸಂಪ್ರೀತನಾದ ದೇವೋತ್ತಮ ಪರಮ ಪುರುಷನು ಅವನಿಗೆ ಇನ್ನು ಒಂದು ಸಪ್ತಾಹದಲ್ಲಿ ಜನಪ್ರಳಯ ಉಂಟಾಗುವುದಾಗಿಯೂ ಆಗ ಮತ್ಸ್ಯಾವತಾರಿಯು ರಾಜ, ಋಷಿಗಳು, ಬಳ್ಳಿಗಳು, ಬೀಜಗಳು, ಜೀವರಾಶಿಗಳು ಈ ಎಲ್ಲವನ್ನು ಆ ಮೀನಿನ ಶೃಂಗಕ್ಕೆ ಹೊಂದಿಕೊಂಡ ದೋಣಿಯೊಂದರಲ್ಲಿ ರಕ್ಷಿಸುವುದಾಗಿಯೂ ತಿಳಿಸಿದನು. ಇಷ್ಟು ಹೇಳಿ ಭಗವಂತನು ಅಂತರ್ಧಾನನಾದನು.

ರಾಜ ಸತ್ಯವ್ರತನು ತನ್ನ ಗೌರವಪೂರ್ವಕ ಪ್ರಣಾಮಗಳನ್ನು ಪರಮ ಪ್ರಭುವಿಗೆ ಅರ್ಪಿಸಿ ಅವನನ್ನು ಧ್ಯಾನಿಸಲು ಮುಂದುವರೆಸಿದನು. ಸ್ವಲ್ಪ ಕಾಲದಲ್ಲಿಯೇ ಜಲಪ್ರಳಯವು ಸಂಭವಿಸಿತು. ಆಗ ರಾಜನು ತನ್ನ ಬಳಿಗೆ ಒಂದು ದೋಣಿಯು ಬರುತ್ತಿರುವುದನ್ನು ಕಂಡನು. ಪ್ರಾಜ್ಞರಾದ ಬ್ರಾಹ್ಮಣರು ಮತ್ತು ಸಾಧು ಸತ್ಪುರುಷರೊಂದಿಗೆ ಆ ದೋಣಿಯನ್ನು ಏರಿದ ರಾಜನು ದೇವೋತ್ತಮ ಪರಮ ಪುರುಷನನ್ನು ಪೂಜಿಸಿ ಪ್ರಾರ್ಥನೆಗಳನ್ನು ಸಲ್ಲಿಸಲು ಸತ್ಪುರುಷರಿಗೆ ವೈದಿಕ ಜ್ಞಾನವನ್ನು ತನ್ನ ಹೃದಯಾಂತರಾಳದಿಂದ ಬೋಧಿಸಿದನು. ಎಲ್ಲೆಲ್ಲಿ ಧಾರ್ಮಿಕ ಆಚರಣೆಯಲ್ಲಿ ಅವನತಿಯು ಉಂಟಾಗುವುದೋ ಆ ಸಮಯದಲ್ಲಿ ಅವನು ಸ್ವಯಂ ಅವತರಿಸುತ್ತಾನೆ. ವಿಶೇಷವಾಗಿ ಭಕ್ತ ಜನರನ್ನೂ ರಕ್ಷಿಸುವ ಸಲುವಾಗಿ ಪರಿತ್ರಾಣಾಯ ಸಾಧೂನಾಮ್ ಮತ್ತು ಅಧಾರ್ಮಿಕತೆಯಿಂದ ಜಗತ್ತನ್ನು ರಕ್ಷಿಸಲು ಭಗವಂತನು ಪ್ರತಿಯೊಂದು ಅವತಾರಗಳನ್ನು ತಾಳುತ್ತಾನೆ. ಅಂತಹ ದಶಾವತಾರಗಳನ್ನು ದೃಶ್ಯ ರೂಪದಲ್ಲಿ ಪ್ರತಿಬಿಂಬಿಸುವ ಗಂಜೀಫಾ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.[೪]

೧.೧. ಮತ್ಸ್ಯಾವತಾರ

ಇಲ್ಲಿ ಚಿತ್ರಿತಗೊಂಡಿರುವ ಹನ್ನೆರಡು ಗಂಜೀಫಾ ಎಲೆಗಳ ಚಿತ್ರಗಳಲ್ಲಿ ಎರಡು ಎಲೆಗಳಲ್ಲಿ ವಿಷ್ಣುವಿನ ಮತ್ಸ್ಯರೂಪವನ್ನು ಒಂದು ಸ್ವರ್ಣಪೀಠದಲ್ಲಿ, ಇನ್ನೊಂದು ಅಶ್ವಾರೂಢರೂಪದಲ್ಲಿ ಕಲಾವಿದನು ಚಿತ್ರಿಸಿದ್ದಾನೆ. ಈ ವೃತ್ತಾಕಾರದ ಎಲೆಗಳಲ್ಲಿ ದೇವತೆಯ ರೂಪವನ್ನು ದೊಡ್ಡ ಗಾತ್ರದಲ್ಲಿ ಚಿತ್ರಿಸಲಾಗಿದ್ದು, ರೇಖಾಪ್ರಾಧಾನ್ಯದಿಂದ ಹಾಗೂ ಅಲಂಕಾರಿಕ ನಕ್ಷೆಗಳಿಂದ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ವಿಷ್ಣು, ಚತುರ್ಭುಜಧಾರಿಯಾಗಿ ರೂಪುಗೊಂಡಿದ್ದು, ಸ್ವರ್ಣ ಮುಕುಟ, ಕಂಠಾಭರಣಗಳು ಹಾಗೂ ವಿವಿಧ ಸ್ವರ್ಣಗಳಿಂದ ಭೂಷಿತಗೊಂಡಿದ್ದಾನೆ. ದೇಹದ ಅರ್ಧಭಾಗವು ಶ್ವೇತವರ್ಣದ ಮತ್ಸ್ಯರೂಪವನ್ನು ಹೊಂದಿದೆ. ಹಿನ್ನೆಲೆಯಲ್ಲಿನ ಪೀಠವು ಅಲಂಕಾರಿಕ ಚಿತ್ರಪಟ್ಟಿಕೆಗಳಿಂದ ಕೂಡಿದ್ದು, ಆಕರ್ಷಕ ಸಂಯೋಜನೆಯನ್ನು ಹೊಂದಿದೆ. ಚಿತ್ರದ ಹಿನ್ನೆಲೆಯು ಕೆಂಪುಬಣ್ಣದಿಂದ ಕೂಡಿದ್ದು, ಹೂವು ಬಳ್ಳಿಗಳಿಂದ ಕೂಡಿದ ಅಲಂಕಾರಿಕ ಅಂಚನ್ನು ಹೊಂದಿದೆ. ಎರಡನೆಯ ಎಲೆಯಲ್ಲಿ ವಿಷ್ಣು ಒಂದನೆಯ ಎಲೆಯಂತೆ ಯಥಾವತ್ತಾಗಿ ಚಿತ್ರಿತಗೊಂಡಿದ್ದಾನೆ. ಇಲ್ಲಿ ದೇವತೆಯು ಅಶ್ವಾರೂಢನಾಗಿದ್ದಾನೆ. ಕುದುರೆಯು ಬಿಳೀ ವರ್ಣದಿಂದ ಕೂಡಿದ್ದು, ಅತ್ಯಂತ ಚಲನೆಯಿಂದ ಬಿಂಬಿತಗೊಂಡಿದೆ. ಈ ಚಿತ್ರವೂ ಸಹ ರೇಖಾ ಪ್ರಧಾನವಾಗಿ ಮೂಡಿ ಬಂದಿದೆ. ಚಿತ್ರದ ಹಿನ್ನೆಲೆ ಅಂಚು, ರೇಖಾವಿನ್ಯಾಸ, ವರ್ಣವಿನ್ಯಾಸ ಹಿಂದಿನ ಎಲೆಯಂತೆ ರೂಪುಗೊಂಡಿದೆ. ಇನ್ನುಳಿದ ಹತ್ತು ಎಲೆಗಳ ಚಿತ್ರಗಳಲ್ಲಿ ಒಂದು ಎಲೆಯಲ್ಲಿ ಒಂದು ಸಂಕೇತವನ್ನು ಸೂಚಿಸುವ ಒಂದು ಮೀನಿನ ಚಿತ್ರ, ಎರಡನೆಯ ಎಲೆಯಲ್ಲಿ ಎರಡು ಮೀನುಗಳ ಚಿತ್ರ, ಮೂರನೆಯ ಎಲೆಯಲ್ಲಿ ಮೂರು ಮೀನುಗಳ ಚಿತ್ರಗಳನ್ನು, ನಾಲ್ಕನೆಯ ಎಲೆಯಲ್ಲಿ ನಾಲ್ಕು ಮೀನುಗಳನ್ನು, ಐದನೆಯ ಎಲೆಯಲ್ಲಿ ಐದು ಮೀನುಗಳನ್ನು, ಆರನೆಯಲ್ಲಿ ಆರು ಮೀನುಗಳನ್ನು,

೦೪. ಗೋ. ಬ. ಸೂಳಿಭಾವಿ : ದಶಾವತಾರ, ಪುಟ – ೧೬

ಚಿತ್ರ ೦೧ ಮತ್ಸ್ಯಾವತಾರ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಮಕರ ರಾಶಿ



ತುಲಾ ರಾಶಿ

ಚಿತ್ರ ೦೧



ಮತ್ಸ್ಯ ರಾಜ



ಮತ್ಸ್ಯ ರಾಣಿ



ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಏಳನೆಯ ಎಲೆಯಲ್ಲಿ ಏಳು ಮೀನುಗಳು, ಎಂಟನೆಯ ಎಲೆಯಲ್ಲಿ ಎಂಟು ಮೀನುಗಳು, ಒಂಭತ್ತನೆಯ ಎಲೆಯಲ್ಲಿ ಒಂಭತ್ತು ಮೀನುಗಳು, ಹತ್ತನೆಯ ಎಲೆಯಲ್ಲಿ ಹತ್ತು ಮೀನುಗಳನ್ನು ಚಿತ್ರಿಸಿದ್ದು, ಈ ಹತ್ತು ಮೀನುಗಳು ಬಿಳಿ ವರ್ಣದಿಂದ ಸಾಂಕೇತಿಕವಾಗಿ ಚಿತ್ರಿತಗೊಂಡಿವೆ. ಪ್ರತಿಯೊಂದು ಎಲೆಗಳಲ್ಲಿ ಮೀನುಗಳ ಕಲಾತ್ಮಕವಾದ ಕ್ರಮಬದ್ಧ ಜೋಡಣೆಯು ವಿಶಿಷ್ಟವಾಗಿ ಮೂಡಿ ಬಂದಿದೆ. ಈ ಹನ್ನೆರಡು ಎಲೆಗಳು ಕೆಂಪು ಬಣ್ಣದಿಂದ ಪ್ರಧಾನಗೊಂಡಿದ್ದು, ಕಂದು ಹಳದಿಯ ಅಂಚು, ಕಪ್ಪು ಬಣ್ಣದ ಬಾಹ್ಯರೇಖೆ ಸಾಂಕೇತಿಕವಾಗಿ ಹಾಗೂ ಅಲಂಕಾರಿಕವಾಗಿ ಚಿತ್ರಿತಗೊಂಡಿವೆ. ಈ ಹನ್ನೆರಡು ಚಿತ್ರಗಳಲ್ಲಿ ರೇಖೆಯ ಚಲನೆ, ವರ್ಣಸಂಯೋಜನೆ ಹಾಗೂ ಆಕೃತಿಗಳ ಸಂಯೋಜನೆಯು ಉತ್ತಮವಾಗಿ ಮೂಡಿ ಬಂದಿದೆ.

೨. ಕೂರ್ಮಾವತಾರ

ದೇವತೆಗಳು ಮತ್ತು ರಾಕ್ಷಸರು ಕೂಡಿಕೊಂಡು ಮಂದರ ಪರ್ವತವನ್ನು ಸಾಹಸದಿಂದ ಕ್ಷೀರ ಸಮುದ್ರದಲ್ಲಿ ಇಟ್ಟು ವಾಸುಕಿ ಎಂಬ ಸರ್ಪರಾಜನನ್ನು ಮಂದರ ಪರ್ವತಕ್ಕೆ ಸುತ್ತಲೂ ಸುತ್ತಿ ಅಮೃತವನ್ನು ಪಡೆಯುವ ಸಲುವಾಗಿ ಕ್ಷೀರಸಮುದ್ರವನ್ನು ಕಡೆಯತೊಡಗಿದರು. ಪರ್ವತವು ಭಾರದಿಂದ ಹಿಂದೆ ಮುಂದೆ ಸರಿದು ಮುಳುಗುವ ಪರಿಸ್ಥಿತಿಯಲ್ಲಿದ್ದಾಗ ಅನಾದಿ ದೇವನಾದ ಭಗವಂತನು ಆಮೆಯ (ಕೂರ್ಮಾವತಾರ) ರೂಪದಿಂದ ಮಂದರ ಪರ್ವತವನ್ನು ವಜ್ರಮಯವಾದ ಬೆನ್ನಿನಿಂದ ಎತ್ತಿದನು. ಹೀಗೆ ಶ್ರೀ ಹರಿಯು ಕೂರ್ಮಾವತಾರ ತಾಳಿದನು. ಶ್ರೀಹರಿಯು ಕೂರ್ಮಾವತಾರ ತಾಳಿದ ದೃಶ್ಯ ಸಂಯೋಜನೆಗಳು ಗಂಜೀಫಾ ಚಿತ್ರಗಳಲ್ಲಿ ಅಧ್ಯಯನಕ್ಕೆ ಲಭ್ಯವಾಗಿವೆ.[೫]

೨.೧. ಕೂರ್ಮ ಅವತಾರ

ವಿಷ್ಣುವಿನ ಎರಡನೆಯ ಅವತಾರವೇ ಕೂರ್ಮಾವತಾರ. ಗಂಜೀಫಾ ಕಲಾವಿದರು ಆಟದ ಎಲೆಗಳಲ್ಲಿ ಈ ದೇವತೆಯನ್ನು ಕೇವಲ ಸಾಂಕೇತಿಕವಾಗಿ ಚಿತ್ರಣ ಮಾಡಿದ್ದು, ಪ್ರಧಾನ ದೇವತೆಯನ್ನು ಹನ್ನೆರಡು ಎಲೆಗಳಲ್ಲಿ ಬಿಂಬಿಸಿ, ಪ್ರತಿ ಎಲೆಯ ಕೆಳಭಾಗದಲ್ಲಿ ರಾಶಿಗಳ ಸಾಂಕೇತಿಕ ಚಿತ್ರಗಳನ್ನು ಬರೆದಿದ್ದಾರೆ. ಇಲ್ಲಿ ದೊರೆತಿರುವ ಐದು ರಾಶಿಗಳ ಎಲೆಗಳ ಚಿತ್ರಗಳನ್ನು ವಿವರಿಸಲು ಪ್ರಯತ್ನಿಸಿದೆ. ಇಲ್ಲಿ ರಾಶಿಗಳನ್ನು ಸಂಕೇತಿಸುವ ಐದು ಎಲೆಗಳು ವೃತ್ತಾಕಾರವಾಗಿದ್ದು ಐದು ಎಲೆಗಳು ಒಂದೇ ರೀತಿಯ ವರ್ಣವಿನ್ಯಾಸ, ಅಂಚು ಹಾಗೂ ನಕ್ಷಾವಿಧಾನವನ್ನು ಹೊಂದಿವೆ. ಆದರೆ ಇಲ್ಲಿ ಐದು ಎಲೆಗಳ ವೈಪರೀತ್ಯವನ್ನು ರಾಶಿಚಿತ್ರಗಳಿಂದ ಗುರುತಿಸಬಹುದು. ಜೊತೆಗೆ ಅಲ್ಪ ಸ್ವಲ್ಪ ವರ್ಣವಿನ್ಯಾಸ ಹಾಗೂ ನಕ್ಷಾವಿನ್ಯಾಸಗಳನ್ನು ಸಹ ಕಾಣಬಹುದಾಗಿದೆ.

ಮೀನರಾಶಿಯ ಚಿತ್ರವನ್ನು ಹೊಂದಿದ ಎಲೆಯಲ್ಲಿ ವಿಷ್ಣು ಚತುರ್ಭುಜಧಾರಿಯಾಗಿದ್ದು, ಸರ್ವಾಲಂಕೃನಾಗಿ ಭೂಷಿತಗೊಂಡಿದ್ದಾನೆ. ಹಾಲು ಬಿಳುಪಿನ ಮೈಬಣ್ಣವನ್ನು ಹೊಂದಿದ್ದು, ಆಮೆಯ ಸಾಂಕೇತಿಕ ರೂಪವನ್ನು ತರಲು ಕಲಾವಿದನು ಪ್ರಯತ್ನಿಸಿದ್ದಾನೆ. ಹಿನ್ನೆಲೆಯಲ್ಲಿ ನೀಲಿಮಿಶ್ರಿತ ಕೆಂಪು ಬಣ್ಣವನ್ನು ಚಪ್ಪಟೆಯಾಗಿ ತುಂಬಲಾಗಿದ್ದು ಎಲೆಯ ಕೆಳ ಭಾಗದಲ್ಲಿ ಚೌಕಾಕಾರದ ಚಿತ್ರಪಟ್ಟಿಕೆಗಳನ್ನು ರಚಿಸಲಾಗಿದೆ. ಈ ಪಟ್ಟಿಕೆಗಳು ಸಹ ಅಲಂಕಾರಿಕತೆಯನ್ನು ಹೊಂದಿವೆ. ಈ ವಿವರಗಳನ್ನು ಯಥಾವತ್ತಾಗಿ ಐದು ಎಲೆಗಳಲ್ಲಿ ತರಲಾಗಿದೆ. ಸಿಂಹರಾಶಿಯ ಎಲೆಯಲ್ಲಿ ಚೌಕಾಕಾರದ ಪಟ್ಟಿಕೆಯಲ್ಲಿ ಬಿಳಿ ಬಣ್ಣದ ಸಿಂಹದ ಸಾಂಕೇತಿಕ ಚಿತ್ರ, ತುಲಾ ರಾಶಿಯ ಎಲೆಯಲ್ಲಿ ತಕ್ಕಡಿಯ ಚಿತ್ರ, ಮಕರ ರಾಶಿಯ

೦೫. ಗೋ. ಬ. ಸೂಳಿಭಾವಿ : ದಶಾವತಾರ, ಪುಟ – ೨೪

ಚಿತ್ರ ೦೨ ಕೂರ್ಮಾವತಾರ



ಮೀನ ರಾಶಿ



ಸಿಂಹ ರಾಶಿ



ತುಲಾ ರಾಶಿ




ಮಕರ ರಾಶಿ



ಕುಂಭ ರಾಶಿ

ಚಿತ್ರ ೦೨



ಕೂರ್ಮ ರಾಜ

ಕೂರ್ಮ ರಾಣಿ

ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಎಲೆಯಲ್ಲಿ ಹಸಿರು ಬಣ್ಣದ ಮೊಸಳೆಯ ಚಿತ್ರ, ಕುಂಭರಾಶಿಯ ಎಲೆಯಲ್ಲಿ ಕುಂಭದ ಚಿತ್ರವನ್ನು ಸಂಯೋಜಿಸಲಾಗಿದ್ದು, ಮಕರ ಹಾಗೂ ಸಿಂಹ ರಾಶಿಯ ಎಲೆಗಳಲ್ಲಿ ಹಿನ್ನೆಲೆಗೆ ನೀಲಿಬಣ್ಣವನ್ನು ಸಂಯೋಜಿಸಲಾಗಿದೆ. ಇನ್ನುಳಿದ ಎಲೆಗಳಲ್ಲಿ ಕಪ್ಪು ಬಣ್ಣವನ್ನು ಹಿನ್ನೆಲೆಯಾಗಿ ಬಳಸಲಾಗಿದೆ. ಇಲ್ಲಿ ವರ್ಣಪದ್ಧತಿಯನ್ನು ಚಪ್ಪಟೆಯಾಗಿ ಅನುಸರಿಸಲಾಗಿದೆ. ರೇಖೆ, ವರ್ಣ ಹಾಗೂ ಆಕೃತಿ ಸಂಯೋಜನೆಗಳು ಎಲ್ಲ ಎಲೆಗಳಲ್ಲಿ ಏಕಪ್ರಕಾರವಾಗಿ ಮೂಡಿಬಂದಿವೆ.

ಕೂರ್ಮಾವತಾರದ ಇನ್ನೊಂದು ರೀತಿಯ ಎಲೆಗಳ ಚಿತ್ರಗಳಲ್ಲಿ ಕೂರ್ಮದೇವತೆಯನ್ನು ಸಿಂಹಾಸನಾರೂಢನಾಗಿ ಹಾಗೂ ಅಶ್ವಾರೂಢನಾಗಿ ೨ ಎಲೆಗಳಲ್ಲಿ ಚಿತ್ರಿಸಿ, ಇನ್ನುಳಿದ ಹತ್ತು ಎಲೆಗಳಲ್ಲಿ ಕೂರ್ಮದ ಸಾಂಕೇತಿಕ ಚಿತ್ರಗಳನ್ನು ಬರೆಯಲಾಗಿದೆ. ಒಂದನೇ ಎಲೆಯಲ್ಲಿ ಒಂದು ಕೂರ್ಮದ ಚಿತ್ರ, ಎರಡನೇ ಎಲೆಯಲ್ಲಿ ಎರಡು ಕೂರ್ಮಗಳ ಚಿತ್ರ, ಮೂರನೇ ಎಲೆಯಲ್ಲಿ ಮೂರು ಆಮೆಗಳ ಚಿತ್ರಗಳನ್ನು, ನಾಲ್ಕನೆಯ ಎಲೆಯಲ್ಲಿ ನಾಲ್ಕು ಆಮೆಗಳ ಚಿತ್ರಗಳನ್ನು, ಐದನೆಯ ಎಲೆಯಲ್ಲಿ ಐದು ಆಮೆಗಳ ಚಿತ್ರಗಳನ್ನು, ಆರನೆಯ ಎಲೆಯಲ್ಲಿ ಆರು ಕೂರ್ಮಗಳ ಚಿತ್ರಗಳನ್ನು, ಏಳು, ಎಂಟು ಒಂಭತ್ತು ಹಾಗೂ ಹತ್ತನೆಯ ಎಲೆಗಳಲ್ಲಿ ತಲಾ ಏಳು, ಎಂಟು ಒಂಭತ್ತು ಹಾಗೂ ಹತ್ತು ಕೂರ್ಮಗಳ ಚಿತ್ರಗಳನ್ನು ಚಿತ್ರಿಸಲಾಗಿದೆ. ಈ ಹತ್ತು ಎಲೆಗಳಲ್ಲಿ ಕೂರ್ಮಗಳ ಚಿತ್ರಗಳನ್ನು ಅತ್ಯಂತ ಕಲಾತ್ಮಕವಾಗಿ ಹಾಗೂ ಕ್ರಮಬದ್ಧವಾಗಿ ಚಿತ್ರಿಸಲಾಗಿದೆ. ಈ ಹನ್ನೆರಡು ಎಲೆಗಳ ಚಿತ್ರಗಳಲ್ಲಿ ಒಂದೇ ವರ್ಣಪದ್ಧತಿ ಹಾಗೂ ಅಂಚುಗಳ ಚಿತ್ರವಿನ್ಯಾಸ, ರೇಖಾ ವಿನ್ಯಾಸವನ್ನು ಒಂದೇ ರೀತಿಯಲ್ಲಿ ಅನುಸರಿಸಲಾಗಿದೆ. ಈ ಹನ್ನೆರಡು ಚಿತ್ರಗಳಲ್ಲಿ ಪ್ರಧಾನವಾಗಿ ಕೆಂಪು ಬಣ್ಣವನ್ನು ಸಂಯೋಜಿಸಲಾಗಿದ್ದು, ಉಳಿದಂತೆ ನೀಲಿ, ಕಪ್ಪು, ಹಳದಿ, ಬಿಳಿ ಬಣ್ಣಗಳನ್ನು ಸಂಯೋಜಿಸಲಾಗಿದೆ.

೩. ವರಾಹಾವತಾರ

ದಕ್ಷ ಪ್ರಜಾಪತಿಯ ಮಕ್ಕಳನ್ನು ಮದುವೆಯಾದ ಕಶ್ಯಪ ಮಹರ್ಷಿಯು ಹದಿನಾಲ್ಕು ಜನ ಪತ್ನಿಯರನ್ನು ಸಮಭಾವದಿಂದಲೇ ಕಾಣುತ್ತಿದ್ದನು. ಆದಿತಿದೇವಿಗೆ ಆದಿತ್ಯ ದೇವತೆಗಳು ಮಕ್ಕಳಾಗಿ ಪ್ರಸಿದ್ಧರಾದರು. ಆದರೆ ಆದಿತಿ ದೇವಿಗೆ ಇನ್ನೂ ಮಕ್ಕಳಾಗಿರಲಿಲ್ಲ.

ಇಂತಹ ಸಮಯದಲ್ಲೇ ಒಂದು ಪ್ರದೋಷ ಕಾಲದಲ್ಲಿ ದಿತಿ ದೇವಿಗೆ ರತಿ ಸುಖದ ಬಯಕೆ ಉಂಟಾಯಿತು. ವಸಂತ ಕಾಲದ ಸಂಜೆಯ ಮಂದ ಮಾರುತನ ಮಂದಾರ ಪುಷ್ಪಲತೆಗಳಿಂದ ಬಂದು ದಿತಿದೇವಿಯ ದೇಹಕ್ಕೆ ಪೂಜಿಸಿದಾಗ ಕಾಮನು ತನ್ನ ಪಂಚ ಬಾಣದ ಮೂಲಕ ಈ ಅಬಲೆಯ ಹೃದಯಕ್ಕೆ ನೆಟ್ಟು ದಿತಿ ದೇವಿಯು ಕಾಮೋನ್ಮಾದಿಯಾಗಿ ತಳಮಳಿಸತೊಡಗಿದಳು. ಮಂಟಪದ ಪೂಜೆಯಲ್ಲಿ ನಿರತನಾದ ಕಶ್ಯಪ ಮುನಿಯನ್ನು ಕಂಡು "ಆರ್ಯಪುತ್ರ, ಇಂದೇಕೋ ನನಗೆ ಕಾಮನ ಬಾಧೆಯು ಅತಿಯಾಗಿರುವುದು. ಇನ್ನು ಒಂದು ನಿಮಿಷ ಸಹ ತಾಳಲಾರೆನು. ನೀನು ನನ್ನ ಧರ್ಮಪತಿ. ಆದುದರಿಂದಲೇ ಈಗಲೇ ನಿನ್ನ ಬಳಿಗೆ ಬಂದಿದ್ದೇನೆ. ನೀನು ಈಗಲೇ ನನ್ನೊಂದಿಗೆ ಕಾಮಿಸಿ ಸಂತಾನಭಾಗ್ಯ ಕರುಣಿಸು" ಎಂದು ಹೇಳಿದಳು. ಕಶ್ಯಪಮುನಿಯು ಪರಿಪರಿಯಾಗಿ ತಿಳಿಸಿ ಹೇಳಿದರೂ ದಿತಿಯ ಹಠಮಾರಿತನಕ್ಕೆ ಜೋತು ಬಿದ್ದು, ಅವಳ ಬಯಕೆಯನ್ನು ತೀರಿಸುತ್ತಾನೆ.[೬]

ಕಶ್ಯಪರು ನಗುತ್ತ "ನೀನು ನಿರ್ಭಾಗ್ಯಗಳೆ ಸರಿ. ಆಗಬೇಕಾದ ಅನಿಷ್ಟವು ಆಗಿಯೇ ಹೋಗಿದೆ.

೦೬. ಜಿ. ವಿ. ಶಾಸ್ತ್ರಿ (ಸಂ) : ದಶಾವತಾರದ ಕಥೆಗಳು, ಪುಟ – ೨೪

ಪ್ರದೋಷ ಕಾಲದಲ್ಲಿ ಮಿಲನವನ್ನು ಬಯಸಿ ಶಿವನ ಸಿಟ್ಟಿಗೆ ಕಾರಣವಾಗಿರುವ ನಿನ್ನ ಮಕ್ಕಳು ಲೋಕಕಂಟಕರಾಗುವುದು ಸತ್ಯ. ನೀಚರೂ, ಚಾಂಡಾಲರೂ ಆಗಿ ಜನರನ್ನೂ ನೋಯಿಸುತ್ತಾ, ಪೀಡಿಸುತ್ತಾ, ದುರಾತ್ಮರಾಗಿ ನಿನಗೂ ಸಹ ದುಃಖವನ್ನುಂಟು ಮಾಡುವರು. ಕೊನೆಯಲ್ಲಿ ಶ್ರೀಮನ್ನಾರಾಯಣನಿಂದಲೇ ಅವರ ಕೊನೆಯಾಗುವುದು" ಎಂದು ಹೇಳಿದಾಗ, ಭಗವಂತನಿಂದ ಮೋಕ್ಷ ಹೊಂದುವರೆಂದು ತಿಳಿದಾಗ ದಿತಿಗೆ ಸಮಾಧಾನವಾಯಿತು. ನಂತರದಲ್ಲಿ ದಿತಿದೇವಿಯು ಎರಡು ಗಂಡು ಮಕ್ಕಳಿಗೆ ಜನ್ಮ ನೀಡಿದಳು. ಹಿರಿಯವನಿಗೆ ಹಿರಣ್ಯ ಕಶಿಪು ಎಂದು, ಕಿರಿಯನಿಗೆ ಹಿರಣ್ಯಾಕ್ಷನೆಂದು ಕಶ್ಯಪರು ನಾಮಕರಣ ಮಾಡಿದರು.

ಹಿರಣ್ಯಾಕ್ಷ ಮತ್ತು ಹಿರಣ್ಯ ಕಶಿಪು ಇವರಿಬ್ಬರೂ ಮೇರು ಪರ್ವತದಂತೆ ಬೆಳೆಯುತ್ತ ಬ್ರಹ್ಮ ದೇವರ ಕುರಿತು ತಪಸ್ಸನ್ನು ಆಚರಿಸಿ ಬಲಿಷ್ಠರಾದರು. ಮೂರು ಲೋಕದಲ್ಲಿಯೇ ತಮಗಿಂತ ಬಲಿಷ್ಠರಿಲ್ಲ ಎಂದುಕೊಂಡು ಮದಾಂಧರಾದರು. ಕೊನೆಗೆ ಇವರು ವೈಕುಂಠಪತಿ ಶ್ರೀ ವಿಷ್ಣುವಿನೊಂದಿಗೆ ಯುದ್ಧ ಮಾಡಲು ಧಾವಿಸಿದರು. ಬ್ರಹ್ಮದೇವರು ಸೃಷ್ಟಿಕಾರ್ಯವನ್ನು ಆರಂಭಿಸಿದವನೇ ಸ್ವಯಂಭೂ ಮನು ಮತ್ತು ಅವನ ಪತ್ನಿ ಶತರೂಪಾಳನ್ನು ಸೃಷ್ಟಿಸಿ ಭೂಮಂಡಲವನ್ನು ರಕ್ಷಿಸುವ ಆದೇಶ ನೀಡಿದನು. ಆದರೆ ಮನುವಿಗೆ ಭೂಮಿಯೇ ಕಾಣಲಿಲ್ಲ. ಹದಿನಾಲ್ಕು ಲೋಕಗಳನ್ನು ತಲ್ಲಣಗೊಳಿಸಿದ ಹಿರಣ್ಯಾಕ್ಷನು ಭೂಮಿಯನ್ನು ಪಾತಾಳಕ್ಕೆ ಒಯ್ದು ಬಿಟ್ಟಿದ್ದನು. ಈ ಮಾನವರು, ಸಸ್ಯ, ಪ್ರಾಣಿ ಋಷಿಮುನಿ, ಜೀವಜಂತುಗಳನ್ನು ಸೃಷ್ಟಿ ಮಾಡಿದ್ದು ನೆನಪಾಯಿತು. ಹೀಗೆ ಯೋಚನೆಯಲ್ಲಿರುವಾಗಲೇ ಬ್ರಹ್ಮದೇವನ ನಾಸಿಕಾಗ್ರದಿಂದ ಒಂದು ಚಿಕ್ಕ ಪ್ರಮಾಣದ ವರಾಹವು ಜನಿಸಿತು.[೭] ಅವರು ನೋಡುತ್ತಿದ್ದಂತೆಯೇ ಬೃಹದಾಕಾರವಾಗಿ ಬೆಳೆದು ಬಿಟ್ಟಿತು. ತನ್ನ ಕೋರೆಹಲ್ಲಿನಿಂದ ಭೂಮಿಯನ್ನು ನೀರಿನಿಂದ ಮೇಲಕ್ಕೆ ಎತ್ತಿ ನಿರ್ದಿಷ್ಟ ಸ್ಥಳದಲ್ಲಿ ಸ್ಥಾಪಿಸಿತು. ಯುದ್ಧ ಮಾಡಿ ಹಿರಣ್ಯಾಕ್ಷನನ್ನು ಚಕ್ರದ ಸಹಾಯದಿಂದ ಹತಗೊಳಿಸಿತು. ಹೀಗೆ ವರಾಹಾವತಾರದ ಕಥೆಗೆ ಸಂಬಂಧಿಸಿದಂತೆ ಗಂಜೀಫಾದಲ್ಲಿ ಚಿತ್ರಗಳನ್ನು ಕಾಣಬಹುದು.

೩.೧. ವರಾಹಾವತಾರ

ವರಾಹಾವತಾರದ ಈ ಕಥಾಸಂದರ್ಭವನ್ನು ಗಂಜೀಫಾ ಕಲಾವಿದರು ಕೇವಲ ಆಟದ ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ಚಿತ್ರಿಸಿದ್ದಾರೆ. ಇಲ್ಲಿ ಚಿತ್ರಿತಗೊಂಡಿರುವ ರಾಶಿಗೆ ಸಂಬಂಧಿಸಿದ ಐದು ಎಲೆಗಳಲ್ಲಿ ವೃತ್ತಾಕಾರದ ವಿಷ್ಣುವಿನ ವರಾಹಮೂರ್ತಿಯನ್ನು ಚಿತ್ರಿಸಿದ್ದು, ಕ್ರಮವಾಗಿ ಮೀನರಾಶಿ, ಸಿಂಹರಾಶಿ, ಮಕರರಾಶಿ ಹಾಗೂ ತುಲಾರಾಶಿಗೆ ಸಂಬಂಧಿಸಿದ ಎಲೆಗಳ ಚಿತ್ರಗಳಲ್ಲಿ ನೀಲಿ ಬಣ್ಣವನ್ನು ಮೈಬಣ್ಣವನ್ನಾಗಿ ಸಂಯೋಜಿಸಲಾಗಿದೆ. ಕುಂಭರಾಶಿಯ ಎಲೆಯಲ್ಲಿ ಗೌರವರ್ಣವನ್ನು ಸಂಯೋಜಿಸಲಾಗಿದೆ. ಮೀನ, ಸಿಂಹ ಹಾಗೂ ತುಲಾರಾಶಿಯ ಎಲೆಯಲ್ಲಿ ವರಾಹಮೂರ್ತಿಯ ಧೋತಿಯ ಬಣ್ಣವನ್ನು ಬಿಳಿ ವರ್ಣದಿಂದ ತುಂಬಲಾಗಿದೆ. ಕುಂಭರಾಶಿಯನ್ನು ಹೊರತು ಪಡಿಸಿ ಉಳಿದ ನಾಲ್ಕು ರಾಶಿಯ ಚಿತ್ರಗಳಲ್ಲಿ ಕೆಂಪುಮಿಶ್ರಿತ ಹಳದಿ ವರ್ಣವನ್ನು ಹಿನ್ನೆಲೆಯಲ್ಲಿ ಚಪ್ಪಟೆಯಾಗಿ ಸಂಯೋಜಿಸಲಾಗಿದೆ. ದೇವತೆಯ ತಳಭಾಗದಲ್ಲಿರುವ ಜ್ಯಾಮಿತಿಕ ಪಟ್ಟಿಕೆಯಲ್ಲಿರುವ ಮೀನು ಸಿಂಹಗಳ ಚಿತ್ರಗಳು ಬಿಳಿವರ್ಣದಿಂದ, ಮಕರ ರಾಶಿಯಲ್ಲಿ ಮಕರದ ಚಿತ್ರವನ್ನು ಹಸಿರು ವರ್ಣದಿಂದ, ಕುಂಭ ಹಾಗೂ ತುಲಾದ ಚಿತ್ರಗಳನ್ನು ಕೆಂಪು ಹಾಗೂ ಕಪ್ಪು ಬಣ್ಣದಿಂದ ಚಿತ್ರಿಸಲಾಗಿದೆ. ಈ ಐದು ವೃತ್ತಾಕಾರದ ಗಂಜೀಫಾ ಎಲೆಗಳ ಚಿತ್ರವಿನ್ಯಾಸ, ರೇಖಾ ವಿನ್ಯಾಸ, ವರ್ಣವಿನ್ಯಾಸ, ಆಕೃತಿಗಳ ಸಂಯೋಜನೆ ಅಲಂಕಾರಿಕವಾಗಿ ಹಾಗೂ ಸಾಂಕೇತಿಕವಾಗಿ ರೂಪುಗೊಂಡಿವೆ.

---

೦೭. ಎಂ. ರಾಜಗೋಪಾಲಾಚಾರ್ಯ : ದಶಾವತಾರದ ಸ್ತುತಿ, ಪುಟ- ೧೨

ಚಿತ್ರ ೦೩ ವರಹ ಅವತಾರ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಮಕರ ರಾಶಿ



ತುಲಾ ರಾಶಿ

ಚಿತ್ರ ೦೨



ವರಹ ರಾಜ



ವರಹ ರಾಣಿ





















ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ವರಾಹಾವತಾರದ ಇನ್ನೊಂದು ಬಗೆಯ ಗಂಜೀಫಾ ಆಟದ ಎಲೆಗಳ ಚಿತ್ರಗಳಲ್ಲಿ ವರಾಹ ದೇವತೆಯನ್ನು ಸ್ವರ್ಣ ಪೀಠದಲ್ಲಿ ಹಾಗೂ ಅಶ್ವಾರೂಢಿಯಾಗಿ ಚಿತ್ರಿಸಿ ಇನ್ನುಳಿದ ಹತ್ತು ಎಲೆಗಳ ಚಿತ್ರಗಳಲ್ಲಿ ವರಾಹದ ಚಿತ್ರಗಳನ್ನು ಒಂದರಿಂದ ಹತ್ತು ಸಂಖ್ಯೆಗಳಲ್ಲಿ ಚಿತ್ರಿಸಿದ್ದಾರೆ. ಪ್ರಧಾನ ಎರಡು ಎಲೆಗಳಲ್ಲಿ ವರಾಹ ದೇವತೆಯನ್ನು ಸ್ವರ್ಣಾಭರಣಗಳಿಂದ ಅಲಂಕರಿಸಿ ಗೌರವರ್ಣದಿಂದ ಮೈಬಣ್ಣವನ್ನು ಸಂಯೋಜಿಸಲಾಗಿದೆ. ಹಿನ್ನೆಲೆಯ ಪೀಠವನ್ನು ಅಲಂಕಾರಿಕ ನಕ್ಷೆಗಳಿಂದ ಸಂಯೋಜಿಸಿದೆ. ಅಶ್ವಾರೂಢ ಎಲೆಯಲ್ಲಿ ಕುದುರೆಯ ಚಿತ್ರವನ್ನು ಬಿಳಿವರ್ಣದಿಂದ ಚಿತ್ರಿಸಿ ಅಲಂಕರಿಸಿದ್ದಾರೆ. ಹನ್ನೆರಡು ಎಲೆಯ ಹಿನ್ನೆಲೆಯು ಕೆಂಪು ಮತ್ತು ನೀಲಿಮಿಶ್ರಿತ ವರ್ಣವನ್ನು ಹೊಂದಿದ್ದು ಎಲ್ಲ ಎಲೆಗಳು ಒಂದೇ ರೀತಿಯಲ್ಲಿ ರಚನೆಗೊಂಡಿವೆ. ಈ ಹನ್ನೆರಡು ಎಲೆಗಳ ರೇಖೆ, ವರ್ಣ, ಅಲಂಕರಣ ಹಾಗೂ ಆಕೃತಿ ಸಂಯೋಜನೆಯು ಚಿತ್ರಾತ್ಮಕವಾಗಿ ಮೂಡಿ ಬಂದಿವೆ.

೪. ನರಸಿಂಹಾವತಾರ

ವರಾಹರೂಪದಿಂದ ಸಹೋದರರನ್ನು ಕೊಂದನೆಂದು ಹಿರಣ್ಯಕಶಿಪು ಶೋಕ, ರೋಷಗಳಿಂದ ಸಂತಪ್ತನಾದನು. ಸಾಧು ಸಜ್ಜನರ ಒಂದು ಪರ್ಯಾಯರೂಪವೇ ವಿಷ್ಣು. ಆದ್ದರಿಂದ ಬ್ರಾಹ್ಮಣ, ಕ್ಷತ್ರಿಯರ ಪುಣ್ಯ ಕ್ಷೇತ್ರಗಳನ್ನು ಹಾಳು ಮಾಡಿರಿ ಎಂದು ಉಗ್ರ ಶಾಸನವನ್ನು ಬಳಕೆಯಲ್ಲಿ ತಂದನು.[೮]

ಕದನಪ್ರಿಯರಾದ ದಾನವರ ಆನಂದಕ್ಕೆ ಎಣೆಯಿಲ್ಲದಂತಾಗಿ ಪ್ರಜೆಗಳನ್ನು ಪೀಡಿಸಿದರು. ಪುರ, ಗ್ರಾಮಗಳಿಗೆ ಕೊಳ್ಳೆಯಿಟ್ಟರು. ಅವರಿಗೆ ತೊಂದರೆ ಕೊಡಲು ಪ್ರಾರಂಭಿಸಿದರು. ಇದರಿಂದ ಹಿರಣ್ಯಕ ಶಿಪು ಸಮಾಧಾನ ಹೊಂದದೇ ವಿಷ್ಣುವಿನ ಮೇಲಿನ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಮತ್ತು ತಾನು ಅಜರಾಮರನಾಗುವ ಅಭಿಲಾಷೆಯಿಂದಲೂ ಮಂದರ ಪರ್ವತದ ಕಂದರದಲ್ಲಿ ಎರಡು ಕೈಗಳನ್ನು ಆಕಾಶದ ಕಡೆಗೆ ಮಾಡಿ ತನ್ನ ಸಮಸ್ತ ದೇಹದ ಭಾಗವನ್ನೂ ಕಾಲಿನ ಒಂದೇ (ಹೆಬ್ಬರಳಿನ) ಅಂಗುಷ್ಠದ ಮೇಲಿಟ್ಟು, ಏಕಾಗ್ರಚಿತ್ತದಿಂದ ಬ್ರಹ್ಮದೇವರನ್ನು ಕುರಿತು ಘೋರ ತಪಸ್ಸಿಗೆ ನಿಂತನು.

ಈ ಪ್ರಕಾರವಾಗಿ ಅಹೋ ರಾತ್ರಿ ಸತತವಾಗಿ ಅನ್ನ ನೀರುಗಳ ಪರಿವೇ ಇಲ್ಲದೆ, ಕೇವಲ ಗಾಳಿಯನ್ನೇ ಸೇವಿಸುತ್ತ, ಬಾಹ್ಯ ಪ್ರಪಂಚದ ಸಂಪರ್ಕವಿಲ್ಲದೆ ನೂರು ವರುಷ ತಪಸ್ಸನ್ನು ಆಚರಿಸುತ್ತಿರಲು ಮೈಮೇಲೆ ಹುತ್ತ ಬೆಳೆಯಿತು. ಈ ತಪಸ್ಸಿನ ಜ್ವಾಲೆಯು ಭೂಲೋಕದಿಂದ ದೇವಲೋಕಕ್ಕೆ ಹಬ್ಬಿ, ದೇವರ್ಷಿಗಳ ಸಮೂಹವು ಬ್ರಹ್ಮನಿಗೆ ಮೊರೆಯಿಟ್ಟಿತು.

ಹಿರಣ್ಯಕಶಿಪುವಿನ ತಪಸ್ಸಿಗೆ ಮೆಚ್ಚಿ ಬ್ರಹ್ಮದೇವರು ಭೂಲೋಕಕ್ಕೆ ಬಂದು ಕೇಳಿದಾಗ, ಹಿರಣ್ಯ ಕಶಿಪು "ನೀನು ಸೃಷ್ಟಿಸಿದ ಯಾವ ಭೂತಗಳಿಂದಲೂ ಸಾವಿಲ್ಲದೆ ಅಮರನಾಗುವಂತೆ ವರ ನೀಡು. ನೀನು ಸೃಷ್ಟಿಸಿದ ಯಾವ ಭೂತಗಳಿಂದಲೂ ನನಗೆ ಮರಣ ಬರಬಾರದು. ಆವರಣದ ಒಳಗಾಗಲಿ, ಹೊರಗಾಗಲಿ, ಹಗಲಿನಲ್ಲಾಗಲಿ ರಾತ್ರಿಯಲ್ಲಾಗಲಿ, ಮಾನವ, ರಾಕ್ಷಸ, ಪ್ರಾಣಿ, ದೇವರಿಂದಾಗಲಿ ಮರಣ ಉಂಟಾಗಬಾರದು. ನಿನ್ನಿಂದಲೂ ಮರಣ ಬರಬಾರದು. ಶಸ್ತ್ರಾಸ್ತ್ರಗಳಿಂದ ನಾನು ಸಾಯಬಾರದು. ಯಾವುದೇ ನಿರ್ಜೀವ ವಸ್ತುಗಳಿಂದಲೂ ಮರಣ ಬರಬಾರದೆಂದು" ಕೇಳಿದನು. ಬ್ರಹ್ಮದೇವನು ತಥಾಸ್ತು ಹೇಳಿದನು. ಅಹಂಕಾರದಿಂದ ಬಲಿಷ್ಠನಾಗಿ ಎಲ್ಲರಿಗೂ ತೊಂದರೆ ಕೊಡುತ್ತಾ ಕಯಾಧುವಿನೊಂದಿಗೆ ವಿವಾಹವಾಗಿ, ನಾಲ್ಕು ಗಂಡು ಮಕ್ಕಳನ್ನು ಪಡೆದನು. ಆ ಮಕ್ಕಳಲ್ಲಿ ಹಿರಿಯ ಸುಪುತ್ರನೇ ಪ್ರಹ್ಲಾದನಾಗಿರುವನು. ಎಲ್ಲರಿಗೂ ಶುಕ್ರಾಚಾರ್ಯರಿಂದ ವಿದ್ಯಾಭ್ಯಾಸ ಮಾಡಿಸಲಾಯಿತು."[೯]

೦೮. ಜಿ. ವಿ. ಶಾಸ್ತ್ರಿ (ಸಂ) : ದಶಾವತಾರದ ಕಥೆಗಳು, ಪುಟ – ೩೧
೦೯. ಜಿ. ವಿ. ಶಾಸ್ತ್ರಿ (ಸಂ) : ದಶಾವತಾರದ ಕಥೆಗಳು, ಪುಟ – ೪೦

ಪ್ರಹ್ಲಾದನು ಹರಿಯ ಭಕ್ತನಾಗಿ, ಹರಿಯ ನಾಮಾಮೃತವನ್ನು ಪಠಿಸತೊಡಗಿದನು. "ತಮೋಗುಣದಿಂದ ಕೂಡಿದ ರಾಕ್ಷಸರ ಕುಲವನ್ನು ಗೌರವಿಸಬಾರದು. ನಿರ್ಮಲ ಜ್ಞಾನಸ್ವರೂಪನಾದ ಶ್ರೀ ಹರಿಯನ್ನು ಭಜಿಸಿ ಈ ಭವಸಾಗರವನ್ನು ದಾಟಿ ಮುಕ್ತಿ ಪಡೆಯಬೇಕು" ಎಂದು ಹೇಳಿದಾಗ, ಹಿರಣ್ಯಕಶಿಪುವಿಗೆ ಸಿಟ್ಟು ಬಂದು ಅವನನ್ನು ಕೊಲ್ಲಲು ಸಾಕಷ್ಟು ಪ್ರಯತ್ನ ಮಾಡುವನು. ಆದರೆ ವಿಷ್ಣು ಅವನನ್ನು ಸಂರಕ್ಷಿಸಿ ಪಾರುಮಾಡುವನು. ಎಲ್ಲ ಕಡೆಗಳಿಂದ ಅಜೇಯನಾಗಿ ಬದುಕಿ ಬಂದ ಪ್ರಹ್ಲಾದನನ್ನು ಈಗ ನಿನ್ನ ಹರಿಯನ್ನು ತೋರಿಸು ಎಂದು ಖಡ್ಗದಿಂದ ಕೊಲ್ಲಲು ಬಂದಾಗ ಕಂಬದಿಂದ ಶ್ರೀ ಹರಿಯು ನರಸಿಂಹ ಅವತಾರ ತಾಳಿ ಹೊರಗೆ ಬಂದನು. "ಸಿಂಹದ ತಲೆ, ಮಾನವಶರೀರ, ಕೋರೆ ಹಲ್ಲುಗಳು, ಶರೀರದ ಕೂದಲುಗಳು ಸೆಟೆದು ನಿಂತು, ಕೈಗಳಲ್ಲಿನ ನಖಗಳೇ ನರಸಿಂಹನಿಗೆ ಆಯುಧಗಳಾದವು. ಇವೆಲ್ಲವುಗಳನ್ನು ನೋಡಿ ಹೆದರದೇ ಹಿರಣ್ಯ ಕಶಿಪು ಗದೆಯಿಂದ ಹೊಡೆಯಲು ಹೋದಾಗ, ಬ್ರಹ್ಮನ ವರವನ್ನು ನೆನೆದು ಸಾಯಂಕಾಲದವರೆಗೆ ಯುದ್ಧಮಾಡಿ ಅವನನ್ನು ನಿಶ್ಶಕ್ತನನ್ನಾಗಿ ಮಾಡಿ ಸಾಯಂಕಾಲದಲ್ಲಿ ಅರಮನೆಯ ಹೊಸ್ತಿಲಿನಲ್ಲಿ ಅವನನ್ನು ತೊಡೆಯ ಮೇಲೆ ಇಟ್ಟುಕೊಂಡು, ಉದ್ದವಾದ ನಖಗಳಿಂದ ಉದರವನ್ನು ಬಗೆದು ಹಿರಣ್ಯಕಶಿಪುವನ್ನು ಕೊಂದು ಹಾಕಿದನು.[೧೦] ಈ ಅವತಾರಕ್ಕೆ ಸಂಬಂಧಿಸಿದಂತೆ ಗಂಜೀಫಾ ಚಿತ್ರಕಲೆಯಲ್ಲಿ ಅಧ್ಯಯನ ಮಾಡಲಾಗಿದೆ.

೪.೧. ನರಸಿಂಹ ಅವತಾರ

ಇಲ್ಲಿ ಗಂಜೀಫಾ ಕಲಾವಿದರು ಈ ಅವತಾರದ ಪ್ರಸಂಗವನ್ನು ತಿಳಿಯಪಡಿಸುವ ಗೋಜಿಗೆ ಹೋಗದೆ ಕೇವಲ ಸಾಂದರ್ಭಿಕವಾಗಿ ಆಟದ ಸಾಂಕೇತಿಕವಾಗಿ ನರಸಿಂಹ ದೇವತೆಯನ್ನು ಬಳಸಿಕೊಂಡಿದ್ದಾರೆ. ಇಲ್ಲಿ ಚಿತ್ರಿತಗೊಂಡಿರುವ ಐದು ರಾಶಿಗೆ ಸಂಬಂಧಿಸಿದ ಗಂಜೀಫಾ ಎಲೆಗಳು ವೃತ್ತಾಕಾರದಲ್ಲಿ ರಚನೆಗೊಂಡಿದ್ದು, ಐದು ರಾಶಿಯ ಎಲೆಯ ಚಿತ್ರಗಳಲ್ಲಿ ನರಸಿಂಹ ದೇವತೆಯು ಚತುರ್ಭುಜಧಾರಿಯಾಗಿದ್ದು, ಸ್ವರ್ಣಪೀಠವನ್ನು ಅಲಂಕರಿಸಿದ್ದಾನೆ. ಕ್ರಮವಾಗಿ ಸರ್ವಾಭರಣಗಳಿಂದ ಭೂಷಿತಗೊಂಡು ಸಾಂಪ್ರದಾಯಿಕ ಉಡುಗೆ ಧೋತಿ ಹಾಗೂ ಉತ್ತರೀಯವನ್ನು ಹೊಂದಿದ್ದಾನೆ. ದೇವತೆಯ ಮೈಬಣ್ಣವನ್ನು ಹಾಲು ಬಿಳುಪು ಬಣ್ಣದಿಂದ ಬಿಂಬಿಸಲಾಗಿದ್ದು ಮುಖದಲ್ಲಿ ದಿಟ್ಟ ಸ್ವರೂಪವನ್ನು ತರಲಾಗಿದೆ. ಪೀಠದ ಹಿನ್ನೆಲೆಯಲ್ಲಿ ಅಲಂಕಾರಿಕ ದೊಡ್ಡ ದಿಂಬನ್ನು ರಚಿಸಲಾಗಿದ್ದು, ಅದನ್ನು ಚಿತ್ರವಿನ್ಯಾಸಗಳಿಂದ ರಚಿಸಲಾಗಿದೆ. ಮೀನರಾಶಿಯಲ್ಲಿ ಎರಡು ಮೀನುಗಳ ಚಿತ್ರ, ಸಿಂಹರಾಶಿಯಲ್ಲಿ ಸಿಂಹದ ಚಿತ್ರ, ಕುಂಭರಾಶಿಯಲ್ಲಿ ಕುಂಭದ ಚಿತ್ರ, ಮಕರ ಚಿತ್ರದಲ್ಲಿ ಹಸಿರು ವರ್ಣದ ಮಕರದ ಚಿತ್ರ, ತುಲಾ ರಾಶಿಯ ಚಿತ್ರದಲ್ಲಿ ತಕ್ಕಡಿಯ ಚಿತ್ರವನ್ನು ಸಂಯೋಜಿಸಲಾಗಿದೆ. ಚಿತ್ರಗಳು ರೇಖಾಪ್ರಧಾನವಾಗಿ ರೂಪುಗೊಂಡಿದ್ದು, ಚಪ್ಪಟೆಯ ವರ್ಣವೈವಿಧ್ಯವನ್ನು ಹೊಂದಿದೆ. ಚಿತ್ರದ ಹಿನ್ನೆಲೆಯಲ್ಲಿ ಐದು ಎಲೆಗಳಿಗೆ ಕೆಂಪು ಹಾಗೂ ಕಪ್ಪು ಮಿಶ್ರಿತ ವರ್ಣವನ್ನು ಏಕರೂಪವಾಗಿ ಸಂಯೋಜಿಸಲಾಗಿದೆ. ಈ ಐದು ಗಂಜೀಫಾ ಎಲೆಗಳ ಚಿತ್ರಗಳಲ್ಲಿ ಕಪ್ಪು, ಕೆಂಪು, ನೀಲಿ, ಬಿಳಿ, ಹಳದಿ, ಹಸಿರುವರ್ಣಗಳ ಮಿಶ್ರಣವು ಕಂಡುಬರುತ್ತದೆ. ಇಲ್ಲಿ ಗಮನಿಸಬೇಕಾದುದು ಕುಂಭರಾಶಿಗೆ ಸಂಬಂಧಿಸಿದಂತೆ, ಪೀಠದ ಚಿತ್ರವನ್ನು ಬಹು ವಿಶೇಷವಾಗಿ ಚಿತ್ರಿಸಲಾಗಿದೆ. ಪೀಠದ ಪ್ರಭಾವಳಿಯು ಕಲಾನೈಪುಣ್ಯದಿಂದ ಕೂಡಿದೆ. ಒಟ್ಟಾರೆ ಈ ಐದು ಎಲೆಗಳು ಅಲಂಕಾರಿಕ ಸಾಂಕೇತಿಕ ಪ್ರಜ್ಞೆಯನ್ನು ತಿಳಿಸುತ್ತವೆ.

---

೧೦. ಗೋ. ಬ. ಸೂಳಿಭಾವಿ : ದಶಾವತಾರ, ಪುಟ – ೨೮

ಚಿತ್ರ ೦೪ ನರಸಿಂಹ ಅವತಾರ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಮಕರ ರಾಶಿ



ತುಲಾ ರಾಶಿ

ಚಿತ್ರ ೦೪



ನರಸಿಂಹ ರಾಜ



ಸೇನಾನಿ



ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಗಂಜೀಫಾ ಆಟದ ಇನ್ನೊಂದು ಪ್ರಕಾರದ ಎಲೆಗಳಲ್ಲಿ ಪ್ರಧಾನ ದೇವತೆಯನ್ನು ಪೀಠಾರೂಢವಾಗಿ ಹಾಗೂ ಅಶ್ವಾರೂಢವಾಗಿ ಕುಳಿತಿರುವ ಭಂಗಿಯಲ್ಲಿ ಚಿತ್ರಿಸಿ ಇನ್ನುಳಿದ ಹತ್ತು ಎಲೆಗಳಲ್ಲಿ ಸಿಂಹದ ಚಿತ್ರಗಳನ್ನು ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಹನ್ನೆರಡು ಎಲೆಗಳು ಕೆಂಪುಬಣ್ಣದಿಂದ ಸಂಯೋಜನೆಗೊಂಡಿದ್ದು, ಹಳದಿ ಬಣ್ಣದ ಸಿಂಹದ ಚಿತ್ರಗಳನ್ನು ರೇಖಾ ಪ್ರಧಾನವಾಗಿ ರಚನೆ ಮಾಡಲಾಗಿದೆ. ಸಂಯೋಜನಾತ್ಮಕ ದೃಷ್ಟಿಯಿಂದ ಸಿಂಹಗಳ ಚಿತ್ರಗಳನ್ನು ಒಂದೊಂದು ಎಲೆಗಳಲ್ಲಿ ಸ್ಥಳಾವಕಾಶಕ್ಕೆ ಧಕ್ಕೆಯಾಗದಂತೆ ಚಿತ್ರಿಸಲಾಗಿದೆ. ಪ್ರಧಾನ ಎಲೆಗಳಲ್ಲಿ ನರಸಿಂಹ ದೇವತೆಯು ಚತುರ್ಭುಜಧಾರಿಯಾಗಿದ್ದು ಸ್ವರ್ಣಾಭರಣಗಳಿಂದ ಅಲಂಕೃತಗೊಂಡಿರುವನು. ಗೌರವರ್ಣದ ಮೈ ಬಣ್ಣವನ್ನು ಸಂಯೋಜಿಸಿ ಭಾವನಾತ್ಮಕ ನಿರೂಪಣೆಯನ್ನು ತರಲಾಗಿದೆ. ಪೀಠದ ಅಲಂಕರಣ ಚಿತ್ರಾತ್ಮಕವಾಗಿ ಮೂಡಿಬಂದಿದೆ. ಕುದುರೆಯ ಚಿತ್ರವನ್ನು ಬಿಳಿವರ್ಣದಿಂದ ಸಂಯೋಜಿಸಿದ್ದು ನೀಲಿ ಬಣ್ಣದಿಂದ ನೆರಳು ಬೆಳಕನ್ನು ತರಲಾಗಿದೆ. ಎಲೆಗಳ ಅಂಚು ಚಿತ್ರವಿನ್ಯಾಸಗಳಿಂದ ಸಂಯೋಜಿತಗೊಂಡಿದೆ. ರೇಖೆ, ವರ್ಣ, ಆಕೃತಿಗಳ ಸಂಯೋಜನೆ, ಭಾವನಾನಿರೂಪಣೆಯೂ ವೈಶಿಷ್ಟ್ಯಪೂರ್ಣವಾಗಿ ಮೂಡಿಬಂದಿವೆ. ಈ ಚಿತ್ರಗಳಲ್ಲಿ ಬಿಳಿ, ಕೆಂಪು, ಕಪ್ಪು, ಹಳದಿ ಬಣ್ಣಗಳ ಮಿಶ್ರಣವು ಕಂಡುಬರುತ್ತದೆ.

೫. ವಾಮನ ಅವತಾರ

ಶ್ರೀಹರಿಭಕ್ತಿಯಿಂದ ಭಾಗವತ ಶ್ರೇಷ್ಠನಾದ ಪ್ರಹ್ಲಾದನು ಅನೇಕ ವರ್ಷಗಳವರೆಗೆ ಆಡಳಿತವನ್ನು ನಡೆಸುತ್ತಿದ್ದನು. ಪ್ರಹ್ಲಾದನ ಮಗನು ವಿರೋಚನ. ಅವನ ಮಗನೇ "ಬಲಿ". ಕುಲದ ಕ್ರಮದಂತೆ ಬಲಿಯು "ಬಲಿ ಚಕ್ರವರ್ತಿ" ಎಂದೇ ಖ್ಯಾತಿಯನ್ನು ಹೊಂದಿದನು.

ತಪಸ್ಸನ್ನು ಆಚರಿಸಿ ಬಲವನ್ನು ಪಡೆದು ದೇವ– ದಾನವರಿಗೆ ಯುದ್ಧವಾದಾಗ ಇಂದ್ರನು ಬಲಿಯನ್ನು ಸಂಹರಿಸಿ ಜಯಪಡೆದು ಅಮರಾವತಿಗೆ ಹಿಂದಿರುಗಿದನು. ಆಗ ಶುಕ್ರಾಚಾರ್ಯರು ಸಂಜೀವಿನಿಯಿಂದ ಬಲಿಯನ್ನು ಬದುಕಿಸಿದರು. ತನ್ನನ್ನು ಬದುಕಿಸಿದ ಗುರುಗಳಿಗೆ ಗೌರವ ತೋರುತ್ತ ಸಮಸ್ತ ದೈತ್ಯರನ್ನು ಮತ್ತೆ ಬದುಕಿಸಿಕೊಂಡು ಬಲಿಯು ವೈಭವದಿಂದ ರಾಜ್ಯವನ್ನಾಳಿಕೊಂಡಿದ್ದನು. ಶುಕ್ರಾಚಾರ್ಯರೇ ಬಲಿಯನ್ನು ಪಟ್ಟಾಭಿಷೇಕ ಮಾಡಿಸಿ ಚಕ್ರವರ್ತಿಯೆಂದು ಅನ್ವರ್ಥಗೊಳಿಸಿದರು. ಬಲಿಮಹಾರಾಜನಿಂದ ಅನೇಕ ಯಜ್ಞಗಳನ್ನು ಮಾಡಿಸಿದರು. ಅಗ್ನಿದೇವನು ವಿಶ್ವಜಿತ್ ಯಜ್ಞದಿಂದ ತೃಪ್ತನಾಗಿ ಬಲಿಚಕ್ರವರ್ತಿಗೆ ಬಂಗಾರದ ರಥವನ್ನು, ಇಂದ್ರನ ಕುದುರೆಗಳಿಗೆ ಸಮನಾದ ಕುದುರೆಗಳನ್ನು, ಸಿಂಹಧ್ವಜವನ್ನು ಹಾಗೂ ಧನುಸ್, ಬಾಣಗಳನ್ನು ಸಹ ನೀಡಿದನು.[೧೧]

ಯಜ್ಞವು ನಡೆದಾಗ ಅಲ್ಲಿಗೆ ಬಂದ ಬಲಿ ಮಹಾರಾಜನ ಅಜ್ಜ ಪ್ರಹ್ಲಾದನು ಬಾಡದ ಕಮಲಹಾರವನ್ನು ಮತ್ತು ಶುಕ್ರಾಚಾರ್ಯರು ಒಂದು ಶಂಖವನ್ನು ದಯಪಾಲಿಸಿದರು. ಹೀಗೆ ಸಮಸ್ತ ಸೈನ್ಯದೊಂದಿಗೆ ಹಿರಿಯರ, ಗುರುಗಳ ಆಶೀರ್ವಾದವನ್ನು ಸಹ ಪಡೆದು ಬಲಿಯು ದೇವಲೋಕದವರನ್ನು ಜಯಿಸಲು ದಂಡಯಾತ್ರೆಯನ್ನು ಆರಂಭಿಸಿದನು. ದೇವತೆಗಳನ್ನು ಸೋಲಿಸಿ ಇಂದ್ರಪಟ್ಟವನ್ನು ಅಲಂಕರಿಸಿ ಅಹಂಕಾರ, ದುಷ್ಟತನದಿಂದ ರಾಜ್ಯಭಾರ ಮಾಡಲಾರಂಭಿಸಿದನು.

ದೇವತೆಗಳು ಬೃಹಸ್ಪತಿಯೊಂದಿಗೆ ಕಶ್ಯಪರ ಪತ್ನಿ ಅದಿತಿದೇವಿಯ ಬಳಿಗೆ ಬಂದು ಬಲಿಯ ದುಷ್ಟಕಾರ್ಯಗಳನ್ನು ತಿಳಿಸಿ ತಮ್ಮನ್ನು ಕಾಪಾಡಲು ಕೇಳಿಕೊಂಡರು. ಆದಿತಿದೇವಿಯು ದುಷ್ಟನಿಗ್ರಹ

೧೧. ಗೋ. ಬ. ಸೂಳಿಬಾವಿ : ದಶಾವತಾರ, ಪುಟ – ೩೨

ಮತ್ತು ದೇವತೆಗಳ ರಕ್ಷಣೆಗೆ ಕಶ್ಯಪರ ಅನುಗ್ರಹ ಪಡೆದು, ವೈಷ್ಣವ ದೀಕ್ಷೆಯನ್ನು ಹೊಂದಿದಳು. ನಾರಾಯಣನನ್ನು ಕುರಿತು ಅದಿತಿ ತಪಸ್ಸನ್ನು ಆಚರಿಸಿದಳು. ಉಗ್ರ ತಪಸ್ಸಿಗೆ ಶ್ರೀಮನ್ನಾರಾಯಣನು ಅದಿತಿಯ ಎದುರಿಗೆ, ಪ್ರತ್ಯಕ್ಷನಾಗಿ ವರ ಕೇಳಲು ಹೇಳಿದಾಗ, "ತನ್ನ ಮಕ್ಕಳಾದ ದೇವತೆಗಳು ಅಧಿಕಾರದಿಂದ ಚ್ಯುತರಾಗಿ ಕಷ್ಟಪಡುವುದನ್ನು ದೂರಮಾಡಿ ನೀನೇ ನನ್ನ ಮಗನಾಗಿ ಜನಿಸಿ ಇಂದ್ರಾದಿ ದೇವತೆಗಳನ್ನು ರಕ್ಷಿಸು" ಎಂದು ಕೇಳಿಕೊಂಡಳು. ಕಾಲ ಕಳೆದಂತೆ ಅದತಿಯು ಗರ್ಭವತಿಯಾಗಿ ವೈಷ್ಣವತೇಜದಿಂದ ಬೆಳಗತೊಡಗಿದಳು. ಶುಭ ಮುಹೂರ್ತದಲ್ಲಿ ಅದಿತಿದೇವಿಯು ಗಂಡುಮಗುವಿಗೆ ಜನ್ಮ ಕೊಟ್ಟಳು. ಕಶ್ಯಪ ಮಹರ್ಷಿಗಳು ಮಗುವಿಗೆ "ವಾಮನ" ಎಂದು ಹೆಸರಿಟ್ಟರು.

ಸಾಕ್ಷಾತ್ ಸೂರ್ಯದೇವನೆ ಬಂದು ವಾಮನನಿಗೆ ಗಾಯತ್ರಿ ಮಂತ್ರದ ಉಪದೇಶ ಮಾಡಿದನು. ಬೃಹಸ್ಪತಿಯು ಬ್ರಹ್ಮ ಸೂತ್ರವನ್ನು, ಮರೀಚಿಯು ಪಲಾಶ ದಂಡವನ್ನು, ವಸಿಷ್ಠರು ಕಮಂಡಲವನ್ನು, ಕೃತವು ಛತ್ರವನ್ನು ಕೊಟ್ಟರೆ, ಬ್ರಹ್ಮನು ಕೃಷ್ಣಾಜಿನವನ್ನು ಅನುಗ್ರಹಿಸಿದನು. "ಭಗವತಿ ಭಿಕ್ಷಾಂ ದೇಹಿ" ಎಂದಾಗ ಪಾರ್ವತಿ ದೇವಿಯು ಭಿಕ್ಷೆ ನೀಡಿದಳು.[೧೨] ಮುಂದೆ ವಾಮನಮೂರ್ತಿಯು ಬಲಿಚಕ್ರವರ್ತಿಯ ಸ್ಥಳಕ್ಕೆ ಬಂದನು. ರಾಜರು ಋಷಿಗಳು ಎದ್ದು ನಿಂತು ಸ್ವಾಗತಿಸಿ, ಏನಾದರೂ ಬೇಕಾದಲ್ಲಿ ದಾನ ಕೊಡುವೆ ಎಂದು ಹೇಳಿದಾಗ, ವಾಮನ ನನ್ನ ಪಾದದಳತೆಯಲ್ಲಿ ಮೂರು ಪಾದ ಭೂಮಿಯನ್ನು ಮಾತ್ರ ಕೊಡು ಎಂದು ಕೇಳಿದನು. ಬಲಿಚಕ್ರವರ್ತಿಯು ವಾಮನ ಮೂರ್ತಿಯ ಕೈಯಲ್ಲಿ ಜಲವನ್ನು ಬಿಡುತ್ತಾ ನೀನು ಕೇಳಿರುವುದನ್ನು ಕೊಟ್ಟಿದ್ದೇನೆ, ಸ್ವೀಕರಿಸು ಎಂದನು.

ಮೊದಲನೆಯ ಪಾದವು ಬೆಳೆಯುತ್ತಾ ಭೂಮಂಡಲವನ್ನೇ ವ್ಯಾಪಿಸಿದರೆ, ಎರಡನೆಯ ಪಾದ ಅಂತರಿಕ್ಷವನ್ನು ವ್ಯಾಪಿಸಿತು. ವಾಮನ ತ್ರಿವಿಕ್ರಮನಾಗಿ ಬೆಳೆದರೆ, ಲೋಕವೇ ನಾಶವಾದೀತೆಂದು ಬ್ರಾಹ್ಮಣನ ಪಾದವನ್ನು ತೊಳೆದು ಪೂಜೆ ಮಾಡಿದನು. ಬಾಲ ಬ್ರಹ್ಮಚಾರಿಯೇ ನಿನ್ನ ಮೂರನೇ ಪಾದಕ್ಕೆ ಸ್ಥಳವಿಲ್ಲ. ಆದ್ದರಿಂದ ನನ್ನ ತಲೆಯ ಮೇಲೆಯೇ ಇಟ್ಟು ಬಿಡು ಎಂದು ಶಿರವನ್ನು ಮುಂದೆ ಮಾಡಿದನು. ಇವನ ಭಕ್ತಿ ಕಂಡು ವಾಮನನು ಬಲಿಚಕ್ರವರ್ತಿ, ನಿನ್ನ ಅಪೇಕ್ಷೆ ಏನು ಎಂದಾಗ, ನನ್ನ ಮನೆಯ ದ್ವಾರಪಾಲಕನಾಗಿ ಸದಾ ದರ್ಶನವನ್ನು ನೀಡುತ್ತಿರು ಎಂದು ಬೇಡಿಕೊಂಡನು. ಹೀಗೆ ಉಪೇಂದ್ರನೆನಿಸಿಕೊಂಡವನು ಬಲಿಯ ಮನೆಯ ಬಾಗಿಲು ಕಾಯುತ್ತಾ ಭಕ್ತರಿಗೆ ದರ್ಶನ ನೀಡಲಾರಂಭಿಸಿದನು. ಈ ಅವತಾರಕ್ಕೆ ಸಂಬಂಧಿಸಿದಂತೆ ಗಂಜೀಫಾ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೫.೧. ವಾಮನ ಅವತಾರ

ವಿಷ್ಣುವಿನ ಅವತಾರಗಳಲ್ಲಿ ಐದನೆಯ ಅವತಾರವೇ ವಾಮನ ಅವತಾರ. ಈ ಅವತಾರದಲ್ಲಿ ಪ್ರಹ್ಲಾದನ ಮೊಮ್ಮಗನಾದ ಬಲಿಚಕ್ರವರ್ತಿಯ ಅಹಂಕಾರವನ್ನು ಶಮನಗೊಳಿಸಲು ಸ್ವತಃ ಭಗವಾನ್ ವಿಷ್ಣುದೇವನು ವಾಮನನಾಗಿ ಅವತರಿಸುವ ಪ್ರಸಂಗವನ್ನು ಪುರಾಣಗಳಲ್ಲಿ ಕಾಣುತ್ತೇವೆ. ಇಲ್ಲಿ ಚಿತ್ರಣಗೊಂಡಿರುವ ರಾಶಿಗೆ ಸಂಬಂಧಿಸಿದ ಐದು ಗಂಜೀಫಾ ಎಲೆಗಳನ್ನು ಪ್ರಧಾನವಾಗಿ ವಾಮನದೇವತೆಯಿಂದ ಸಂಯೋಜಿಸಲಾಗಿದೆ. ವೃತ್ತಾಕಾರದ ಐದು ಗಂಜೀಫಾ ಎಲೆಗಳಲ್ಲಿ ವಾಮನದೇವನನ್ನು ಗೌರವರ್ಣದಿಂದ ಸಂಯೋಜಿಸಿದ್ದು, ಇಲ್ಲಿ ವಾಮನನನ್ನು ದ್ವಿಭುಜಧಾರಿಯಾಗಿ ಚಿತ್ರಿಸಲಾಗಿದೆ. ಒಂದು ಕೈಯಲ್ಲಿ ಕಮಂಡಲು ಇನ್ನೊಂದು ಕೈಯಲ್ಲಿ ಛತ್ರಿಯನ್ನು ಸಂಯೋಜಿಸಲಾಗಿದೆ. ಸಾಂಪ್ರದಾಯಿಕ ಧೋತಿ, ಚಿತ್ರಮಯ ಉತ್ತರೀಯವನ್ನು ಸಂಯೋಜಸಿ ಕೆಂಪು ಹಾಗೂ ಕಂದು

೧೨. ಜ. ವಿ. ಶಾಸ್ತ್ರಿ (ಸಂ) : ದಶಾವತಾರದ ಕಥೆಗಳು, ಪುಟ – ೪೪

ಚಿತ್ರ ೦೫ ವಾಮನ ಅವತಾರ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಮಕರ ರಾಶಿ



ತುಲಾ ರಾಶಿ

ಸಂಗ್ರಹ : ಮಂಜುಷಾ ವಸ್ತುಸಂಗ್ರಹಾಲಯ ಧರ್ಮಸ್ಥಳ

ಚಿತ್ರ ೦೫



ವಮನ ರಾಜ

ಸೇನಾನಿ

ಹಳದಿ ಬಣ್ಣವನ್ನು ತುಂಬಲಾಗಿದೆ. ದೇವತೆಯ ಹಿನ್ನೆಲೆಗೆ ಚಿತ್ರಮಯ ದಿಂಬನ್ನು ರಚಿಸಿದ್ದು, ವೈವಿಧ್ಯಮಯ ವರ್ಣವನ್ನು ಸಂಯೋಜನೆ ಮಾಡಲಾಗಿದೆ. ದೇವತೆಯ ಕೆಳಭಾಗದ ಪಟ್ಟಿಕೆಯಲ್ಲಿ ಮೀನರಾಶಿಯ ಚಿತ್ರ, ಸಿಂಹರಾಶಿಯ ಚಿತ್ರ, ಕುಂಭರಾಶಿಯ ಚಿತ್ರ, ಮಕರರಾಶಿಯ ಚಿತ್ರ ಹಾಗೂ ತುಲಾರಾಶಿಯ ಚಿತ್ರವನ್ನು ಬರೆಯಲಾಗಿದೆ. ಮೀನು, ಸಿಂಹ ಹಾಗೂ ಕುಂಭಗಳನ್ನು ಬಿಳಿಬಣ್ಣದಿಂದ ರಚಿಸಲಾಗಿದೆ. ಮಕರದ ಚಿತ್ರವನ್ನು ಹಸಿರುವರ್ಣದಿಂದ, ತಕ್ಕಡಿಯ ಚಿತ್ರವನ್ನು ಕಂದು ಬಣ್ಣದಿಂದ ಚಿತ್ರಿಸಿದೆ. ಚಿತ್ರಗಳ ಹಿನ್ನೆಲೆಯಲ್ಲಿ ಕಂದು, ಹಸಿರು ಬಣ್ಣವನ್ನು ಚಪ್ಪಟೆಯಾಗಿ ಸಂಯೋಜಿಸಲಾಗಿದೆ. ಎಲೆಗಳ ಅಂಚು ಕೆಂಪುದಿಂದ ಕೂಡಿದ್ದು ಹೂವಿನ ಚಿತ್ರ ವಿನ್ಯಾಸಗಳನ್ನು ಸಂಯೋಜಿಸಲಾಗಿದೆ. ಈ ಐದು ಚಿತ್ರಗಳ ರೇಖಾ, ವರ್ಣ, ಅಲಂಕಾರ ಹಾಗೂ ಆಕೃತಿಗಳ ಸಂಯೋಜನೆ ಆಕರ್ಷಕವಾಗಿ ಮೂಡಿಬಂದಿವೆ. ಐದು ರಾಶಿಯ ಚಿತ್ರಗಳ ಹಿನ್ನೆಲೆಯಲ್ಲಿ ಕೆಂಪುಬಣ್ಣವನ್ನು ತುಂಬಿ ಚಿತ್ರಗಳು ಸ್ಪಷ್ಟವಾಗಿ ಕಾಣುವಂತೆ ಕಲಾವಿದರು ಪ್ರಯತ್ನಿಸಿದ್ದಾರೆ.

ವಾಮನ ಅವತಾರದ ಇನ್ನೊಂದು ಬಗೆಯ ಗಂಜೀಫಾ ಎಲೆಯ ಚಿತ್ರಗಳಲ್ಲಿ ಪ್ರಧಾನ ದೇವತೆಯಾದ ವಾಮನನನ್ನು ಹಾಗೂ ಕುಂಡಲಗಳನ್ನು ಹನ್ನೆರಡು ಎಲೆಗಳಲ್ಲಿ ಸಂಯೋಜಿಸಲಾಗಿದೆ. ಎರಡು ಎಲೆಗಳಲ್ಲಿ ವಾಮನದೇವನನ್ನು ಪೀಠದ ಮೇಲೆ ಹಾಗೂ ಅಶ್ವಾರೂಢನಾಗಿ ಚಿತ್ರಿಸಿದ್ದಾರೆ. ವಾಮನದೇವನನ್ನು ಗೌರವರ್ಣದಿಂದ ಸಂಯೋಜಿಸಿದ್ದು, ಒಂದು ಕೈಯಲ್ಲಿ ಕಮಂಡಲ, ಇನ್ನೊಂದು ಕೈಯಲ್ಲಿ ಛತ್ರಿಯನ್ನು ನೀಡಲಾಗಿದೆ. ಪೀಠವನ್ನು ಅಲಂಕಾರಿಕ ನಕ್ಷೆಗಳಿಂದ ರಚನೆ ಮಾಡಲಾಗಿದ್ದು, ಕೆಂಪು, ಹಳದಿ ಹಾಗೂ ತಿಳಿ ನೀಲಿಬಣ್ಣದಿಂದ ಸಂಯೋಜಿಸಲಾಗಿದೆ. ಇನ್ನೊಂದು ಎಲೆಯಲ್ಲಿ ಅಶ್ವವನ್ನು ಬಿಳಿವರ್ಣದಿಂದ ರಚಿಸಿ ನೀಲಿವರ್ಣದ ಛಾಯೆಯನ್ನು ಕೊಡಲಾಗಿದೆ. ಉಳಿದಂತೆ ಹತ್ತು ಗಂಜೀಫಾ ಎಲೆಗಳಲ್ಲಿ ಒಂದೊಂದು ಎಲೆಗಳಲ್ಲಿ ಒಂದರಿಂದ ಹತ್ತು ಸಂಖ್ಯೆಗಳ ಕಮಂಡಲಗಳ ಚಿತ್ರಗಳನ್ನು ರಚಿಸಲಾಗಿದೆ. ವೃತ್ತಾಕಾರದ ಎಲೆಗಳಲ್ಲಿ ವಿಶಿಷ್ಟ ರೀತಿಯಲ್ಲಿ ಸಂಯೋಜಿಸಲಾಗಿದ್ದು, ಕಮಂಡಲಗಳ ಚಿತ್ರಗಳನ್ನು ಸಂಖ್ಯೆಗಳಿಗನುಗುಣವಾಗಿ ಅವುಗಳ ಗಾತ್ರಗಳನ್ನು ಹೆಚ್ಚು ಕಡಿಮೆ ಮಾಡಲಾಗಿದೆ. ಎಲೆಗಳ ಹಿನ್ನೆಲೆಯನ್ನು ಕಪ್ಪು ಬಣ್ಣದಿಂದ ಸಂಯೋಜಿಸಿದ್ದು, ಅಂಚನ್ನು ಹಳದಿ, ಬಿಳಿಬಣ್ಣಗಳ ಚಿತ್ರವಿನ್ಯಾಸಗಳಿಂದ ರಚನೆ ಮಾಡಲಾಗಿದೆ.

೬. ಪರಶುರಾಮ ಅವತಾರ

ಕುಶಾಂಬು ರಾಜನಿಗೆ ಗಾಧಿರಾಜನೆಂಬ ಮಗ ಹಾಗೂ ಸತ್ಯವತಿಯೆಂಬ ಮಗಳು ಹುಟ್ಟಿದರು. ಅವಳನ್ನು ಋಚೀಕನೆಂಬ ಋಷಿವರನು ವಿವಾಹ ಮಾಡಿಕೊಂಡನು. ಇವರ ಮಗನೆ ಜಮದಗ್ನಿ. ಇವನು ರೇಣುವಿನ ಮಗಳಾದ ರೇಣುಕೆಯನ್ನು ವಿವಾಹವಾದನು. ಇವರ ಕೊನೆಯ ಪುತ್ರನಾದ ಪರಶುರಾಮನು ಸಾಕ್ಷಾತ್ ಶ್ರೀಮನ್ನಾರಾಯಣನ ಅವತಾರ.

ಹೈಹಂಯ ವಂಶದ ಕೃತವೀರ್ಯ ರಾಜನ ಮಗನೇ ಕಾರ್ತವೀರಹಂಯಾರ್ಜುನ (ಕಾರ್ತವೀರ್ಯಾರ್ಜುನ) ಇವನು ಶ್ರೀಮನ್ನಾರಾಯಣನ ಒಂದಂಶದಿಂದ ಜನಿಸಿದ ದತ್ತಾತ್ರೇಯನ ಭಕ್ತನು. ದತ್ತಾತ್ರೇಯ ದೇವರು ಭಕ್ತನಾದ ಕಾರ್ತವೀರ್ಯಾರ್ಜುನನಿಗೆ ಸಾವಿರ ತೋಳುಗಳ ಬಲವನ್ನು, ಅಜೇಯ ಪರಾಕ್ರಮವನ್ನು, ಅಸಾಮಾನ್ಯವಾದ ಬುದ್ಧಿಬಲ, ಇಂದ್ರಿಯ ಬಲ, ದೇಹಬಲ, ತೇಜಸ್ಸು ಮತ್ತು ಕೀರ್ತಿಯನ್ನು ದಯಪಾಲಿಸಿದ್ದನು.

ಒಂದು ದಿನ ಕಾರ್ತವೀರ್ಯಾರ್ಜುನ ತನ್ನ ಅರಮನೆಯ ಸುಂದರಿಯರೊಡನೆ ಜಲಕ್ರೀಡೆ ಮಾಡಲು ರೇವಾನದಿಗೆ ಬಂದು, ತನ್ನ ಸಾವಿರ ತೋಳುಗಳಿಂದ ನೀರನ್ನು ತಡೆದು ನಿಲ್ಲಿಸಿದನು. ಇದೇ ಕಾರಣದಿಂದ ಲಂಕಾಪತಿ ರಾವಣನು ಸೈನ್ಯ ಸಮೇತ ದಾಳಿಯಿಟ್ಟಾಗ ಕಾರ್ತವೀರ್ಯಾರ್ಜುನನು ರಾವಣನನ್ನು ಸಾವಿರ ಬಾಹುಗಳಿಂದ ಸೋಲಿಸಿ ಬಂಧಿಸಿ ಅರಮನೆಗೆ ತಂದು ಬಂಧನದಲ್ಲಿಟ್ಟನು. ರಾವಣನ ತಂದೆ ಪುಲಸ್ತ್ಯರು ವಿಷಯ ತಿಳಿದು, ವಿನಂತಿಯ ಮೇರೆಗೆ ಬಿಡಿಸಿಕೊಂಡು ಹೋದರು. ಇದರಿಂದ ಕಾರ್ತವೀರ್ಯಾರ್ಜುನನಿಗೆ ಗರ್ವಬಂದು, ಪರಿವಾರ ಮತ್ತು ಸುಂದರಿಯರೊಂದಿಗೆ ಅರಮನೆಗೆ ತೆರಳುವಾಗ ಜಮದಗ್ನಿಯ ಆಶ್ರಮಕ್ಕೆ ಬಂದನು. ಋಷಿಯು ತನ್ನ ಬಳಿಯಿರುವ ಕಾಮದೇನುವಿನ ದಯೆಯಿಂದ ಆಸನಕೊಟ್ಟು ಕುಳ್ಳಿರಿಸಿ ಎಲ್ಲರಿಗೂ ಮೃಷ್ಟಾನ್ನ ಭೋಜನ ಮಾಡಿಸಿ, ವಿಶ್ರಾಂತಿ ಪಡೆಯಲು ವ್ಯವಸ್ಥೆ ಮಾಡಿಸಿದರು. ಚಕ್ರವರ್ತಿಯ ಮನಸ್ಸಿನಲ್ಲಿ ಅಸೂಯೆ ಹುಟ್ಟಿ, ಹೋಗುವಾಗ ಬಲಾತ್ಕಾರದಿಂದ ಆ ಹಸುವನ್ನು ಅಪಹರಿಸಿಕೊಂಡು ಮಾಹಿಷ್ಮತೀ ನಗರಕ್ಕೆ ಬಂದು ತಲುಪಿದನು.

ನಂತರದಲ್ಲಿ ಪರಶುರಾಮನಿಗೆ ವಿಷಯ ತಿಳಿದು ಮಹಿಷ್ಮತೀಪುರಿಯನ್ನು ಮುತ್ತಿಕ್ಕಿ ಗಜ ಅಶ್ವಗಳು, ಕಾಲಾಳುಗಳೆಲ್ಲಾ ಅವನ ಕೊಡಲಿಪೆಟ್ಟಿಗೆ ಹತವಾದವು. ರಾಜಪರಿವಾರವು ರಾಮನ ಕೋಪಾಗ್ನಿಗೆ ಆಹುತಿಗೊಂಡಿತು. ರಕ್ತದ ನದಿಗಳು ಹರಿದವು. ಸೈನಿಕರ ಕೈಕಾಲುಗಳು ತುಂಡು ತುಂಡಾಗಿ ರಕ್ತದ ನದಿಗಳಲ್ಲಿ ತೇಲಿ ಹೋದವು. ರಥಗಳು ಮುರಿದು ಪುಡಿ ಪುಡಿಯಾದವು. ಶಿಲೆಗಳು ಒಂದು ಕಡೆ ಬಿದ್ದರೆ ರಥ ಮತ್ತೊಂದು ಕಡೆ ಬಿದ್ದು ಹೊರಳಾಡುತ್ತಿದ್ದವು. ಕೊನೆಗೆ ಕಾರ್ತವೀರ್ಯಾರ್ಜುನನು ಪರಶುರಾಮನನ್ನು ಎದುರಿಸಲು ಮುಂದಾದನು. ಪರಶುರಾಮನು ತನ್ನ ತೀಕ್ಷ್ಣವಾದ ಕೊಡಲಿಯಿಂದ ಕಾರ್ತವೀರ್ಯಾರ್ಜುನನ ಒಂದು ಭುಜವನ್ನು ಕತ್ತರಿಸುತ್ತ ಅವನ ಸಾವಿರ ಜನ ಮಕ್ಕಳು ಸೋಲನ್ನು ಒಪ್ಪಿ ಕಾಮಧೇನುವನ್ನು ಒಪ್ಪಿಸಿ ಕ್ಷಮಿಸಬೇಕೆಂದು ಪ್ರಾರ್ಥಿಸಿದರು. ಕಾಮಧೇನುವನ್ನು ತಂದು ತನ್ನ ತಂದೆಯಾದ ಜಮದಗ್ನಿಗೆ ಒಪ್ಪಿಸಿ ಸಾಷ್ಟಾಂಗವೆರಗಿದನು.

ಆದರೆ ತಂದೆ, ನೊಂದು ಎಂತಹ ಪಾಪ ಕಾರ್ಯವು ನನ್ನಿಂದ ಎಸಗಿತಲ್ಲ ಸರ್ವದೇವಾಂಶಕುಮಾರ, ನಾವು ಬ್ರಾಹ್ಮಣರಲ್ಲವೆ? ನಮ್ಮ ಕರ್ತವ್ಯವೇನು? ಕ್ಷಮಾಗುಣವಿದ್ದು ಕ್ಷಮಿಸಬೇಕಾಗಿತ್ತು. ಪಟ್ಟಾಭಿಷಿಕ್ತನಾದ ರಾಜನ ವಧೆ ಬ್ರಹ್ಮಹತ್ಯಾ ಪಾಪಕ್ಕಿಂತಲೂ ಮಿಗಿಲಾಗಿದೆ. ಆದ್ದರಿಂದ ನೀನು ಒಂದು ವರ್ಷ ಪಾಪ ಕಳೆದುಕೊಳ್ಳುವುದಕ್ಕಾಗಿ ತೀರ್ಥಗಳನ್ನು ಸಂದರ್ಶಿಸಿ ಅವುಗಳಲ್ಲಿ ಪವಿತ್ರನಾಗು ಎಂದು ಆಜ್ಞೆಯಿತ್ತನು.

ಒಂದು ದಿನ ಜಮದಗ್ನಿ ಋಷಿಗಳು ಹೋಮ ಹವನಾದಿ ಕಾರ್ಯಗಳನ್ನು ಮಾಡುವುದಕ್ಕಾಗಿ ರೇಣುಕಾದೇವಿಗೆ ಗಂಗಾಜಲ ತಂದು ಕೊಡಲು ತಿಳಿಸಿದನು. ಆದರೆ ಗಂಗಾನದಿಯಲ್ಲಿ ದೇವಲೋಕದ ಚಿತ್ರರಥನೆಂಬ ಗಂಧರ್ವನು ತನ್ನ ಸ್ತ್ರೀಯರೊಂದಿಗೆ ಜಲವಿಹಾರದಲ್ಲಿ ತನ್ಮಯನಾಗಿದ್ದನು. ರೇಣುಕಾದೇವಿ ಈ ದೃಶ್ಯವನ್ನು ನೋಡಿ, ಗಂಧರ್ವನ ಮೋಹಕವಾದ ಅಂಗಾಂಗಗಳನ್ನು ನೋಡುತ್ತ ಮೋಹಿತಳಾಗಿ ವೇಳೆ ಕಳೆದದ್ದು ಜ್ಞಾಪಕ್ಕೆ ಬರಲಿಲ್ಲ. ಬಹಳ ಹೊತ್ತಿನ ನಂತರ ಭಯಗ್ರಸ್ಥಳಾಗಿ ಗಂಗಾಜಲವನ್ನು ಅವರ ಮುಂದೆ ಇಟ್ಟು ಕರಜೋಡಿಸಿ ಶಿರಬಾಗಿ ನಿಂತಳು. ಆದರೆ ಋಷಿಗಳು ಸಂಶಯದಿಂದ ಯೋಚಿಸುತ್ತಾ ಜ್ಞಾನದೃಷ್ಟಿಯಿಂದ ನೋಡಿದರು. ಎಲ್ಲವನ್ನು ತಿಳಿದುಕೊಂಡು ಆಕ್ರೋಶವಾಗಿ "ಪುತ್ರರೇ, ಇವಳನ್ನು ಸಂಹರಿಸಿರಿ" ಎಂದು ಆಜ್ಞೆ ಇತ್ತನು.

ಹಿರಿಯ ಪುತ್ರನಾಗಲೀ ಇನ್ನುಳಿದವರಾಗಲಿ ತಾಯಿಯನ್ನು ಕೊಲ್ಲಲು ಯಾರು ತಾನೆ ಒಪ್ಪುವರು? ಕೋಪಾವಿಷ್ಟನಾದ ಮುನಿಯು "ಎಲೋ ರಾಮಾ ಬೇಗ ಬಾ, ನಿನ್ನ ತಾಯಿಯನ್ನು, ನನ್ನ ಆಜ್ಞೆಯನ್ನು ಮೀರಿದ ನಿನ್ನ ಸಹೋದರರನ್ನು ಈಗಲೇ ನನ್ನೆದುರಿಗೆ ಕೊಲ್ಲಬೇಕು" ಎಂದು ಆಜ್ಞೆ ಮಾಡಿದನು. ಋಷಿಯ ತಪೋಬಲ ಹಾಗೂ ಪ್ರಭಾವವನ್ನರಿತ ಸರ್ವಜ್ಞ ಶಿಖಾಮಣಿಯಾದ ಶ್ರೀ ಹರಿಯೇ ಅವತಾರವನ್ನು ತಾಳಿದ ಭಾಗ್ಯವನ್ನು ತಂದೆಯ ಆಜ್ಞೆಯನ್ನು ಮಾನ್ಯ ಮಾಡಿ, ಕ್ಷಣದಲ್ಲಿ ಮಾತೆಯನ್ನು ಮತ್ತು ಸಹೋದರರನ್ನು ಸಂಹರಿಸಿದನು. ಹೀಗೆ ಲೋಕವು ತಂದೆಯ ಆಜ್ಞೆಯನ್ನು ಪಾಲಿಸುವುದರಲ್ಲಿ ದೀಕ್ಷಾಬದ್ಧವಾಗಲಿ ಎನ್ನುವುದು ಕಂಡು ಬರುತ್ತದೆ.

ಇದನ್ನು ಕಂಡು ಜಮದಗ್ನಿ, ಋಷಿ ಸಂತೋಷಗೊಂಡು ರಾಮಾ ಧನ್ಯ, ನಾನು ಸುಪ್ರಸನ್ನನಾದೆನು. ನಿನ್ನ ಈ ಕಾರ್ಯಕ್ಕೆ ಏನು ವರ ಬೇಕು? ಬೇಡು ನಾನು ನೀಡುತ್ತೇನೆ ಎಂದನು. ಅದಕ್ಕೆ ಪರಶುರಾಮ ತಂದೆಯೇ ನನಗೇನೂ ಬೇಡ. ಈ ನನ್ನ ತಾಯಿ ಮತ್ತು ಅಣ್ಣಂದಿರು ಬದುಕಬೇಕು ಮತ್ತು ನನ್ನ ಕೃತ್ಯವೂ ಸಂಪೂರ್ಣವಾಗಿ ಮರೆತು ಹೋಗಬೇಕು. ಅಲ್ಲದೆ ನನ್ನ ತಾಯಿಯನ್ನು ಸಂಪೂರ್ಣವಾಗಿ ಕ್ಷಮಿಸಬೇಕು ಎಂದನು.

ಋಷಿಗಳು "ತಥಾಸ್ತು" ಎಂದಾಗ ರೇಣುಕಾದೇವಿಯು ತನ್ನ ಎಲ್ಲ ಮಕ್ಕಳೊಂದಿಗೆ ನಿದ್ರೆಯಿಂದ ಎದ್ದವಳಂತೆ ಎದ್ದಳು. ಜಮದಗ್ನಿಋಷಿಯು ಪತ್ನಿಯನ್ನು ಮತ್ತು ಮಕ್ಕಳನ್ನು ಪ್ರೀತಿಯಿಂದ ಕೂಡಿಕೊಂಡು ಇರತೊಡಗಿದನು.

ಕಾರ್ತ್ಯವಿರ್ಯ್ಯಾರ್ಜುನನ ಮರಣದ ನಂತರ ಅವರ ಸಾವಿರಾರು ಮಕ್ಕಳು ಪರಶುರಾಮನ ಮೇಲೆ ಸೇಡಿ ತೀರಿಸಿಕೊಳ್ಳುವುದನ್ನು ಯೋಚಿಸತೊಡಗಿದರು. ಯುದ್ಧದಲ್ಲಿ ಸೋಲಿಸಬೇಕೆಂದು ನಿರ್ಧಾರ ತೆಗೆದುಕೊಂಡು ಆಶ್ರಮದ ಸುತ್ತಲೂ ಗಿಡ ಮರಗಳಲ್ಲಿ ಅಡಗಿಕೊಂಡು ಕುಳಿತರು. ಒಂದು ದಿನ ಪರಶುರಾಮನು ತನ್ನ ಎಲ್ಲ ಅಣ್ಣಂದಿರೊಂದಿಗೆ ಕಟ್ಟಿಗೆ, ಫಲಗಳ ಸಂಚಯಕ್ಕಾಗಿ ಹೊರಗಡೆ ಹೋದಾಗ, ರೇಣುಕಾದೇವಿಯ ಎದುರಿನಲ್ಲಿಯೇ ಜಮದಗ್ನಿಋಷಿಯ ಶಿರಚ್ಛೇದ ಮಾಡಿ ರುಂಡವನ್ನು ತಮ್ಮ ನಗರಕ್ಕೆ ತೆಗೆದುಕೊಂಡು ಹೋದರು. ರೇಣುಕಾದೇವಿಯ ರೋದನ ಕೇಳಿ ಪರಶುರಾಮನು ಓಡಿಬಂದು ದೃಶ್ಯ ನೋಡಿ ಸಾವರಿಸಿಕೊಂಡು, ಆಶ್ರಮದ ವಟುಗಳಿಂದ ವಿಷಯ ತಿಳಿದು, ತಾನು ಬರುವವರೆಗೂ ತಂದೆಯ ದಡವನ್ನು ಕಾಯಬೇಕೆಂದು ಅಣ್ಣಂದಿರಿಗೆ ತಿಳಿಸಿ ಕೊಡಲಿ ತೆಗೆದುಕೊಂಡು ಹೋದನು. ಕಾರ್ತವೀರ್ಯ್ಯಾರ್ಜುನನ ಮಕ್ಕಳನ್ನು ಎದುರಿಸಿ, ಅವರ ರುಂಡಗಳನ್ನು ಚೆಂಡಾಡಿ, ರಕ್ತದ ನದಿಯನ್ನೇ ಹರಿಸಿ ತನ್ನ ತಂದೆಗೆ ಅಲ್ಲಿಯೇ ತರ್ಪಣವನ್ನು ಬಿಟ್ಟನು.

ಅಲ್ಲಿರುವ ತಂದೆಯ ರುಂಡವನ್ನು ತಂದು ದಡದೊಡನೆ ಸೇರಿಸಿ ಅಗ್ನಿಸಂಸ್ಕಾರ ಮಾಡಿದನು. ಆದರೂ ಪರಶುರಾಮ ಶಾಂತನಾಗಲಿಲ್ಲ. ಕ್ಷತ್ರಿಯಬೀಜವೇ ಭೂಮಿಯ ಮೇಲೆ ಇರಬಾರದೆಂದು ನಿರ್ಧಾರ ಮಾಡುತ್ತ, ಕ್ಷತ್ರಿಯರನ್ನು ಸಂಹರಿಸುತ್ತ ಸಾಗಿದನು. ನಂತರದಲ್ಲಿ ಮಹೇಂದ್ರ ಪರ್ವತದಲ್ಲಿ ಶಾಂತನಾಗಿಯೂ ನಿರ್ವೈರನಾಗಿಯೂ ತಪಸ್ಸನ್ನು ಆಚರಿಸುತ್ತಾ ಹೆಸರುವಾಸಿಯಾದನು. ಮಹಾನ್ ತಪಸ್ವಿಯಾದ ವಿಷ್ಣುವಿನ ದಶಾವತಾರದಲ್ಲಿ ಆರನೇ ಅವತಾರದ ಚಿತ್ರಗಳನ್ನು ಅಧ್ಯಯನ ಮಾಡಲಾಗಿದೆ.

೬.೧. ಪರಶುರಾಮ ಅವತಾರ

ವಿಷ್ಣುವಿನ ಅವತಾರಗಳಲ್ಲಿ ಆರನೇ ಅವತಾರ ಪರಶುರಾಮ ಅವತಾರ. ಇಲ್ಲಿ ರಚನೆಗೊಂಡಿರುವ

ಚಿತ್ರ ೦೬ ಪರಶುರಾಮ ಅವತಾರ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಮಕರ ರಾಶಿ



ತುಲಾ ರಾಶಿ

ಚಿತ್ರ ೦೬



ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಮೀನರಾಶಿ, ಸಿಂಹರಾಶಿ, ಕುಂಭರಾಶಿ, ಮಕರರಾಶಿ ಹಾಗೂ ತುಲಾರಾಶಿಗೆ ಸಂಬಂಧಿಸಿದ ಐದು ವೃತ್ತಾಕಾರದ ಗಂಜೀಫಾ ಎಲೆಗಳ ಚಿತ್ರಗಳಲ್ಲಿ ದ್ವಿಭುಜಧಾರಿಯಾದ ಪರಶುರಾಮನ ಚಿತ್ರವನ್ನು ಪ್ರಧಾನವಾಗಿ ಚಿತ್ರಿಸಿದ್ದಾರೆ. ಈ ರಾಶಿ ಚಿತ್ರಗಳಲ್ಲಿ ಪರಶುರಾಮನನ್ನು ಬಿಳಿ ಬಣ್ಣದಿಂದ ಸಂಯೋಜಿಸಲಾಗಿದ್ದು, ಕೆಂಪು ವರ್ಣದ ಛಾಯೆಯನ್ನು ಕೊಡಲಾಗಿದೆ. ದೇವತೆಯು ಕಿರೀಟಧಾರಿಯಾಗಿದ್ದು, ಧೋತಿ, ಉತ್ತರೀಯ, ಕಂಠಾಭರಣ, ಭುಜಕೀರ್ತಿ, ಕಂಕಣಾಭರಣ, ಅಲಂಕೃತ ಕೊಡಲಿಯನ್ನು ಹೊಂದಿದ್ದಾನೆ. ದೇವತೆಯ ಹಿನ್ನೆಲೆಯಲ್ಲಿ ಚಿತ್ರಾಲಂಕೃತ ದಿಂಬನ್ನು ರಚಿಸಲಾಗಿದೆ. ಇಲ್ಲಿ ದಿಂಬುಗಳ ವರ್ಣವಿನ್ಯಾಸ ಹಾಗೂ ಚಿತ್ರ ವಿನ್ಯಾಸದಲ್ಲಿ ಅಲ್ಪ ಸ್ವಲ್ಪ ವೈಪರೀತ್ಯಗಳನ್ನು ಕಾಣಬಹುದಾಗಿದೆ. ಮುಖ್ಯ ದೇವತೆಯ ಕೆಳಭಾಗದ ಜ್ಯಾಮಿತಿಕ ಚಿತ್ರಪಟ್ಟಿಕೆಯಲ್ಲಿ ಮೀನ ರಾಶಿಗೆ ಸಂಬಂಧಿಸಿದ ಎಲೆಯಲ್ಲಿ ಮೀನುಗಳ ಚಿತ್ರ, ಸಿಂಹರಾಶಿಗೆ ಸಂಬಂಧಿಸಿದ ಎಲೆಯಲ್ಲಿ ಸಿಂಹದ ಚಿತ್ರ, ಕುಂಭರಾಶಿಗೆ ಸಂಬಂಧಿಸಿದ ಎಲೆಯಲ್ಲಿ ಕುಂಭದ ಚಿತ್ರ, ಮಕರ ರಾಶಿಗೆ ಸಂಬಂಧಿಸಿದ ಎಲೆಯಲ್ಲಿ ತಕ್ಕಡಿಯ ಚಿತ್ರವನ್ನು ಚಿತ್ರಿಸಲಾಗಿದೆ. ಇವು ರೇಖಾಪ್ರಧಾನವಾಗಿದ್ದು ಚಲನಾತ್ಮಕವಾಗಿ ನಿರೂಪಣೆಗೊಂಡಿವೆ. ಎಲೆಗಳು ಸಂಪೂರ್ಣ ಕೆಂಪುಬಣ್ಣದಿಂದ ಕೂಡಿದ್ದು, ಕಪ್ಪು ಹಾಗೂ ಬಿಳಿ ಬಣ್ಣಗಳ ನಕ್ಷಾ ವಿನ್ಯಾಸದ ಅಂಚನ್ನು ಹೊಂದಿವೆ. ಒಟ್ಟು ಈ ಐದು ಚಿತ್ರಗಳು ಸಾಂಕೇತಿಕವಾಗಿ ಮೂಡಿ ಬಂದದ್ದು, ರೇಖೆ, ವರ್ಣ ಹಾಗೂ ಆಕೃತಿಗಳ ಸಂಯೋಜನೆಯು ಉತ್ತಮವಾಗಿ ಮೂಡಿಬಂದಿದೆ.

ಇದೇ ಅವತಾರಕ್ಕೆ ಸಂಬಂಧಿಸಿದಂತೆ ಇನ್ನೊಂದು ಬಗೆಯ ಆಟದ ಎಲೆಯಲ್ಲಿ ಎರಡು ಎಲೆಗಳು ಪ್ರಧಾನ ದೇವತೆಯಿಂದ ಕೂಡಿದ್ದು, ಇನ್ನುಳಿದ ಹತ್ತು ಎಲೆಗಳು ಪರಶುರಾಮ ದೇವತೆಯ ಆಯುಧ ಸಂಕೇತವಾದ ಕೊಡಲಿಯ ಚಿತ್ರವನ್ನು ಒಂದೊಂದು ಎಲೆಯಲ್ಲಿ ಒಂದರಿಂದ ಹತ್ತು ಸಂಖ್ಯೆಗಳಲ್ಲಿ ಕಲಾತ್ಮಕವಾಗಿ ಸಂಯೋಜಿಸಲಾಗಿದೆ. ಈ ಸಂಕೇತ ಚಿತ್ರಗಳು ಹಳದಿ ವರ್ಣದ ಅಲಂಕಾರಿಕತೆಯನ್ನು ಹೊಂದಿವೆ. ದೇವತೆಯನ್ನು ಎರಡು ಎಲೆಯಲ್ಲಿ ಅಶ್ವಾರೂಢನನ್ನಾಗಿ ಚಿತ್ರಿಸಿದ್ದು, ಇಲ್ಲಿ ಪೀಠದ ಚಿತ್ರವು ಚಿಕ್ಕ ಚಿಕ್ಕ ಚುಕ್ಕೆಗಳಿಂದ, ಜ್ಯಾಮಿತಿಕ ನಕ್ಷೆಗಳಿಂದ ಅಲಂಕೃತಗೊಂಡಿದೆ. ದೇವತೆಯ ರಾಜಗಾಂಭೀರ್ಯದ ಭಾವನೆಯನ್ನು ಅಭಿವ್ಯಕ್ತಗೊಳಿಸಲಾಗಿದೆ. ಅದರಂತೆ ಕುದುರೆಯ ಚಿತ್ರವನ್ನು ಶ್ವೇತವರ್ಣದಿಂದ ಚಿತ್ರಿಸಿದ್ದು, ನೀಲಿಬಣ್ಣದ ಛಾಯೆಯನ್ನು ತರಲಾಗಿದೆ. ದೇವತೆಯು ಕಿರೀಟ, ಕಂಠಾಭರಣ, ಸಾಂಪ್ರದಾಯಿಕ ಧೋತಿ, ಕೆಂಪು ಉತ್ತರಿಯನ್ನು ಹೊಂದಿದ್ದು, ಕುದುರೆಯ ಮೇಲೆ ಸವಾರಿ ಮಾಡುತ್ತಿರುವಂತೆ ಚಿತ್ರಿತಗೊಂಡಿದ್ದಾನೆ. ಹನ್ನೆರಡು ಎಲೆಗಳು ಕಪ್ಪುಬಣ್ಣದಿಂದ ಕೂಡಿದ್ದು, ಅಂಚಿನಲ್ಲಿ ಜ್ಯಾಮಿತಿಕ ಹಾಗೂ ನೈಸರ್ಗಿಕ ನಕ್ಷೆಯನ್ನು ಸಂಯೋಜಿಸಲಾಗಿದೆ. ಹನ್ನೆರಡು ಎಲೆಗಳು ಒಂದೇ ರಚನಾಪದ್ಧತಿಯನ್ನು ಹೊಂದಿದ್ದು, ಕಲಾತ್ಮಕ ಸ್ವರೂಪದಲ್ಲಿ ನಿರೂಪಣೆಗೊಂಡಿವೆ. ಇಲ್ಲಿ ಎಲೆಗಳು ಆಟದ ಸಾಂಕೇತಿಕ ನೆಲೆಯಲ್ಲಿ ರೂಪುಗೊಂಡಿವೆ.

೭. ರಾಮಾವತಾರ

ಖಟ್ವಾಂಗ ಮಹಾರಾಜನಿಗೆ ದೀರ್ಘಬಾಹು ಎಂಬುವನು ಮಗನಾಗಿದ್ದನು. ದೀರ್ಘಬಾಹುವಿನ ಪುತ್ರನೇ ರಘು, ರಘುವಿನ ಪುತ್ರ ಅಜ. ಅಜನ ಪುತ್ರ ದಶರಥ. ದಶರಥನಿಗೆ ದೇವೋತ್ತಮ ಪರಮಪುರುಷನಾದ ಭಗವಾನ್ ರಾಮಚಂದ್ರ, ಲಕ್ಷ್ಮಣ, ಭರತ ಮತ್ತು ಶತ್ರುಘ್ನರೆಂಬ ಪುತ್ರರು.

ಭಗವಾನ್ ರಾಮಚಂದ್ರನು ಋಷಿ ವಿಶ್ವಾಮಿತ್ರರ ಜೊತೆಯಲ್ಲಿ ಹೋಗಿ ಮಾರೀಚನಂತಹ ರಾಕ್ಷಸರನ್ನು ವಧೆ ಮಾಡಿದನು. ಹರಿಧನುಸ್ಸೆಂದು ಪ್ರಖ್ಯಾತವಾದ ಮತ್ತು ಬಲವಾದ ಶಿವನ ಧನುಸ್ಸನ್ನು ಮುರಿದು

ಭಗವಂತನು ಸೀತಾಮಾತೆಯನ್ನು ವರಿಸಿದನು. ಪರಶುರಾಮನ ಗರ್ವಭಂಗವನ್ನು ಮಾಡಿದನು. ಅಲ್ಲಿ ರಾಮಚಂದ್ರನು ಶೂರ್ಪಣಖಿಯ ಮೂಗನ್ನು ಕೊಯ್ದನಲ್ಲದೆ, ಖರ-ದೂಷಣರೆಂಬ ರಾವಣನ ಅನುಯಾಯಿಗಳನ್ನು ಸಂಹರಿಸಿದನು. ರಾವಣನು ಸೀತಾಪಹರಣವನ್ನು ಮಾಡಿದುದು ಅವನ ದೌರ್ಭಾಗ್ಯಕ್ಕೆ ನಾಂದಿಯಾಯಿತು. ಮಾರೀಚನು ಹೊಮ್ಮಿಗದ ರೂಪವನ್ನು ತಾಳಿದಾಗ, ರಾಮಚಂದ್ರನು ಸೀತಾದೇವಿಯನ್ನು ತೃಪ್ತಿಪಡಿಸುವುದಕ್ಕಾಗಿ ಆ ಜಿಂಕೆಯನ್ನು ತರಲು ಹೋದನು. ಆದರೆ ಈ ನಡುವೆ ರಾವಣನು ಸೀತಾದೇವಿಯನ್ನು ಅಪಹರಿಸಿ ಶ್ರೀರಾಮನ ಅನುಪಸ್ಥಿತಿಯ ಲಾಭವನ್ನು ಪಡೆದುಕೊಂಡನು.[೧೩]

ಸೀತಾಪಹರಣವಾದಾಗ, ರಾಮಚಂದ್ರನು ಲಕ್ಷ್ಮಣನ ಜೊತೆ ಅವಳಿಗಾಗಿ ಕಾಡನೆಲ್ಲಾ ಹುಡುಕಿದನು. ಈ ಹುಡುಕಾಟದ ವೇಳೆಯಲ್ಲಿ ಅವರು ಜಟಾಯುವನ್ನು ಭೇಟಿಯಾದರು. ಶ್ರೀ ರಾಮನು ಕಬಂಧನೆಂಬ ರಾಕ್ಷಸನನ್ನು ಕೊಂದನು. ಸೇನಾಪತಿಯಾದ ವಾಲಿಯನ್ನು ವಧಿಸಿ, ಸುಗ್ರೀವನ ಸಖ್ಯವನ್ನು ಸ್ಥಾಪಿಸಿದನು. ವಾನರ ಸೇನಾಬಲವನ್ನು ಸಂಘಟಿಸಿದ ನಂತರ ಅವರೊಂದಿಗೆ ಕಡಲಲೋಕಕ್ಕೆ ಹೋಗಿ ಸಾಗರವೇ ಮೂರ್ತಿವೆತ್ತ ಸಮುದ್ರನ ಬರುವಿಗಾಗಿ ಕಾದನು. ಆದರೆ ಸಮುದ್ರನು ಬಾರದಿದ್ದಾಗ, ಸಮುದ್ರನಿಗೆ ಒಡೆಯನಾದ ಭಗವಂತನು ಕೋಪ ತಾಳಿದನು. ಆಗ ಸಮುದ್ರನು ಬೇಗನೆ ಬಂದು ಶರಣಾಗತನಾದನು. ಶ್ರೀರಾಮ ಸಮುದ್ರಕ್ಕೆ ಸೇತುವೆ ಕಟ್ಟುವ ಪ್ರಯತ್ನ ಮಾಡಿದ, ವಿಭೀಷಣನ ಸಲಹೆ ಮತ್ತು ಸಹಾಯದಿಂದ ಶ್ರೀ ರಾಮಚಂದ್ರ ರಾವಣನ ರಾಜಧಾನಿಯಾದ ಲಂಕೆಗೆ ದಾಳಿಯಿಟ್ಟನು. ಇದಕ್ಕೂ ಮೊದಲು ಭಗವಂತನ ಸೇವಕನಾದ ಹನುಮಂತನು ಲಂಕೆಯನ್ನು ಸುಟ್ಟಿದ್ದನು. ಲಕ್ಷ್ಮಣನ ಸಹಾಯದಿಂದ ರಾಮಚಂದ್ರನ ಸೈನಿಕರು ರಾಕ್ಷಸಸೈನಿಕರನೆಲ್ಲ ಕೊಂದು ಹಾಕಿದನು. ರಾಮಚಂದ್ರನು ರಾವಣನನ್ನು ವಧಿಸಿದನು. ಮಂಡೋದರಿ ಮತ್ತು ಇತರ ಪತ್ನಿಯರು ರಾವಣನಿಗಾಗಿ ವ್ಯಥೆಪಟ್ಟರು. ರಾಮಚಂದ್ರನ ಅಪ್ಪಣೆಯಂತೆ ಕುಟುಂಬದಲ್ಲಿ ಮರಣ ಹೊಂದಿದ ಸರ್ವರಿಗೂ ವಿಭೀಷಣನು ಉತ್ತರ ಕ್ರಿಯೆಯನ್ನು ನೆರವೇರಿಸಿದನು. ನಂತರದಲ್ಲಿ ರಾಮಚಂದ್ರನು ವಿಭೀಷಣನಿಗೆ ಲಂಕೆಯನ್ನು ಆಳಲು ಅಧಿರವನ್ನಿತ್ತನು. ದೀರ್ಘಾಯುಷ್ಯವನ್ನೂ ದಯಪಾಲಿಸಿದನು. ಸೀತಾದೇವಿಯನ್ನು ಅಶೋಕವನದಿಂದ ಬಿಡುಗಡೆ ಮಾಡಿ, ಪುಷ್ಪಕ ವಿಮಾನದಲ್ಲಿ ಅಯೋಧ್ಯೆಗೆ ಕರೆಯೊಯ್ದನು. ಅಲ್ಲಿ ಭರತನಿಂದ ಸ್ವಾಗತಗೊಂಡನು. ಭರತನು ರಾಮಚಂದ್ರನ ಪಾದುಕೆಗಳನ್ನು ತಂದರೆ, ವಿಭೀಷಣ ಮತ್ತು ಸುಗ್ರೀವರು ಚಾಮರವನ್ನು ಮತ್ತು ಬೀಸಣಿಕೆಯನ್ನು ಬೀಸಿದರು. ಶತ್ರುಘ್ನನು ರಾಮಚಂದ್ರನ ಧನುಸ್ಸನ್ನು ಮತ್ತು ಎರಡು ಬತ್ತಳಿಕೆಗಳನ್ನು ಹಿಡಿದುಕೊಂಡನು. ವಸಿಷ್ಠ ಮಹರ್ಷಿಯು ರಾಮಚಂದ್ರನನ್ನು ರಾಜನನ್ನಾಗಿ ಸಿಂಹಾಸನವನ್ನೇರಿಸಿದನು.[೧೪] ವಿಷ್ಣುವಿನ ದಶಾವತಾರದಲ್ಲಿ ಏಳನೆಯ ಅವತಾರವೇ ರಾಮಾವತಾರ. ಈ ರಾಮಾವತಾರಕ್ಕೆ ಸಂಬಂಧಿಸಿದಂತೆ ಗಂಜೀಫಾ ಚಿತ್ರಗಳಲ್ಲಿ ಅಧ್ಯಯನ ಮಾಡಲಾಗಿದೆ.

೭.೧. ರಾಮಾವತಾರ

ವಿಷ್ಣುವಿನ ಅವತಾರಗಳಲ್ಲಿ ರಾಮಾವತಾರವು ಏಳನೇ ಅವತಾರವಾಗಿದೆ. ಇಲ್ಲಿ ರಚನೆಗೊಂಡಿರುವ ಐದು ವೃತ್ತಾಕಾರದ ರಾಶಿಗೆ ಸಂಬಂಧಿಸಿದ ಗಂಜೀಫಾ ಎಲೆಗಳಲ್ಲಿ ಮುಖ್ಯ ದೇವತೆಯಾದ ಶ್ರೀರಾಮಚಂದ್ರನ ಚಿತ್ರವನ್ನು ಸಂಯೋಜಿಸಲಾಗಿದೆ. ಶ್ರೀರಾಮಚಂದ್ರನು ಪೀಠದ ಮೇಲೆ ಧನುಸ್ಸು ಹಾಗೂ ಬಾಣವನ್ನು ಹಿಡಿದುಕೊಂಡು ಕುಳಿತಿರುವನು. ಕ್ರಮವಾಗಿ ಹಸಿರು, ನೀಲಿ ಹಾಗೂ ತಿಳಿ ಹಳದಿ ಬಣ್ಣವನ್ನು

---

೧೩. ಜಿ. ವಿ. ಶಾಸ್ತ್ರಿ (ಸಂ) : ದಶಾವತಾರದ ಕಥೆಗಳು, ಪುಟ – ೪೮

೧೪. ಡಾ. ಆನಂದ ಕೆ. ಪೂಜಾರ್., ಕರ್ನಾಟಕದ ಕರಾವಳಿ ಚಿತ್ರಕಲೆ (ಅಪ್ರಕಟಿತ ಡಿಲಿಟ್ ಮಹಾಪ್ರಬಂಧ) ಪು: ೧೪೬

ಚಿತ್ರ ೦೭ ರಾಮಾವತಾರ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಮಕರ ರಾಶಿ



ತುಲಾ ರಾಶಿ

ಸಂಗ್ರಹ ; ಮಂಜುಷಾ ವಸ್ತುಸಂಗ್ರಹಾಲಯ ಧರ್ಮಸ್ಥಳ

ಚಿತ್ರ ೦೭



ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಮೈಬಣ್ಣವನ್ನಾಗಿ ಸಂಯೋಜಿಸಲಾಗಿದ್ದು, ಕೆಂಪು ಬಣ್ಣದ ಉತ್ತರೀಯವನ್ನು ರಚನೆ ಮಾಡಲಾಗಿದೆ. ಉತ್ತರೀಯದ ಚಿತ್ರಗಳು ಕಲಾತ್ಮಕವಾಗಿದ್ದು ನೀರಿಗೆಗಳ ಕಲ್ಪನೆಯನ್ನು ತರಲು ಪ್ರಯತ್ನಿಸಿದ್ದಾರೆ. ಸ್ವರ್ಣಮುಕುಟ, ವಸ್ತ್ರಾಭರಣ, ಪೀಠ ಹಾಗೂ ಹಿನ್ನೆಲೆಯ ಸಂಯೋಜನೆಯು ಉತ್ತಮವಾಗಿ ಮೂಡಿಬಂದಿದೆ. ಬಹುತೇಕ ಈ ಚಿತ್ರಗಳಲ್ಲಿ ಕೆಂಪು ಹಾಗೂ ಹಳದಿಮಿಶ್ರಿತ ಬಣ್ಣವು ಸಂಯೋಜನೆಗೊಂಡಿದ್ದು, ಚಿತ್ರಗಳ ಅಂಚುಗಳಲ್ಲಿ ನಕ್ಷಾ ವಿನ್ಯಾಸವು ವೈಪರೀತ್ಯತೆದಿಂದ ಕೂಡಿದ್ದು ರಾಶಿಚಿತ್ರಗಳಲ್ಲಿ ಮೀನರಾಶಿಗೆ ಸಂಬಂಧಿಸಿದಂತೆ ಮೀನ ರಾಶಿಯ ಎಲೆಯ ಚಿತ್ರದಲ್ಲಿ ಜೋಡಿ ಮೀನುಗಳನ್ನು ಚಲನಾತ್ಮಕವಾಗಿ ಚಿತ್ರಿಸಿದ್ದು, ಕಲಾವಿದನು ನೈಜ ಸ್ವರೂಪದ ಕಲ್ಪನೆಯನ್ನು ತರಲು ಪ್ರಯತ್ನಿಸಿದ್ದಾನೆ. ಹಿನ್ನೆಲೆಯಲ್ಲಿ ಕಪ್ಪುಬಣ್ಣವನ್ನು ಸಂಯೋಜಿಸಿದ್ದು ಮೀನುಗಳು ಸ್ಪಷ್ಟವಾಗಿ ಕಾಣುತ್ತಿವೆ. ಅದೇ ರೀತಿ ಸಿಂಹರಾಶಿಯ ಎಲೆಯಲ್ಲಿ ಅಲಂಕಾರಿಕ ರೇಖಾವಿನ್ಯಾಸದಿಂದ ಸಿಂಹದ ಚಿತ್ರವನ್ನು ರಚಿಸಿ ಬಿಳಿವರ್ಣವನ್ನು ಬಳಿಯಲಾಗಿದೆ. ಮಕರರಾಶಿಗೆ ಸಂಬಂಧಿಸಿದ ಎಲೆಯಲ್ಲಿ ಹಸಿರುವರ್ಣದ ಮಕರದ ಚಿತ್ರವನ್ನು, ತುಲಾರಾಶಿಗೆ ಸಂಬಂಧಿಸಿದ ಎಲೆಯಲ್ಲಿ ತುಲಾದ ಚಿತ್ರವನ್ನು ರಚಿಸಲಾಗಿದೆ. ಈ ಚಿತ್ರಗಳು ಪ್ರತ್ಯೇಕವಾಗಿ ಕಾಣುವಂತೆ ಹಿನ್ನೆಲೆಯಾಗಿ ಕಪ್ಪು ಮತ್ತು ಕೆಂಪು ಬಣ್ಣಗಳನ್ನು ಸಂಯೋಜಿಸಲಾಗಿದೆ. ಈ ಐದು ಚಿತ್ರಗಳು ರೇಖೆ ಹಾಗೂ ವರ್ಣಗಳ ಸಂಯೋಜನೆ ಉತ್ತಮವಾಗಿ ರಚನೆಗೊಂಡಿವೆ. ವರ್ಣಪದ್ಧತಿಯು ಚಪ್ಪಟೆಯಾಗಿರುವುದರಿಂದ ರೇಖೆಗಳು ಸ್ಪಷ್ಟವಾಗಿ ಕಾಣುತ್ತಿವೆ. ಈ ಚಿತ್ರಗಳು ಚಿತ್ರಪದ್ಧತಿಯನ್ನು ಅನುಸರಿಸಿವೆ.

ಇನ್ನೊಂದು ಬಗೆ ಎಲೆಗಳ ಗಂಜೀಫಾ ಆಟದ ಹನ್ನೆರಡು ಎಲೆಗಳಲ್ಲಿ ಪ್ರಧಾನ ದೇವತೆ ರಾಮನನ್ನು ಎರಡು ಎಲೆಗಳಲ್ಲಿ ಸಂಯೋಜಿಸಲಾಗಿದ್ದು, ಒಂದು ಎಲೆಯಲ್ಲಿ ಶ್ರೀ ರಾಮಚಂದ್ರನನ್ನು ಸ್ವರ್ಣಪೀಠದ ಮೇಲೆ, ಇನ್ನೊಂದು ಎಲೆಯಲ್ಲಿ ಶ್ರೀರಾಮಚಂದ್ರನನ್ನು ಅಶ್ವಾರೂಢಿಯನ್ನಾಗಿ ಚಿತ್ರಿಸಲಾಗಿದೆ. ಇನ್ನುಳಿದ ಹತ್ತು ವೃತ್ತಾಕಾರದ ಎಲೆಗಳಲ್ಲಿ ಬಾಣದ ಸಂಕೇತಚಿತ್ರಗಳನ್ನು ಒಂದರಿಂದ ಹತ್ತು ಸಂಖ್ಯೆಗಳಂತೆ ಚಿತ್ರಿಸಲಾಗಿದೆ. ಈ ಬಾಣದ ಸಂಕೇತಚಿತ್ರಗಳು ಅತ್ಯಂತ ಕಲಾತ್ಮಕವಾಗಿ ಸಂಯೋಜನೆಗೊಂಡಿದ್ದು ಉತ್ತಮ ರೇಖಾವಿನ್ಯಾಸ ಹಾಗೂ ವರ್ಣವಿನ್ಯಾಸವನ್ನು ಹೊಂದಿವೆ. ಪ್ರಧಾನ ದೇವತೆಯನ್ನು ಗೌರವರ್ಣದಿಂದ ಸಂಯೋಜಿಸಿ ಸ್ಪಷ್ಟ ರೇಖಾವಿನ್ಯಾಸದಿಂದ ಅಲಂಕೃತ ಮಾಡಲಾಗಿದೆ. ಪೀಠದ ಚಿತ್ರವು ಜ್ಯಾಮಿತಿಕ ಚಿತ್ರವಿನ್ಯಾಸಗಳಿಂದ ರಚನೆಗೊಂಡಿದ್ದು, ಅಲಂಕಾರಪ್ರಜ್ಞೆಯನ್ನು ಹೊಂದಿದೆ. ಅಶ್ವಾರೂಢ ಚಿತ್ರದಲ್ಲಿ ಕುದುರೆಯನ್ನು ಶ್ವೇತವರ್ಣದಿಂದ ರಚಿಸಿದ್ದು ನೀಲಿವರ್ಣದ ಛಾಯೆಯನ್ನು ಕೊಡಲಾಗಿದೆ. ಶ್ರೀ ರಾಮಚಂದ್ರನು ಪಾರ್ಶ್ವಮುಖಭಾವವನ್ನು ಹೊಂದಿದ್ದು, ಹೂವು, ಎಲೆಗಳ ಚಿತ್ರವಿನ್ಯಾಸದ ಅಂಚನ್ನು ಹೊಂದಿದೆ. ಚಿತ್ರಗಳ ಅಂಚಿನಲ್ಲಿ ಕಪ್ಪು, ಬಿಳಿ ಹಾಗೂ ಹಳದಿವರ್ಣಗಳ ಸಂಯೋಜನೆಯೂ ಉದ್ದೀಪನಗೊಂಡಿವೆ. ಒಟ್ಟಾರೆ ಈ ಹನ್ನೆರಡು ಗಂಜೀಫಾಎಲೆಗಳ ಚಿತ್ರಗಳು ಸಾಂಕೇತಿಕವಾಗಿ ಮೂಡಿಬಂದಿದ್ದು, ರೇಖೆ, ವರ್ಣ ಹಾಗೂ ಅಲಂಕಾರವೂ ಚಿತ್ರಾತ್ಮಕವಾಗಿ ನಿರೂಪಣೆಗೊಂಡಿದೆ.

೮. ಕೃಷ್ಣಾವತಾರ

ಕೃಷ್ಣಾವತಾರದಲ್ಲಿ ವಿಷ್ಣು ವಸುದೇವ, ದೇವಕಿಯರ ಮಗನಾಗಿ ಹುಟ್ಟಿ ಗೋಕುಲದಲ್ಲಿ ಬೆಳೆದನು. ಪೂತನಿಯನ್ನು ಸಂಹಾರ ಮಾಡಿ, ಗೋವರ್ಧನ ಪರ್ವತವನ್ನು ಎತ್ತಿ ಹಿಡಿದು ಗೋವುಗಳನ್ನು, ಜನರನ್ನು ರಕ್ಷಿಸಿದನು. ದುಷ್ಟನಾದ ಮಾವ ಕಂಸನನ್ನು ಕೊಂದ ನಂತರ ಕೌರವರನ್ನು ಸಹ ಸೋಲಿಸಿದನು. ಕುಂತೀಸುತರನ್ನು ರಕ್ಷಿಸಿದನು. ಹೀಗೆ ಕೃಷ್ಣನ ಲೀಲೆಯು ಶ್ರೀ ಮದ್ಭಾಗತವೆಂದು ಪ್ರಸಿದ್ಧವಾಗಿದೆ.

ವೈವಸ್ವತ ಮನ್ವಂತರದಲ್ಲಿ ಭೂದೇವಿಯು ಗೋರೂಪದಿಂದ ಸುರಕ್ಷತೆಯನ್ನು ಕೇಳಿದಾಗ ಶ್ರೀ ಹರಿಯು (ವಿಷ್ಣು) ಕೃಷ್ಣನಾಗಿ ಜನಿಸಿ ಭೂಭಾರವನ್ನು ಕಡಿಮೆ ಮಾಡಿದ ವಿವರಣೆ ಆಗಿರುತ್ತದೆ. ಅಲ್ಲದೇ ಕೃಷ್ಣಾವತಾರದಲ್ಲಿ ಗೋಕುಲದಲ್ಲಿ ಮಗುವಿಗೆ ಹೆಸರಿಸುವ, ಬಾಲಲೀಲೆ, ಗೋಪಿಕೆಯರ ಕಾತ್ಯಾಯನೀ ವ್ರತ, ವೃಂದಾವನದಲ್ಲಿ ರಾಸಕ್ರೀಡೆ, ನಂದಗೋಪಾಲನು ಅಜಗರದಿಂದ ಮುಕ್ತ, ಶಂಖಚೂಡವಧೆ, ವೇಣುಗೀತೆ, ವ್ಯೋಮಾಸುಧನ ವಧೆ ಅಕ್ರೂರ ಕಂಡ ದಿವ್ಯ ದರ್ಶನ, ಕುವಲಯಾಪೀಡ ಆನೆಯ ವಧೆ, ಜರಾಸಂಧನ ಸೋಲು, ಬಲರಾಮ ಕೃಷ್ಣರ ವಿವಾಹ, ಸ್ಯಮಂತಕ ಮಣಿಯ ಕಥೆ, ಶ್ರೀ ಕೃಷ್ಣನ ಸಂತಾನ ವಿಸ್ತಾರ, ಸಾಲ್ವವಧೆ, ನಗ್ನರಾಜ ಚರಿತ್ರೆ, ವೃಕಾಸುರನ (ಭಸ್ಮಾಸುರ) ವಿನಾಶ, ಮುಂತಾದ ಉಪಕತೆಗಳನ್ನು ಹೊಂದಿದೆ.

೮.೧. ಕೃಷ್ಣಾವತಾರ

ವಿಷ್ಣುವಿನ ಎಂಟನೆಯ ಅವತಾರಗಳಲ್ಲಿ ಕೃಷ್ಣಾವತಾರದಲ್ಲಿ ಗಂಜೀಫಾ ಕಲಾವಿದರು ಕೇವಲ ಆಟದ ಸಾಂಕೇತಿಕತೆಯನ್ನು ಬಳಸಿಕೊಂಡಿದ್ದಾರೆ. ಇಲ್ಲಿ ರಚನೆಗೊಂಡಿರುವ ರಾಶಿಗೆ ಸಂಬಂಧಿಸಿದ ವೃತ್ತಾಕಾರದ ಐದು ಗಂಜೀಫಾ ಎಲೆಗಳಲ್ಲಿ ಈ ಐದು ಎಲೆಗಳು ಅತ್ಯಂತ ಕಲಾತ್ಮಕ ರೀತಿಯಲ್ಲಿ ರಚನೆಗೊಂಡಿದ್ದು, ರೇಖೆ, ವರ್ಣ ಹಾಗೂ ಆಕೃತಿಗಳ ಸಂಯೋಜನೆಯೂ ವಿಶಿಷ್ಟವಾಗಿ ನಿರೂಪಣೆಗೊಂಡಿದೆ. ಮುಖ್ಯ ದೇವತೆಯಾದ ಶೀಕೃಷ್ಣನು ನೀಲಿ ಮೈ ಬಣ್ಣವನ್ನು ಹೊಂದಿದ್ದು, ಸಾಂಪ್ರದಾಯಿಕ ಧೋತಿ, ಚಿತ್ರಮಯ ಉತ್ತರೀಯ ವಿಶಿಷ್ಟ ಕೇಶವಿನ್ಯಾಸ, ಆಭರಣಗಳ ಸಂಯೋಜನೆ ಹಾಗೂ ಶರೀರಸಂಯೋಜನೆಯು ವೈವಿಧ್ಯಮಯವಾಗಿ ಮೂಡಿ ಬಂದಿವೆ. ಇಲ್ಲಿ ಉತ್ತರೀಯದ ಚಿತ್ರವನ್ನು ಕೆಂಪು ಹಾಗೂ ಕಪ್ಪುಬಣ್ಣದಿಂದ ಸಂಯೋಜಿಸಲಾಗಿದೆ. ದೇವತೆಯ ಹಿಂಭಾಗದಲ್ಲಿ ಕಲಾತ್ಮಕ ದೊಡ್ಡ ದಿಂಬನ್ನು ಸಂಯೋಜಿಸಿದ್ದು ಇವು ಸೂಕ್ಷ್ಮ ಚಿತ್ರ ವಿನ್ಯಾಸಗಳಿಂದ ಅಲಂಕರಣಗೊಂಡಿವೆ. ಮೀನರಾಶಿಗೆ ಸಂಬಂಧಿಸಿದ ಎಲೆಯಲ್ಲಿ ಬಿಳಿಬಣ್ಣದ ಜೋಡಿ ಮೀನುಗಳು, ಸಿಂಹದ ರಾಶಿಗೆ ಸಂಬಂಧಿಸಿದ ಎಲೆಯಲ್ಲಿ ಸಿಂಹದ ಚಿತ್ರ, ಕುಂಭ, ಮಕರ ಹಾಗೂ ತುಲಾರಾಶಿಗಳಿಗೆ ಸಂಬಂಧಿಸಿದ ಎಲೆಗಳಲ್ಲಿ ಕುಂಭದ ಚಿತ್ರ, ಹಸಿರುವರ್ಣದ ಮಕರದ ಚಿತ್ರ, ಬಿಳಿ ಹಾಗೂ ಬಂಗಾರದ ವರ್ಣದ ತಕ್ಕಡಿಯ ಚಿತ್ರವನ್ನು ರಚಿಸಿದ್ದು ಈ ಚಿತ್ರಗಳು ಸ್ಪಷ್ಟವಾಗಿ ಕಾಣುವಂತೆ ಹಿನ್ನಲೆಯಲ್ಲಿ ಕೆಂಪು ಮತ್ತು ಕಪ್ಪು ವರ್ಣಗಳನ್ನು ಸಂಯೋಜಿಸಲಾಗಿದೆ. ಚಿತ್ರಗಳ ಹಿನ್ನೆಲೆಯಲ್ಲಿ ಬಿಳಿ ಬಣ್ಣವು ಪ್ರಧಾನವಾಗಿ ಮೂಡಿಬಂದಿದೆ. ಚಿತ್ರಗಳ ಅಂಚು ಬಿಳಿ, ಕಪ್ಪು ಹಾಗೂ ಬಂಗಾರದ ವರ್ಣಗಳ ರೇಖೆಗಳ ನಕ್ಷಾವಿನ್ಯಾಸವನ್ನು ಹೊಂದಿವೆ. ಈ ಐದು ಚಿತ್ರಗಳು ರೇಖೆ, ವರ್ಣ ಹಾಗೂ ಆಕೃತಿಗಳ ಸಂಯೋಜನಾದೃಷ್ಟಿಯಿಂದ ಕಲಾತ್ಮಕವಾಗಿ ಕೂಡಿವೆ. ಜೊತೆಗೆ ಅಲಂಕಾರಪ್ರಜ್ಞೆಯನ್ನು ಹೊಂದಿವೆ.

ಇನ್ನೊಂದು ಬಗೆಯ ಗಂಜೀಫಾ ಆಟದ ಕೃಷ್ಣಾವತಾರದ ಎಲೆಗಳಲ್ಲಿ ಮುಖ್ಯ ದೇವತೆಯನ್ನು ಎರಡು ವೃತ್ತಾಕಾರದ ಎಲೆಗಳಲ್ಲಿ ಚಿತ್ರಿಸಿ, ಇನ್ನುಳಿದ ಹತ್ತು ಎಲೆಗಳಲ್ಲಿ ನಂದಿಯ ಚಿತ್ರವನ್ನು ಸಂಯೋಜಿಸಲಾಗಿದೆ. ಇಲ್ಲಿ ಮುಖ್ಯ ದೇವತೆ ಕೃಷ್ಣನನ್ನು ಅಲಂಕಾರಿಕ ಪೀಠದ ಮೇಲೆ ಹಾಗೂ ಅಶ್ವಾರೂಢನನ್ನಾಗಿ ಚಿತ್ರಿಸಿದ್ದಾರೆ. ಈ ಎರಡು ಎಲೆಗಳು ಗಂಜೀಫಾ ಆಟದ ಪ್ರಧಾನ ಎಲೆಗಳಾಗಿರಬಹುದು. ಈ ಹನ್ನೆರಡು ಎಲೆಗಳು ಕಡು ನೀಲಿಬಣ್ಣದಿಂದ ರಚನೆಗೊಂಡಿದ್ದು, ಬಿಳಿ ಹಾಗೂ ಬಂಗಾರವರ್ಣದ ಅಂಚನ್ನು ಹೊಂದಿವೆ. ಪೀಠದಲ್ಲಿ ಕುಳಿತ ಶ್ರೀ ಕೃಷ್ಣನ ಚಿತ್ರವನ್ನು ಚತುರ್ಭುಜಧಾರಿಯಾಗಿ ರಚಿಸಿದ್ದು, ಎರಡೂ ಕೃತಿಗಳಲ್ಲಿ ಶಂಖ, ಚಕ್ರವನ್ನು ಹೊಂದಿದ್ದು, ಇನ್ನೆರಡು ಕೈಗಳಿಂದ ಕೊಳಲನ್ನು ನುಡಿಸುತ್ತಿದ್ದಾನೆ.

ಚಿತ್ರ ೦೮ ಕೃಷ್ಣಾವತಾರ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಮಕರ ರಾಶಿ



ತುಲಾ ರಾಶಿ

ಚಿತ್ರ ೦೮



ಕೃಷ್ಣ





ಸೇನಾನಿ



ಸಾಂಪ್ರದಾಯಿಕ ಧೋತಿ, ಕೆಂಪು ಉತ್ತರೀಯ, ಸ್ವರ್ಣಾಭರಣಗಳು ಚಿತ್ರಿತವಾಗಿವೆ. ಇನ್ನೊಂದು ಎಲೆಯಲ್ಲಿ ಶ್ರೀಕೃಷ್ಣನು ಅಶ್ವಾರೂಢನಾಗಿದ್ದು, ಗೌರವರ್ಣದ ಮೈಬಣ್ಣವನ್ನು ಹೊಂದಿದ್ದಾನೆ. ಇಲ್ಲಿ ಕೃಷ್ಣನನ್ನು ಪಾರ್ಶ್ವಮುಖವಾಗಿ ಚಿತ್ರಿಸಿದ್ದು, ಕುದುರೆಸವಾರಿ ಮಾಡುತ್ತಿರುವಂತೆ ಬಿಂಬಿಸಲಾಗಿದೆ. ಶ್ರೀಕೃಷ್ಣನನ್ನು ದ್ವಿಭುಜಧಾರಿಯನ್ನಾಗಿ ಸಂಯೋಜಿಸಿ ಒಂದು ಕೈಯಲ್ಲಿ ಚಕ್ರ, ಇನ್ನೊಂದು ಕೈಯನ್ನು ಸವಾರಿ ಮಾಡುತ್ತಿರುವಂತೆ ನಿರೂಪಣೆಗೊಳಿಸಲಾಗಿದೆ. ಉಳಿದ ಹತ್ತು ಎಲೆಗಳಲ್ಲಿ ಮಲಗಿದ ನಂದಿಯನ್ನು ಸಂಯೋಜಿಸಿದ್ದು ಸಂಖ್ಯೆಗಳಿಗನುಸಾರವಾಗಿ ಅದರ ಗಾತ್ರವನ್ನು ಹೆಚ್ಚು ಕಡಿಮೆಯಾಗಿ ರಚನೆ ಮಾಡಲಾಗಿದೆ. ನಂದಿಯನ್ನು ಬಿಳಿಬಣ್ಣದಿಂದ ಚಿತ್ರಿಸಿದ್ದು ಅದಕ್ಕೆ ಅಲಂಕಾರವಾಗಿ ವಿವಿಧ ವಸ್ತುಗಳನ್ನು ಸಂಯೋಜಿಸಲಾಗಿದೆ. ಈ ಹನ್ನೆರಡು ಎಲೆಗಳು ಒಂದೇ ರೀತಿಯ ವರ್ಣಪದ್ಧತಿಯನ್ನು ಹಾಗೂ ರೇಖಾಪದ್ಧತಿಯನ್ನು ಹೊಂದಿದ್ದು, ಚಿತ್ರವಿನ್ಯಾಸಗಳಿಂದ ಸಂಯೋಜಿತಗೊಂಡಿವೆ. ಚಿತ್ರಗಳ ಅಂಚು, ಬಿಳಿ, ಹಳದಿ ಹಾಗೂ ಕಪ್ಪು ಬಣ್ಣಗಳಿಂದ ಕೂಡಿದ್ದು ರೇಖಾಪ್ರಧಾನವಾದ ಚಿತ್ರ ವಿನ್ಯಾಸವನ್ನು ಹೊಂದಿವೆ. ಒಟ್ಟಾರೆ ಈ ಚಿತ್ರಗಳಲ್ಲಿ ರೇಖೆ, ವರ್ಣ, ಆಕೃತಿ, ಅಲಂಕಾರ ಹಾಗೂ ಯಥಾದೃಷ್ಟಿರೂಪವು ಆಕರ್ಷಕವಾಗಿ ಮೂಡಿಬಂದಿವೆ ಎನ್ನಬಹುದು.

೯. ಬಲರಾಮ ಅವತಾರ

ವಿಷ್ಣುವಿನ ಅವತಾರಗಳಲ್ಲಿ ಬಲರಾಮ ಅವತಾರವು ಬಹು ವಿಶಿಷ್ಟ ಸಂದರ್ಭವನ್ನು ಸೂಚಿಸುತ್ತದೆ. ದೇವಕಿಯ ಮಗನಿಂದ ಕಂಸನ ಮರಣ ಇರುವುದರಿಂದ ಕಂಸನು ತಂಗಿ ದೇವಕಿಯ ಗರ್ಭದಲ್ಲಿರುವ ಪ್ರತಿಯೊಂದು ಮಗುವನ್ನೂ ಕೊಲ್ಲುತ್ತಿದ್ದನು. ಏಳನೆಯ ಬಾರಿ ಗರ್ಭಧರಿಸಿದ ಸಂದರ್ಭದಲ್ಲಿ ದೇವಕಿಯ ಮುಖದಲ್ಲಿ ಒಂದು ರೀತಿಯ ಕಾಂತಿಯನ್ನು ಹಾಗೂ ಲವಲವಿಕೆಯನ್ನು ಕಂಡು ಈ ಮಗುವೇ ತನ್ನ ಮರಣಕ್ಕೆ ಕಾರಣವಾಗಿರಬಹುದೆಂದು ಅವಳನ್ನು ಇನ್ನೂ ಕಟ್ಟು ನಿಟ್ಟಾಗಿ ನೋಡಿಕೊಳ್ಳಲು ಅರಮನೆ ಸೇವಕರಿಗೆ ಆದೇಶ ನೀಡಿದನು. ಸ್ವತಃ ಮಹಾವಿಷ್ಣುವೇ ಗರ್ಭದಲ್ಲಿರುವುದರಿಂದ ಇದನ್ನರಿತ ವಾಸುದೇವನು ಇನ್ನೊಬ್ಬ ಪತ್ನಿಯಾದ ನಂದಗೋಕುಲದಲ್ಲಿರುವ ರೋಹಿಣಿಯ ಗರ್ಭದಲ್ಲಿ ಸ್ಥಳಾಂತರಗೊಂಡು ಆಕೆಯ ಉದರದಿಂದ ಬಲರಾಮನಾಗಿ ಜನಿಸುತ್ತಾನೆ. ಇಲ್ಲಿ ಎಲೆಗಳನ್ನು ಆಟದ ಸಾಂಕೇತಿಕ ನೆಲೆಯಲ್ಲಿ ರೂಪುಗೊಳಿಸಿದ್ದಾರೆ.

೯.೧. ಬಲರಾಮ ಅವತಾರ

ಈ ಅವತಾರದ ಸಂದರ್ಭವನ್ನು ಗಂಜೀಫಾ ಕಲಾವಿದರು ಕೇವಲ ಸಾಂಕೇತಿಕವಾಗಿ ಬಳಸಿಕೊಂಡಿದ್ದಾರೆ. ಇಲ್ಲಿ ರಚನೆಗೊಂಡಿರುವ ರಾಶಿಗೆ ಸಂಬಂಧಿಸಿದ ಐದು ಎಲೆಗಳಲ್ಲಿ ಮುಖ್ಯದೇವತೆಯಾದ ಬಲರಾಮನನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ದೇವತೆಯ ಕೆಳಭಾಗದಲ್ಲಿರುವ ಚೌಕಾಕಾರದ ಪಟ್ಟಿಕೆಯಲ್ಲಿ ರಾಶಿಯ ಚಿತ್ರಗಳನ್ನು ರಚನೆ ಮಾಡಲಾಗಿದೆ. ಬಲರಾಮನು ದ್ವಿಭುಜಧಾರಿಯಾಗಿದ್ದು, ಒಂದು ಕೈಯಲ್ಲಿ ನೇಗಿಲನ್ನು, ಇನ್ನೊಂದು ಕೈಯನ್ನು ಯಾವುದೇ ಸಂಕೇತಗಳನ್ನು ನೀಡದೇ ಭಂಗಿಯಲ್ಲಿರುವಂತೆ ಚಿತ್ರಿಸಲಾಗಿದೆ. ಐದು ಎಲೆಗಳಲ್ಲಿ ರಚನೆಗೊಂಡಿರುವ ದೇವತೆಯ ವರ್ಣಪದ್ಧತಿಯಲ್ಲಿ ವೈರುಧ್ಯಗಳನ್ನು ಕಾಣಬಹುದಾಗಿದೆ. ವಸ್ತುವಿನ್ಯಾಸ, ಕಿರೀಟಾಭರಣಗಳನ್ನು, ವೈಶಿಷ್ಟ್ಯ ಪೂರ್ಣವಾಗಿ ರಚನೆಮಾಡಲಾಗಿದೆ. ಮೀನರಾಶಿಗೆ ಸಂಬಂಧಿಸಿದ ಎಲೆಯಲ್ಲಿ ಬಲರಾಮನನ್ನು ಹಳದಿ ಬಣ್ಣದಿಂದ ಚಿತ್ರಿಸಿದ್ದು ಹಿನ್ನೆಲೆಯಲ್ಲಿ ಅಲಂಕೃತ ದಿಂಬನ್ನು ಸಂಯೋಜಿಸಲಾಗಿದೆ. ದೇವತೆಯ

ಚಿತ್ರ ೦೯ ಬಲರಾಮಅವತಾರ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಮಕರ ರಾಶಿ



ತುಲಾ ರಾಶಿ

ಸಂಗ್ರಹ ; ಮಂಜುಷಾ ವಸ್ತುಸಂಗ್ರಹಾಲಯ ದರ್ಮಸ್ಥಳ

ಚಿತ್ರ ೦೯



ಬಲರಾಮ   ಸೇನಾನಿ

ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಕೆಳಭಾಗದಲ್ಲಿರುವ ಪಟ್ಟಿಕೆಯಲ್ಲಿ ಬಿಳಿಬಣ್ಣದ ಮೀನುಗಳ ಚಿತ್ರ, ಸಿಂಹರಾಶಿಯ ಎಲೆಯಲ್ಲಿ ಸಿಂಹದ ಚಿತ್ರ, ಕುಂಭರಾಶಿಯ ಎಲೆಯಲ್ಲಿ ಕುಂಭದ ಚಿತ್ರ, ಮಕರರಾಶಿಯ ಎಲೆಯಲ್ಲಿ ಮಕರದ ಚಿತ್ರ, ತುಲಾರಾಶಿಯ ಎಲೆಯಲ್ಲಿ ತಕ್ಕಡಿಯ ಚಿತ್ರವನ್ನು ರಚಿಸಿದ್ದು, ಇವು ಸ್ಪಷ್ಟವಾಗಿ ಕಾಣುವಂತೆ ಹಿನ್ನೆಲೆಯಲ್ಲಿ ಕೆಂಪು ಹಾಗೂ ಕಪ್ಪು ಬಣ್ಣವನ್ನು ಸಂಯೋಜಿಸಲಾಗಿದೆ. ದೇವತೆಯ ಕೆಳಭಾಗದಲ್ಲಿ ಜ್ಯಾಮಿತಿಕ ಪಟ್ಟಿಕೆಗಳು ಅಲಂಕಾರಿಕವಾಗಿದೆ. ಚಿತ್ರಗಳ ಅಂಚು ಕೆಂಪು, ಕಪ್ಪು ಹಾಗೂ ಚಿನ್ನದ ಬಣ್ಣಗಳಿಂದ ಕೂಡಿದ ಚಿತ್ರ ವಿನ್ಯಾಸವನ್ನು ಹೊಂದಿದ್ದು, ಚಿತ್ರದ ನಕ್ಷೆಯಲ್ಲಿ ಸ್ವಲ್ಪ ವೈಪರೀತ್ಯವನ್ನು ತರಲಾಗಿದೆ. ಬಹುತೇಕ ಈ ಎಲೆಗಳು ಬೇರೆ ಬೇರೆ ಕಲಾವಿದರಿಂದ ರಚಿಸಲ್ಪಟ್ಟಿವೆ. ಒಟ್ಟಾರೆ ಈ ಐದು ಚಿತ್ರಗಳು ರೇಖೆ, ವರ್ಣ ಹಾಗೂ ಆಕೃತಿಗಳ ಸಂಯೋಜನೆಯಿಂದ ಉತ್ತಮವಾಗಿ ಮೂಡಿಬಂದಿವೆ.

ಇದೇ ಅವತಾರದ ಇನ್ನೊಂದು ಬಗೆಯ ಆಟದ ಹನ್ನೆರಡು ಎಲೆಗಳಲ್ಲಿ ಮುಖ್ಯದೇವತೆಯಾದ ಬಲರಾಮನನ್ನು ಪೀಠದ ಮೇಲೆ ಹಾಗೂ ಅಶ್ವಾರೂಢನನ್ನಾಗಿ ಸಂಯೋಜಿಸಲಾಗಿದೆ. ಹತ್ತು ಎಲೆಗಳಲ್ಲಿ ಬಲರಾಮನ ಆಯುಧವಾದ ನೇಗಿಲನ್ನು ಒಂದೊಂದು ಎಲೆಯಲ್ಲಿ ಒಂದರಿಂದ ಹತ್ತು ಸಂಖ್ಯೆಗಳಲ್ಲಿ ಚಿತ್ರಿಸಲಾಗಿದ್ದು, ಚಿತ್ರಮಯ ವಿನ್ಯಾಸದಿಂದ ನೇಗಿಲಿನ ಚಿತ್ರಗಳನ್ನು ಅಲಂಕಾರಿಕವಾಗಿ ಸಂಯೋಜಿಸಲಾಗಿದೆ. ಚಿತ್ರಗಳು ಹಸಿರುಬಣ್ಣದಿಂದ ಕೂಡಿದ್ದು ಚಿತ್ರಗಳ ಅಂಚು ಬಿಳಿ ಹಾಗೂ ಬಂಗಾರವರ್ಣದ ನಕ್ಷಾವಿನ್ಯಾಸವನ್ನು ಹೊಂದಿವೆ. ಪ್ರಧಾನ ಎಲೆಗಳಲ್ಲಿ ಬಲರಾಮನನ್ನು ಗೌರವರ್ಣದಿಂದ ಚಿತ್ರಿಸಿದ್ದು ಮುಖದಲ್ಲಿ ಉತ್ತಮ ಭಾವನಿರೂಪಣೆಯನ್ನು ಹೊಂದಿವೆ. ಪೀಠದ ಚಿತ್ರವು ಅತ್ಯಂತ ಅಲಂಕಾರಮಯವಾಗಿದೆ. ಈ ಎಲೆಗಳಲ್ಲಿ ಕೆಂಪು, ನೀಲಿ, ಹಸಿರು, ಬಿಳಿ ಮತ್ತು ಕಪ್ಪು ಬಣ್ಣಗಳನ್ನು ಸಂಯೋಜಿಸಲಾಗಿದ್ದು, ಇದೇ ವರ್ಣವಿಧಾನವನ್ನು ಅಶ್ವಾರೂಢನಾದ ಎಲೆಯ ಚಿತ್ರಗಳಲ್ಲಿ ಕಾಣಬಹುದು. ಒಟ್ಟಾರೆ ಈ ಗಂಜೀಫಾ ಚಿತ್ರಗಳಲ್ಲಿ ರೇಖೆ, ವರ್ಣ ಹಾಗೂ ಆಕೃತಿಗಳ ಸಂಯೋಜನೆಯೂ ಕಲಾತ್ಮಕವಾಗಿ ಮೂಡಿಬಂದಿವೆ.

೧೦. ಕಲ್ಕಿ ಅವತಾರ

ಪರೀಕ್ಷಿತ ಮಹಾರಾಜನು ಮುಕ್ತಿಗೆ ಹೋದ ಬಳಿಕ ಭೂಲೋಕದಲ್ಲಿ ಕಲಿ ಪ್ರವೇಶವಾಗುವುದು. ಒಂದೇ ಪಾದದಲ್ಲಿ ನಿಂತ ಧರ್ಮವು ಕೂಡ ಅಳಿದು ಹೋಗುವುದು. ಈ ಕಲಿಕಾಲದಲ್ಲಿ ಬುದ್ಧಿಮಟ್ಟವು ಕೆಳಮಟ್ಟದಲ್ಲಿರುವುದು. ಧರ್ಮದ ವಿನಾಶದಿಂದಾಗಿ ಎಲ್ಲ ಕಡೆಗಳಲ್ಲಿ ಕ್ಷಾಮ, ನೆರೆಹಾವಳಿ, ಸ್ವೇಚ್ಛಾಚಾರಗಳು ತಲೆದೋರುವವು. ಕಲಿಯ ದೋಷದಿಂದಾಗಿ ಸತ್ಯ, ನ್ಯಾಯ, ಕ್ಷಮೆ, ಶಾಂತಿ, ಕರುಣೆಗಳಿಗೆ ತೊಂದರೆ ಉಂಟಾದೀತು. ಆದ್ದರಿಂದ ಬ್ರಹ್ಮಾದಿ ದೇವತೆಗಳು ಕ್ಷೀರಸಮುದ್ರಕ್ಕೆ ಹೋಗಿ ರಮಾಪತಿಯ ಗುಣಗಾನ ಮಾಡುವರು. ಇದರಿಂದ ಶ್ರೀಹರಿಯು ತಾಮ್ರಪರ್ಣಿ ತೀರದಲ್ಲಿಯ ಶಂಬಲ ಗ್ರಾಮದಲ್ಲಿ ಯಶಸ್ವಿ ಎಂಬ ಬ್ರಾಹ್ಮಣನಲ್ಲಿ ಕಲ್ಕಿಯ ಅವತಾರ ಮಾಡುವನು. ಬ್ರಹ್ಮಾದಿ ದೇವತೆಗಳು ಅವನಿಗೆ ಖಡ್ಗ ಹಾಗೂ ಕುದುರೆಯನ್ನು ಕೊಡುವರು. ಸುದರ್ಶನಚಕ್ರವು ಖಡ್ಗವಾಗುವುದು. ದುಷ್ಟರಾದವರನ್ನು ಶಿಕ್ಷಿಸಿ ನಾಶಪಡಿಸುವನು. ದಿವ್ಯವಾದ ತೇಜಸ್ಸನ್ನು ಹೊಂದಿ ಅನ್ನ – ನೀರು ಮಾರುವವರನ್ನು ಸಂಹರಿಸಿ ಶಾಂತಿ ಸ್ಥಾಪನೆ ಮಾಡುವುದೇ ಕಲ್ಕಿ ಅವತಾರ.

೧೦.೧. ಕಲ್ಕಿ ಅವತಾರ

ವಿಷ್ಣುವಿನ ಅವತಾರಗಳಲ್ಲಿ ಕಲ್ಕಿ ಅವತಾರವು ಹತ್ತನೇ ಅವತಾರವಾಗಿದೆ. ಇಲ್ಲಿ ರಚನೆಗೊಂಡಿರುವ

ಚಿತ್ರ ೧೦ ಕಲ್ಕಿವತಾರ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಮಕರ ರಾಶಿ



ತುಲಾ ರಾಶಿ

ಚಿತ್ರ ೦ ೧೦



ಕಲ್ಕಿ





ಸೇನಾನಿ



ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಐದು ವೃತ್ತಾಕಾರದ ಗಂಜೀಫಾ ಎಲೆಗಳ ರಾಶಿಗೆ ಸಂಬಂಧಿಸಿವೆ. ಮುಖ್ಯ ದೇವತೆಯಾದ ಕಲ್ಕಿಯನ್ನು ಬಿಳಿ ವರ್ಣದಿಂದ ಸಂಯೋಜಿಸಿದ್ದು, ವಸ್ತ್ರಾಭರಣಗಳನ್ನು ಅತ್ಯಂತ ಕಲಾತ್ಮಕವಾಗಿ ರಚನೆ ಮಾಡಲಾಗಿದೆ. ಅಲಂಕಾರದ ವೈಭವವು ಉದ್ದೀಪನಗೊಂಡಿದೆ. ದೈಹಿಕ ಲಕ್ಷಣಗಳಲ್ಲಿ ದುಂಡುತನ ಕಾಣಲು ಕೆಂಪು ಬಣ್ಣದ ಛಾಯೆಯನ್ನು ತರಲಾಗಿದೆ. ಇಲ್ಲಿ ಕಲ್ಕಿ ಎಲೆಗಳ ಅಂಚು ಕೆಂಪುಬಣ್ಣದ ಹಿನ್ನೆಲೆಯು ಸಂಪೂರ್ಣ ಕಪ್ಪುಬಣ್ಣದಿಂದ ಕೂಡಿದ್ದು, ಚಪ್ಪಟೆಯಾದ ವರ್ಣಪದ್ಧತಿಯನ್ನು ಅನುಸರಿಸಲಾಗಿದೆ. ದೇವತೆಯ ಕೆಳಭಾಗದಲ್ಲಿ ಮೀನಿನ ಚಿತ್ರ, ಸಿಂಹದ ಚಿತ್ರ, ಕುಂಭದ ಚಿತ್ರ, ಮಕರದ ಚಿತ್ರ, ತುಲಾ ಚಿತ್ರಗಳನ್ನು ಚಿತ್ರಿಸಿದ್ದು, ಈ ಚಿತ್ರಗಳು ಸ್ಪಷ್ಟವಾಗಿ ಕಾಣಲು ಹಿನ್ನೆಲೆಯಾಗಿ ಕೆಂಪು ಹಾಗೂ ಕಪ್ಪು ಬಣ್ಣಗಳನ್ನು ಲೇಪನ ಮಾಡಲಾಗಿದೆ. ದೇವತೆಯ ಕೆಳಭಾಗದಲ್ಲಿರುವ ಚೌಕಾಕಾರದ ಪಟ್ಟಿಕೆಯಲ್ಲಿ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಚಿತ್ರಾಲಂಕಾರವನ್ನು ಮಾಡಲಾಗಿದೆ. ರೇಖಾಪ್ರಧಾನವಾದ ಈ ಚಿತ್ರಗಳು ಸಾಂಪ್ರದಾಯಿಕ ಚಿತ್ರಶೈಲಿಯನ್ನು ಅನುಸರಿಸುತ್ತವೆ.

ಕಲ್ಕಿ ಅವತಾರದ ಇನ್ನೊಂದು ಬಗೆಯ ಆಟದ ಹನ್ನೆರಡು ಎಲೆಗಳಲ್ಲಿ ಮುಖ್ಯದೇವತೆಯಾದ ಕಲ್ಕಿಯನ್ನು ಪೀಠದಲ್ಲಿ ಕುಳಿತಿರುವ ಹಾಗೂ ಅಶ್ವಾರೂಢನಾಗಿರುವಂತೆ ಚಿತ್ರಿಸಲಾಗಿದೆ. ಈ ಎರಡೂ ಚಿತ್ರಗಳು ಆಟದ ಮುಖ್ಯ ಎಲೆಗಳಾಗಿವೆ. ಈ ದೇವತೆಯೂ ಚತುರ್ಭುಜಧಾರಿಯಾಗಿದ್ದು ಎರಡು ಕೈಗಳಲ್ಲಿ ಶಂಖ ಹಾಗೂ ಚಕ್ರಗಳನ್ನು ಹಿಡಿದದ್ದು, ಇನ್ನೆರಡು ಕೈಗಳನ್ನು ಅಭಯ ಹಸ್ತ ಹಾಗೂ ಗಜಹಸ್ತ ಸಂಕೇತವಾಗಿ ನಿರೂಪಿಸಲಾಗಿದೆ. ಕಲ್ಕಿಯ ಮೈ ಬಣ್ಣವು ಗೌರವರ್ಣದಿಂದ ಕೂಡಿದ್ದು, ಸಾಂಪ್ರದಾಯಿಕ ವಸ್ತ್ರಾಭರಣಗಳಿಂದ ಅಲಂಕರಣಗೊಂಡಿದ್ದಾನೆ. ಚಿತ್ರಗಳ ಅಂಚಿನಲ್ಲಿ ಹೂವು, ಬಳ್ಳಿಗಳ ನಕ್ಷಾವಿನ್ಯಾಸವು ಸಂಯೋಜನೆಗೊಂಡಿವೆ. ಉಳಿದ ಹತ್ತು ಎಲೆಗಳಲ್ಲಿ ಓಡುತ್ತಿರುವ ಕುದುರೆಯ ಸಂಕೇತಚಿತ್ರವನ್ನು ಸಂಯೋಜಿಸಲಾಗಿದೆ. ಒಂದೊಂದು ಎಲೆಯಲ್ಲಿ ಒಂದರಿಂದ ಹತ್ತು ಸಂಖ್ಯೆಗಳಂತೆ ಕುದುರೆ ಚಿತ್ರಗಳನ್ನು ಬಹು ಕಲಾತ್ಮಕವಾಗಿ ಸಂಯೋಜನೆ ಮಾಡಲಾಗಿದೆ. ಕುದುರೆಯ ಮೈಬಣ್ಣ ಬಿಳಿಬಣ್ಣದಿಂದ ಲೇಪನಗೊಂಡಿದ್ದು ಚಿತ್ರಗಳ ಅಂಚು ಒಂದೇ ರೀತಿಯಲ್ಲಿ ಪ್ರತಿಕೃತಿಗೊಂಡಿವೆ. ಒಟ್ಟಾರೆ ಈ ಚಿತ್ರಗಳು ರೇಖೆ, ವರ್ಣ, ಆಕೃತಿಯಲ್ಲಿ ಯಥಾದೃಷ್ಟಿ ಸಂಯೋಜನೆಯು ಉತ್ತಮ ರೀತಿಯಲ್ಲಿ ಮೂಡಿ ಬಂದಿದೆ.

ನವಗ್ರಹಗಳು

ನಮಃ ಸೂರ್ಯಾಯ ಚಂದ್ರಾಯ ಮಂಗಳಾಯ ಬುಧಾಯ ಚ ।

ಗುರು ಶುಕ್ರ ಶನಿಭ್ಯಶ್ಚ ರಾಹವೇ ಕೇತವೇ ನಮಃ ।

ಇದು ನವಗ್ರಹಗಳ ಸ್ತೋತ್ರ, ನವಗ್ರಹಗಳನ್ನು ಪ್ರದಕ್ಷಿಣೆ ಮಾಡುವಾಗಲೂ ಮತ್ತಿತರ ಸಮಯಗಳಲ್ಲೂ ಈ ಸ್ತೋತ್ರವನ್ನು ಹೇಳುತ್ತಾರೆ.

ವಾರಗಳು

೧. ಭಾನುವಾರ ಅಥವಾ ರವಿವಾರ ಅಥವಾ ಆದಿತ್ಯವಾರ

೨. ಸೋಮವಾರ ಅಥವಾ ಚಂದ್ರವಾರ — ೩. ಮಂಗಳವಾರ ಅಥವಾ ಕುಜವಾರ

೪. ಬುಧವಾರ ಅಥವಾ ಸೌಮ್ಯವಾದ — ೫. ಗುರುವಾರ ಅಥವಾ ಬೃಹಸ್ಪತಿವಾರ

೬. ಶುಕ್ರವಾರ ಅಥವಾ ಭಾರ್ಗವವಾರ — ೭. ಶನಿವಾರ ಅಥವಾ ಮಂದವಾರ

ಈ ಏಳುವಾರಗಳು ಏಳು ಗ್ರಹಗಳು. ಈ ಏಳು ವಾರಗಳಿಗೆ ರಾಹು ಮತ್ತು ಕೇತುಗಳನ್ನು ಸೇರಿಸಿದರೆ ನವಗ್ರಹಗಳಾಗುತ್ತವೆ.

ವಾರಗಳು ಹೇಗುಂಟಾದವು?

ವಾರಗಳು ಎಂದರೇನು?

ಇವುಗಳಿಗೆ ಪೂಜೆ ಏಕೆ?

ಮಾನವಪ್ರಾಣಿಗಳಲ್ಲಿ ಪಂಚತತ್ವಗಳಿರುತ್ತವೆ. ಪಂಚಭೌತಿಕ ಶರೀರ. ನಕ್ಷತ್ರ ಮತ್ತು ಗ್ರಹಗಳಲ್ಲೂ ಸಹ ಪಂಚತತ್ವಗಳಿರುತ್ತವೆ. ನಕ್ಷತ್ರ ಮತ್ತು ಗ್ರಹಗಳ ಪ್ರಕಾರ ಭೂಮಿಯ ಮೇಲೆ ಬೀಳುತ್ತದೆ. ಇದರಿಂದ ಭೂಮಿಗೂ, ನಕ್ಷತ್ರಗಳಿಗೂ ಮತ್ತು ಗ್ರಹಗಳಿಗೂ ಸಂಬಂಧ ಉಂಟಾಯಿತು. ಆದರೆ ನಕ್ಷತ್ರ ಮತ್ತು ಅವುಗಳ ತತ್ವಗಳು ಮನುಷ್ಯಾದಿ ಪ್ರಾಣಿಗಳ ತತ್ವಗಳಿಗಿಂತಲೂ ಅತ್ಯಂತ ಪ್ರಬಲವಾಗಿರುತ್ತವೆ. ಹಾಗಾಗಿ ನಕ್ಷತ್ರ ಮತ್ತು ಗ್ರಹಗಳ ಪ್ರಭಾವಕ್ಕೆ ಸಕಲ ಚರಾಚರ ಜೀವಿಗಳೂ ಅಧೀನವಾಗಿರುತ್ತವೆ.[೧೫]

ಭೂಮಿಗೆ ಸಮೀಪವಿರುವ ಗ್ರಹ–ಚಂದ್ರ

ಅನಂತರ – ಬುಧ

ಅನಂತರ – ಶುಕ್ರ

ಅನಂತರ – ಸೂರ್ಯ

ಅನಂತರ – ಕುಜ (ಮಂಗಳ)

ಅನಂತರ – ಗುರು

ಅನಂತರ – ರಾಹು – ಕೇತು

ಅನಂತರ – ಶನಿ

ಶನಿಗ್ರಹದ ಮೇಲೆ ನಕ್ಷತ್ರಗಳು. ಅದರ ಮೇಲೆ ರಾಶಿಮಂಡಲವಿರುತ್ತದೆ.

ವಾರವೆಂದರೇನು?

ವಾರವೆಂದರೆ ಏಳು ದಿನ ಎಂದರ್ಥ. ಒಂದೊಂದು ದಿನಕ್ಕೆ ಒಂದೊಂದು ಗ್ರಹದ ಹೆಸರನ್ನು ಕೊಟ್ಟಿದ್ದಾರೆ. ಸೂರ್ಯೋದಯದಿಂದ ಪ್ರಾರಂಭಿಸಿ ಮತ್ತೆ ಪುನಃ ಸೂರ್ಯೋದಯವಾಗುವವರೆಗೂ ಒಂದು ದಿನವೆಂದು ಹೆಸರು. ಇಂತಹ ಒಂದು ದಿನಕ್ಕೆ ೨೪ ಗಂಟೆಗಳು, ಹೀಗುಂಟಾದ ಒಂದು ದಿನಕ್ಕೆ ಆಯಾ ಗ್ರಹಗಳಿಂದ ಆಯಾ ಹೆಸರು ಬಂದಿದೆ. ಭೂಮಂಡಲಕ್ಕೆ ಅತ್ಯಂತ ಮೇಲ್ಭಾಗದಲ್ಲಿರುವ ಅಥವಾ ದೂರವಿರುವ ಗ್ರಹವೆಂದರೆ ಶನಿಗ್ರಹ. ಶನಿಗ್ರಹದ ಕೆಳಗೆ ಗುರು, ಕುಜ, ರವಿ, ಶುಕ್ರ, ಬುಧ, ಚಂದ್ರ ಈ ರೀತಿ ಕ್ರಮವಾಗಿ ಒಂದರ ಕೆಳಗೊಂದಿರುತ್ತವೆ.

ಶನಿ ಆದಿಯಿಂದ ಅಂದರೆ ಶನಿವಾರ ಉದಯ ಶನಿಹೋರಾದಿಂದ ಪ್ರಾರಂಭ ಮಾಡಿ ಕ್ರಮವಾಗಿ ಶನಿ, ಗುರು, ಕುಜ, ರವಿ, ಬುಧ, ಚಂದ್ರ ಈ ರೀತಿ ಗಂಟೆಗೊಂದರಂತೆ ಕ್ರಮವಾಗಿ ಎಣಿಸುತ್ತ ಬಂದರೆ ಮರುದಿನ ಉದಯಕ್ಕೆ ರವಿಹೋರಾ ಎನ್ನುತ್ತಾರೆ. ಉದಯ ಹೋರಾ ಇರುವುದರಿಂದ ಆ ದಿನಕ್ಕೆ ರವಿವಾರ ಅಥವಾ ಭಾನುವಾರ ಅಥವಾ ಆದಿತ್ಯವಾರ ಎಂದು ಹೆಸರಾಯಿತು. ರವಿವಾರ ಉದಯ ಹೋರಾದಿಂದ ಮೇಲೆ ಹೇಳಿದ ಗ್ರಹಗಳನ್ನು ಕ್ರಮವಾಗಿ ಪುನಃ ಗಂಟೆಗೊಂದರಂತೆ ಎಣಿಸುತ್ತ ಬಂದರೆ ಮರುದಿನ ಉದಯಕ್ಕೆ ಚಂದ್ರ ಹೋರಾ ಸೋಮವಾರ ಎನ್ನುತ್ತಾರೆ. ಇದೇ ರೀತಿ ಉದಯ ಹೋರಾ ಕ್ರಮವನ್ನು ಎಣಿಸುತ್ತಾ ಕ್ರಮವಾಗಿ ಉದಯಕ್ಕೆ ಯಾವ ಹೋರಾಗಳು ಬರುತ್ತವೋ ಆಯಾ ದಿನಗಳಿಗೆ ಆಯಾ ಹೋರಾಗಳ ಹೆಸರು ಏರ್ಪಟ್ಟಿವೆ.

೧೫. ಚಿಕ್ಕೇರೂರು ಧೀರೇಂದ್ರಾಚಾರ್ : ನವಗ್ರಹಗಳು, ಪುಟ-೧

ಅನೇಕ ಪುರಾಣಗಳಲ್ಲಿ ಈ ಗ್ರಹಗಳು ಭೂಮಿಯೊಂದಿಗೆ ಮತ್ತು ಭೂನಿವಾಸಿಗಳೊಂದಿಗೆ ನೇರವಾದ ಆಧ್ಯಾತ್ಮಿಕ ಆತ್ಮಸಂಪರ್ಕ ಹೊಂದಿವೆ. ದೈಹಿಕ ಮತ್ತು ಮಾನಸಿಕವಾಗಿಯೂ ಅವು ದಾರಿ ತೋರಿಸುತ್ತವೆ ಎಂದು ಉಲ್ಲೇಖವಿದೆ.

೧. ಗ್ರಹಗಳು – ನಕ್ಷತ್ರಗಳು ಮತ್ತು ಮನುಷ್ಯನಿಗೂ ಆತ್ಮಸಂಬಂಧವಿದೆ.
೨. ಚರಿತ್ರೆಯಲ್ಲಿ ಪೂರ್ವನಿಯೋಜಿಸಿದಂತೆ ಕುಲ ಮತ್ತು ದೇಶಗಳು ಕರ್ಮಕ್ಕೆ ಬದ್ಧವಾಗಿವೆ.
೩. ಮನುಷ್ಯನ ಜೀವನದಾರಿ ಆ ಗ್ರಹಗಳನ್ನು ಆಧರಿಸಿದೆ. ಗ್ರಹಗಳು ಆಗಲೇ ಮನುಷ್ಯನ ಭವಿಷ್ಯತ್ತನ್ನು ತೀರ್ಮಾನಿಸಿರುತ್ತವೆ.
೪. ನಮ್ಮ ಋಷಿ ಮುನಿಗಳು ತಮ್ಮ ಅವಲೋಕನ, ಧ್ಯಾನ, ತಪಸ್ಸು ಪ್ರಯೋಗ ಮತ್ತು ನಿಗೂಢ ಶಕ್ತಿಯಿಂದ ಎಲ್ಲಾ ಗ್ರಹಗಳ ಚಲನ, ನಡವಳಿಕೆ ಮತ್ತು ಬೇರೆ ಬೇರೆ ಗ್ರಹಗಳೊಂದಿಗೆ ಕೂಡುವಿಕೆ, ಮತ್ತು ಅವುಗಳಿಂದ ಮನುಷ್ಯನ ಮತ್ತು ಲೋಕದ ಮೇಲೆ ಆಗುವ ಲಾಭದಾಯಕ ಮತ್ತು ಕೆಡಕು ಪರಿಣಾಮಗಳನ್ನು ಲೆಕ್ಕಾಚಾರ ಮಾಡಿ ಹೇಳಿ ಬರೆದಿಟ್ಟಿದ್ದಾರೆ. ಭೂಮಿಯಲ್ಲಿ ಮನುಷ್ಯ ಹುಟ್ಟಿದ ಸರಿಯಾದ ಸಮಯದಿಂದ ಗ್ರಹ–ಗತಿಗಳಿಂದ ಅವನ ಕರ್ಮವನ್ನು, ಭವಿಷ್ಯತ್ತನ್ನು ನಿರ್ಧರಿಸಲಾಗುತ್ತದೆ.[೧೬]

ಸೂರ್ಯಗ್ರಹ

ಜಪಾಕುಸುಮ ಸಂಕಾಶಂ ಕಾಶ್ಯಪೇಯಂ ಮಹಾದ್ಯುತಿಂ ।
ತಮೋರಿಂ ಸರ್ವಪಾಪಘ್ನಂ, ಪ್ರಣತೋಸ್ಮಿ ದಿವಾಕರಂ ॥

ದಾಸವಾಳ ಹೂವಿನಂತೆ ಇರುವ ಸೂರ್ಯ, ಋಷಿ ಕಶ್ಯಪರ ಮಗ, ಕಿರಣಗಳಿಂದ ಪ್ರಕಾಶಿಸುತ್ತಿರುವ, ಕತ್ತಲನ್ನು ದೂರ ಮಾಡುವ ಮತ್ತು ಸಕಲ ಪಾಪಗಳನ್ನು ತೊಳೆಯುವ ಸೂರ್ಯನೇ, ನಿನಗೆ ನಮಸ್ಕರಿಸುತ್ತೇನೆ.

ಸೃಷ್ಟ್ಯಾರಂಭದಲ್ಲಿ ಶೇಷಶಾಯಿ ಪರಮಾತ್ಮನ ಹೊಕ್ಕಳಿನಿಂದ ಒಂದು ಕಮಲವು ಹುಟ್ಟಿತು. ಕಮಲದಲ್ಲಿ ಚತುರ್ಮುಖ ಬ್ರಹ್ಮ ಹುಟ್ಟಿದ, ಭಗವದಜ್ಞಾನುಸಾರ ಬ್ರಹ್ಮ ಮರೀಚಿ ಮೊದಲಾದವರನ್ನು ಸೃಷ್ಟಿಸಿದ. ಇವರಿಗೆ ಮಾನಸ ಪುತ್ರರೆಂದು ಹೆಸರು. ಮರೀಚಿಯ ಶ್ರೇಷ್ಠ ಪುತ್ರರೇ ಕಶ್ಯಪ ಋಷಿಗಳು, ಇವರು ಮಹಾ ತಪಸ್ವಿಗಳು, ಮಹಾ ಬ್ರಹ್ಮಚಾರಿಗಳು, ವೇದಾಧ್ಯಯನ ಪಂಡಿತರು.

ದಕ್ಷ ಪ್ರಜಾಪತಿಯು ತನ್ನ ಹದಿಮೂರು ಹೆಣ್ಣು ಮಕ್ಕಳನ್ನು ಕಶ್ಯಪರಿಗೆ ಕೊಟ್ಟು ಮದುವೆ ಮಾಡಿದ. ಅವರಲ್ಲಿ ದಿತಿ ಮತ್ತು ಅದಿತಿ ಮುಖ್ಯರು. ದಿತಿಯಲ್ಲಿ ದೈತ್ಯರು, ಅದಿತಿಯಲ್ಲಿ ದೇವತೆಗಳೂ ಹುಟ್ಟಿದರು. ಆಗ ಅದಿತಿ ಗರ್ಭಿಣಿ. ತುಂಬು ಗರ್ಭಿಣಿ ಅದಿತಿಯನ್ನು ನೋಡಿದ ಕಶ್ಯಪರು ದೇವಿ, ನಿನ್ನುದರದಲ್ಲಿ ಜಗತ್ತನ್ನೇ ಬೆಳಗುವ, ಪ್ರಪಂಚಕ್ಕೆ ಬೆಳಕು ಚೆಲ್ಲುವ ಮಹಾತ್ಮ ಹುಟ್ಟುತ್ತಾನೆ ಎಂದರು. ಅಂದಿನಿಂದ ಅದಿತಿ ತುಂಬಾ ಸಂತೋಷದಿಂದಿದ್ದಳು. ಒಂದು ಶುಭ ಮುಹೂರ್ತದಲ್ಲಿ ಸೂರ್ಯದೇವರು ಜಗತ್ತಿನಲ್ಲಿ ಅವತರಿಸಿದನು. ಅದಿತಿ ಸೂರ್ಯನನ್ನು ಗರ್ಭದಲ್ಲಿ ಧರಿಸಿದ್ದಳು. ಒಂದು ದಿವಸ ಕಶ್ಯಪರು ಸ್ನಾನಕ್ಕೆಂದು ಹೊರಗೆ ಹೋಗಿದ್ದರು. ಬುಧನು ಬ್ರಾಹ್ಮಣವೇಷದಲ್ಲಿ ಬಂದು ಭವತಿ ಭಿಕ್ಷಾಂ ದೇಹಿ ಎಂದು ಕೂಗಿದ. ತುಂಬು ಗರ್ಭಿಣಿ ಅದಿತಿ ಕೈಯಲ್ಲಿ ಅಕ್ಕಿ ಹಿಡಿದು ಎದ್ದು ಬರುವುದು ಸ್ವಲ್ಪ ತಡವಾಯಿತು. ಕೋಪಗೊಂಡ ಬುಧ "ಮೃತೋ ಅಂಡಃ (ಭ್ರೂಣವು ಸತ್ತು ಹೋಗಲಿ)" ಎಂದು ಶಪಿಸಿ ಹೊರಟು ಹೋದನು.

೧೬. ಚಿಕ್ಕೇರೂರು ಧೀರೇಂದ್ರಾಚಾರ್ : ನವಗ್ರಹಗಳು, ಪುಟ–೨–೩

ಪ್ರಜ್ಞಾಹೀನಳಾಗಿ ಕುಕ್ಕರಿಸಿ ಬಿದ್ದಳು ಅದಿತಿ. ಅವಳಿಂದ ವಿಷಯ ತಿಳಿದ ಕಶ್ಯಪರು ಶ್ರೀಮನ್ನಾರಾಯಣನನ್ನು ಕುರಿತು ಧ್ಯಾನಿಸಿದರು. ಪರಮಾತ್ಮನ ಅನುಗ್ರಹದಿಂದ ಬುಧನ ಶಾಪವನ್ನು ದಹಿಸಿಬಿಟ್ಟರು.[೧೭] ಆದರೂ ಅದಿತಿಗೆ ಭಯ ತಪ್ಪಲಿಲ್ಲ. ಮೃತೋ ಆಂಡಃ ಎಂದು ಕನವರಿಸುತ್ತಿದ್ದಳು. ಆ ಕಾರಣದಿಂದ ಸೂರ್ಯನಿಗೆ ಮಾರ್ತಾಂಡ ಎಂದು ಹೆಸರು ಬಂದಿತು. ಆದಿತಿಯ ಮಗನಾಗಿದ್ದರಿಂದ ಆದಿತ್ಯನೆಂದು ಹೆಸರು ಬಂದಿತು. ಅದಕ್ಕೆ ವಾರಗಳಲ್ಲಿ ಆದಿತ್ಯವಾರ ಎನ್ನುತ್ತಾರೆ. ಮತ್ತೊಂದು ಪುರಾಣದ ಪ್ರಕಾರ ಸೃಷ್ಟಿಕರ್ತನಾದ ಭಗವಂತನ ಇಚ್ಛಾಮಾತ್ರದಿಂದಲೇ ಒಂದು ದಿವ್ಯ ತೇಜಸ್ಸು ಹೊರಗಡೆ ಬಂದಿತು. ಹೊರಗಡೆ ಬಂದ ದಿವ್ಯ ತೇಜಸ್ಸಿನೊಂದಿಗೆ ಪರಮಾತ್ಮನಾದ ಶ್ರೀ ವಿಷ್ಣುವಿನ ತೇಜಸ್ಸು ಸೇರಿಕೊಂಡಿತು. ಅದು ಬೆಳೆದು ನಿಂತಿತು. ಸ್ವಯಂವ್ಯಕ್ತವಾದುದರಿಂದ ಸೂರ್ಯ ಎಂದು ಹೆಸರಾಯಿತು. ಈ ತೇಜಃಪುಂಜದಿಂದ ಹನ್ನೆರಡು ಪ್ರತ್ಯೇಕ ತೇಜಸ್ಸುಗಳು ಹುಟ್ಟಿದವು. ಅವೇ ದ್ವಾದಶಾದಿತ್ಯರೆಂದು ಹೆಸರಾದವು.

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ ।
ತತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯ ದೃಷ್ಟಯೇ।

ಭಕ್ತನಾದ ನನ್ನ ದರ್ಶನಕ್ಕಾಗಿ ಎಲೈ ಪೂರ್ಣನಾದ ಭಗವಂತನೇ, ಸೂರ್ಯಮಂಡಲದಲ್ಲಿ ಅಂತರ್ಹಿತನಾದ ನಿನ್ನ ಸ್ವರೂಪವನ್ನು ತೋರಿಸು. ಭಕ್ತನು ಸೂರ್ಯ ಭಗವಾನನಿಗೆ ಭಗವದಪರೋಕ್ಷಕ್ಕಾಗಿ ಮಾಡಬೇಕಾದ ಪ್ರಾರ್ಥನೆ ಇದು.

ಸಪ್ತ ಯುಂಜಂತಿ ರಥಮೇಕಚಕ್ರಂ

ಎಂದರೆ ಸೂರ್ಯನ ರಥಕ್ಕೆ ಒಂದೆ ಚಕ್ರ, ಏಳು ಕುದುರೆ. ಆ ಏಳೇ ಕುದುರೆಗಳಲ್ಲಿ ಒಂದು ಕುದುರೆ ಹಸಿರು ಆದ್ದರಿಂದ ಸೂರ್ಯನನ್ನು ಹರಿದ್ವಶ ಎಂದು ಕರೆಯುತ್ತಾರೆ.

ಯಸ್ಮಾತ್ ಮಾಘಸ್ಯ ಸಪ್ತಮ್ಯಾಂ ರಥಮಾಪುರ್ದಿನಾ ಕರಾಃ।
ತಸ್ಮಾತ್ ಸಾ ರಥಸಪ್ತಮೀ ॥

ಅಂದರೆ ಮಾಘ ಶುದ್ಧ ಸಪ್ತಮಿ ದಿನದಂದು ಸೂರ್ಯನಿಗೆ ರಥ ಲಾಭವಾಯಿತು. ಆದ್ದರಿಂದ ಆ ದಿನವನ್ನು ರಥಸಪ್ತಮಿ ಎಂದು ಕರೆಯುತ್ತಾರೆ. ಆ ರಥಕ್ಕೆ ಅರುಣ ಸಾರಥಿ. ಏಳು ಕುದುರೆಗಳು ಎಳೆದ ಆ ರಥವು ದಿನ ಮುಗಿಯುವ ತನಕ ಓಡುತ್ತದೆ. ದೇವಲೋಕದಲ್ಲಿರುವ ಸೂರ್ಯನ ವಾಸಸ್ಥಾನದಲ್ಲಿ ವಿಶ್ರಮಿಸುತ್ತದೆ, ಇದು ದಿನನಿತ್ಯದ ಕಾರ್ಯಕ್ರಮ.

ನವಗ್ರಹ ಗಂಜೀಫಾ ಆಟದ ಎಲೆಗಳಲ್ಲಿ ೨೧೬ ಸೂಟ್‌ಗಳು ಬರುತ್ತವೆ. ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ದೊರೆತ ನವಗ್ರಹಗಂಜೀಫಾಗಳು ವಿಭಿನ್ನತೆಯಿಂದ ಕೂಡಿವೆ. ಅಲ್ಲದೆ ನವಗ್ರಹ ಚಿತ್ರಗಳು ೧೨ ರಾಶಿಗಳನ್ನೊಳಗೊಂಡು ಚಿತ್ರಿತಗೊಂಡಿದ್ದು ವಿಶೇಷ. ಬೇರೆ ಬೇರೆ ಸ್ಥಳಗಳಲ್ಲಿ ದೊರೆತ ಕೆಲವು ನವಗ್ರಹ ಗಂಜೀಫಾಗಳನ್ನು ಚಿತ್ರಸಹಿತ ವಿವರಿಸಲಾಗಿದೆ.

ಮೈಸೂರಿನ ಜನಪದ ವಸ್ತುಸಂಗ್ರಹಾಲಯದಲ್ಲಿಯ ನವಗ್ರಹ ಗಂಜೀಫಾ ಎಲೆಗಳು

ಚಿತ್ರ ೧೧. ಸೂರ್ಯಗ್ರಹ

ಸೂರ್ಯಗ್ರಹವು ಸಿಂಹರಾಶಿಯಲ್ಲಿ, ೫.೫ ಇಂಚು ವೃತ್ತಾಕಾರದಲ್ಲಿ ರಚಿತಗೊಂಡಿದ್ದು, ಈ

೧೭. ಚಿಕ್ಕೇರೂರು ಧೀರೇಂದ್ರಾಚಾರ್ : ನವಗ್ರಹಗಳು, ಪುಟ–೫

ಚಿತ್ರದಲ್ಲಿ ಸಿಂಹದ ಚಿತ್ರವನ್ನು ಚಿತ್ರಿಸಿದ್ದು, ನೋಡುಗನ ಬಲಭಾಗಕ್ಕೆ ಮುಖಮಾಡಿ ಮಂಡಿಯೂರಿ ನಿಂತಿದೆ. ಮೇಲ್ಭಾಗದಲ್ಲಿ ವೃತ್ತಾಕಾರದ ಚಿತ್ರವನ್ನು ಚಿತ್ರಿಸಿ ಅದರಲ್ಲಿ ಹಳದಿ ಮತ್ತು ಕೆಂಪುವರ್ಣ ಲೇಪಿಸಲಾಗಿದೆ. ಹಿನ್ನೆಲೆಯಲ್ಲಿ ಕಪ್ಪುವರ್ಣವನ್ನು ಲೇಪಿಸಲಾಗಿದೆ. ಸಿಂಹದ ಶಿರದ ಸುತ್ತಲೂ ಬಂಗಾರವರ್ಣದ ಲೇಪನವಿದೆ ಹಾಗೂ ಸ್ಪಷ್ಟವಾದ ರೇಖೆಗಳಿವೆ.

ಚಿತ್ರ –೧೨. ಸೂರ್ಯಗ್ರಹ

ಈ ಗ್ರಹವು ಮಿಥುನರಾಶಿಯಲ್ಲಿ, ೫ ಇಂಚು ವೃತ್ತಾಕಾರದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಯುವಕ ಮತ್ತು ಯುವತಿಯು ಕಂಡುಬರುತ್ತಾರೆ. ಯುವತಿಯು ಯುವಕನ ಹೆಗಲ ಮೇಲೆ ಕೈ ಹಾಕಿ ಮಂಡಿಯೂರಿ ಕುಳಿತಿದ್ದಾಳೆ. ಬಲಗೈಯಲ್ಲಿ ದಂಡವನ್ನು ಹಿಡಿದಿದ್ದು, ಕೊರಳಲ್ಲಿ ಆಭರಣಗಳು ಮತ್ತು ಕೆಂಪು ವಸ್ತ್ರದಲ್ಲಿ ಸ್ಪಷ್ಟತೆಯು ಕಂಡುಬರುತ್ತದೆ. ಯುವತಿಯ ಶಿರ ಎದುರು ಮುಖವಾಗಿದ್ದರೂ ಕಣ್ಣಿನ ದೃಷ್ಟಿ ಪಾರ್ಶ್ವನೋಟಕ್ಕೆ ಇದೆ. ಇನ್ನು ಯುವಕನು ಯುವತಿಯ ಮೇಲೆ ಕೈ ಹಾಕಿ ಮಂಡಿಯೂರಿ ಕುಳಿತಿದ್ದಾನೆ. ಎಡಗೈಯಲ್ಲಿ ಸಣ್ಣ ಗದೆ ಹಿಡಿದಿದ್ದು, ಶಿರಕ್ಕೆ ಟೊಪ್ಪಿಗೆಯನ್ನು ಧರಿಸಿದ್ದಾನೆ. ಅವರಿಬ್ಬರ ಶಿರದ ಮೇಲ್ಭಾಗದಲ್ಲಿ ಹಳದಿಬಣ್ಣದ ವೃತ್ತಾಕಾರದ ಸೂರ್ಯನ ಚಿಹ್ನೆ ಇದೆ. ಕೇಂದ್ರದಲ್ಲಿ ಹಸಿರು ಬಣ್ಣದ ವೃತ್ತವಿದ್ದು ಅದರ ಮಧ್ಯ ಕೆಂಪುವರ್ಣವನ್ನು ಲೇಪಿಸಲಾಗಿದೆ. ಹಿನ್ನೆಲೆಯಲ್ಲಿ ನೀಲವರ್ಣದ ಲೇಪನವಿದೆ.

ಚಿತ್ರ –೧೩. ಸೂರ್ಯಗ್ರಹ

ಈ ಗ್ರಹವು ಕಟಕರಾಶಿಯಲ್ಲಿ, ೫ ಇಂಚು ವೃತ್ತಾಕಾರದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಕಟಕ ರಾಶಿ (ಏಡಿ)ಯ ಚಿತ್ರವಿದೆ. ಕಟಕವು ಮೇಲ್ಮುಖವಾಗಿ ಸೂರ್ಯನನ್ನು ನೋಡುತ್ತಿದೆ. ಇದಕ್ಕೆ ಹತ್ತು ಕಾಲ್ಗಳು ಕಂಡುಬರುತ್ತವೆ. ಹಾಗೂ ಎರಡು ಕಣ್ಣುಗಳ ನೇರ ನೋಟ, ಕಟಕ ರಾಶಿಗೆ ಹಳದಿವರ್ಣದ ಲೇಪನವಿದೆ. ಮಧ್ಯದಲ್ಲಿ ನೆರಳು ಬೆಳಕಿನ ಛಾಯೆಯನ್ನು ಹಾಕಲಾಗಿದೆ. ಮೇಲ್ಭಾಗದಲ್ಲಿ ಸೂರ್ಯನ ಚಿತ್ರಣವಿದ್ದು ಹಳದಿ ಮತ್ತು ಹಸಿರುವರ್ಣದ ಲೇಪನವಿದೆ. ಹಿನ್ನೆಲೆಯಲ್ಲಿ ದಟ್ಟ ಕೆಂಪುವರ್ಣದ ಲೇಪನವಿದೆ.

ಚಿತ್ರ –೧೪ ಸೂರ್ಯಗ್ರಹ

ಈ ಗ್ರಹವು ಸಿಂಹರಾಶಿಯಲ್ಲಿ, ೫ ಇಂಚು ವೃತ್ತಾಕಾರದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಸಿಂಹವು ತನ್ನ ಎರಡು ಕಾಲುಗಳನ್ನು ಮೇಲೆತ್ತಿ ಶಿರಭಾಗವನ್ನು ನೋಡುತ್ತಿದೆ. ಇದರ ಬಾಲದ ವಿಶೇಷತೆ ಕೆಳಗಡೆ ಇದೆ. ಬಾಲ ಮತ್ತು ಶಿರದ ಮಧ್ಯಭಾಗದಲ್ಲಿ ನಕ್ಷತ್ರ ಆಕಾರದ ಸೂರ್ಯನ ಚಿತ್ರವಿದೆ. ಹಳದಿ ಮತ್ತು ಹಸಿರು ವರ್ಣಲೇಪನವಿದೆ. ಸಿಂಹಕ್ಕೆ ಹಳದಿ ವರ್ಣದ ಲೇಪನವಿದ್ದು ಸುತ್ತಲೂ ಕೆಂಪುವರ್ಣದ ಹೊರರೇಖೆ ಹಾಕಲಾಗಿದೆ. ಈ ಚಿತ್ರಕ್ಕೆ ಹಿನ್ನೆಲೆಯಲ್ಲಿ ಕೆಂಪು ವರ್ಣದ ಲೇಪನವಿದೆ.

ಚಿತ್ರ –೧೫. ಸೂರ್ಯಗ್ರಹ

ಈ ಗ್ರಹವು ಸಿಂಹರಾಶಿಯಲ್ಲಿ, ೫ ಇಂಚು ವೃತ್ತಾಕಾರದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಸೂರ್ಯಗ್ರಹವನ್ನು ವೃಶ್ಚಿಕ (ಚೇಳು)ರಾಶಿಯಲ್ಲಿ ಚಿತ್ರಿಸಿದ್ದಾರೆ. ನೋಡುಗನ ಎಡಭಾಗಕ್ಕೆ ವೃಶ್ಚಿಕದ ಮುಖವಿದ್ದು, ಬಲಭಾಗದಲ್ಲಿ ತನ್ನ ಕೊಂಡಿಯನ್ನು ಎಡಭಾಗದ ಶಿರದವರೆಗೂ ಚಾಚಿಕೊಂಡಿದೆ. ಶಿರ

೧೧



ಸಿಂಹ ರಾಶಿ

೧೨




ಮಿಥುನ ರಾಶಿ

೧೩



ಕಟಕ ರಾಶಿ

೧೪



ಸಿಂಹ ರಾಶಿ

೧೫



ವೃಶ್ಚಿಕ ರಾಶಿ

೧೬



ಸೇನಾಪತಿ

ಸಂಗ್ರಹ ; ಜನಪದ ವಸ್ತು ಸಂಗ್ರಹಾಲಯ, ಮೈಸೂರು

ಮತ್ತು ಮಧ್ಯದಲ್ಲಿ ಸೂರ್ಯನ ಚಿತ್ರವಿದೆ. ಸುತ್ತಲೂ ಚಿಕ್ಕದಾದ ಮತ್ತು ಲಂಬವಾದ ವೃತ್ತವನ್ನು ಚಿತ್ರಿಸಿದ್ದಾರೆ. ಹಳದಿ, ಹಸಿರು, ಕೆಂಪುವರ್ಣದ ಲೇಪನವಿದೆ. ವೃಶ್ಚಿಕಕ್ಕೆ ಬಂಗಾರವರ್ಣದ ಲೇಪನವಿದ್ದು, ಹನ್ನೆರಡು ಕಾಲುಗಳನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ.

ಚಿತ್ರ –೧೬. ಸೂರ್ಯಗ್ರಹ

ಈ ಗ್ರಹವು ಸೇನಾಪತಿ ಚಿಹ್ನೆಯಡಿ ೫ ಇಂಚು ಕಾಗದರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಸೇನಾನಿಯನ್ನು ಚಿತ್ರಿಸಿದ್ದಾರೆ. ನೋಡುಗನ ಎಡಭಾಗಕ್ಕೆ ಮುಖ ಮಾಡಿ ಹೊರಟಿರುವ ಅಶ್ವದ ಮೇಲ್ಗಡೆ ಕುಳಿತಿರುವ ಸೇನಾನಿ ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಎಡಗೈಯಲ್ಲಿ ಕುದುರೆಯ ಲಗಾಮು ಹಿಡಿದಿದ್ದಾನೆ. ತಲೆಯ ಮೇಲೆ ಕಿರೀಟ ವಸ್ತ್ರವಿನ್ಯಾಸಕ್ಕೆ ಹಳದಿ ಹಾಗೂ ಹಸಿರುವರ್ಣದ ಲೇಪನವಿದೆ. ಅಶ್ವಕ್ಕೆ ಬಿಳಿ ವರ್ಣದ ಲೇಪನವಿದ್ದು ಹೊರ ರೇಖೆಯಾಗಿ ಕೆಂಪುವರ್ಣವನ್ನು ಲೇಪಿಸಿದ್ದಾರೆ. ಹಿನ್ನೆಲೆಯಲ್ಲಿ ಗಾಢವಾದ ಕಪ್ಪುವರ್ಣವಿದೆ.

ಚಂದ್ರಗ್ರಹ

ದಧಿಶಂಖ ತುಷಾರಾಭಂ ಕ್ಷೀರೋದಾರ್ಣವ ಸಂಭವಂ ।
ನವಾಮಿ ಶಶಿನಂ ಸೋಮಂ ಶಂಭೋರ್ಮುಕುಟಭೂಷಣಂ ॥

ಮೊಸರು, ಶಂಖ ಮತ್ತು ಹಿಮದಂತೆ ಬಣ್ಣವುಳ್ಳವನೆ, ಕ್ಷೀರ ಸಾಗರೋದ್ಭವನೇ ವನಮುಖದಲ್ಲಿ ಶೋಭಿಸುವ ಓ। ಚಂದ್ರನೇ ನಿನಗೆ ನಮಸ್ಕರಿಸುತ್ತೇನೆ.

ಅಮೃತ ಮಂಥನ ಸಮಯದಲ್ಲಿ ಕ್ಷೀರಸಾಗರದಿಂದ ಚಂದ್ರ ಹುಟ್ಟಿದ, ಆ ಮಂಥನದಿಂದಲೇ ಅವತರಿಸಿದ ಶ್ರೀ ಲಕ್ಷ್ಮೀದೇವಿಗೆ ಸಹೋದರನೆನಿಸಿದ, ಶ್ರೀಮದ್ಭಾಗವತದಲ್ಲಿ ಶ್ರೀ ನಾರಾಯಣ, ನಾಭಿಕಮಲದಿಂದ ಚತುರ್ಮುಖ ಬ್ರಹ್ಮ ಹುಟ್ಟಿದ. ಬ್ರಹ್ಮನಿಂದ ಅತ್ರಿಋಷಿ ಹುಟ್ಟಿದ. ಬ್ರಹ್ಮನ ಮಾನಸ ಪುತ್ರ ಅತ್ರಿ, ಅತ್ರಿ ಮಹರ್ಷಿ ತಪಸ್ಸಿಗೆ ಕುಳಿತ. ಊರ್ಧ್ವಗಾಮಿಯಾದ ಆತನ ರೇತಸ್ಸು ಸೋಮರೂಪದಲ್ಲಿ ಹೊರಬಂದಿತು.

ಬ್ರಹ್ಮದೇವರು ತನ್ನ ಅಂಶಭೂತನಾದ ದೇವನಾದ ಚಂದ್ರನನ್ನು ಅದರಲ್ಲಿ ಸ್ಥಾಪಿಸಿದ ಮತ್ತೊಂದು ಕಡೆ ಅತ್ರಿಯ ಆನಂದಾಶ್ರುಗಳಿಂದ ಚಂದ್ರನು ಹುಟ್ಟಿದನೆಂದೂ ಹೇಳಿದೆ. ಇನ್ನೊಂದು ಕಡೆ ತಪಸ್ಸಿಗೆ ಕುಳಿತ ಅತ್ರಿಗೆ ಬ್ರಹ್ಮ ಪ್ರತ್ಯಕ್ಷನಾದ. ನಿನಗೇನು ಬೇಕು? ಕೇಳು ಎಂದ. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ನನಗೆ ಮಕ್ಕಳಾಗಿ ಹುಟ್ಟುವಂತೆ ವರ ಕೊಡು ಎಂದು ಬೇಡಿದ ಅತ್ರಿ ಅವರು ತಮ್ಮ ತಮ್ಮ ಅಂಶಗಳಿಂದ ನಿನಗೆ ಮಕ್ಕಳಾಗಿ ಹುಟ್ಟುತ್ತಾರೆ ಎಂದು ವರ ಕೊಟ್ಟು ಅಂತರ್ಧಾನನಾದ ಬ್ರಹ್ಮ.

ದಿಗಂತೋಜ್ವಲ ಪ್ರಭಾವದ ಆ ಗರ್ಭವನ್ನು ಅತ್ರಿಯ ಪತ್ನಿಯಾದ ಅನುಸೂಯಾ ದೇವಿಯು ಹೆಚ್ಚು ಕಾಲ ಧರಿಸಲಾರಳಾದಳು. ಭೂಮಿಯ ಮೇಲೆ ಗರ್ಭವನ್ನು ವಿಸರ್ಜಿಸಿದಳು. ಸೋಮ ಹುಟ್ಟಿ ನೆಲದ ಮೇಲೆ ಅನಾಥವಾಗಿ ಬಿದ್ದಿರುವುದನ್ನು ಬ್ರಹ್ಮ ನೋಡಿದ ತಕ್ಷಣವೇ ಧರೆಗಿಳಿದು ಬಂದು ನೆಲದ ಮೇಲೆ ಉರುಳುತ್ತಿದ್ದ ಸೋಮನನ್ನು ಎತ್ತಿ ತನ್ನ ರಥದಲ್ಲಿ ಕೂಡಿಸಿಕೊಂಡನು. ಆ ರಥದ ಮೇಲೆ ಕುಳಿತ ಸೋಮ ಭೂಮಿಯನ್ನು ೨೧ ಸಲ ಪ್ರದಕ್ಷಿಣೆ ಮಾಡಿದ.[೧೮] ಆ ಸಮಯದಲ್ಲಿ ಸೋಮನ ದ್ರವಭಾಗಗಳು ಭೂಮಿಯ ಮೇಲೆ ಚೆಲ್ಲಿದವು. ಹಾಗೆ ಬಿದ್ದೆಡೆಯಲ್ಲಾ ಔಷಧಿಗಳು ಗಿಡಮೂಲಿಕೆರೂಪದಲ್ಲಿ

---

೧೮. ಚಿಕ್ಕೇರೂರು ಧೀರೇಂದ್ರಾಚಾರ್ : ನವಗ್ರಹಗಳು, ಪುಟ–೪೦

ಹುಟ್ಟಿದವು. ಶಂಕರನ ಕೃಪೆಯಿಂದ ಚಂದ್ರಲೋಕ ರಾಜ್ಯ ಸೋಮನಿಗೆ ಲಭಿಸಿತು. ಮತ್ತು ತನ್ನೆರಡು ಕಣ್ಣುಗಳಲ್ಲಿ ಚಂದ್ರನನ್ನು ಒಂದು ಕಣ್ಣಾಗಿಸಿಕೊಂಡು ಅಮೃತಮಂಥನ ಕಾಲದಲ್ಲಿ ಹಾಲಾಹಲವೆಂಬ ಕಾಲಕೂಟ ವಿಷ ಹುಟ್ಟಿತು. ಶಿವ ಅದನ್ನು ಕುಡಿದು ಬಿಟ್ಟ. ಅದು ಹೊಟ್ಟೆಯೊಳಗೆ ಇಳಿಯದಂತೆ ಪಾರ್ವತಿ ಅದನ್ನು ಶಿವನ ಕಂಠಪ್ರದೇಶದಲ್ಲಿಯೇ ವಿಷವನ್ನು ಹಿಡಿದು ನಿಲ್ಲಿಸಿದಳು.

ಕಾಲಕೂಟ ವಿಷದ ಪ್ರಭಾವದಿಂದ ತಲೆ ಕಾದ ಕಬ್ಬಿಣವಾಯಿತು. ಆ ಅತ್ಯುಷ್ಣವನ್ನು ಶಿವ ತಂಪಾಗುವಂತೆ ಮಂಜಿನ ಚಂದಿರನನ್ನು ತಲೆಯಲ್ಲಿ ಧರಿಸಿದ. ಹೀಗೆ ಅರ್ಧ ಚಂದ್ರ ಶಿವನ ತಲೆಯಲ್ಲಿ ಪ್ರಕಾಶಿಸಿದ. ಜ್ಯೋತಿಷ್ಯಶಾಸ್ತ್ರದ ಪ್ರಕಾರ ಚಂದ್ರಮಂಡಲವೇ ಸೃಷ್ಟಿಗೆ ಜಲಧಾರವೆಂದು ತಿಳಿದು ಬರುತ್ತದೆ. ಸಮುದ್ರದಿಂದ ಹುಟ್ಟಿದ ಚಂದ್ರನಿಗೂ ಸಮುದ್ರಕ್ಕೂ ಅತ್ಯಂತ ನಿಕಟ ಸಂಬಂಧವಿದೆಯೆಂದು ಪ್ರತ್ಯಕ್ಷಸಿದ್ಧ. ಪೂರ್ಣ ಚಂದಿರನಿರುವ ಹುಣ್ಣಿಮೆಯಂದು ಸಮುದ್ರದಲೆಗಳು ಅತ್ಯಂತ ರಭಸವಾಗಿರುತ್ತವೆ. ಚಂದಿರನ ಪ್ರಭಾವದಿಂದ ಸಮುದ್ರದಲ್ಲಿ ಚಂಡಮಾರುತಗಳೇರ್ಪಡುತ್ತವೆ.

ಸಮುದ್ರ ಮಂಥನ ಕಾಲದಲ್ಲಿ ಏನೆಲ್ಲಾ ಹುಟ್ಟಿದ ಮೇಲೆ ಅಮೃತ ಹುಟ್ಟಿತು. ಅಮೃತಕ್ಕಾಗಿ ದೇವ ದಾನವರು ಜಗಳವಾಡತೊಡಗಿದರು. ಶ್ರೀ ವಿಷ್ಣು ಮೋಹಿನಿರೂಪ ತಾಳಿ ಅಲ್ಲಿ ಬಂದು ಇಬ್ಬರಿಗೂ ಸಮನಾಗಿ ಹಂಚುವುದಾಗಿ ಒಪ್ಪಿಸಿದ. ದೇವತೆಗಳಿಗೆ ಮೊದಲು ಅಮೃತವನ್ನು ಹಂಚುತ್ತಾ ಸಾಗಿದ. ಅದಾಗಲೇ ಅಮೃತ ಮುಗಿಯುವಂತೆ ಕಂಡಿತು. ಕೆಲವು ದೈತ್ಯರು ತಮಗೆ ಅಮೃತವಿಲ್ಲದಂತೆ ಆಗುತ್ತದೆಯೆಂದು ರಾಹು ಎಂಬ ದೈತ್ಯ ತನ್ನ ವೇಷವನ್ನು ಮರೆಸಿ ದೇವತೆಗಳಂತೆ ವೇಷ ತಾಳಿ ದೇವತೆಗಳ ಸಾಲಿನಲ್ಲಿ ಬಂದು ಕುಳಿತ.

ಚಂದ್ರ, ಸೂರ್ಯ ಇದನ್ನು ಗಮನಿಸಿದರು. ದೇವತೆಗಳಂತೆ ವೇಷ ತಾಳಿ ಕುಳಿತಿದ್ದನ್ನು ಚಂದಿರ ಮೋಹಿನಿಗೆ ಕಣ್ಸನ್ನೆಯಿಂದ ರಾಹು ಕುಳಿತಿರುವುದನ್ನು ಸೂಚಿಸಿ ಆತನನ್ನು ಚಂದ್ರ ಹಿಡಿದುಕೊಂಡ. ಆ ಕಾರಣದಿಂದ ರಾಹು ಸಂಹರಿಸಲ್ಪಟ್ಟ. ಆದರೆ ಅವನ ಶಿರಸ್ಸು ಅಮೃತಪಾನ ಮಾಡಿದ್ದರಿಂದ ಅವನು ಸಾಯಲಿಲ್ಲ. ರುಂಡ ಮುಂಡಗಳು ಬೇರೆಯಾದವು. ತನ್ನನ್ನು ಹಿಡಿದುಕೊಟ್ಟ ಚಂದ್ರನ ಮೇಲೆ ಅತೀವ ರಾಹುವಿಗೆ ಕೋಪ ಉಂಟಾಯಿತು. ಅದಕ್ಕಾಗಿ ಪೂರ್ಣಿಮೆಯಂದು ಚಂದ್ರನನ್ನು ಗ್ರಾಸವಾಗಿಸಿಕೊಳ್ಳಬೇಕೆಂದು ರಾಹು ಅವನ ಮೇಲೆ ದಾಳಿ ಮಾಡುತ್ತಾನೆ. ಆ ದಿನವನ್ನೇ "ಚಂದ್ರ ಗ್ರಹಣ"ವೆನ್ನುತ್ತಾನೆ.

ಸಮಸ್ತ ವನಸ್ಪತಿಗಳಿಗೆ ಚಂದ್ರನು ಪೋಷಕನಾಗಿ ಅಧಿದೇವತೆಯಾಗಿದ್ದಾನೆ. ಗ್ರಹಗಳಲ್ಲಿ ಎಲ್ಲಾ ಗ್ರಹಗಳಿಗಿಂತಲೂ ಚಂದ್ರನು ಶೀಘ್ರಗಾಮಿ, ಅಮೃತರೂಪನಾದ ಅವನಿಗೆ ಸುಧಾಕರನೆಂಬ ಹೆಸರು. ಅವನ ರಥಕ್ಕೆ ಮೃಗಗಳನ್ನು ಕಟ್ಟಿರುವುದಾಗಿ ಕೆಲವಡೆ ಹೇಳಿದೆ. ಕೆಲವಡೆ ಅವನ ರಥಕ್ಕೆ ಹತ್ತು ಕುದುರೆಗಳೆಂದು ಹೇಳಿದೆ. ರಥದ ಮೇಲೆ ಹಾರಾಡುವ ಧ್ವಜದಲ್ಲಿ ಸಿಂಹದ ಗುರುತಿದೆ. ಅವನು ತನ್ನ ರಥದಲ್ಲಿ ಚಚ್ಚೌಕವಾದ ಹಲಗೆಯ ಮೇಲೆ ಕುಳಿತಿರುತ್ತಾನೆ. ಕೆಲವಡೆಗಳಲ್ಲಿ ಅವನು ಪಕ್ಕದಲ್ಲಿ ರೋಹಿಣಿ ಕುಳಿತಿರುತ್ತಾಳೆಂದೂ ಹೇಳಿದೆ.

ರೋಹಿಣಿ ಚಂದ್ರನ ಮೆಚ್ಚಿನ ಹೆಂಡತಿ, ತಂಪು ಅವನ ಸಹಜ ಸ್ವಭಾವ, ಮಂಜುಗಡ್ಡೆಯಂತೆ ಮೈ ಬಣ್ಣ, ಮನಸ್ಸಿಗೆ ಅಧಿಷ್ಠಾನ ದೇವತೆ ಚಂದ್ರ, ಈತನ ಉಪಾಸನೆಯಿಂದ ಕಷ್ಟ, ದೋಷಗಳು ದೂರವಾಗುತ್ತವೆ. ವೀರ್ಯವೃದ್ಧಿಯಾಗುತ್ತದೆ. ಮನಸ್ಸಿಗೆ ಏಕಾಗ್ರತೆ ಲಭಿಸುತ್ತದೆ. ಚಂದ್ರಬಿಂಬದಲ್ಲಿ ಮನಸ್ಸನ್ನು ಕೇಂದ್ರೀಕರಿಸುವುದರಿಂದ ಭೂಮಂಡಲದಲ್ಲಿಯ ಎಲ್ಲಾ ವಿಷಯಗಳು ತಿಳಿಯುತ್ತವೆಯೆಂದು

ಯೋಗಶಾಸ್ತ್ರ ಹೇಳುತ್ತದೆ. ಚಂದ್ರನಿಗೆ ೨೮ ಹೆಸರುಗಳಿವೆ. ೨೭ ನಕ್ಷತ್ರಗಳೂ ಅವನ ಹೆಂಡತಿಯರು ಎಲ್ಲರಿಗೂ ಚಂದ್ರಮಾಮನೆಂದೇ ಪ್ರಸಿದ್ಧಿ.[೧೯]

ಚಿತ್ರ –೧೭. ಚಂದ್ರಗ್ರಹ

ಚಂದ್ರಗ್ರಹವು ವೃಶ್ಚಿಕರಾಶಿಯಲ್ಲಿ, ೫ ಇಂಚು ವೃತ್ತಾಕಾರದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಚಂದ್ರಗ್ರಹವನ್ನು ವೃಶ್ಚಿಕರಾಶಿಯಲ್ಲಿ ಚಿತ್ರಿಸಿದ್ದು ವೃಶ್ಚಿಕವು ನೋಡುಗನ ಎಡಭಾಗಕ್ಕೆ ಮುಖ ಚಾಚಿಕೊಂಡಿದೆ. ವೃಶ್ಚಿಕದ ಹತ್ತುಕಾಲುಗಳಲ್ಲಿ ಮುಂದಿನ ಎರಡು ಕಾಲುಗಳು ಮುಂದಕ್ಕೆ ಚಾಚಿಕೊಂಡಿವೆ. ದೇಹಕ್ಕೆ ಹಳದಿವರ್ಣದ ಲೇಪನವಿದ್ದು ನೆರಳು ಬೆಳಕಿನ ಸ್ಪಷ್ಟತೆಯನ್ನು ಕಾಣಬಹುದು. ವೃಶ್ಚಿಕದ ಕಣ್ಣು ಬಾಯಿಯನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಉದ್ದವಾದ ಬಾಲವನ್ನು ನೈಜವಾಗಿ ಚಿತ್ರಿಸಿದ್ದಾರೆ. ವೃಶ್ಚಿಕದ ಬಾಲ ಮತ್ತು ತಲೆಯ ಮಧ್ಯದ ಭಾಗದಲ್ಲಿ ಚಂದ್ರನ ಚಿತ್ರವಿದ್ದು, ಹಸಿರು ಬಣ್ಣದ ಲೇಪನವಿದೆ. ಸುತ್ತಲೂ ಚುಕ್ಕೆ ಚುಕ್ಕೆಗಳನ್ನು ಹಾಕಲಾಗಿದೆ.

ಚಿತ್ರ –೧೮. ಚಂದ್ರಗ್ರಹ

ಈ ಗ್ರಹವು ಸಿಂಹರಾಶಿಯಲ್ಲಿ, ೫ ಇಂಚು ವೃತ್ತಾಕಾರದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಚಂದ್ರಗ್ರಹವನ್ನು ಸಿಂಹರಾಶಿಯಲ್ಲಿ ಚಿತ್ರಿಸಿದ್ದು ಸಿಂಹವು ನೋಡುಗನ ಬಲಭಾಗಕ್ಕೆ ಹೊರಳಿದ ಶಿರವಿದ್ದು ಎದುರು ನೋಟದಲ್ಲಿ ಹಸನ್ಮುಖಿಯಾಗಿದೆ. ದೇಹಕ್ಕೆ ಹಳದಿವರ್ಣದ ಲೇಪನವಿದ್ದು ಕೆಂಪುವರ್ಣದಿಂದ ಬಾಹ್ಯ ರೇಖೆ ಹಾಕಲಾಗಿದೆ. ಬಂಗಾರವರ್ಣದ ನೇಸರಗಳು, ಬಾಲದ ತುದಿಯಲ್ಲಿ ಹಳದಿ, ಹಸಿರುವರ್ಣದ ಲೇಪನವಿದೆ. ಸಿಂಹದ ದೇಹವು ಅರ್ಧಚಂದ್ರಾಕೃತಿಯಾಗಿ ಬಾಗಿಕೊಂಡಿದ್ದು, ಕಾಲುಗಳಲ್ಲಿ ಒಂದು ಮುಂದಕ್ಕೆ ಚಾಚಿಕೊಂಡಿದೆ. ಮೇಲ್ಭಾಗದಲ್ಲಿ ಚಂದ್ರಗ್ರಹದ ಚಿತ್ರವಿದ್ದು ಒಳಭಾಗದಲ್ಲಿ ಹಸಿರುಬಣ್ಣದ ಲೇಪನವಿದೆ. ಬಾಹ್ಯವಾಗಿ ಹಳದಿವರ್ಣದ ಬಾಹ್ಯರೇಖೆ ಇದೆ. ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ.

ಮಂಗಳ (ಕುಜ, ಅಂಗಾರಕ) ಗ್ರಹ

ಧರಣೀಗರ್ಭಸಂಭೂತಂ ವಿದ್ಯುತ್ತೇಜ ಸಮಪ್ರಭಂ ।
ಕುಮಾರಂ ಶಕ್ತಿಹಸ್ತಂ ತಂ ಮಂಗಳಂ ಪ್ರಣಮಾಮ್ಯಹಂ॥

ಭೂದೇವಿಸುತನಾದ, ಜ್ಯೋತಿಯಂತೆ ಪ್ರಕಾಶಿಸುವ ಮತ್ತು ಶಕ್ತ್ಯಾಯುಧದಾರಿಯಾದ ನಿನಗೆ ನಮಸ್ಕರಿಸುತ್ತೇನೆ. ಮಂಗಳನಿಗೆ ಕುಜ, ಅಂಗಾರಕನೆಂದೂ ಹೆಸರು. ಕು ಎಂದರೆ ಭೂಮಿ, ಜ ಎಂದರೆ ಜನಿಸಿದವನು ಎಂದರ್ಥ. ಮಂಗಳನು ಗ್ರಹಗಳಲ್ಲಿ ಮತ್ತು ವಾರಗಳಲ್ಲಿ ಮೂರನೆಯವನು. ಕೆಂಡವಾಗಿ ಜನಿಸಿದ ಇವನ ಮೈಬಣ್ಣ ಕೆಂಪು. ಕೆಂಪು ವಸ್ತ್ರವನ್ನೇ ಧರಿಸುತ್ತಾನೆ. ಕೆಂಪು ಹಾರವನ್ನು ಮಾಲೆಯಾಗಿ ಉಳ್ಳವನು. ಮಂಗಳನಿಗೆ ನಾಲ್ಕು ಕೈಗಳು, ಬಲಗೈಯಲ್ಲಿ ಶಕ್ತಿ ಮತ್ತು ದಯೆಯನ್ನು ಭರ್ಚಿ ಮತ್ತು ಗದೆಯನ್ನು ಎಡಗೈಯಲ್ಲಿ ಧರಿಸಿದ್ದಾನೆ.

ಮಂಗಳನ ವಾಹನ ಕೆಲವಡೆ ಟಗರು ಕಂಡುಬರುತ್ತದೆ. ಇನ್ನೂ ಕೆಲವಡೆ ಬಂಗಾರದ ರಥ ಕಂಡುಬರುತ್ತದೆ. ರಥಕ್ಕೆ ಎಂಟು ಕುದುರೆಗಳಿವೆ. ಮತ್ತೊಂದು ಕಡೆ ಅವನ ಧ್ವಜದಲ್ಲಿ ಟಗರಿನ ಚಿತ್ರ ಕಂಡುಬರುತ್ತದೆ. ಅವನು ಆವಂತಿ ದೇಶದವನು. ಭಾರದ್ವಾಜ ಗೋತ್ರ, ಅವನ ಆರಾಧ್ಯ ದೇವತೆ

---

೧೯. ಚಿಕ್ಕೇರೂರು ಧೀರೇಂದ್ರಚಾರ್ : ನವಗ್ರಹಗಳು, ಪುಟ–೪೧–೪೨

೧೭




ವೃಶ್ಚಿಕ ರಾಶಿ

೧೮



ಸಿಂಹ ರಾಶಿ





ಸಂಗ್ರಹ ; ಜನಪದ ವಸ್ತು ಸಂಗ್ರಹಾಲಯ, ಮೈಸೂರು

ಭೂಮಿ. ಮಂಗಳವಾರ ಅವನ ವಾರ. ಮಂಗಳಕರನಾದ ಕಾರಣ ಮಂಗಳನೆಂದು ಹೆಸರು. ಮಹಾಕಾಯ, ಧನಪ್ರದಾಯಕ. ಬಂಗಾರದ ಬೆಂಡೋಲೆ ಧರಿಸಿದ್ದಾನೆ. ಇವನನ್ನು ಭಜಿಸಿದರೆ ನೋವು, ಹುಣ್ಣು, ಕಷ್ಟಗಳಿಂದ ಜನರು ವಿಮುಕ್ತರಾಗುತ್ತಾರೆ, ಸಂತುಷ್ಟರಾಗುತ್ತಾರೆ.[೨೦]

ಚಿತ್ರ –೧೯. ಕುಜಗ್ರಹ (ಮಂಗಳ)

ಕುಜಗ್ರಹ(ಮಂಗಳ)ವು ಸೇನಾನಿ ಚಿಹ್ನೆಯಡಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಅಶ್ವದ ಬಾಲವನ್ನು ಚಿಕ್ಕದಾಗಿ ಚಿತ್ರಿಸಿದ್ದಾರೆ ಮತ್ತು ಸೇನಾನಿಯು ಖಡ್ಗವನ್ನು ಬಲಗೈಯಲ್ಲಿ ಮುಂದಕ್ಕೆ ಚಾಚಿ ಹಿಡಿದಿದ್ದಾನೆ. ಇಲ್ಲಿ ವಿಶೇಷವೆಂದರೆ ಕುಜಗ್ರಹದ ಚಿತ್ರವನ್ನು ಸೇನಾನಿಯ ಭುಜದ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. ಗ್ರಹಕ್ಕೆ ಹಳದಿಬಣ್ಣದ ಬಾಹ್ಯರೇಖೆ ಇದೆ. ಇಲ್ಲಿ ಹಿಂಬದಿಯಲ್ಲಿ ದಟ್ಟ ಕೆಂಪುವರ್ಣವನ್ನು ಲೇಪಿಸಿದ್ದಾರೆ.

ಚಿತ್ರ –೨೦. ಕುಜ ಗ್ರಹ (ಮಂಗಳ)

ಈ ಗ್ರಹವು ಮಿಥುನರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಕುಜ(ಮಂಗಳ) ಗ್ರಹವನ್ನು ಮಿಥುನರಾಶಿಯಲ್ಲಿ ಚಿತ್ರಿಸಿದ್ದಾರೆ. ಮಹಿಳೆ ಮತ್ತು ಪುರುಷಸಂಭಾಷಣೆಯಲ್ಲಿ ನಿರತರಾಗಿದ್ದು ಪುರುಷನು ಪಾರ್ಶ್ವಮುಖವಾಗಿ ಕುಳಿತು ಹಳದಿ ವರ್ಣದ ಜುಬ್ಬಾ ಧರಿಸಿ ಹಸಿರುವರ್ಣದ ಶಾಲನ್ನು ಹಾಕಿಕೊಂಡಿದ್ದಾರೆ. ಎಡಗೈಯಲ್ಲಿ ಚಿಕ್ಕದಾದ ಚಾಮರವನ್ನು ಹಿಡಿದಿದ್ದಾನೆ. ಕಿವಿ ಹಾಗೂ ಕೊರಳಲ್ಲಿ ಆಭರಣಗಳನ್ನು ಧರಿಸಿದ್ದಾನೆ. ಅಲ್ಲದೇ ಹಳದಿ ಹಾಗೂ ಹಸಿರುಮಿಶ್ರಿತ ಟೋಪಿ ಧರಿಸಿದ್ದಾನೆ. ಒಂದೇ ಬದಿಯ ಕಣ್ಣು ಪುರುಷನಿಗೆ ಚಿತ್ರಿಸಿದ್ದಾರೆ. ಮಹಿಳೆ ಬರೆಮು ಮಾಡಿ ಬಲಗೈಯಲ್ಲಿ ದಂಡವನ್ನು ಹಿಡಿದು ತನ್ನ ಎಡಗೈಯನ್ನು ಪುರುಷನ ಬಲಭುಜದ ಮೇಲೆ ಹಾಕಿ ಸಂಭಾಷಣೆ ಮಾಡುತ್ತಿದ್ದಾಳೆ. ಕೆಂಪುವರ್ಣದ ಸೀರೆಯನ್ನು ತೊಟ್ಟಿದ್ದು ಅದಕ್ಕೆ ಹಳದಿ ವರ್ಣದಿಂದ ನಕ್ಷೆಯನ್ನು ಚಿತ್ರಿಸಲಾಗಿದೆ. ಕೈ ಹಾಗೂ ಕೊರಳು, ಕಿವಿಯಲ್ಲಿ ಆಭರಣಗಳನ್ನು ಧರಿಸಿದ್ದಾರೆ. ಕೇಶವಿನ್ಯಾಸಕ್ಕೆ ಚೌರಿಯನ್ನು ಕಟ್ಟಿಕೊಂಡಿದ್ದಾಳೆ. ಮಹಿಳೆಗೆ ಎರಡು ಕಣ್ಣುಗಳನ್ನು ಚಿತ್ರಿಸಿದ್ದು ಮೇಲ್ಭಾಗದಲ್ಲಿ ಕುಜಗ್ರಹದ ತ್ರಿಕೋನವನ್ನು ಚಿತ್ರಿಸಿದ್ದಾರೆ. ಕೆಂಪುವರ್ಣ ಹಾಗೂ ಬಾಹ್ಯವಾಗಿ ಹಸಿರು, ಹಳದಿವರ್ಣವನ್ನು ಹಾಕಿದ್ದಾರೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪುವರ್ಣದ ಲೇಪನವಿದೆ.

ಚಿತ್ರ –೨೧. ಕುಜಗ್ರಹ (ಮಂಗಳ)

ಗ್ರಹವು ಮೇಷರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಕುಜಗ್ರಹವನ್ನು ಮೇಷರಾಶಿಯಲ್ಲಿ ಚಿತ್ರಿಸಿದ್ದಾರೆ. ಮೇಷವು ನೋಡುಗನ ಎಡಭಾಗದಲ್ಲಿ ಮಂಡಿಯೂರಿ ಕುಳಿತು ಕತ್ತನ್ನು ಮೇಲೆತ್ತಿ ನೇರವಾಗಿ ನೋಡುತ್ತಿದೆ. ಕೊರಳು ಮತ್ತು ದೇಹದ ಭಾಗಗಳಲ್ಲಿ ಗೆಜ್ಜೆಯ ಪಟ್ಟಿಕೆಯನ್ನು ಹಾಕಲಾಗಿದ್ದು ಚಂದ್ರನಾಕಾರದ ಒಂದು ಕೊಂಬು ಇದೆ. ದೇಹಕ್ಕೆ ಹಳದಿವರ್ಣದ ಲೇಪನವಿದೆ. ಬಾಹ್ಯವಾಗಿ ಕೆಂಪುವರ್ಣವನ್ನು ಲೇಪಿಸಲಾಗಿದೆ. ಬೆನ್ನಿಗೆ ಕೆಂಪುವರ್ಣದ ಜೂಲವನ್ನು ಹಾಕಲಾಗಿದೆ. ಮೇಲ್ಭಾಗದಲ್ಲಿ ತ್ರಿಕೋನಾಕಾರದ ಕುಜಗ್ರಹದ ಚಿತ್ರವಿದ್ದು ಒಳಭಾಗದಲ್ಲಿ ಕೆಂಪು ವರ್ಣದ ಲೇಪನವಿದೆ. ಬಾಹ್ಯ ರೇಖೆಯಾಗಿ ಹಸಿರು ಹಾಗೂ ಹಳದಿ ವರ್ಣವನ್ನು ಲೇಪಿಸಿದ್ದಾರೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪು ಮಿಶ್ರಿತ ಹಸಿರು ಬಣ್ಣದ ಲೇಪನವಿದೆ. ಸುತ್ತಲೂ ಹಳದಿಬಣ್ಣದ ನಕ್ಷೆ ಇದೆ.

---

೨೦. ಚಿಕ್ಕೇರೂರು ಧೀರೇಂದ್ರಾಚಾರ್., ನವಗ್ರಹಗಳು, ಪುಟ–೬೭

ಚಿತ್ರ –೨೨. ಕುಜಗ್ರಹ (ಮಂಗಳ)

ಈ ಗ್ರಹವು ವೃಷಭರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಕುಜಗ್ರಹವನ್ನು ವೃಷಭರಾಶಿಯಲ್ಲಿ ಚಿತ್ರಿಸಿದ್ದಾರೆ. ಮೇಷವು ನೋಡುಗನ ಎಡಭಾಗದಲ್ಲಿ ಮಂಡಿಯೂರಿ ಕುಳಿತು ಕತ್ತನ್ನು ಮೇಲೆತ್ತಿ ನೇರವಾಗಿ ನೋಡುತ್ತಿದೆ. ಕೊರಳು ಮತ್ತು ದೇಹದ ಭಾಗಗಳಲ್ಲಿ ಗೆಜ್ಜೆಯ ಪಟ್ಟಿಕೆಯನ್ನು ಹಾಕಲಾಗಿದ್ದು ಚಂದ್ರನಾಕಾರದ ಒಂದು ಕೊಂಬು ಇದೆ.ದೇಹಕ್ಕೆ ಹಳದಿವರ್ಣದ ಲೇಪನವಿದೆ. ಬಾಹ್ಯವಾಗಿ ಕೆಂಪುವರ್ಣವನ್ನು ಲೇಪಿಸಲಾಗಿದೆ. ಬೆನ್ನಿಗೆ ಕೆಂಪುವರ್ಣದ ಜೂಲವನ್ನು ಹಾಕಲಾಗಿದೆ. ಮೇಲ್ಭಾಗದಲ್ಲಿ ತ್ರಿಕೋನಾಕಾರದ ಕುಜಗ್ರಹದ ಚಿತ್ರವಿದ್ದು ಒಳಭಾಗದಲ್ಲಿ ಕೆಂಪುವರ್ಣದ ಲೇಪನವಿದೆ. ಬಾಹ್ಯರೇಖೆಯಾಗಿ ಹಸಿರು ಹಾಗೂ ಹಳದಿವರ್ಣವನ್ನು ಲೇಪಿಸಿದ್ದಾರೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪುಮಿಶ್ರಿತ ಹಸಿರುಬಣ್ಣದ ಲೇಪನವಿದೆ. ಸುತ್ತಲೂ ಹಳದಿಬಣ್ಣ ನಕ್ಷೆ ಇದೆ.

ಚಿತ್ರ –೨೩. ಕುಜಗ್ರಹ (ಮಂಗಳ)

ಈ ಗ್ರಹವು ರಥದ ಚಿಹ್ನೆಯಡಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಕುಜಗ್ರಹವು ರಥಾರೂಢವಾಗಿದ್ದು ಹಾಗೂ ರಥದಲ್ಲಿ ರಾಜ ಬಾಣವನ್ನು ಬಿಡುತ್ತಿರುವ ಚಿತ್ರವಿದೆ. ಸಾರಥಿಯು ರಥವನ್ನು ಮುನ್ನಡೆಸುತ್ತಿದ್ದಾನೆ. ರಥಕ್ಕೆ ನೋಡುಗನ ಎದುರಿಗೆ ಎರಡು ಚಕ್ರವನ್ನು ಚಿತ್ರಿಸಿದ್ದಾರೆ. ಅಲ್ಲದೆ ರಥಕ್ಕೆ ಸಿಂಗಾರ ಮಾಡಿ ರಥದೊಳಗೆ ರಾಜನು ಕಿರೀಟಧಾರಿಯಾಗಿ ಹಸಿರು ವರ್ಣದ ಪೋಷಾಕನ್ನು ಧರಿಸಿ ಬಾಣವನ್ನು ಬಿಡುತ್ತಿದ್ದಾನೆ. ರಥಕ್ಕೆ ಹಸಿರು ಮತ್ತು ಹಳದಿವರ್ಣದ ಲೇಪನವಿದೆ. ಸಾರಥಿಯು ಕೆಂಪುಪೋಷಾಕನ್ನು ಧರಿಸಿ ಎಡಗೈಯಿಂದ ಕೋಲನ್ನು ಎತ್ತಿ ಕುದುರೆಗಳಿಗೆ ಹೊಡೆಯುತ್ತಿದ್ದಾನೆ. ಮೇಲ್ಭಾಗದಲ್ಲಿ ಕುಜಗ್ರಹದ ತ್ರಿಕೋನಾಕಾರದ ಚಿಹ್ನೆ ಇದ್ದು, ಒಳಗಡೆ ಕೆಂಪುವರ್ಣದ ಲೇಪನವಿದ್ದು ಬಾಹ್ಯವಾಗಿ ಹಸಿರು ಮತ್ತು ಹಳದಿವರ್ಣದ ಲೇಪನವಿದೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪುಮಿಶ್ರಿತ ಹಸಿರುಬಣ್ಣದ ಲೇಪನವಿದೆ. ಸುತ್ತಲೂ ಹಳದಿವರ್ಣದ ಅಂಚನ್ನು ಹಾಕಲಾಗಿದೆ.

ಚಿತ್ರ –೨೪. ಕುಜಗ್ರಹ (ಮಂಗಳ)

ಈ ಗ್ರಹವು ಧ್ವಜದ ಚಿಹ್ನೆಯಡಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಕುಜಗ್ರಹವನ್ನು ಧ್ವಜದ ಚಿಹ್ನೆಯಡಿ ಚಿತ್ರಿಸಿದ್ದಾರೆ. ಸೇನಾನಿಯು ಧ್ವಜದ ಒಂದನೆಯ ಕಟ್ಟೆಯ ಮೇಲೆ ನಿಂತು ಧ್ವಜದ ಕಂಬವನ್ನು ಹಿಡಿದಿದ್ದಾನೆ. ಧ್ವಜದ ಬಣ್ಣ ಕೆಂಪುವರ್ಣ, ಮಧ್ಯದಲ್ಲಿ ಹಳದಿವರ್ಣದ ವೃತ್ತವಿದೆ. ಧ್ವಜದಲ್ಲಿ ಹಳದಿವರ್ಣದಿಂದ ಚುಕ್ಕೆಗಳನ್ನು ಹಾಕಲಾಗಿದೆ. ಧ್ವಜದ ಬಾಹ್ಯರೇಖೆಯಾಗಿ ಹಸಿರು ಮತ್ತು ಹಳದಿವರ್ಣವನ್ನು ಲೇಪಿಸಲಾಗಿದೆ. ಧ್ವಜದ ಕೆಳಭಾಗದಲ್ಲಿ ತ್ರಿಕೋನ ಆಕಾರದ ಕುಜಗ್ರಹದ ಚಿಹ್ನೆ ಇದೆ. ಒಳಭಾಗದಲ್ಲಿ ಕೆಂಪುವರ್ಣ ಹಾಗೂ ಬಾಹ್ಯವಾಗಿ ಹಸಿರು ಹಾಗೂ ಹಳದಿವರ್ಣವನ್ನು ಲೇಪಿಸಲಾಗಿದೆ. ಕಟ್ಟೆಯ ಕೆಳಭಾಗದಲ್ಲಿ ಕೆಂಪುಮಿಶ್ರಿತ ಹಳದಿವರ್ಣದ ಲೇಪನವಿದೆ. ಚಿತ್ರದ ಹಿನ್ನೆಲೆಯಲ್ಲಿ ನೀಲಿವರ್ಣದ ಲೇಪನವಿದ್ದು ಸುತ್ತಲೂ ಹಳದಿ ವರ್ಣದ ಪಟ್ಟಿಕೆ ಇದೆ.

ಬುಧಗ್ರಹ

ಪ್ರಿಯಂಗುಕಲಿಕಾ ಶ್ಯಾಮಂ ರೂಪೇಣಾಪ್ರತಿಮಂ ಬುಧಮ್।
ಸೌಮ್ಯಂ ಸೌಮ್ಯಗುಣೋಪೇತಂ ಬುಧಂ ಪ್ರಣಮಾಮ್ಯಹಮ್॥

೧೯



ಸೇನಾನಿ

೨೦



ಮಿಥುನ ರಾಶಿ

೨೧



ಮೇಷ ರಾಶಿ

೨೨



ವೃಷಭ ರಾಶಿ

೨೩



ರಥ

೨೪



ಧ್ವಜ

ಸಂಗ್ರಹ ; ಜನಪದ ವಸ್ತು ಸಂಗ್ರಹಾಲಯ, ಮೈಸೂರು

ಚಂದ್ರನು ಬೃಹಸ್ಪತಿಯ ಹೆಂಡತಿ ತಾರಳನ್ನು ಮೋಹಿಸಿದ. ಅವಳನ್ನು ಎತ್ತಿಕೊಂಡು ಹೋದ. ವಿಧಿಪೂರ್ವಕ ಮದುವೆಯಾದ ಹೆಂಡತಿ ತಾರಳನ್ನು ಪುನಃ ತನಗೆ ಹಿಂದಿರುಗಿಸಬೇಕೆಂದು ಗುರು ಬೃಹಸ್ಪತಿ ಕೇಳಿದ. ತಾರಾಳ ಸುಂದರವದನಕ್ಕೆ ಮನಸೋತ ಚಂದ್ರ ನಿರಾಕರಿಸಿದ. ಚಂದ್ರನಿಗೂ ದೇವಗುರು ಬೃಹಸ್ಪತಿಗೂ ಯುದ್ಧವಾಯಿತು. ಈ ಯುದ್ಧಕ್ಕೆ ತಾರಕಮಯ ಎಂದು ಹೆಸರು. ಸತ್ಯಕ್ಕೆ ಜಯವಾಯಿತು. ಚಂದ್ರ ತಾರೆಯನ್ನು ಗುರು ಬೃಹಸ್ಪತಿಗೆ ಹಿಂದಿರುಗಿಸಿದ. ಆ ಸಮಯದಲ್ಲಿ ತಾರಾ ತುಂಬು ಗರ್ಭಿಣಿ. ತನ್ನದಲ್ಲದ ಮಗು ತನಗೆ ಬೇಡವೆಂದು ದೇವಗುರು ಬೃಹಸ್ಪತಿ ಆ ಮಗುವನ್ನು ವಿಸರ್ಜಿಸುವಂತೆ ತಾರಾಳಿಗೆ ಆಜ್ಞೆ ಮಾಡಿದ.

ತಾರಾ ಅಲ್ಲಿಯೇ ಮಗುವನ್ನು ಹೆತ್ತಳು. ಸುಂದರ ತೇಜೋವಂತ ಅಂದದ ಚಂದದ ಮಗುವನ್ನು ಕಂಡು ಬೃಹಸ್ಪತಿ ಮತ್ತು ಚಂದ್ರ ಆ ಮಗು ತಮ್ಮದೆಂದು ವಾದ ಮಾಡಲಾರಂಭಿಸಿದರು. ಬ್ರಹ್ಮನ ಮಧ್ಯಸ್ತಿಕೆಯಲ್ಲಿ ಚಂದ್ರನೇ ಆ ಮಗುವಿನ ತಂದೆ ಎಂದು ತಾರಾ ಹೇಳುತ್ತಾಳೆ. ಬುದ್ಧಿವಂತನಾದ ಮಗುವಿಗೆ ಚಂದ್ರ ಬುಧ ಎಂದು ನಾಮಕರಣ ಮಾಡಿದ. ಬುಧ ತಪಸ್ಸು ಮಾಡಿ ಗ್ರಹಗಳಲ್ಲೊಬ್ಬನಾದ. ಬುಧನೆಂದರೆ ಬುದ್ಧಿ. ಅವನಿಗೆ ಗ್ರಹಪತಿ ಎಂದೂ ಹೆಸರು. ಅವನ ಮೈಬಣ್ಣ ಹಳದಿ. ಅರಿಶಿನ ಬಣ್ಣದ ಬಟ್ಟೆ ತೊಟ್ಟಿರುತ್ತಾನೆ. ಬಣ್ಣದ ಮಾಲೆ ಕೊರಳಲ್ಲಿ, ಬಂಗಾರದ ಆಭರಣ ತೊಟ್ಟಿರುತ್ತಾನೆ. ಬುಧನಿಗೆ ನಾಲ್ಕು ಕೈಗಳು, ಬಲಗಡೆಯ ಒಂದು ಕೈ ವರದಹಸ್ತ, ಉಳಿದ ಮೂರು ಕೈಗಳಲ್ಲಿ ಕ್ರಮವಾಗಿ ಖಡ್ಗ, ಖೇಟಕ ಮತ್ತು ಗದೆ ಹಿಡಿದಿದ್ದಾನೆ. ಇವನ ವಾಹನ ಸಿಂಹ, ಕೆಲಕಡೆಗಳಲ್ಲಿ ರಥದ ಮೇಲೆ ಕುಳಿತಂತೆ ತೋರಿಸಲಾಗಿದೆ. ಬುಧನನ್ನು ಆರಾಧಿಸಿದರೆ ಬುದ್ಧಿ ಹೆಚ್ಚಾಗುತ್ತದೆ.[೨೧]

ಚಿತ್ರ –೨೫. ಬುಧಗ್ರಹ

ಬುಧಗ್ರಹವು ಮಿಥುನರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಬುಧ ಗ್ರಹವನ್ನು ಮಿಥುನರಾಶಿಂಯುಲ್ಲಿ ಚಿತ್ರಿಸಿದ್ದಾರೆ. ಮಹಿಳೆ ಮತ್ತು ಪುರುಷನು ಎದುರು ಬದುರು ಕುಳಿತಿರುವ ದೃಶ್ಯವಿದೆ. ಪುರುಷನು ಮಹಿಳೆಯ ಎಡಭುಜದ ಮೇಲೆ ತನ್ನ ಬಲಗೈ ಊರಿದ್ದು ಮಹಿಳೆಯು ತನ್ನ ಎಡಗೈಯನ್ನು ಪುರುಷನ ಬಲಭುಜದ ಮೇಲೆ ಊರಿದ್ದಾಳೆ. ಮಹಿಳೆ ಬಲಗೈಯಲ್ಲಿ ವೀಣೆಯನ್ನು ಹಿಡಿದಿದ್ದಾಳೆ. ಕಪ್ಪು ಹಸಿರುಬಣ್ಣದ ಸೀರೆಯನ್ನುಟ್ಟು ಕೈಯಲ್ಲಿ ಕೊರಳಲ್ಲಿ ಆಭರಣಗಳನ್ನು ತೊಟ್ಟಿದ್ದಾಳೆ. ಪುರುಷನು ತಲೆಯ ಮೇಲೆ ಟೋಪಿ, ಎಡಗೈಯಲ್ಲಿ ಚಾಮರವನ್ನು ಹಿಡಿದಿದ್ದಾನೆ. ಹಳದಿ ಮತ್ತು ಕೆಂಪು ಮಿಶ್ರಿತ ವರ್ಣದ ವಸ್ತ್ರಾಭರಣಗಳನ್ನು ಹಾಕಿದ್ದಾನೆ. ಇವರ ಶಿರಭಾಗದ ಮೇಲೆ ಮರದ ಚಿಹ್ನೆಯ ಬುಧಗ್ರಹವಿದೆ. ಹಸಿರು ಮತ್ತು ಹಳದಿವರ್ಣದ ಲೇಪನವಿದೆ. ಹಿನ್ನೆಲೆಯಲ್ಲಿ ಇಪ್ಪಲೆ ವರ್ಣದ ಲೇಪನವಿದೆ.

ಚಿತ್ರ –೨೬. ಬುಧಗ್ರಹ

ಈ ಗ್ರಹವು ವೃಶ್ಚಿಕ ರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಬುಧಗ್ರಹವನ್ನು ವೃಶ್ಚಿಕ ರಾಶಿಯಲ್ಲಿ ಚಿತ್ರಿಸಿದ್ದು ವೃಶ್ಚಿಕದ ಕಣ್ಣು, ಬಾಯನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಕೊಂಬೆಯ ಮಧ್ಯಭಾಗದಲ್ಲಿ ಬುಧಗ್ರಹದ ಮರದ ಚಿಹ್ನೆಯನ್ನು ಚಿತ್ರಿಸಿ ಹಸಿರು

೨೧. ಚಿಕ್ಕೇರೂರು ಧೀರೇಂದ್ರಾಚಾರ್ : ನವಗ್ರಹಗಳು, ಪುಟ–೭೪

೨೫



ಮಿಥುನ ರಾಶಿ

೨೬



ವೃಶ್ಚಿಕ ರಾಶಿ

೨೭



ಕಟಕ ರಾಶಿ

೨೮



ವೃಷಭ ರಾಶಿ

ಬಣ್ಣವನ್ನು ಲೇಪಿಸಿದ್ದು ಬಾಹ್ಯವಾಗಿ ಹಳದಿವರ್ಣವನ್ನು ಲೇಪಿಸಿದ್ದಾರೆ. ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ.

ಚಿತ್ರ –೨೭. ಬುಧಗ್ರಹ

ಈ ಗ್ರಹವು ಕಟಕರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಬುಧಗ್ರಹವನ್ನು ಕಟಕರಾಶಿಯುಲ್ಲಿ ಚಿತ್ರಿಸಿದ್ದಾರೆ. ನೋಡುಗನ ಮೇಲ್ಭಾಗದಲ್ಲಿ ಕಟಕದ ಕಣ್ಣುಗಳ ದೃಷ್ಟಿಯಿದ್ದು ಮೇಲ್ಭಾಗದಲ್ಲಿ ಮರದ ಆಕಾರದ ಬುಧಗ್ರಹ ಚಿತ್ರವಿದೆ. ಕಟಕ ಹತ್ತು ಕಾಲುಗಳನ್ನು ಹೊಂದಿದ್ದು, ಹಳದಿ ಮತ್ತು ಕೆಂಪುವರ್ಣದ ಲೇಪನವಿದೆ. ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ. ಸ್ಪಷ್ಟವಾದ ರೇಖೆಗಳಲ್ಲಿ ಸೂಕ್ಷ್ಮತೆ ಎದ್ದು ಕಾಣುತ್ತದೆ.

ಚಿತ್ರ –೨೮. ಬುಧಗ್ರಹ

ಈ ಗ್ರಹವು ಕಟಕ ರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಬುಧಗ್ರಹವನ್ನು ವೃಷಭರಾಶಿಯಲ್ಲಿ ಚಿತ್ರಿಸಿದ್ದಾರೆ. ವೃಷಭವು ನೋಡುಗನ ಬಲಭಾಗಕ್ಕೆ ಮುಖ ಮಾಡಿ ಕುಳಿತುಕೊಂಡಿದೆ. ವೃಷಭದ ಕೋಡುಗಳಿಗೆ, ಕೊರಳಲ್ಲಿ, ಮೈಯಲ್ಲಿ ಗೆಜ್ಜೆಗಳನ್ನು ಹಾಕಿ ಸಿಂಗರಿಸಲಾಗಿದೆ. ವೃಷಭದ ಕೆಳಗೆ ಗದ್ದುಗೆಯನ್ನು ಚಿತ್ರಿಸಿ ಹಸಿರುವರ್ಣ ಲೇಪನ ಮಾಡಲಾಗಿದೆ. ಮೇಲ್ಭಾಗದಲ್ಲಿ ಮರದ ಆಕಾರದಲ್ಲಿ ಬುಧಗ್ರಹದ ಚಿಹ್ನೆ ಇದ್ದು ಅದಕ್ಕೆ ಹಸಿರು ಮತ್ತು ಹಳದಿವರ್ಣದ ಲೇಪನವಿದೆ. ಹಿನ್ನಲೆಯಲ್ಲಿ ಕೆಂಪುವರ್ಣದ ಲೇಪನವಿದೆ.

ಗುರು (ಬೃಹಸ್ಪತಿ) ಗ್ರಹ

ದೇವಾನಾಂ ಚ ಋಷೀಣಾಂ ಚ ಗುರುಂ ಕಾಂಚನಸನ್ನಿಭಂ ।
ಬುದ್ಧಿಭೂತಂ ತ್ರಿಲೋಕೇಶಂ ತಂ ನಮಾಮಿ ಬೃಹಸ್ಪತಿಂ ॥

ದೇವತೆಗಳ ಮತ್ತು ಋಷಿಗಳ ಗುರುವೇ, ಅತ್ಯದ್ಭುತ ಜ್ಞಾನಿಯೇ ಮತ್ತು ತ್ರಿಲೋಕ ಸ್ವಾಮಿಯೇ, ನಿನಗೆ ನಮಸ್ಕರಿಸುತ್ತೇನೆ.

ಶ್ರೀಮನ್ನಾರಾರಯಣನ ನಾಭಿಕಮಲದಲ್ಲಿ ಉದ್ಭವಿಸಿದ ಚತುರ್ಮುಖ ಬ್ರಹ್ಮನು ಆಜ್ಞೆಯ ಮೇರೆಗೆ ಸೃಷ್ಟಿ ಆರಂಭಿಸಿದ. ತನ್ನ ದೇಹದ ಒಂದೊಂದು ಭಾಗದಿಂದಲೂ ಮತ್ತು ಮನಸ್ಸಿನಿಂದಲೂ ಬ್ರಹ್ಮದೇವರೂ ಮರಿಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ಭೃಗು, ದಕ್ಷ ಮತ್ತು ನಾರದರನ್ನು ಸೃಷ್ಟಿಸಿದರು. ಅಂಗೀರಸಋಷಿಗಳು ಕರ್ದಮಪುತ್ರಿ ಶ್ರದ್ಧಾದೇವಿಯನ್ನು ವಿವಾಹ ಮಾಡಿಕೊಂಡರು. ಶ್ರದ್ಧಾದೇವಿಯು ಕೃಷ್ಣ ಚತುರ್ದಶಿ ತಿಥಿಗೆ ಅಭಿಮಾನಿನಿ "ಚಿನೀವಾಲಿ"ಯನ್ನೂ ಅಮಾವಾಸ್ಯೆಗೆ ಅಭಿಮಾನಿನಿ "ಕುಹುದೇವಿ"ಯನ್ನೂ ಶುಕ್ಲಪಕ್ಷದ ಚತುರ್ದಶಿತಿಥಿಗೆ ಅಭಿಮಾನಿನಿ "ಅನುಮತಿ" ಎಂಬುವಳನ್ನೂ ಮತ್ತು ಹುಣ್ಣಿಮೆಗೆ ಅಭಿಮಾನಿನಿ "ರಾಕಾ" ದೇವಿಯೆಂಬ ನಾಲ್ವರು ಹೆಣ್ಣು ಮಕ್ಕಳನ್ನು ಪಡೆದಳು.

ಶ್ರದ್ಧಾದೇವಿಯು ಮುಖ್ಯ ಭಗವದಂಶಯುತರಾದ "ಉಚಿತ್ಯ" ಮತ್ತು "ಬೃಹಸ್ಪತಿ" ಎಂಬ ಎರಡು ಗಂಡು ಮಕ್ಕಳನ್ನು ಹಡೆದಳು. ಬೃಹಸ್ಪತಿ ಎಂದರೆ ವಿದ್ವಾಂಸ, ಪಂಡಿತ, ಜ್ಞಾನಿ ಎಂದರ್ಥ. ಬೃಹಸ್ಪತಿಯ (ಗುರು) ವಾಹನ ಹಸು, ಅದರ ಹೆಸರು "ವಿಶ್ವರೂಪ" ನೀಲಿಮಿಶ್ರಿತ ವರ್ಣ ಆತನ ಮೈಬಣ್ಣ, ತೇಜೋವಂತ, ಜ್ಯೋತಿರ್ವಿಜ್ಞಾನ ಪಂಡಿತ. ಗುರುವನ್ನು ಆಹ್ವಾನಿಸದೆ ಯಾವ ಯಾಗಗಳೂ ಪೂರ್ತಿಯಾಗುವುದಿಲ್ಲ. ಸೂರ್ಯ ಚಂದ್ರರನ್ನು ಈತನೇ ನಿಯಂತ್ರಿಸುತ್ತಾನೆಂದು ಶೃತಿಗಳು ಹೇಳುತ್ತವೆ.

ದೇವಗುರು ಗುರುಗ್ರಹ ಸಮಸ್ತ ಗ್ರಹಗಳಲ್ಲಿ ಈತನು ಸರ್ವಶ್ರೇಷ್ಠ. ಅಷ್ಟಾಶ್ವಗಳಿಂದ ಎಳೆಯುವ ಈತನ ರಥಕ್ಕೆ "ನೀತಿಘೋಷ" ಎಂದು ಹೆಸರು. ಆ ರಥದಲ್ಲಿ ಕುಳಿತು ಗ್ರಹಗತಿಯನ್ನು ಶಾಸನ ಮಾಡುತ್ತಿರುತ್ತಾನೆ. ದೇವಗುರು ಇಂದ್ರನಿಗೆ ದಾನ ಧರ್ಮಗಳ ಬಗ್ಗೆ ವಿಶೇಷವಾಗಿ ಉಪದೇಶ ಮಾಡಿದ ಗುರು. ಆ ಸಂಗ್ರಹಕ್ಕೆ ಗುರುಸಂಹಿತೆ ಎಂದು ಹೆಸರು. ಗುರು (ಬೃಹಸ್ಪತಿಗೆ)ವಿಗೆ ವಾಚಸ್ಪತಿ ಎಂದೂ ಹೆಸರಿದೆ.

ಗುರುವನ್ನು ಪೂಜಿಸಿದರೆ ದುಷ್ಟಶಕ್ತಿಗಳು ದೂರವಾಗುತ್ತವೆ. ಮತ್ತು ಅಂತಹವರು ಅಪಾಯಗಳಿಂದಲೂ ಪಾರಾಗುತ್ತಾರೆ. ಮನಸ್ಸಿಗೆ ಸುಖ, ಶಾಂತಿ ದೊರೆಯುತ್ತದೆ.ಗುರುಗ್ರಹಕ್ಕೆ ನಾಲ್ಕು ಕೈಗಳು, ಒಂದು ವರದಹಸ್ತ, ಉಳಿದ ಮೂರರಲ್ಲಿ ಕಮಂಡಲ, ಅಕ್ಷಮಾಲೆ ಮತ್ತು ದಂಡವಿದೆ. ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಹೀಗೆ ಅವನಿಗೆ ಎರಡೇ ಕೈಗಳು. ಒಂದರಲ್ಲಿ ಪುಸ್ತಕ, ಮತ್ತೊಂದರಲ್ಲಿ ಅಕ್ಷಮೂಲವೆಂದು ಇದೆ.[೨೨]

ಚಿತ್ರ -೨೯. ಗುರುಗ್ರಹ

ಗುರುಗ್ರಹವು ಸೇನಾನಿ ಚಿಹ್ನೆಯಡಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಅಶ್ವಾರೂಢ ಸೇನಾನಿಯು ಖಡ್ಗವನ್ನು ಬಲಗೈಯಲ್ಲಿ ಹಿಡಿದು ಮುಂದೆ ಚಾಚಿದ್ದಾನೆ. ಅಶ್ವವು ತನ್ನ ಮುಂಭಾಗದ ಎರಡು ಕಾಲುಗಳನ್ನು ಎತ್ತಿ ರಭಸವಾಗಿ ಓಡುತ್ತಿದೆ. ಸೇನಾನಿಯ ಹಿಂಬದಿಯಲ್ಲಿ ಗುರುಗ್ರಹದ ಚೌಕಾಕಾರದ ಚಿತ್ರವಿದೆ. ಇದಕ್ಕೆ ಹಳದಿ ವರ್ಣದ ಲೇಪನವಿದೆ. ಹಿನ್ನೆಲೆಯಲ್ಲಿ ದಟ್ಟವಾದ ಕಪ್ಪುವರ್ಣವನ್ನು ಲೇಪಿಸಿದ್ದಾರೆ.

ಚಿತ್ರ -೩೦. ಗುರುಗ್ರಹ

ಈ ಗ್ರಹವು ಮೇಷ ರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ನೋಡುಗನ ಬಲಭಾಗಕ್ಕೆ ಮುಖ ಮಾಡಿರುವ ಮೇಷ ಮಂಡಿಯೂರಿ ಕುಳಿತುಕೊಂಡಿದೆ. ಕೊರಳಲ್ಲಿ ಗೆಜ್ಜೆಯನ್ನು ಹಾಕಲಾಗಿದೆ. ಒಂದೇ ಕಣ್ಣಿನಲ್ಲಿ ನೇರ ದೃಷ್ಟಿಯನ್ನು ಚಿತ್ರಿಸಿದ್ದಾರೆ. ಮೇಷಕ್ಕೆ ಹಳದಿ ಬಣ್ಣದ ಲೇಪನವಿದ್ದು ಕೆಂಪುವರ್ಣದ ಬಾಹ್ಯರೇಖೆಯನ್ನು ಹಾಕಿದ್ದಾರೆ. ಮೇಷದ ತಲೆಯ ಮೇಲೆ ಚೌಕಾಕಾರದ ಗುರುಗ್ರಹದ ಚಿಹ್ನೆ ಇದೆ. ಅಲ್ಲಿ ಹಳದಿ ಮತ್ತು ಹಸಿರು ವರ್ಣದ ಲೇಪನವಿದೆ. ಹಿನ್ನೆಲೆಯಲ್ಲಿ ಕಪ್ಪುವರ್ಣದ ಲೇಪನವಿದೆ.

ಚಿತ್ರ -೩೧. ಗುರುಗ್ರಹ

ಈ ಗ್ರಹವು ಧ್ವಜದ ಚಿಹ್ನೆಯಡಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಗುರುಗ್ರಹವನ್ನು ಸೇನಾನಿ ಧ್ವಜ ಹಿಡಿದುಕೊಂಡು ನಿಂತಿರುವ ಭಂಗಿಯಲ್ಲಿ ಚಿತ್ರಿಸಿದ್ದು ಧ್ವಜದ ಕೆಳಭಾಗದಲ್ಲಿ ಗುರುಗ್ರಹದ ಚಿಹ್ನೆಯನ್ನು ಚಿತ್ರಿಸಲಾಗಿದೆ. ಕೆಳಭಾಗದಲ್ಲಿ ಧ್ವಜದ ಕಟ್ಟೆಯನ್ನು ಕಟ್ಟಲಾಗಿದೆ. ಸೇನಾನಿಯು ಕಿರೀಟಧಾರಿಯಾಗಿದ್ದು ಹಸಿರುವರ್ಣದ ಪೋಷಾಕು ಹಾಕಿದ್ದಾನೆ. ಮೂರು ಮೂಲೆಯ ಧ್ವಜಕ್ಕೆ ಕೆಂಪು, ಹಳದಿ, ಹಸಿರುವರ್ಣದ ಲೇಪನವಿದೆ. ಗುರುಗ್ರಹದ ಚಿಹ್ನೆಗೆ ಹಸಿರುವರ್ಣದ ಲೇಪನವಿದ್ದು ಬಾಹ್ಯವಾಗಿ ಹಳದಿವರ್ಣದ ಲೇಪನವಿದೆ. ಹಿನ್ನೆಲೆಯಲ್ಲಿ ದಟ್ಟವಾದ ಕಪ್ಪುವರ್ಣವಿದೆ.

ಚಿತ್ರ -೩೨. ಗುರುಗ್ರಹ

ಈ ಗ್ರಹವು ಸಿಂಹರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ

೨೨. ಚಿಕ್ಕೇರೂರು ಧೀರೇಂದ್ರಾಚಾರ್ : ನವಗ್ರಹಗಳು, ಪುಟ-೮೭

೨೯



ಸೇನಾನಿ

೩೦



ಮೇಷ ರಾಶಿ

೩೧



ಧ್ವಜ

೩೨



ಸಿಂಹ ರಾಶಿ

೩೩



ಕಟಕ ರಾಶಿ

ಸಂಗ್ರಹ ; ಜನಪದ ವಸ್ತು ಸಂಗ್ರಹಾಲಯ, ಮೈಸೂರು

ಚಿತ್ರದಲ್ಲಿ ಸಿಂಹವು ನೋಡುಗನ ಬಲಭಾಗಕ್ಕೆ ಮುಖ ಮಾಡಿ ಎದುರು ನೋಟದಲ್ಲಿ ಹಸನ್ಮುಖಿಯಾಗಿ ತನ್ನ ಒಂದು ಕಾಲನ್ನು ಮೇಲೆತ್ತಿ ನಿಂತಿದೆ. ಶಿರದಲ್ಲಿ ಬಂಗಾರಬಣ್ಣದ ನೇಸರ, ದೇಹಕ್ಕೆ ಹಳದಿವರ್ಣ ಹಾಗೂ ಬಾಹ್ಯವಾಗಿ ಕೆಂಪುವರ್ಣದ ಲೇಪನವಿದೆ. ಸಿಂಹದ ಬಾಲವು ದೂರಕ್ಕೆ ಮೇಲ್ಗಡೆ ಚಾಚಿಕೊಂಡಿದೆ. ಬಾಲ ಮತ್ತು ಶಿರದ ಮಧ್ಯ ಗುರುಗ್ರಹದ ಚಿಹ್ನೆ ಇದ್ದು ಹಳದಿ ಹಾಗೂ ಹಸಿರುವರ್ಣದ ಲೇಪನವಿದೆ. ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ.

ಚಿತ್ರ –೩೩. ಗುರುಗ್ರಹ

ಈ ಗ್ರಹವು ಕಟಕ ರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಗುರುಗ್ರಹವನ್ನು ಕಟಕ ರಾಶಿಯಲ್ಲಿ ಚಿತ್ರಿಸಿದ್ದಾರೆ. ಕಟಕವು ನೋಡುಗನ ಮೇಲ್ಭಾಗದಲ್ಲಿ ತನ್ನ ಎರಡು ಕಣ್ಣುಗಳನ್ನು ಚಾಚಿದೆ. ಹತ್ತು ಕಾಲುಗಳಲ್ಲಿ ಸ್ಪಷ್ಟವಾದ ಬಾಹ್ಯರೇಖೆಗಳಿವೆ. ಹಳದಿ ಮತ್ತು ಕೆಂಪು ವರ್ಣದ ಲೇಪನ ಮಾಡಲಾಗಿದೆ. ಮೇಲ್ಭಾಗದಲ್ಲಿ ಗುರುಗ್ರಹದ ಚೌಕಾಕಾರದ ಚಿಹ್ನೆಯನ್ನು ಚಿತ್ರಿಸಿದ್ದು ಕೆಂಪು ಹಸಿರುವರ್ಣದ ಲೇಪನ ಮಾಡಲಾಗಿದೆ. ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ.

ಶುಕ್ರಗ್ರಹ

ಹಿಮಕುಂದಮೃಣಾಲಾಭಂ ದೈತ್ಯಾನಾಂ ಪರಮಂ ಗುರುಂ।
ಸರ್ವಶಾಸ್ತ್ರಪ್ರವಕ್ತಾರಂ ಭಾರ್ಗವಂ ಪ್ರಣಮಾಮ್ಯಹಂ ॥

ಮಂಜಿನಂತೆ ಮಿರುಗುವ ಕೋಲು ಮಲ್ಲಿಗೆ ಮತ್ತು ಕಮಲದ ಕಾಂಡದಂತೆ ಸುಗಂಧ ವಾಸನೆಯುಳ್ಳ, ಅಸುರಗುರುವಾದ ಮತ್ತು ಸಕಲಶಾಸ್ತ್ರ ಪ್ರವರ್ತಕನಾದ ಶುಕ್ರನೇ ನಿನಗೆ ನಮಸ್ಕರಿಸುತ್ತೇನೆ. ಭೃಗು ಋಷಿಗಳ ಮಗ ಶುಕ್ರ, ಸಕಲಶಾಸ್ತ್ರ ಪಾರಂಗತನಾದ ಪ್ರಿಯವ್ರತರಾಜನ ಮಗಳಾದ ಊರ್ಜಸ್ವತಿ ಎಂಬ ಕನ್ಯೆಯನ್ನು ವಿವಾಹ ಮಾಡಿಕೊಂಡು, ಅವರಿಬ್ಬರ ಪ್ರೀತಿಯ ದ್ಯೋತಕವಾಗಿ ದೇವಯಾನಿ ಎಂಬ ಮಗಳು ಹುಟ್ಟಿದಳು. ಶುಕ್ರಾಚಾರ್ಯ ಕಾಶಿಗೆ ಹೊರಟ ಶಿವನನ್ನು ಪೂಜಿಸಿದ. ಅಲ್ಲಿಯೇ ಕಠಿಣ ತಪ ಕೈಗೊಂಡ.

ಸಾವಿರ ವರ್ಷ ತಪಸ್ಸಿನ ಫಲವಾಗಿ ಶಿವ ಪ್ರತ್ಯಕ್ಷನಾದ. ಭಕ್ತನೇ ನಿನ್ನ ತಪಸ್ಸಿಗೆ ಮೆಚ್ಚಿರುವೆ. ವರವೇನು ಬೇಕು ಕೇಳು, ಕೊಡುತ್ತೇನೆ ಎಂದ. ಪರಶಿವನೇ, ಭಕ್ತವತ್ಸಲನೇ ನಿನಗೆ ನಮಸ್ಕಾರ. ನಿನ್ನ ದರುಶನ ಭಾಗ್ಯವೇ ಒಂದು ದೊಡ್ಡ ವರ, ಆದರೂ ನೀನು ಕೇಳು ಎಂದು ಹೇಳಿದ್ದರಿಂದ ಕೇಳುತ್ತೇನೆ, ಶಿವನೆ ನೀನು ಶುಕ್ರಾಚಾರ್ಯರಿಗೆ ಮೃತಸಂಜೀವಿನಿ ವಿದ್ಯೆಯ ಮಂತ್ರವನ್ನು ಉಪದೇಶ ಮಾಡಿದ ವರದಿಂದ ಭೂಷಿತನಾದ ಶುಕ್ರಾಚಾರ್ಯರು ದೈತ್ಯರ ಗುರುವಾದರು. ಪುರಾಣಗಳಲ್ಲಿ ದೇವಗುರು ಬೃಹಸತ್ಯಾಚಾರ್ಯ ಮತ್ತು ದೈತ್ಯಗುರು ಶುಕ್ರಾಚಾರ್ಯರು ಹಲವಾರು ಸಂದರ್ಭಗಳಲ್ಲಿ ಕಾಣಿಸಿಕೊಳ್ಳುತ್ತಾರೆ.

ಶುಕ್ರನಿಗೆ ಎರಡು ಕೈಗಳು. ಒಂದು ಕೈಯಲ್ಲಿ ನಿಧಿಯನ್ನು, ಮತ್ತೊಂದು ಕೈಯಲ್ಲಿ ಪುಸ್ತಕವನ್ನು ಹಿಡಿದಿರುತ್ತಾನೆ. ಸುಂದರ ವರ್ಣದ ಬೆಳ್ಳಿ ರಥವನ್ನು, ಎಂಟು ಕುದುರೆಗಳು ಎಳೆಯುತ್ತವೆ. ಶುಕ್ರದೆಸೆ ಇಪ್ಪತ್ತು ವರ್ಷವೆಂದು ತಿಳಿದು ಬರುತ್ತದೆ. ಶುಕ್ರದೆಸೆ ಎಂದರೆ ಎಲ್ಲಾ ಭಾಗಗಳಿಂದಲೂ ಗೆಲುವು ಖಂಡಿತ. ಐಶ್ವರ್ಯಾಭಿವೃದ್ಧಿ ಖಚಿತ. ಗ್ರಹಗಳಲ್ಲೆಲ್ಲಾ ಅತಿ ಹೆಚ್ಚು ಸೌಭಾಗ್ಯವನ್ನು ಕರುಣಿಸುವವನು ಶುಕ್ರ. ಈಗಲೂ ಯಾರಿಗಾದರೂ ಏನಾದರೂ ಅನಿರೀಕ್ಷಿತ ಒಳ್ಳೆಯದಾದರೆ ಓ ಅವನಿಗೆ ಶುಕ್ರದೆಸೆ ಎನ್ನುತ್ತೇವೆ. ಹಾಗೆ ಕೈ ಬಿಟ್ಟು ಕೊಡುವ ಸಮೃದ್ಧಿಯಾಗಿ ಕೊಡುವ ಗ್ರಹವೇ ಶುಕ್ರ.

ದೇವಗುರು ಬೃಹಸ್ಪತ್ಯಾಚಾರ್ಯರಿಗಿಂತ ತಾನೇನೂ ಕಡಿಮೆಯಿಲ್ಲವೆಂದು ನಿರೂಪಿಸಲು ತನ್ನ ಶಕ್ತಿ ಮೀರಿ ಪ್ರಯತ್ನಿಸುತ್ತಾನೆ ಶುಕ್ರಾಚಾರ್ಯ. ಶುಕ್ರಗ್ರಹವನ್ನು ಪೂಜಿಸಿದರೆ ಸಕಲ ಸೌಭಾಗ್ಯ ದೊರೆಯುತ್ತದೆ. ವಾರಗಳಲ್ಲಿ ಶುಕ್ರವಾರ ಶುಕ್ರನ ವಾರ.[೨೩]

ಚಿತ್ರ –೩೪. ಶುಕ್ರಗ್ರಹ

ಶುಕ್ರಗ್ರಹವು ಸೇನಾನಿ ಚಿಹ್ನೆಯಡಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಅಶ್ವಾರೂಢ ಸೇನಾನಿ ಖಡ್ಗವನ್ನು ಬಲಭುಜದ ಮೇಲೆ ಇಟ್ಟುಕೊಂಡಿದ್ದಾನೆ. ಸೇನಾನಿಯ ಶಿರದ ಮುಂಭಾಗದಲ್ಲಿ ಶುಕ್ರಗ್ರಹದ ನಕ್ಷತ್ರಾಕಾರದ ಚಿತ್ರವಿದ್ದು ಹಸಿರುಮಿಶ್ರಿತ ಬಿಳಿವರ್ಣದ ಲೇಪನವಿದೆ. ಹಿನ್ನೆಲೆಯಲ್ಲಿ ದಟ್ಟವಾದ ಕೆಂಪುವರ್ಣದ ಲೇಪನವಿದೆ.

ಚಿತ್ರ –೩೫. ಶುಕ್ರಗ್ರಹ

ಈ ಗ್ರಹವು ಧ್ವಜದ ಚಿಹ್ನೆಯಡಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಸೇನಾನಿಯು ಧ್ವಜವನ್ನು ಹಿಡಿದುಕೊಂಡು ನಿಂತಿದ್ದಾನೆ. ಧ್ವಜವು ಮೂರು ಮೂಲೆಯನ್ನು ಹೊಂದಿದ್ದು, ಸೇನಾನಿಯ ಪಾದದಿಂದ ಶಿರೋಭಾಗದವರೆಗೂ ಚಾಚಿಕೊಂಡಿದೆ. ಧ್ವಜದ ಕೆಳಗಡೆ ನಕ್ಷತ್ರ ಆಕಾರದ ಶುಕ್ರಗ್ರಹವನ್ನು ಕಾಣಬಹುದು. ಧ್ವಜಕ್ಕೆ ಕೆಂಪುಬಣ್ಣದ ಲೇಪನವಿದ್ದು ಹಳದಿವರ್ಣವನ್ನು ಬಾಹ್ಯವಾಗಿ ಬಳಸಿಕೊಂಡಿದ್ದಾರೆ. ಸೇನಾನಿಯ ಕಿರೀಟ ಮತ್ತು ವಸ್ತ್ರಾಭರಣಗಳು ಸ್ಪಷ್ಟವಾಗಿ ಮೂಡಿಬಂದಿವೆ. ಸೇನಾನಿಯ ಪಾದದ ಕೆಳಗಡೆ ಹಸಿರು ಮತ್ತು ಕಪ್ಪು ವರ್ಣದ ಲೇಪನವಿದ್ದರೆ ಪಾದದಿಂದ ಮೇಲ್ಗಡೆ ದಟ್ಟಕಪ್ಪು ಬಣ್ಣವಿದೆ.

ಚಿತ್ರ –೩೬. ಶುಕ್ರಗ್ರಹ

ಈ ಗ್ರಹವು ಸಿಂಹ ರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಶುಕ್ರಗ್ರಹವನ್ನು ಸಿಂಹರಾಶಿಯಲ್ಲಿ ಚಿತ್ರಿಸಿದ್ದಾರೆ. ಸಿಂಹವು ನೋಡುಗನ ಬಲಭಾಗಕ್ಕೆ ಮುಖಮಾಡಿ ಹಸನ್ಮುಖಿಯಾಗಿ ಒಂದು ಕಾಲನ್ನು ಮೇಲೆತ್ತಿ ಅರ್ಧಭಂಗಿಯಲ್ಲಿ ಕುಳಿತುಕೊಂಡಿದೆ. ತಲೆಗೆ ಬಂಗಾರದ ಬಣ್ಣದ ನೇಸರಗಳಿವೆ. ದೇಹಕ್ಕೆ ಹಸಿರುವರ್ಣ ಹಾಗೂ ಬಾಹ್ಯರೇಖೆಯಾಗಿ ಕೆಂಪುವರ್ಣವನ್ನು ಲೇಪಿಸಿದ್ದಾರೆ. ಮೇಲ್ಭಾಗದಲ್ಲಿ ನಕ್ಷತ್ರ ಆಕಾರದ ಶುಕ್ರಗ್ರಹದ ಚಿಹ್ನೆ ಇದ್ದು ಅದಕ್ಕೆ ಹಸಿರುವರ್ಣದ ಲೇಪನವಿದ್ದು ಬಾಹ್ಯವಾಗಿ ಹಳದಿವರ್ಣದ ರೇಖೆಗಳಿವೆ. ಹಿನ್ನೆಲೆಯಲ್ಲಿ ದಟ್ಟವಾದ ಕಪ್ಪುವರ್ಣದ ಲೇಪನವಿದೆ.

ಚಿತ್ರ –೩೭. ಶುಕ್ರಗ್ರಹ

ಈ ಗ್ರಹವು ಕಟಕ ರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಕಟಕವನ್ನು ಹಳದಿ ವರ್ಣದಲ್ಲಿ ಚಿತ್ರಿಸಿದ್ದು, ಬಾಹ್ಯ ರೇಖೆಗಳನ್ನು ಕೆಂಪು ವರ್ಣದಲ್ಲಿ ಚಿತ್ರಿಸಿದ್ದು, ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ. ಕಟಕದ ಕಣ್ಣಿನ ದೃಷ್ಟಿ ಮೇಲ್ನೋಟದಲ್ಲಿದ್ದು ಅದರ ಮೇಲ್ಭಾಗದಲ್ಲಿ ಶುಕ್ರ ಗ್ರಹದ ನಕ್ಷತ್ರಾಕಾರದ ಹಳದಿವರ್ಣದ ಚಿಹ್ನೆ ಇದೆ.

ಚಿತ್ರ –೩೮. ಶುಕ್ರಗ್ರಹ

ಈ ಗ್ರಹವು ವೃಷಭ ರಾಶಿಯಲ್ಲಿ ೫ ಇಂಚು ವೃತ್ತಾಕಾರದ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ

೨೩. ಚಿಕ್ಕೇರೂರು ಧೀರೇಂದ್ರಾಚಾರ್ : ನವಗ್ರಹಗಳು, ಪು–೯೫

೩೪



ಸೇನಾನಿ

೩೫



ಧ್ವಜ

೩೬



ಸಿಂಹ ರಾಶಿ

೩೭



ಕಟಕ ರಾಶಿ

೩೮



ವೃಷಭ ರಾಶಿ

ಸಂಗ್ರಹ ; ಜನಪದ ವಸ್ತು ಸಂಗ್ರಹಾಲಯ, ಮೈಸೂರು

ಚಿತ್ರದಲ್ಲಿ ವೃಷಭ (ಎತ್ತು)ವು ನೋಡುಗನ ಎಡಭಾಗಕ್ಕೆ ನೇರ ದೃಷ್ಟಿಕೋನದಲ್ಲಿ ಮಂಡಿಯೂರಿ ಕುಳಿತುಕೊಂಡಿದೆ. ಇಲ್ಲಿ ವೃಷಭಕ್ಕೆ ಎರಡು ಕೊಂಬುಗಳನ್ನು ಚಿತ್ರಿಸಿ ಅಲಂಕರಿಸಲಾಗಿದೆ. ದೇಹಕ್ಕೆ ಗೆಜ್ಜೆಗಳಿಂದ ಸಿಂಗರಿಸಿ ವಸ್ತ್ರಾಭರಣವನ್ನು ಹಾಕಲಾಗಿದೆ. ದೇಹಕ್ಕೆ ಬಿಳಿವರ್ಣದ ಲೇಪನವಿದ್ದು ಬಾಹ್ಯರೇಖೆಯಾಗಿ ಕೆಂಪುವರ್ಣವನ್ನು ಹಾಕಲಾಗಿದೆ. ಕೋಡುಗಳಿಗೆ ಕಪ್ಪು ಬಣ್ಣವಿದ್ದು ಚಿತ್ರದ ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ. ಕೆಳಭಾಗದಲ್ಲಿ ಹಳದಿ ಪಟ್ಟಿಕೆ ಹಾಗೂ ಕಪ್ಪು ಮಿಶ್ರಿತ ನೀಲಿ ಹಳದಿ ಬಣ್ಣದ ಲೇಪನವಿದೆ.

ಶನಿಗ್ರಹ

ನೀಲಾಂಜನ ಸಮಾಭಾಸಂ ರವಿಪುತ್ರಂ ಯಮಾಗ್ರಜಂ ।
ಛಾಯಾಮಾರ್ತಾಂಡಸಂಭೂತಂ ತಂ ನಮಾಮಿ ಶನೇಶ್ವರಂ ॥

ನೀಲ ಮಸ್ಕರದಂತೆ ಹೊಳೆಯುವ ಸೂರ್ಯ - ಛಾಯಾರ ಪುತ್ರನೇ, ಯಮನ ಅಗ್ರಜನೇ, ನಿನಗೆ ನಮಸ್ಕರಿಸುತ್ತೇನೆ. ಸೂರ್ಯನ ಹೆಂಡತಿ ಸಂಜ್ಞಾ, ಇವಳು ಸೂರ್ಯನ ತಾಪತಾಳಲಾರದೆ ಬಳಲಿ ಅವನ ಬಿಸಿಯಿಂದ ಕರಗಿ ಕಪ್ಪಾದಳು. ಇನ್ನು ಸೂರ್ಯನೊಡನೆ ಸಂಸಾರ ಸಾಧ್ಯವಿಲ್ಲ ಎನಿಸಿತು ಅವಳಿಗೆ. ಹೇಗಾದರೂ ಮಾಡಿ ಅವನಿಂದ ದೂರವಾಗಬೇಕೆಂದು ನಿಶ್ಚಯಿಸಿದಳು. ತನ್ನ ದೇಹದ ನೆರಳಿಗೆ ಜೀವ ತುಂಬಿದಳು. ಅವಳು ನೆರಳೇ ಜೀವ ತಳೆದು ಸುಂದರವದನಳಾಗಿ ನಿಂತಳು. ಅವಳು ಸಂಜ್ಞಾಳ ಛಾಯೆಯಾದುದರಿಂದ ಅವಳಂತೆಯೇ ಕಾಣಿಸುತ್ತಿದ್ದಳು. ಸ್ವಲ್ಪವೂ ವ್ಯತ್ಯಾಸವಿರಲಿಲ್ಲ.

ಅವಳನ್ನು ಸೂರ್ಯನ ಬಳಿ ಬಿಟ್ಟು ತಾನು ಅರಣ್ಯಕ್ಕೆ ಹೋದಳು. ಸಂಜ್ಞಾಳಿಗೆ ಸೂರ್ಯನಿಂದ ವೈವಸ್ವತ, ಯಮ, ಮತ್ತು ಯಮಿ ಎಂಬ ಮೂರು ಮಕ್ಕಳಾಗಿದ್ದವು. ಛಾಯಾಳು ಸೂರ್ಯನೊಂದಿಗೆ ಸಂಸಾರ ಮಾಡಿಕೊಂಡಿದ್ದಳು. ಸೂರ್ಯನಿಗೆ ಅವಳು ತನ್ನ ಹೆಂಡತಿ ಸಂಜ್ಞಾ ಅಲ್ಲವೆಂದು ತಿಳಿಯಲೇ ಇಲ್ಲ. ಸೂರ್ಯನಿಂದ ಛಾಯಾಳಿಗೆ ಮನು, ಸುವರ್ಣ ಮತ್ತು ಶನಿ ಎಂಬ ಮೂರು ಮಕ್ಕಳಾದವು. ಸೂರ್ಯನಿಂದ ಛಾಯಾದೇವಿಯ ಗರ್ಭದಲ್ಲಿ ಶನಿ ಹುಟ್ಟಿದ ಆ ಸಮಯದಲ್ಲಿ ಹುಟ್ಟಿದ ಮಗುವನ್ನು ನೋಡಬೇಕೆಂಬಾಸೆಯಿಂದ ಸೂರ್ಯ ಬಂದ. ಆಗ ಮಗು ಶನಿಯ ದೃಷ್ಟಿ ತಂದೆ ಸೂರ್ಯನ ಮೇಲೆ ಬಿತ್ತು ಅಷ್ಟೇ, ಸೂರ್ಯನಿಗೆ ಅನೇಕ ತೊಂದರೆಗೊಳಗಾದವು. ಸ್ವತಃ ಗ್ರಹರಾಜನಾಗಿದ್ದರೂ ಶನಿಯ ಜನ್ಮಕ್ಕೆ ಕಾರಣನಾಗಿದ್ದರೂ ಆತನ ದೃಷ್ಟಿ ಬಿದ್ದಾಕ್ಷಣ ಕಷ್ಟಪರಂಪರೆಯನ್ನು ಅನುಭವಿಸಬೇಕಾಯಿತು ಸೂರ್ಯ.

ಸೂರ್ಯ ಆ ಕಷ್ಟಗಳನ್ನು ತಾಳಲಾರದೆ ಶಿವನನ್ನು ಕುರಿತು ಧ್ಯಾನಿಸಿದ. ಶಿವನ ಪರಮಾನುಗ್ರಹದಿಂದ ಪಾರಾದ. ಆಗಿನ್ನೂ ಶನಿ ಗ್ರಹವಾಗಿರಲಿಲ್ಲ. ಶನಿಯು ಬೆಳೆದು ದೊಡ್ಡವನಾದ. ವಯಸ್ಸಿಗೆ ಬಂದ ಶನಿ ತಾಯಿಯ ಅಪ್ಪಣೆ ಪಡೆದು ಕಾಶಿಗೆ ಹೋಗಿ ಗಂಗೆಯಲ್ಲಿ ಸ್ನಾನ ಮಾಡಿ, ಶಿವಲಿಂಗ ಪೂಜೆ, ಶಿವನನ್ನು ಕುರಿತು ತಪಸ್ಸು, ಹೀಗೆ ಅನೇಕ ವರ್ಷ ತಪವನ್ನಾಚರಿಸಿದ. ಕೊನೆಗೂ ಶಿವ ಪ್ರತ್ಯಕ್ಷನಾದ. ವತ್ಸಾ ಶನಿಯೇ, ನಿನ್ನ ಅನನ್ಯ ಭಕ್ತಿಗೆ ಮೆಚ್ಚಿ ನಾನೇ ನಿನ್ನ ಬಳಿಗೆ ಇಳಿದು ಬಂದಿದ್ದೇನೆ. ನಿನ್ನ ಕೋರಿಕೆಯೇನು? ಕೇಳು, ಕೊಡುತ್ತೇನೆ ಎಂದ ಈಶ್ವರ. ಈಶ್ವರನೇ ನಾನಾವ ಉದ್ದೇಶದಿಂದಲೂ ನಿನ್ನನ್ನು ಭಜಿಸಲಿಲ್ಲ. ಕೇವಲ ನಿನ್ನ ಮೇಲಿನ ಭಕ್ತಿಯಿಂದ ತಪವನ್ನಾಚರಿಸಿದ್ದೇನೆ ಎಂದ ಶನಿ. ನಿನ್ನ ಮೇಲೆ ಪರಮಾನುಗ್ರಹ ಮಾಡಿದ್ದೇನೆ. ನೀನು ಮುಂದೆ ಗ್ರಾಹಕೂಟದಲ್ಲಿ ಒಬ್ಬನಾಗಿ ಸೇರು ಎಂದು ಹೇಳಿದ ಪಾರ್ವತಿಪತಿ ಪರಮೇಶ್ವರ ಅದೃಶ್ಯನಾದ.

ಶನಿಯ ಒಂದು ಕಾಲು ಚಿಕ್ಕದು. ಆದುದರಿಂದ ಕುಂಟುತ್ತಾ ನಿಧಾನವಾಗಿ ನಡೆಯುತ್ತಾನೆ. ಆದ್ದರಿಂದ ಗ್ರಹವಾಗಿ ಅವನ ಗತಿ ನಿಧಾನ. ಕಾರಣ ಅವನಿಗೆ ಶನೀಶ್ವರ ಎಂದು ಹೆಸರು. ಶನಿಯು ಕಪ್ಪು ಬಟ್ಟೆಯನ್ನು ಧರಿಸುತ್ತಾನೆ. ಅವನ ವಾಹನ ರಥ. ರಥವನ್ನು ಎಂಟು ಕುದುರೆಗಳು ಎಳೆಯುತ್ತವೆ. ಆದರೆ ನವಗ್ರಹಾರಾಧನೆಯಲ್ಲಿ ಪ್ರಭಾವಳಿ ಮೇಲೆ ಕುಳಿತಿರುತ್ತಾನೆಂದೂ ಕಪ್ಪು ವಸ್ತ್ರ, ಕಪ್ಪುಹಾರವನ್ನು ಧರಿಸುತ್ತಾನೆಂದು ಕೆಲವು ವಿದ್ವಾಂಸರ ಪ್ರಕಾರ ತಿಳಿದು ಬರುತ್ತದೆ. ಶನಿ ಬೆನ್ನು ಹತ್ತಿದರೆ ಏಳು ವರ್ಷಗಳವರೆಗೆ ಭಯಂಕರ ಕಷ್ಟಗಳನ್ನು ಕೊಡುತ್ತಾನೆ. ಭಕ್ತಿಯಿಂದ ಪೂಜಿಸಿದರೆ ಶೀಘ್ರವಾಗಿ ಒಲಿದು ಬರುತ್ತಾನೆ. ಒಲಿದರೆ ಅತ್ಯಧಿಕ ಸುಖವನ್ನೂ, ಅನಿರೀಕ್ಷಿತ ಲಾಭವನ್ನು ಕರುಣಿಸುತ್ತಾನೆ. ಅನೇಕ ಮಹನಿಯರು ಶನಿಕಾಟಕ್ಕೆ ಸಿಕ್ಕು ಪಡಬಾರದ ಕಷ್ಟಗಳನ್ನು ಪಟ್ಟು ಮುಕ್ತರಾಗಿದ್ದಾರೆ.[೨೪]

ಚಿತ್ರ –೩೯. ಶನಿಗ್ರಹ

ಶನಿಗ್ರಹವು ವೃತ್ತಾಕಾರದ ಚಿಹ್ನೆಯಡಿ ೫ ಇಂಚಿನ ಕಾಗದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಅಶ್ವಾರೂಢ ಸೇನಾನಿ ಚಿತ್ರವು ನೋಡುಗನ ಎಡಭಾಗಕ್ಕೆ ಮುಖಮಾಡಿ ಹೊರಟಿರುವ ಅಶ್ವದ ಮೇಲೆ ಸೇನಾನಿಯು ಬಲಗೈಯಲ್ಲಿ ಖಡ್ಗವನ್ನು ಹಿಡಿದು ಕುಳಿತಿದ್ದಾನೆ. ಸೇನಾನಿಯ ಕಿರೀಟ ಮತ್ತು ವಸ್ತ್ರಾಭರಣಗಳಿಗೆ ಹಳದಿ ಮತ್ತು ಹಸಿರುವರ್ಣಲೇಪನವಿದೆ. ಸೇನಾನಿಯ ಶಿರಭಾಗ ಮತ್ತು ಅಶ್ವದ ಶಿರಭಾಗದ ಮಧ್ಯದಲ್ಲಿ ಶನಿಗ್ರಹದ ಚಿತ್ರವಿದೆ. ಒಳಗಡೆ ಹಸಿರು ಬಣ್ಣದ ಲೇಪನವಿದ್ದು ಹೊರಮೈ ಹಳದಿ ವರ್ಣದ ಹೊರರೇಖೆ ಇದೆ. ಹಿನ್ನೆಲೆಯಲ್ಲಿ ಕಪ್ಪುವರ್ಣದ ಲೇಪನವಿದೆ.

ಚಿತ್ರ –೪೦. ಶನಿಗ್ರಹ

ಈ ಗ್ರಹವು ಮಿಥುನರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟಿನಲ್ಲಿ ಚಿತ್ರಿತಗೊಂಡಿದೆ. ಈ ಚಿತ್ರವು ನೋಡುಗನ ಎದುರುನೋಟಕ್ಕೆ ಯುವಕ ಮತ್ತು ಯುವತಿಯು ಆಸೀನರಾಗಿದ್ದು ಸಂಭಾಷಣೆಯಲ್ಲಿ ನಿರತರಾಗಿದ್ದಾರೆ. ಪುರುಷನು ಮೊಘಲ್ ಶೈಲಿಯ ಪೋಷಾಕು ಹಾಕಿ ತಲೆಯ ಮೇಲೆ ಟೋಪಿ ಧರಿಸಿದ್ದಾನೆ. ಎಡಗೈಯಲ್ಲಿ ಚಾಮರವನ್ನು ಭುಜದ ಮೇಲೆ ಚಾಮರವನ್ನು ಇಟ್ಟುಕೊಂಡಿದ್ದಾನೆ. ನೋಡುಗನ ಎಡಭಾಗದಲ್ಲಿ ಮಹಿಳೆಯು ಬಲಗೈಯಲ್ಲಿ ವೀಣೆಯನ್ನು ಹಿಡಿದಿದ್ದು, ಎಡಗೈಯನ್ನು ಪುರುಷನ ಬಲಭುಜದ ಮೇಲೆ ಹಾಕಿದ್ದಾಳೆ. ಕೊರಳಲ್ಲಿ ಆಭರಣಗಳು, ವಸ್ತ್ರವಿನ್ಯಾಸ, ಕೇಶವಿನ್ಯಾಸ ಸ್ಪಷ್ಟತೆಯಿಂದ ಕೂಡಿವೆ. ಹಳದಿ, ಹಸಿರು, ಕೆಂಪು ವರ್ಣದ ಲೇಪನವಿದೆ. ಇವರಿಬ್ಬರ ತಲೆಯ ಮೇಲ್ಭಾಗದಲ್ಲಿ ಶನಿಗ್ರಹದ ಚಿಹ್ನೆ ಇದ್ದು ಒಳಭಾಗದಲ್ಲಿ ಹಸಿರು ಬಣ್ಣದ ಲೇಪನವಿದ್ದು ಬಾಹ್ಯವಾಗಿ ಹಳದಿ ವರ್ಣದ ರೇಖೆ ಇದೆ. ಕೆಳಭಾಗದಲ್ಲಿ ಹಸಿರುಬಣ್ಣದ ಹಾಸಿಗೆ ಇದ್ದು ಚಿತ್ರದ ಹಿನ್ನೆಲೆಯಲ್ಲಿ ಕಪ್ಪುಮಿಶ್ರಿತ ಕೆಂಪುವರ್ಣದ ಲೇಪನವಿದೆ.

ಚಿತ್ರ –೪೧. ಶನಿಗ್ರಹ

ಈ ಗ್ರಹವು ಮೇಷರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿರುವ ಮೇಷವು ನೋಡುಗನ ಬಲಭಾಗಕ್ಕೆ ಮುಖಮಾಡಿ ಮಂಡಿಯೂರಿ ಕುಳಿತು ನೇರವಾಗಿ ನೋಡುತ್ತಿದೆ. ಉದ್ದವಾದ ಕೊಂಬು, ಚಿಕ್ಕ ಬಾಲ, ಕೊರಳಲ್ಲಿನ ಗೆಜ್ಜೆಪಟ್ಟಿಯಲ್ಲಿ ಸ್ಪಷ್ಟತೆ ಇದೆ. ದೇಹಕ್ಕೆ ಹಳದಿ ಬಣ್ಣದ ಲೇಪನವಿದೆ. ಕೊಂಬಿಗೆ ಕಪ್ಪು ಮಿಶ್ರಿತ ನೀಲವರ್ಣವಿದೆ. ಮುಖದಲ್ಲಿ ಗಾಂಭೀರ್ಯವಿದೆ. ಕೆಳಭಾಗದಲ್ಲಿ ಕಟ್ಟೆ ಇದ್ದು ಹಳದಿ ಮತ್ತು ಹಸಿರು ವರ್ಣದ ಲೇಪನವಿದೆ. ಮೇಲ್ಭಾಗದಲ್ಲಿ ಶನಿಗ್ರಹದ

೨೪. ಚಿಕ್ಕೇರೂರು ಧೀರೇಂದ್ರಾಚಾರ್ : ನವಗ್ರಹಗಳು, ಪುಟ – ೧–೨

೩೯



ಸೇನಾನಿ

೪೦



ಮಿಥುನ ರಾಶಿ

೪೧



ಮೇಷ ರಾಶಿ

೪೨



ಕನ್ಯಾ ರಾಶಿ

೪೩



ಕಟಕ ರಾಶಿ

ಸಂಗ್ರಹ ; ಜನಪದ ವಸ್ತು ಸಂಗ್ರಹಾಲಯ, ಮೈಸೂರು

ಬಿಲ್ಲಿನಾಕಾರದ ಚಿಹ್ನೆಯಿದ್ದು ಒಳಭಾಗದಲ್ಲಿ ಹಸಿರು ಮತ್ತು ಬಾಹ್ಯವಾಗಿ ಹಳದಿ ವರ್ಣದ ಲೇಪನವಿದೆ. ಚಿತ್ರದ ಹಿನ್ನೆಲೆಯಲ್ಲಿ ಕೆಂಪು ವರ್ಣದ ಲೇಪನವಿದೆ.

ಚಿತ್ರ –೪೨. ಶನಿಗ್ರಹ

ಈ ಗ್ರಹವು ಕನ್ಯಾರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿರುವ ಕನ್ಯೆಯು ನೋಡುಗನ ಎದುರುನೋಟದಲ್ಲಿ ದೋಣಿಯಲ್ಲಿ ಕುಳಿತು ಬಲಗೈ ಚಾಚಿಕೊಂಡಿದ್ದು ಕೈಯಲ್ಲಿ ಅಗ್ನಿಕುಂಡವನ್ನು ಹಿಡಿದಿದ್ದಾಳೆ. ಕೆಳಭಾಗದಲ್ಲಿ ನೀಲವರ್ಣದ ನೀರ ಅಲೆಗಳಿವೆ. ಕನ್ಯೆಯ ಕೊರಳು, ಕೈಯಲ್ಲಿ ಆಭರಣಗಳಿವೆ. ಎಡಭುಜದ ಮೇಲೆ ಶನಿಗ್ರಹದ ಚಿಹ್ನೆಯಿದ್ದು ಒಳಗಡೆ ಹಸಿರು ವರ್ಣದ ಲೇಪನವಿದ್ದು ಹೊರಭಾಗದಲ್ಲಿ ಹಳದಿ ವರ್ಣದ ಬಾಹ್ಯರೇಖೆಗಳಿವೆ. ಸೀರೆಗೆ ಹಳದಿ ಮತ್ತು ಕೆಂಪು ವರ್ಣದ ಲೇಪನವಿದೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪುವರ್ಣದ ಲೇಪನವಿದೆ.

ಚಿತ್ರ –೪೩. ಶನಿಗ್ರಹ

ಈ ಗ್ರಹವು ಕಟಕ (ಏಡಿ) ರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಕಟಕವು ನೋಡುಗನ ಮೇಲ್ಭಾಗಕ್ಕೆ ಕಣ್ಣುಗಳ ದೃಷ್ಟಿಯಿದ್ದು, ದೇಹಕ್ಕೆ ಹಳದಿವರ್ಣದ ಲೇಪನವಿದ್ದು ನೆರಳು ಬೆಳಕಿನ ಸ್ಪಷ್ಟತೆ ಇದೆ. ಹತ್ತು ಕಾಲುಗಳಲ್ಲಿ ಮುಂದಿನ ಎರಡು ಕಾಲುಗಳು ಮುಂದೆ ಚಾಚಿಕೊಂಡಿವೆ. ಮೇಲ್ಭಾಗದಲ್ಲಿ ಶನಿಗ್ರಹದ ಚಿಹ್ನೆ ಇದ್ದು ಒಳಗಡೆ ಹಸಿರುವರ್ಣ ನೀಲಿವರ್ಣದ ಲೇಪನವಿದೆ. ಬಾಹ್ಯವಾಗಿ ಹಳದಿವರ್ಣದ ಲೇಪನವಿದೆ. ಚಿತ್ರದ ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ.

ರಾಹು ಗ್ರಹ

ಅರ್ಧಕಾಯಂ ಮಹಾವೀರಂ ಚಂದ್ರಾದಿತ್ಯಾದಿ ಮರ್ಧನಂ।
ಸಿಂಹಿಕಾಗರ್ಭಸಂಭೂತಂ ತಂ ರಾಹುಂ ಪ್ರಣಮಾಮ್ಯಹಂ ॥

ಅರ್ಧ ಶರೀರವುಳ್ಳವನೇ, ಸೂರ್ಯ ಚಂದ್ರರನ್ನು ಎದುರಿಸುವ ಪರಾಕ್ರಮಿ ಮತ್ತು ಸಿಂಹಿಕಾ ಪುತ್ರನಾದ ರಾಹುವೇ, ನಿನಗೆ ನಮಸ್ಕಾರಗಳು.

ವಾಮನರೂಪಿ ತ್ರಿವಿಕ್ರಮನಿಗೆ ಕೀರ್ತಿ ಎಂಬ ಹೆಂಡತಿ ಇದ್ದಳು. ಅವಳು ಸ್ಫುರದ್ರೂಪಿ. ತ್ರಿವಿಕ್ರಮನು ಸುಂದರ ಹೆಂಡತಿಯೊಂದಿಗೆ ಸುಖ ಸಂಸಾರ ಮಾಡಿಕೊಂಡಿದ್ದ ಅವರಿಗೆ 'ಬೃಹಚ್ಫ್ಲೋದಕ' ಎಂಬ ಮಗ ಹುಟ್ಟಿದ. ಆತನಿಗೆ ಸೌಭಗನೆಂಬುವನು ಮಗ. ಕಶ್ಯಪ ದಿತಿದೇವಿಯರು ರತಿಕ್ರೀಡೆಯಲ್ಲಿದ್ದರು. ಅನೇಕ ವರ್ಷಗಳ ಸುಖಸಂಸಾರದ ಫಲವಾಗಿ ದಿತಿದೇವಿಯು ಹಿರಣ್ಯಕಶ್ಯಪು, ಹಿರಣ್ಯಾಕ್ಷರೆಂಬ ಎರಡು ಗಂಡುಮಕ್ಕಳನ್ನು ಹೆತ್ತಳು.

ಹಲವು ವರ್ಷಗಳು ಕಳೆದವು. ಕಶ್ಯಪನಿಗೆ ಕಯಾಧು ಎಂಬ ಹೆಂಡತಿಯೂ ಇದ್ದಳು. ಸವತಿ ಮತ್ಸರದಿಂದ ಕಯಾಧು ತನಗೂ ಮಕ್ಕಳ ಭಾಗ್ಯ ಕೊಡಬೇಕೆಂದು ಕೇಳಿದಳು. ಕಶ್ಯಪರು ತಥಾಸ್ತು ಎಂದರು. ಕಯಾಧು ಗರ್ಭಿಣಿಯಾದಳು. ಸಂಹ್ಲಾದ, ಆಹ್ಲಾದ, ಪ್ರಹ್ಲಾದ ಮತ್ತು ಹ್ಲಾದ ಎಂಬ ನಾಲ್ಕು ಗಂಡು ಮಕ್ಕಳನ್ನು ಹೆತ್ತಳು. ಗಂಡುಸಂತಾನ ಸಾಕು, ಹೆಣ್ಣು ಬೇಕು ಎಂದು ಪ್ರಾರ್ಥಿಸಿದಳು. ಆಗ ಸಮಯ ಸರಿಯಾಗಿರಲಿಲ್ಲ. ಕಾರಣ ಸಿಂಹಿಕಾ ಎಂಬ ಹೆಣ್ಣು ಹುಟ್ಟಿತು. ದೈತ್ಯ ಸ್ವಭಾವದ ಸಿಂಹಿಕೆಯನ್ನು

ದೈತ್ಯನಾದ 'ವಿಪ್ರಚಿತ್ತಿ' ಮದುವೆಯಾದ. ಅದರ ಫಲವೇ 'ರಾಹು'ವಿನ ಜನನವಾಯಿತು. ಇವನಿಗೆ ಸ್ವರ್ಭಾನು ಎಂದೂ ಹೆಸರು.

ರಾಹು ಕಪ್ಪು ಬಣ್ಣವನ್ನು ತೊಟ್ಟಿರುತ್ತಾನೆ. ಬೆಳ್ಳಿಯ ರಥವನ್ನು ಎಂಟು ಕುದುರೆಗಳು ಎಳೆಯುತ್ತವೆ. ರಾಹುವನ್ನು ಭಕ್ತಿಯಿಂದ ಪೂಜಿಸಿದರೆ ರೋಗ ನಿವಾರಣೆಯಾಗುತ್ತದೆ. ಹಾವಿನಿಂದ ಹೆದರಿಕೆ ತಪ್ಪುತ್ತದೆ. ಬೇರಾವ ವಿಷಜಂತುಗಳ ಭಯವಿಲ್ಲ. ರಾಹು ದಯಾಳು ಹೃದಯಿ. ಶನಿ ಮತ್ತು ಶುಕ್ರರ ಸ್ನೇಹಿತ. ಭಕ್ತಿಯಿಂದ ಪೂಜಿಸಿದವರಿಗೆ ಅತ್ಯಾನಂದವನ್ನು ಕೊಡುತ್ತಾನೆ.

ರಾಹು ಕೆಲವಡೆಗಳಲ್ಲಿ ಸಿಂಹಾಸನದ ಮೇಲೆ ಕುಳಿತಿರುತ್ತಾನೆಂದು ಹೇಳಿದೆ. ಅವನಿಗೆ ನಾಲ್ಕು ಕೈಗಳಿರುತ್ತವೆ. ಒಂದು ಕೈಯಲ್ಲಿ ಪುಸ್ತಕ, ಇನ್ನೊಂದು ಕೈಯಲ್ಲಿ ಕಂಬಳಿ, ಮತ್ತೊಂದು ಕೈ ವರದಹಸ್ತವಾಗಿರುತ್ತದೆ. ಇನ್ನೊಂದು ಕೈಯಲ್ಲಿ ಖಡ್ಗ, ಮತ್ತೊಂದು ಕೈಯಲ್ಲಿ ಢಾಲು ಇರುತ್ತದೆ. ಅವನ ದೈತ್ಯರೂಪ ಅತಿ ಭಯಂಕರವಾಗಿರುತ್ತದೆ.[೨೫]

ಚಿತ್ರ -೪೪. ರಾಹುಗ್ರಹ

ರಾಹುಗ್ರಹವು ಮಿಥುನ ರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಮಿಥುನವು ಪುರುಷ ಮತ್ತು ಮಹಿಳೆ ಎದುರು ಬದುರು ನೋಟದಲ್ಲಿ ಕುಳಿತು ಸಂಭಾಷಿಸುತ್ತಿರುವ ದೃಶ್ಯ. ಪುರುಷ ಮೊಘಲ್‌ಶೈಲಿಯ ಪೋಷಾಕು ಧರಿಸಿ ತಲೆಯ ಮೇಲೆ ಟೋಪಿ ಧರಿಸಿದ್ದಾನೆ. ಪೋಷಾಕಿಗೆ ಹಸಿರು ಮತ್ತು ಕೆಂಪು ವರ್ಣದ ಲೇಪನವಿದೆ. ಎಡಗೈಯನ್ನು ಮಹಿಳೆಯ ಎಡಭುಜದ ಮೇಲಿರಿಸಿದ್ದು ಎಡಗೈಯಿಂದ ಚಾಮರವನ್ನು ಹಿಡಿದಿದ್ದಾನೆ. ಮಹಿಳೆಯು ಕೈ ಹಾಗೂ ಕೊರಳುಗಳಲ್ಲಿ ಆಭರಣಗಳು ಹಾಗೂ ಬಲಗೈಯಲ್ಲಿ ದಂಡವನ್ನು ಹಿಡಿದಿದ್ದು ಕೇಶವಿನ್ಯಾಸದಲ್ಲಿ ಚೌರವನ್ನು ಕಟ್ಟಿಕೊಂಡಿದ್ದಾಳೆ. ಸೀರೆಗೆ ಕೆಂಪು ವರ್ಣದ ಲೇಪನವಿದೆ. ಹಳದಿವರ್ಣಗಳಿಂದ ನಕ್ಷೆಯನ್ನು ಚಿತ್ರಿಸಲಾಗಿದೆ. ಇವರ ತಲೆಯ ಮೇಲೆ ರಾಹುಗ್ರಹದ ತ್ರಿಶೂಲ ಚಿಹ್ನೆಯನ್ನು ವಕ್ರ ರೇಖೆಯಲ್ಲಿ ಚಿತ್ರಿಸಲಾಗಿದೆ. ಕೆಳಭಾಗದಲ್ಲಿ ಹಸಿರುವರ್ಣದ ಲೇಪನವಿದ್ದರೆ, ಚಿತ್ರದ ಹಿನ್ನೆಲೆಯಲ್ಲಿ ಬಂಗಾರವರ್ಣದ ಲೇಪನವಿದೆ. ಪುರುಷನಿಗೆ ಒಂದೇ ಕಣ್ಣು ಚಿತ್ರಿಸಿ, ಮಹಿಳೆಗೆ ಎರಡು ಕಣ್ಣುಗಳನ್ನು ಚಿತ್ರಿಸಲಾಗಿದೆ.

ಚಿತ್ರ -೪೫. ರಾಹುಗ್ರಹ

ಈ ಗ್ರಹವು ಕಟಕ ರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ದೇಹಕ್ಕೆ ಹಳದಿ ವರ್ಣಲೇಪನವಿದ್ದು ಕೆಂಪುವರ್ಣದಿಂದ ನೆರಳು ಬೆಳಕನ್ನು ತೋರಿಸಿದ್ದಾರೆ. ಹತ್ತು ಕಾಲುಗಳಲ್ಲಿ ತನ್ನ ಎರಡು ಕಾಲುಗಳನು ನೋಡುಗನ ಮೇಲ್ಗಡೆ ಚಾಚಿಕೊಂಡಿವೆ. ಎರಡು ಕಣ್ಣುಗಳಲ್ಲಿ ನೇರದೃಷ್ಟಿ ಇದೆ. ಮೇಲ್ಭಾಗದಲ್ಲಿ ರಾಹುಗ್ರಹದ ತ್ರಿಶೂಲ ಚಿಹ್ನೆಯನ್ನು ಚಿತ್ರಿಸಿದ್ದು, ಬಂಗಾರ ವರ್ಣದ ಲೇಪನ ಮಾಡಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪು ಹಸಿರು ವರ್ಣದ ಲೇಪನವಿದೆ. ಸುತ್ತಲೂ ಬಾಹ್ಯವಾಗಿ ಹಳದಿವರ್ಣವನ್ನು ಹಾಕಲಾಗಿದೆ.

ಚಿತ್ರ -೪೬. ರಾಹುಗ್ರಹ

ಈ ಗ್ರಹವು ಸಿಂಹರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಸಿಂಹವು ನೋಡುಗನ ಬಲಭಾಗಕ್ಕೆ ದೇಹ ಮಾಡಿದ್ದರೆ ಶಿರವನ್ನು ನೋಡುಗನ ಎದುರು


೨೫. ಚಿಕ್ಕೇರೂರು ಧೀರೇಂದ್ರಾಚಾರ್ : ನವಗ್ರಹಗಳು, ಪುಟ-೨-೩

೪೪



ಮಿಥುನ ರಾಶಿ

೪೫



ಕಟಕ ರಾಶಿ

೪೬



ಸಿಂಹ ರಾಶಿ

೪೭



ಮೇಷ ರಾಶಿ

೪೮



ಧ್ವಜ

ಸಂಗ್ರಹ ; ಜನಪದ ವಸ್ತು ಸಂಗ್ರಹಾಲಯ, ಮೈಸೂರು

ನೋಟಕ್ಕೆ ಚಾಚಿ ಹಸನ್ಮುಖಿಯಾಗಿ ಮುಂದಿನ ಎರಡು ಕಾಲುಗಳನ್ನು ನೆಲಕ್ಕೆ ಎರಗಿಸಿ ಅರ್ಧಭಂಗಿಯಲ್ಲಿ ನಿಂತಿದೆ. ದೇಹಕ್ಕೆ ಹಳದಿವರ್ಣದ ಲೇಪನವಿದ್ದು ಕೆಂಪುವರ್ಣದಿಂದ ಬಾಹ್ಯವಾಗಿ ರೇಖೆಗಳನ್ನು ಹಾಕಲಾಗಿದೆ. ಕೊರಳಲ್ಲಿ ಗೆಜ್ಜೆಯ ಪಟ್ಟಿಕೆಯನ್ನು ಚಿತ್ರಿಸಿದ್ದಾರೆ. ಬಂಗಾರವರ್ಣದ ನೇಸರ, ನೀಳವಾದ ಬಾಲವನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಮೇಲ್ಭಾಗದಲ್ಲಿ ರಾಹುಗ್ರಹದ ತ್ರಿಶೂಲವನ್ನು ಚಿತ್ರಿಸಿ ಹಳದಿ ವರ್ಣದ ಲೇಪನ ಮಾಡಿದ್ದಾರೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪು ಹಸಿರು ಬಣ್ಣದ ಲೇಪನವಿದೆ.

ಚಿತ್ರ –೪೭. ರಾಹುಗ್ರಹ

ಈ ಗ್ರಹವು ಸಿಂಹರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಮೇಷವು ನೋಡುಗನ ಎಡಭಾಗಕ್ಕೆ ಮಂಡಿಯೂರಿ ಕುಳಿತು ನೇರದೃಷ್ಟಿಯಲ್ಲಿ ನೋಡುತ್ತಿದೆ. ದೇಹಕ್ಕೆ ಹಳದಿವರ್ಣದ ಲೇಪನವಿದ್ದು ಕೆಂಪುವರ್ಣದಿಂದ ಬಾಹ್ಯರೇಖೆ ಹಾಕಲಾಗಿದೆ. ಕೊರಳಲ್ಲಿ ಗೆಜ್ಜೆ ಪಟ್ಟಿಕೆ ಇದ್ದು ಅವುಗಳಿಗೆ ಹಳದಿ ಹಸಿರುವರ್ಣದ ಲೇಪನವಿದೆ. ಚಂದ್ರನಾಕಾರದಲ್ಲಿ ಒಂದು ಕೊಂಬು ಇದ್ದು ಅದಕ್ಕೆ ಕಪ್ಪು ಹಾಗೂ ಹಸಿರು ವರ್ಣದ ಲೇಪನವಿದೆ. ಮೇಲ್ಭಾಗದಲ್ಲಿ ಎಡಮುಖವಾಗಿ ರಾಹುಗ್ರಹದ ಚಿಹ್ನೆಯಾದ ತ್ರಿಶೂಲವಿದೆ. ಅದಕ್ಕೆ ಹಸಿರುವರ್ಣದ ಲೇಪನವಿದೆ. ಮೇಷದ ಕೆಳಭಾಗದಲ್ಲಿ ಹಳದಿ ಹಾಗೂ ಹಸಿರುವರ್ಣದ ಲೇಪನವಿದೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪುಮಿಶ್ರಿತ ಹಸಿರು ವರ್ಣದ ಲೇಪನವಿದೆ.

ಚಿತ್ರ –೪೮. ರಾಹುಗ್ರಹ

ಈ ಗ್ರಹವು ಧ್ವಜದ ಚಿಹ್ನೆಯಡಿ ೫ ಇಂಚು ವೃತ್ತಾಕಾರ ರಟ್ಟು, ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಸೇನಾನಿಯು ಧ್ವಜವನ್ನು ಹಿಡಿದುಕೊಂಡು ಕಟ್ಟೆಯ ಮೇಲೆ ನಿಂತಿದ್ದು ತಲೆಗೆ ಉದ್ದನೆಯ ಕಿರೀಟ, ಹಳದಿವರ್ಣದ ಜುಬ್ಬಾ, ಕಪ್ಪು ವರ್ಣದ ಪೈಜಾಮು ಧರಿಸಿದ್ದು, ಕೊರಳಲ್ಲಿ ಆಭರಣಗಳು ಧರಿಸಿ, ಬಲಗೈಯಿಂದ ಧ್ವಜದ ಕಂಬವನ್ನು ಹಿಡಿದು ನಿಂತಿದ್ದಾನೆ. ಧ್ವಜಕ್ಕೆ ಒಳಗಡೆ ಕೆಂಪುವರ್ಣದ ಲೇಪನವಿದ್ದು ಒಳಗಡೆ ಹಳದಿವರ್ಣದ ವೃತ್ತವಿದೆ. ಸಾಲಾಗಿ ಹಳದಿವರ್ಣದಿಂದ ಚುಕ್ಕೆಗಳನ್ನು ಚಿತ್ರಿಸಲಾಗಿದೆ. ಧ್ವಜವನ್ನು ತ್ರಿಕೋನ ಆಕಾರದಲ್ಲಿ ಚಿತ್ರಿಸಲಾಗಿದೆ. ಧ್ವಜದ ಸುತ್ತಲೂ ಹಳದಿ ಮತ್ತು ಹಸಿರು ವರ್ಣದಿಂದ ಬಾಹ್ಯರೇಖೆಯನ್ನು ಹಾಕಲಾಗಿದೆ. ಧ್ವಜದ ಮೂಲೆಯ ಕೆಳಭಾಗದಲ್ಲಿ ರಾಹುಗ್ರಹದ ಚಿಹ್ನೆ ತ್ರಿಶೂಲವನ್ನು ಚಿತ್ರಿಸಿ ಹಳದಿವರ್ಣದ ಲೇಪನ ಮಾಡಿದ್ದಾರೆ. ಕಟ್ಟೆಗೆ ನೀಲಿ ಮತ್ತು ತಿಳಿ ಹಳದಿ ವರ್ಣದ ಲೇಪನವಿದೆ. ಕೆಳಭಾಗದಲ್ಲಿ ಹಳದಿವರ್ಣದ ಲೇಪನವಿದೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪು ಮಿಶ್ರಿತ ಹಸಿರು ವರ್ಣದ ಲೇಪನವಿದೆ.

ಕೇತು ಗ್ರಹ

ಪಲಾಶಪುಷ್ಪಸಂಕಾಶಂ ತಾರಕಾಗ್ರಹಮಸ್ತಕಂ ।
ರೌದ್ರಂ ರೌದ್ರಾತ್ಮಕಂ ಘೋರಂ ತಂ ಕೇತುಂ ಪ್ರಣಮಾಮ್ಯಹಂ ॥

ಪಲಾಶಪುಷ್ಪವಂತೆ ತೋರುವ, ನಕ್ಷತ್ರ ಮತ್ತು ಗ್ರಹಗಳಿಗೆ ಅಧಿಪತಿಯಾದ, ಕೋಪಿಷ್ಟ ಮತ್ತು ಭಯಂಕರವಾದ ಕೇತುವೇ, ನಿನಗೆ ನಮಸ್ಕರಿಸುತ್ತೇವೆ.

ಸೂರ್ಯಚಂದ್ರರ ಆ ಸಂಜ್ಞೆಯ ಮೇರೆಗೆ ಮೋಹನಿರೂಪಿ ಪರಮಾತ್ಮನು ಚಕ್ರದಿಂದ ರಾಹುವಿನ ರುಂಡವನ್ನು ಕತ್ತರಿಸಿದ. ಅಮೃತ ಸೇವನೆಯಿಂದ ಅಮರತ್ವ ಪಡೆದಿದ್ದ ರಾಹು ರುಂಡ ಮುಂಡ ಬೇರೆ

ಬೇರೆಯಾದರೂ ಬದುಕುಳಿದ. ರುಂಡವೇ ರಾಹು. ಬಿದ್ದು ಹೋದ ಮುಂಡಭಾಗವನ್ನು ಅದೇ ಮಾರ್ಗವಾಗಿ ಬರುತ್ತಿದ್ದ ಮುನಿ ಎಂಬ ಬ್ರಾಹ್ಮಣ ತನ್ನೊಂದಿಗೆ ತೆಗೆದುಕೊಂಡು ಹೋದ. ಆ ಮುಂಡವನ್ನೇ ತನ್ನ ಮಗನಂತೆ ಸಾಕಿದ. ಅದಕ್ಕೆ ಕೇತು ಎಂದು ಹೆಸರಿಟ್ಟನು. ಆಗ ಕೇತು ತಲೆಯಿಲ್ಲದ ದೇಹ ಮಾತ್ರ ಉಳ್ಳವನಾದ. ಶ್ರೀ ವಿಷ್ಣುವನ್ನು ಕುರಿತು ಬೇಡಿದ ಅವನ ಮೇಲೆ ಕರುಣೆ ಇಟ್ಟು ಭಗವಂತನು ಬಿಂಬ ಭಾಗದ ಮೇಲೆ ಹಾವಿನ ಹೆಡೆಯಾಗುವಂತೆ ಅನುಗ್ರಹಿಸಿದ.

ಹಾವಿನ ಹೆಡೆ ಮುಖದ ಬಣ್ಣ ಕೆಂಪು. ಕೇತುವಿನ ವರ್ಣ ಕಪ್ಪು. ಅವನ ರಥವನ್ನು ಹತ್ತು ಕುದುರೆಗಳು ಎಳೆಯುತ್ತವೆ. ಅಸುರರಲ್ಲಿ ಅಗ್ರಗಣ್ಯ. ಉಪಗ್ರಹಗಳಲ್ಲಿ ಶ್ರೇಷ್ಠ . ಅತ್ಯಂತ ದುಷ್ಟ ಮತ್ತು ಕೋಪಿಷ್ಟ, ಜೈಮಿನಿಗೋತ್ರದವನೆಂದು ತಿಳಿದು ಬರುತ್ತದೆ. ಗೂಬೆ ಇವನ ವಾಹನ. ಕೇತುವನ್ನೂ ನಪುಂಸಕನೆಂದೂ ಹೇಳುತ್ತಾರೆ. ರಾಹು ಮತ್ತು ಕೇತುಗಳಿಬ್ಬರು ಛಾಯಾಗ್ರಹಗಳು.[೨೬]

ಚಿತ್ರ –೪೯. ಕೇತುಗ್ರಹ

ಕೇತುಗ್ರಹವು ಮಿಥುನ ರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಯುವಕ ಹಾಗೂ ಯುವತಿ ಸಂಭಾಷಣೆಯಲ್ಲಿ ಕುಳಿತಿದ್ದು ಯುವತಿಯ ಬಲಗೈಯಲ್ಲಿ ವೀಣೆಯನ್ನು ಹಿಡಿದಿದ್ದು ಪುರುಷನು ಎಡಗೈಯಲ್ಲಿ ಚಾಮರವನ್ನು ಹಿಡಿದಿದ್ದಾನೆ. ಮಹಿಳೆಯ ಕೈ ಹಾಗೂ ಕೊರಳಲ್ಲಿ ಆಭರಣಗಳಿವೆ. ಸೀರೆಗೆ ಕಪ್ಪುವರ್ಣದ ಲೇಪನವಿದೆ. ಪುರುಷನು ಮೊಘಲ್ ಶೈಲಿಯ ಪೋಷಾಕು ಧರಿಸಿದ್ದಾನೆ. ಇಬ್ಬರ ತಲೆಯ ಮಧ್ಯಭಾಗದಲ್ಲಿ ತ್ರಿಕೋನಾಕಾರದ ತ್ರಿವರ್ಣಗಳ ಧ್ವಜವಿದ್ದು ಹಸಿರು, ಹಳದಿ, ಕೆಂಪು ವರ್ಣಗಳನ್ನು ಲೇಪಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪುವರ್ಣದ ಲೇಪನವಿದೆ. ಕೆಳಭಾಗದಲ್ಲಿ ಕಟ್ಟೆಯಿದ್ದು ಹಳದಿ ಮತ್ತು ಕೇಸರಿವರ್ಣದ ಲೇಪನವಿದೆ.

ಚಿತ್ರ –೫೦. ಕೇತುಗ್ರಹ

ಈ ಗ್ರಹವು ವೃಷಭರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಚಿತ್ರಿಸಿದ ವೃಷಭವು ನೋಡುಗನ ಎಡಭಾಗಕ್ಕೆ ಮಂಡಿಯೂರಿ ಕುಳಿತು ಕತ್ತನ್ನು ಎತ್ತಿ ನೇರವಾಗಿ ನೋಡುತ್ತಿದೆ. ಕೊರಳು ಮತ್ತು ದೇಹದ ಭಾಗಗಳಲ್ಲಿ ಗೆಜ್ಜೆಯ ಪಟ್ಟಿಗಳನ್ನು ಹಾಕಲಾಗಿದ್ದು, ದೇಹಕ್ಕೆ ಬಿಳಿ ವರ್ಣವನ್ನು ಲೇಪಿಸಿದ್ದು ಕೆಂಪುವರ್ಣದಿಂದ ಬಾಹ್ಯ ರೇಖೆಯನ್ನು ಹಾಕಲಾಗಿದೆ. ವೃಷಭದ ಬೆನ್ನಿನ ಮೇಲಿನಿಂದ ಧ್ವಜದ ಕಂಬವಿದ್ದು ಮೇಲ್ಭಾಗದಲ್ಲಿ ತ್ರಿಕೋನ ಆಕಾರದ ಧ್ವಜವು ನೋಡುಗನ ಬಲಭಾಗಕ್ಕೆ ಹಸಿರು, ಹಳದಿ, ಕೆಂಪು, ತ್ರಿವರ್ಣದ ಧ್ವಜವು ಹಾರಾಡುತ್ತಿದೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪುವರ್ಣದ ಲೇಪನವಿದೆ. ವೃಷಭದ ಕೆಳಗಡೆ ಹಳದಿ ಪಟ್ಟಿಕೆ ಇದೆ.

ಚಿತ್ರ –೫೧. ಕೇತುಗ್ರಹ

ಈ ಗ್ರಹವು ಮೇಷರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಮೇಷವು ನೋಡುಗನ ಎಡಭಾಗಕ್ಕೆ ಮಂಡಿಯೂರಿ ಕುಳಿತು ಕತ್ತನ್ನು ಮೇಲೆತ್ತಿ ನೇರವಾಗಿ ನೋಡುತ್ತಿದೆ. ದೇಹಕ್ಕೆ ತೆಳುಗೆಂಪು ವರ್ಣದ ಲೇಪನವಿದೆ. ಕೊರಳು ಮತ್ತು ದೇಹಭಾಗಕ್ಕೆ ಗೆಜ್ಜೆ ಪಟ್ಟಿಗಳನ್ನು ಹಾಕಲಾಗಿದೆ. ಬೆನ್ನಿಗೆ ಕೆಂಪುವರ್ಣದ ವಸ್ತ್ರವನ್ನು ಹಾಸಿದ್ದು, ಸುತ್ತಲೂ ಹಳದಿವರ್ಣದಲ್ಲಿ ನಕ್ಷೆಯನ್ನು ಚಿತ್ರಿಸಿದ್ದಾರೆ. ಬೆನ್ನಿನ ಮೇಲೆ ಧ್ವಜಕಂಬವಿದ್ದು, ಮೇಲ್ಗಡೆ ತ್ರಿವರ್ಣದ ಧ್ವಜವು ಬಲಭಾಗಕ್ಕೆ ಹಸಿರು,

೨೬. ಚಿಕ್ಕೇರೂರು ಧೀರೇಂದ್ರಾಚಾರ್ : ನವಗ್ರಹಗಳು, ಪುಟ – ೨–೩

೪೯



ಮಿಥುನ ರಾಶಿ

೫೦



ವೃಷಭ ರಾಶಿ

೫೧



ಮೇಷ ರಾಶಿ

೫೨



ಕಟಕ ರಾಶಿ

೫೩



ಕನ್ಯಾ ರಾಶಿ

೫೪



ತುಲಾ ರಾಶಿ

ಸಂಗ್ರಹ ; ಜನಪದ ವಸ್ತು ಸಂಗ್ರಹಾಲಯ, ಮೈಸೂರು

ಹಳದಿ, ಕೆಂಪು ತ್ರಿವರ್ಣಧ್ವಜ ನೋಡುಗನ ಬಲಭಾಗಕ್ಕೆ ಹಾರುತ್ತಿದೆ. ಮೇಲಕ್ಕೆ ಚಂದ್ರಾಕಾರ, ಒಂದು ಕೊಂಬಿಗೆ ಕಪ್ಪು ವರ್ಣದ ಲೇಪನವಿದ್ದು ನೀಲಿ ವರ್ಣದಿಂದ ನೆರಳು ಬೆಳಕು ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಕಪ್ಪುವರ್ಣದ ಲೇಪನವಿದೆ. ಕೆಳಭಾಗದಲ್ಲಿ ಹಳದಿ ಮತ್ತು ಹಸಿರುವರ್ಣದ ಪಟ್ಟಿಕೆ ಇದೆ.

ಚಿತ್ರ –೫೨. ಕೇತುಗ್ರಹ

ಈ ಗ್ರಹವು ಕಟಕರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ಕಟಕವು ನೋಡುಗನ ಮೇಲ್ಭಾಗಕ್ಕೆ ಕಣ್ಣುಗಳಿಂದ ನೋಡುತ್ತಿದ್ದು ತನ್ನ ಎರಡು ಕಾಲುಗಳನ್ನು ಮುಂದಕ್ಕೆ ಚಾಚಿಕೊಂಡಿದೆ. ದೇಹಕ್ಕೆ ಹಳದಿವರ್ಣದ ಲೇಪನವಿದ್ದು ಕೆಂಪುವರ್ಣದಿಂದ ಬಾಹ್ಯ ರೇಖೆಯನ್ನು ಹಾಕಲಾಗಿದೆ. ಮೇಲ್ಭಾಗದಲ್ಲಿ ಹಸಿರು ಹಳದಿ ಕೆಂಪು ವರ್ಣದ ತ್ರಿವರ್ಣಧ್ವಜ ನೋಡುಗನ ಬಲಭಾಗಕ್ಕೆ ಹಾರುತ್ತಿದೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪುವರ್ಣದ ಲೇಪನವಿದೆ.

ಚಿತ್ರ –೫೩. ಕೇತುಗ್ರಹ

ಈ ಗ್ರಹವು ಕನ್ಯಾರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ನೋಡುಗನ ಎದುರುಮುಖವಾಗಿ ಸಮುದ್ರದಲ್ಲಿ ತೇಲುತ್ತಿರುವ ದೋಣಿಯಲ್ಲಿ ಕುಳಿತು ಬಲಗೈಯಲ್ಲಿ ಅಗ್ನಿಕುಂಡವನ್ನು ಹಿಡಿದಿದ್ದಾಳೆ. ಕೈ ಹಾಗೂ ಕೊರಳಲ್ಲಿ ಆಭರಣಗಳಿವೆ. ಸೀರೆಗೆ ಹಸಿರು ಮತ್ತು ಬಂಗಾರದ ವರ್ಣದ ಲೇಪನವಿದೆ. ಬಲಗೈ ಭುಜದ ಮೇಲ್ಗಡೆ ಧ್ವಜವಿದ್ದು ನೋಡುಗನ ಎಡಭಾಗಕ್ಕೆ ಹಸಿರು, ಹಳದಿ, ಕೆಂಪು ತ್ರಿವರ್ಣದ ಧ್ವಜ ಹಾರುತ್ತಿದೆ. ಹಿನ್ನೆಲೆಯಲ್ಲಿ ಕಪ್ಪುವರ್ಣದ ಲೇಪನವಿದೆ. ಸಮುದ್ರಕ್ಕೆ ನೀಲಿ, ಹಸಿರು ವರ್ಣದ ಲೇಪನವಿದೆ. ಸಮುದ್ರದ ತೆರೆಗಳಲ್ಲಿ ಸ್ಪಷ್ಟತೆ ಇದೆ.

ಚಿತ್ರ –೫೪. ಕೇತುಗ್ರಹ

ಈ ಗ್ರಹವು ತುಲಾರಾಶಿಯಲ್ಲಿ ೫ ಇಂಚು ವೃತ್ತಾಕಾರದ ರಟ್ಟು ಹಾಳೆಯಿಂದ ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ನೋಡುಗನ ಬಲಭಾಗಕ್ಕೆ ಹೊರಳಿ ಕುಳಿತಿರುವ ಪುರುಷ ಬಲಗೈಯಿಂದ ತಕ್ಕಡಿಯಿಂದ ತೂಕ ಮಾಡುವ ದೃಶ್ಯ, ತೂಗುವ ತಕ್ಕಡಿ ಸಮಾನಾಂತರವಾಗಿದೆ. ತಕ್ಕಡಿ ಕೆಳಭಾಗದಲ್ಲಿ ಹಳದಿಮಿಶ್ರಿತ ಕಪ್ಪು ಬಣ್ಣದ ಬುಟ್ಟಿಯಿದೆ. ಪುರುಷನು ಸೈನಿಕಶೈಲಿಯ ಪೋಷಾಕು ಧರಿಸಿದ್ದಾನೆ. ಪುರುಷನ ಮುಖದ ಮುಂಭಾಗದಲ್ಲಿ ಹಸಿರು, ಹಳದಿ, ಕೆಂಪು ತ್ರಿವರ್ಣ ಧ್ವಜವು, ಬಲಭಾಗಕ್ಕೆ ಹಾರುತ್ತಿದೆ. ಪುರುಷನು ಕುಳಿತಿರುವ ಕೆಳಭಾಗದಲ್ಲಿ ಹಳದಿಮಿಶ್ರಿತ ಹಸಿರುವರ್ಣದ ಲೇಪನವಿದ್ದರೆ, ಚಿತ್ರದ ಹಿನ್ನೆಲೆಯಲ್ಲಿ ಕಪ್ಪುವರ್ಣದ ಲೇಪನವಿದೆ. ಈ ಮೇಲಿನ ಎಲ್ಲಾ ಚಿತ್ರಗಳು ಮೈಸೂರಿನ ಜನಪದ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿವೆ.

ಚಿತ್ರ – ೫೫. ಚಾಮುಂಡಿ ಗಂಜೀಫಾ

ಮುಮ್ಮಡಿ ಕೃಷ್ಣರಾಜ ವಿರಚಿತ ಹದಿನಾಲ್ಕು ಗಂಜೀಫಾ ಸೂಟುಗಳ ವಿವರಣೆ ಸಿಗುತ್ತದೆ. ಆದರೆ ಕೆಲವು ಹಳೆಯ ಗಂಜೀಫಾ ಸೂಟಗಳು ಎಲ್ಲಿಯೂ ಕಂಡುಬರುವುದಿಲ್ಲ. ಹದಿನಾಲ್ಕು ಗಂಜೀಫಾ ಸೂಟಗಳನ್ನು ಬೆಂಗಳೂರಿನ ಹಿರಿಯ ಕಲಾವಿದೆ ಶ್ರೀಮತಿ.ಸುಧಾ ವೆಂಕಟೇಶ ಅವರು ಹಿಂದಿನ ಶೈಲಿಯಲ್ಲಿ ಸೂಕ್ಷ್ಮವಾಗಿ ಯಥಾವತ್ತಾಗಿ ಪ್ರತಿಕೃತಿ ಮಾಡಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ವಿವರಿಸಲಾಗಿದೆ.

ವಿಷ್ಣು

ಬಿಳಿವರ್ಣದಿಂದ ಕೂಡಿ ಚತುರ್ಭುಜನಾಗಿರುವ ವಿಷ್ಣು ಎದುರುಮುಖವಾಗಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ತಲೆಯ ಮೇಲೆ ಐದು ಹೆಡೆಯ ಸರ್ಪ ಶೋಭಿಸುತ್ತಿದೆ. ಬಲಗೈ ಮೇಲ್ಭಾಗದಲ್ಲಿ ವಿಷ್ಣುವು ಚಕ್ರವನ್ನು ಮತ್ತು ಎಡಗೈ ಮೇಲ್ಭಾಗದಲ್ಲಿ ಶಂಖವನ್ನು ಹಿಡಿದಿದ್ದಾನೆ. ಅವನ ಕೆಳಭಾಗದ ಎರಡು ಕೈಗಳು ವರದ ಮುದ್ರೆಯಿಂದ ಶೋಭಿತವಾಗಿವೆ. ಆತನು ಬಿಳಿಬಣ್ಣದ ಧೋತಿಯನ್ನು ಧರಿಸಿದ್ದಾನೆ. ಹಸಿರು ಬಣ್ಣದ ಹಳದಿ ಅಂಚುಗಳಿಂದ ಕೂಡಿದ ಅಂಗವಸ್ತ್ರವನ್ನು (ದುಪ್ಪಟ್ಟಾ) ಹೊಂದಿದ್ದಾನೆ. ಕಿರೀಟ ಧರಿಸಿ ಹಾರಗಳನ್ನು ಮತ್ತು ಕೈಕಡಗಗಳನ್ನು ಹಾಕಿಕೊಂಡಿದ್ದಾನೆ. ಹಣೆಯಲ್ಲಿ ಶ್ರೀವತ್ಸ ಲಾಂಛನವಿದೆ. ಪೀಠದ ಬಣ್ಣ ಹಳದಿ, ಎಲೆಯ ಅಂಚು ಚುಕ್ಕೆಯ ವಿನ್ಯಾಸದಿಂದ ಕೂಡಿದೆ. ಚಿತ್ರದ ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದ್ದು ಚಿತ್ರ ಅತ್ಯಂತ ಆಕರ್ಷಕವಾಗಿ ಮೂಡಿಬಂದಿದೆ.

ಲಕ್ಷ್ಮೀ

ಬಿಳಿವರ್ಣದಿಂದ ಕೂಡಿ ಚತುರ್ಭುಜೆಯಾಗಿರುವ ಲಕ್ಷ್ಮೀ ಎದುರುಮುಖವಾಗಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾಳೆ. ತಲೆಯ ಮೇಲೆ ಕಿರೀಟ ಧರಿಸಿದ್ದಾಳೆ. ಎಲ್ಲಾ ಕರ್ಣಾಭರಣಗಳನ್ನು ಹಾಕಿಕೊಂಡಿದ್ದಾಳೆ. ಅಲ್ಲದೆ ಭುಜಕೀರ್ತಿಯನ್ನು ಧರಿಸಿ ಬಂಗಾರದ ಒಡ್ಯಾಣ ಧರಿಸಿದ್ದಾಳೆ ಹಾಗೂ ಕೊರಳಲ್ಲಿ ವೈಜಯಂತಿಮಾಲಾ ಧರಿಸಿದ್ದಾಳೆ. ಮೇಲ್ಭಾಗದ ಎಡಗೈ ಮತ್ತು ಬಲಗೈಯಲ್ಲಿ ಕಮಲವನ್ನು ಹಿಡಿದಿದ್ದಾಳೆ. ಕೆಳಭಾಗದ ಎರಡು ಕೈಗಳು ವರದಮುದ್ರೆಯಿಂದ ಶೋಭಿತವಾಗಿವೆ. ಲಕ್ಷ್ಮೀಯು ಹಸಿರು ಬಣ್ಣದ ಸೀರೆಯನ್ನು ಧರಿಸಿದ್ದಾಳೆ. ಎಡಗೈ ಪಕ್ಕದಲ್ಲಿ ವಿಷ್ಣುವಿನ ಶಂಖವನ್ನು ಕಾಣಬಹುದು. ವಿನ್ಯಾಸದಿಂದ ಕೂಡಿದ ಚಿತ್ರದ ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ. ಚಿತ್ರ ಅತ್ಯಂತ ಆಕರ್ಷಕವಾಗಿ ಮೂಡಿಬಂದಿದೆ.

ರಾಜ

ಚತುರ್ಭುಜನಾಗಿರುವ ವಿಷ್ಣುವು ರಥಾರೋಹಿಯಾಗಿದ್ದಾನೆ. ಶ್ವೇತವರ್ಣದ ಮೂರು ಕುದುರೆಗಳು ರಥವನ್ನು ನಾಗಾಲೋಟದಲ್ಲಿ ಎಳೆದೊಯ್ಯುತ್ತಿವೆ. ರಥವನ್ನು ಸಾರಥಿಯು ಮುನ್ನೆಡೆಸುತ್ತಿದ್ದು ಹಸಿರುವರ್ಣದ ವಸ್ತ್ರವನ್ನು ಧರಿಸಿದ್ದಾನೆ. ರಾಜನು (ವಿಷ್ಣುವು) ಇಲ್ಲಿ ಕೆಂಪುಧೋತಿ ಧರಿಸಿದ್ದು,ಉಳಿದಿದ್ದು ಹಿಂದಿನ ಎಲೆಯಲ್ಲಿನ ರಚನಾ ವೈವಿಧ್ಯವನ್ನು ಹೊಂದಿದೆ. ಬಂಗಾರ ವರ್ಣದ ರಥ ಎಡ ಮತ್ತು ಬಲಭಾಗದಲ್ಲಿ ಹಸಿರು ವರ್ಣದ ಧ್ವಜಗಳಿವೆ.

ಧ್ವಜ

ಹಳದಿವರ್ಣದಿಂದ ಎರಡು ಕೈಗಳನ್ನು ಹೊಂದಿರುವ ಸೇನಾನಿ ಪಾರ್ಶ್ವಮುಖವಾಗಿ ಧ್ವಜದ ಎರಡನೆ ಕಟ್ಟೆಯ ಮೇಲೆ ನಿಂತಿದ್ದಾನೆ. ಬಲಗೈಯಲ್ಲಿ ಕತ್ತಿಯನ್ನು ಎತ್ತಿ ಹಿಡಿದಿದ್ದಾನೆ. ಧ್ವಜವು ಹಸಿರು ವರ್ಣದಿಂದ ಹಾರಾಡುತ್ತಿದೆ. ಮಧ್ಯದಲ್ಲಿ ಕೆಂಪುವರ್ಣದ ವೃತ್ತವಿದೆ. ಹಳದಿವರ್ಣದಿಂದ ಬಾಹ್ಯವಾಗಿ ಚುಕ್ಕೆಗಳ ಪಟ್ಟಿ ಚಿತ್ರಿಸಿದ್ದಾರೆ. ಕೆಳಭಾಗದಲ್ಲಿ ವಿಷ್ಣುವಿನ ಶಂಖ, ಚಕ್ರವಿದೆ. ಹಿನ್ನೆಲೆಯಲ್ಲಿ ಕೆಂಪುವರ್ಣವಿದೆ. ಎಲೆಯ ಅಂಚು ಹಳದಿವರ್ಣದ ಚುಕ್ಕೆಗಳಿಂದ ಕೂಡಿದೆ. ಚಿತ್ರವು ಸ್ಪಷ್ಟವಾಗಿ ಮೂಡಿ ಬಂದಿದೆ.

ಯೋಧ

ಹಳದಿ ವರ್ಣದಿಂದ ಕೂಡಿದ ದೇಹ, ಎರಡು ಕೈಗಳನ್ನು ಹೊಂದಿರುವ ಯೋಧ ಬಲಗೈಯಲ್ಲಿ

ಚಿತ್ರ ೫೫. ಚಾಮುಂಡಿ



ಲಕ್ಷ್ಮಿ



ವಿಷ್ಣು



ರಾಜ



ಧ್ವಜ



ಪದಾತಿ



ಸೇನಿಕಾ



ಮೇಷ



ವೃಷಭ



ಮೀಥುನ



ಕಟಕ



ಸಿಂಹ



ಕನ್ಯಾ



ತುಲಾ



ವೃಶ್ಚಿಕ



ಧನಸ್ಸು



ಮಕರ



ಕುಂಭ



ಮೀನು

ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಖಡ್ಗ, ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಹಸಿರುಬಣ್ಣದ ಜುಬ್ಬಾ, ಹಳದಿವರ್ಣದ ಪೈಜಾಮು ಧರಿಸಿದ್ದಾನೆ. ಕಿರೀಟಧಾರಿಯಾಗಿ ಕರ್ಣಾಭರಣಗಳನ್ನು ಹಾಕಿದ್ದಾನೆ. ಹಿಂಭಾಗದಲ್ಲಿ ವಿಷ್ಣುವಿನ ಶಂಖ –ಚಕ್ರವಿದೆ. ಹಿನ್ನೆಲೆಯಲ್ಲಿ ಕೆಂಪುವರ್ಣದ ಎಲೆಯ ಅಂಚನ್ನು ಚುಕ್ಕೆಗಳಿಂದ ಶೃಂಗರಿಸಲಾಗಿದೆ.

ಪದಾತಿ

ಹಳದಿವರ್ಣದಿಂದ ಕೂಡಿದ ದೇಹ, ಹಸಿರುಬಣ್ಣದ ಜುಬ್ಬಾ, ಹಳದಿ ವರ್ಣದ ಪೈಜಾಮು ಧರಿಸಿ, ಶ್ವೇತವರ್ಣದ ಕುದುರೆಯನ್ನು ಸವಾರಿ ಮಾಡುತ್ತಿದ್ದಾನೆ. ಅಶ್ವವು ಶೃಂಗರಿಸಿಕೊಂಡು ನೆಗೆಯುತ್ತಿದೆ. ಕಿರೀಟಧಾರಿಯಾಗಿ ಕರ್ಣಾಭರಣಗಳನ್ನು ಪದಾತಿಯು ಧರಿಸಿದ್ದಾನೆ. ಹಿಂಭಾಗದಲ್ಲಿ ವಿಷ್ಣುವಿನ ಶಂಖ–ಚಕ್ರವಿದೆ. ಚಿತ್ರದ ಹಿನ್ನೆಲೆಯಲ್ಲಿ ಕೆಂಪುವರ್ಣವಿದೆ. ಎಲೆಯ ಅಂಚಿನಲ್ಲಿ ಹಳದಿ ವರ್ಣದಿಂದ ಚುಕ್ಕೆಗಳನ್ನು ಹಾಕಿ ಶೃಂಗರಿಸಿದ್ದಾರೆ.

ಇನ್ನುಳಿದಂತೆ ಒಂದರಿಂದ ಹನ್ನೆರಡು ರಾಶಿಗಳಾದ ಮೇಷ, ವೃಷಭ, ಮಿಥುನ, ಕಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಂಭ, ಮೀನ ಇವುಗಳನ್ನು ಚಿತ್ರಿಸಿದ್ದು ಮಿಥುನರಾಶಿಯಲ್ಲಿ ಪುರುಷನು ಹಳದಿವರ್ಣದಿಂದ ಕೂಡಿದ ಅಂಗವಸ್ತ್ರವನ್ನು ಧರಿಸಿ, ಹಸಿರುಬಣ್ಣದ ದುಪ್ಪಟ್ಟಿಯನ್ನು ಧರಿಸಿದ್ದಾನೆ. ತಲೆಗೆ ಪೇಟಾ ಸುತ್ತಿದ್ದಾನೆ. ಮಹಿಳೆಯು ಹಸಿರು ಸೀರೆಯುಟ್ಟು ಹಳದಿ ಕುಪ್ಪಸವನ್ನು ಧರಿಸಿದ್ದಾಳೆ. ಅಲ್ಲದೆ ಕರ್ಣಾಭರಣಗಳನ್ನು ಧರಿಸಿದ್ದಾಳೆ. ಪೀಠದ ಮೇಲೆ ಸಂಭಾಷಣೆಯ ದೃಶ್ಯವಿದೆ. ಇನ್ನು ಕನ್ಯಾರಾಶಿಯಲ್ಲಿ ಕನ್ಯೆಯು ಹಸಿರು ಸೀರೆಯುಟ್ಟು ಹಳದಿ ಕುಪ್ಪಸವನ್ನು ಧರಿಸಿ ಎಡ ಮತ್ತು ಬಲಗೈಯಲ್ಲಿ ಕಲಮ ಹಿಡಿದಿದ್ದಾಳೆ. ಅಲ್ಲದೆ ಕೊರಳಲ್ಲಿ ಕೈಯಲ್ಲಿ ಆಭರಣಗಳನ್ನು ಧರಿಸಿ ಸಮುದ್ರದಲ್ಲಿ/ದೋಣಿಯಲ್ಲಿ ಚಲಿಸುತ್ತಿದ್ದಾಳೆ. ಉಳಿದೆಲ್ಲಾ ರಾಶಿಗಳನ್ನು ಹಳದಿವರ್ಣಗಳಿಂದ ಚಿತ್ರಿಸಿ, ವಿಷ್ಣುವಿನ ಶಂಖ–ಚಕ್ರವನ್ನು ಚಿತ್ರಿಸಿದ್ದಾರೆ. ಒಟ್ಟು ಇಲ್ಲಿ ಹದಿನೆಂಟು ವೃತ್ತಾಕಾರದ ಗಂಜೀಫಾ ಎಲೆಗಳಿದ್ದು ಹಿನ್ನೆಲೆಯಲ್ಲಿ ಎಲ್ಲಾ ಕೆಂಪುಬಣ್ಣದ ಲೇಪನದ ಎಲೆಗಳು ಅತ್ಯಂತ ಸೂಕ್ಷ್ಮವಾಗಿ ಮೂಡಿಬಂದಿವೆ.

ಚಿತ್ರ – ೫೬. ಶಿವ ಸೂಟ

ಬಿಳಿವರ್ಣದಿಂದ ಕೂಡಿ ಚತುರ್ಭುಜನಾಗಿರುವ ಶಿವನು ಪೀಠದ ಮೇಲೆ ಕುಳಿತಿದ್ದಾನೆ. ದೇಹಕ್ಕೆ ಹುಲಿಯ ಚರ್ಮವನ್ನು ಧರಿಸಿ ಹಸಿರುವರ್ಣದ ದುಪ್ಪಟ್ಟಾವನ್ನು ಧರಿಸಿದ್ದಾನೆ. ಮೇಲಿನ ಎಡಗೈಯಲ್ಲಿ ತ್ರಿಶೂಲ, ಬಲಗೈಯಲ್ಲಿ ಡಮರನ್ನು ಹಿಡಿದಿದ್ದಾನೆ. ಕೆಳಭಾಗದ ಎರಡು ಕೈಗಳು ವರದ ಮುದ್ರೆಯಿಂದ ಶೋಭಿತವಾಗಿವೆ. ತಲೆಯಲ್ಲಿ ಕಿರೀಟ ಹಾಗೂ ಚಂದ್ರನನ್ನು ಧರಿಸಿದ್ದಾನೆ. ಮುಂಭಾಗದಲ್ಲಿ ಬಿಳಿವರ್ಣದ ಶಿವನ ವಾಹನ ನಂದಿ ಇದೆ. ಶಿವನು ಕರ್ಣಾಭರಣಗಳನ್ನು ಧರಿಸಿದ್ದಾನೆ. ಎಲೆಯ ಅಂಚನ್ನು ಹಳದಿವರ್ಣದಿಂದ ಶೃಂಗರಿಸಲಾಗಿದೆ. ಚಿತ್ರವು ಸೂಕ್ಷ್ಮವಾಗಿ ಮೂಡಿಬಂದಿದೆ.

ಪಾರ್ವತಿ

ಶ್ವೇತವರ್ಣದಿಂದ ಕೂಡಿ ಚತುರ್ಭುಜಳಾಗಿ ಪದ್ಮಾಸನದಲ್ಲಿ ಕೆಂಪುವರ್ಣದ ಪೀಠದ ಮೇಲೆ ಪಾರ್ವತಿದೇವಿ ಕುಳಿತಿದ್ದಾಳೆ. ತಲೆಯ ಮೇಲೆ ಕಿರೀಟವಿದ್ದು, ಬಲಕ್ಕೆ ಚಂದ್ರನನ್ನು ಧರಿಸಿದ್ದಾಳೆ. ದೇಹಕ್ಕೆ ಆಭರಣಗಳನ್ನು, ಸೊಂಟದಲ್ಲಿ ಒಡ್ಯಾಣವನ್ನು ಧರಿಸಿದ್ದಾಳೆ. ಮೇಲ್ಭಾಗದ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಪುಷ್ಪವನ್ನು ಹಿಡಿದಿದ್ದಾಳೆ. ಕೆಳಭಾಗದ ಎರಡು ಕೈಗಳು ವರದಮುದ್ರೆಯಿಂದ ಶೋಭಿತವಾಗಿವೆ. ಮುಂಭಾಗದಲ್ಲಿ ಬಿಳಿವರ್ಣದ ಶಿವನ ವಾಹನ ನಂದಿ ಕುಳಿತಿದೆ.

ಚಿತ್ರ ೫೬



ಶಿವ



ಪಾರ್ವತಿ



ರಾಜ



ಧ್ವಜ



ಪದಾತಿ



ಸೇನಿಕಾ



ಮೇಷ



ವೃಷಭ



ಮಿಥುನ



ಕಟಕ



ಸಿಂಹ



ಕನ್ಯಾ



ತುಲಾ



ವೃಶ್ಚಿಕ



ಧನಸ್ಸು



ಮಕರ



ಕುಂಭ



ಮೀನು

ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ರಾಜ

ಚತುರ್ಭುಜನಾಗಿರುವ ಶಿವ ಎದುರುನೋಟದ ಪದ್ಮಾಸನದಲ್ಲಿ ಕುಳಿತಿದ್ದಾನೆ. ಶ್ವೇತವರ್ಣದ ಐದು ಕುದುರೆಗಳು ರಥವನ್ನು ನಾಗಾಲೋಟದಲ್ಲಿ ಎಳೆದುಕೊಂಡು ಹೋಗುತ್ತಿವೆ. ಶಿವನು ಹಳದಿವರ್ಣದ ವಸ್ತ್ರವನ್ನು ಧರಿಸಿ, ಕೆಂಪುವರ್ಣದ ದುಪ್ಪಟ್ಟಾವನ್ನು ಧರಿಸಿದ್ದಾನೆ. ಬಂಗಾರವರ್ಣದ ರಥವಿದ್ದು ಎರಡು ಚಕ್ರಗಳನ್ನು ಮಾತ್ರ ತೋರಿಸಲಾಗಿದೆ. ಮುಂದೆ ಸಾರಥಿಯು ರಥವನ್ನು ಮುನ್ನಡೆಸುತ್ತಿದ್ದಾನೆ.

ಧ್ವಜ –ಪದಾತಿ –ಯೋಧ

ಈ ಚಿತ್ರದಲ್ಲಿ ಹಸಿರು ವಸ್ತ್ರಾಭರಣ, ಹಳದಿ ಪೈಜಾಮ ಧರಿಸಿದ್ದರೆ ದೇಹಕ್ಕೆ ಶ್ವೇತವರ್ಣದ ಲೇಪನವಿದೆ. ಹಿನ್ನೆಲೆಯಲ್ಲಿ ಮಾತ್ರ ನೇರಳೆ ವರ್ಣದ ಲೇಪನವಿದೆ. ಎಲೆಯ ಅಂಚಿನಲ್ಲಿ ಹಳದಿವರ್ಣದಿಂದ ಸುಂದರವಾದ ವಿನ್ಯಾಸ ಮಾಡಿ ಚಿತ್ರಗಳಿಗೆ ಮೆರಗು ನೀಡಿದ್ದಾರೆ.

ಉಳಿದಂತೆ ಒಂದರಿಂದ ಹನ್ನೆರಡು ರಾಶಿಗಳಾದ ಮೇಷ, ವೃಷಭ, ಮಿಥುನ, ಕಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಂಭ, ಮೀನ ಇವುಗಳನ್ನು ಚಿತ್ರಿಸಿದ್ದು, ಶಿವನ ವಾಹನ ನಂದಿಯನ್ನು ಶ್ವೇತವರ್ಣದಿಂದ ಚಿಕ್ಕದಾಗಿ ಚಿತ್ರಿಸಿದ್ದಾರೆ. ಹದಿನೆಂಟು ಎಲೆಗಳ ಹಿನ್ನೆಲೆಯ ಬಣ್ಣ ನೇರಳೆಯದ್ದಾಗಿದೆ. ಉಳಿದಂತೆ ಹಸಿರು ಮತ್ತು ಹಳದಿ ವರ್ಣವನ್ನು ರಾಶಿಚಿತ್ರಗಳಿಗೆ ಲೇಪಿಸಿದ್ದಾರೆ. ಪ್ರಧಾನ ಎಲೆಗಳಿಂದ ಹಾಗೂ ಮೇಷದಿಂದ ಮೀನದ ವರೆಗೆ ಎಲ್ಲಾ ಚಿತ್ರಗಳು ಅತ್ಯಂತ ಸೂಕ್ಷ್ಮವಾಗಿ ಮೂಡಿಬಂದಿವೆ.

ಚಿತ್ರ – ೫೭. ಪರ್ವತರಾಜ ಸೂಟ

ಶ್ವೇತವರ್ಣದಿಂದ ಕೂಡಿದ ದೇಹದ ಬಣ್ಣ, ನೋಡುಗನ ಎಡಮುಖವಾಗಿ ನಿಂತಿರುವ ಭಂಗಿ ಬಲಗೈಯಲ್ಲಿ ಕೆಂಪು ಗುಲಾಬಿಯನ್ನು ಹಿಡಿದು ನೋಡುತ್ತಿರುವ ದೃಶ್ಯವಿದ್ದು ತಲೆಗೆ ಕಿರೀಟವನ್ನು ಧರಿಸಿದ್ದಾನೆ. ಹಸಿರುವರ್ಣದ ಜುಬ್ಬಾವನ್ನು ಧರಿಸಿ, ಕೆಂಪುವರ್ಣದ ದುಪ್ಪಟ್ಟಾವನ್ನು ಧರಿಸಿದ್ದಾನೆ. ಅಲ್ಲದೆ ಕರ್ಣಾಭರಣಗಳನ್ನು ಧರಿಸಿದ್ದಾನೆ. ಕೆಳಭಾಗದಲ್ಲಿ ಚಿಕ್ಕ ಚಿಕ್ಕ ಕೆಂಪು ಮತ್ತು ಕಪ್ಪುವರ್ಣಮಿಶ್ರಿತ ಗುಡ್ಡಗಳಿವೆ. ರಾಜನ ಬೆನ್ನ ಹಿಂದೆ ಹಸಿರುವರ್ಣದ ಮರವಿದೆ. ಚಿತ್ರದ ಹಿನ್ನೆಲೆಯಲ್ಲಿ ದಟ್ಟವಾದ ಕಾಫಿವರ್ಣವಿದೆ.

ರಾಣಿ

ಶ್ವೇತವರ್ಣದಿಂದ ಕೂಡಿದೆ ರಾಣಿಯ ದೇಹದ ಬಣ್ಣ. ನೋಡುಗನ ಬಲಭಾಗಕ್ಕೆ ತಿರುಗಿ ನಿಂತಿರುವ ದೃಶ್ಯ. ಬಲಗೈಯಲ್ಲಿ ಕಮಲದ ಹೂವನ್ನು ಹಿಡಿದುಕೊಂಡು, ಮುನ್ನುಗ್ಗುತ್ತಿರುವ ದೃಶ್ಯವಿದೆ. ರಾಣಿಯು ಕಿರೀಟಧಾರಿಯಾಗಿದ್ದು, ಕರ್ಣಾಭರಣಗಳನ್ನು ಧರಿಸಿ, ಸೊಂಟದಲ್ಲಿ ಒಡ್ಯಾಣವನ್ನು ಧರಿಸಿದ್ದಾಳೆ. ಹಸಿರುವರ್ಣದ ಸೀರೆ ಮತ್ತು ಕೆಂಪುವರ್ಣದ ಕುಪ್ಪಸವನ್ನು ಧರಿಸಿದ್ದಾಳೆ. ಮುಖದಲ್ಲಿ ಮಂದಹಾಸದ ನಗುವಿದೆ. ಬೆನ್ನ ಹಿಂದೆ ಹಸಿರುವರ್ಣದ ಮರದ ಚಿತ್ರವಿದ್ದು, ಮೊಣಕಾಲವರೆಗೆ ಕಪ್ಪು ಮಿಶ್ರಿತ ಕೆಂಪುವರ್ಣದ ಗುಡ್ಡಗಳ ಸಾಲುಗಳು ಇವೆ. ಹಿನ್ನೆಲೆಯಲ್ಲಿ ದಟ್ಟ ಕಾಫಿವರ್ಣದ ಲೇಪನವಿದೆ.

ರಾಜ

ಶ್ವೇತವರ್ಣದಿಂದ ಕೂಡಿದ ರಾಜ ರಥಾರೋಹಿಯಾಗಿದ್ದಾನೆ. ಬಲಗೈಯಲ್ಲಿ ಶ್ವೇತವರ್ಣದ ಗುಲಾಬಿಯನ್ನು ಹಿಡಿದು ಕುಳಿತಿದ್ದಾನೆ. ಶ್ವೇತವರ್ಣದ ಐದು ಕುದುರೆಗಳು ನಾಗಾಲೋಟದಲ್ಲಿ ಬಂಗಾರ

೫೭. ಪರ್ವತರಾಜ ಸೂಟ್


ರಾಜ


ಧ್ವಜ


ತುಲಾ


ವೃಶ್ಚಿಕ


ಪದಾತಿ


ಸೇನಿಕಾ


ಧನಸ್ಸು


ಮಕರ


ಮೇಷ


ವೃಷಭ


ಕುಂಭ


ಮೀನ


ಮೀಥು


ಕಟಕ

ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ವರ್ಣದ ರಥವನ್ನು ಎಳೆದೊಯ್ಯುತ್ತಿವೆ. ಸಾರಥಿಯು ರಥವನ್ನು ಮುನ್ನಡೆಸುತ್ತಿದ್ದಾನೆ. ರಥದ ಮೇಲೆ ಹಸಿರುವರ್ಣದ ಧ್ವಜಗಳಿವೆ. ರಥದ ಹಿಂಭಾಗದಲ್ಲಿ ಚಿಕ್ಕದಾದ ಹಸಿರುವರ್ಣದ ಮರವಿದೆ. ರಾಜನ ಬಲಭಾಗದಲ್ಲಿ ಹಸಿರುವರ್ಣದ ಲೇಪನವಿದ್ದು, ಒಟ್ಟಾರೆ ಚಿತ್ರದ ಹಿನ್ನೆಲೆಯಲ್ಲಿ ಕಾಫಿವರ್ಣದ ಲೇಪನವಿದೆ.

ಧ್ವಜ

ದೇಹಕ್ಕೆ ಬಿಳಿವರ್ಣದ ಲೇಪನವಿದೆ. ಧ್ವಜಕ್ಕೆ ಮೂರು ಕಟ್ಟೆಗಳು ಇವೆ. ಎರಡನೆ ಕಟ್ಟೆಯ ಮೇಲೆ ಹಸಿರುವರ್ಣದ ಜುಬ್ಬಾ ಮತ್ತು ಹಳದಿವರ್ಣದ ಪೈಜಾಮ ಧರಿಸಿ, ಎರಡನೆ ಮೆಟ್ಟಿಲ ಮೇಲೆ ನಿಂತಿದ್ದಾನೆ. ಬಲಗೈಯಲ್ಲಿ ಕತ್ತಿಯನ್ನು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದು ಧ್ವಜಕ್ಕೆ ಮುಖಮಾಡಿ ನಿಂತಿದ್ದಾನೆ. ಧ್ವಜಕ್ಕೆ ಹಸಿರುಬಣ್ಣದ ಲೇಪನವಿದ್ದು, ಮಧ್ಯದಲ್ಲಿ ಕೆಂಪುವರ್ಣದ ವೃತ್ತಾಕಾರವಿದೆ. ಹಳದಿವರ್ಣದಿಂದ ಅಂಚನ್ನು ಶೃಂಗರಿಸಿದ್ದಾರೆ. ಸೇನಾನಿಯ ಹಿಂಭಾಗದಲ್ಲಿ ಚಿಕ್ಕದಾದ ಹಸಿರುವರ್ಣದ ಮರವಿದೆ. ಎಲೆಯ ಅಂಚನ್ನು ಹಳದಿ ಮತ್ತು ಕಾಫಿವರ್ಣದಿಂದ ಅಲಂಕರಿಸಿದ್ದಾರೆ.

ಪದಾತಿ – ಯೋಧ

ಪದಾತಿಯು ಶ್ವೇತವರ್ಣದ ಕುದುರೆಸವಾರಿ ಮಾಡುತ್ತಿದ್ದು, ಅಶ್ವವು ನೋಡುಗನ ಎಡಭಾಗಕ್ಕೆ ಚಲಿಸುತ್ತಿದೆ. ಪದಾತಿಯು ಹಸಿರುವರ್ಣದ ಜುಬ್ಬಾ, ಕೆಂಪುವರ್ಣದ ಪೈಜಾಮ ಧರಿಸಿ, ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಕುಳಿತಿದ್ದಾನೆ. ತಲೆಗೆ ಕಿರೀಟ ಹಾಗೂ ಕರ್ಣಾಭರಣಗಳನ್ನು ಧರಿಸಿದ್ದಾನೆ. ಅಶ್ವದ ಹಿಂಭಾಗದಲ್ಲಿ ಚಿಕ್ಕದಾದ ಹಸಿರುವರ್ಣದ ಮರವಿದೆ. ಹಿನ್ನೆಲೆಯಲ್ಲಿ ದಟ್ಟ ಕಾಫಿವರ್ಣದ ಲೇಪನವಿದೆ. ಯೋಧನು ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಗುರಾಣಿಯನ್ನು ಹಿಡಿದು ನಿಂತಿರುವ ದೃಶ್ಯವಿದ್ದು ಹಿನ್ನೆಲೆಯಲ್ಲಿ ಕಾಫಿವರ್ಣದ ಲೇಪನ, ಯೋಧನ ಹಿಂಭಾಗದಲ್ಲಿ ಚಿಕ್ಕದಾದ ಹಸಿರುವರ್ಣದ ಮರವಿದೆ. ಎಲೆಯ ಅಂಚಿನ ಸುತ್ತಲೂ ರೇಖೆಯನ್ನು ಹಾಕಿ ಕೃತಿಯನ್ನು ಅಂದಗೊಳಿಸಿದ್ದಾರೆ.

ಉಳಿದಂತೆ ಒಂದರಿಂದ ಹನ್ನೆರಡು ಸಂಖ್ಯೆಗಳನ್ನು ಬಳಸಿ ರಾಶಿಗಳನ್ನು ಚಿತ್ರಿಸಿದ್ದಾರೆ. ಎಲ್ಲಾ ರಾಶಿಗಳ ಚಿತ್ರಗಳಲ್ಲಿ ಚಿಕ್ಕದಾದ ಮರದ ಚಿತ್ರವನ್ನು ಚಿತ್ರಿಸಿದ್ದಾರೆ. ಪರ್ವತರಾಶಿ. ರಾಣಿಯ ಪ್ರಧಾನ ಎಲೆಯಿಂದ ಹಾಗೂ ಮೇಷದಿಂದ ಮೀನದ ವರೆಗೂ ವೃತ್ತಾಕಾರದ ಎಲ್ಲ ಎಲೆಗಳ ಬಣ್ಣ ದಟ್ಟವಾದ ಕಾಫಿವರ್ಣದಿಂದ ನೈಜವಾಗಿ ಚಿತ್ರಿಸಿದ್ದಾರೆ.

ಚಿತ್ರ – ೫೮. ಇಂದ್ರ ಸೂಟ

ಇಂದ್ರನ ದೇಹ ಬಿಳಿವರ್ಣದಿಂದ ಕೂಡಿದ್ದು, ಎರಡು ಕೈಗಳನ್ನು ಹೊಂದಿದ್ದಾನೆ. ಎದುರುಮುಖವಾಗಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತು, ಬಲಗೈಯಲ್ಲಿ ವಜ್ರಾಯುಧವನ್ನು ಹಿಡಿದಿದ್ದಾನೆ. ಎಡಗೈಯನ್ನು ತೊಡೆಯ ಮೇಲೆ ಇಟ್ಟಿದ್ದಾನೆ. ಶ್ವೇತವರ್ಣದ ಧೋತಿಯನ್ನು ಧರಿಸಿ, ಕೆಂಪುವರ್ಣದ ದುಪ್ಪಟ್ಟಾವನ್ನು ಕೈಗಳ ಮೇಲೆ ಹಾಕಿಕೊಂಡಿದ್ದಾನೆ. ಕಿರೀಟಧಾರಿಯಾಗಿದ್ದು, ಕರ್ಣಾಭರಣಗಳನ್ನು ಹಾಕಿಕೊಂಡಿದ್ದು, ಸೊಂಟಕ್ಕೆ ಒಡ್ಯಾಣವನ್ನು ಧರಿಸಿದ್ದಾನೆ. ಮುಖವು ಹಸನ್ಮುಖಿಯಾಗಿದೆ. ಬಂಗಾರವರ್ಣದ ಪೀಠದ ಮೇಲೆ ಅಲಂಕಾರಿಕ ಚಿತ್ರ ಇದೆ. ಪೀಠದ ಎಡಭಾಗಕ್ಕೆ ಒಂದು ವಜ್ರಾಯುಧವಿದೆ. ಚಿತ್ರದ ಹಿನ್ನೆಲೆಯಲ್ಲಿ ನೀಲಿವರ್ಣದ ಲೇಪನವಿದೆ. ಎಲೆಯ ಅಂಚಿನಲ್ಲಿ ಬಂಗಾರವರ್ಣದ ನಕ್ಷೆಗಳಿವೆ. ಚಿತ್ರವು ಅತ್ಯಂತ ನಾಜೂಕಾಗಿ ಮೂಡಿಬಂದಿದೆ.

ಇಂದ್ರಾಣಿ

ದೇಹವನ್ನು ಶ್ವೇತವರ್ಣದಲ್ಲಿ ಚಿತ್ರಿಸಲಾಗಿದ್ದು, ದೇವಿಯು ಬಲಗೈಯಲ್ಲಿ ವಜ್ರಾಯುಧವನ್ನು ಹಿಡಿದಿದ್ದಾಳೆ. ಎಡಗೈಯನ್ನು ತೊಡೆಯ ಮೇಲೆ ಇಟ್ಟಿದ್ದಾಳೆ. ಕೆಂಪುವರ್ಣದ ಸೀರೆಯನ್ನುಟ್ಟು ಹಸಿರುವರ್ಣದ ಕುಪ್ಪಸವನ್ನು ಧರಿಸಿದ್ದಾಳೆ. ಕಿರೀಟಧಾರಿಯಾಗಿದ್ದು, ಕರ್ಣಾಭರಣಗಳನ್ನು ಹಾಕಿಕೊಂಡಿದ್ದು, ಭುಜಕೀರ್ತಿ, ಒಡ್ಯಾಣ, ಕೊರಳಲ್ಲಿ ವೈಜಯಂತಿಮಾಲಾ ಧರಿಸಿದ್ದಾಳೆ. ಬಂಗಾರವರ್ಣದ ಅಲಂಕಾರಿಕ ಪೀಠದ ಮೇಲೆ ಮುಗುಳ್ನಗೆಯಿಂದ ಪ್ರಶಾಂತ ಚಿತ್ತದಿಂದ ಪದ್ಮಾಸನದಲ್ಲಿ ಕುಳಿತಿದ್ದಾಳೆ. ಚಿತ್ರದ ಹಿನ್ನೆಲೆಯಲ್ಲಿ ನೀಲಿವರ್ಣದ ಲೇಪನವಿದೆ. ದೇವಿಯ ಎಡಭಾಗದ ಪಕ್ಕಕ್ಕೆ ಇಂದ್ರನ ವಜ್ರಾಯುಧವಿದೆ. ಎಲೆಯ ಅಂಚುಗಳು ಬಂಗಾರವರ್ಣದಿಂದ (ಚುಕ್ಕೆಗಳಿಂದ) ಶೋಭಿತವಾಗಿವೆ.

ರಾಜ

ಇಂದ್ರನು ರಥಾರೋಹಿಯಾಗಿ ಕುಳಿತಿರುವನು. ದೇಹಕ್ಕೆ ಶ್ವೇತವರ್ಣವಿದೆ. ಬಲಗೈಯಲ್ಲಿ ವಜ್ರಾಯುಧವಿದೆ. ಎಡಗೈಯನ್ನು ತೊಡೆಯ ಮೇಲೆ ಇಟ್ಟಿದ್ದಾನೆ. ಪದ್ಮಾಸನದಲ್ಲಿ ಹಸನ್ಮುಖಿಯಾಗಿ ಕುಳಿತಿದ್ದಾನೆ. ತಲೆಯ ಮೇಲೆ ಕಿರೀಟ, ಕರ್ಣಾಭರಣಗಳನ್ನು ಹಾಗೂ ಹಸಿರುವರ್ಣದ ದುಪ್ಪಟ್ಟಾ ಧರಿಸಿದ್ದಾನೆ. ಬಂಗಾರ ವರ್ಣದ ರಥದಲ್ಲಿ ಶ್ವೇತವರ್ಣದ ಐದು ಕುದುರೆಗಳು ರಥವನ್ನು ನಾಗಾಲೋಟದಲ್ಲಿ ಎಳೆದೊಯ್ಯುತ್ತಿವೆ. ರಥವನ್ನು ಸಾರಥಿಯು ಮುನ್ನಡೆಸುತ್ತಿದ್ದಾನೆ. ರಥದ ಎರಡು ಚಕ್ರಗಳು ಸ್ಪಷ್ಟವಾಗಿ ಕಾಣುತ್ತವೆ. ರಥದ ಮೇಲೆ ಎರಡು ಕೆಂಪುವರ್ಣದ ಧ್ವಜಗಳಿವೆ. ರಥಧ ಎಡಭಾಗದಲ್ಲಿ ಇಂದ್ರನ ವಜ್ರಾಯುಧವಿದೆ. ಚಿತ್ರದ ಹಿನ್ನೆಲೆಯಲ್ಲಿ ನೀಲಿವರ್ಣದ ಲೇಪನವಿದೆ. ಚಿತ್ರದ ಎಲೆಯ ಅಂಚು ಬಂಗಾರ ವರ್ಣದಿಂದ (ಚುಕ್ಕೆಗಳಿಂದ) ಶೋಭಿತವಾಗಿವೆ.

ಧ್ವಜ-ಯೋಧ ಪದಾತಿ

ಮೂರು ಕಟ್ಟೆಗಳುಳ್ಳ ಧ್ವಜಸ್ತಂಭವಿದ್ದು, ಎರಡನೆ ಕಟ್ಟೆಯ ಮೇಲೆ ಬಲಗೈಯಲ್ಲಿ ಖಡ್ಗಧಾರಿಯಾಗಿ, ಎಡಗೈಯಲ್ಲಿ ಗುರಾಣಿ ಹಿಡಿದು ಸೈನಿಕ ನಿಂತಿದ್ದಾನೆ. ಕೆಂಪುವರ್ಣದ ಧ್ವಜ ಹಾರಾಡುತ್ತಿದೆ. ಸೈನಿಕನ ಹಿಂಭಾಗಕ್ಕೆ ವಜ್ರಾಯುಧವಿದೆ. ಚಿತ್ರದ ಹಿನ್ನೆಲೆಯಲ್ಲಿ ನೀಲಿವರ್ಣವಿದೆ. ಎಲೆಯ ಅಂಚಿನಲ್ಲಿ ಬಂಗಾರವರ್ಣದ ಚುಕ್ಕೆಗಳು ಶೋಭಿತಗೊಂಡಿದೆ.

ಯೋಧನ ಚಿತ್ರದ ಹಿನ್ನೆಲೆಯಲ್ಲಿ ನೀಲಿಬಣ್ಣದ ಲೇಪನವಿದ್ದು, ಯೋಧನ ಹಿಂಭಾಗದಲ್ಲಿ ವಜ್ರಾಯುಧವಿದೆ. ಎಲೆಯ ಅಂಚಿನಲ್ಲಿ ಬಂಗಾರಬಣ್ಣದ ಚುಕ್ಕೆಗಳು ಎಲೆಯನ್ನು ಅಲಂಕೃತಗೊಳಿಸಿವೆ. ಪದಾತಿಚಿತ್ರದಲ್ಲಿ ಶ್ವೇತವರ್ಣದ ಕುದುರೆಯನ್ನೇರಿ ಹೊರಟಿದ್ದಾನೆ. ಹಿಂಭಾಗದಲ್ಲಿ ವಜ್ರಾಯುಧವಿದೆ. ಚಿತ್ರದ ಹಿನ್ನೆಲೆಯಲ್ಲಿ ನೀಲಿವರ್ಣದ ಲೇಪನವಿದೆ. ಎಲೆಯ ಅಂಚು ಬಂಗಾರವರ್ಣದಿಂದ ಶೋಭಿತಗೊಂಡಿದೆ.

ಇನ್ನುಳಿದಂತೆ ಒಂದರಿಂದ ಹನ್ನೆರಡು ರಾಶಿಗಳನ್ನು ಚಿತ್ರಿಸಿದ್ದು, ಎಲ್ಲಾ ಚಿತ್ರಗಳಲ್ಲಿ ಇಂದ್ರನ ವಜ್ರಾಯುಧವಿದೆ. ಎಲ್ಲವುಗಳ ಹಿನ್ನೆಲೆಯಲ್ಲಿ ನೀಲಿವರ್ಣದ ಲೇಪನವಿದೆ. ಮಿಥುನ ಹಾಗೂ ಕನ್ಯಾರಾಶಿಗೆ ಕೆಂಪುವರ್ಣದ ಸೀರೆ, ಹಳದಿವರ್ಣದ ಕುಪ್ಪಸವಿದೆ. ಪುರುಷನಿಗೆ ಹಳದಿವರ್ಣದ ಪೊಷಾಕು, ಕೆಂಪುವರ್ಣದ ದುಪ್ಪಟ್ಟಾ ಇದೆ. ದೇಹಕ್ಕೆ ಬಿಳಿವರ್ಣವಿದೆ. ಇಂದ್ರನ ಸೂಟನ ಎಲ್ಲಾ ಎಲೆಗಳನ್ನು ವೃತ್ತಾಕಾರದಲ್ಲಿ ಚಿತ್ರಿಸಿ, ಎಲೆಗಳ ಹಿಂಭಾಗವನ್ನು ನೀಲಿವರ್ಣದಿಂದ ಲೇಪಿಸಿದ್ದಾರೆ. ಬಂಗಾರವರ್ಣದಿಂದ

ಚಿತ್ರ ೫೮. ಇಂದ್ರ ಸೂಟ್



ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಎಲೆಯ ಅಂಚುಗಳನ್ನು ಶೃಂಗರಿಸಿದ್ದಾರೆ. ಸೌಂದರ್ಯಾತ್ಮಕ ದೃಷ್ಟಿಯಿಂದ ಚಿತ್ರಗಳನ್ನು ಅತ್ಯಂತ ಉನ್ನತ ಮಟ್ಟದವುಗಳೆಂದು ಹೇಳಬಹುದು.

ಚಿತ್ರ – ೫೯. ಕೃಷ್ಣ ರಾಜ ಸೂಟ

ಚಿತ್ರದಲ್ಲಿ ಕೃಷ್ಣನು ಶ್ವೇತವರ್ಣದ ದೇಹವನ್ನು ಹೊಂದಿದ್ದು, ಚತುರ್ಭುಜನಾಗಿದ್ದಾನೆ. ಕೆಳಗಿನ ಎರಡು ಕೈಗಳಿಂದ ಕೊಳಲನ್ನು ನುಡಿಸುತ್ತಿದ್ದಾನೆ. ಮೇಲಿನ ಎರಡು ಕೈಯಲ್ಲಿ ಪುಸ್ತಕವನ್ನು ಹಿಡಿದಿದ್ದಾನೆ. ಬಂಗಾರವರ್ಣದ ಪೀಠದಲ್ಲಿ ಪದ್ಮಾಸನದಲ್ಲಿ ಕುಳಿತಿದ್ದಾನೆ. ಕರ್ಣಾಭರಣಗಳನ್ನು ಧರಿಸಿದ್ದಾನೆ. ಅಲ್ಲದೆ ಭುಜಕೀರ್ತಿ, ಬಂಗಾರದ ಒಡ್ಯಾಣವನ್ನು ಧರಿಸಿದ್ದಾನೆ. ಕೆಂಪುವರ್ಣದ ದುಪ್ಪಟ್ಟಾವನ್ನು ಧರಿಸಿದ್ದಾನೆ. ಚಿತ್ರದ ಹಿಂಭಾಗದಲ್ಲಿ ಹಸಿರುವರ್ಣದ ಲೇಪನವಿದೆ.

ರಾಣಿ

ದೇಹವು ಬಿಳಿವರ್ಣದಿಂದ ಕೂಡಿದೆ. ಚತುರ್ಭುಜೆಯಾಗಿರುವ ರಾಣಿ ಎದುರುಮುಖವಾಗಿ ಪದ್ಮಾಸನದಲ್ಲಿ ಕುಳಿತಿದ್ದಾಳೆ. ಕರ್ಣಾಭರಣಗಳನ್ನು ಧರಿಸಿ, ಕೊರಳಲ್ಲಿ ವೈಜಯಂತಿಮಾಲಾ, ನಡದಲ್ಲಿ ಬಂಗಾರದ ಒಡ್ಯಾಣವನ್ನು ಧರಿಸಿದ್ದಾಳೆ. ಅಲ್ಲದೆ ಭುಜಕೀರ್ತಿ, ಕೆಂಪುವರ್ಣದ ಸೀರೆ ಹಾಗೂ ಕುಪ್ಪಸವನ್ನು ಧರಿಸಿದ್ದಾಳೆ. ಮೇಲ್ಭಾಗದ ಎರಡು ಕೈಯಲ್ಲಿ ಕಮಲದ ಹೂವನ್ನು ಹಿಡಿದಿದ್ದಾಳೆ. ಕೆಳಗಡೆ ಎರಡು ಕೈಗಳು ವರದಮುದ್ರೆಯಿಂದ ಶೋಭಿತವಾಗಿವೆ. ತಲೆಯ ಮೇಲೆ ಕಿರೀಟ ಧರಿಸಿದ್ದಾಳೆ. ಚಿತ್ರದ ಹಿನ್ನೆಲೆಯಲ್ಲಿ ಹಸಿರುವರ್ಣದ ಲೇಪನವಿದ್ದು, ಎಲೆಯ ಅಂಚಿನಲ್ಲಿ ಬಂಗಾರವರ್ಣದ ಚುಕ್ಕಿಗಳನ್ನು ಚಿತ್ರಿಸಿ ಅಲಂಕರಿಸಿದ್ದಾರೆ.

ರಾಜ

ಕೃಷ್ಣನು ಚತುರ್ಭುಜನಾಗಿ ರಥಾರೋಹಿಯಾಗಿದ್ದು ದೇಹವು ಶ್ವೇತವರ್ಣದಿಂದ ಕೂಡಿದೆ. ಕೆಳಭಾಗದ ಎರಡು ಕೈಗಳಿಂದ ಕೊಳಲನ್ನು ನುಡಿಸುತ್ತಿದ್ದಾನೆ. ಹಿಂಭಾಗದ ಎರಡುಕೈಗಳಲ್ಲಿ ಕಮಲವನ್ನು ಧರಿಸಿದ್ದಾನೆ. ಶ್ವೇತವರ್ಣದ ಐದು ಕುದುರೆಗಳು ಬಂಗಾರದ ರಥವನ್ನು ನಾಗಾಲೋಟದಲ್ಲಿ ಎಳೆದೊಯ್ಯುತ್ತಿವೆ. ಸಾರಥಿಯು ರಥವನ್ನು ಮುನ್ನಡೆಸುತ್ತಿದ್ದಾನೆ. ರಥದ ಮೇಲೆ ಎರಡು ಕೆಂಪುವರ್ಣದ ಧ್ವಜಗಳು ಹಾರುತ್ತಿವೆ. ರಥದ ಹಿಂಭಾಗದಲ್ಲಿ ಕೊಳಲಿನ ಚಿತ್ರವಿದೆ, ಹಿನ್ನೆಲೆಯಲ್ಲಿ ಹಸಿರು ವರ್ಣದ ಲೇಪನವಿದ್ದು ಎಲೆಯ ಅಂಚಿನಲ್ಲಿ ಬಂಗಾರವರ್ಣದ ಚುಕ್ಕಿಗಳನ್ನು ಚಿತ್ರಿಸಿ ಅಲಂಕರಿಸಿದ್ದಾರೆ.

ಧ್ವಜ– ಪದಾತಿ– ಯೋಧ

ಧ್ವಜದ ಹಿಂದೆ ಮೆಟ್ಟಿಲುಗಳ ಮೇಲೆ ಅಧಿಪತಿಯು ಕತ್ತಿ ಗುರಾಣಿ ಹಿಡಿದು ನಿಂತರೆ, ಪದಾತಿಯು ಅಶ್ವವನ್ನೇರಿ ಹೊರಟಿದ್ದಾನೆ. ಸೇನಾನಿಯು ಕತ್ತಿ ಗುರಾಣಿಯನ್ನು ಹಿಡಿದು ನಡೆದುಕೊಂಡು ಹೊರಟಿದ್ದಾನೆ. ಧ್ವಜದ ಹಿಂಭಾಗದಲ್ಲಿ ಕೊರಳಿನ ಚಿತ್ರವಿದ್ದರೆ, ಪದಾತಿಯ ಮೇಲ್ಭಾಗದಲ್ಲಿ ಕೊಳಲಿನ ಚಿತ್ರವಿದೆ. ಇನ್ನುಳಿದಂತೆ ಒಂದರಿಂದ ಹನ್ನೆರಡರ ಸಂಖ್ಯೆಗಳನ್ನು ಬಳಸಿ, ಹನ್ನೆರಡು ರಾಶಿಗಳನ್ನು ಚಿತ್ರಿಸಿದ್ದಾರೆ. ಎಲ್ಲ ರಾಶಿಗಳಲ್ಲಿ ಕೊಳಲಿನ ಚಿತ್ರವಿದೆ. ಕೃಷ್ಣ ಮತ್ತು ರಾಣಿಯ ಪ್ರಧಾನ ಎಲೆಯಿಂದ ಹಾಗೂ ಮೇಷದಿಂದ ಮೀನದ ವರೆಗೂ ವೃತ್ತಾಕಾರದ ಎಲ್ಲ ಎಲೆಗಳು ಹಸಿರುಬಣ್ಣದಿಂದ ಕೂಡಿವೆ. ಎಲ್ಲಾ ಎಲೆಯ ಅಂಚು ಬಂಗಾರವರ್ಣದ ಚುಕ್ಕಿಗಳಿಂದ ಶೋಭಿತಗೊಂಡಿವೆ. ಹದಿನೆಂಟು ಎಲೆಗಳಲ್ಲಿ ಚಿತ್ರಗಳು ಅತ್ಯಂತ ಸೂಕ್ಷ್ಮವಾಗಿ ಚಿತ್ರಿತಗೊಂಡಿವೆ.

ಚಿತ್ರ ೫೯



ಕೃಷ್ಣ ರಾಣಿ



ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಚಿತ್ರ – ೬೦. ಚಾಮುಂಡೇಶ್ವರಿ ಸೂಟ

ಚಾಮುಂಡೇಶ್ವರಿಯನ್ನು ಶ್ವೇತವರ್ಣದಿಂದ ಚಿತ್ರಿಸಲಾಗಿದೆ. ಚಾಮುಂಡೇಶ್ವರಿಯು ಸಹಸ್ರಾರು ಕೈಗಳನ್ನು ಹೊಂದಿ ವಿವಿಧ ಆಯುಧಗಳನ್ನು ಹಿಡಿದಿದ್ದಾಳೆ. ಕೆಳಭಾಗದ ಬಲಗೈಯಿಂದ ಖಡ್ಗವನ್ನು ಹಿಡಿದು ಮಹಿಷಾಸುರನನ್ನು ಸಂಹರಿಸುತ್ತಿದ್ದಾಳೆ. ಮೇಲಿನ ಎರಡು ಕೈಗಳು ವರದಮುದ್ರೆಯಿಂದ ಶೋಭಿತಗೊಂಡಿವೆ. ತಲೆಗೆ ಕಿರೀಟವಿದ್ದು ಕಿವಿಗೆ ಕರ್ಣಕುಂಡಲಗಳನ್ನು ಹಾಗೂ ದೇಹಕ್ಕೆ ಆಭರಣಗಳನ್ನು, ಭುಜಕೀರ್ತಿಯನ್ನು ಧರಿಸಿ, ಕೊರಳಲ್ಲಿ ವೈಜಯಂತಿಮಾಲಾ ಹಾಕಿಕೊಂಡಿದ್ದಾಳೆ. ನಡಕ್ಕೆ ಒಡ್ಯಾಣವನ್ನು ಹಾಕಿದ್ದಾಳೆ. ಇಲ್ಲಿ ಚಾಮುಂಡೇಶ್ವರಿ ಮುಖ ಶಾಂತಚಿತ್ತವಾಗಿದ್ದು, ಸುಂದರವಾಗಿದೆ. ಹಣೆಗೆ ಕೆಂಪುವರ್ಣದ ಕುಂಕುಮವಿದೆ. ಅಲ್ಲದೆ ಕೆಂಪುವರ್ಣದ ಸೀರೆಯನ್ನುಟ್ಟು ಹಸಿರುವರ್ಣದ ಕುಪ್ಪಸ ಧರಿಸಿದ್ದಾಳೆ. ಕಿರೀಟದ ಹಿಂಭಾಗದಲ್ಲಿ ಕೆಂಪುವರ್ಣದಿಂದ ಅಗ್ನಿಜ್ವಾಲೆಯನ್ನು ತೋರಿಸಲಾಗಿದೆ. ದೇವಿಯು ತನ್ನ ವಾಹನ ಸಿಂಹದ ಮೇಲೆ ಕುಳಿತಿದ್ದಾಳೆ. ಮಹಿಷಾಸುರ ರಾಕ್ಷಸನು ಕೆಳಗೆ ಬಿದ್ದಿದ್ದಾನೆ. ಹಳದಿವರ್ಣದ ಜುಬ್ಬಾ ಹಾಗೂ ಹಸಿರುವರ್ಣದ ಧೋತರ ಧರಿಸಿದ್ದಾನೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಎಲೆಯ ಅಂಚಲ್ಲಿ ಕಾಫಿವರ್ಣದ ನಕ್ಷೆಯನ್ನು ಚಿತ್ರಿಸಿ ಎಲೆಗೆ ಮೆರಗು ನೀಡಿದ್ದಾರೆ.

ಚಾಮುಂಡಿ

ಬಿಳಿವರ್ಣದಿಂದ ಚಿತ್ರಿತವಾಗಿರುವ ಚಾಮುಂಡಿ ತನ್ನ ವಾಹನ ಸಿಂಹದ ಮೇಲೆ ಆಸೀನಳಾಗಿ ಎದುರುನೋಟಕ್ಕೆ ತಿರುಗಿದ್ದಾಳೆ. ಮುಂದಿನ ಎರಡು ಕೈಗಳು ವರದಮುದ್ರೆಯಿಂದ ಶೋಭಿತವಾಗಿವೆ. ಇನ್ನುಳಿದ ಕೈಗಳಲ್ಲಿ ವಿವಿಧ ಆಯುಧಗಳಿವೆ. ಕಿರೀಟಧಾರಿಯಾಗಿ ಕರ್ಣಕುಂಡಲಗಳನ್ನು ಹಾಗೂ ಕರ್ಣಾಭರಣಗಳನ್ನು, ಭುಜಕೀರ್ತಿಯನ್ನು ಧರಿಸಿದ್ದಾಳೆ. ಕೆಂಪುಬಣ್ಣದ ಸೀರೆ ಹಾಗೂ ಹಸಿರುವರ್ಣದ ಕುಪ್ಪಸವನ್ನು ಧರಿಸಿದ್ದಾಳೆ. ಮುಖದಲ್ಲಿ ಮಂದಹಾಸವಿದೆ. ಸಿಂಹವು ನೋಡುಗನ ಬಲಭಾಗಕ್ಕೆ ಹೊರಟಿದ್ದು ಮುಖವನ್ನು ಎದುರಾಗಿ ನೋಡುತ್ತಿದೆ. ಚಲನೆಯಿಂದ ಕೂಡಿದ ಸಿಂಹದೇಹಕ್ಕೆ ದಟ್ಟ ಹಳದಿವರ್ಣದ ಲೇಪನವಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಎಲೆಯ ಅಂಚಿನಲ್ಲಿ ಕಾಫಿವರ್ಣ ಗಳಿಂದ ನಕ್ಷೆಯನ್ನು ಚಿತ್ರಿಸಿ ಎಲೆಗೆ ಮೆರಗು ನೀಡಿದ್ದಾರೆ.

ರಾಜ

ಶ್ವೇತವರ್ಣದಿಂದ ಕೂಡಿ ಚತುರ್ಭುಜನಾಗಿರುವ ವಿಷ್ಣು ಪದ್ಮಾಸನದಲ್ಲಿ ರಥಾರೂಢನಾಗಿದ್ದಾನೆ. ಕಿರೀಟಧಾರಿಯಾಗಿ ಬಲಗೈಯ ಮೇಲ್ಭಾಗದಲ್ಲಿ ಚಕ್ರವನ್ನು, ಎಡಗೈಯ ಮೇಲ್ಭಾಗದಲ್ಲಿ ಶಂಖವನ್ನು ಹಿಡಿದಿದ್ದಾನೆ. ಕೆಳಭಾಗದ ಎರಡು ಕೈಗಳು ವರದಮುದ್ರೆಯಿಂದ ಶೋಭಿತವಾಗಿವೆ. ಹಳದಿವರ್ಣದ ಧೋತಿಯನ್ನು ಧರಿಸಿ, ಕೆಂಪುಬಣ್ಣದ ಹಳದಿ ಅಂಚುಗಳಿಂದ ಕೂಡಿದ ಅಂಗವಸ್ತ್ರವನ್ನು ಧರಿಸಿದ್ದಾನೆ. ಅಲ್ಲದೆ ಕರ್ಣಕುಂಡಲ, ಕರ್ಣಾಭರಣ, ಭುಜಕೀರ್ತಿಯನ್ನು ಧರಿಸಿ ಎದುರುಮುಖವಾಗಿ ಕುಳಿತಿದ್ದಾನೆ. ಐದು ಶ್ವೇತವರ್ಣದ ಅಶ್ವಗಳು ಬಂಗಾರವರ್ಣದ ರಥವನ್ನು ನಾಗಾಲೋಟದಲ್ಲಿ ಎಳೆದೊಯ್ಯುತ್ತಿವೆ. ಸಾರಥಿಯು ರಥವನ್ನು ಮುನ್ನೆಡೆಸುತ್ತಿದ್ದಾನೆ. ರಥದ ಮೇಲೆ ಹಸಿರುವರ್ಣದ ಧ್ವಜಗಳು ಹಾರುತ್ತಿವೆ. ರಥದ ಒಳಗೆ ಹಸಿರುವರ್ಣದ ಲೇಪನವಿದೆ. ರಥದ ಎಡಭಾಗದಲ್ಲಿ ಚಾಮುಂಡಿಯ ಆಯುಧ ಶ್ವೇತವರ್ಣದ ಖಡ್ಗವಿದೆ. ಚಿತ್ರದ ಹಿನ್ನೆಲೆಯಲ್ಲಿ ಹಸಿರುವರ್ಣದ ಲೇಪನವಿದೆ. ಎಲೆಯ ಅಂಚಿನಲ್ಲಿ ಕಾಫಿವರ್ಣಗಳಿಂದ ಚುಕ್ಕೆಗಳನ್ನು ಹಾಕಿ ಅಲಂಕರಿಸಲಾಗಿದೆ.

ಧ್ವಜ

ಶ್ವೇತವರ್ಣದಿಂದ ವ್ಯಕ್ತಿಯ ದೇಹವು ಚಿತ್ರಿಗೊಂಡಿದೆ. ಕೆಂಪುವರ್ಣದ ಜುಬ್ಬಾ, ಹಳದಿವರ್ಣದ ಪೈಜಾಮನ್ನು ಧರಿಸಿ, ಧ್ವಜದ ಎರಡನೆಯ ಕಟ್ಟೆಯ ಮೇಲೆ ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಗುರಾಣಿಯನ್ನು ಹಿಡಿದು ಎಡಭಾಗಕ್ಕೆ ಧ್ವಜದೊಂದಿಗೆ ನಿಂತಿದ್ದಾನೆ. ಮೂರು ಮೂಲಿಯ ಕೆಂಪುವರ್ಣದ ಧ್ವಜವು ರಾರಾಜಿಸುತ್ತಿದೆ. ಧ್ವಜಕ್ಕೆ ಹಳದಿವರ್ಣಗಳಿಂದ ಅಂಚನ್ನು ಶೃಂಗರಿಸಿದ್ದಾರೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿಬಣ್ಣದ ಲೇಪನವಿದೆ. ಎಲೆಯ ಅಂಚನ್ನು ಕಾಫಿವರ್ಣದ ಚುಕ್ಕೆಗಳಿಂದ ಶೃಂಗರಿಸಿ ಎಲೆಗೆ ಮೆರಗು ನೀಡಿದ್ದಾರೆ.

ಪದಾತಿ

ಪದಾತಿಯು ಶ್ವೇತವರ್ಣದ ಅಶ್ವದ ಮೇಲೆ ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಸವಾರಿ ಮಾಡುತ್ತಿದ್ದಾನೆ. ಪದಾತಿ ದೇಹದ ಬಣ್ಣ ಶ್ವೇತವರ್ಣದ್ದಾಗಿದೆ. ಕೆಂಪುಬಣ್ಣದ ಜುಬ್ಬಾ, ಹಸಿರು ಹಾಗೂ ಹಳದಿ ಮಿಶ್ರಿತ ಪೈಜಾಮ ಧರಿಸಿದ್ದಾನೆ. ಕಿರೀಟಧಾರಿಯಾಗಿ ಆಭರಣಗಳನ್ನು ಧರಿಸಿದ್ದಾನೆ. ಕುದುರೆಯು ನಾಗಾಲೋಟದಲ್ಲಿ ನೋಡುಗನ ಎಡಭಾಗಕ್ಕೆ ಚಲಿಸುತ್ತಿದೆ. ಬಳೆಗಳು, ಕುದುರೆಯ ಥಡಿ, ಹಾರಗಳು, ಮತ್ತಿತರ ಅನೇಕ ಆಭರಣಗಳಿಂದ ವ್ಯಾಪಕವಾಗಿ ಅಲಂಕೃತಗೊಂಡಿದೆ. ಪದಾತಿಯ ಹಿಂಭಾಗದಲ್ಲಿ ದೇವಿಯ ಆಯುಧ ಶ್ವೇತವರ್ಣದ ಖಡ್ಗವಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಎಲೆಯ ಅಂಚನ್ನು ಕಾಫಿವರ್ಣ ಹಾಗೂ ಹಳದಿವರ್ಣದ ಚುಕ್ಕೆಗಳಿಂದ ಶೋಭಿತಗೊಳಿಸಿದ್ದಾರೆ.

ಯೋಧ

ಶ್ವೇತವರ್ಣದಿಂದ ಚಿತ್ರಿತವಾದ ಯೋಧ ನೋಡುಗನ ಎಡಭಾಗಕ್ಕೆ ಬಲಗೈಯಲ್ಲಿ ಕತ್ತಿಯನ್ನು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದು ಹೊರಟಿದ್ದಾನೆ. ಕಿರೀಟಧಾರಿಯಾಗಿ ಆಭರಣಗಳನ್ನು ಧರಿಸಿದ್ದಾನೆ. ಕೆಂಪುವರ್ಣದ ಜುಬ್ಬಾ, ಹಸಿರು ಹಾಗೂ ಹಳದಿಮಿಶ್ರಿತ ಪೈಜಾಮ ಧರಿಸಿದ್ದಾನೆ. ಬೆನ್ನಹಿಂದೆ ದೇವಿಯ ಆಯುಧ ಶ್ವೇತವರ್ಣದ ಖಡ್ಗವಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಎಲೆಯ ಅಂಚಿನಲ್ಲಿ ಕಾಫಿವರ್ಣದ ಲೇಪನವಿದ್ದು, ಹಳದಿವರ್ಣದ ಚುಕ್ಕೆಗಳಿಂದ ಶೋಭಿತಗೊಳಿಸಿದ್ದಾರೆ.

ಮೇಷ

ಮೇಷವು ಶ್ವೇತವರ್ಣದಿಂದ ಚಿತ್ರಿತವಾಗಿದ್ದು, ಕೊರಳಲ್ಲಿ ಗೆಜ್ಜೆಪಟ್ಟಿ, ಬೆನ್ನಿನಲ್ಲಿ ಕಾಫಿವರ್ಣದ ಹಾಗೂ ಹಳದಿವರ್ಣದ ಅಂಚಿನಿಂದ ಅಲಂಕಾರಗೊಂಡ ಥಡಿಯನ್ನು ಧರಿಸಿ, ಕೆಂಪುವರ್ಣದ ಪೀಠದ ಮೇಲೆ ಮಂಡಿಯೂರಿ ಎಡಭಾಗಕ್ಕೆ ಕುಳಿತುಕೊಂಡಿದೆ. ಮೇಲ್ಭಾಗದಲ್ಲಿ ದೇವಿಯ ಆಯುಧ ಶ್ವೇತವರ್ಣದ ಖಡ್ಗವಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿಬಣ್ಣದ ಲೇಪನವಿದೆ. ಎಲೆಯ ಅಂಚಿನ ಸುತ್ತಲೂ ಕಾಫಿವರ್ಣದ ಲೇಪನವಿದ್ದು, ಹಳದಿವರ್ಣದ ಚುಕ್ಕೆಗಳಿಂದ ಶೋಭಿತಗೊಳಿಸಿದ್ದಾರೆ.

ವೃಷಭ (ನಂದಿ)

ಶ್ವೇತವರ್ಣದಿಂದ ಶೋಭಿತಗೊಂಡ ವೃಷಭದ ಕೊರಳಲ್ಲಿ ಗೆಜ್ಜೆಪಟ್ಟಿಕೆ ಇದೆ. ಬೆನ್ನಿನಲ್ಲಿ ಕೆಂಪುವರ್ಣ ಹಾಗೂ ಅಂಚಿನಲ್ಲಿ ಹಳದಿವರ್ಣದಿಂದ ಅಲಂಕೃತಗೊಂಡ ಥಡಿಯನ್ನು ಧರಿಸಿದೆ. ಬಳೆಗಳು, ಹಾರಗಳು ಮತ್ತು ತರತರದ ಆಭರಣಗಳಿಂದ ಶೋಭಿತಗೊಂಡ ವೃಷಭ ಮಂಡಿಯೂರಿ ಕೆಂಪುಬಣ್ಣದ ಪೀಠದ

ಮೇಲೆ ಮಂದಹಾಸದಲ್ಲಿ ಕುಳಿತಿದೆ. ಅದರ ಬಾಲವು ಪೀಠದ ಕೆಳಭಾಗದಲ್ಲಿ ನುಸುಳಿಕೊಂಡಿದೆ. ಮೇಲ್ಭಾಗದಲ್ಲಿ ದೇವಿಯ ಆಯುಧ ಶ್ವೇತವರ್ಣದ ಖಡ್ಗವಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಎಲೆಯ ಅಂಚಿನಲ್ಲಿ ಚುಕ್ಕೆಗಳಿಂದ ಶೋಭಿತಗೊಂಡಿದೆ.

ಮಿಥುನ

ಬಿಳಿವರ್ಣದಲ್ಲಿ ಚಿತ್ರಿತಗೊಂಡ ಪುರುಷರೂ ಹಾಗೂ ಮಹಿಳೆ ಕೆಂಪುವರ್ಣದ ಪೀಠದ ಮೇಲೆ ಸಂಭಾಷಣೆಯಲ್ಲಿ ಕುಳಿತಿದ್ದಾರೆ. ಮಹಿಳೆಯು ಬಲಗೈಯಲ್ಲಿ ವೀಣೆಯನ್ನು ಹಿಡಿದಿದ್ದಾಳೆ. ಕರ್ಣಾಭರಣ, ಒಡ್ಯಾಣವನ್ನು ಧರಿಸಿದ್ದಾಳೆ. ಕೆಂಪುಬಣ್ಣದ ಸೀರೆ ಹಾಗೂ ಹಳದಿವರ್ಣದ ಕುಪ್ಪಸವನ್ನು ಧರಿಸಿದ್ದಾಳೆ. ಪುರುಷನು ಹಳದಿವರ್ಣದ ಜುಬ್ಬಾವನ್ನು ಧರಿಸಿ, ಕೆಂಪುವರ್ಣದ ದುಪ್ಪಟ್ಟಾವನ್ನು ಧರಿಸಿದ್ದಾನೆ. ತನ್ನ ಎರಡೂ ಕೈಗಳಿಂದ ಸನ್ನೆ ಮಾಡಿ ಸಂಭಾಷಿಸುತ್ತಿದ್ದಾನೆ. ಪುರುಷನ ಪಕ್ಕದಲ್ಲಿ ದೇವಿಯ ಆಯುಧವಿದೆ. ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಎಲೆಯ ಅಂಚನ್ನು ಚುಕ್ಕೆಗಳಿಂದ ಶೃಂಗರಿಸಲಾಗಿದೆ.

ಕಟಕ

ಕಪ್ಪುಮಿಶ್ರಿತ ಕೆಂಪುವರ್ಣದಲ್ಲಿ ಚಿತ್ರಿತಗೊಂಡಿದೆ. ಎರಡು ಕಣ್ಣುಗಳಿಗೆ ಶ್ವೇತವರ್ಣವಿದ್ದು, ಗುಡ್ಡೆಗಳಿಗೆ ಕಪ್ಪು ಬಣ್ಣವಿದೆ. ಪಕ್ಕದಲ್ಲಿ ದೇವಿಯ ಆಯುಧ ಇದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಎಲೆಯ ಅಂಚನ್ನು ಚುಕ್ಕೆಗಳಿಂದ ಶೃಂಗರಿಸಲಾಗಿದೆ.

ಸಿಂಹ

ಬಂಗಾರವರ್ಣದಲ್ಲಿ ಚಿತ್ರಿತಗೊಂಡು ಕೆಂಪುವರ್ಣದಿಂದ ಬಾಹುರೇಖೆಯನ್ನು ಹಾಕಲಾಗಿದೆ. ಸಿಂಹದ ಮುಖ ಗಾಂಭೀರ್ಯದಿಂದ ಕೂಡಿದೆ. ೪ ಕಾಲುಗಳಲ್ಲಿ ಉಗುರುಗಳನ್ನು ಶ್ವೇತವರ್ಣದಿಂದ ಚಿತ್ರಿಸಿದ್ದಾರೆ. ಸಿಂಹದ ಹಿಂಭಾಗದಲ್ಲಿ ದೇವಿಯ ಆಯುಧವಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಎಲೆಯ ಅಂಚನ್ನು ಚುಕ್ಕೆಗಳಿಂದ ಶೃಂಗರಿಸಲಾಗಿದೆ.

ಕನ್ಯಾ

ಶ್ವೇತವರ್ಣದಿಂದ ಚಿತ್ರಿತಗೊಂಡು, ಕೇಶ ಮತ್ತು ಕೊರಳಲ್ಲಿ ಆಭರಣಗಳನ್ನು ಧರಿಸಿ, ಎದುರು ಮುಖವಾಗಿ ಕುಳಿತು, ತಲೆಯನ್ನು ಪಾರ್ಶ್ವಮುಖಕ್ಕೆ ತಿರುಗಿಸಿದ್ದಾಳೆ. ಎಡ ಮತ್ತು ಬಲಗೈಯಲ್ಲಿ ಅಗ್ನಿಕುಂಡವನ್ನು ಹಿಡಿದು ಹಳದಿವರ್ಣದ ದೋಣಿಯಲ್ಲಿ ಸಮುದ್ರದಲ್ಲಿ ಚಲಿಸುತ್ತಿದ್ದಾಳೆ.

ತುಲಾ

ಹಳದಿಮಿಶ್ರಿತ ಕೆಂಪುವರ್ಣದಲ್ಲಿ ಚಿತ್ರಿತಗೊಂಡಿದೆ. ತುಲಾ (ತಕ್ಕಡಿ) ಸಮಾನಾಂತರ ಬಾಗಿದೆ. ಕೆಳಭಾಗದಲ್ಲಿ ವಜ್ರಾಭರಣಗಳನ್ನು ತುಂಬಿರುವ ಗುಂಡಿ ಇದೆ. ಪಕ್ಕದಲ್ಲಿ ದೇವಿಯ ಆಯುಧವಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಎಲೆಯ ಅಂಚನ್ನು ಚುಕ್ಕೆಗಳಿಂದ ಶೃಂಗರಿಸಲಾಗಿದೆ.

ವೃಶ್ಚಿಕ

ಹಳದಿಮಿಶ್ರಿತ ಕೆಂಪುವರ್ಣದಲ್ಲಿ ವೃಶ್ಚಿಕವನ್ನು (ಚೇಳು) ಚಿತ್ರಿಸಲಾಗಿದೆ. ವೃಶ್ಚಿಕದ ಕೊಂಡಿಯ ಮುಂಭಾಗವನ್ನು ಮಾತ್ರ ಬಿಳಿವರ್ಣದಿಂದ ಚಿತ್ರಿಸಿದ್ದಾರೆ. ಬಲಭಾಗಕ್ಕೆ ದೇವಿಯ ಆಯುಧವಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಎಲೆಯ ಅಂಚನ್ನು ಚುಕ್ಕೆಗಳಿಂದ ಶೃಂಗರಿಸಲಾಗಿದೆ.

ಚಿತ್ರ ೬೦


ಚಾಮುಂಡೇಶ್ವರಿ


ಚಾಮುಂಡಿ


ರಾಜ


ಧ್ವಜ


ಪದಾತಿ


ಸೇನಿಕಾ


ಮೇಷ


ವೃಷಭ


ಮೀಥುನ


ಕಟಕ


ಸಿಂಹ



ಕನ್ಯಾ


ತುಲಾ


ವೃಶ್ಚಿಕ


ಧನಸ್ಸು


ಮಕರ


ಕುಂಭ


ಮೀನು

ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಧನುಸ್ಸು

ಮುಂಭಾಗ ಮನುಷ್ಯ ಆಕೃತಿಯಲ್ಲಿದ್ದು, ಅದಕ್ಕೆ ಶ್ವೇತವರ್ಣದ ಲೇಪನವಿದೆ. ಹಿಂಭಾಗ ಜಿಂಕೆಯ ದೇಹವನ್ನು ಹೊಂದಿದ್ದು, ಅದಕ್ಕೆ ನಸುಕೆಂಪುವರ್ಣದ ಲೇಪನವಿದ್ದು, ಹಳದಿ ಚುಕ್ಕೆಗಳನ್ನು ಹಾಕಲಾಗಿದೆ. ಮುಂದಿನ ದೇಹ ಕಿರೀಟಧಾರಿಯಾಗಿದ್ದು, ಆಭರಣಗಳನ್ನು ಹಾಕಲಾಗಿದೆ. ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಬಲಗೈ ಹಿಂದಕ್ಕೆ ಸರಿಸಿ ಬಾಣವನ್ನು ಬಿಡುತ್ತಿದ್ದಾನೆ. ಮೇಲ್ಭಾಗದಲ್ಲಿ ದೇವಿಯ ಆಯುಧವಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ.

ಮಕರ

ನಸುಕೆಂಪು ಬಣ್ಣದಿಂದ ಚಿತ್ರಿತವಾದ ಮಕರ ಬಲಭಾಗಕ್ಕೆ ತಿರುಗಿ ಮುಖವನ್ನು ಮೇಲೆತ್ತಿ ನಿಂತಿದೆ. ಬಾಯಿಯಲ್ಲಿಯ ದಂತಗಳಿಗೆ ಬಿಳಿವರ್ಣದ ಲೇಪನವಿದೆ. ಹಿಂಭಾಗದಲ್ಲಿ ದೇವಿಯ ಆಯುಧವಿದೆ. ಕೆಳಭಾಗದಲ್ಲಿ ಚಿಕ್ಕ ಚಿಕ್ಕ ಮೀನುಗಳನ್ನು ಚಿತ್ರಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ.

ಕುಂಭ

ನಸುಕೆಂಪು ಬಣ್ಣದಿಂದ ಚಿತ್ರಿತವಾದ ಕುಂಭ ಪೀಠದ ಮೇಲೆ ಇದೆ. ಕುಂಭಕ್ಕೆ ಶೃಂಗರಿಸಿದ್ದು, ದಟ್ಟ ಕೆಂಪುಬಣ್ಣದ ಎಲೆಗಳು ಕುಂಭದ ಮೇಲೆ ಇವೆ. ಸುತ್ತಲೂ ಹೂವಿನ ಅಲಂಕಾರವಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿ ಬಣ್ಣವಿದೆ.

ಮೀನ

ನಸುಗೆಂಪುಬಣ್ಣದಿಂದ ಚಿತ್ರಿತವಾದ ಎರಡು ಮೀನುಗಳು ಮೇಲ್ಮುಖವಾಗಿ ಪೀಠದ ಮೇಲೆ ನಿಂತು ನೋಡುತ್ತಿವೆ. ಪಕ್ಕದಲ್ಲಿ ದೇವಿಯ ಆಯುಧವಿದೆ. ಕಣ್ಣುಗಳಲ್ಲಿ ಸ್ವಚ್ಛತೆ ಇದೆ. ಚಾಮುಂಡಿ ಗಂಜೀಫಾದ ಎಲ್ಲ ಎಲೆಗಳ ಅಂಚುಗಳು ಅಲಂಕೃತಗೊಂಡಿವೆ. ದೇವಿಯ ಆಯುಧವನ್ನು ಚಿತ್ರಿಸುವದರ ಮೂಲಕ ಚಿತ್ರದ ಚೌಕಟ್ಟನ್ನು ಮೀರದಂಥ ನೋಟವನ್ನು ನೀಡಿದ್ದಾರೆ.

ಚಿತ್ರ – ೬೧. ಚಾಮುಂಡೇಶ್ವರಿ

ವೃತ್ತಾಕಾರದ ಎಲೆಗಳಲ್ಲಿ ಚಾಮುಂಡೇಶ್ವರಿಯನ್ನು ಶ್ವೇತವರ್ಣದಿಂದ ಚಿತ್ರಿಸಿದ್ದು, ಚಾಮುಂಡೇಶ್ವರಿಯು ಅಷ್ಟಭುಜೆಯಾಗಿ ತನ್ನ ವಾಹನ ಸಿಂಹದ ಮುಂದೆ ನಿಂತಿದ್ದಾಳೆ. ಮುಂದಿನ ಎರಡು ಕೈಗಳು ವರದಮುದ್ರೆಯಿಂದ ಕೂಡಿವೆ. ಕಿರೀಟಧಾರಿಯಾಗಿ ಕರ್ಣಕುಂಡಲ, ಕರ್ಣಾಭರಣ, ಕೊರಳಲ್ಲಿ ವೈಜಯಂತಿಮಾಲಾ ಧರಿಸಿ, ನಡಕ್ಕೆ ಒಡ್ಯಾಣವನ್ನು ಧರಿಸಿದ್ದಾಳೆ. ಅಲ್ಲದೆ ಭುಜಕೀರ್ತಿಯನ್ನು ಹಾಕಿದ್ದಾಳೆ. ಕೆಂಪುವರ್ಣದ ಸೀರೆಯನ್ನುಟ್ಟು, ಹಸಿರು ಬಣ್ಣದ ಕುಪ್ಪಸವನ್ನು ಧರಿಸಿದ್ದಾಳೆ. ಮುಖದಲ್ಲಿ ಮಂದಹಾಸದ ನಗು ಇದೆ. ಸಿಂಹವು ಬಲಭಾಗಕ್ಕೆ ಹೊರಟಿರುವ ದೃಶ್ಯವಿದೆ. ತನ್ನ ಮುಖವನ್ನು ಎದುರುಭಾಗಕ್ಕೆ ತಿರುಗಿಸಿದೆ. ಮುಖದ ಗಾಂಭೀರ್ಯ ಎದ್ದು ಕಾಣುತ್ತದೆ. ಬಿಳಿಯ ವರ್ಣದ ದಂತಗಳು ಕಾಣಿಸುತ್ತಿವೆ. ಕೊರಳಲ್ಲಿ ಗೆಜ್ಜೆಪಟ್ಟಿ ಹಾಗೂ ಬೆನ್ನಿಗೆ ಹಸಿರುವರ್ಣದ ಥಡಿಯಿಂದ ಶೃಂಗಾರಗೊಂಡಿದೆ. ಕೆಂಪುಮಿಶ್ರಿತ ಹಳದಿವರ್ಣದ ದೇಹಬಣ್ಣವಿದೆ. ಕೆಳಭಾಗದಲ್ಲಿ ನಸುಗೆಂಪುಬಣ್ಣದ ಕಟ್ಟೆಯಿದ್ದು, ಗೆರೆಗಳಿಂದ ಶೃಂಗರಿಸಲಾಗಿದೆ. ಮಧ್ಯದಲ್ಲಿ ಕಪ್ಪುಬಣ್ಣದ, ಚೌಕಾಕಾರದಲ್ಲಿ ಶ್ವೇತವರ್ಣದ ಅಲಂಕಾರಿಕ ಮೇಷವಿದೆ.

೬೧. ಚಾಮುಂಡೇಶ್ವರಿ



ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಚಿತ್ರ ೬೨. ಸಮುದ್ರ ರಾಜ ಸೂಟ್



ಸಮುದ್ರ ರಾಜ



ವರಾಣೆ



ರಾಜ



ಧ್ವಜ



ಪದಾತಿ



ಸೇನಿಕಾ



ಮೇಷ



ವೃಷಭ



ಮೀಥುನ



ಕಟಕ



ಸಿಂಹ



ಕನ್ಯಾ



ತುಲಾ



ವೃಶ್ಚಿಕ



ಧನಸ್ಸು



ಮಕರ



ಕುಂಭ



ಮೀನು

ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಮೇಷದಿಂದ, ವೃಷಭ, ಮಿಥುನ, ಕಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಂಭ, ಮೀನದ ವರೆಗೆ ಚಾಮುಂಡೇಶ್ವರಿಯ ಕೆಳಭಾಗದಲ್ಲಿ ರಾಶಿಗಳನ್ನು ಮಾತ್ರ ಬದಲಾಯಿಸಲಾಗಿದೆ. ಚಿತ್ರಗಳ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಎಲೆಯ ಅಂಚನ್ನು ಚುಕ್ಕೆಗಳಿಂದ ಶೃಂಗರಿಸಿ ಎಲೆಗಳಿಗೆ ಮೆರಗು ನೀಡಿದ್ದಾರೆ.

ಚಿತ್ರ – ೬.೨. ಸಮುದ್ರರಾಜ (ವರುಣ) ಸೂಟ

ಚಾಮುಂಡಿ ಗಂಜೀಫಾಕ್ಕೆ ಸಂಬಂಧಿಸಿದ ಈ ಎಲೆಗಳಲ್ಲಿ ಪ್ರಧಾನ ದೇವತೆಗಳಾದ ವರುಣದೇವ, ವಾರಾಣಿ (ರಾಣಿ), ರಾಜ, ಧ್ವಜ, ಪದಾತಿ ಹಾಗೂ ಯೋಧನ ಚಿತ್ರಗಳನ್ನು ರಚನೆ ಮಾಡಲಾಗಿದೆ. ಉಳಿದ ಎಲೆಗಳಲ್ಲಿ ಮೇಷ, ವೃಷಭ, ಮಿಥುನ, ಕಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಂಭ, ಮೀನದ ಚಿತ್ರಗಳನ್ನು ಸಂಯೋಜಿಸಲಾಗಿದೆ. ಈ ಎಲ್ಲಾ ಸಾಂಕೇತಿಕ ಚಿತ್ರಗಳು ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿ ಮೂಡಿಬಂದಿವೆ. ಈ ಆಟದ ಎಲೆಗಳಲ್ಲಿ ಮುಖ್ಯದೇವತೆ, ದೇವತೆಗಳ ವಾಹನ, ಅವರ ಆಯುಧಗಳು ಹಾಗೂ ಹಿನ್ನೆಲೆಯನ್ನು ವೈವಿಧ್ಯಮಯವಾಗಿ ಚಿತ್ರಿಸಲಾಗಿದೆ. ವರುಣ ಎಲೆಯಲ್ಲಿ ದೇವತೆಯು ಚತುರ್ಭುಜ ಹೊಂದಿದ್ದು, ಸಾಂಪ್ರದಾಯಿಕ ಧೋತಿ, ಉತ್ತರೀಯ, ಸ್ವರ್ಣಾಭರಣಗಳಿಂದ ಅಲಂಕೃತಗೊಂಡು ವಾಹನವಾದ ಮೊಸಳೆಯ ಮೇಲೆ ಆಸೀನನಾಗಿದ್ದಾನೆ. ಅದರಂತೆ ವಾರಾಣಿಯ ಎಲೆಯಲ್ಲಿ ದೇವತೆಯು ಸೀರೆ, ಕುಪ್ಪಸ ಹಾಗೂ ಆಭರಣಗಳಿಂದ ಕೂಡಿದ್ದು, ಇವಳೂ ಸಹ ಮಕರದ ಮೇಲೆ ಆಸೀನಳಾಗಿದ್ದಾಳೆ. ರಾಜನ ಎಲೆಗೆ ಸಂಬಂಧಿಸಿದಂತೆ ರಾಜನನ್ನು ಚಿನ್ನದ ರಥದಲ್ಲಿ ಕುಳ್ಳಿರಿಸಿ ಅಶ್ವಗಳು ಎಳೆಯುತ್ತಿರುವಂತೆ, ಧ್ವಜ ಎಲೆಯಲ್ಲಿ ಧ್ವಜಕಟ್ಟೆ ಹಾಗೂ ಯೋಧನ ಚಿತ್ರವನ್ನು ಸಂಯೋಜಿಸಲಾಗಿದೆ. ಪದಾತಿ ಎಲೆಯಲ್ಲಿ ಅಶ್ವಾರೂಢನಾದ ಸೇನಾಪತಿ, ಯೋಧ ಎಲೆಯಲ್ಲಿ ಸಾಮಾನ್ಯ ಭೂದಳದ ಸೈನಿಕನ ಚಿತ್ರವನ್ನು ಕಾಣಬಹುದು. ಹನ್ನೆರಡು ರಾಶಿಯ ಉಪಎಲೆಗಳಲ್ಲಿ ಆಯಾ ರಾಶಿಯ ಸಾಂಕೇತಿಕ ಚಿತ್ರಗಳನ್ನು ಸಂಯೋಜನೆ ಮಾಡಲಾಗಿದೆ.

ಈ ಎಲೆಗಳು ವೃತ್ತಾಕಾರವಾಗಿದ್ದು ಪ್ರಧಾನವಾಗಿ ಹಳದಿ, ಕಪ್ಪು, ಕೆಂಪು, ಬಿಳಿ, ಕೇಸರಿ, ಹಸಿರು ಬಣ್ಣಗಳಿಂದ ಚಿತ್ರಿತಗೊಂಡಿವೆ. ಅಂಚುಗಳು ಹಳದಿಬಣ್ಣದಿಂದ ಕೂಡಿದ್ದು, ನಡುವೆ ಚಿಕ್ಕ ಚಿಕ್ಕ ಚುಕ್ಕಿಗಳು ಹಾಗೂ ರೇಖಾವಿನ್ಯಾಸದ ನಕ್ಷೆಯಿಂದ ಅಲಂಕೃತಗೊಂಡಿವೆ. ಈ ೧೮ ಎಲೆಗಳು ರೇಖಾ ಪ್ರಧಾನವಾಗಿ ಕೂಡಿದ್ದರೂ ಅಲಂಕಾರದ ಆಶಯದಿಂದ ಉದ್ದೀಪನಗೊಂಡಿವೆ. ಪ್ರತಿಮೆಗಳು ಸಾಂಕೇತಿಕವಾಗಿ ಮೂಡಿದ್ದರೂ ಸಹ ಕಲಾ ಪ್ರಜ್ಞೆಯಿಂದ ನೋಡುಗರನ್ನು ಗಮನಿಸುತ್ತವೆ.

ಚಿತ್ರ – ೬.೩. ಕೃಷ್ಣರಾಜ ಛದ್

ಕೃಷ್ಣರಾಜ ಛದ್‌ದಲ್ಲಿ ಕೃಷ್ಣನೆ ರಾಜ. ಇದರಲ್ಲಿ ಬ್ರಹ್ಮ, ವಿಷ್ಣು, ಶಿವ, ಇಂದ್ರರ ನಾಲ್ಕು ಸೂಟುಗಳು ಬರುತ್ತವೆ. ಕೆಂಪು, ಹಳದಿ, ಕಪ್ಪು, ಹಸಿರು, ಕಪ್ಪುಬಣ್ಣದ ರಾಜ, ರಾಣಿ, ಮಂತ್ರಿ, ಸೈನಿಕ, ಪತಾಕೆ, ಶಂಖ, ಚಕ್ರ, ಗರುಡ, ಹನುಮ, ಬೇರುಂಡ, ಸಾಲ್ವ, ಶರಭ, ಸಿಂಹ, ಕುದುರೆ, ವರಾಹ, ಮಕರ, ಮೀನಿನ ಎಪ್ಪತ್ತೆರಡು ಚೌಕಾಕಾರದ ಎಲೆಗಳು ಬರುತ್ತವೆ. ಅದರಲ್ಲಿ ಒಂದು ಸೂಟಿಗೆ ಹದಿನೆಂಟು ಚೌಕಾಕಾರದ ಎಲೆಗಳು ಬರುತ್ತವೆ.

ರಾಜ

ಇಲ್ಲಿ ಕಂಡುಬರುವ ಗಂಜೀಫಾ ಎಲೆಗಳು ಕೃಷ್ಣರಾಜ ಛದ್‌ಗೆ ಸಂಬಂಧಿಸಿವೆ. ಈ ಛದ್‌ನಲ್ಲಿ

೧೮ ಎಲೆಗಳಿದ್ದು, ಇದರಲ್ಲಿನ ಪ್ರಧಾನದಲ್ಲಿ ಶ್ರೀಕೃಷ್ಣ ಹಾಗೂ ಅವನ ಹೆಂಡತಿಯಾದ ಸತ್ಯಭಾಮೆ ಹಾಗೂ ರುಕ್ಮಿಣಿಯರನ್ನು ಸಂಯೋಜಿಸಲಾಗಿದೆ. ಈ ಸಂಯೋಜನೆಯಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು ಸ್ವರ್ಣ ಸಿಂಹಾಸನದ ಮೇಲೆ ಸುಖಾಸನ ಭಂಗಿಯಲ್ಲಿ ಕುಳಿತಂತೆ ಚಿತ್ರಿಸಿದ್ದು, ಅವನ ತೊಡೆಯ ಎಡ ಹಾಗೂ ಬಲಪಾರ್ಶ್ವಗಳಲ್ಲಿ ಸತ್ಯಭಾಮೆ ಹಾಗೂ ರುಕ್ಮಿಣಿಯರನ್ನು ಸಂಯೋಜಿಸಿ ದಂಪತಿಗಳ ಪ್ರೇಮಾಲಾಪನೆಯನ್ನು ಅಭಿವ್ಯಕ್ತಪಡಿಸಿದ್ದಾರೆ. ಈ ದಂಪತಿಗಳು ದ್ವಿಭುಜಧಾರಿಗಳಾಗಿದ್ದು, ವಸ್ತ್ರಾಭರಣಗಳಿಂದ ಭೂಷಿತಗೊಂಡಿದ್ದಾರೆ. ಚಿತ್ರದ ಹಿನ್ನೆಲೆಯಲ್ಲಿ ಕೆಂಪು, ಹಳದಿ, ಹಸಿರು, ತಿಳಿಗುಲಾಬಿ ಹಾಗೂ ಕಪ್ಪುವರ್ಣಗಳ ಸಂಯೋಜನೆಯಿದ್ದು, ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಚಿತ್ರದ ಅಂಚು ಜ್ಯಾಮಿತಿಕ ಅಂಚಿನಿಂದ ಕೂಡಿದ್ದು, ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ರಾಣಿ

ಈ ಸಂಯೋಜನೆಯಲ್ಲಿ ರಾಣಿಯು ಸ್ವರ್ಣಸಿಂಹಾಸನದ ಮೇಲೆ ಪದ್ಮಾಸನದಲ್ಲಿ ಚತುರ್ಭುಜ –ಧಾರಿಣಿಯಾಗಿ ಕುಳಿತಿದ್ದಾಳೆ. ವಸ್ತ್ರಾಭರಣಗಳಿಂದ ಭೂಷಿತಗೊಂಡಿದ್ದಾಳೆ. ಮುಂದಿನ ಎರಡು ಕೈಗಳು ವರದಮುದ್ರೆಯಿಂದ ಶೋಭಿತಗೊಂಡಿವೆ. ಕೆಳಭಾಗದಲ್ಲಿ ಅಲಂಕಾರಿಕ ಕಮಲದ ಪೀಠವಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಮಂಟಪದ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ರಾಣಿಯು ಹಸಿರುವರ್ಣದ ಸೀರೆ ಹಾಗೂ ಕೆಂಪುವರ್ಣದ ಕುಪ್ಪಸವನ್ನು ಧರಿಸಿದ್ದಾಳೆ. ಈ ಚಿತ್ರದಲ್ಲಿ ಕೆಂಪು, ಹಳದಿ, ಹಸಿರು, ತಿಳಿಗುಲಾಬಿವರ್ಣಗಳ ಸಂಯೋಜನೆಯಿದ್ದು ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯು ಜ್ಯಾಮಿತಿಕ ಅಂಚುಗಳಿಂದ ಕೂಡಿ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಪದಾತಿ

ಪದಾತಿಯು ಹಳದಿವರ್ಣದ ದೇಹವನ್ನು ಹೊಂದಿ ಹಸಿರುವರ್ಣದ ಜುಬ್ಬಾ ಹಾಗೂ ಹಳದಿವರ್ಣದ ಪೈಜಾಮ ಧರಿಸಿದ್ದು, ಅಲಂಕಾರಿಕ ಆಭರಣಗಳನ್ನು ಹೊಂದಿದ್ದಾನೆ. ಬಲಗೈಯಲ್ಲಿ ಖಡ್ಗವನ್ನು ಹಿಡಿದು, ಪಾರ್ಶ್ವಮುಖಕ್ಕೆ ಶ್ವೇತವರ್ಣದ ಅಶ್ವವನ್ನೇರಿ ಹೊರಟಿದ್ದಾನೆ. ಅಶ್ವವು ಆಭರಣಗಳಿಂದ ಶೋಭಿತಗೊಂಡಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಮಂಟಪದ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಚಿತ್ರದಲ್ಲಿ ಕೆಂಪು,ಹಳದಿ, ಹಸಿರು, ಬಿಳಿವರ್ಣಗಳ ಸಂಯೋಜನೆಯಿದ್ದು, ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಸೈನಿಕ

ಸೈನಿಕ ಹಸಿರುವರ್ಣದ ಜುಬ್ಬಾ ಹಾಗೂ ಹಳದಿವರ್ಣದ ಪೈಜಾಮ ಧರಿಸಿದ್ದು, ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಗುರಾಣಿ ಹಿಡಿದು ಮುನ್ನಡೆಯುತ್ತಿದ್ದಾನೆ. ದೇಹಕ್ಕೆ ಬಿಳಿವರ್ಣವಿದೆ. ಅಲಂಕಾರಿಕ ಆಭರಣಗಳನ್ನು ಧರಿಸಿ, ಕಿರೀಟಧಾರಿಯಾಗಿದ್ದಾನೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಮಂಟಪದ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಚಿತ್ರದಲ್ಲಿ ಕೆಂಪು,ಹಳದಿ, ಹಸಿರು, ಬಿಳಿವರ್ಣಗಳ ಸಂಯೋಜನೆಯಿದ್ದು, ಸೂಕ್ಷ್ಮ ರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ರಾಜಮುದ್ರೆ

ಮುದ್ರೆಯು (ಕೃಷ್ಣರಾಜ ಮೊಹರು) ಎರಡು ಸಿಂಹಗಳನ್ನು ಬಳಸಿಕೊಂಡು ಅಲಂಕಾರಿಕ ನಕ್ಷೆಯಲ್ಲಿ ಮುದ್ರೆಗೆ ಮೆರಗು ನೀಡಿದ್ದಾರೆ. ಮುದ್ರೆಯು ಹಳದಿವರ್ಣದಿಂದ ಕೂಡಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಮಂಟಪದ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಚಿತ್ರದಲ್ಲಿ ಕೆಂಪು,ಹಳದಿ, ಹಸಿರು, ಬಿಳಿವರ್ಣಗಳ ಸಂಯೋಜನೆಯಿದ್ದು, ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಹನುಮಂತ

ಹಳದಿವರ್ಣದಿಂದ ಚಿತ್ರಿತಗೊಂಡಿರುವ ಹನುಮಂತ ಬಲಭಾಗದ ಮಂಡಿಯೂರಿ ಭಕ್ತಿಭಾವದಿಂದ ನಮಿಸುತ್ತಿದ್ದಾನೆ. ಆತನ ತಲೆ ಪಾರ್ಶ್ವಕ್ಕೆ ತಿರುಗಿದ್ದರೆ ದೇಹ ನೇರವಾಗಿದೆ. ಕೋರೆಹಲ್ಲಿನ ಹನುಮಂತನಿಗೆ ಬಹು ಉದ್ದನೆಯ ಬಾಲವಿದ್ದು, ಅಂಚಿನಲ್ಲಿ ಘಂಟೆ ನೇತಾಡುತ್ತಿದೆ. ಕೆಂಪುವರ್ಣದ ದೇಹಕವಚ ಹೊಂದಿ ಹಳದಿ ಲಂಗೋಟಿಯನ್ನು ಧರಿಸಿದ್ದಾನೆ. ಕರ್ಣಾಭರಣ,ಕೈಕಡಗಗಳು ಮುಂತಾದ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ಕೇಶಗಳಿಗೆ ಜಡೆಹಾಕಿ ಹಳದಿ ಪಟ್ಟಿಯನ್ನು ಕಟ್ಟಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಮಂಟಪದ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಚಿತ್ರದಲ್ಲಿ ಕೆಂಪು,ಹಳದಿ, ಹಸಿರು, ಬಿಳಿವರ್ಣಗಳ ಸಂಯೋಜನೆಯಿದ್ದು, ಸೂಕ್ಷ್ಮರೇಖಾ ವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಗರುಡ

ಹಳದಿವರ್ಣದಿಂದ ಚಿತ್ರಿತಗೊಂಡಿರುವ ಗರುಡ ಎಡಭಾಗದಲ್ಲಿ ಮಂಡಿಯೂರಿ ಭಕ್ತಿಭಾವದಿಂದ ನಮಿಸುತ್ತಿದ್ದಾನೆ. ಆತನ ತಲೆ ಪಾರ್ಶ್ವಕ್ಕೆ ತಿರುಗಿದ್ದರೆ ದೇಹ ನೇರವಾಗಿದೆ. ಎರಡು ಭುಜಕ್ಕೆ ರೆಕ್ಕೆಗಳು ಇವೆ. ತಲೆಯ ಮೇಲೆ ಕಿರೀಟ, ಕೈ ಹಾಗೂ ಕಾಲುಗಳಲ್ಲಿ ಬಳೆಗಳನ್ನು ಧರಿಸಿದ್ದಾನೆ. ದೇಹಕ್ಕೆ ಕೆಂಪುವರ್ಣದ ಕವಚ ಧರಿಸಿ, ಹಸಿರುವರ್ಣದ ಲಂಗೋಟಿ ಧರಿಸಿದ್ದಾನೆ. ಕರ್ಣಾಭರಣಗಳಿಂದ ಅಲಂಕೃತಗೊಂಡಿದ್ದಾನೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಮಂಟಪದ ವಾಸ್ತು ವಿನ್ಯಾಸವನ್ನು ರಚಿಸಲಾಗಿದೆ. ಚಿತ್ರದಲ್ಲಿ ಕೆಂಪು,ಹಳದಿ, ಹಸಿರು, ಬಿಳಿವರ್ಣಗಳ ಸಂಯೋಜನೆಯಿದ್ದು, ಸೂಕ್ಷ್ಮರೇಖಾ ವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಚಕ್ರ

ವೃತ್ತಾಕಾರದಲ್ಲಿ ವಿಷ್ಣುವಿನ ಶ್ರೀಚಕ್ರವನ್ನು ಕೆಂಪು, ಹಳದಿ, ಹಸಿರುವರ್ಣಗಳಲ್ಲಿ ಚಿತ್ರಿಸಿದ್ದಾರೆ. ಮಧ್ಯದಲ್ಲಿ ರೇಖೆಗಳ ಮುಖಾಂತರ ಅಲಂಕರಿಸಿ ಮಧ್ಯದಲ್ಲಿ ಹಳದಿವರ್ಣ ಲೇಪಿಸಿದ್ದಾರೆ. ಎಡ ಮತ್ತು ಬಲಭಾಗ ಹಾಗೂ ಮೇಲ್ಭಾಗದಲ್ಲಿ ನವಿಲುಗರಿಯ ಆಕಾರದಲ್ಲಿ ಅಲಂಕರಿಸಿದ್ದಾರೆ. ಕೆಳಭಾಗದಲ್ಲಿ ಹಳದಿವರ್ಣದ ಮಂಟಪವಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಮಂಟಪದ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಚಿತ್ರದಲ್ಲಿ ಕೆಂಪು,ಹಳದಿ, ಹಸಿರು, ಬಿಳಿವರ್ಣಗಳ ಸಂಯೋಜನೆಯಿದ್ದು, ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಶಂಖ

ವಿಷ್ಣುವಿನ ಆಯುಧಗಳಲ್ಲಿ ಒಂದಾದ ಶಂಖವನ್ನು ಹಳದಿ, ತೆಳುಹಸಿರು ಮತ್ತು ಹಸಿರುವರ್ಣದಲ್ಲಿ ಚಿತ್ರಿಸಲಾಗಿದೆ. ಕೆಳಭಾಗದಲ್ಲಿ ಹಳದಿವರ್ಣದ ಮಂಟಪವಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಮಂಟಪದ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಚಿತ್ರದಲ್ಲಿ ಕೆಂಪು,ಹಳದಿ, ಹಸಿರು, ಬಿಳಿವರ್ಣಗಳ ಸಂಯೋಜನೆಯಿದ್ದು, ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಮೀನ

ಈ ಚಿತ್ರದಲ್ಲಿ ಎರಡು ಮೀನುಗಳನ್ನು ಮೇಲ್ಮುಖವಾಗಿ ಹಳದಿ, ಕಪ್ಪು, ಕೆಂಪುವರ್ಣಗಳಲ್ಲಿ ಸೂಕ್ಷ್ಮರೇಖೆ ಗಳಿಂದ ಚಿತ್ರಿಸಿದ್ದಾರೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಮಂಟಪದ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಚಿತ್ರದಲ್ಲಿ ಕೆಂಪು,ಹಳದಿ, ಹಸಿರು, ಬಿಳಿವರ್ಣಗಳ ಸಂಯೋಜನೆಯಿದ್ದು, ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದೆ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಮಕರ

ಈ ಚಿತ್ರದಲ್ಲಿ ಮಕರವನ್ನು (ಮೊಸಳೆ) ಹಳದಿವರ್ಣದಲ್ಲಿ ಚಿತ್ರಿಸಲಾಗಿದೆ. ಮಕರವು ಮೇಲ್ಮುಖವಾಗಿ ಗರ್ಜಿಸುವ ಭಂಗಿಯಲ್ಲಿ ನಿಂತಿದೆ. ಅದರ ಬಾಲವನ್ನು ಹರಿತವಾದ ರೇಖೆಗಳಿಂದ ಚಿತ್ರಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಮಂಟಪದ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಚಿತ್ರದಲ್ಲಿ ಕೆಂಪು,ಹಳದಿ, ಹಸಿರು, ಬಿಳಿವರ್ಣಗಳ ಸಂಯೋಜನೆಯಿದ್ದು, ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ವರಾಹ

ಈ ಚಿತ್ರದಲ್ಲಿ ವರಾಹವನ್ನು ಹಳದಿವರ್ಣದಲ್ಲಿ ಚಿತ್ರಿಸಲಾಗಿದೆ. ವರಾಹವು ಪಾರ್ಶ್ವಮುಖ ಮಾಡಿ ಛಂಗನೆ ನೆಗೆಯುವ ಭಂಗಿಯಲ್ಲಿದೆ. ಚಿತ್ರದ ಹಿನ್ನೆಲೆಯಲ್ಲಿ ಕೆಂಪುವರ್ಣದ ವಿನ್ಯಾಸವಿದೆ. ಚಿತ್ರದಲ್ಲಿ ಪ್ರಧಾನವಾಗಿ ಕೆಂಪು,ಹಳದಿ, ಹಸಿರು, ಬಿಳಿವರ್ಣಗಳನ್ನು ಬಳಸಿ ಸೂಕ್ಷ್ಮವಾದ ಕೃತಿ ರಚಿಸಿದ್ದಾರೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಮಂಟಪದ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಸಿಂಹ

ಈ ಚಿತ್ರದಲ್ಲಿ ಸಿಂಹವನ್ನು ಹಳದಿವರ್ಣದಲ್ಲಿ ಚಿತ್ರಿಸಲಾಗಿದೆ.ದೇಹವು ಪಾರ್ಶ್ವಮುಖಕ್ಕೆ ಹೊರಳಿದೆ. ತಲೆಯು ಎದುರುನೋಟದಲ್ಲಿದ್ದು, ಮುಖದಲ್ಲಿ ಗಾಂಭೀರ್ಯವನ್ನು ಹೊಂದಿದೆ. ಹಿನ್ನೆಲೆಯಲ್ಲಿ ಹಸಿರುಬಣ್ಣದ ಪ್ರಭಾವಳಿ ಇದ್ದು, ಕೆಳಭಾಗದಲ್ಲಿ ಕೆಂಪುವರ್ಣದಿಂದ ಶೋಭಿತಗೊಂಡಿದೆ. ಚಿತ್ರದಲ್ಲಿ ಪ್ರಧಾನವಾಗಿ ಕೆಂಪು,ಹಳದಿ, ಹಸಿರು, ಬಿಳಿವರ್ಣಗಳನ್ನು ಬಳಸಿ ಸೂಕ್ಷ್ಮವಾದ ರೇಖಾವಿನ್ಯಾಸದಿಂದ ಕೃತಿಗೆ ಮೆರಗು ನೀಡಿದ್ದಾರೆ.

ಅಶ್ವ

ಅಶ್ವವು ಹಳದಿವರ್ಣದಿಂದ ಚಿತ್ರಿತಗೊಂಡು, ಆಭರಣಗಳಿಂದ ಶೋಭಿತಗೊಂಡಿದೆ. ಬೆನ್ನಿಗೆ ಹಸಿರು, ಕೆಂಪುವರ್ಣಗಳಿಂದ ಕೂಡಿದ ಥಡಿಯನ್ನು ಅಲಂಕರಿಸಲಾಗಿದೆ. ಕುದುರೆಯು ಛಂಗನೆ ನೆಗೆಯುವ ಭಂಗಿಯಲ್ಲಿ ನಿಂತಿದೆ. ಹಿನ್ನೆಲೆಯಲ್ಲಿ ಹಸಿರುಬಣ್ಣದ ಪ್ರಭಾವಳಿ ಇದ್ದು, ಕೆಳಭಾಗದಲ್ಲಿ ಕೆಂಪುವರ್ಣದಿಂದ ಶೋಭಿತಗೊಂಡಿದೆ. ಚಿತ್ರದಲ್ಲಿ ಪ್ರಧಾನವಾಗಿ ಕೆಂಪು,ಹಳದಿ, ಹಸಿರು ವರ್ಣಗಳನ್ನು ಬಳಸಿ ಸೂಕ್ಷ್ಮವಾದ ರೇಖಾವಿನ್ಯಾಸದಿಂದ ಕೃತಿಗೆ ಮೆರಗು ನೀಡಿದ್ದಾರೆ.

ಮದ್ದಾನೆ

ಈ ಚಿತ್ರದಲ್ಲಿ ಮದ್ದಾನೆಯು ಹಳದಿವರ್ಣದಿಂದ ಶೋಭಿತಗೊಂಡು, ವಸ್ತ್ರಾಭರಣಗಳಿಂದ ಭೂಷಿತಗೊಂಡಿದೆ. ಆನೆಯು ಪಾರ್ಶ್ವಮುಖಭಂಗಿಯಲ್ಲಿ ಕತ್ತನ್ನು ಮೇಲೆತ್ತಿ ಗರ್ಜಿಸುತ್ತಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಪ್ರಭಾವಳಿ ರಚಿಸಲಾಗಿದೆ. ಕೆಂಪು, ಹಳದಿ, ಹಸಿರುವರ್ಣಗಳನ್ನು ಸಂಯೋಜಿಸಿ ಸೂಕ್ಷ್ಮ ರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಶರಭ

ಹಳದಿವರ್ಣದಿಂದ ಶೋಭಿತಗೊಂಡ ಶರಭವು ಪಾರ್ಶ್ವಮುಖ ಮಾಡಿ ಕತ್ತನ್ನು ಮೇಲೆ ನೋಡುತ್ತಿರುವ ಭಂಗಿಯಲ್ಲಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಪ್ರಭಾವಳಿ ರಚಿಸಲಾಗಿದೆ. ಕೆಂಪು, ಹಳದಿ, ಹಸಿರುವರ್ಣಗಳನ್ನು ಸಂಯೋಜಿಸಿ ಸೂಕ್ಷ್ಮ ರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಗಂಡ-ಬೇರುಂಡ


ಹಳದಿವರ್ಣದಿಂದ ಶೋಭಿತಗೊಂಡ ಎರಡು ತಲೆಯುಳ್ಳ ಭೇರುಂಡ ಎಡ ಮತ್ತು ಬಲಭಾಗಕ್ಕೆ ತಲೆಯನ್ನು ತಿರುಗಿಸಿ, ಪುಕ್ಕಗಳನ್ನು ಕೆಳಭಾಗಕ್ಕೆ ಚೆಲ್ಲಿ, ಮೇಲಿನ ಎರಡು ರೆಕ್ಕೆಗಳನ್ನು ಬಿಚ್ಚಿ ನಿಂತಿದೆ. ಕೊರಳಲ್ಲಿ ಒಡ್ಯಾಣವನ್ನು ಧರಿಸಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಹಸಿರುವರ್ಣದ ಪ್ರಭಾವಳಿ ರಚಿಸಲಾಗಿದೆ. ಹಿಂಭಾಗ ಕೆಂಪುವರ್ಣದಿಂದ ರಾರಾಜಿಸುತ್ತಿದೆ. ಪ್ರಧಾನ ವರ್ಣಗಳನ್ನು ಸಂಯೋಜಿಸಿ ಸೂಕ್ಷ್ಮ ರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.


ಸಾಲ್ವ

ಚಿತ್ರವನ್ನು ತೆಳುಹಳದಿವರ್ಣದಲ್ಲಿ ರಚಿಸಿ, ರೆಕ್ಕೆಗಳನ್ನು ದಟ್ಟ ಹಳದಿಬಣ್ಣಗಳಲ್ಲಿ ರಚಿಸಿದ್ದಾರೆ. ಸಾಲ್ವವು ಪಾರ್ಶ್ವಕ್ಕೆ ಮುಖಮಾಡಿ ಕತ್ತನ್ನು ಮೇಲೆತ್ತಿ ನಿಂತಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಹಸಿರುವರ್ಣದ ಪ್ರಭಾವಳಿ ಶೋಭಿತಗೊಂಡಿದೆ. ಹಿಂಭಾಗ ಕೆಂಪುವರ್ಣದಿಂದ ಕೂಡಿದೆ. ಪ್ರಧಾನ ವರ್ಣಗಳನ್ನು ಸಂಯೋಜಿಸಿ ಸೂಕ್ಷ್ಮ ರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಕೃಷ್ಣರಾಜ ಛದ್‌ದಲ್ಲಿ ಕಂಡುಬರುವ ಹದಿನೆಂಟು ಎಲೆಗಳಲ್ಲಿ ಎರಡು ಪ್ರಧಾನ ಎಲೆಗಳನ್ನು ಹೊರತು

ಚಿತ್ರ ೬೩


ಕೃಷ್ಣ


ರಾಣಿ


ಪದಾತಿ


ಸೇನಾನಿ


ಮೊಹರು


ಹನಮಂತ


ಗರುಡ


ಚಕ್ರ



ಶಂಖ


ಮೀನ


ಮಕರ


ವರಹ


ಸಿಂಹ


ಅಶ್ವ


ಮದ್ವಾನೆ


ಶರಭ


ಗಂಡುಬೇರುಂಡ


ಸಾಲ್ವ

ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಪಡಿಸಿ ದೇಹ, ಬಣ್ಣ, ವಸ್ತ್ರವಿನ್ಯಾಸಗಳ ಹಿನ್ನೆಲೆಯ ಪ್ರಭಾವಳಿ ಹಿಂಭಾಗದ ಕೆಂಪುವರ್ಣ ಒಂದೇ ತರವಾಗಿ ಚೌಕಾಕಾರದಲ್ಲಿ ಚಿತ್ರಿತಗೊಂಡಿವೆ.

ಚಿತ್ರ – ೬೪. ಬ್ರಹ್ಮಸೂಟ

ಬ್ರಹ್ಮ ಮತ್ತು ಸರಸ್ವತಿ ಇಲ್ಲಿ ಪ್ರಧಾನ ಎಲೆಗಳಾಗಿರುತ್ತವೆ. ಉಳಿದವುಗಳು ಪದಾತಿ, ಸೇನಾನಿ, ಧ್ವಜ, ಹನುಮಂತ, ಗರುಡ, ಚಕ್ರ, ಶಂಖ, ಮೀನು, ಮಕರ, ವರಾಹ, ಸಿಂಹ, ಅಶ್ವ, ಮದ್ದಾನೆ, ಶರಭ, ಭೇರುಂಡ, ಸಾಲ್ವ ಈ ಹದಿನಾರು ಚೌಕಾಕಾರದ ಎಲೆಗಳು ಉಪಎಲೆಗಳಾಗಿರುತ್ತವೆ.

ಬ್ರಹ್ಮನು ಚತುರ್ಮುಖ ಹಾಗೂ ಚತುರ್ಭುಜನಾಗಿ ಪದ್ಮಾಸನದಲ್ಲಿ ಬಂಗಾರವರ್ಣದ ಪೀಠದ ಮೇಲೆ ಕುಳಿತಿದ್ದಾನೆ. ಚತುರ್ಮುಖದಲ್ಲಿ ಕಿರೀಟಧಾರಿಯಾಗಿ, ಕರ್ಣಾಭರಣಗಳನ್ನು ಧರಿಸಿ, ಹಸನ್ಮುಖಿಯಾಗಿ ಕುಳಿತಿದ್ದಾನೆ. ಹಳದಿವರ್ಣದ ಧೋತಿ ಹಾಗೂ ಕೆಂಪುವರ್ಣದ ದುಪ್ಪಟ್ಟಾವನ್ನು ಧರಿಸಿದ್ದಾನೆ. ಬ್ರಹ್ಮನ ಹಿಂಬದಿಗೆ ತೆಲುಗುಲಾಬಿ ಬಣ್ಣದ ಸುಖಾಸನವಿದೆ. ಪೀಠದ ಹಿಂಭಾಗಕ್ಕೆ ದಟ್ಟಹಸಿರುವರ್ಣದ ಲೇಪನವಿದ್ದು, ಬಿಳಿಬಣ್ಣದ ಚುಕ್ಕೆಗಳಿವೆ. ಮೇಲ್ಭಾಗದಲ್ಲಿ ಕೆಂಪುವರ್ಣದ ಅಲಂಕಾರಿಕ ಪ್ರಭಾವಳಿ ಇದೆ. ಚಿತ್ರದಲ್ಲಿ ದಟ್ಟಹಸಿರು ಹಳದಿ, ಕೆಂಪುವರ್ಣಗಳನ್ನು ಪ್ರಧಾನವಾಗಿಟ್ಟುಕೊಂಡು ಸೂಕ್ಷ್ಮ ರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ರಾಣಿ (ಸರಸ್ವತಿ)

ರಾಣಿಯು ಹಳದಿವರ್ಣದಿಂದ ಶೋಭಿತಳಾಗಿ ಚತುರ್ಭುಜಧಾರಿಯಾಗಿದ್ದಾಳೆ. ಕೆಂಪುಬಣ್ಣದ ಸೀರೆ ಹಾಗೂ ಹಳದಿ ಕುಪ್ಪಸವನ್ನು ಧರಿಸಿದ್ದಾಳೆ. ಕಿವಿಯಲ್ಲಿ ಕರ್ಣಕುಂಡಲ, ಭುಜಕೀರ್ತಿ, ಕರ್ಣಾಭರಣ ಹಾಗೂ ವೈಜಯಂತಿಮಾಲೆಯನ್ನು ಧರಿಸಿದ್ದಾಳೆ. ಮುಂದಿನ ಬಲಗೈಯಿಂದ ವೀಣೆ ನುಡಿಸುತ್ತಿದ್ದು, ಎಡಗೈಯಿಂದ ಹಿಡಿದುಕೊಂಡಿದ್ದಾಳೆ. ಸುಖಾಸನದಲ್ಲಿ ಬಂಗಾರವರ್ಣದ ಪೀಠದ ಮೇಲೆ ಕುಳಿತಿದ್ದಾಳೆ. ಪೀಠದ ಹಿಂಭಾಗದಲ್ಲಿ ದಟ್ಟ ಹಸಿರುಬಣ್ಣದ ಲೇಪನವಿದೆ. ಮೇಲ್ಭಾಗದಲ್ಲಿ ಕೆಂಪುವರ್ಣದ ಅಲಂಕಾರಿಕ ಪ್ರಭಾವಳಿ ಇದೆ. ಚಿತ್ರದಲ್ಲಿ ಹಸಿರು ಹಳದಿ, ಕೆಂಪುವರ್ಣಗಳನ್ನು ಪ್ರಧಾನವಾಗಿಟ್ಟುಕೊಂಡು ಸೂಕ್ಷ್ಮ ರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕ ಅಂಚುಗಳಿಂದ ಕೂಡಿದ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಬ್ರಹ್ಮಸೂಟಗೆ ಸಂಬಂಧಿಸಿದ ಈ ಗಂಜೀಫಾ ಆಟದ ಎಲೆಗಳಾದ ಬ್ರಹ್ಮ, ಸರಸ್ವತಿ, ಪದಾತಿ, ಸೇನಾನಿ, ಧ್ವಜ, ಹನುಮಂತ, ಗರುಡ, ಚಕ್ರ, ಶಂಖ, ಮೀನು, ಮಕರ, ವರಾಹ, ಸಿಂಹ, ಅಶ್ವ, ಮದ್ದಾನೆ, ಶರಭ ಹಾಗೂ ಭೇರುಂಡ ಹಾಗೂ ಸಾಲ್ವ ಸಂಕೇತದ ಚಿತ್ರಗಳ ಹಿನ್ನೆಲೆಯು ಕಪ್ಪುಬಣ್ಣದಿಂದ ಕೂಡಿದೆ. ಜೊತೆಗೆ ಎಲೆಗಳ ಅಂಚು ಜ್ಯಾಮಿತಿಕ ಆಕಾರದ ಪಟ್ಟಿಯನ್ನು ಹೊಂದಿದೆ. ಆ ಪಟ್ಟಿಯಲ್ಲಿ ಚುಕ್ಕೆಗಳ ನಕ್ಷೆಯು ಸಂಯೋಜನೆಗೊಂಡಿದೆ. ಹಿನ್ನೆಲೆಯ ಮಂಟಪದ ಚಿತ್ರವು ಅರ್ಧ ಚಂದ್ರಾಕೃತಿಯಲ್ಲಿ ಬಾಗುತ್ತಾ ಬಾಗುತ್ತಾ ಶಿರೋಬಿಂದುವಿನಿಂದ ಭೇದಿಸಿದೆ. ಈ ಮಂಟಪದ ಪಾರ್ಶ್ವಗಳಲ್ಲಿ ಅಲಂಕಾರಿಕ ರೇಖಾನಕ್ಷೆಯು ಸಂಯೋಜನೆಗೊಂಡಿದೆ. ಈ ಕ್ರಮ ಎಲ್ಲ ಎಲೆಗಳಲ್ಲಿ ಒಂದೇ ರೀತಿಯಾಗಿ ಮೂಡಿಬಂದಿದೆ.

ಈ ಎಲೆಗಳಲ್ಲಿ ಮುಖ್ಯವಾಗಿ ರೇಖಾಸಂಯೋಜನೆಯು ಪ್ರಧಾನವಾಗಿ ಮೂಡಿಬಂದಿದ್ದು, ಅಲಂಕಾರಿಕ ಕೌಶಲ, ಆಕೃತಿಗಳಲ್ಲಿ ಚಲನಶೀಲತೆ, ಚಪ್ಪಟೆಯ ವರ್ಣವೈವಿಧ್ಯದ ಜೊತೆಗೆ ನೆರಳು

ಚಿತ್ರ ೬೪



ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಬೆಳಕುಗಳ ವರ್ಣಛಾಯೆ ವಿಭಿನ್ನವಾಗಿ ಮೂಡಿಬಂದಿದೆ. ಒಟ್ಟಾರೆ ಈ ಚಿತ್ರಗಳನ್ನು ಆಟದ ಸೂಟ್‌ಗೆ ಸಂಬಂಧಿಸಿದಂತೆ ಬಿಂಬಿಸಲಾಗಿದ್ದರೂ ಸಹ ಚಿತ್ರಲಕ್ಷಣಗಳಿಂದ ತಮ್ಮದೇ ಆದ ಅಸ್ತಿತ್ವವನ್ನು ಕಂಡುಕೊಂಡಿವೆ ಎನ್ನಬಹುದು. ಈ ಸಾಂಕೇತಿಕ ಚಿತ್ರಗಳಲ್ಲಿ ಕಲಾವಿದ ಎಲೆಗಳ ಅಂದವನ್ನು ಉಳಿಸಿಕೊಳ್ಳುವಲ್ಲಿ ಸಫಲನಾಗಿದ್ದಾನೆ.

ಚಿತ್ರ – ೬೫. ಶಿವಸೂಟ

ಇಲ್ಲಿನ ಶಿವ ಮತ್ತು ಪಾರ್ವತಿಯು ಪ್ರಧಾನ ಎಲೆಗಳಾಗಿರುತ್ತವೆ. ಉಳಿದವು ಪದಾತಿ, ಸೈನಿಕ,. ಧ್ವಜ, ಹನುಮಂತ, ಗರುಡ, ಚಕ್ರ, ಶಂಖ, ಮೀನು, ಮಕರ, ವರಾಹ, ಸಿಂಹ, ಅಶ್ವ, ಮದ್ದಾನೆ, ಶರಭ, ಗರುಡ, ಸಾಲ್ವ ಒಟ್ಟು ಹದಿನೆಂಟು ಚೌಕಾಕಾರದ ಎಲೆಗಳು ಬರುತ್ತವೆ.


ಶಿವನ ದೇಹ ನೀಲವರ್ಣದಿಂದ ಕೂಡಿದ್ದು, ತಲೆಯ ಮೇಲೆ ಕಿರೀಟ, ಕರ್ಣಕುಂಡಲ, ಕರ್ಣಾಭರಣಗಳನ್ನು ಧರಿಸಿ, ಹಳದಿವರ್ಣದ ಧೋತಿ ಹಾಗೂ ಕೆಂಪುವರ್ಣದ ದುಪ್ಪಟ್ಟಾವನ್ನು ಧರಿಸಿ, ಬಂಗಾರವರ್ಣದ ಪೀಠದ ಮೇಲೆ ಪದ್ಮಾಸನದಲ್ಲಿ ಮಂದಹಾಸದಲ್ಲಿ ಚತುರ್ಭುಜನಾಗಿ ಕುಳಿತಿದ್ದಾನೆ. ಮುಂದಿನ ಎರಡು ಕೈಗಳು ವರದಮುದ್ರೆಯಿಂದ ಕೂಡಿದೆ. ಹಿಂದಿನ ಎರಡು ಕೈಗಳಲ್ಲಿ ತ್ರಿಶೂಲ, ಡಮರುಗವನ್ನು ಹಿಡಿದಿದ್ದಾನೆ. ಪೀಠದ ಮೇಲೆ ಕೆಂಪುಮಿಶ್ರಿತ ಕಪ್ಪುವರ್ಣದ ಅಲಂಕಾರಿಕ ಮಂಟಪದ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಪೀಠದ ಹಿಂಭಾಗ ಹಳದಿವರ್ಣದಿಂದ ಕೂಡಿದೆ. ಚಿತ್ರಕ್ಕೆ ಹಳದಿ, ಕೆಂಪು, ತೆಳುಗುಲಾಬಿ, ವರ್ಣ ಬಳಸಿ ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಚಿತ್ರದ ಅಂಚು ಜ್ಯಾಮಿತಿಕ ಅಂಚಿನಿಂದ ಕೂಡಿದ್ದು, ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಪಾರ್ವತಿ (ರಾಣಿ)

ದೇಹವನ್ನು ಹಸಿರುವರ್ಣದಿಂದ ಚಿತ್ರಿಸಿದ್ದು, ಕೆಂಪುವರ್ಣದ ಸೀರೆ–ಕುಪ್ಪಸವನ್ನು ಧರಿಸಿ, ಕರ್ಣಕುಂಡಲ, ಕರ್ಣಾಭರಣ, ಭುಜಕೀರ್ತಿ, ವೈಜಯಂತಿಮಾಲಾ ಹಾಗೂ ಒಡ್ಯಾಣವನ್ನು ಧರಿಸಿ, ಚತುರ್ಭುಜೆಯಾಗಿ ಬಂಗಾರವರ್ಣದ ಪೀಠದ ಮೇಲೆ ಪದ್ಮಾಸನದಲ್ಲಿ ಮಂದಹಾಸದಲ್ಲಿ ಕುಳಿತಿದ್ದಾಳೆ. ಹಿಂದಿನ ಎರಡು ಕೈಗಳಲ್ಲಿ ಬಿಳಿಗುಲಾಬಿ ಹಿಡಿದಿದ್ದಾಳೆ. ಮುಂದಿನ ಎರಡು ಕೈಗಳು ವರದಮುದ್ರೆಯಿಂದ ಕೂಡಿವೆ. ಪೀಠದ ಹಿಂಭಾಗ ಹಳದಿವರ್ಣದಿಂದ ಕೂಡಿದೆ. ಮೇಲೆ ಕೆಂಪುಮಿಶ್ರಿತ ಕಪ್ಪುವರ್ಣದ ಅಲಂಕಾರಿಕ ಪ್ರಭಾವಳಿ ಶೋಭಿತಗೊಂಡಿದೆ. ಹಳದಿ, ಕೆಂಪು, ಹಸಿರುವರ್ಣಗಳನ್ನು ಬಳಸಿ, ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಚಿತ್ರದ ಅಂಚು ಜ್ಯಾಮಿತಿಕ ಅಂಚಿನಿಂದ ಕೂಡಿದ್ದು, ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಶಿವಸೂಟ್‌ಗೆ ಸಂಬಂಧಿಸಿದ ಎಲ್ಲ ಎಲೆಗಳು ಆಯತಾಕಾರದಲ್ಲಿ ರಚನೆಗೊಂಡಿದ್ದು, ಆಟದ ಸಾಂಕೇತಿಕ ಚಿತ್ರಗಳಾದ ಶಿವ, ಪಾರ್ವತಿ, ಪದಾತಿ, ಸೇನಾನಿ, ಧ್ವಜ, ಹನುಮಂತ, ಗರುಡ, ಚಕ್ರ, ಶಂಖ, ಮೀನು, ಮಕರ, ವರಾಹ, ಸಿಂಹ, ಅಶ್ವ, ಮದ್ದಾನೆ, ಶರಭ, ಗರುಡ, ಸಾಲ್ವ ಒಟ್ಟು ಸಾಲುಚಿತ್ರಗಳು ತಿಳಿನೀಲಿ ಬಣ್ಣದಿಂದ ಸಂಯೋಜನೆಗೊಂಡಿವೆ. ಇಲ್ಲಿ ದೇವತೆ ಹಾಗೂ ಇತರೆ ವ್ಯಕ್ತಿಚಿತ್ರಗಳನ್ನು ವಸ್ತ್ರಾಭರಣಗಳಿಂದ ರೂಪಿತಗೊಳಿಸಲಾಗಿದೆ. ಎಲೆಗಳ ಹಿನ್ನೆಲೆಯ ವರ್ಣವು ಹಳದಿವರ್ಣದಿಂದ ಕೂಡಿದ್ದು, ಅಲಂಕಾರಿಕವಾಗಿ ಚುಕ್ಕಿಗಳನ್ನು ಸಂಯೋಜಿಸಿದೆ. ಹಿನ್ನೆಲೆಯಲ್ಲಿ ಕಮಾನಿನಿಂದ ಕೂಡಿದ ಮಂಟಪವು ಮಯೂರದ ಚಿತ್ರವಿನ್ಯಾಸದಿಂದ ಕೂಡಿದೆ. ಉಳಿದಂತೆ ಎಲ್ಲ ಎಲೆಗಳಲ್ಲಿನ ಚಿತ್ರವಿನ್ಯಾಸಗಳು

ಚಿತ್ರ ೬೫


ಶಿವಾ


ಪಾರ್ವತಿ


ಪದಾತಿ


ಸೇನಾನಿ


ಧ್ವಜ


ಹನಮಂತ


ಗರುಡ


ಚಕ್ರ


ಶಂಖ



ಮೀನ



ಮಕರ


ವರಹ



ಸಿಂಹ


ಅಶ್ವ


ಮದ್ವಾನೆ


ಶರಭ


ಗಂಡುಬೇರುಂಡ


ಸಾಲ್ವ

ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ರೇಖಾಪ್ರಧಾನವಾಗಿ ಮೂಡಿಬಂದಿದ್ದು, ಚಪ್ಪಟೆಯ ವರ್ಣವೈವಿಧ್ಯತೆವನ್ನು ಹೊಂದಿವೆ. ಎಲೆಗಳಲ್ಲಿನ ರೂಪಿಕೆಗಳು ಚಲನಾತ್ಮಕವಾಗಿದ್ದು, ಅಲಂಕಾರದ ಆಶಯವನ್ನು ಬಿಂಬಿಸುತ್ತವೆ. ಈ ಆಟದ ಎಲ್ಲ ಎಲೆಗಳ ರಚನಾಕ್ರಮ ಒಂದೇ ತೆರನಾಗಿದ್ದರೂ ಚಿತ್ರಕ್ರಮವು ರೇಖೆ, ರೂಪಿಕೆ, ಚಲನೆ ಹಾಗೂ ಸಂಯೋಜನಾ ಕ್ರಮವು ವೈವಿಧ್ಯದಿಂದ ಬಿಂಬಿತಗೊಂಡಿದೆ.

ಚಿತ್ರ – ೬೬. ಇಂದ್ರ ಸೂಟ ೧

ಇಂದ್ರ ಮತ್ತು ಶಚಿ (ಇಂದ್ರಾಣಿ) ಪ್ರಧಾನ ಎಲೆಗಳಾಗಿರುತ್ತವೆ. ಉಳಿದವು ಪದಾತಿ, ಸೇನಾನಿ, ಧ್ವಜ, ಹನುಮಂತ, ಗರುಡ, ಚಕ್ರ, ಶಂಖ, ಮೀನು, ಮಕರ, ವರಾಹ, ಸಿಂಹ, ಅಶ್ವ, ಮದ್ದಾನೆ, ಶರಭ, ಗರುಡ, ಸಾಲ್ವ ಈ ಹದಿನಾರು ಚೌಕಾಕಾರದ ಎಲೆಗಳು ಉಪಎಲೆಗಳಾಗಿರುತ್ತವೆ.

ಇಂದ್ರನು ಹಳದಿವರ್ಣದಿಂದ ಕೂಡಿ, ತಲೆಯ ಮೇಲೆ ಕಿರೀಟ, ಕರ್ಣಕುಂಡಲ, ಕರ್ಣಾಭರಣಗಳನ್ನು ಧರಿಸಿ, ಹಳದಿವರ್ಣದ ಸಮವಸ್ತ್ರ ಧರಿಸಿದ್ದು, ಮೇಲ್ಭಾಗದಲ್ಲಿ ಹಸಿರುವರ್ಣದ ದುಪ್ಪಟ್ಟಾವನ್ನು ಹಾಕಲಾಗಿದೆ. ಬಲಗೈಯಲ್ಲಿ ವಜ್ರದಂಡವನ್ನು ಹಿಡಿದು, ಬಂಗಾರವರ್ಣದ ಪೀಠದ ಮೇಲೆ ಪದ್ಮಾಸನದಲ್ಲಿ ಎದುರುಮುಖವಾಗಿ ಕುಳಿತಿದ್ದಾನೆ. ಪೀಠದ ಹಿಂಭಾಗ ಕಪ್ಪುವರ್ಣದಿಂದ ಕೂಡಿದ್ದು, ಮೇಲ್ಭಾಗದಲ್ಲಿ ಹಸಿರುವರ್ಣದ ಅಲಂಕಾರಿಕ ಪ್ರಭಾವಳಿ ಇದೆ. ಚಿತ್ರದಲ್ಲಿ ಹಳದಿ, ಹಸಿರು, ಕಪ್ಪುವರ್ಣವನ್ನು ಪ್ರಧಾನವಾಗಿಟ್ಟುಕೊಂಡು ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಚಿತ್ರದ ಅಂಚು ಜ್ಯಾಮಿತಿಕ ಅಂಚಿನಿಂದ ಕೂಡಿದ್ದು, ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.

ಇಂದ್ರಾಣಿ (ಶಚಿ)


ರಾಣಿಯು ಹಳದಿವರ್ಣದಿಂದ ಕೂಡಿದ್ದು, ಹಸಿರುವರ್ಣದ ಸೀರೆ, ಹಳದಿವರ್ಣದ ಕುಪ್ಪಸವನ್ನು ಧರಿಸಿ, ನಡಕ್ಕೆ ಒಡ್ಯಾಣವನ್ನು ಧರಿಸಿ, ಕರ್ಣಕುಂಡಲ, ಕರ್ಣಾಭರಣಗಳನ್ನು ಧರಿಸಿದ್ದಾಳೆ. ಬಂಗಾರವರ್ಣದ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾಳೆ. ಬಲಗೈಯಲ್ಲಿ ಕಮಲಪುಷ್ಪ ಹಿಡಿದಿದ್ದಾಳೆ. ಪೀಠದ ಹಿಂಭಾಗದಲ್ಲಿ ಕಪ್ಪುವರ್ಣದ ಲೇಪನವಿದ್ದು, ಮೇಲ್ಭಾಗದಲ್ಲಿ ಹಸಿರುವರ್ಣದ ಅಲಂಕಾರಿಕ ಪ್ರಭಾವಳಿ ಇದೆ. ಮೂಲವರ್ಣಗಳನ್ನು ಬಳಸಿ, ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಚಿತ್ರದ ಅಂಚು ಜ್ಯಾಮಿತಿಕ ಅಂಚಿನಿಂದ ಕೂಡಿದ್ದು, ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕೃತಗೊಂಡಿದೆ.


ಇಂದ್ರ ಸೂಟ್‌ಗೆ ಸಂಬಂಧಿಸಿದ ಈ ಗಂಜೀಫಾ ಆಟದ ಎಲೆಗಳು ಹಿಂದಿನ ಬ್ರಹ್ಮ, ಶಿವ ಸೂಟ್‌ನಂತೆ ಇಲ್ಲಿಯೂ ಆಯತಾಕಾರದಲ್ಲಿ ರಚನೆಗೊಂಡಿವೆ. ಈ ಸೂಟ್‌ನ ಪ್ರಧಾನ ಎರಡು ಎಲೆಗಳಲ್ಲಿ ಇಂದ್ರ ದೇವ ಹಾಗೂ ಇಂದ್ರಾಣಿಯರನ್ನು ಸಾಂಕೇತಿಕವಾಗಿ ಚಿತ್ರಿಸಲಾಗಿದ್ದು, ಉಳಿದಂತೆ ಪದಾತಿ, ಸೇನಾನಿ, ಧ್ವಜ, ಹನುಮಂತ, ಗರುಡ, ಚಕ್ರ, ಶಂಖ, ಮೀನು, ಮಕರ, ವರಾಹ, ಸಿಂಹ, ಅಶ್ವ, ಮದ್ದಾನೆ, ಶರಭ, ಗರುಡ, ಸಾಲ್ವ ಚಿತ್ರಗಳು ಸಂಯೋಜಿತಗೊಂಡಿವೆ. ಈ ಚಿತ್ರಗಳು ಬಿಳಿಬಣ್ಣದಿಂದ ಸಂಯೋಜಿತಗೊಂಡಿದ್ದು, ಬೆಳಕು ನೆರಳಿನ ವರ್ಣಛಾಯೆಯಿಂದ ಬಿಂಬಿತಗೊಂಡಿವೆ. ಮಂಟಪದ ಹಿನ್ನೆಲೆಯು ಹಸಿರುವರ್ಣದಿಂದ ಕೂಡಿದ್ದು, ಪುಷ್ಪದ ಸುರುಳಿ ಚಿತ್ರವಿನ್ಯಾಸವು ಸಂಯೋಜಿತಗೊಂಡಿದೆ. ಹಿನ್ನೆಲೆಯು ಕಪ್ಪುಬಣ್ಣದಿಂದ ರಚನೆಗೊಂಡು ಚುಕ್ಕಿಗಳ ಸಂಯೋಜನೆ ಎಲ್ಲ ಎಲೆಗಳಲ್ಲಿ ಅಲಂಕೃತಗೊಂಡಿವೆ. ಇಲ್ಲಿ ರಚನೆಗೊಂಡಿರುವ ಎಲೆಗಳ ಅಂಚು, ಆಕೃತಿಗಳ ಚಲನೆ, ರೇಖಾವಿನ್ಯಾಸ ಹಾಗೂ ವರ್ಣಸಂಯೋಜನೆಯು ಹಿಂದಿನ ಆಟದ ಸೂಟಗಳಲ್ಲಿರುವಂತೆಯೇ ಅಭಿವ್ಯಕ್ತಗೊಂಡಿದೆ.

ಚಿತ್ರ ೬೬



ಇಂದ್ರ



ಶಚಿ (ಇಂದ್ರಾಣಿ)


ಪದಾತಿ


ಸೇನಾನಿ



ಧ್ವಜ


ಹನಮಂತ


ಗರುಡ


ಚಕ್ರ


ಶಂಖ



ಮೀನ



ಮಕರ


ವರಹ


ಸಿಂಹ


ಅಶ್ವ


ಮದ್ದಾನೆ


ಶರಭ

ಗಂಡುಬೇರುಂಡ



ಸಾಲ್ವ

ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

೬೭. ಕನ್ಯಾ ರಾಶಿ ಮೋಹಿನಿ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಧನಸ್ಸು ರಾಶಿ



ಮಕರ ರಾಶಿ



ತುಲಾ ರಾಶಿ

ಚಿತ್ರ – ೬೭. ಮೋಹಿನಿ ಎಲೆಗಳು

ಚಾಮುಂಡೇಶ್ವರಿ ಗಂಜೀಫಾದ ಮೋಹಿನಿ ಸಂಕೇತದ ವೃತ್ತಾಕಾರದ ಈ ಎಲೆಗಳು ರಾಶಿಗೆ ಸಂಬಂಧಿಸಿವೆ. ಇಲ್ಲಿ ಮೋಹಿನಿಯ ರೂಪಿಕೆಯನ್ನು ಆರು ರಾಶಿಗಳ ಎಲೆಗಳಲ್ಲಿ ಸಂಯೋಜಿಸಲಾಗಿದೆ. ಮೋಹಿನಿಯನ್ನು ಸಾಂಪ್ರದಾಯಿಕವಾಗಿ ಕೆಂಪುಬಣ್ಣದ ಸೀರೆ, ತಿಳಿಗುಲಾಬಿ ಬಣ್ಣದ ರವಿಕೆ ಹಾಗೂ ಸ್ವರ್ಣಾಭರಣಗಳಿಂದ ಅಲಂಕೃತಗೊಳಿಸಲಾಗಿದೆ. ಒಂದು ಕೈಯಲ್ಲಿ ಕುಂಭವನ್ನು, ಇನ್ನೊಂದು ಕೈಯನ್ನು ಮೋಹಕ ಭಂಗಿಯಲ್ಲಿ ಸಂಯೋಜಿಸಿ ವೈಯ್ಯಾರವಾಗಿ ನೆಗೆಯುತ್ತಿರುವಂತೆ ಸಂಯೋಜಿಸಲಾಗಿದೆ. ಇಲ್ಲಿ ಅಲಂಕಾರದ ಆಶಯವು ಒಡಮೂಡಿದೆ.

ಮೋಹಿನಿ ಆಕೃತಿಯ ಕೆಳಭಾಗದ ಆಯತಾಕಾರದ ಸ್ಥಳಾವಕಾಶದಲ್ಲಿ ಮೀನರಾಶಿಗೆ ಸಂಬಂಧಿಸಿದಂತೆ ಮೀನುಗಳ ಚಿತ್ರ, ಸಿಂಹರಾಶಿಯ ಎಲೆಯಲ್ಲಿ ಸಿಂಹದ ಚಿತ್ರ, ಕುಂಭರಾಶಿಯ ಎಲೆಯಲ್ಲಿ ಕುಂಭದ ಚಿತ್ರ, ಧನುಸ್ಸು ರಾಶಿಗೆ ಸಂಬಂಧಿಸಿದ ಎಲೆಯಲ್ಲಿ ಬಿಲ್ಲು-ಬಾಣದ ಚಿತ್ರ, ಮಕರದಲ್ಲಿ ಮಕರದ ಚಿತ್ರ ಹಾಗೂ ತುಲಾದಲ್ಲಿ ತಕ್ಕಡಿಯ ಸಾಂಕೇತಿಕ ಚಿತ್ರಗಳನ್ನು ರಚನೆ ಮಾಡಲಾಗಿದೆ. ಈ ಸಾಂಕೇತಿಕ ಚಿತ್ರಗಳು ಎದ್ದು ತೋರುವಂತೆ ಹಿನ್ನೆಲೆಯಲ್ಲಿ ಹಸಿರು ಮತ್ತು ಕಪ್ಪುವರ್ಣಗಳನ್ನು ಲೇಪನ ಮಾಡಲಾಗಿದೆ. ಚಿತ್ರದ ಅಂಚಿನಲ್ಲಿ ತಿಳಿಗುಲಾಬಿ ವರ್ಣಗಳಿಂದ ಕೂಡಿದ ರೇಖಾವಿನ್ಯಾಸವು ಅಲಂಕಾರಿಕವಾಗಿ ಮೂಡಿಬಂದಿದೆ. ಎಲೆಗಳಲ್ಲಿ ಸಂಯೋಜಿಸಲಾದ ಮೋಹಿನಿಯ ಚಿತ್ರವು ಸಾಂಕೇತಿಕವಾಗಿದ್ದರೂ ಸಹ ಮೈಸೂರು ಸಾಂಪ್ರದಾಯಿಕ ಚಿತ್ರಶೈಲಿಯನ್ನು ಅನುಕರಿಸುತ್ತದೆ. ಆಟದ ಎಲೆಗಳಾಗಿ ರೂಪಗೊಂಡಿದ್ದರೂ ಚಿತ್ರಲಕ್ಷಣಗಳಿಂದ ಕೂಡಿದ ದೃಷ್ಟಿಕೋನವನ್ನು ಹೊಂದಿವೆ.

ಚಿತ್ರ – ೬೮. ಸೂರ್ಯಗ್ರಹ

ಸೂರ್ಯದೇವನನ್ನು ರಾಶಿಗೆ ಸಂಬಂಧಿಸಿದ ಗಂಜೀಫಾಎಲೆಗಳಲ್ಲಿ ಒಂದೇ ಪ್ರಕೃತಿಯಾಗಿ ರಚಿಸಿ ಸಂಯೋಜಿಸಲಾಗಿದೆ. ಈ ದೇವತೆಯನ್ನು ಮೈಸೂರು ಸಾಂಪ್ರದಾಯಿಕ ಚಿತ್ರಶೈಲಿಯಲ್ಲಿ ರಚನೆ ಮಾಡಲಾಗಿದ್ದು, ದೇವತೆಯ ಕೆಳಭಾಗದ ಪಟ್ಟಿಕೆಯಲ್ಲಿ ಮೀನಿನ ಚಿತ್ರ, ಸಿಂಹದ ಚಿತ್ರ, ಕುಂಭದ ಚಿತ್ರ, ಬಾಣದ ಚಿತ್ರ, ಮಕರದ ಚಿತ್ರ ಹಾಗೂ ತಕ್ಕಡಿಯ ಸಾಂಕೇತಿಕ ಚಿತ್ರಗಳನ್ನು ಸಂಯೋಜಿಸಲಾಗಿದೆ. ಇಲ್ಲಿ ಸೂರ್ಯದೇವನು ಪದ್ಮಾಸನದಲ್ಲಿ ಕುಳಿತಿದ್ದು, ಎರಡೂ ಕೈಗಳಲ್ಲಿ ಕಮಲದ ಹೂವನ್ನು ಹಿಡಿದಿದ್ದಾನೆ. ಸಾಂಪ್ರದಾಯಿಕ ಧೋತಿ, ಕೆಂಪುಬಣ್ಣದ ಉತ್ತರೀಯವನ್ನು ಧರಿಸಿದ್ದಾನೆ. ತಲೆಯಲ್ಲಿ ಸ್ವರ್ಣಮುಕುಟ, ಕರ್ಣಾಭರಣ, ಕಂಠಾಭರಣ, ಭುಜಕೀರ್ತಿ, ತೋಳ್ಬಂದಿ, ಕಂಕಣ, ಕಾಲಲ್ಲಿ ತೋಡೆ ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ಆಕೃತಿಗಳು ಎದ್ದು ತೋರುವಂತೆ ಹಿನ್ನೆಲೆಯಲ್ಲಿ ಕಂದುಗೆಂಪು ಹಾಗೂ ಕಪ್ಪುಬಣ್ಣವನ್ನು ಚಪ್ಪಟೆಯಾಗಿ ಲೇಪನ ಮಾಡಲಾಗಿದೆ. ಚಿತ್ರಗಳಲ್ಲಿ ಹಳದಿವರ್ಣವನ್ನು ಪ್ರಧಾನವಾಗಿ ಬಳಸಿಕೊಂಡಿದ್ದು ಉಳಿದಂತೆ ಬಿಳಿ, ಹಸಿರು, ಕಪ್ಪು, ತಿಳಿಗುಲಾಬಿ ವರ್ಣಗಳನ್ನು ಸಂಯೋಜಿಸಲಾಗಿದೆ. ಸೂರ್ಯನನ್ನು ಸಾಂಕೇತಿಕವಾಗಿ ಗುರುತಿಸಲು ದೇವತೆಯ ಹಿನ್ನೆಲೆಯಲ್ಲಿ ವೃತ್ತಾಕಾರದ ಕಿರಣಗಳಿಂದ ಕೂಡಿದ ಚಿತ್ರವನ್ನು ಅಲಂಕೃತಗೊಳಿಸಲಾಗಿದೆ. ಚಿತ್ರದ ಅಂಚು ಕಪ್ಪುಬಣ್ಣದಿಂದ ಕೂಡಿದ ರೇಖಾವಿನ್ಯಾಸದ ನಕ್ಷೆಯಲ್ಲಿ ಉತ್ತಮವಾಗಿ ಮೂಡಿಬಂದಿದೆ. ಚಿತ್ರಗಳು ರೇಖೆ, ವರ್ಣ ಹಾಗೂ ಅಲಂಕಾರಿಕ ಆಶಯದಿಂದ ಕೂಡಿವೆ.

ಚಿತ್ರ ೬೮.ಸೂರ್ಯ ಸೂಟ್



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಧನಸ್ಸು ರಾಶಿ



ಮಕರ ರಾಶಿ



ತುಲಾ ರಾಶಿ

ಸಂಗ್ರಹ ; ಮಂಜುಷಾ ವಸ್ತುಸಂಗ್ರಹಾಲಯ ದರ್ಮಸ್ಥಳ

ಚಿತ್ರ – ೬೯. ಇಂದ್ರಸೂಟ್ ೨

ಚಾಮುಂಡೇಶ್ವರಿ ಗಂಜೀಫಾದ ಇಂದ್ರ ಸೂಟ್‌ನಲ್ಲಿ ಇಂದ್ರ ದೇವತೆಯನ್ನು ಪ್ರಧಾನವಾಗಿ ಸಂಯೋಜಿಸ ಲಾಗಿದೆ. ಆರು ಎಲೆಗಳಲ್ಲಿ ಇಂದ್ರದೇವತೆಯನ್ನು ಒಂದೇ ರೀತಿಯಲ್ಲಿ ರಚನೆಗೊಳಿಸಲಾಗಿದೆ. ಇಲ್ಲಿ ಇಂದ್ರನನ್ನು ಪದ್ಮಾಸನದಲ್ಲಿ ಸಂಯೋಜಿಸಿ, ಸಾಂಪ್ರದಾಯಿಕ ಧೋತಿ, ಉತ್ತರೀಯ, ಸ್ವರ್ಣಮುಕುಟ, ಕೈಯಲ್ಲಿ ವಜ್ರಾಯುಧ, ಸ್ವರ್ಣಾಭರಣ, ಹಿನ್ನೆಲೆಯಲ್ಲಿ ದೊಡ್ಡದಿಂಬು, ಅದಕ್ಕೆ ಅಲಂಕಾರಿಕ ನಕ್ಷಾವಿನ್ಯಾಸವನ್ನು ಅಳವಡಿಸಲಾಗಿದೆ. ಇಂದ್ರನು ಹಳದಿ ಮೈಬಣ್ಣ, ಚೂಪಾದ ಕಣ್ಣುಗಳು, ದುಂಡುತನದ ದೈಹಿಕ ಲಕ್ಷಣಗಳನ್ನು ಹೊಂದಿದ್ದಾನೆ. ದೇವತೆಯ ಕೆಳಭಾಗದ ಆಯತ ಪಟ್ಟಿಯಲ್ಲಿ ಮೀನ, ಸಿಂಹ, ಕುಂಭ, ಧನುಸ್ಸು, ಮಕರ ಹಾಗೂ ತುಲಾರಾಶಿಯ ಸಾಂಕೇತಿಕ ಚಿತ್ರಗಳನ್ನು ಸಂಯೋಜಿಸಲಾಗಿದೆ. ಈ ಸಾಂಕೇತಿಕ ಚಿತ್ರಗಳಲ್ಲಿ ಬಿಳಿ, ಹಸಿರು, ಕಪ್ಪು, ತಿಳಿಗುಲಾಬಿ, ಹಳದಿವರ್ಣಗಳ ಮಿಶ್ರಪದ್ಧತಿಯು ಮೂಡಿಬಂದಿದೆ. ಈ ಎಲೆಗಳು ವೃತ್ತಾಕಾರವಾಗಿದ್ದು, ಅಂಚುಗಳು ಬಿಳಿವರ್ಣದ ರೇಖಾವಿನ್ಯಾಸವನ್ನು ಹೊಂದಿವೆ. ಈ ಸಾಂಕೇತಿಕ ಆಟದ ಎಲೆಗಳಲ್ಲಿ ರೇಖೆ, ವರ್ಣ, ಅಲಂಕಾರ, ಭಾವನಿರೂಪಣೆಯು ಚಿತ್ರಲಕ್ಷಣಗಳಿಂದ ಕೂಡಿವೆ.

ಚಿತ್ರ – ೭೦. ವೀರಭದ್ರ ಸೂಟ್

ವೀರಭದ್ರ ಸೂಟ್‌ಗೆ ಸಂಬಂಧಿಸಿದ ಗಂಜೀಫಾ ಎಲೆಗಳು ವೃತ್ತಾಕಾರದಿಂದ ಕೂಡಿವೆ. ಇಲ್ಲಿ ವೀರಭದ್ರ ದೇವತೆಯು ಚತುರ್ಭುಜಧಾರಿಯಾಗಿದ್ದು, ನಾಲ್ಕು ಕೈಗಳಲ್ಲಿ ಬಾಣ, ಭರ್ಚಿ, ಧನುಸ್ಸನ್ನು ಹಿಡಿದಿದ್ದಾನೆ. ವೀರಭದ್ರನು ಪದ್ಮಾಸನದ ಭಂಗಿಯಲ್ಲಿ ಕುಳಿತು ವಸ್ತ್ರಾಭರಣಗಳಿಂದ ಸಂಯೋಜನೆಗೊಂಡಿರುವನು. ಮುಖದಲ್ಲಿ ಹುರಿಮೀಸೆ, ಅಗಲ ಕಣ್ಣುಗಳು, ಹಣೆಯಲ್ಲಿ ಭಸ್ಮ, ಸಿಂಧೂರ, ಶಿರದ ಹಿಂದೆ ಅಗ್ನಿಯ ಕುಂಜವನ್ನು ಹೊಂದಿದ್ದು, ಇಲ್ಲಿ ಉಗ್ರಸ್ವರೂಪವನ್ನು ಕಾಣಬಹುದಾಗಿದೆ. ಈ ದೇವತೆಯನ್ನು ಸಾಂಕೇತಿಕವಾಗಿ ಚಿತ್ರಿಸಲಾಗಿದ್ದು, ಆಕಾಶ ನೀಲಿಯ ಬಣ್ಣವನ್ನು ಸಂಯೋಜಿಸಲಾಗಿದೆ. ದೇವತೆಯ ದೈಹಿಕ ಲಕ್ಷಣಗಳು ದುಂಡುತನದಿಂದ ಕೂಡಿವೆ. ಮೈಸೂರು ಸಾಂಪ್ರದಾಯಿಕ ಚಿತ್ರಶೈಲಿಯಲ್ಲಿ ಈ ದೇವತೆಯನ್ನು ರಚನೆ ಮಾಡಲಾಗಿದೆ. ಇಲ್ಲಿ ಲಭ್ಯವಿರುವ ಆರು ಎಲೆಗಳಲ್ಲಿ ಈ ವೀರಭದ್ರ ದೇವತೆಯನ್ನು ಒಂದೇ ರೀತಿಯಲ್ಲಿ ಪ್ರತಿಕೃತಿ ಮಾಡಲಾಗಿದೆ.

ವೀರಭದ್ರ ದೇವತೆಯ ಕೆಳಭಾಗದ ಪಟ್ಟಿಕೆಯಲ್ಲಿ ಜೋಡಿ ಮೀನುಗಳು, ಸಿಂಹ, ಕುಂಭ, ಧನುಸ್ಸು, ಮಕರ ಹಾಗೂ ತುಲಾರಾಶಿಯ ಸಾಂಕೇತಿಕ ಚಿತ್ರಗಳನ್ನು ಸಂಯೋಜಿಸಲಾಗಿದೆ. ಚಿತ್ರಗಳು ಎದ್ದುತೋರುವಂತೆ ಹಿನ್ನೆಲೆಯಲ್ಲಿ ಕಪ್ಪು ಹಾಗೂ ಕೆಂಪುಬಣ್ಣಗಳನ್ನು ಚಪ್ಪಟೆಯಾಗಿ ಲೇಪನ ಮಾಡಲಾಗಿದೆ. ಎಲೆಗಳ ಅಂಚು ಕಪ್ಪುಬಣ್ಣದಿಂದ ಕೂಡಿದ್ದು, ನಡುವೆ ಬಿಳಿಬಣ್ಣದ ರೇಖೆ ಹಾಗೂ ಚುಕ್ಕಿಗಳ ನಕ್ಷಾವಿನ್ಯಾಸವನ್ನು ಹೊಂದಿದೆ. ಈ ದೇವತೆಯನ್ನು ಹಾಗೂ ರಾಶಿಗಳನ್ನು ಆಟಕ್ಕೆ ಸಾಂಕೇತಿಕವಾಗಿ ಬಳಸಿಕೊಂಡಿದ್ದರೂ ಸಹ ಚಿತ್ರಲಕ್ಷಣಗಳಿಂದ ಪ್ರತಿಬಿಂಬಿತಗೊಂಡಿವೆ. ಅಲಂಕರಣದ ಯಶವು ಈ ಗಂಜೀಫಾ ಎಲೆಗಳಲ್ಲಿ ಉದ್ದೀಪನಗೊಂಡಿದೆ.

ಚಿತ್ರ – ೭೧. ನಾಗ ಗಂಜೀಫಾ ಸೂಟ್

ನಾಗ ಸೂಟ್‌ಗೆ ಸಂಬಂಧಿಸಿದ ಗಂಜೀಫಾ ಎಲೆಗಳು ವೃತ್ತಾಕಾರದಲ್ಲಿ ರಚನೆಗೊಂಡಿವೆ. ಮೈಸೂರು ಸಾಂಪ್ರದಾಯಿಕ ಚಿತ್ರಶೈಲಿಯಲ್ಲಿ ರಚನೆಗೊಂಡಿರುವ ಈ ಎಲೆಗಳಲ್ಲಿ ನಾಗದೇವನನ್ನು ಅರ್ಧಮಾನವ ರೂಪ, ಇನ್ನರ್ಧ ಹಾವಿನ ರೂಪದಿಂದ ಚಿತ್ರಿಸಲಾಗಿದೆ. ಪಾರ್ಶ್ವಮುಖಭಾವವನ್ನು ಹೊಂದಿರುವ

೬೯ ಚಿತ್ರ ಇಂದ್ರಾ ಸೂಟ್



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಧನಸ್ಸು ರಾಶಿ



ಮಕರ ರಾಶಿ



ತುಲಾ ರಾಶಿ

ಸಂಗ್ರಹ ; ಮಂಜುಷಾ ವಸ್ತುಸಂಗ್ರಹಾಲಯ ಧರ್ಮಸ್ಥಳ

ಚಿತ್ರ ವೀರಭದ್ರ ಸೂಟ್



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಧನಸ್ಸು ರಾಶಿ



ಮಕರ ರಾಶಿ



ತುಲಾ ರಾಶಿ

ಚಿತ್ರ ೭೧ ನಾಗ ಸೂಟ್



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಧನಸ್ಸು ರಾಶಿ



ಮಕರ ರಾಶಿ



ತುಲಾ ರಾಶಿ

ನಾಗದೇವನು ದ್ವಿಭುಜಧಾರಿಯಾಗಿ ಒಂದು ಕೈಯಲ್ಲಿ ಕಮಲದ ಹೂವನ್ನು, ಇನ್ನೊಂದು ಕೈಯು ಗಜಹಸ್ತರೂಪವಾಗಿ ಬಿಂಬಿತಗೊಂಡಿದೆ. ಇವನನ್ನು ಗೌರವರ್ಣದಿಂದ ಸಂಯೋಜಿಸಿ, ತಲೆಯ ಮೇಲೆ ಶೇಷ, ಮುಕುಟವನ್ನು, ಕರ್ಣಾಭರಣಗಳನ್ನು, ಕಂಠಾಭರಣಗಳನ್ನು, ಭುಜಕೀರ್ತಿ, ತೋಳ್ಬಂದಿ, ಕೈಕಂಕಣದಿಂದ ಅಲಂಕರಿಸಲಾಗಿದೆ. ಈ ಪ್ರತಿಕ್ರಿಯೆಯನ್ನು ಆರು ರಾಶಿಯ ಎಲೆಗಳಲ್ಲಿ ಯಥಾವತ್ತಾಗಿ ಚಿತ್ರಿಸಲಾಗಿದೆ. ಈ ದೇವತೆಯ ಕೆಳಭಾಗದ ಆಯತಾಕಾರದ ಪಟ್ಟಿಕೆಯಲ್ಲಿ ಮೀನಿನ ಚಿತ್ರ, ಸಿಂಹ, ಕುಂಭ, ಧನುಸ್ಸು, ಮಕರ ಹಾಗೂ ತುಲಾದ ಸಾಂಕೇತಿಕ ಚಿತ್ರಗಳನ್ನು ಸಂಯೋಜಿಸಲಾಗಿದೆ. ಚಿತ್ರಗಳು ಎದ್ದುತೋರುವಂತೆ ಹಿನ್ನೆಲೆಯಲ್ಲಿ ಕಪ್ಪುಬಣ್ಣವನ್ನು ಲೇಪಿಸಲಾಗಿದೆ. ಎಲೆಗಳ ಅಂಚು ಕೆಂಪುಬಣ್ಣದಿಂದ ಕೂಡಿದ್ದು, ನಡುವೆ ಚುಕ್ಕಿಗಳ ನಕ್ಷೆಯನ್ನು ಚಿತ್ರಿಸಲಾಗಿದೆ. ಈ ಕ್ರಮ ಆರು ಎಲೆಗಳಲ್ಲಿ ಏಕರೂಪವಾಗಿ ಬಿಂಬಿತಗೊಂಡಿದೆ. ಈ ಎಲೆಗಳಲ್ಲಿ ಬಿಂಬಿತಗೊಂಡಿರುವ ನಾಗದೇವತೆಯ ಚಿತ್ರ, ರೇಖಾ ಸಂಯೋಜನೆ, ವರ್ಣಸಂಯೋಜನೆ, ನಿರೂಪಣಾ ಕ್ರಮವು ಚಿತ್ರಲಕ್ಷಣಗಳಿಂದ ಒಡಮೂಡಿದೆ.

ಚಿತ್ರ – ೭೨. ಬ್ರಹ್ಮಸೂಟ್

ಚಾಮುಂಡೇಶ್ವರಿ ಗಂಜೀಫಾದಲ್ಲಿ ವಿಶೇಷವಾಗಿ ಪೌರಾಣಿಕ ದೇವತೆಗಳನ್ನು ಬಳಸಿಕೊಂಡು ಹಾಗೂ ರಾಶಿಫಲಕ್ಕೆ ಸಂಬಂಧಿಸಿದ ಸಂಕೇತಗಳನ್ನು ಬಳಸಿಕೊಂಡು ಗಂಜೀಫಾ ಆಟದ ಎಲೆಗಳನ್ನು ರಚನೆ ಮಾಡಿರುವುದು ವಿಶೇಷವಾಗಿದೆ. ೧೮–೧೯ನೇ ಶತಮಾನಗಳಲ್ಲಿ ಮಾರುಕಟ್ಟೆಯಲ್ಲಿ ನವೀನ ಮಾದರಿಯ ಪಾಶ್ಚಿಮಾತ್ಯರ ಆಟದ ಎಲೆಗಳು ಲಭ್ಯವಾಗಿದ್ದರೂ ಸಹ ಮುಮ್ಮಡಿಯವರು ದೇಶಿಶೈಲಿಯ ಗಂಜೀಫಾ ಎಲೆಗಳಿಗೆ ಆದ್ಯತೆ ನೀಡಿರುವುದು ಅವರ ಕಲೆಯ ಔದಾರ್ಯವನ್ನು ತೋರಿಸುತ್ತದೆ. ಇಲ್ಲಿ ಆಟದ ಜೊತೆಗೆ ನಮ್ಮ ದೇವರು, ಧರ್ಮ, ಆಚಾರ–ವಿಚಾರವನ್ನು ಪ್ರತಿನಿಧಿಸುತ್ತವೆ.

ಇಲ್ಲಿ ಚತುರ್ಮುಖ ಬ್ರಹ್ಮನನ್ನು ಆಟದ ಎಲೆಗಳಿಗೆ ಬಳಸಿಕೊಳ್ಳಲಾಗಿದೆ. ಚತುರ್ಭುಜಧಾರಿಯಾದ ಬ್ರಹ್ಮನು ಪದ್ಮಾಸನದಲ್ಲಿ ಕುಳಿತಿದ್ದು, ಎರಡು ಕೈಗಳಲ್ಲಿ ಆಯುಧಗಳನ್ನು ಹಿಡಿದು ಇನ್ನೆರಡು ಕೈಗಳನ್ನು ಅಭಯಹಸ್ತ ಹಾಗೂ ಗಜಹಸ್ತವಾಗಿ ಹೊಂದಿದ್ದಾನೆ. ನಾಲ್ಕು ಶಿರಗಳನ್ನು ಹೊಂದಿದ ದೇವತೆಯು ಸ್ವರ್ಣಮುಕುಟ ಹಾಗೂ ಇತರ ಆಭರಣಗಳಿಂದ ಭೂಷಿತಗೊಂಡಿದ್ದಾನೆ. ಸಾಂಪ್ರದಾಯಿಕ ಧೋತಿ ಹಾಗೂ ಉತ್ತರೀಯವನ್ನು ಹೊಂದಿದ್ದು ಉತ್ತಮ ಭಾವನಿರೂಪಣೆಯು ದೇವತೆಯ ದೈಹಿಕ ಲಕ್ಷಣಗಳಲ್ಲಿ ಉದ್ದೀಪನಗೊಂಡಿದೆ. ಈ ದೇವತೆಯ ಕೆಳಭಾಗದಲ್ಲಿನ ಪಟ್ಟಿಕೆಯಲ್ಲಿ ಮೀನು, ಸಿಂಹ, ಧನುಸ್ಸು, ಮಕರ ಹಾಗೂ ತುಲಾದ ಸಾಂಕೇತಿಕ ಚಿತ್ರಗಳನ್ನು ಸಂಯೋಜಿಸಲಾಗಿದೆ. ಹಿನ್ನೆಲೆಯಲ್ಲಿ ಹಳದಿ ಹಾಗೂ ಕಪ್ಪುಬಣ್ಣದ ಚಿತ್ರ, ಅಂಚಿನಲ್ಲಿ ಕಪ್ಪುಬಣ್ಣದ ಮಧ್ಯದಲ್ಲಿ ರೇಖಾನಕ್ಷೆಯನ್ನು ಹೊಂದಿದೆ. ಚಿತ್ರಗಳು ಒಂದೇ ರೀತಿಯಲ್ಲಿ ಕಂಡುಬರುತ್ತಿದ್ದರೂ ರಚನಾಕ್ರಮದಲ್ಲಿ ಹಾಗೂ ಸಾಂಕೇತಿಕ ರಾಶಿಚಿತ್ರಗಳಿಂದ ವೈವಿಧ್ಯವನ್ನು ಕಾಣಬಹುದಾಗಿದೆ.

ಚಿತ್ರ – ೭೩. ಷಣ್ಮುಗ ಸೂಟ್

ಷಣ್ಮುಗ ಸೂಟ್‌ಗೆ ಸಂಬಂಧಿಸಿದ ಆರು ಎಲೆಗಳಲ್ಲಿ ಷಣ್ಮುಗ ದೇವತೆಯನ್ನು ಸಂಯೋಜಿಸಲಾಗಿದೆ. ಆರು ಮುಖಗಳನ್ನು ಹೊಂದಿದ ಈ ದೇವತೆಯು ಪದ್ಮಾಸನದಲ್ಲಿ ಕುಳಿತಿದ್ದು, ಚತುರ್ಭುಜಧಾರಿಯಾಗಿದ್ದಾನೆ. ಎರಡು ಕೈಗಳಲ್ಲಿ ಸಾಂಕೇತಿಕ ಆಯುಧಗಳನ್ನು ಹಿಡಿದಿದ್ದಾನೆ. ಇನ್ನೆರಡು ಕೈಗಳಲ್ಲಿ ಅಭಯ ಹಸ್ತ ಹಾಗೂ ಗಜಹಸ್ತವಾಗಿ ಬಿಂಬಿತಗೊಂಡಿದ್ದಾನೆ. ಗೌರವರ್ಣದ ಮೈಬಣ್ಣವನ್ನು ಹೊಂದಿದ ಈ ದೇವತೆಯು

ಚಿತ್ರ - ೭೨ ಚತುಮುಖ ಬ್ರಹ್ಮ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಧನಸ್ಸು ರಾಶಿ



ಮಕರ ರಾಶಿ



ತುಲಾ ರಾಶಿ

೭೩. ಷಣ್ಮುಗ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಧನಸ್ಸು ರಾಶಿ



ಮಕರ ರಾಶಿ



ತುಲಾ ರಾಶಿ

ಸಾಂಪ್ರದಾಯಿಕ ಧೋತಿ, ಉತ್ತರೀಯ, ಸ್ವರ್ಣಮುಕುಟ ಹಾಗೂ ವಿವಿಧ ಆಭರಣಗಳಿಂದ ಭೂಷಿತಗೊಂಡಿದ್ದಾನೆ. ಹಿನ್ನೆಲೆಯಲ್ಲಿ ದಟ್ಟ ನೀಲಿ, ಹಸಿರು, ಕಪ್ಪುಬಣ್ಣವನ್ನು ಚಿತ್ರಗಳು ಎದ್ದುತೋರುವಂತೆ ಸಂಯೋಜಿಸಲಾಗಿದೆ.

ದೇವತೆಯ ಕೆಳಭಾಗದ ಆಯತಾಕಾರದ ಪಟ್ಟಿಯಲ್ಲಿ ಶ್ವೇತವರ್ಣದ ಮೀನು, ಸಿಂಹ, ಕುಂಭ, ಧನುಸ್ಸು, ಮಕರ ಹಾಗೂ ತುಲಾದ ಸಾಂಕೇತಿಕ ಚಿತ್ರಗಳನ್ನು ಅಳವಡಿಸಲಾಗಿದೆ. ಎಲೆಗಳ ಅಂಚು ಕೆಂಪುಬಣ್ಣದಿಂದ ಕೂಡಿದ್ದು ನಡುವೆ ರೇಖೆ ಹಾಗೂ ಚುಕ್ಕಿಗಳ ನಕ್ಷೆಯನ್ನು ಸಂಯೋಜಿಸಲಾಗಿದೆ. ಈ ಚಿತ್ರಗಳಲ್ಲಿ ಕೆಂಪು, ನೀಲಿ, ತಿಳಿಹಸಿರು, ಹಳದಿ, ಬಿಳಿ, ಗುಲಾಬಿ, ಕಪ್ಪು ಹಾಗೂ ಹಸಿರುಬಣ್ಣಗಳ ಸಂಯೋಜನೆಯನ್ನು ಕಾಣಬಹುದಾಗಿದೆ. ಈ ಚಿತ್ರಗಳಲ್ಲಿ ರೇಖಾಪ್ರಾಧಾನ್ಯದ ಜೊತೆಗೆ ವರ್ಣ ಛಾಯೆಗಳನ್ನು ದೇವತೆಯ ಪ್ರತಿಮೆಯಲ್ಲಿ ಕಾಣುತ್ತೇವೆ. ಒಟ್ಟಾರೆ ಚಿತ್ರಗಳು ಅಲಂಕಾರಿಕ ಪ್ರಜ್ಞೆಯಿಂದ ಕೂಡಿದ್ದು, ಮೈಸೂರು ಸಾಂಪ್ರದಾಯಿಕ ಚಿತ್ರಶೈಲಿಯನ್ನು ಪ್ರತಿನಿಧಿಸುತ್ತವೆ.

ಚಿತ್ರ – ೭೪. ನವೀನ ರಾಮ ಛದ್

ನವೀನ ರಾಮ ಛದ್‌ದಲ್ಲಿ ನಾಲ್ಕು ಸೂಟ್‌ಗಳು ಬರುತ್ತವೆ. ಅದರಲ್ಲಿ ಮೂವತ್ತಾರು ಚೌಕಾಕಾರದ ಎಲೆಗಳು ಬರುತ್ತವೆ. ನಾಲ್ಕು ಜಾಕಿ, ಹಸಿರು ಕೆಂಪು, ಹಳದಿ, ಕಪ್ಪುಬಣ್ಣವನ್ನು ಹೊಂದಿದ ಒಂದು ಜಾಕಿಯಲ್ಲಿ ಒಂಭತ್ತು ಎಲೆಗಳು, ಇದರಲ್ಲಿ ರಾಜ, ರಾಣಿ, ಸೇನಾನಿಗಳಿಗಾಗಿ, ರಾಮ, ಸೀತಾ, ಹನುಮ, ಸುಗ್ರೀವ, ಲಕ್ಷ್ಮಣ, ಭರತ, ಇವರು ಬಂದು ರಾಮನ ಆಯುಧಗಳಾದ ಬಿಲ್ಲು, ಬಾಣ, ಛತ್ರಿ ಮತ್ತು ಚಾಮರಗಳ ಎಲೆಗಳಿಗೆ ಏಣಿಗಳಾಗಿರುತ್ತವೆ.

ಚಿತ್ರ – ೭೫. ರಾಜ (ರಾಮ) ಸೂಟ್

ರಾಮನು ಹಳದಿವರ್ಣದಿಂದ ಚಿತ್ರಿತಗೊಂಡಿದ್ದಾನೆ. ತಲೆಗೆ ಕಿರೀಟ ಧರಿಸಿ, ಕಿವಿಯಲ್ಲಿ ಕರ್ಣಕುಂಡಲ, ಕರ್ಣಾಭರಣಗಳನ್ನು ಧರಿಸಿದ್ದಾನೆ. ಹಳದಿಬಣ್ಣದ ದೋತಿ ಹಾಗೂ ಕೆಂಪುವರ್ಣದ ದುಪ್ಪಟ್ಟಾವನ್ನು ಧರಿಸಿ, ಕೆಂಪುವರ್ಣದ ಪೀಠದ ಮೇಲೆ ಸುಖಾಸನದಲ್ಲಿ ಕುಳಿತಿದ್ದಾನೆ. ಪೀಠದ ಮೇಲೆ ಬಂಗಾರವರ್ಣದ ಛತ್ರಿ ಇದೆ. ಎರಡು ಕೈಗಳು ವರದಮುದ್ರೆಯಿಂದ ಕೂಡಿವೆ. ಪೀಠದ ಹಿಂಭಾಗ ಕಪ್ಪುವರ್ಣದಿಂದ ಕೂಡಿದೆ. ಚಿತ್ರದ ಮುಂಭಾಗದಲ್ಲಿ ಬಂಗಾರವರ್ಣದ ಅಲಂಕಾರಿಕ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಪೀಠದ ಬಲಭಾಗದ ಮೇಲಕ್ಕೆ ಬಿಳಿ ಮತ್ತು ಹಳದಿವರ್ಣದಿಂದ ಕೂಡಿದ ಚಾಮರವಿದೆ. ಕಪ್ಪು, ಕೆಂಪು, ಹಳದಿಗಳನ್ನು ಪ್ರಧಾನವಾಗಿ ಬಳಸಿ, ಸೂಕ್ಷ್ಮ ರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕವಾಗಿದ್ದು ಗೆರೆಗಳಿಂದ ಅಲಂಕರಿಸಲಾಗಿದೆ.

ರಾಣಿ (ಸೀತಾ)

ತಿಳಿಹಳದಿ ಬಣ್ಣದಲ್ಲಿ ಚಿತ್ರಿತಗೊಂಡ ರಾಣಿ ಕಿರೀಟಧಾರಿಯಾಗಿ ಕಿವಿಯಲ್ಲಿ ಕರ್ಣಕುಂಡಲ, ಕರ್ಣಾಭರಣಗಳನ್ನು ಧರಿಸಿದ್ದಾಳೆ. ಕೆಂಪುಬಣ್ಣದ ಸೀರೆ, ಹಳದಿವರ್ಣದ ಕುಪ್ಪಸವನ್ನು ಧರಿಸಿ, ಬಂಗಾರವರ್ಣದ ಪೀಠದ ಮೇಲೆ ಕುಳಿತಿದ್ದಾಳೆ. ಎರಡು ಕೈಗಳು ವರದಮುದ್ರೆಯಿಂದ ಕೂಡಿವೆ. ಪೀಠದ ಮೇಲೆ ಬಂಗಾರವರ್ಣದ ಛತ್ರಿ ಇದೆ. ಪೀಠದ ಬಲಭಾಗದ ಮೂಲೆಯಲ್ಲಿ ಬಿಳಿ ಹಾಗೂ ಹಳದಿವರ್ಣದ ಚಾಮರವಿದೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪುವರ್ಣದ ಲೇಪನವಿದೆ. ಚಿತ್ರದ ಮುಂಭಾಗದಲ್ಲಿ ಬಂಗಾರವರ್ಣದ ಅಲಂಕಾರಿಕ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಕಪ್ಪು, ಕೆಂಪು, ಹಳದಿಗಳನ್ನು

ಪ್ರಧಾನವಾಗಿ ಬಳಸಿ, ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕವಾಗಿದ್ದು ಗೆರೆಗಳಿಂದ ಅಲಂಕರಿಸಲಾಗಿದೆ.

ಲಕ್ಷ್ಮಣ

ಹಳದಿವರ್ಣದಲ್ಲಿ ಚಿತ್ರಿತಗೊಂಡು ಕಿರೀಟಧಾರಿಯಾಗಿ ಕಿವಿಯಲ್ಲಿ ಕರ್ಣಕುಂಡಲಗಳನ್ನು, ಕರ್ಣಾಭರಣಗಳನ್ನು ಧರಿಸಿದ್ದಾನೆ. ಕಡುಹಳದಿ ವರ್ಣದ ಧೋತಿಯನ್ನು ಧರಿಸಿ, ಕೈಮೇಲೆ ಕೆಂಪುವರ್ಣದ ದುಪ್ಪಟ್ಟಾವನ್ನು ಧರಿಸಿದ್ದಾನೆ. ಎಡಗೈಯಲ್ಲಿ ಬಂಗಾರವರ್ಣದ ಬಿಲ್ಲನ್ನು ಹೆಗಲ ಮೇಲಿಟ್ಟು ನೇರವಾಗಿ ನಿಂತಿರುವ ದೃಶ್ಯವಿದ್ದು, ಕಾಲುಗಳನ್ನು ಮಾತ್ರ ಪಾರ್ಶ್ವಮುಖಕ್ಕೆ ತಿರುಗಿಸಲಾಗಿದೆ. ಬಲಭುಜದ ಮೇಲೆ ಬತ್ತಳಿಕೆ ಇದೆ. ಪಕ್ಕದಲ್ಲಿ ಬಿಳಿ ಹಾಗೂ ಹಳದಿವರ್ಣವಿರುವ ಚಿಕ್ಕ ಚಾಮರವಿದೆ. ಚಿತ್ರದ ಹಿನ್ನೆಲೆಯಲ್ಲಿ ಗಾಢವಾದ ಕಪ್ಪುವರ್ಣವಿದೆ. ಚಿತ್ರದ ಮುಂಭಾಗದಲ್ಲಿ ಬಂಗಾರವರ್ಣದ ಅಲಂಕಾರಿಕ ವಾಸ್ತುವಿನ್ಯಾಸವನ್ನು ರಚಿಸಲಾಗಿದೆ. ಕಪ್ಪು, ಕೆಂಪು,ಹಳದಿಗಳನ್ನು ಪ್ರಧಾನವಾಗಿ ಬಳಸಿ, ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ. ಎಲೆಯ ಅಂಚು ಜ್ಯಾಮಿತಿಕವಾಗಿದ್ದು ಗೆರೆಗಳಿಂದ ಅಲಂಕರಿಸಲಾಗಿದೆ.

ಎಣಿಕೆ ಎಲೆಗಳಲ್ಲಿ ಒಂದರಿಂದ ಹತ್ತರವರೆಗೆ ಚಾಮರಗಳನ್ನು ಚಿತ್ರಿಸಿದ್ದಾರೆ. ಒಂದನೆ ಎಲೆಯಲ್ಲಿ ಒಂದು, ಎರಡನೆಯದ್ದರಲ್ಲಿ ಎರಡು, ಮೂರರಲ್ಲಿ ಮೂರು, ನಾಲ್ಕರಲ್ಲಿ ನಾಲ್ಕು ಚಾಮರಗಳು, ಐದರಲ್ಲಿ ಐದು, ಆರರಲ್ಲಿ ಆರು ಚಾಮರಗಳು, ಏಳರಲ್ಲಿ ಏಳು, ಎಂಟರಲ್ಲಿ ಎಂಟು, ಒಂಭತ್ತರಲ್ಲಿ ಒಂಭತ್ತು, ಹತ್ತರಲ್ಲಿ ಹತ್ತು ಬಿಳಿವರ್ಣ ಹಾಗೂ ಹಳದಿವರ್ಣದಿಂದ ಕೂಡಿದ ಚಾಮರಗಳಿವೆ. ಚಿತ್ರಗಳ ಮುಂಭಾಗದಲ್ಲಿ ಬಂಗಾರವರ್ಣದ ಅಲಂಕಾರಿಕ ನಕ್ಷೆಗಳಿವೆ. ಎಲ್ಲಾ ಎಲೆಯ ಅಂಚುಗಳು ಜ್ಯಾಮಿತಿಕವಾಗಿದ್ದು ಗೆರೆಗಳಿಂದ ಅಲಂಕರಿಸಲಾಗಿದೆ.

ಚಿತ್ರ – ೭೬. ನವೀನ್ ರಾಮ್ ಛದ್

ಈ ಸೂಟ್‌ನಲ್ಲಿ ರಾಮ, ಸೀತಾ ಮತ್ತು ಭರತರು ಪ್ರಧಾನವಾಗಿ ಬರುತ್ತಾರೆ. ಇಲ್ಲಿ ರಾಮನ ಆಯುಧವನ್ನು ಎಂಟು ಚೌಕಾಕಾರದ ಎಲೆಗಳಲ್ಲಿ ಕಾಣಬಹುದು. ಹಿನ್ನೆಲೆಯಲ್ಲಿ ಕೆಂಪುವರ್ಣ ಬಳಸಲಾಗಿದೆ.

ಸೀತೆಯು ಹಸಿರುಬಣ್ಣದ ಸೀರೆ ಮತ್ತು ಹಳದಿಬಣ್ಣದ ಕುಪ್ಪಸವನ್ನು ಧರಿಸಿ, ಪದ್ಮಾಸನದಲ್ಲಿ ಬಂಗಾರ ವರ್ಣದ ಪೀಠದ ಮೇಲೆ ಕುಳಿತಿದ್ದರೆ, ರಾಮನು ಕಡುಹಳದಿ ಧೋತಿಯನ್ನು ಧರಿಸಿ, ಹಸಿರುವರ್ಣದ ದುಪ್ಪಟ್ಟಾವನ್ನು ಧರಿಸಿ, ಸುಖಾಸನಭಂಗಿಯಲ್ಲಿ ಬಂಗಾರವರ್ಣದ ಪೀಠದ ಮೇಲೆ ಕುಳಿತಿರುವನು. ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ.

ಭರತ

ಭರತನು ಹಳದಿವರ್ಣದಲ್ಲಿ ಚಿತ್ರಿತನಾಗಿದ್ದಾನೆ. ತಲೆಗೆ ಕಿರೀಟ ಧರಿಸಿ, ಕರ್ಣಕುಂಡಲ ಹಾಗೂ ಕರ್ಣಾಭರಣಗಳನ್ನು ಧರಿಸಿದ್ದಾನೆ. ಕಡುಹಳದಿಯ ಧೋತಿಯನ್ನು ಧರಿಸಿ, ಹಸಿರುವರ್ಣದ ದುಪ್ಪಟ್ಟಾವನ್ನು ಧರಿಸಿ ಎದುರುಮುಖವಾಗಿ ಸಾವಧಾನದ ಭಂಗಿಯಲ್ಲಿ ನಿಂತಿರುವನು. ಎಡಗೈಯ ಹೆಗಲ ಮೇಲೆ ಬಿಲ್ಲನ್ನು ಹಾಗೂ ಬಲಗೈ ಭುಜದ ಹಿಂದೆ ಬಾಣಗಳನ್ನು ಧರಿಸಿ, ಎರಡು ಕೈಗಳು ವರದಮುದ್ರೆಯಿಂದ ಶೋಭಿತಗೊಂಡಿವೆ. ಬಲಭಾಗದಲ್ಲಿ ಮೇಲೆ ರಾಮನ ಆಯುಧ ಒಂದು ಬಾಣದ ಚಿಹ್ನೆ ಇದೆ. ಚಿತ್ರದ ಮುಂದೆ ಬಂಗಾರವಣದ ಅಲಂಕಾರಿಕ ವಾಸ್ತುವಿನ್ಯಾಸವಿದೆ. ಕೆಂಪು, ಹಳದಿ, ಹಸಿರು ಬಣ್ಣಗಳನ್ನು

ಚಿತ್ರ ೭೫



ಸೀತಾ ರಾಮ ಲಕ್ಷ್ಮಣ



ಚಿತ್ರ ೭೬



ಸೀತಾ ಭರತ ರಾಮ



ಬಳಸಿ ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ.

ಎಣಿಕೆ ಎಲೆಗಳಲ್ಲಿ ಒಂದರಿಂದ ಹತ್ತರವರೆಗೆ ರಾಮನ ಆಯುಧ ಬಾಣವನ್ನು ಚಿತ್ರಿಸಿದ್ದಾರೆ. ಒಂದನೇ ಎಲೆಯಲ್ಲಿ ಒಂದು, ಎರಡನೆ ಎಲೆಯಲ್ಲಿ ಎರಡು, ಮೂರನೆ ಎಲೆಯಲ್ಲಿ ಮೂರು, ನಾಲ್ಕರಲ್ಲಿ ನಾಲ್ಕು ಬಾಣಗಳು, ಐದರಲ್ಲಿ ಐದು, ಆರರಲ್ಲಿ ಆರು ಬಾಣಗಳು, ಏಳರಲ್ಲಿ ಏಳು, ಹೀಗೆ ಹತ್ತರವರೆಗೆ ಹತ್ತು ಬಾಣಗಳನ್ನು ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಕೆಂಪುವರ್ಣ ಹಾಗೂ ಚಿತ್ರದ ಮುಂಭಾಗದಲ್ಲಿ ಬಂಗಾರವರ್ಣದ ಅಲಂಕಾರಿಕ ನಕ್ಷೆಯನ್ನು ರಚಿಸಲಾಗಿದೆ. ಕೆಂಪು, ಹಳದಿ, ಕಪ್ಪುವರ್ಣಗಳನ್ನು ಬಳಸಿ ರಚಿಸಿದ ಎಂಟು ಎಲೆಯ ಅಂಚುಗಳು ಜ್ಯಾಮಿತಿಕವಾಗಿದ್ದು ಗೆರೆಗಳಿಂದ ಅಲಂಕೃತಗೊಂಡಿವೆ.

ಚಿತ್ರ – ೭೭. ನವೀನ್ ರಾಮ್ ಛದ್

ಮೂರನೆ ಸೂಟ್‌ದಲ್ಲಿ ರಾಮ, ಸೀತಾ, ಸುಗ್ರೀವರು ಪ್ರಧಾನ ಎಲೆಗಳಾಗಿ ಬರುತ್ತಾರೆ. ರಾಮನ ಆಯುಧ ವನ್ನು ಎಂಟು ಚೌಕಾಕಾರದ ಎಲೆಗಳಲ್ಲಿ ಬರುತ್ತವೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣವನ್ನು ಬಳಸಲಾಗಿದೆ. ರಾಮನು ಕಡುಹಳದಿ ವರ್ಣದ ಧೋತಿ ಹಾಗೂ ಕೆಂಪುವರ್ಣದ ದುಪ್ಪಟ್ಟಾವನ್ನು ಧರಿಸಿದ್ದು, ಉಳಿದಂತೆ ಕಿರೀಟ, ಕರ್ಣಾಭರಣಗಳನ್ನು ಧರಿಸಿ, ಸುಖಾಸನದಲ್ಲಿ ಹಸಿರುವರ್ಣದ ಪೀಠದ ಮೇಲೆ ಕುಳಿತಿದ್ದಾನೆ. ಬಲಗೈಯಲ್ಲಿ ಬಾಣವನ್ನು ಹಿಡಿದಿದ್ದಾನೆ. ಸೀತೆಯು ಕೆಂಪುವರ್ಣದ ಸೀರೆ, ಹಳದಿವರ್ಣದ ಕುಪ್ಪಸವನ್ನು ಧರಿಸಿ, ಕಂಠಾಭರಣಗಳು ಹಾಗೂ ತೋಳಬಂಧಿಯನ್ನು ಧರಿಸಿ, ಬಂಗಾರವರ್ಣದ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾಳೆ.

ಸುಗ್ರೀವ

ಬಿಳಿವರ್ಣದಿಂದ ಚಿತ್ರಿತಗೊಂಡಿರುವ ಸುಗ್ರಿವ ಕಿರೀಟ, ಕರ್ಣಾಭರಣ, ತೋಳಬಂಧಿಗಳನ್ನು ಧರಿಸಿದ್ದಾನೆ. ಕೆಂಪು ವರ್ಣದ ಲಂಗೋಟಿಯನ್ನು ಧರಿಸಿ ಹಸಿರುವರ್ಣದ ದುಪ್ಪಟ್ಟವನ್ನು ನಡಕ್ಕೆ ಬಿಗಿಯಲಾಗಿದೆ. ಭಕ್ತಿಭಾವದಿಂದ ಎರಡು ಕೈಗಳಿಂದ ನಮಸ್ಕರಿಸುತ್ತ ಪಾರ್ಶ್ವಮುಖಕ್ಕೆ ಹೊರಟಿದ್ದಾನೆ. ಉದ್ದವಾದ ಬಾಲ ತಲೆಯ ಮೇಲೆ ಬಂದಿದೆ. ಮುಂಭಾಗದಲ್ಲಿ ಬಾಣದ ಚಿಹ್ನೆ ಇದೆ. ಚಿತ್ರದ ಮುಂಭಾಗದಲ್ಲಿ ಬಂಗಾರವರ್ಣದ ಅಲಂಕಾರಿಕ ವಸ್ತುವಿನ್ಯಾಸವಿದೆ. ಕೆಂಪು, ಹಸಿರು, ಹಳದಿ ಬಣ್ಣಗಳನ್ನು ಬಳಸಿ ಸೂಕ್ಷ್ಮ ರೇಖಾವಿನ್ಯಾಸದಿಂದ ಭಾವನಿರೂಪಣೆ ತರಲಾಗಿದೆ. ಎಣಿಕೆ ಎಲೆಗಳಲ್ಲಿ ಒಂದರ ಎಲೆಯಿಂದ ಹತ್ತರ ಎಲೆಯವರೆಗೂ ಹತ್ತು ಬಾಣಗಳನ್ನು ಚಿತ್ರಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿವರ್ಣದ ಲೇಪನವಿದೆ. ಚಿತ್ರಗಳ ಮುಂಭಾಗದಲ್ಲಿ ಬಂಗಾರವರ್ಣದ ಅಲಂಕಾರಿಕ ನಕ್ಷೆ ಇದೆ. ಎಲೆಗಳು ಜ್ಯಾಮಿತಿಕ ಅಂಚುಗಳಿಂದ ಕೂಡಿ ರೇಖಾ ವಿನ್ಯಾಸ ಹೊಂದಿವೆ.

ಚಿತ್ರ – ೭೮. ನವೀನ್ ರಾಮ್ ಛದ್

ನಾಲ್ಕನೆಯ ಸೂಟದಲ್ಲಿ ರಾಮ,ಸೀತಾ ಮತ್ತು ಹನುಮಂತರು ಪ್ರಧಾನ ಎಲೆಗಳಾಗಿ ಬರುತ್ತಾರೆ. ಎಂಟು ಎಲೆಗಳು ಚೌಕಾಕಾರದ ಎಲೆಗಳಾಗಿವೆ. ಚಿತ್ರದ ಹಿನ್ನೆಲೆಯಲ್ಲಿ ದಟ್ಟ ಹಸಿರುವರ್ಣದ ಲೇಪನವಿದೆ.

ರಾಮನು ಹಳದಿವರ್ಣವನ್ನು ಹೊಂದಿ, ಕಡುಹಳದಿ ಬಣ್ಣದ ಧೋತಿಯನ್ನು, ಕೆಂಪುವರ್ಣದ ದುಪ್ಪಟ್ಟಾವನ್ನು ಧರಿಸಿ, ಬಲಗೈಯಲ್ಲಿ ಬಾಣವನ್ನು ಹಿಡಿದುಕೊಂಡಿದ್ದಾನೆ. ಅಲ್ಲದೆ ಕಿರೀಟಧಾರಿಯಾಗಿ ಬಂಗಾರವರ್ಣದ ಪೀಠದ ಮೇಲೆ ಸುಖಾಸನದಲ್ಲಿ ಕುಳಿತಿದ್ದಾನೆ. ಹಿನ್ನೆಲೆಯಲ್ಲಿ ಕಡುಹಳದಿ ಬಣ್ಣದ

ಚಿತ್ರ ೭೭



ಸೀತಾ ರಾಮ ಸುಗ್ರೀವ



ಚಿತ್ರ ೭೮




ಸೀತಾ ರಾಮ ಹನಮಂತ




ಸಂಗ್ರಹ :ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಚಿತ್ರ ೭೯


ರಾಮ


ಸೀತಾ


ಭರತ







ಸಾಂಕೇತಿಕ ಚಿತ್ರಗಳು









ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಚಿತ್ರ ೮೦


ರಾಮ


ಸೀತಾ


ಸುಗ್ರೀವ







ಸಾಂಕೇತಿಕ ಚಿತ್ರಗಳು







ಲೇಪನವಿದೆ. ಮೇಲ್ಭಾಗದಲ್ಲಿ ಬಿಲ್ಲಿನ ಚಿತ್ರವಿದೆ. ಸೀತೆಯು ಕೆಂಪುವರ್ಣದ ಸೀರೆ, ಹಳದಿವರ್ಣದ ಕುಪ್ಪಸವನ್ನು ಧರಿಸಿ, ಬಂಗಾರವರ್ಣದ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾಳೆ. ಮೇಲ್ಭಾಗದಲ್ಲಿ ಬಿಲ್ಲಿನ ಚಿತ್ರವಿದ್ದು, ಹಿನ್ನೆಲೆಯಲ್ಲಿ ಕಡು ಹಸಿರುಬಣ್ಣದ ಲೇಪನವಿದೆ.

ಹನುಮಂತ

ಹಳದಿವರ್ಣದಿಂದ ಚಿತ್ರಿತಗೊಂಡಿರುವ ಹನುಮಂತ ಕೆಂಪು ಲಂಗೋಟಿ ಧರಿಸಿ, ಹಳದಿವರ್ಣದ ದುಂಡಾದ ದುಪ್ಪಟ್ಟಾವನ್ನು ಹೆಗಲ ಮೇಲೆ ಹಾಕಿಕೊಂಡಿದ್ದಾನೆ. ಬಾಲವು ಉದ್ದವಾಗಿ ಮೇಲ್ಗಡೆ ಬಂದಿದೆ. ತುದಿಯಲ್ಲಿ ಗಂಟೆಯನ್ನು ಕಟ್ಟಲಾಗಿದೆ. ಕೊರಳಲ್ಲಿ ಆಭರಣಗಳನ್ನು ಧರಿಸಿ ಪಾರ್ಶ್ವಮುಖ ಮಾಡಿ ಎಡಗೈಯನ್ನು ಮೇಲೆತ್ತಿದ್ದಾನೆ. ಬಲಗೈಯಲ್ಲಿ ಚಿಕ್ಕದಾದ ಗದೆ ಹಿಡಿದಿದ್ದಾನೆ. ಮುಂಭಾಗದಲ್ಲಿ ಬಿಲ್ಲಿನ ಚಿತ್ರವಿದೆ. ಚಿತ್ರದ ಹಿನ್ನೆಲೆಯಲ್ಲಿ ಕಡು ಹಸಿರುಬಣ್ಣದ ಲೇಪನವಿದ್ದು, ಮುಂಭಾಗದಲ್ಲಿ ಬಂಗಾರವರ್ಣದ ಅಲಂಕಾರಿಕ ವಾಸ್ತುವಿನ್ಯಾಸವಿದೆ. ಚಿತ್ರದಲ್ಲಿ ಸೂಕ್ಷ್ಮರೇಖಾವಿನ್ಯಾಸದಿಂದ ಭಾವನಿರೂಪಣೆಯನ್ನು ತರಲಾಗಿದೆ.

ಇನ್ನುಳಿದ ಎಣಿಕೆ ಎಲೆಗಳಲ್ಲಿ ಒಂದರಿಂದ ಹತ್ತರವರೆಗೆ ಬಾಣದ ಚಿಹ್ನೆಯನ್ನು ಚಿತ್ರಿಸಿದ್ದಾರೆ. ಒಂದನೇ ಎಲೆಯಿಂದ ಹತ್ತರ ಎಲೆಯವರೆಗೂ ಹತ್ತು ಬಾಣಗಳನ್ನು ಚಿತ್ರಿಸಿದ್ದಾರೆ. ಚಿತ್ರದ ಹಿನ್ನೆಲೆಯಲ್ಲಿ ಕಡು ಹಸಿರುಬಣ್ಣವನ್ನು ಚಿತ್ರಿಸಿದ್ದಾರೆ.

ಚಿತ್ರ – ೭೯. ನವೀನ್ ರಾಮ್ ಭಥ್

ಈ ಸೂಟನಲ್ಲಿ ರಾಮ, ಸೀತಾ, ಭರತರು ಪ್ರಧಾನ ಎಲೆಗಳಾಗಿದ್ದು ಚಿತ್ರದ ಹಿನ್ನೆಲೆಯಲ್ಲಿ ಮಾತ್ರ ಕಪ್ಪುವರ್ಣದ ಲೇಪನವಿದ್ದು, ಒಂದರಿಂದ ಹತ್ತರವರೆಗೆ ಬಾಣದ ಚಿಹ್ನೆಯನ್ನು ಚಿತ್ರಿಸಲಾಗಿದೆ. ಆದರೆ ಇಲ್ಲಿ ಒಂದು, ಆರು, ಏಳು, ಹತ್ತರವರೆಗಿನ ಎಲೆಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ.

ಚಿತ್ರ – ೮೦. ನವೀನ್ ರಾಮ್ ಭಥ್

ಈ ಸೂಟನಲ್ಲಿ ರಾಮ, ಸೀತಾ, ಸುಗ್ರೀವರು ಪ್ರಧಾನ ಎಲೆಗಳಾಗಿದ್ದು ಚಿತ್ರದ ಹಿನ್ನೆಲೆಯಲ್ಲಿ ಮಾತ್ರ ನೀಲವರ್ಣವನ್ನು ಬಳಸಿಕೊಳ್ಳಲಾಗಿದೆ. ಒಂದರಿಂದ ಹತ್ತರವರೆಗೆ ಛತ್ರಿಗಳ ಚಿತ್ರಗಳನ್ನು ಇಲ್ಲಿ ಅಲಂಕಾರಿಕವಾಗಿ ಚಿತ್ರಿಸಲಾಗಿದೆ.

ಚಿತ್ರ – ೮೧. ನವೀನ್ ರಾಮ್ ಭಥ್

ಈ ಸೂಟನಲ್ಲಿ ರಾಮ, ಸೀತಾ, ಹನುಮಂತರು ಪ್ರಧಾನ ಎಲೆಗಳಾಗಿ ಚಿತ್ರದ ಹಿನ್ನೆಲೆಯಲ್ಲಿ ಮಾತ್ರ ಕಪ್ಪುವರ್ಣವನ್ನು ಬಳಸಿ, ಒಂದರಿಂದ ಹತ್ತರವರೆಗೆ ಬಿಲ್ಲಿನ ಚಿತ್ರಗಳನ್ನು ಇಲ್ಲಿ ಅಲಂಕಾರಿಕವಾಗಿ ಚಿತ್ರಿಸಲಾಗಿದೆ.

ಈ ಎಲ್ಲಾ ಚೌಕಾಕಾರದ ಎಲೆಗಳಲ್ಲಿ ಮುಖ್ಯವಾಗಿ ರೇಖಾಸಂಯೋಜನೆ ಪ್ರಧಾನವಾಗಿ ಮೂಡಿಬಂದಿದ್ದು, ಅಲಂಕಾರಿಕ ಕೌಶಲ, ಆಕೃತಿಗಳಲ್ಲಿ ಚಲನಶೀಲತೆ, ಚಪ್ಪಟೆಯ ವರ್ಣ ವೈವಿಧ್ಯದ ಜೊತೆಗೆ ನೆರಳು ಬೆಳಕುಗಳ ವರ್ಣಛಾಯೆಯು ವಿಭಿನ್ನವಾಗಿ ಮೂಡಿಬಂದಿದೆ. ಒಟ್ಟಾರೆ ಈ ಚಿತ್ರಗಳನ್ನು ಆಟದ ಸೂಟಗೆ ಸಂಬಂಧಿಸಿದಂತೆ ಬಿಂಬಿಸಲಾಗಿದ್ದರೂ ಸಹ ಚಿತ್ರಲಕ್ಷಣಗಳಿಂದ ತಮ್ಮದೇ ಆದ ಅಸ್ತಿತ್ವವನ್ನು ಕಂಡುಕೊಂಡಿವೆ ಎನ್ನಬಹುದು. ಈ ಸಾಂಕೇತಿಕ ಚಿತ್ರಗಳಲ್ಲಿ ಕಲಾವಿದೆ ಎಲೆಗಳ ಅಂದವನ್ನು ಉಳಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ.


ಚಿತ್ರ ೮೧



ರಾಮ



ಸೀತಾ



ಹನಮಂತ







ಸಾಂಕೇತಿಕ ಚಿತ್ರಗಳು







ಚಿತ್ರ – ೮೧. ಕಲ್ಯಾಣ ಗಂಜೀಫಾ

ಈ ಸೂಟನಲ್ಲಿ ರಾಜ, ರಾಣಿ, ಪ್ರೇಮಿಜೋಡಿ, ಪದಾತಿ ಎಂಬವರು ಮುಖ್ಯವಾಗಿದ್ದು ಗಂಜೀಫಾ ಎಲೆಗಳಲ್ಲಿ ಸಾಂಕೇತಿಕವಾಗಿ ಬಿಂಬಿತವಾಗಿದ್ದಾರೆ. ಇನ್ನುಳಿದಂತೆ ನೃತ್ಯಭಂಗಿಯಲ್ಲಿರುವ ಲತಾವೋಹಿನಿಯನ್ನು ಸಂಯೋಜಿತಗೊಳಿಸಲಾಗಿದೆ. ಎಲ್ಲ ಎಲೆಗಳು ಚೌಕಾಕಾರದಲ್ಲಿದ್ದು ಷಡ್ಭುಜಾಕೃತಿಯಲ್ಲಿ ಈ ಸ್ತ್ರೀಯರನ್ನು ರಚಿಸಿದ್ದಾರೆ. ಈ ಸ್ತ್ರೀಯರೆಲ್ಲರೂ ಸಾಂಪ್ರದಾಯಿಕ ಹಳದಿಸೀರೆ, ರವಿಕೆಯನ್ನು ಧರಿಸಿದ್ದು, ಸ್ವರ್ಣಾಭರಣಗಳಿಂದ ಭೂಷಿತಗೊಂಡಿದ್ದಾರೆ. ಸ್ತ್ರೀಯರ ಕೈಗಳಲ್ಲಿ ಜ್ಯಾಮಿತಿಕ ವಿನ್ಯಾಸದ ಮಾಲೆಯನ್ನು ಸಂಯೋಜಿಸಲಾಗಿದೆ. ಮುಖ್ಯ ಎಲೆಗಳಲ್ಲಿ ಪ್ರೇಮಿಗಳ ಜೋಡಿಯನ್ನು (ಕಪಲ್ಸ) ಪಾರ್ಶ್ವಭಂಗಿಯಲ್ಲಿ ಕುಳಿತು ಪ್ರೇಮಾಲಾಪವ ಮಾಡುತ್ತಿರುವಂತೆ ಭಾವನಿರೂಪಣೆಯನ್ನು ತರಲಾಗಿದೆ. ರಾಣಿಯನ್ನು ಸುಖಾಸನದ ಭಂಗಿಯಲ್ಲಿ, ರಾಜನನ್ನು ಪಾರ್ಶ್ವಮುಖವಾಗಿ ಕುಳಿತ ಭಂಗಿಯಲ್ಲಿ, ಪದಾತಿಯನ್ನು ದೊಗಳೆ ಅಂಗಿ ಹಾಗೂ ಪೈಜಾಮ ಧರಿಸಿ ಕೈಯಲ್ಲಿ ಕೋಲನ್ನು ಹಿಡಿದು ನಡೆಯುತ್ತಿರುವಂತೆ ಚಿತ್ರಿಸಲಾಗಿದೆ.

ಇಲ್ಲಿ ವ್ಯಕ್ತಿಗಳ ವ್ಯಕ್ತಿತ್ವವನ್ನು ಅರಿಯುವಂತೆ ಕಲಾವಿದನು ಭಿನ್ನರೂಪದಲ್ಲಿ ಚಿತ್ರಿಸಿದ್ದಾನೆ. ಎಲೆಗಳ ಹಿನ್ನೆಲೆಯಲ್ಲಿ ಕೆಂಪು (ಕೇಸರಿ) ಬಣ್ಣವನ್ನು ಲೇಪನ ಮಾಡಿ, ಹಳದಿಬಣ್ಣದಿಂದ ನಾಲ್ಕು ಪಾರ್ಶ್ವಗಳಲ್ಲಿ ಹೂವಿನ ನಕ್ಷೆಯನ್ನು ರಚಿಸಲಾಗಿದೆ. ಎಲೆಗಳ ಅಂಚು ಅಲಂಕಾರಿಕ ನಕ್ಷೆಗಳಿಂದ ಕೂಡಿದೆ.

ಈ ಎಲೆಗಳಲ್ಲಿನ ಆಕೃತಿಗಳಿಗೆ ಹಳದಿ, ಹಸಿರು, ಕೆಂಪು, ಕಪ್ಪು, ಕಂದುಗೆಂಪುಬಣ್ಣಗಳನ್ನು ಸಂಯೋಜಿಸಿ, ನೆರಳು ಬೆಳಕುಗಳ ಛಾಯೆಯನ್ನು ತರಲಾಗಿದೆ. ಈ ಆಕೃತಿಗಳಲ್ಲಿನ ಭಾವಭಂಗಿ, ಉಡುಗೆ ತೊಡುಗೆಗಳ ಕೌಶಲ ಹಾಗೂ ಆಭರಣಗಳ ಸಂಯೋಜನೆಯು ಅಲಂಕಾರ ಪ್ರಜ್ಞೆಯನ್ನು ಪ್ರತಿಬಿಂಬಿಸುತ್ತವೆ. ಈ ಸೂಟ್ ಗಂಜೀಫಾ ಎಲೆಗಳು ಸಾಂಕೇತಿಕ ಆಟದ ಎಲೆಗಳಾಗಿದ್ದರೂ ಚಿತ್ರಪ್ರಜ್ಞೆಯಿಂದ ಕೂಡಿವೆ.

ಚಿತ್ರ – ೮೨. ಕಲ್ಯಾಣ ಗಂಜೀಫಾ

ಈ ಸೂಟನಲ್ಲಿ ಸಂಬಂಧಿಸಿದ ಎಲ್ಲ ಎಲೆಗಳು ಸಹ ಚಿತ್ರ ಸಂ:೧ ರಂತೆ ಇವೆ. ಈ ಎಲೆಗಳಲ್ಲಿನ ಆಕೃತಿಗಳ ಭಾವಭಂಗಿ, ಉಡುಗೆ ತೊಡುಗೆಗಳು ಹಿಂದಿನ ಸೂಟನಲ್ಲಿರುವಂತೆಯೆ ಪ್ರತಿಕೃತಿಗೊಂಡಿವೆ. ಇಲ್ಲಿ ಎಲೆಗಳ ಹಿನ್ನೆಲೆಯ ನಕ್ಷೆ, ಆಕೃತಿಗಳ ಕೈಗಳಲ್ಲಿ ಸಂಯೋಜಿಸಲಾದ ಕಳಾವರ ಸಂಕೇತದ ಮಾಲೆ, ವಿಶಿಷ್ಟವಾಗಿ ಮೂಡಿಬಂದಿದೆ. ಅರ್ಧಚಂದ್ರಾಕೃತಿಯ ನಕ್ಷಾವಿನ್ಯಾಸ, ಪಾರ್ಶ್ವಗಳಲ್ಲಿ ರೇಖಾವಿನ್ಯಾಸ, ಹಿಂದಿನ ಸೂಟ ಎಲೆಗಳಿಗಿಂತ ಭಿನ್ನವಾಗಿ ರೂಪಿತಗೊಂಡಿವೆ. ಕಳಾವರದ ಚಿತ್ರವು ಕಪ್ಪುಬಣ್ಣದಿಂದ ಕೂಡಿದ್ದು, ಸ್ತ್ರೀಯರ ಸೀರೆ ತಿಳಿನೀಲಿ, ತಿಳಿಗುಲಾಬಿ ರವಿಕೆ, ಕೇಶವಿನ್ಯಾಸ, ಭಾವ–ಭಂಗಿಯಲ್ಲಿ ಚಲನೆ, ರೇಖಾವೈವಿಧ್ಯವನ್ನು ಹೊಂದಿವೆ. ಈ ಎರಡೂ ಸೂಟನ ಎಲೆಗಳು ಯುರೋಪಿಯನ್ ಆಟದ ಎಲೆಗಳನ್ನು ಅನುಕರಿಸುತ್ತವೆ. ಕಳಾವರ, ಚೌಕದ ಚಿತ್ರಗಳು ಈ ಶೈಲಿಯಲ್ಲಿ ರೂಪಿತಗೊಂಡಿವೆ. ಇನ್ನುಳಿದಂತೆ ರೇಖಾಕೌಶಲ, ವರ್ಣಸಂಯೋಜನೆ, ಆಕೃತಿಗಳ ಹೊಂದಾಣಿಕೆಯಲ್ಲಿ ಅಲಂಕಾರಪ್ರಜ್ಞೆಯಿಂದ ನಿರೂಪಣೆಗೊಂಡಿವೆ.

ಚಿತ್ರ – ೮೩. ಕಲ್ಯಾಣ ಗಂಜೀಫಾ

ಈ ಸೂಟಗೆ ಸಂಬಂಧಿಸಿದಂತೆ ಎಲ್ಲ ಎಲೆಗಳು ಸಹ ಚಿತ್ರ ಸಂ:೧ ರಂತೆ ಇವೆ. ಈ ಎಲೆಗಳಲ್ಲಿ ಆಕೃತಿಗಳ ಹಾವ, ಭಂಗಿ, ಉಡುಗೆ ತೊಡುಗೆಗಳು ಹಿಂದಿನ ಸೂಟನಲ್ಲಿರುವಂತೆಯೆ ಪ್ರತಿಕೃತಿಗೊಂಡಿವೆ.

ಚಿತ್ರ ೮೧



ಕಪಲ್ಸ್ ರಾಣಿ ರಾಜ ಪದಾತಿ



ಲತಾ ಮೋಹಿನಿಯರು

ಚಿತ್ರ ೮೨



ಕಪಲ್ಸ್ ರಾಣಿ ರಾಜ ಪದಾತಿ



ಲತಾ ಮೋಹಿನಿಯರು

ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಚಿತ್ರ ೮೩



ಕಪಲ್ಸ್ ರಾಣಿ ರಾಜ ಪದಾತಿ



ಲತಾ ಮೋಹಿನಿಯರು

ಚಿತ್ರ ೮೪



ಕಪಲ್ಸ್ ರಾಣಿ ರಾಜ ಪದಾತಿ



ಲತಾ ಮೋಹಿನಿಯರು

ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಆದರೆ ಉಡುಗೆಗಳ ಬಣ್ಣ ತೆಳುಗುಲಾಬಿಯಿಂದ ಕೂಡಿದೆ. ಇಲ್ಲಿ ಎಲೆಗಳ ಹಿನ್ನೆಲೆಯಲ್ಲಿ ನಕ್ಷೆ ಚೌಕಾಕಾರದಲ್ಲಿದೆ. ಆಕೃತಿಗಳ ಕೈಯಲ್ಲಿ ಚೌಕದ ಸಂಕೇತದ ಮಾಲೆ ವಿಶಿಷ್ಟವಾಗಿ ಮೂಡಿಬಂದಿವೆ.

ಚಿತ್ರ – ೮೪. ಕಲ್ಯಾಣ ಗಂಜೀಫಾ

ಈ ಸೂಟಗೆ ಸಂಬಂಧಿಸಿದಂತೆ ಎಲ್ಲ ಎಲೆಗಳು ಸಹ ಚಿತ್ರ ಸಂ:೧ ರಂತೆ ಇವೆ. ಈ ಎಲೆಗಳಲ್ಲಿ ಆಕೃತಿಗಳಿರುವ ಭಂಗಿ, ಉಡುಗೆ ತೊಡುಗೆಗಳು ಹಿಂದಿನ ಸೂಟನಲ್ಲಿರುವಂತೆಯೆ ಪ್ರತಿಕೃತಿಗೊಂಡಿವೆ. ಆದರೆ ಉಡುಗೆಗಳ ಬಣ್ಣ ಹಸಿರುವರ್ಣದಿಂದ ಕೂಡಿದ್ದು, ಕುಂಬಳ ಚಿಹ್ನೆಯನ್ನು ಕಾಣಬಹುದು.

ಮೈಸೂರಿನ ಛದ್ ಆಟದ ಎಲೆಗಳು

ವೇದಾಂತೀಯ ಮತ್ತು ಅತೀಂದ್ರಿಯ ಅಧ್ಯಯನಗಳನ್ನು ಮೈಗೂಡಿಸಿಕೊಂಡಿದ್ದ ಧಾರ್ಮಿಕ ಮನಃಸ್ವಭಾವದ ಮೂರನೆಯ ಕೃಷ್ಣರಾಜ ಒಡೆಯರು ೧೯ನೆಯ ಶತಮಾನದಲ್ಲಿ ದಕ್ಷಿಣ ಭಾರತದ ದೇವಾಲಯಗಳ ಅಸಂಖ್ಯಾತ ದೇವರುಗಳನ್ನು ಹಲವಾರು ಛದ್‌ಗಳಲ್ಲಿ ಪರಿಚಯಿಸಿದರು. ಶ್ರೀತತ್ತ್ವ ನಿಧಿಯೆಂಬ ವಿಶ್ವಕೋಶಸದೃಶ ಕೃತಿಯನ್ನು ದೊರೆ ಸಂಕಲಿಸಿದ್ದರು. ಇದರ ಒಂಭತ್ತನೆಯ ಅಧ್ಯಾಯ ಕೌತುಕ ನಿಧಿಯಾಗಿದ್ದು ಇದರಲ್ಲಿ ಛದ್ ಆಟದ ಎಲೆಗಳ ಹದಿಮೂರು ಬಗೆಗಳ ವಿವರಗಳಿವೆ. ಪಠ್ಯದ ಮತ್ತೊಂದು ನಿರೂಪಣೆ ಏಳು ಎಲೆಗಳ ವಿವರಣೆಯನ್ನು ನೀಡುತ್ತವೆ. ಎಲೆಗಳ ಇತರ ಬಗೆಗಳನ್ನು ಕಲಾವಿದರು ಒದಗಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಗುರುತಿಸಲಾಗಿಲ್ಲ. ಏಕೆಂದರೆ ಈಗಿನ ಸಾಹಿತ್ಯದಲ್ಲಿ ಅದರ ವಿವರಗಳನ್ನು ರಕ್ಷಿಸಿಟ್ಟಿಲ್ಲ.

ಛದ್ ಎಂಬ ಪದ ಎಲೆಯನ್ನು ಸೂಚಿಸುತ್ತದೆ. ಇತರ ಗಂಜೀಫಾ ಎಲೆಗಳಂತೆ ಇದನ್ನು ಆಟದ ಎಲೆಗಳಾಗಿ ಇಸ್ಪೇಟ್ ಎಲೆಗಳ ರೀತಿ ಆಡಬಹುದು. ಎಲೆಗಳು ಒಂದು ಕಟ್ಟಿನಿಂದ ಮತ್ತೊಂದು ಕಟ್ಟಿಗೆ ಬದಲಾಗುತ್ತವೆ. **ಚಾಮುಂಡೇಶ್ವರಿ** ಆಟದ ಎಲೆಗಳಲ್ಲಿ ಮುನ್ನೂರ ಇಪ್ಪತ್ತು ಎಲೆಗಳಿದ್ದರೆ **ಜಗನ್ಮೋಹನ**ದಲ್ಲಿ ಮುನ್ನೂರ ಅರವತ್ತಿರುತ್ತವೆ. **ನವೀನ ದಶಾವತಾರ**ದಲ್ಲಿ ಇನ್ನೂರ ನಲವತ್ತಿದ್ದರೆ **ದೇವಿದಶಾವತಾರ**ದಲ್ಲಿ ನೂರ ಎಂಬತ್ತಿರುತ್ತವೆ. ನವಗ್ರಹದಲ್ಲಿ ಇನ್ನೂರ ಹದಿನಾರು ಎಲೆಗಳಿರುತ್ತವೆ. ದಿಕ್ಪಾಲ, ಮನೋಹರ, ಸರ್ವಮಂಗಳಾ ಮತ್ತು ನವರತ್ನ ಈ ಪ್ರತಿಯೊಂದರಲ್ಲೂ ನೂರ ಅರವತ್ತಾರು ಎಲೆಗಳಿರುತ್ತವೆ, ಇತ್ಯಾದಿ ಆಟದಲ್ಲಿ ಆಟಗಾರರ ಸಂಖ್ಯೆಯೂ ಕಟ್ಟಿನಿಂದ ಕಟ್ಟಿಗೆ ಬದಲಾಗುತ್ತಾ ಹೋಗುತ್ತದೆ. ಚಾಮುಂಡೇಶ್ವರಿ ಛದ್ ಆಟದಲ್ಲಿ ಹದಿನಾರು ಒಂದೇ ರಂಗಿನ ಕಟ್ಟುಗಳಿದ್ದರೆ ನವೀನದಶಾವತಾರ ಮತ್ತು ಪಂಚಪಾಂಡವಗಳಲ್ಲಿ ಹನ್ನೆರಡು ಇವೆ; ದಿಕ್ಪಾಲ ಮತ್ತು ದೇವಿದಶಾವತಾರಗಳಲ್ಲಿ ಹತ್ತು; ಮನೋಹರ ಮತ್ತು ನವರತ್ನಗಳಲ್ಲಿ ಒಂಭತ್ತು; ಸರ್ವಮಂಗಳ ಎಂಟು ಮತ್ತು ಸದ್ಯೋಜಾತ ಐದು. ಚಾಮುಂಡೇಶ್ವರಿ, ನವಗ್ರಹ, ಸರ್ವಮಂಗಳ, ನವೀನ ದಶಾವತಾರ, ದೇವೀದಶಾವತಾರ ಮತ್ತು ಪಂಚಪಾಂಡವ ಛದ್‌ಗಳಲ್ಲಿ ಒಂದೇ ರಂಗಿನ ಹದಿನೆಂಟು ಎಲೆಗಳಿವೆ. ನವರತ್ನ, ದೀಪಕ ಮತ್ತು ಮನೋಹರಗಳಲ್ಲಿ ಹದಿನಾರು; ಜಗನ್ಮೋಹನ ಮತ್ತು ಸದ್ಯೋಜಾತಗಳಲ್ಲಿ ಹನ್ನೆರಡು ಮತ್ತು ನವೀನ ರಾಮಗಳಲ್ಲಿ ಒಂಭತ್ತು ಇವೆ. ಈ ಆಟದಲ್ಲಿ ಭಾಗವಹಿಸುವ ಆಟಗಾರರ ಸಂಖ್ಯೆ ಸಾಮಾನ್ಯವಾಗಿ ನಾಲ್ಕರಿಂದ ಐದು ಮಂದಿ. ಆದರೆ ಅದೇ ಕಟ್ಟುನಿಟ್ಟಾದ ನಿಯಮವಲ್ಲ. ಶ್ರೀತತ್ತ್ವನಿಧಿಯ ಜಗನ್ಮೋಹನ ಛದ್‌ದಲ್ಲಿ ಆಟಗಾರರ ಸಂಖ್ಯೆ ಆಟಕ್ಕೆ ಅನುಗುಣವಾಗಿ ಬದಲಾಗಬಹುದೆಂದು ಸ್ಪಷ್ಟವಾಗಿ ಹೇಳಿದೆ.

"ಇತ್ಯೇವಂ ಕ್ರೀಡಕಾಣಾಂ ಚಾಧಿಕ್ಯಂ ಕಲ್ಪ್ಯಂ ಯಥೋಚಿತಮ್"

ಈ ಉಲ್ಲೇಖ ಬಹಳ ಮುಖ್ಯವಾದದ್ದು, ನಕ್ಷ ಆಟದಲ್ಲಿ ತೊಡಗಿಸಿಕೊಂಡ ಆಟಗಾರರ ಸಂಖ್ಯೆ ಸಾಮಾನ್ಯವಾಗಿ ನಾಲ್ಕರಿಂದ ಎಂಟು. ಆದರೆ ಆಟದ ಅಗತ್ಯಕ್ಕನುಗುಣವಾಗಿ ಈ ಸಂಖ್ಯೆ ಹದಿನೈದಕ್ಕೆ ಹೆಚ್ಚಿದ್ದು ಇದೆ. ನಕ್ಷ ಎಲೆಗಳ ಬಗ್ಗೆ ಕೌಶಲ ಗುಪ್ತ ಅವರು 'ಆಟದಲ್ಲಿ ನಾಲ್ಕು' ಎಂದು ಬರೆಯುತ್ತಾರೆ. ಅಂಥ ಅವಕಾಶಗಳನ್ನು ಛದ್ ಕಟ್ಟುಗಳಲ್ಲಿ ಮಾಡಿರುವುದೂ ಸಾಧ್ಯ. ಆಟದಲ್ಲಿ ಭಾಗವಹಿಸುವ ಆಟಗಾರರ ಸಂಖ್ಯೆಯ ಬಗ್ಗೆ ನಿಯಮವನ್ನು ಸಡಿಲಗೊಳಿಸಲು ಅವು ಅವಕಾಶಮಾಡಿಕೊಟ್ಟಿರಬಹುದು.[೨೭]

ಇತರ ಗಂಜೀಫಾ ಕಟ್ಟುಗಳಂತೆ ಪ್ರತಿಯೊಂದು ಕಟ್ಟಿನಲ್ಲೂ ದರ್ಬಾರು (ರಾಜಾಸ್ಥಾನ) ಎಲೆಗಳು ಮತ್ತು ಹಲವಾರು ಎಲೆಗಳಿರುತ್ತವೆ. ಕೆಲವೊಂದು ಛದ್‌ಎಲೆಗಳಲ್ಲಿ ಚಕ್ರವರ್ತಿ (ಒಂದು ರೀತಿಯ ಪ್ರತ್ಯೇಕ ತರುಫು ಎಲೆಗಳು) ಮತ್ತು ಹಂಸ (ಅಧೀನ ಎಲೆಗಳು) ಇರುತ್ತವೆ. ಕಟ್ಟುಗಳು ಸಾಮಾನ್ಯವಾಗಿ ಆರು ದರ್ಬಾರು ಮತ್ತು ಹನ್ನೆರಡು ಅಥವಾ ಹತ್ತು ಸಂಖ್ಯೆಗಳ ಎಲೆಗಳನ್ನು ಹೊಂದಿರುತ್ತವೆ. ಸಂಖ್ಯೆಗಳ ಮೌಲ್ಯವು ರಾಶಿಚಕ್ರದ ಚಿಹ್ನೆಗಳಿಂದ ಇಲ್ಲವೆ ಪುನಾರಾವರ್ತನೆಗೊಂಡ ಕಟ್ಟುಗಳ ಗುರುತುಗಳಿಂದ ಕೂಡಿರುತ್ತದೆ. ದರ್ಬಾರು ಎಲೆಗಳ ಹೆಸರು ಮತ್ತು ಸ್ಥಾನ ಈ ಕೆಳಕಂಡಂತಿರುತ್ತದೆ :

ದರ್ಬಾರು ಎಲೆಗಳು

೧. ರಾಜ . . . . ಸಿಂಹಾಸನ ಇಲ್ಲವೆ ಆನೆಯ ಮೇಲೆ ಕುಳಿತಿರುತ್ತಾನೆ.
೨. ರಾಣಿ . . . . ಪಲ್ಲಕ್ಕಿಯಲ್ಲಿ ಕುಳಿತಿರುತ್ತಾಳೆ
೩. ಅಮಾತ್ಯ . . . . ರಥದಲ್ಲಿ
೪. ಸೇನಾನಿ . . . . ಕುದುರೆಯ ಮೇಲೆ
೫. ಪದಾತಿ ಅಥವಾ ಸೇವಕ . . . . ಯುದ್ಧಸನ್ನದ್ಧನಾಗಿ ಕುಳಿತಿರುವ ಯೋಧ
೬. ಧ್ವಜ (ಪತಾಕೆ) . . . . ಕಟ್ಟಿನ ಅಧಿದೇವತೆ, ಧ್ವಜದೊಡನೆ

೧೬. ದೇವದಶಾವತಾರ (ಛದ್)

೧೯ನೆಯ ಶತಮಾನ ಮೈಸೂರಿನಲ್ಲಿ ಗಂಜೀಫಾ ಚಿತ್ರಗಳು ಕಾಗದ ಪದರುಗಳಿಂದ ೬.೫ ಸೆಂ.ಮೀ ಅಳತೆಯಲ್ಲಿ ವೃತ್ತಾಕಾರದಲ್ಲಿ ಮೆರುಗಿನಿಂದ ಕೂಡಿವೆ. ಪ್ರಸ್ತುತ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಈ ಚಿತ್ರವು ಸಂಗ್ರಹಗೊಂಡಿವೆ.

ಹಸಿರು ಬಣ್ಣದಲ್ಲಿ ಚಿತ್ರಿತವಾಗಿರುವ ದೇವಿ ತನ್ನ ಬಲಗೈಯಲ್ಲಿ ವಜ್ರವನ್ನು ಹಿಡಿದು ಬಿಳಿಯ ಚಿತ್ರಹೊದಿಕೆ ಹೊದಿಸಿದ ಕುದುರೆಯನ್ನು ಸವಾರಿ ಮಾಡುತ್ತಿದ್ದಾಳೆ. ಕುದುರೆಯನ್ನು ಪಾರ್ಶ್ವನೋಟದಲ್ಲಿ ಚಿತ್ರಿಸಲಾಗಿದೆ. ದೇವಿಯನ್ನು ಅಭಿಮುಖವಾಗಿ ಚಿತ್ರಿಸಿದೆ. ದೇವಿಯು ಬಂಗಾರದ ಸೀರೆಯನ್ನು, ಕುಪ್ಪುಸವನ್ನು ಮತ್ತು ದುಪ್ಪಟ್ಟಾ (ಮೇಲು ಹೊದಿಕೆ) ಧರಿಸಿದ್ದಾಳೆ. ಆಕೆ ಕಿರೀಟಧಾರಿಣಿಯಾಗಿದ್ದಾಳೆ. ಕಿವಿಗೆ ಕರ್ಣಕುಂಡಲ, ಹಾರ ಮತ್ತು ಬಳೆಗಳನ್ನು ಹಾಕಿಕೊಂಡಿದ್ದಾಳೆ. ಆಕೆಯ ಮುಖದ ಮೇಲಿನ ಬಣ್ಣ ಮಂಕಾಗಿದ್ದರೂ ಆಕೆಯ ಮುಗುಳ್ನಗೆಯ ಮುಖದಿಂದ ಆಕೆಯ ಪ್ರಶಾಂತ ಚಿತ್ತಸ್ಥಿತಿ ಕಾಣಿಸುತ್ತದೆ. ಹಾಗೂ ಭಾಗಶಃ ಆಕೆಯ ಹಲ್ಲುಗಳು ಕಾಣಿಸುತ್ತಿವೆ. ಆಕೆಯ ಅಂಗವಸ್ತ್ರ ಗಾಳಿಗೆ ಹಾರುತ್ತಿದ್ದು ಆಕೆ ಕುದುರೆಯ ಮೇಲೆ ಕುಳಿತಿದ್ದಾಳೆ. ಎಡಗೈ ಆಕೆಯ ತೊಡೆಯ ಮೇಲಿಂದ ಅವಳ ಒಂದು ಕಾಲು ಕುದುರೆಯ ರಿಕಾಪಿನೊಳಗಿದೆ. ಆಕೆಯ ಭಂಗಿಯನ್ನು ಗಮನಿಸಿದರೆ ಆಕೆ ಅಭಿಮುಖವಾಗಿರುವಂತೆ

೨೭. Dr. Sarala Chopra., Ganjifa, PP. 192



ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ತೋರುತ್ತಿದೆ. ಆಕೆಯ ತೆರೆದ ಹೊಟ್ಟೆಯ ಕೆಳಭಾಗ ಪಕ್ಕಕ್ಕೆ ಅಲುಗಾಡುವ ಯಾವುದೇ ಸೂಚನೆ ನೀಡುತ್ತಿಲ್ಲ. ನಾಗಾಲೋಟದಿಂದ ಓಡುತ್ತಿರುವ ಕುದುರೆ ಎಡಗಡೆಗೆ ಚಲಿಸುತ್ತಿದೆ. ಬಳೆಗಳು, ಕುದುರೆಯ ಥಡಿ, ಹಾರಗಳು ಮತ್ತಿತರ ಅನೇಕ ಇತರ ಆಭರಣಗಳಿಂದ ಅದು ವ್ಯಾಪಕವಾಗಿ ಅಲಂಕೃತಗೊಂಡಿದೆ. ವಾಸ್ತವಿಕತೆಗಿಂತ ಮಿಗಿಲಾಗಿ ಚಿತ್ರಣ ಸೊಗಸುಗಾರಿಕೆಯಿಂದ ಕೂಡಿದೆ. ಆದಾಗ್ಯೂ ಅದು ಚಲನೆಯನ್ನು ತೋರಿಸುತ್ತದೆ. ಕುದುರೆಯ ಕಾಲುಗಳು ಈ ಪ್ರಕ್ರಿಯೆಯಲ್ಲಿ ಚಿತ್ರದ ಅಂಚನ್ನು ದಾಟಿವೆ. ಕಲಾವಿದನು ಕಿರೀಟದ ಮೇಲ್ಭಾಗವನ್ನು ಮತ್ತು ದೇವತೆಯ ಆಯುಧವನ್ನು ಚಿತ್ರಿಸುವುದರ ಮೂಲಕ ಚಿತ್ರದ ಚೌಕಟ್ಟನ್ನು ಮೀರಿದಂಥ ನೋಟವನ್ನು ನೀಡಿದ್ದಾನೆ. ಕಲಾಭಿರುಚಿಯಿಂದ ಹೇಳುವುದಾದರೆ, ವಿಶೇಷವಾಗಿ ದೇವತೆಯ ಚಿತ್ರವು ಕಣ್ಣಿಗೆ ಅಷ್ಟೊಂದು ಹಿತ ಕೊಡುವುದಿಲ್ಲ. ಕೆಂಪುವರ್ಣದ ಹಿನ್ನೆಲೆಯಲ್ಲಿ ಬಂಗಾರದ ಬಣ್ಣದಿಂದ ಕೂಡಿದ ವಿಶಿಷ್ಟತೆಯಿಂದ ಅಲಂಕೃತಗೊಂಡಿದೆ. ಕಪ್ಪನೆಯ ಅಂಚು ಬಂಗಾರದ ಬಣ್ಣದ ಚುಕ್ಕಿಗಳಿಂದ ಶೋಭಿತವಾಗಿದೆ. ಮೂರು ಬಿಳಿ ಉಂಗುರಪಟ್ಟಿ ಗೆರೆಗಳು ಎಲೆಯನ್ನು ಮಂಡಲವನ್ನಾಗಿ ಮಾಡಿವೆ.[೨೮]

೧೭ ನವೀನ ರಾಮ ಭದ್

೧೯ನೆಯ ಶತಮಾನ ಮೈಸೂರಿನಲ್ಲಿ ಗಂಜೀಫಾ ಚಿತ್ರಗಳು ಕಾಗದ ಪದರುಗಳಿಂದ ೯.೩½ x ೬ ಸೆಂ.ಮಿ. ಅಳತೆಯಲ್ಲಿ ವೃತ್ತಾಕಾರದಲ್ಲಿ ಮೆರುಗಿನಿಂದ ಕೂಡಿವೆ. ಪ್ರಸ್ತುತ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಈ ಚಿತ್ರಗಳು ಸಂಗ್ರಹಗೊಂಡಿವೆ.

ಕುಂಕುಮವರ್ಣದಿಂದ ಚಿತ್ರಿತವಾದ ಸ್ವಾಮಿ ಮಂಡಿಯೂರಿ ಭಕ್ತಿಭಾವದಿಂದ ನಮಿಸುತ್ತಿದ್ದಾನೆ. ಆತನ ತಲೆ ಪಾರ್ಶ್ವಕ್ಕೆ ತಿರುಗಿದ್ದರೆ ದೇಹ ನೇರವಾಗಿದೆ. ಕೋರೆಹಲ್ಲಿನ ಸ್ವಾಮಿಗೆ ಬಹು ಉದ್ದನೆಯ ಬಾಲವಿದ್ದು ಅದರಿಂದ ಘಂಟೆ ನೇತಾಡುತ್ತಿದೆ. ಸ್ವಾಮಿಯು ಲಂಗೋಟಿ, ಪಟಗಾ (ವಸ್ತ್ರವಿಶೇಷ) ಮತ್ತು ಕವಚಗಳನ್ನು ಧರಿಸಿದ್ದಾನೆ. ಹಾರಗಳು, ಕರ್ಣಪುಷ್ಪ, ತೋಳಬಂಧಿಗಳು, ಕೈಕಡಗಗಳು, ಬಳೆಗಳು ಮುಂತಾದ ಅನೇಕ ಆಭರಣಗಳಿಂದ ಆತನು ಸುಂದರನಾಗಿ ಅಲಂಕೃತನಾಗಿದ್ದಾನೆ. ಹಿಂಭಾಗದಲ್ಲಿ ಸ್ವಾಮಿಯ ಕೂದಲಿಗೆ ಜಡೆಹಾಕಿ ಹಳದಿಪಟ್ಟಿಯಿಂದ ಕಟ್ಟಿದೆ. ಸ್ವಾಮಿಯ ಕುಂಕುಮ ಮತ್ತು ಹಸಿರು ಬಣ್ಣಗಳ ಹಿನ್ನೆಲೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಎಲೆಯನ್ನು ಚುಕ್ಕಿ ಚುಕ್ಕಿ ಅಂಚಿನಿಂದ ಅಲಂಕರಿಸಲಾಗಿದೆ. ಮತ್ತು ಅಂಚು ಅಲಂಕೃತ ರೇಖೆಗಳಿಂದ ಕೂಡಿದೆ. ಬಾದಾಮಿ ಬಣ್ಣದ ಎಲೆಯ ಹಿಂಭಾಗ ವಿನ್ಯಾಸದಿಂದ ಕೂಡಿದ ಹೂಗಳ ಆಕೃತಿಯನ್ನು ಒಳಗೊಂಡಿದ್ದು ಬಂಗಾರದ ಬಣ್ಣದಿಂದ ಸುಂದರವಾಗಿ ಅಲಂಕೃತಗೊಂಡಿದೆ. ಮಧ್ಯದ ತುಣುಕು ವಜ್ರಾಕೃತಿಯಲ್ಲಿದೆ. ಈ ಲಕ್ಷಣವು ಎಲೆಗೆ ಮಹತ್ವವನ್ನು ತಂದುಕೊಟ್ಟಿದೆ. ಏಕೆಂದರೆ ಸಾಮಾನ್ಯ ಎಲೆಗಳು ಹಿಂಬದಿಯಲ್ಲಿ ಸರಳವಾಗಿರುತ್ತವೆ. ಇಲ್ಲವೆ ಒಂದು ವೇಳೆ ಚಿತ್ರಿಸಿದ್ದರೆ ಒಂದು ಸಾಮಾನ್ಯ ರೇಖೆಯನ್ನೊ ಇಲ್ಲವೆ ಮಧ್ಯದಲ್ಲಿ ಹೂವಿನ ನಮೂನೆಯನ್ನೊ ಒಳಗೊಂಡಿರುತ್ತದೆ.[೨೯]

೧೮. ಜಗನ್ಮೋಹನ ಭದ್

೧೯ನೆಯ ಶತಮಾನದ ಮೈಸೂರಿನ ಗಂಜೀಫಾ ಚಿತ್ರಗಳು ಕಾಗದ ಪದರುಗಳಿಂದ ೬.೬ ಸೆಂ.ಮಿ. ಅಳತೆಯಲ್ಲಿ ವೃತ್ತಾಕಾರದಲ್ಲಿ ಮೆರುಗಿನಿಂದ ಕೂಡಿದೆ. ಪ್ರಸ್ತುತ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಈ ಚಿತ್ರಗಳು ಸಂಗ್ರಹಗೊಂಡಿವೆ.

---

೨೮. Dr. Sarala Chopra., Ganjifa, PP. 192-193

೨೯. Dr. Sarala Chopra., Ganjifa, PP. 193-194

ವೀಣಾಧರ ದಕ್ಷಿಣಾಮೂರ್ತಿ ಶಿವ-ಚತುರ್ಭುಜಗಳುಳ್ಳ ಸ್ವಾಮಿಯನ್ನು ಬಿಳಿಯ ಬಣ್ಣದಲ್ಲಿ ಚಿತ್ರಿಸಿದೆ. ಚಿನ್ನದ ಪೀಠದ ಮೇಲೆ ಉತ್ಕುಟಿಕಾಸನದಲ್ಲಿ ನೇರವಾಗಿ ಕುಳಿತಿರುವ ಭಂಗಿಯಲ್ಲಿದೆ. ಪೀಠದ ಮೇಲೆ ಅಂಡಾಕಾರದ ಕಿತ್ತಳೆವರ್ಣದ ಚೌಕಟ್ಟಿನೊಳಗಡೆ ಬಿಳಿಬಣ್ಣದ ಸಿಂಹದ ಆಕೃತಿಯನ್ನು ಚಿತ್ರಿಸಿದೆ. ಸ್ವಾಮಿಯ ಕೆಳಗಿನ ಎರಡು ಕೈಗಳು ಅಭಯಮುದ್ರೆಯಲ್ಲಿದ್ದರೆ ಮೇಲಿನ ಬಲಭಾಗದ ಕೈ ಕಟಕ ಮುದ್ರೆಯಲ್ಲಿದೆ. ಮೇಲಿನ ಎಡಭಾಗದ ಕೈ ವೀಣೆಯನ್ನು ಹಿಡಿದಿದೆ. ಸ್ವಾಮಿಯು ಹುಲಿದೊಗಲನ್ನು ತೊಟ್ಟಿದ್ದಾನೆ. ಕವಚವಿದ್ದು ಯೋಗಪಟ್ಟಿಯನ್ನು ಕಾಲಿಗೆ ಕಟ್ಟಿದೆ. ಆತನಿಗೆ ಜಟಾಮಕುಟವಿದೆ. ಉಳಿದ ಕೂದಲು ಹಿಂದಿನಿಂದ ಜೋತು ಬಿದ್ದಿದೆ. ಹಾರಗಳು, ಕೈಕಡಗಗಳು, ಬಳೆಗಳು ಮತ್ತು ಕರ್ಣಕುಂಡಲಗಳಿಂದ ಸುಂದರನಾಗಿ ಸ್ವಾಮಿ ಅಲಂಕೃತನಾಗಿದ್ದಾನೆ. ಆತನ ಜಟೆಗೆ ಮುತ್ತಿನ ಹಾರವನ್ನು ಸುತ್ತಿದೆ. ಹಣೆಗೆ ತಿಲಕವಿದೆ. ಆತನ ಕೈಗಳು ಸೂಕ್ಷ್ಮವಾಗಿದ್ದು ಮೃದುವಾಗಿವೆ. ಬಂಗಾರದ ಪೀಠವನ್ನು ಕಲಾತ್ಮಕವಾಗಿ ಚಿತ್ರಿಸಿದೆ. ಸಿಂಹದ ತಲೆಯ ಮುಂಭಾಗ ಮತ್ತು ದೇಹ ಪಾರ್ಶ್ವನೋಟದಿಂದ ಕೂಡಿದೆ. ಎಲೆಯ ಎಡಭಾಗದ ಮೇಲುಗಡೆ ಚಂದ್ರನನ್ನು ಚಿತ್ರಿಸಿದೆ. ಕಪ್ಪುಬಣ್ಣದ ಹಿನ್ನೆಲೆಯಲ್ಲಿ ಬೇರೆ ಬೇರೆ ಬಣ್ಣಗಳು ಸ್ವಾಮಿಯ ಬಿಳಿಬಣ್ಣದ ಸಹಜವರ್ಣಕ್ಕೆ ಪೂರಕವಾಗಿವೆ. ಕಲಾವಿದನು ಚಿತ್ರದ ರೂಪುರೇಖೆಯನ್ನು ತಿಳಿ ಊದಾಬಣ್ಣದ ರೇಖೆಗಳಿಂದ ರಚಿಸಿದ್ದರೂ ಅದರಿಂದ ಯಾವುದೇ ವಿಧದಲ್ಲಿ ಚಿತ್ರಕ್ಕೆ ತೊಂದರೆಯಾಗಿಲ್ಲ. ಬದಲಿಗೆ ಅದು ಮೃದುವಾದ ಸೂಕ್ಷ್ಮ ವಿನ್ಯಾಸವನ್ನು ನೀಡಿದೆ. ಸ್ವಾಮಿಯು ಶ್ರೇಷ್ಠವಾದ ಭಂಗಿಯಲ್ಲಿ ಕುಳಿತಿರುವಂತೆ ಕಲಾವಿದನು ಚಿತ್ರಿಸಿದ್ದಾನೆ. ದುಂಡನೆಯ ಎಲೆ ಚಿನ್ನದ ಚುಕ್ಕೆಗಳ ವಿನ್ಯಾಸದಿಂದ ಶೋಭಿತವಾಗಿದೆ. ಸೌಂದರ್ಯಾತ್ಮಕವಾಗಿ ನೋಡುವುದಾದರೆ ಮೈಸೂರು ಛದ್ ಕಟ್ಟಿನ ಅತ್ಯುತ್ತಮ ಎಲೆಗಳ ಪೈಕಿ ಇದೊಂದಾಗಿದೆ.

ಉಮಾಮಹೇಶ್ವರ ಕಟ್ಟಿನ ನಾಲ್ಕನೆಯದು

ಕೇಸರಿವರ್ಣದ ಸ್ವಾಮಿಗೆ ನಾಲ್ಕು ಕೈಗಳು ಮತ್ತು ಎರಡು ತಲೆಗಳಿವೆ. ಬಲಭಾಗ ಪುರುಷ, ಎಡಭಾಗ ಸ್ತ್ರೀಯಾಗಿದ್ದು, ಪೀಠದ ಮೇಲಣ ಸಿಂಹಾಸನದ ಮೇಲೆ ಅಭಿಮುಖವಾಗಿ ಕುಳಿತಿದ್ದಾನೆ. ಪೀಠದ ಕೆಳಗೆ ಕಟಕರಾಶಿಯ ಚಿಹ್ನೆಯಾದ ಏಡಿಯಿದೆ. ವೈಢೂರ್ಯದ ರಚನಾತ್ಮಕ ಚೌಕಟ್ಟಿನಲ್ಲಿ ಚಿತ್ರಿತವಾಗಿದೆ. ಎಡಭಾಗದ ಮೇಲಿನ ಕೈಯಲ್ಲಿ ಸ್ವಾಮಿಯು ಪಾತ್ರೆಯನ್ನು ಹಿಡಿದುಕೊಂಡಿದ್ದರೆ, ಬಲಭಾಗದ ಮೇಲಿನ ಕೈಯಲ್ಲಿ ಕುಡುಗೋಲನ್ನು ಹಿಡಿದಿದ್ದಾರೆ. ಆತನ ಬಲಗೈ ಸವಾಭಾವಿಕ ಅಭಯ ಮುದ್ರೆಯನ್ನು ಸೂಚಿಸಿದರೆ, ಕೆಳಭಾಗದ ಎಡಗೈ ವರದ ಮುದ್ರೆಯನ್ನು ಸೂಚಿಸುತ್ತದೆ. ಎರಡೂ ಕೈಗಳು ಪಾರ್ಶ್ವನೋಟದಲ್ಲಿದ್ದರೆ ದೇಹವು ಅಭಿಮುಖವಾಗಿದೆ. ಆತನ ಎಡಗಡೆಯ ಮುಖ ಸೌಮ್ಯ ಮತ್ತು ಬಲಭಾಗ ರೌದ್ರ. ಆತನ ಕಣ್ಣುಗಳು ಕೋಪವನ್ನು ಸೂಚಿಸುತ್ತವೆ. ಮುಖಗಳಲ್ಲಿ ಕಾಣಬರುವ ಮೂಗುಗಳು ಸ್ವಲ್ಪ ಚೂಪಾಗಿವೆ. ಕಣ್ಣುಗಳು ವಿಶಾಲವಾಗಿದ್ದು ತುಟಿಗಳು ಭದ್ರವಾಗಿ ಮುಚ್ಚಿಕೊಂಡಿವೆ. ಸ್ವಾಮಿಯು ಧೋತಿಯನ್ನು, ದುಪ್ಪಟ್ಟಾ(ವಲ್ಲಿ) ಮತ್ತು ಕವಚವನ್ನು ಧರಿಸಿದ್ದಾನೆ. ಉತ್ತರೀಯವನ್ನು ಹಾಕಿಕೊಂಡಿದ್ದಾನೆ. ಮುಕುಟಗಳನ್ನು, ಹಾರಗಳನ್ನು, ಕರ್ಣಕುಂಡಲಗಳನ್ನು ಮತ್ತು ಕೈಕಡಗಗಳನ್ನು ಧರಿಸಿದ್ದಾನೆ. ಕಿರೀಟಗಳು ಜ್ವಾಲೆಗಳಿಂದ ಶೋಭಿಸುತ್ತಿವೆ. ಸ್ವಾಮಿಯ ಮೂರ್ತಿಯ ಮತ್ತು ಸಿಂಹಾಸನದ ಸುತ್ತಲು ಪುಟ್ಟ ಮುತ್ತಿನ ಸರಪಳಿಗಳಿವೆ. ಕೈಗಳಿಗೆ ಹೋಲಿಸಿದರೆ ಕಾಲುಗಳು ಒರಟಾಗಿವೆ. ಎಲೆಯ ಅಂಚು ಚಿನ್ನದ ಚುಕ್ಕೆಗಳ ಮಾದರಿಯಿಂದ ಅಲಂಕೃತವಾಗಿದೆ. ಕಲಾತ್ಮಕವಾಗಿ ಗಮನಿಸಿದರೆ ಈ

ಎಲೆಯೂ ಮೈಸೂರಿನ ಅತ್ಯುತ್ತಮ ಎಲೆಗಳ ಪೈಕಿ ಒಂದಾಗಿದೆ. ಕಲಾವಿದನು ಕೆಲವೊಂದು ಒಗಟುಗಳನ್ನು ಸೃಷ್ಟಿಸಿದ್ದಾನೆ. ಮುಖವನ್ನು ಹೊರತು ಪಡಿಸಿದರೆ ಪುರುಷ ಮತ್ತು ಸ್ತ್ರೀ ಉಡುಪಿನಲ್ಲಿ ಯಾವುದೇ ಭೇದವನ್ನು ಮಾಡಿಲ್ಲ. ದೇವರ ಕೈಯಲ್ಲಿರುವ ಕುಡುಗೋಲಿನಂತಹ ಆಯುಧವೂ ಸಮಸ್ಯಾತ್ಮಕವಾದದ್ದೇ. ಬಹುಶಃ ಕಲಾವಿದನು ಈ ಎಲೆಯಲ್ಲಿ ರುದ್ರ ಮತ್ತು ಅಗ್ನಿಗಳನ್ನು ಒಳಗೊಂಡಂತೆ ರುದ್ರಾಗ್ನಿಯನ್ನು ನಿರೂಪಿಸಿರಬಹುದು. ಆದರೆ ಹಾಗಿದ್ದಲ್ಲಿ ಜಗನ್ಮೋಹನ ಕಟ್ಟಿನಲ್ಲಿ ಇದನ್ನು ಸೇರಿಸಿರುವುದು ಅಸಾಧ್ಯವೇನಲ್ಲ.[೩೦]

೧೯. ಚಾಮುಂಡೇಶ್ವರಿ ಭದ್

೧೯ನೆಯ ಶತಮಾನದ ಮೈಸೂರಿನಲ್ಲಿ ಗಂಜೀಫಾ ಚಿತ್ರಗಳು ಕಾಗದ ಪದರುಗಳಿಂದ ೫.೬-೫.೭ ಸೆಂ.ಮಿ. ಅಳತೆಯಲ್ಲಿ ವೃತ್ತಾಕಾರದಲ್ಲಿ ಮೆರುಗಿನಿಂದ ಕೂಡಿವೆ. ಪ್ರಸ್ತುತ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಈ ಚಿತ್ರವು ಸಂಗ್ರಹಗೊಂಡಿದೆ.

ಕಟ್ಟು ಅಸಮಗ್ರ, ೩೨೦ ಎಲೆಗಳ ಪೈಕಿ ಕೇವಲ ೩೬ ಎಲೆಗಳಿವೆ. ಚಾಮುಂಡೇಶ್ವರಿ ಕಟ್ಟಿನ ಹದಿನಾರರಲ್ಲಿ ಐದು ವಿಷ್ಣು, ಬ್ರಹ್ಮ, ರಾಮ, ಕೃಷ್ಣ ಮತ್ತು ಮನ್ಮಥರನ್ನು ಪ್ರತಿನಿಧಿಸುತ್ತವೆ. ಚಕ್ರವರ್ತಿ (ತುರುಫು ಎಲೆಗಳು) ಮತ್ತು ಹಂಸಎಲೆಗಳು ಕಾಣೆಯಾಗಿವೆ. ಈಗಿರುವ ಉದಾಹರಣೆಗಳನ್ನು ಗಮನಿಸಿದಾಗ ಪ್ರತಿಯೊಂದು ಕಟ್ಟಿನಲ್ಲೂ ಹದಿನೆಂಟು ಎಲೆಗಳಿರುವಂತೆ (ರಾಜ, ರಾಣಿ, ಅಮಾತ್ಯ, ಸೇನಾನಿ, ಸೇವಕ ಮತ್ತು ಧ್ವಜ) ಮತ್ತು ಹನ್ನೆರಡು ಸಂಖ್ಯಾತ್ಮಕ ಎಲೆಗಳಿರುವಂತೆ ತೋರುತ್ತದೆ. ಸಂಖ್ಯಾತ್ಮಕ ಎಲೆಗಳು ಒಂದರಿಂದ ಹಿಡಿದು ಹನ್ನೆರಡರವರೆಗಿನ ದ್ವಾದಶ ರಾಶಿಗಳ ಚಿಹ್ನೆಗಳನ್ನು ಹೊಂದಿವೆ.

ಕಟ್ಟುಗಳು ಹಲವಾರು ಎಲೆಗಳಿಂದ ಪ್ರತಿನಿಧಿಸಲ್ಪಟ್ಟಿದ್ದು ಒಂದು ರಾಜಾಸ್ಥಾನ (ದರ್ಬಾರು) ಮತ್ತು ಸಂಖ್ಯೆಯನ್ನು ಹೊಂದಿರುವ ಎಲೆಗಳಿಂದ ಕೂಡಿವೆ. ದರ್ಬಾರ್ ಎಲೆಗಳ ಪೈಕಿ ಸೇವಕನನ್ನು ಪ್ರತಿನಿಧಿಸುವ ಎಲೆ ಕಾಣೆಯಾಗಿದೆ. ರಾಜ ಎಲೆಯ ಒಂದೇ ಉದಾಹರಣೆ ಕೃಷ್ಣಕಟ್ಟಿನಲ್ಲಿದ್ದು ಕೃಷ್ಣನು ತನ್ನ ಪ್ರಿಯತಮೆಯೊಡನೆ ಆನೆಯೇರಿರುವುದನ್ನು ಚಿತ್ರಿಸಿದೆ. ಮೂರು ಕಟ್ಟುಗಳ ಪೈಕಿ ಒಂದು ಬ್ರಹ್ಮ ಮತ್ತೊಂದು ರಾಮನದಾದರೆ ಮೂರನೆಯದು ಗೊತ್ತಾಗುವುದಿಲ್ಲ. ಇವು ರಾಣಿಎಲೆಯನ್ನು ಪ್ರತಿನಿಧಿಸುತ್ತವೆ. ರಾಣಿಯ ಪಲ್ಲಕ್ಕಿಯಲ್ಲಿ ಕಾಣಿಸಿಕೊಂಡಿದ್ದಾಳೆ. ಮನ್ಮಥ, ಕೃಷ್ಣ ಮತ್ತು ಬ್ರಹ್ಮ ಕಟ್ಟುಗಳು ಅಮಾತ್ಯನನ್ನು ಪ್ರತಿನಿಧಿಸುತ್ತಿದ್ದು ಅವನು ರಥದಲ್ಲಿ ಕಾಣಿಸಿಕೊಳ್ಳುತ್ತಾನೆ. ರಾಮ ಮತ್ತು ಕೃಷ್ಣರ ಕಟ್ಟುಗಳು ಸೇನಾನಿಯನ್ನು ವರ್ಣಿಸುತ್ತವೆ. ಸೇನಾನಿ ಕುದುರೆಯನ್ನೇರಿದ್ದಾನೆ. ವಿಷ್ಣು, ರಾಮ, ಕೃಷ್ಣ, ಮತ್ತು ಮನ್ಮಥ ಕಟ್ಟುಗಳು ಧ್ವಜ ಎಲೆಯನ್ನು ಪ್ರತಿನಿಧಿಸುತ್ತವೆ. ಈ ಕಟ್ಟಿನಲ್ಲಿ ಅಧಿದೇವತೆಯ ಪಕ್ಕದಲ್ಲಿ ಕಾಣಬರುವ ಮೆಟ್ಟಿಲುಗಳಿಂದ ವೇದಿಕೆಯ ಮೇಲಿನ ಧ್ವಜವನ್ನು ಚಿತ್ರಿಸುತ್ತದೆ. ಈ ಎಲೆಗಳ ಆಧಾರದ ಮೇಲೆ ನಾವು ಕಟ್ಟಿನ ರಾಜಾಸ್ಥಾನದ (ದರ್ಬಾರಿನ) ಎಲೆಗಳನ್ನು ಪುನಾರಚಿಸಬಹುದು. ಪ್ರತಿಯೊಂದು ಕಟ್ಟಿನ ರಾಜರು ಆನೆಯ ಮೇಲೆ ಕುಳಿತಿದ್ದರೆ ರಾಣಿಯರು ಪಲ್ಲಕ್ಕಿಯಲ್ಲಿ ಕುಳಿತಿದ್ದಾರೆ. ಅವರ ಅಧಿಕಾರ, ಗೌರವಕ್ಕನುಗುಣವಾಗಿ ಅಮಾತ್ಯ ಮತ್ತು ಸೇನಾನಿಗಳು ರಥದ ಮೇಲೆ ಮತ್ತು ಕುದುರೆಯ ಮೇಲೆ ಕುಳಿತಿರುವುದನ್ನು ಚಿತ್ರಿಸಲಾಗಿದೆ. ಪದಾತಿಯನ್ನು ಇತರ ಭದ್‌ಗಳಲ್ಲಿ ಕಾಲಾಳೆಂದು ತೋರಿಸಿರುವುದರಿಂದ ಈ ಕಟ್ಟಿನಲ್ಲೂ ಹಾಗೆಯೇ ಎಂದು ನಾವು ಊಹಿಸಬಹುದಾಗಿದೆ.

ಸಂಖ್ಯೆಗಳನ್ನು ತೋರಿಸುವ ಎಲೆಗಳಲ್ಲಿ ಪ್ರತಿಯೊಂದು ಕಟ್ಟಿನ ಅಧಿದೇವತೆ ಪೀಠದ ಮೇಲೆ

೩೦. Dr. Sarala Chopra., Ganjifa, PP. 196-197

ಕುಳಿತಿರುವಂತೆ ತೋರುತ್ತದೆ. ಕಟ್ಟಿನಲ್ಲಿ ಒಂದರಿಂದ ಹನ್ನೆರಡು ಸಂಖ್ಯೆಗಳನ್ನು ರಾಶಿಚಿಹ್ನೆಗಳ ಮೂಲಕ ಅರ್ಧವೃತ್ತಾಕಾರದ ಪೀಠಗಳ ಕೆಳಗೆ ಚಿತ್ರಿಸಿದೆ. ರಾಶಿಚಿಹ್ನೆಗಳನ್ನು ಅವುಗಳ ಪರಂಪರೆಯ ರೀತಿಯಲ್ಲಿ ಚಿತ್ರಿಸಲಾಗಿದೆ. ಹೋತ (ಗಂಡು ಮೇಕೆ) ಮೇಷರಾಶಿಯದು. ವೃಷಭ ರಾಶಿಗೆ ಗೂಳಿ, ಮಿಥುನ ರಾಶಿಗೆ ವೀಣೆ ಮತ್ತು ಗದೆ, ಕಟಕರಾಶಿಗೆ ಏಡಿ, ಸಿಂಹರಾಶಿಗೆ ಸಿಂಹ, ಕನ್ಯಾರಾಶಿಗೆ ದೋಣಿಯಲ್ಲಿ ಸ್ತ್ರೀಯ ತಲೆ, ತುಲಾರಾಶಿಗೆ ತಕ್ಕಡಿ, ವೃಶ್ಚಿಕರಾಶಿಗೆ ಚೇಳು, ಬಿಲ್ಲು ಬಾಣಗಳು ಧನುಸ್‌ರಾಶಿಗೆ, ಮಕರ ರಾಶಿಗೆ ಮೊಸಳೆ, ಕುಂಭ ರಾಶಿಗೆ ಗಡಿಗೆ–ಹೀಗೆ ರಾಶಿ ಚಕ್ರಗಳಾಗಿ ಬಂದಿವೆ. ವೀಣಾ ಮತ್ತು ಗದೆಗಳು ಕಲಾವಿದನ ಕಲ್ಪನೆಗಳಾಗಿದ್ದು ಮಿಥುನವನ್ನು ಸೂಚಿಸುತ್ತವೆ. ಈ ಕಟ್ಟಿನಲ್ಲಿ ಮೀನರಾಶಿ ಕಾಣಿಸುತ್ತಿಲ್ಲ. ಆದರೆ ರಾಶಿ ಚಿಹ್ನೆಗಳ ಸಾಮಾನ್ಯ ನಮೂನೆಯಲ್ಲಿ ಮೀನಿನ ಚಿತ್ರವಿರುವುದರಿಂದ ಅದನ್ನು ಮೀನರಾಶಿಯೆಂದು ಊಹಿಸಬಹುದು. ಮನ್ಮಥ ಕಟ್ಟಿನಲ್ಲಿ ರಾಶಿಚಕ್ರದ ವೃಷಭರಾಶಿಗೆ ಸಂಬಂಧಿಸಿದಂತೆ ಎರಡು ಎಲೆಗಳಿವೆ. ಇವೆರಡೂ ಗೂಳಿಯ ಚಿತ್ರವನ್ನು ತೋರಿಸುತ್ತವೆ. ಅವುಗಳಲ್ಲಿ ಒಂದು ವಾಸ್ತವವಾಗಿ ಒಂದೇ ಹೋಲಿಕೆಯ ಎಲೆ. ಇದಕ್ಕೆ ಕಾರಣ ವಸ್ತು ಸಂಗ್ರಹಾಲಯಕ್ಕೆ ಮಾರಿದ ಮಾರಾಟಗಾರನಿಂದ ಇದು ಸಂಭವಿಸಿರಬಹುದು ಇಲ್ಲವೆ ಒಂದೇ ರೀತಿಯ ಎರಡು ಕಟ್ಟುಗಳನ್ನು ಹೊಂದಿದ್ದ ಮಾಲಿಕನಿಂದಾಗಿರಬಹುದು.

ಕಟ್ಟಿನಲ್ಲಿ ಪ್ರತಿನಿಧಿತವಾಗಿರುವ ದೇವತೆಗಳು ಕಟ್ಟುನಿಟ್ಟಾದ ಪ್ರತಿಮಾವಿವರಣ ಚಿತ್ರ ಸೂಚನೆಗಳಿಗನುಗುಣವಾಗಿವೆ. ಸಾಮಾನ್ಯವಾಗಿ ಆಕೃತಿಗಳು ಅಷ್ಟೊಂದು ಮನೋಹರವಾಗಿಲ್ಲ. ಕೃಷ್ಣನ ಮುಖದಲ್ಲಿ ಸೌಂದರ್ಯವನ್ನು ಕಾಣುವುದು ಸಾಧ್ಯವಿಲ್ಲ, ಹಾಗೆಯೇ ರಾಮನ ಕಟ್ಟಿನಲ್ಲಿರುವ ದೇವತೆಗಳ ಪ್ರತಿನಿಧಿಗಳ ಬಗೆಗೂ ಇದೇ ಮಾತುಗಳನ್ನು ಹೇಳಬಹುದು. ಇಲ್ಲಿನ ದೇವತೆಗಳ ಬಗ್ಗೆ ಒಂದೇ ಬಗೆಯ ವೈವಿಧ್ಯರಹಿತ ಚಿತ್ರಣವನ್ನು ಕಾಣಬಹುದು. ಆದರೆ ಮನ್ಮಥನ ಚೈತನ್ಯಪೂರ್ಣ ವ್ಯಕ್ತಿತ್ವವೊಂದು ವಿನಾಯತಿಯೆಂದು ಹೇಳಬಹುದು. ಅನುರಾಗದೇವತೆಯನ್ನು ಪ್ರತಿಯೊಂದು ಎಲೆಯ ಮೇಲೂ ಅಂಗಸೌಷ್ಠವದಿಂದ ಕೂಡಿದ, ಚೈತನ್ಯದಾಯಕ ಚೆಲುಮೆಯಂತೆ ಚಿತ್ರಿಸಲಾಗಿದೆ. ಆತನ ಮುಖದಲ್ಲಿ ಕಾಮನ ಮೋಹಕವದನವಿದ್ದು ಸದೃಢವಾದ ದೇಹವಿದೆ.

ಪೀಠಗಳ ಮೇಲೆ ಚಿತ್ರಿತವಾಗಿರುವ ರಾಶಿಚಿಹ್ನೆಗಳು ಕಲಾವಿದನ ಸಾಮರ್ಥ್ಯ ಮತ್ತು ನೈಪುಣ್ಯವನ್ನು ತೋರಿಸುತ್ತವೆ. ಕಲಾವಿದನು ಮುಖ್ಯ ಚಿತ್ರದಂತೆಯೇ ಈ ಪುಟ್ಟ ಆಕೃತಿಗಳನ್ನೂ ಅಷ್ಟೇ ಆಸಕ್ತಿಯಿಂದ ಚಿತ್ರಿಸಿದ್ದಾನೆ. ವಿಷಪೂರಿತ ಚೇಳಿನ ಸಹಜವಾದ ಚಿತ್ರ ಹಾಗೂ ಮಕರ ರಾಶಿಯಲ್ಲಿರುವ ಸದಾ ಜಾಗ್ರತವಾದ ಮೊಸಳೆಯ ಚಿತ್ರ ಇವು ಕೆಲವು ಉದಾಹರಣೆಗಳು. ಈ ಪ್ರಾಣಿಗಳ ಆಂತರಿಕ ಸ್ವಭಾವವನ್ನು ಕಲಾವಿದ ತಿಳಿದುಕೊಂಡಿರುವುದನ್ನು ನಾವು ನೋಡಬಹುದು.

ದೇವತೆಗಳು ಹಿಂದೂಗಳ ಸಾಂಪ್ರದಾಯಿಕ ಉಡುಗೆಗಳಲ್ಲಿರುವುದನ್ನು ಕಾಣಬಹುದು. ಗಂಡು ದೇವತೆಗಳು ಧೋತಿ, ದುಪ್ಪಟ್ಟಾ (ವಲ್ಲಿ) ಮತ್ತು ಪಟ್ಕಾಗಳನ್ನು ಉಟ್ಟರೆ, ಹೆಣ್ಣುದೇವತೆಗಳು ಸೀರೆ, ಕುಪ್ಪಸ ಮತ್ತು ದುಪ್ಪಟ್ಟಾ ಧರಿಸಿರುವುದನ್ನು ಕಾಣಬಹುದು. ದುಪ್ಪಟ್ಟಾವನ್ನು ಯಾವಾಗಲೂ ವಿಶಿಷ್ಟ ಶೈಲಿಯಲ್ಲಿ ಉಟ್ಟುಕೊಂಡಿದ್ದು ಅದರ ಅಂಚುಗಳು ಎರಡೂ ಕಡೆ ಗಾಂಭೀರ್ಯದಿಂದ ತೊನೆದಾಡುತ್ತಿವೆ. ದೇವತೆಗಳು ಕೈಬಳೆ ಮತ್ತು ಕಾಲ್ಗಡಗಗಳಿಂದ, ತೋಳ್‌ಬಂಧಿಗಳಿಂದ, ಹಾರಗಳಿಂದ, ತಿಲಕ ಮತ್ತು ಕಿರೀಟಗಳಿಂದ ಕಂಗೊಳಿಸುತ್ತಾರೆ. ದೇವತೆಗಳು ಧರಿಸಿರುವ ಕಿರೀಟಗಳು ಗಡಿಗೆಯಾಕಾರದಲ್ಲಿದ್ದು ದಕ್ಷಿಣ ಭಾರತದ ಕಿರೀಟವನ್ನು ನೆನಪಿಸುತ್ತವೆ. ಆದರೆ ಕೃಷ್ಣನ ಕಿರೀಟವೊಂದು ಅಪವಾದವಾಗಿದ್ದು ಇದು ನವಿಲುಗರಿಗಳಿಂದ ಮಾಡಲ್ಪಟ್ಟಿದೆ.

ಇಂದ್ರಾಣಿ







ಹಣಮಂತ

(Top l. to r.) Daṇḍinī of Indrāṇī suit **(16)** *Amātya* **(21)** *(Bottom) Sevaka - Hanu Bhairava* **(17)**





(Top to bottom) Vīṇādhara Dakṣiṇāmūrti Śiva 5 ***(18)*** *Umā Maheśvara 4* ***(18)***

ರಾಣಿ ಎಲೆಗಳಲ್ಲಿ ಬರುವ ರಾಣಿಯ ಪಲ್ಲಕ್ಕಿಯನ್ನು ನಾಲ್ಕು ಮಂದಿ ಬರಿಗಾಲಿನ ಸೇವಕಿಯರು ಕೊಂಡೊಯ್ಯುತ್ತಿದ್ದು ಅವರ ಚಿತ್ರಣ ನಾಜೂಕಿನಿಂದ ಕೂಡಿಲ್ಲ. ಅಮಾತ್ಯರ ರಥಕ್ಕೆ ನಾಲ್ಕು ಚಕ್ರಗಳಿದ್ದು ಚಿತ್ರದಲ್ಲಿ ಎರಡೇ ಚಕ್ರಗಳು ಕಾಣಿಸುತ್ತವೆ. ಅದನ್ನು ಸಾರಥಿಯೊಬ್ಬ ಓಡಿಸುತ್ತಿದ್ದಾನೆ. ರಥದ ಕುದುರೆಗಳು, ಸಾರಥಿ ಮತ್ತು ಪಲ್ಲಕ್ಕಿ ಹೊತ್ತ ಸೇವಕರು ಇವರನ್ನೆಲ್ಲ ಪುಟ್ಟದಾಗಿ ಚಿತ್ರಿಸಿದ್ದಾನೆ. ಈ ಪುಟ್ಟ ಚಿತ್ರಗಳ ಅಭಿವ್ಯಕ್ತಿಗಳು ಮತ್ತು ಕ್ರಿಯೆಗಳ ಬಗ್ಗೆ ಕಲಾವಿದನಿಗೆ ಪ್ರಧಾನ ದೇವತೆಗಳ ವಿಷಯದಲ್ಲಿರುವಷ್ಟು ಆಸಕ್ತಿ ಇಲ್ಲವೆಂದೋ ಅಥವಾ ಸಣ್ಣ ಆಕೃತಿಗಳಿಂತ ದೊಡ್ಡ ಆಕೃತಿಗಳಿಗೇ ವಿಶೇಷ ಪ್ರಾಮುಖ್ಯವನ್ನು ನೀಡಿ ಅವುಗಳ ನಡುವಣ ವ್ಯತ್ಯಾಸವನ್ನು ತಿಳಿಸಬೇಕೆಂಬ ಸಾಂಪ್ರದಾಯಿಕ ರೀತಿಯೇ ಇದಕ್ಕೆ ಕಾರಣವಿರಬಹುದು.

ಎಲೆಕಟ್ಟುಗಳ ಕಲಾವಿದನಿಗೆ ಆಭರಣಗಳ ಬಗ್ಗೆ ಹೆಚ್ಚಿನ ವ್ಯಾಮೋಹವಿದ್ದಂತೆ ತೋರುತ್ತದೆ. ಪ್ರಾಣಿಗಳು, ದೋಣಿಗಳು, ರಥಗಳು, ಪಲ್ಲಕ್ಕಿಗಳು, ಹೂಜಿಗಳು, ಆಭರಣಗಳಿಂದ ಅಲಂಕೃತವಾಗಿವೆ. ಇಲ್ಲವೆ ಎಲೆಗಳ ಗೊಂಚಲುಗಳಿವೆ. ಕೃಷ್ಣರಾಜಎಲೆಯ ಆನೆ, ವೃಷಭರಾಶಿಯ ಗೂಳಿ, ರಾಮನ ಮತ್ತು ಕೃಷ್ಣನ ಸೇನಾನಿಗಳ ಕುದುರೆಗಳೆಲ್ಲವೂ ಹಾರಗಳು, ಬಳೆಗಳು, ಪೀಠಬಂಧ, ಝುಲ (ತೊಟ್ಟಿಲು) ಮತ್ತಿತರ ಅಲಂಕಾರ ವಸ್ತುಗಳಿಂದ ರಥವನ್ನು ಸಿಂಗರಿಸಿವೆ. ಕನ್ಯಾರಾಶಿಯ ದೋಣಿ ಕೂಡ ಎರಡು ಅಡ್ಡ ರೇಖೆಗಳನ್ನು ತನ್ನ ಒಡಲಿನ ಮೇಲೆ ಹೊಂದಿದೆ. ಮೇಲ್ಭಾಗದ ತುದಿಗಳಲ್ಲಿ ಮುತ್ತಿನ ವಿನ್ಯಾಸವಿದೆ. ಬ್ರಹ್ಮಕಟ್ಟಿನ ಎಲೆ ಹೂಜಿಕೆತ್ತನೆಯಿಂದ ಕೂಡಿದೆ. ಕುಂಭರಾಶಿಯ ಚಿಹ್ನೆಯೂ ಸಾಮಾನ್ಯ ಮಡಕೆಯಲ್ಲಿ ಆದರೆ ಅದೊಂದು ಮಂಗಳಕಟ್ಟು.

ಮುಖ್ಯ ಆಕೃತಿಗಳ ರಚನೆಯಲ್ಲಿ ಏಕರೂಪತೆಯಿದ್ದರೂ ವಿನ್ಯಾಸಗಳ ಬಗ್ಗೆ ಎದ್ದು ಕಾಣುವಷ್ಟು ವ್ಯತ್ಯಾಸಗಳು ಮತ್ತು ಬದಲಾವಣೆಗಳು ಇವೆ. ಧ್ವಜ ಎಲೆ ಇದಕ್ಕೆ ಒಂದು ಉದಾಹರಣೆ. ಧ್ವಜದ ಸ್ಥಾನ ಎಲ್ಲದರಲ್ಲೂ ಒಂದೇ ಇಲ್ಲ. ವಿಷ್ಣು, ರಾಮ ಮತ್ತು ಕೃಷ್ಣರ ಕಟ್ಟುಗಳಲ್ಲಿನ ಧ್ವಜಎಲೆಗಳಲ್ಲಿ ದೇವರ ಎಡಭಾಗದಲ್ಲಿ ಧ್ವಜವಿರುವುದು ಕಂಡುಬಂದರೆ, ಮನ್ಮಥ ಧ್ವಜದ ಎಡಭಾಗಕ್ಕೆ ದೇವರನ್ನು, ಬಲಭಾಗಕ್ಕೆ ಧ್ವಜವನ್ನು ಚಿತ್ರಿಸುತ್ತದೆ. ಇದು ಏಕೆ ಹೀಗಾಗಿದೆ ಎಂದರೆ ಬಹುಶಃ ಕಟ್ಟಿನಲ್ಲಿ ಅನೇಕರ ಕೈವಾಡವಿದ್ದಿರಬಹುದು. ಮನ್ಮಥಕಟ್ಟಿನಲ್ಲಿ ಸಾದೃಶ್ಯ (ಪಡಿಯಚ್ಚು) ಎಲೆಯಿದ್ದು ಸಂಖ್ಯೆ ಎರಡನ್ನು ಪ್ರತಿನಿಧಿಸುತ್ತದೆ. ಇದರಿಂದ ಈ ಎಲೆ ಬೇರೆ ಕಟ್ಟಿನಿಂದ ಬಂದು ಇಲ್ಲಿ ಮಿಶ್ರವಾಗಿರಬೇಕು ಎನಿಸುತ್ತದೆ. ಬಹುಶಃ ಮೇಲಿನ ಧ್ವಜ ಬೇರೊಂದು ಕಟ್ಟಿಗೆ ಸಂಬಂಧಿಸಿರಬಹುದು. ಅಲ್ಲಿ ಧ್ವಜ ಬಲಗಡೆಯಿದ್ದು ಮಾಲಿಕನೊ ಇಲ್ಲ ವ್ಯಾಪಾರಿಯೊ ಅಚಾನಕ್ಕಾಗಿ ಈ ಕಟ್ಟಿನೊಂದಿಗೆ ಮಿಶ್ರಮಾಡಿರಬಹುದು. ಬ್ರಹ್ಮಕಟ್ಟಿನಲ್ಲಿ ದೇವರು ಹಿಡಿದಿರುವ ಕಮಂಡಲುಗಳನ್ನು ಎರಡು ಬಗೆಯಲ್ಲಿ ಚಿತ್ರಿಸಿದೆ. ಬ್ರಹ್ಮಕಟ್ಟಿನ ಎರಡು ಮತ್ತು ಆರನೆ ಸಂಖ್ಯೆಯ ಎಲೆಗಳು ಕಮಂಡಲುಗಳಿಂದ ಧಾರೆಯಾಗಿ (ನೀರು) ಹರಿಯುವುದನ್ನು ಚಿತ್ರಿಸಿದರೆ, ಒಂಭತ್ತನೆ ಸಂಖ್ಯೆಯ ಮತ್ತು ಅದೇ ಕಟ್ಟಿನ ಆಮಾತ್ಯಎಲೆಯ ದೇವತೆ ಎಡಕೈಯಲ್ಲಿ ಹಿಡಿದಿರುವ ಘಟವನ್ನು (ನೀರು ಹರಿಯದ) ಚಿತ್ರಿಸುತ್ತದೆ.

ಈ ಕಟ್ಟಿನಲ್ಲಿ ದೇವರನ್ನು ಅಭಿಮುಖವಾಗಿರುವಂತೆ ಚಿತ್ರಿಸಿದೆ. ಮನ್ಮಥ ಕಟ್ಟಿನಲ್ಲಿ ಮಾತ್ರ ಇದಕ್ಕೆ ವಿನಾಯಿತಿಯಿದೆ. ಅಲ್ಲಿ ದೇವರನ್ನು ಎರಡು ಅಥವಾ ಮೂರು ಪಾರ್ಶ್ವಗಳಲ್ಲಿ ಚಿತ್ರಿಸಿದೆ. ಕಲಾವಿದನಿಗೆ ಚಿತ್ರವನ್ನು ನೇರವಾಗಿ ಚಿತ್ರಿಸಬೇಕೆಂಬ ಅಪೇಕ್ಷೆಯಿದ್ದರೂ ಅಸಹಜತೆಯಿಂದಾಗಿ ಅದು ಪಾರ್ಶ್ವಚಿತ್ರಣದಲ್ಲಿ ಪರ್ಯವಸಾನಗೊಂಡಿದೆ. ರಾಮ ಮತ್ತು ಕೃಷ್ಣರ ಕಟ್ಟುಗಳಲ್ಲಿ ಸೇನಾನಿ ಎಲೆಗಳು ಈ ಮಾದರಿಗೆ

ಉದಾಹರಣೆ. ದೇವರು ಕುದುರೆಯ ಬೆನ್ನೇರಿ ಅಭಿಮುಖವಾಗಿವೆ. ಕಣ್ಣಿಗೆ ಕಾಣಿಸುವ ಒಂದು ಕಾಲು ಕುದುರೆಯ ರಿಕಾಪಿನೊಳಗಡೆ ಇದೆ. ಮೆರವಣಿಗೆ ಹೊರಟಾಗ ಅವರ ಮುಮ್ಮುಖವನ್ನು ತೋರಿಸಬೇಕೆಂಬ ಕಲ್ಪನೆಯಿದೆ. ಇದರಿಂದ ಭಕ್ತರಿಗೆ ದೇವರ ಪೂರ್ಣ ದರ್ಶನ ಲಭಿಸುತ್ತದೆ. ಆದರೆ ಕಲಾವಿದನ ಚಿತ್ರಣ ಬಹು ದುರ್ಬಲವಾಗಿರುವುದರಿಂದ ಸೌಂದರ್ಯಾತ್ಮಕ ಅಗತ್ಯಗಳಿಗೆ ಪೂರ್ಣ ನ್ಯಾಯ ಒದಗಿಸದೆ ಇರುವುದರಿಂದ ಕುದರೆಯ ಮೇಲೆ ಕುಳಿತ ದೇವರ ಮುಂಭಾಗ ಅಷ್ಟೊಂದು ಪರಿಪೂರ್ಣವಾಗಿಲ್ಲ ಮತ್ತು ದೇವರ ಮೂರ್ತಿಗಳು ನೋಡಲು ಹಿತಕರವಾಗಿಲ್ಲ.

ಸೌಂದರ್ಯಾತ್ಮಕ ದೃಷ್ಟಿಯಿಂದ ಪರಿಶೀಲಿಸಿದಾಗ ಚಿತ್ರಗಳನ್ನು ಅತ್ಯಂತ ಉನ್ನತ ಮಟ್ಟದವುಗಳೆಂದು ಹೇಳಬರುವುದಿಲ್ಲ. ಆದರೆ ಅವರ ತಾಂತ್ರಿಕತೆ ಮಾತ್ರ ನಿಸ್ಸಂದೇಹವಾಗಿ ಗಮನಾರ್ಹವಾದುದು. ಎಲೆಗಳನ್ನು ಬಹಳ ಸಲ ಉಪಯೋಗಿಸಿರುವುದರಿಂದ ಬಣ್ಣಗಳು ಮಾಸಿಹೋಗಿರುವುದಲ್ಲದೆ ಅಂಚುಗಳಿಗೆ ಧಕ್ಕೆಯಾಗಿವೆ. ಆದಾಗ್ಯೂ ಬಹುಮಟ್ಟಿನ ಎಲೆಗಳ ಮೇಲ್ಭಾಗ ನುಣುಪಾಗಿದೆ ಮತ್ತು ಗಟ್ಟಿಯಾಗಿದೆ. ಒಟ್ಟು ಕಟ್ಟಿನಲ್ಲಿರುವ ವಿಷ್ಣು, ಬ್ರಹ್ಮ, ಕೃಷ್ಣ ಮತ್ತು ರಾಮ ಕಟ್ಟುಗಳಲ್ಲಿನ ಎಲೆಗಳಲ್ಲಿ ತೆಳುಪದರಗಳು ಎದ್ದುಬಂದಿರುವುದಾಗಲಿ ಇಲ್ಲವೆ ಗೀರುಗಳಾಗಿರುವುದಾಗಲಿ ಕಂಡು ಬರುವುದಿಲ್ಲ. ಸಾಮಾನ್ಯ ಗಂಜೀಫಾ ಎಲೆಗಳ ಸಾಮಾನ್ಯ ಲಕ್ಷಣವೇ ಇದು. ಬಣ್ಣಗಳು ಮಾಸಿಹೋಗಿರುವುದರಿಂದ ಮತ್ತು ಪದರಗಳು ಮೇಲೆದ್ದಿರುವುದರಿಂದ ಮನ್ಮಥನ ಸೌಂದರ್ಯಕ್ಕೆ ಧಕ್ಕೆಯಾಗಿದೆ ಹಾಗೂ ಮನ್ಮಥ ಕಟ್ಟಿನ ಎಲೆಗಳ ಮೇಲ್ಮೈಗೆ ಹಾನಿಯಾಗಿದೆ.

ಎಲೆಗಳ ಹಿಂಭಾಗವನ್ನು ಸಾಮಾನ್ಯ ಕಿತ್ತಳೆ ಬಣ್ಣದಿಂದ ಚಿತ್ರಿಸಲಾಗಿದೆ. ಎಲೆಯ ಮುಂಭಾಗ ಕಪ್ಪು ಅಂಚಿನಿಂದ ಶೋಭಿತವಾಗಿದ್ದು ವೃತ್ತಾಕಾರದ ರೇಖೆಗಳಿಂದ ಮತ್ತು ಹೂಗಳ ಅಲಂಕರಣಗಳಿಂದ ಕೂಡಿವೆ. ಎಲೆಯ ಕೆಳಭಾಗದ ಬಣ್ಣಗಳು ನಸು ಹಳದಿ ಕಂದುಬಣ್ಣ, ಕಂದುಬಣ್ಣ ಮತ್ತು ಕೆಂಪು. ಶಿಷ್ಟ ಚಿತ್ರಣದ ಆಧಾರದ ಮೇಲೆ ಈ ಕಟ್ಟನ್ನು ಮಧ್ಯಮ ವರ್ಗದ ಸಂಸಾರಕ್ಕಾಗಿ ಸಿದ್ಧಪಡಿಸಲಾಗಿದೆ ಎಂದು ಊಹಿಸಬಹುದು. ಅವರು ಅದನ್ನು ಬಹುಕಾಲ ಆಡಿದ್ದಿರಬಹುದು. ಹೀಗಾಗಿ ಈ ಆಟ ಜನಸಾಮಾನ್ಯರ ನಡುವೆಯೂ ಜನಪ್ರಿಯವಾಗಿತ್ತೆಂಬುದನ್ನು ಸೂಚಿಸುತ್ತದೆ.[೩೧]

ವಿಷ್ಣುವಿನ ಧ್ವಜ

ನೀಲಿವರ್ಣದಿಂದ ಕೂಡಿ ಚತುರ್ಭುಜನಾಗಿರುವ ವಿಷ್ಣು ಅಭಿಮುಖವಾಗಿ ಮೆಟ್ಟಿಲುಗಳಿಂದ ಕೂಡಿದ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ಮಧ್ಯದಲ್ಲಿ ವೃತ್ತದೊಂದಿಗೆ ಕೆಂಪು ಮತ್ತು ಬೂದು ಬಣ್ಣದ ಧ್ವಜ ಶೋಭಿಸುತ್ತಿದೆ. ಎಡಗಡೆ ಭಾಗದಲ್ಲಿ ಮೇಲುಗಡೆ ಎರಡು ಕುಚ್ಚುಗಳು ಇಳಿಬಿದ್ದಿವೆ. ಬಲಗೈ ಮೇಲ್ಭಾಗದಲ್ಲಿ ವಿಷ್ಣು ಚಕ್ರವನ್ನು ಮತ್ತು ಎಡಗೈ ಮೇಲ್ಭಾಗದಲ್ಲಿ ಶಂಖವನ್ನು ಹಿಡಿದಿದ್ದಾನೆ. ಅವನ ಕೆಳಭಾಗದ ಎರಡು ಕೈಗಳು ವರದ ಮುದ್ರೆಯಿಂದ ಶೋಭಿತವಾಗಿವೆ. ಆತನು ಸಾಸಿವೆ ಬಣ್ಣದ ಧೋತಿಯನ್ನುಟ್ಟಿದ್ದಾನೆ, ತೆಳು ಉದಾ ಬಣ್ಣದ ಹಸಿರು ಅಂಚುಗಳಿಂದ ಕೂಡಿದ ಅಂಗವಸ್ತ್ರ (ದುಪಟ್ಟಾ) ಹೊದ್ದಿದ್ದಾನೆ. ಕಿರೀಟ ಧರಿಸಿದ್ದಾನೆ, ಹಾರಗಳನ್ನು ಮತ್ತು ಕೈಕಡಗಗಳನ್ನು ಹಾಕಿಕೊಂಡಿದ್ದಾನೆ. ಹಣೆಯಲ್ಲಿ ಶ್ರೀವತ್ಸಲಾಂಛನವಿದೆ. ನೆಲದ ಬಣ್ಣ ಕೆಂಪು, ಎಲೆಯ ಅಂಚು ಹೂವಿನ ವಿನ್ಯಾಸಗಳಿಂದ ಮತ್ತು ಮೂರು ದಪ್ಪನಾದ ಹಳದಿಗೆರೆಗಳಿಂದ ಕೂಡಿದೆ. ಕಪ್ಪು ಗೆರೆಗಳಿಂದ ಕೂಡಿದ ಪೀಠವು ಹಳದಿ ಬಣ್ಣದ ಚೌಕಟ್ಟಿನೊಳಗೆ ಚಿತ್ರಿತವಾಗಿದೆ. ಅನೇಕ ಕಡೆ ಬಣ್ಣಗಳು ಮಸುಕಾಗಿವೆ. ಇದರಿಂದಾಗಿ ದೇವರ ಮುಖಚಹರೆಗಳು ಮತ್ತು ಚಿತ್ರಣಗೊಂಡಿರುವ ಎಲೆಯ ಸೌಂದರ್ಯ ಬಹುಮಟ್ಟಿಗೆ ಹಾನಿಗೀಡಾಗಿದೆ.

---

೩೧. Dr. Sarala Chopra., Ganjifa, PP. 199-200

ವಿಷ್ಣು ಕಟ್ಟಿನ ನಾಲ್ಕನೆಯ ಎಲೆ

ತೆಳು ಹಸಿರುಬಣ್ಣದಲ್ಲಿ ಚಿತ್ರಿತವಾಗಿರುವ ಮೌನ ವಿಷ್ಣು ಅರ್ಧವೃತ್ತಾಕಾರದ ಪೀಠದಲ್ಲಿ ಉತ್ಕುಂಠಿತಾಸನದಲ್ಲಿ ಕುಳಿತಂತೆ ತೋರುತ್ತದೆ. ಎಲೆಯ ನಾಲ್ಕನೆಯ ಸಂಖ್ಯೆಯನ್ನು ಸೂಚಿಸುವ ಕಟಕರಾಶಿಯ ಸಂಕೇತವಾದ ಏಡಿಯು ನೀಲಿಪೀಠದ ಕೆಳಗೆ ಚಿತ್ರಿತವಾಗಿದೆ. ಸ್ವಾಮಿಯು ತೆಳು ಹಸಿರು ಬಣ್ಣದ ಧೋತಿಯನ್ನುಟ್ಟಿದ್ದಾನೆ. ಅದರ ಅಂಚುಗಳು ಎರಡೂ ಕಡೆಗೂ ತೊನೆದಾಡುತ್ತಿವೆ. ಅರ್ಧತೋಳಿನ ಹಳದಿ ಅಂಗಿಯನ್ನು ಧರಿಸಿದ್ದಾನೆ. ತಲೆಯ ಮೇಲೆ ಕಿರೀಟ, ಹಾರಗಳು, ಕೈಕಡಗಗಳು ಮತ್ತು ಶ್ರೀವತ್ಸದಿಂದ ಶೋಭಿತನಾಗಿದ್ದಾನೆ. ಆತನ ಎಡಗೈ ಎಡತೊಡೆಯ ಮೇಲಿದ್ದರೆ ಬಲಗೈ ಮೌನದ ಸಂಕೇತವನ್ನು ಸೂಚಿಸುತ್ತದೆ. ಹಣೆಯ ಮೇಲೆ ಅಂಚಿನ ಅನೇಕ ಕಡೆಗಳಲ್ಲಿ ಮತ್ತು ಹಿನ್ನೆಲೆಯಲ್ಲಿ ಬಣ್ಣಗಳು ಮಾಸಿ ಹೋಗಿದ್ದರೂ ಧ್ಯಾನಮಗ್ನನಾಗಿ ಅರ್ಧ ಮುಚ್ಚಿದ ಕಣ್ಣುಗಳಿಂದ ಕೂಡಿ ಪ್ರಶಾಂತ ಅಭಿವ್ಯಕ್ತಿ ಸೂಚಿಸುತ್ತಿರುವ ಮುಖ ತುಂಬ ಸುಂದರವಾಗಿದೆ. ಸ್ವಾಮಿಯ ಎಡಗೈ ಮತ್ತು ಪಾದಗಳನ್ನು ಒರಟಾಗಿ ಚಿತ್ರಿಸಲಾಗಿದೆ. ಸ್ವಾಮಿಯ ಮುಖಮುದ್ರೆ, ಸಹಜವರ್ಣ, ಮತ್ತು ಹಿನ್ನೆಲೆಗಳು ಕಟ್ಟಿನ ಧ್ವಜದ ಎಲೆಗಿಂತ ವಿಭಿನ್ನವಾಗಿವೆ. ಕಂದು ಬಣ್ಣದಿಂದ ಕೂಡಿದ ಕೆಂಪು ಹಿನ್ನೆಲೆಯ ಈಗಿನ ಎಲೆಯು ಅಚ್ಚ ಕೆಂಪು ಬಣ್ಣದಿಂದ ಕೂಡಿದೆ. ವಿಷ್ಣುವಿನ ಧ್ವಜದ ಎಲೆಗಿಂತ ಭಿನ್ನವಾಗಿದೆ. ಈಗಿನ ಎಲೆಯು ಮತ್ತೊಂದು ಚಾಮುಂಡೇಶ್ವರಿ ಕಟ್ಟಿನ ಎಲೆಯಂತೆ ತೋರುತ್ತದೆ. ಒಂದೇ ಶೈಲಿಯ ಎರಡು ಚಾಮುಂಡೇಶ್ವರಿ ಕಟ್ಟುಗಳನ್ನು ಹೊಂದಿದ್ದ ಮಾರಾಟಗಾರನಾಗಲಿ ಇಲ್ಲವೆ ಮಾಲಿಕನಾಗಲಿ ಇದನ್ನು ಈಗಿನ ಕಟ್ಟಿನೊಂದಿಗೆ ಸೇರಿಸಿರಬೇಕು.[೨೨]

ಬ್ರಹ್ಮ ಕಟ್ಟಿನ ಸರಸ್ವತೀ ರಾಣೀ

ಅಭಿಮುಖವಾಗಿ ಪದ್ಮಾಸನದಲ್ಲಿ ಸರಸ್ವತಿದೇವಿಯು ಕುಳಿತಿದ್ದಾಳೆ. ಒಂದೊಂದು ಕಡೆ ಇಬ್ಬರು, ನಾಲ್ಕು ಮಂದಿ ಸೇವಕಿಯರು ದೇವಿಯನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಹೊತ್ತುಕೊಂಡಿದ್ದಾರೆ. ನಾಲ್ಕು ಕೈಗಳ ದೇವಿಯು ತನ್ನ ಸ್ವಾಭಾವಿಕ ಕೈಗಳಿಂದ ವೀಣೆಯನ್ನು ನುಡಿಸುತ್ತಿದ್ದಾಳೆ. ಅವಳ ಕೆಳ ಬಲಗೈ ಕಟಕ ಮುದ್ರೆಯಲ್ಲಿದ್ದು, ಎಡಗೈ ತೊಡೆಯ ಮೇಲಿದೆ. ಗೋಧಿ ಬಣ್ಣ ಮಿಶ್ರಿತ ಊದಾ ಬಣ್ಣದ ಕಾಂತಿಯಿಂದ ಕೂಡಿ ದೇವಿಯು ಕೆಂಪು ಸೀರೆ, ಚೋಳಿಯನ್ನು ಧರಿಸಿದ್ದಾಳೆ. ಕಿರೀಟವನ್ನು ಮತ್ತು ಬಳೆಗಳನ್ನು ಹಾಕಿಕೊಂಡಿದ್ದಾಳೆ. ಬಣ್ಣಗಳು ಮಸುಕಾಗಿರುವುದರಿಂದ ಮುಖಚಹರೆ ಸ್ಪಷ್ಟವಾಗಿ ಕಾಣಿಸುತ್ತಿಲ್ಲ. ಪಾರ್ಶ್ವಮುಖದಲ್ಲಿ ನಿಂತಿರುವ ಸೇವಕಿಯರು ಬರಿಗಾಲಲ್ಲಿದ್ದು ಕೆಂಪು ಮತ್ತು ಹಸಿರು ಸೀರೆ ಮತ್ತು ಚೋಲಿಯನ್ನು ಧರಿಸಿದ್ದಾರೆ. ಅವರ ಇಳಿಜಾರಿನಂತಿರುವ ಹಣೆಗಳು, ಎದ್ದು ಕಾಣುವ ಮೂಗುಗಳು ಮತ್ತು ದೊಡ್ಡ ಕಣ್ಣುಗಳಿಂದ ವಿಭಿನ್ನರಾಗಿದ್ದಾರೆ. ಕಟ್ಟಿನ ಇತರ ಎಲೆಗಳಂತೆ ಎಲೆಯು ನಸು ಹಳದಿ, ಕೆಂಪು ಬಣ್ಣದ ನೆಲ, ಹೂವಿನ ಅಂಚುಗಳಿಂದ ಮತ್ತು ವೃತ್ತಾಕಾರದ ರೇಖೆಗಳಿಂದ ಅಲಂಕೃತಗೊಂಡಿದೆ.

ಬ್ರಹ್ಮ ಕಟ್ಟಿನ ಅಮಾತ್ಯ

ಎರಡು ಕುದುರೆಗಳು ಎಳೆಯುತ್ತಿರುವ ರಥದಲ್ಲಿ ಅಭಿಮುಖವಾಗಿ ಬ್ರಹ್ಮದೇವನು ಕುಳಿತುಕೊಂಡಂತೆ ಕಾಣುತ್ತದೆ. ಬಣ್ಣಗಳು ಮಾಸಿ ಹೋಗಿರುವುದರಿಂದ ಚಿತ್ರದ ಬಹುಪಾಲು ಹಾಳಾಗಿ ಹೋಗಿವೆ. ರಥದ ಹೊರ ಚೌಕಟ್ಟು, ಕುದುರೆಗಳ ಹಿಂಗಾಲುಗಳು, ಸಾರಥಿ ತಲೆಯ ಮೇಲ್ಭಾಗ ಮತ್ತು ಕೈ, ಕಿರೀಟಗಳ ಮೇಲ್ತುದಿ, ಎಡ ತೊಡೆಯ ಸ್ವಲ್ಪ ಭಾಗ ಮತ್ತು ಹೂಜಿ– ಇಷ್ಟನ್ನು ಗುರುತಿಸಬಹುದು. ಉಳಿದಿರುವ

೨೨. Dr. Sarala Chopra., Ganjifa, PP. 200-201

ಅಂಶಗಳನ್ನು ಅವಲೋಕಿಸಿದಾಗ ಕಟ್ಟಿನ ಇತರ ಎಲೆಗಳಂತೆ ಸ್ವಾಮಿಯು ನಾಲ್ಕು ತಲೆಗಳಿಂದ ಕೂಡಿ ಎಡಗೈಯಲ್ಲಿ ಹೂಜಿಯನ್ನು ಹಿಡಿದಿದ್ದಾನೆ ಎಂದು ತೀರ್ಮಾನಿಸಬಹುದು. ಕುದುರೆಗಳ ಕಾಲುಗಳ ಸ್ಥಾನವನ್ನು ನೋಡಿದಾಗ ಅವು ವೇಗವಾಗಿ ಚಲಿಸುತ್ತಿರುವಂತೆ ಸಾರಥಿಯು ಕೈಯಲ್ಲಿ ಚಾವಟಿ ಹಿಡಿದು ಎಡಕ್ಕೆ ರಥವನ್ನು ಓಡಿಸುತ್ತಿದ್ದಾನೆ. ಪಾರ್ಶ್ವನೋಟದಲ್ಲಿ ಚಿತ್ರಿಸಿರುವಂತೆ ಗಡಿಗೆಯ ಆಕಾರದ ಕಿರೀಟದಿಂದ ಅಲಂಕೃತನಾಗಿದ್ದಾನೆ. ಸ್ವಾಮಿಯ ಆಕೃತಿಗೆ ಹೋಲಿಸಿದರೆ ಸಾರಥಿ ಮತ್ತು ಕುದುರೆ ಚಿಕ್ಕದಾಗಿ ತೋರುತ್ತಿವೆ. ನಾಲ್ಕು ಚಕ್ರಗಳ ರಥ (ಎರಡು ಚಕ್ರಗಳು ಮಾತ್ರ ಕಾಣಿಸುತ್ತವೆ) ಗುಮ್ಮಟ, ಎರಡು ಧ್ವಜಗಳು, ಬಾಳೆ ಎಲೆಗಳು, ಹಣ್ಣುಗಳು ಮತ್ತು ಚುಕ್ಕೆಗಳ ವಿನ್ಯಾಸಗಳಿಂದ ಸುಂದರವಾಗಿ ಅಲಂಕೃತಗೊಂಡಿವೆ. ಎಲೆಯ ಬಣ್ಣ ಮತ್ತು ಅಲಂಕಾರಗಳು ಹಿಂದಿನ ಸರಸ್ವತೀರಾಣಿಯ ಎಲೆಯಂತಿದೆ.

ಬ್ರಹ್ಮ ಕಟ್ಟಿನ ಎರಡನೆ ಎಲೆ

ನಾಲ್ಕು ತಲೆಗಳು ಮತ್ತು ನಾಲ್ಕು ಭುಜಗಳಿಂದ ಕೂಡಿದ ಸ್ವಾಮಿಯು ಹಳದಿ-ಊದಾ ಬಣ್ಣದಿಂದ ಚಿತ್ರಿತವಾಗಿರುವ ಅರ್ಧವೃತ್ತಾಕಾರದ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ವೃಷಭ ರಾಶಿಯ ಚಿಹ್ನೆಯಾದ ಗೂಳಿಯು ಎಡಭಾಗಕ್ಕೆ ಅಭಿಮುಖವಾಗಿರುವುದನ್ನು ಪೀಠದ ನೀಲಿ ನೆಲದ ಮೇಲೆ ಚಿತ್ರಿಸಲಾಗಿದೆ. ಈ ಎಲೆಯ ಸಂಖ್ಯೆ ಎರಡು ಪಾರ್ಶ್ವನೋಟದಲ್ಲಿ ಚಿತ್ರಿಸಲಾದ ಹೆಚ್ಚಿನ ತಲೆಗಳು, ಸ್ವಾಮಿಯ ಉಳಿದ ದೇಹದ ಭಾಗವನ್ನು ಮುಮ್ಮುಖವಾಗಿ ಚಿತ್ರಿಸಲಾಗಿದೆ. ಸ್ವಾಮಿಯು ತನ್ನ ಬಲ ಮತ್ತು ಎಡ ಕೈಗಳಲ್ಲಿ ಜಪಸರ ಮತ್ತು ಕಮಂಡಲವನ್ನು ಹಿಡಿದಿದ್ದಾನೆ. ಆತನ ಕೆಳಭಾಗದ ಬಲಗೈ ಅಭಯ ಮುದ್ರೆಯಿಂದ ಕೂಡಿದ್ದರೆ ಎಡಗೈಯಲ್ಲಿ ವರದ ಮುದ್ರೆಯಿದೆ. ತೆಳು ಊದಾ ಬಣ್ಣದ ಧೋತಿಯನ್ನು, ತೆಳು ಹಸಿರು ಮತ್ತು ತೆಳು ಊದಾ ಬಣ್ಣದ ದುಪ್ಪಟ್ಟಾವನ್ನು ಸ್ವಾಮಿ ಧರಿಸಿದ್ದು ಅಂಚುಗಳು ಹಾರಾಡುತ್ತಿವೆ. ಕಿರೀಟ, ಕೈಕಡಗಗಳು, ಹಾರಗಳು ಮತ್ತು ಕರ್ಣಕುಂಡಲಗಳಿಂದ ವಿರಾಜಮಾನನಾಗಿದ್ದಾನೆ. ಹಣೆಯ ಮಧ್ಯದಲ್ಲಿ ತಿಲಕವಿದೆ. ಬಿಳಿಯ ಗೂಳಿಗೆ ದುಂಡು ಆಕಾರದ ಕೆಂಪು ಪೀತಾಂಬರವನ್ನು ಹೊದಿಸಿದೆ. ಇದು ಹಾರಗಳಿಂದ ಮತ್ತು ಇತರ ಆಭರಣಗಳಿಂದ ಅಲಂಕೃತವಾಗಿದೆ. ಹಳದಿ, ಕೇಸರಿಬಣ್ಣದ ಎಲೆಯು ಕಟ್ಟಿನ ಇತರ ಎಲೆಗಳಂತೆ, ಹೂವಿನ ಅಂಚುಗಳಿಂದ ಮತ್ತು ವೃತ್ತಾಕಾರದ ಗೆರೆಗಳಿಂದ ಅಲಂಕೃತವಾಗಿದೆ. ಹಲವಾರು ಕಡೆಗಳಲ್ಲಿ ಬಣ್ಣಗಳು ಮಾಸಿರುವುದರಿಂದ ಎಲೆಯ ಸೌಂದರ್ಯವನ್ನು ಸ್ವಾಮಿಯ ಮುಖಲಕ್ಷಣಗಳನ್ನು ಏರುಪೇರು ಮಾಡಿವೆ. ಮುಖದಲ್ಲಿ ಬಾದಾಮಿ ಆಕಾರದ ಕಣ್ಣುಗಳಿಗೆ ಹಾನಿಯಾಗಿದೆ.

ಬ್ರಹ್ಮಕಟ್ಟಿನ ಆರನೆಯ ಎಲೆ

ಕಿತ್ತಳೆ ಊದಾಬಣ್ಣದಲ್ಲಿ ಚಿತ್ರಿತವಾಗಿರುವ ಸ್ವಾಮಿಗೆ ನಾಲ್ಕು ತಲೆಗಳು ಮತ್ತು ನಾಲ್ಕು ಭುಜಗಳಿದ್ದು ಅರ್ಧವೃತ್ತಾಕಾರದ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಂತೆ ಕಾಣುತ್ತದೆ. ಆರನೆಯ ಸಂಖ್ಯೆಯನ್ನು ಸೂಚಿಸುವ ಕನ್ಯಾರಾಶಿಯ ಚಿಹ್ನೆಯಾದ ದೋಣಿಯಲ್ಲಿನ ಹೆಂಗಸಿನ ತಲೆ ನೀಲಿಪೀಠದ ಕೆಳಗೆ ಚಿತ್ರಿತವಾಗಿದೆ. ಸ್ವಾಮಿಯ ದೇಹ ಮಧ್ಯದ ತಲೆಯೊಂದಿಗೆ ನೇರ ನೋಟದಲ್ಲಿ ಚಿತ್ರಿತಗೊಂಡಿದೆ. ಆತನ ಇತರ ಮೂರು ತಲೆಗಳು, ದೋಣಿ ಮತ್ತು ಹೆಂಗಸಿನ ತಲೆ ಪಾರ್ಶ್ವನೋಟದಲ್ಲಿ ಚಿತ್ರಣಗೊಂಡಿವೆ. ಸ್ವಾಮಿಯು ತನ್ನ ಮೇಲಿನ ಎಡ ಮತ್ತು ಬಲಗೈಗಳಲ್ಲಿ ಕ್ರಮವಾಗಿ ಕಮಂಡಲು ಮತ್ತು ಜಪಸರವನ್ನು ಹಿಡಿದಿದ್ದಾನೆ. ಆತನ ಕೆಳಗಿನ ಬಲಗೈ ಅಭಯ ಮುದ್ರೆಯನ್ನು ಸೂಚಿಸಿದರೆ ಎಡಗೈ ವರದ ಹಸ್ತವಾಗಿದೆ.

ದುಪ್ಪಟ್ಟಾ ಧರಿಸಿ, ಕಿರೀಟಗಳು, ಕೈಕಡಗಗಳು, ತೋಳಬಂಧಿಗಳು ಮತ್ತು ಹಾರಗಳಿಂದ ವಿರಾಜಮಾನನಾಗಿದ್ದಾನೆ. ಹಲವಾರು ಕಡೆಗಳಲ್ಲಿ ಬಣ್ಣಗಳು ಮಾಸಿದ್ದು ಸ್ವಾಮಿಯ ಮೂರು ತಲೆಗಳು, ದೋಣಿಯ ಅರ್ಧಭಾಗ ಮತ್ತು ಹೆಂಗಸಿನ ಮುಖದ ಕೊಂಚಭಾಗ ಹಾನಿಗೀಡಾಗಿದೆ. ಸ್ವಾಮಿಯ ತೀರ ಬಲಗಡೆಯ ತಲೆಯು ಗುಂಡು ಮುಖವನ್ನು, ಬಾದಾಮಿ ಆಕಾರದ ಕಣ್ಣನ್ನು ಮತ್ತು ಚೂಪು ಮೂಗನ್ನು ತೋರಿಸುತ್ತದೆ. ದೋಣಿಯಲ್ಲಿರುವ ಹೆಂಗಸಿನ ಗದ್ದ ಇಳಿಜಾರಿನಿಂದ ಕೂಡಿದ್ದು, ಕಣ್ಣುಗಳು ಅರ್ಧಮುಚ್ಚಿವೆ ಮತ್ತು ಹುಬ್ಬು ಹಣೆಯ ಎತ್ತರಕ್ಕೆ ಎದ್ದಿದೆ. ಹೂಗಳ ವಿಶಿಷ್ಟ ಲಕ್ಷಣಗಳೊಂದಿಗೆ ದೋಣಿಯು ಸಮಾನಾಂತರ ಲಂಬಾಕೃತಿಯ ರೇಖೆಗಳಿಂದ ಕೂಡಿದೆ. ಅಂಚಿನ ಅಲಂಕಾರ ಮತ್ತು ಎಲೆಯ ಭೂಮಿಯ ಬಣ್ಣ ಇತರ ಕಟ್ಟುಗಳ ಎಲೆಯಂತಿದೆ.

ಬ್ರಹ್ಮ ಕಟ್ಟಿನ ಒಂಭತ್ತನೆಯ ಎಲೆ

ನಾಲ್ಕು ತಲೆಗಳ ಮತ್ತು ನಾಲ್ಕು ಭುಜಗಳ ಸ್ವಾಮಿಯನ್ನು ಕಿತ್ತಳೆ ಊದಾಬಣ್ಣದ ಛಾಯೆಯಲ್ಲಿ ಚಿತ್ರಿಸಿದೆ. ಅರ್ಧವೃತ್ತಾಕಾರದ ಪೀಠದ ಮೇಲೆ ಪದ್ಮಾಸನ ಹಾಕಿಕೊಂಡು ಕುಳಿತಿರುವಂತೆ ತೋರುತ್ತದೆ. ಎಲೆಯ ಒಂಭತ್ತನೇ ಸಂಖ್ಯೆಯನ್ನು ಸೂಚಿಸುವ ಬಿಲ್ಲು ಮತ್ತು ಬಾಣವನ್ನು ನೀಲಿಪೀಠದ ಅಡಿಯಲ್ಲಿ ಚಿತ್ರಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಇತರ ಎಲೆಗಳಂತೆ ಸ್ವಾಮಿಯ ಹೆಚ್ಚಿನ ಮೂರು ತಲೆಗಳನ್ನು ಪಾರ್ಶ್ವನೋಟದಲ್ಲಿ ಚಿತ್ರಿಸಿದ್ದು ಮುಖ್ಯ ತಲೆ ಮತ್ತು ದೇಹದ ಇತರ ಭಾಗವನ್ನು ನೇರವಾಗಿ ಚಿತ್ರಿಸಿದೆ. ಸ್ವಾಮಿಯು ಮೇಲಿನ ಬಲಗೈಯಲ್ಲಿ ಜಪಸರವನ್ನು ಮತ್ತು ಎಡಗೈಯಲ್ಲಿ ಕಮಂಡಲವನ್ನು ಹಿಡಿದಿದ್ದಾನೆ. ಕೆಳಭಾಗದ ಬಲಗೈ ಮತ್ತು ಎಡಗೈಗಳಲ್ಲಿ ಕ್ರಮವಾಗಿ ಅಭಯ ಮತ್ತು ವರದ ಮುದ್ರೆಗಳಿವೆ. ಸ್ವಾಮಿಯು ಬಿಳಿಯ ಧೋತಿ, ಕೆಂಪು ದುಪ್ಪಟ್ಟಾಗಳನ್ನು ಧರಿಸಿರುವುದರ ಜೊತೆಗೆ ಕಿರೀಟಗಳನ್ನು, ಕೈಕಡಗಗಳನ್ನು ಮತ್ತು ಹಾರಗಳನ್ನು ಹಾಕಿಕೊಂಡಿದ್ದಾನೆ. ಆತನ ಎದುರುಗಡೆಯ ಮುಖದ ಮೇಲೆ ತಿಲಕ ರಾರಾಜಿಸುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಇತರ ಎಲೆಗಳಂತೆ ಎಲೆಯ ಹೂವಿನ ಅಂಚಿನ ಮತ್ತು ವೃತ್ತಾಕಾರದ ಗೆರೆಗಳಿಂದ ಕಪ್ಪು ಬಣ್ಣದಿಂದ ಶೋಭಿತವಾಗಿದೆ. ಎಲೆಯ ಬಲಭಾಗದ ಅಂಚುಗಳು ಹಾನಿಗೊಳಗಾಗಿವೆ ಮತ್ತು ಬಣ್ಣಗಳು ಮಾಸಿವೆ. ಇದರಿಂದ ಚಿತ್ರದ ಸೌಂದರ್ಯಕ್ಕೆ ಅಡ್ಡಿಯಾಗಿದೆ.[೩೩]

ರಾಮ ಕಟ್ಟಿನ ರಾಣಿ

ತೆಳು ಹಸಿರು ಬಣ್ಣದಲ್ಲಿ ಚಿತ್ರಿಸಲಾದ ದೇವಿ ಸೀತೆಯು ಅಭಿಮುಖವಾಗಿ ಪಲ್ಲಕ್ಕಿಯಲ್ಲಿ ಕುಳಿತುಕೊಂಡಿದ್ದು ಈ ಕಡೆ ಇಬ್ಬರು ಮತ್ತು ಆ ಕಡೆ ಇಬ್ಬರು ಸೇವಕಿಯರು ಅದನ್ನು ಒಯ್ಯುತ್ತಿದ್ದಾರೆ. ದೇವಿಯು ಬಿಲ್ಲು ಮತ್ತು ಬಾಣವನ್ನು ಬಲಗೈ ಮತ್ತು ಎಡಗೈಗಳಲ್ಲಿ ಹಿಡಿದುಕೊಂಡಿದ್ದಾಳೆ. ಮೊದಲನೆಯ ಬೆರಳು ಮುಂದೆ ಚಾಚಿದೆ. ದೇವಿಯು ಕೆಂಪು ಸೀರೆಯನ್ನು ಧರಿಸಿದ್ದಾಳೆ ಹಾಗೂ ಕಿರೀಟ, ಹಾರಗಳು, ಬಳೆಗಳು ಮತ್ತು ಕರಧನೀಗಳಿಂದ ಅಲಂಕೃತಳಾಗಿದ್ದಾಳೆ. ಅನೇಕ ಕಡೆಗಳಲ್ಲಿ ಬಣ್ಣಗಳು ಮಾಸಿದ್ದು ಬಹುಮಟ್ಟಿಗೆ ಸೇವಕಿಯರ ಚಿತ್ರಗಳನ್ನು ನಾಶಗೊಳಿಸಿವೆಯಲ್ಲದೆ ದೇವಿಯ ಮುಖಚಹರೆಗಳನ್ನು, ಪಲ್ಲಕ್ಕಿಯ ಭಾಗಗಳನ್ನು ನಾಶಪಡಿಸಿವೆ. ಉಳಿದಿರುವುದನ್ನು ಗಮನಿಸಿದಾಗ ಈ ಎಲೆಯ ಸೇವಕಿಯರು, ಕಟ್ಟಿನ ಎಲೆಗಳ ಇತರ ಸೇವಕಿಯರಂತೆ ಪಾರ್ಶ್ವನೋಟದಲ್ಲಿ ಚಿತ್ರಿತರಾಗಿದ್ದಾರೆ. ಎಡಭಾಗಕ್ಕೆ ಅಭಿಮುಖರಾಗಿ ಅವರು ಬರಿಗಾಲಲ್ಲಿ ನಿಂತಿದ್ದಾರಲ್ಲದೆ ಕೆಂಪು ಸೀರೆಯನ್ನುಟ್ಟಿದ್ದಾರೆ. ನಸುಹಳದಿ, ಕಂದುಬಣ್ಣದ ಎಲೆ ವರ್ತುಲಕಾರ ರೇಖೆಗಳಿಂದ ಮತ್ತು ಹೂಗಳ ಅಂಚಿನಿಂದ ಅಲಂಕೃತವಾಗಿದೆ.

೩೩. Dr. Sarala Chopra : Ganjifa, PP. 202-204



ಇಂದ್ರ ವಜ್ರಾಯುದ



ಬಲರಾಮ ರಾಜ



ಪರ್ವತ ರಾಜ



ರಾಮ



ಮತ್ಸ್ಯ

ಸಂಗ್ರಹ ; ಜಗನ್ಮೋಹನ ವಸ್ತುಸಂಗ್ರಹಾಲಯ ಮೈಸೂರು

ರಾಮಕಟ್ಟಿನ ಸೇನಾನಿ

ತೆಳು ಹಸಿರಿನ ಮುಖಛಾಯೆಯ ಸ್ವಾಮಿಯು ಅಭಿಮುಖವಾಗಿ ಶೃಂಗಾರಗವುಸಿನಿಂದ ಕೂಡಿದ ಊದಾ ಬಣ್ಣದ ಕುದುರೆಯ ಮೇಲೆ ಕುಳಿತಿರುವಂತೆ ಕಾಣುತ್ತದೆ. ಸ್ವಾಮಿಯು ತನ್ನ ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ ಮತ್ತು ಎಡಗೈಯಲ್ಲಿ ಸೊಗಸಿನಿಂದ ಬಿಲ್ಲನ್ನು ಹಿಡಿದಿದ್ದಾನೆ. ಮೊದಲನೆಯ ಬೆರಳು ಕೆಳಬಾಗಿದೆ. ಬಲಭುಜಕ್ಕೆ ಬತ್ತಳಿಕೆಯನ್ನು ಕಟ್ಟಿದೆ. ಕೆಂಪು ಧೋತಿ ಉಟ್ಟು ದುಪ್ಪಟ್ಟಾ ಹೊದ್ದಿದ್ದಾನೆ. ಕಿರೀಟ, ಕೈಕಡಗಗಳು, ತೋಳಬಂಧಿಗಳು, ಹಾರಗಳು ಮತ್ತು ಶ್ರೀವತ್ಸವನ್ನು ಧರಿಸಿದ್ದಾನೆ. ಸ್ವಾಮಿಯ ಒಂದು ಕಾಲನ್ನು ಕುದುರೆಯ ರಿಕಾಪಿನೊಳಗಿಟ್ಟುಕೊಂಡಿರುವಂತೆ ಚಿತ್ರಿಸಲಾಗಿದೆ. ಎಡಭಾಗಕ್ಕೆ ತಿರುಗಿಕೊಂಡಿರುವ ಕುದುರೆಯನ್ನು ಪಾರ್ಶ್ವನೋಟದಲ್ಲಿ ಚಿತ್ರಿಸಿದೆ. ಅದನ್ನು ಸುಂದರವಾದ ದುಂಡನೆಯ ಥಡಿಯಿಂದ ಮತ್ತು ಹಾರಗಳಿಂದ ಹಾಗೂ ಇತರ ಅಶ್ವಕ್ಕೆ ಸಂಬಂಧಿಸಿದ ಉಪಕರಣಗಳಿಂದ ಅಲಂಕರಿಸಿದೆ. ಈ ಕಟ್ಟಿನ ಇತರೆ ಎಲೆಗಳಂತೆ ನಸು ಹಳದಿ, ಕಂದು ಬಣ್ಣದ ಈ ಎಲೆಯು ಹೂವಿನ ಅಂಚನ್ನು ಮತ್ತು ವರ್ತುಲಾಕಾರ ರೇಖೆಗಳನ್ನು ಹೊಂದಿದೆ. ಬಣ್ಣಗಳು ಮಸುಕಾಗಿರುವುದರಿಂದ ದುರದೃಷ್ಟವಶಾತ್ ಕುದುರೆಯ ಬಹುಮಟ್ಟಿನ ದೇಹ, ಸ್ವಾಮಿಯ ಉಡುಗೆಗಳು ಮತ್ತು ಮುಖದ ಸ್ವರೂಪ ಹಾಳಾಗಿವೆ. ಜೊತೆಗೆ ಎಲೆಯ ಅಂಚು ಮತ್ತು ನೆಲದ ಬಣ್ಣವೂ ಹಾಳಾಗಿದೆ. ಪಾರ್ಶ್ವಮುಖವಾಗಿರುವ ಕುದುರೆಯ ಬೆನ್ನಿನ ಮೇಲೆ ಕುಳಿತಿರುವ ದೇವರ ಮುಂಭಾಗ ಅಷ್ಟೊಂದು ಚೆನ್ನಾಗಿ ಚಿತ್ರಿತವಾಗಿಲ್ಲ. ಈ ಹಿಂದೆ ಚರ್ಚಿಸಿದಂತೆ ಮೆರವಣಿಗೆಗೆ ಸಂಬಂಧಿಸಿದ ಪ್ರತಿಮೆಗಳನ್ನು ಗಮನಿಸಿ ಕಲಾವಿದನು ದೇವರ ಪೂರ್ಣದರ್ಶನಕ್ಕಾಗಿ ಕುದುರೆಯ ಪಾರ್ಶ್ವನೋಟದಲ್ಲಿ ಅದರ ಬೆನ್ನ ಮೇಲೆ ಕುಳಿತ ಸ್ವಾಮಿಯ ನೇರವಾದ ನೋಟವನ್ನು ಪ್ರದರ್ಶಿಸಲು ಪ್ರಯತ್ನಿಸಿದ್ದಾನೆ. ಆದರೆ ಆ ನೋಟ ಅಷ್ಟೊಂದು ಸುಖದಾಯಕವಾಗಿಲ್ಲ. ದೇವರ ನೇರ ದರ್ಶನವನ್ನು ತೋರಿಸುವುದಾಗಿದ್ದರೆ ಕಲಾವಿದನು ಕುದುರೆಯನ್ನು ನೇರವಾಗಿ ಇಲ್ಲವೆ ಸ್ವಲ್ಪ ತಿರುಗಿಸಿದಂತೆ ಮಾಡಿ ಚಿತ್ರಿಸಿದ್ದಿದ್ದರೆ ಇನ್ನಷ್ಟು ಉತ್ತಮವಾಗಿರುತ್ತಿತ್ತು.

ರಾಮ ಕಟ್ಟಿನ ಧ್ವಜ

ತೆಳು ನೀಲಿ ಬಣ್ಣದಲ್ಲಿ ಚಿತ್ರಿತವಾಗಿ, ತಲೆ ಸ್ವಲ್ಪ ಮಟ್ಟಿಗೆ ವಾಲಿರುವ ರಾಮದೇವರನ್ನು ಮೆಟ್ಟಲುಗಳುಳ್ಳ ಪೀಠದ ಮೇಲೆ ನೇರವಾಗಿ ಕುಳಿತಿರುವಂತೆ ಚಿತ್ರಿಸಲಾಗಿದೆ. ಹಳದಿ ಅಂಚಿನ ಕಪ್ಪು ರೇಖಾಕೃತಿಯಿಂದ ಶೋಭಿತವಾದ ಕೆಂಪು ಧ್ವಜವಿದ್ದು, ಅದರ ಮೇಲ್ಭಾಗದಲ್ಲಿ ಎರಡು ಕುಚ್ಚುಗಳಿವೆ, ಮಧ್ಯದಲ್ಲಿ ಒಂದು ದುಂಡು ಬಿಲ್ಲೆ ಇದ್ದು ಎಡಗಡೆಗೆ ಚಿತ್ರಿಸಲಾಗಿದೆ. ಅನೇಕ ಕಡೆಗಳಲ್ಲಿ ಬಣ್ಣಗಳು ಮಾಸಿದ್ದು ಬಹುಮಟ್ಟಿಗೆ ಪೀಠ, ಸ್ವಾಮಿಯ ಮುಖದ ಅರ್ಧಭಾಗ ಮತ್ತು ದೇಹದ ಬಹಳಷ್ಟು ಭಾಗ ಹಾನಿಗೊಳಗಾಗಿದೆ. ಜೊತೆಗೆ ಧ್ವಜದ ಕೆಲವೆಡೆಗಳಲ್ಲಿ ಮತ್ತು ಎಲೆಯ ಅಂಚು ಹಾನಿಗೀಡಾಗಿದೆ. ಉಳಿದ ಭಾಗಗಳನ್ನು ಪರೀಕ್ಷಿಸಿದಾಗ ಈ ಕಟ್ಟಿನ ಎಲೆಗಳಲ್ಲಿ ಇತರ ಎಲೆಗಳಂತೆ ಈ ಎಲೆಯಲ್ಲಿ ಚಿತ್ರಿತವಾಗಿರುವ ಸ್ವಾಮಿಯನ್ನು ಕಾಂತಮೂರ್ತಿಯಂತೆ ಚಿತ್ರಿಸಲಾಗಿದೆ. ಧೋತಿಯುಟ್ಟು ದುಪ್ಪಟ್ಟವನ್ನು ಹೊದ್ದಿದ್ದಾನೆ. ಕಿರೀಟ, ಹಾರಗಳು, ಕೈಕಡಗಗಳು ಮತ್ತು ತಿಲಕಗಳನ್ನು ಸ್ವಾಮಿ ಧರಿಸಿದ್ದಾನೆ. ಮೊದಲನೆಯ ಕೈಬೆರಳು ಎಡಕ್ಕೆ ವಾಲಿರುವಂತೆ ಧನುಸ್ಸನ್ನು ಆತನು ಹಿಡಿದಿದ್ದಾನೆ. ಈ ಕಟ್ಟಿನ ಇತರ ಎಲೆಗಳಂತೆ ಎಲೆಯ ತಳಭಾಗ ನಸುಹಳದಿಕೆಂಪು ಬಣ್ಣದಿಂದ ಕೂಡಿದ್ದು ಹೂಅಂಚಿನಿಂದ ವೃತ್ತಾಕಾರದ ಗೆರೆಗಳಿಂದ ಅಲಂಕೃತವಾಗಿದೆ.

ರಾಮಕಟ್ಟಿನ ಮೂರನೆಯ ಎಲೆ

ತೆಳು ಹಸಿರುಬಣ್ಣದಲ್ಲಿ ಚಿತ್ರಿತವಾಗಿರುವ ಸ್ವಾಮಿಯು ಕೆಂಪುಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ಕಟಕರಾಶಿಯ ಚಿಹ್ನೆ ಏಡಿಯ ಮೂಲಕ ಪೀಠದ ತಳಭಾಗದಲ್ಲಿ ಸಂಖ್ಯೆಯ ಮೌಲ್ಯ ಮೂರನ್ನು ಸೂಚಿಸುತ್ತದೆ. ಸ್ವಾಮಿಯನ್ನು ಮತ್ತು ಏಡಿಯನ್ನು ಅಭಿಮುಖವಾಗಿ ಚಿತ್ರಿಸಿದೆ. ಮೊದಲ ಬೆರಳು ಚಾಚಿರುವಂತೆ ಎಡಗೈಯನ್ನು ಬಿಲ್ಲನ್ನೂ ಬಲಗೈಯಲ್ಲಿ ಬಾಣವನ್ನೂ ಹಿಡಿದಿದ್ದಾನೆ. ಬಲಭುಜಕ್ಕೆ ಬತ್ತಳಿಕೆಯನ್ನು ಕಟ್ಟಿದೆ. ಊದಾ ಬಣ್ಣದ ಧೋತಿಯನ್ನುಟ್ಟು, ಕೆಂಪು ದುಪ್ಪಟ್ಟಾವನ್ನು ಹೊದ್ದಿದ್ದಾನೆ. ಕಿರೀಟ, ಕಡಗಗಳು, ಹಾರಗಳು ಮತ್ತು ಶ್ರೀವತ್ಸದಿಂದ ಶೋಭಿತನಾಗಿದ್ದಾನೆ. ಮೊದಲನೆಯ ಬೆರಳು ಚಾಚಿರುವಂತೆ ಎಡಗೈಯಲ್ಲಿ ಧನುಸ್ಸನ್ನು, ಬಲಗೈಯಲ್ಲಿ ಬಾಣವನ್ನು ಹಿಡಿದಿದ್ದಾನೆ. ಬಲಭುಜಕ್ಕೆ ಬತ್ತಳಿಕೆಯನ್ನು ಕಟ್ಟಲಾಗಿದೆ. ಮಾಸಿರುವ ಬಣ್ಣದಿಂದಾಗಿ ಸ್ವಾಮಿಯ ಮುಖ, ಉಡುಪುಗಳು, ಎಲೆಯ ಅಂಚು ಮತ್ತಿತರ ಲಕ್ಷಣಗಳಿಗೆ ಧಕ್ಕೆಯುಂಟಾಗಿದೆ.

ರಾಮಕಟ್ಟಿನ ನಾಲ್ಕನೆಯ ಎಲೆ

ತೆಳು ಹಸಿರು ಬಣ್ಣದಲ್ಲಿ ಚಿತ್ರಿತವಾಗಿರುವ ಸ್ವಾಮಿಯು ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ಕಟಕರಾಶಿಯ ಚಿಹ್ನೆ ಏಡಿಯ ಮೂಲಕ ಪೀಠದ ತಳಭಾಗದಲ್ಲಿ ರಾಶಿಯ ಸಂಖ್ಯೆಯನ್ನು ಸೂಚಿಸುತ್ತದೆ. ಸ್ವಾಮಿಯನ್ನು ಮತ್ತು ಏಡಿಯನ್ನು ಅಭಿಮುಖವಾಗಿ ಚಿತ್ರಿಸಿದೆ. ಮೊದಲ ಬೆರಳು ಚಾಚಿರುವಂತೆ ಎಡಗೈಯಲ್ಲಿ ಬಿಲ್ಲನ್ನು, ಬಲಗೈಯಲ್ಲಿ ಬಾಣವನ್ನು ಸ್ವಾಮಿ ಹಿಡಿದಿದ್ದಾನೆ. ಬಲಭುಜಕ್ಕೆ ಬತ್ತಳಿಕೆಯನ್ನು ಕಟ್ಟಿದೆ. ಊದಾಬಣ್ಣದ ಧೋತಿಯನ್ನುಟ್ಟು, ಕೆಂಪು ದುಪ್ಪಟ್ಟಾವನ್ನು ಹೊಂದಿದ್ದಾನೆ. ಕಿರೀಟ, ಕೈಕಡಗಗಳು, ಹಾರಗಳು, ತೋಳಬಂಧಿಗಳನ್ನು, ಕರ್ಣಕುಂಡಲಗಳನ್ನು ಮತ್ತು ಶ್ರೀವತ್ಸವನ್ನು ಧರಿಸಿದ್ದಾನೆ. ಅನೇಕ ಕಡೆಗಳಲ್ಲಿ ಬಣ್ಣಗಳು ಮಸುಕಾಗಿವೆ. ಸ್ವಾಮಿಯ ಮುಖಲಕ್ಷಣಗಳು, ಏಡಿಯ ಬಹುಪಾಲು ದೇಹ, ಹಿನ್ನೆಲೆ ಮತ್ತು ಎಲೆಯ ಅಂಚು ಹಾಳಾಗಿವೆ. ನಸು ಹಳದಿ, ಕಂದುಬಣ್ಣದ ಎಲೆ ಈ ಕಟ್ಟಿನ ಎಲೆಗಳಿಗಿಂತ ಚೆಲುವಾಗಿದೆ.

ರಾಮಕಟ್ಟಿನ ಐದನೆ ಎಲೆ

ಬಲಗೈಯಲ್ಲಿ ಬಾಣವನ್ನು ಮತ್ತು ಎಡಗೈಯಲ್ಲಿ ಬಿಲ್ಲನ್ನು ಹಿಡಿದ ತಿಳಿ ಹಸಿರುಬಣ್ಣದಿಂದ ಕೂಡಿದ ರಾಮದೇವರು ಅರೆ ವೃತ್ತಾಕಾರದ ಪೀಠದ ಮೇಲೆ ಅಭಿಮುಖನಾಗಿ ಪದ್ಮಾಸನದಲ್ಲಿ ಕುಳಿತಿರುವಂತೆ ತೋರುತ್ತದೆ. ಬತ್ತಳಿಕೆಯನ್ನು ದೇವರ ಭುಜಕ್ಕೆ ಕಟ್ಟಲಾಗಿದೆ. ಎಲೆಯ ಸಂಖ್ಯಾತ್ಮಕ ಮೌಲ್ಯ ಐದು. ಇದನ್ನು ಸೂಚಿಸುವ ಬಾಲವನ್ನೆತ್ತಿ ನಿಂತಿರುವ, ಸಿಂಹರಾಶಿಯ ಚಿಹ್ನೆಯಾದ ಸಿಂಹವು ಪೀಠದ ಕೆಳಭಾಗದಲ್ಲಿದೆ. ದೇವರ ಮುಖದ ಬಣ್ಣವು ಮಾಸಿದ್ದರೂ ಆತನ ತುಟಿಗಳು ಶಾಂತಮುದ್ರೆಯಲ್ಲಿರುವಂತೆ ತೋರುತ್ತದೆ. ಕಟ್ಟಿನ ಇತರ ಎಲೆಗಳಂತೆ ಸ್ವಾಮಿಯು ಧೋತಿಯನ್ನುಟ್ಟು, ಕೆಂಪು ಊದಾಬಣ್ಣದ ದುಪ್ಪಟ್ಟಾವನ್ನು ಧರಿಸಿದ್ದಾನೆ. ಕಿರೀಟ, ಹಾರಗಳು, ತೋಳಬಂಧಿಗಳು, ಕೈಕಡಗಗಳು, ತಿಲಕ ಮತ್ತು ಶ್ರೀವತ್ಸವನ್ನು ಧರಿಸಿದ್ದಾನೆ. ಎರಡು ಕೈಗಳ ಮೊದಲ ಬೆರಳುಗಳು ಎಡಭಾಗಕ್ಕೆ ಚಾಚಿಕೊಂಡಿವೆ. ಸಿಂಹದ ತಲೆ ನೇರವಾಗಿದೆ. ಆದರೆ ಅದರ ಉಳಿದ ದೇಹ ಪಾರ್ಶ್ವನೋಟದಲ್ಲಿದೆ. ಎಡಭಾಗಕ್ಕೆ ಚಲಿಸುವ ಮೂಲಕ ಸಿಂಹವು ಏನನ್ನೊ ನೋಡುತ್ತಿರುವಂತೆ ತನ್ನ ಮುಖವನ್ನು ತಿರುಗಿಸಿದೆ. ಅದರ ಭಂಗಿಯನ್ನು ಇಲ್ಲಿ ಯಶಸ್ವಿಯಾಗಿ ಚಿತ್ರಿಸಿದೆ. ಬಣ್ಣಗಳು ಮಸುಕಾಗಿರುವುದರಿಂದ ಸಿಂಹದ ಆಕೃತಿಯ

ಬಹುಭಾಗ ಹಾಳಾಗಿದ್ದರೂ ಸಿಂಹವು ತನ್ನ ತಲೆಯನ್ನು ತಿರುಗಿಸಿರುವುದು ಪ್ರೇಕ್ಷಕರನ್ನು ಆಕರ್ಷಿಸುತ್ತದೆ. ಕಲಾವಿದನು ಸಿಂಹಕ್ಕೂ ಮತ್ತು ದೇವರಿಗೂ ಸಮಾನವಾಗಿ ತನ್ನ ಗಮನ ನೀಡಿದ್ದಾನೆ. ನಸುಹಳದಿ ಕಂದುಬಣ್ಣದ ಎಲೆಯು ಕಟ್ಟಿನ ಇತರ ಎಲೆಗಳಂತೆ ಹೂವಿನ ಅಂಚು ಮತ್ತು ವೃತ್ತಾಕಾರದ ಗೆರೆಗಳಿಂದ ಚೆಲುವಾಗಿದೆ.

ರಾಮಕಟ್ಟಿನ ಒಂಭತ್ತನೆ ಎಲೆ

ಅರ್ಧವೃತ್ತಾಕಾರದಲ್ಲಿ ನೇರ ಅಭಿಮುಖವಾಗಿ ಪದ್ಮಾಸನ ಹಾಕಿಕೊಂಡ ತಿಳಿಹಸಿರು ಬಣ್ಣದ ರಾಮದೇವರನ್ನು ಚಿತ್ರಿಸಲಾಗಿದೆ. ಎಲೆಯ ಸಂಖ್ಯಾತ್ಮಕ ಮೌಲ್ಯ ಒಂಭತ್ತನ್ನು ಸೂಚಿಸುವ ಧನುಸ್‌ರಾಶಿಯ ಚಿಹ್ನೆಯಾದ ಬಿಲ್ಲು ಮತ್ತು ಬಾಣಗಳು ಪೀಠದ ಕೆಂಪು ತಳಭಾಗದ ಕೆಳಗೆ ಕಾಣಿಸಿಕೊಂಡಿವೆ. ಸ್ವಾಮಿಯು ಊದಾಬಣ್ಣದ ಧೋತಿಯನ್ನುಟ್ಟುಕೊಂಡು, ಕೆಂಪು ಊದಾಬಣ್ಣದ ದುಪ್ಪಟ್ಟಾವನ್ನು ಹೊದ್ದುಕೊಂಡಿರುವನಲ್ಲದೆ, ಕಿರೀಟ, ಹಾರಗಳು, ಕೈಕಡಗಗಳು, ತೋಳಬಂಧಿಗಳು ಮತ್ತು ಶ್ರೀವತ್ಸವನ್ನು ಧರಿಸಿದ್ದಾನೆ. ಎಡಗೈಯಲ್ಲಿ ಬಿಲ್ಲನ್ನೂ ಬಲಗೈಯಲ್ಲಿ ಬಾಣವನ್ನು ಹಿಡಿದುಕೊಂಡಿದ್ದಾನಲ್ಲದೆ ಆತನ ಬೆರಳು ಚಾಚಿಕೊಂಡಿವೆ. ಅನೇಕ ಕಡೆಗಳಲ್ಲಿ ಬಣ್ಣಗಳು ಮಸುಕಾಗಿದ್ದು ಸ್ವಾಮಿಯ ಮುಖಚರ್ಯೆಗಳಿಗೆ ಅಡ್ಡಿಯುಂಟಾಗಿದೆ. ಅಲ್ಲದೆ ಚಿತ್ರದ ಸೌಂದರ್ಯಕ್ಕೂ ಧಕ್ಕೆಯಾಗಿದೆ. ಅಂಚಿನ ಅಲಂಕಾರ ಮತ್ತು ಎಲೆಯ ಭೂವರ್ಣಗಳು ಕಟ್ಟಿನ ಇತರ ಎಲೆಗಳಂತೆಯೆ ಇವೆ.

ರಾಮಕಟ್ಟಿನ ಹತ್ತನೆಯ ಎಲೆ

ಅರ್ಧವೃತ್ತಾಕಾರದಲ್ಲಿ ನೇರ ಅಭಿಮುಖ ಪದ್ಮಾಸನ ಹಾಕಿಕೊಂಡ ತಿಳಿಹಸಿರು ಬಣ್ಣದ ರಾಮಸ್ವಾಮಿಯನ್ನು ಚಿತ್ರಿಸಿದೆ. ಎಲೆಯ ಸಂಖ್ಯಾತ್ಮಕ ಮೌಲ್ಯ ಹತ್ತು. ಇದು ಮಕರರಾಶಿಯ ಚಿಹ್ನೆಯಾದ ಮೊಸಳೆಯನ್ನು ಸೂಚಿಸುತ್ತದೆ. ಇದನ್ನು ಪೀಠದ ಕೆಂಪು ತಳಭಾಗದಲ್ಲಿ ಚಿತ್ರಿಸಿದೆ. ಸ್ವಾಮಿಯು ನಸುಗೆಂಪು ಧೋತಿಯನ್ನುಟ್ಟು, ಅರ್ಧತೋಳಿನ ಬಿಗಿಯಾದ ಹಳದಿ ಅಂಗಿಯನ್ನು ಹಾಕಿಕೊಂಡು, ಎರಡೂ ಕಡೆ ಅಂಚುಗಳು ಹಾರಾಡುತ್ತಿರುವ ಕೆಂಪು ದುಪ್ಪಟ್ಟಾವನ್ನು ಹೊದ್ದಿದ್ದಾನೆ. ಆತನು ಕಿರೀಟ, ಹಾರಗಳು, ಕೈಕಡಗಗಳು ಮತ್ತು ಶ್ರೀವತ್ಸವನ್ನು ಧರಿಸಿದ್ದಾನೆ. ಕ್ರಮವಾಗಿ ಎಡಗೈಯಲ್ಲಿ ಮತ್ತು ಬಲಗೈಯಲ್ಲಿ ಬಿಲ್ಲನ್ನು ಮತ್ತು ಬಾಣವನ್ನು ಹಿಡಿದಿದ್ದಾನೆ. ಬಲಭಾಗದ ಭುಜಕ್ಕೆ ಬತ್ತಳಿಕೆಯನ್ನು ಕಟ್ಟಿದೆ. ಮತ್ತೊಮ್ಮೆ ಕಲಾವಿದನು ಸ್ವಾಮಿಯ ಬಲಬೆರಳನ್ನು ಎಡಗಡೆಗೆ ಚಾಚಿರುವಂತೆ ಚಿತ್ರಿಸಿದ್ದಾನೆ. ತೆಳುಹಸಿರಿನ ಪ್ರಾಣಿ ಎಡಭಾಗಕ್ಕೆ ತಿರುಗಿದ್ದು ಪಾರ್ಶ್ವನೋಟವನ್ನು ನೀಡುತ್ತದೆ. ಅದರ ಜಾಗ್ರತೆ ನೋಟದೊಂದಿಗೆ ತೇಲುತ್ತಿರುವ ಬಲಗಾಲು ಮತ್ತು ಬಾಲಗಳು ಚಲನೆಯನ್ನು ತಿಳಿಸುತ್ತವೆ. ಅನೇಕ ಕಡೆಗಳಲ್ಲಿ ಬಣ್ಣಗಳು ಮಸುಕಾಗಿರುವುದರಿಂದ ಸ್ವಾಮಿಯ ಮುಖದ ಚಹರೆಗಳು ಮತ್ತು ದೇಹದ ಇತರ ಭಾಗಗಳು, ಪ್ರಾಣಿಯ ದೇಹದ ಬಹುಭಾಗ, ಚಿತ್ರದ ಹಿನ್ನೆಲೆ ಮತ್ತು ಅಂಚಿನ ಕೆಲವು ಭಾಗಗಳು ಹಾಳಾಗಿ ಹೋಗಿ ಚಿತ್ರದ ಸೌಂದರ್ಯ ನಶಿಸಿದೆ. ನಸು ಹಳದಿ ಕಂದುಬಣ್ಣದ ಎಲೆಯು, ಈ ಕಟ್ಟಿನ ಎಲೆಗಳಂತಿದ್ದು ಹೂವಿನ ಅಂಚಿನಿಂದ ಮತ್ತು ವೃತ್ತಾಕಾರದ ಗೆರೆಗಳಿಂದ ಕಪ್ಪು ಬಣ್ಣದಲ್ಲಿ ಚಿತ್ರಿತವಾಗಿದೆ.

ರಾಮಕಟ್ಟಿನ ಹನ್ನೊಂದನೆ ಎಲೆ

ತಿಳಿಹಸಿರು ಬಣ್ಣದಲ್ಲಿ ಚಿತ್ರಿತನಾದ ರಾಮಸ್ವಾಮಿಯನ್ನು ಅರ್ಧವೃತ್ತಾಕಾರದಲ್ಲಿ ನೇರ ಅಭಿಮುಖನಾಗಿ ಪದ್ಮಾಸನ ಹಾಕಿಕೊಂಡು ಕುಳಿತಿರುವಂತೆ ಚಿತ್ರಿಸಿದೆ. ಎಲೆಯ ಹನ್ನೊಂದನೆ ಸಂಖ್ಯೆಯನ್ನು ಸೂಚಿಸುವ ಕುಂಭರಾಶಿಯ ಚಿಹ್ನೆಯಾದ ಎಲೆಗಳಿಂದ ಅಲಂಕೃತವಾದ ಹೂಜಿ (ಮಂಗಳಘಟ) ಪೀಠದ ಕೆಳಭಾಗದಲ್ಲಿ

ಕೆಂಪು ಹಿನ್ನೆಲೆಯಲ್ಲಿ ಚಿತ್ರಿತವಾಗಿದೆ. ಸ್ವಾಮಿಯು ನಸುಗೆಂಪು ಬಣ್ಣದ ಧೋತಿಯನ್ನು ಧರಿಸಿ, ಕೆಂಪು ದುಪ್ಪಟ್ಟಾ ಹೊದ್ದಿದ್ದಾನೆ. (ಅದರ ಅಂಚುಗಳು ತೊನೆದಾಡುತ್ತಿವೆ.) ಕಿರೀಟ, ಹಾರಗಳು, ಕೈಕಡಗಗಳು ಮತ್ತು ಶ್ರೀವತ್ಸವನ್ನು ಧರಿಸಿದ್ದಾನೆ. ಬಲಗೈಯಲ್ಲಿ ಬಾಣವನ್ನು ಮತ್ತು ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು ಮೊದಲನೆಯ ಬೆರಳು ಎಡಗಡೆಗೆ ಬಾಗಿದೆ. ಬತ್ತಳಿಕೆಯನ್ನು ಬಲಭುಜಕ್ಕೆ ಕಟ್ಟಿದೆ. ಎಲೆಯ ಅಂಚಿನ ಅಲಂಕಾರ ಮತ್ತು ಹಿನ್ನೆಲೆ ಕಟ್ಟಿನ ಇತರ ಎಲೆಗಳಂತೆಯೇ ಇದೆ. ದೇವರ ದೇಹದ ಇತರ ಭಾಗಗಳು ಮತ್ತು ಮುಖಚರ್ಯೆಗಳ ಬಣ್ಣಗಳು ಮಾಸಿವೆ. ಜೊತೆಗೆ ಎಲೆಯ ಹಿನ್ನೆಲೆ ಮತ್ತು ಅಂಚಿನ ಕೆಲವು ಭಾಗಗಳು ಹಾನಿಗೀಡಾಗಿವೆ.[೩೪]

ಕೃಷ್ಣರಾಜ

ಕೃಷ್ಣ ಮತ್ತು ರಾಧೆಯರು ಪರಸ್ಪರ ಅಭಿಮುಖರಾಗಿ ನಸುಗೆಂಪಿನ ಬಿಳಿ ಆನೆಯ ಮೇಲೆ ಕುಳಿತಿದ್ದಾರೆ. ಬಲಭಾಗದಲ್ಲಿ ಚೌರಿಯನ್ನು ಹಿಡಿದ ಸೇವಕನಿದ್ದರೆ ಎಡಭಾಗದಲ್ಲಿ ಮಾಹುತನಿದ್ದಾನೆ. ಸಾರ್ವಭೌಮಾಧಿಕಾರದ ಛತ್ರಿಯನ್ನು ಅವರ ಮೇಲೆ ಹಿಡಿಯಲಾಗಿದೆ. ಈ ಆಕೃತಿಗಳು ಪಾರ್ಶ್ವನೋಟದಲ್ಲಿವೆ. ನೀಲಿವರ್ಣದ ಮುಖಛಾಯೆಯಿಂದ ಕೂಡಿದ ಸ್ವಾಮಿಯು ಬಲಭಾಗದಲ್ಲಿ ಕೊಳಲನ್ನು ಹಿಡಿದಿದ್ದಾನೆ. ನವಿಲುಗಳಿಂದ ಮಾಡಿದ ಕಿರೀಟವನ್ನು, ಕೈಗಡಗಗಳನ್ನು, ತೋಳಬಂಧಿಗಳನ್ನು ಮತ್ತು ಹಾರಗಳನ್ನು ಧರಿಸಿದ್ದಾನೆ. ಗೋಧಿವರ್ಣದ ರಾಧೆಯು ಕೆಂಪು ಪೀತಾಂಬರವನ್ನು ಮತ್ತು ಬೂದಿ ಬಣ್ಣದ ಜೋಲಿ (ಕುಪ್ಪಸ) ಧರಿಸಿದ್ದಾಳೆ. ಮಾಹುತ ಮತ್ತು ಚೌರಿಧಾರಿಗಳು ಕೆಂಪು ಬಟ್ಟೆಗಳನ್ನು ಮತ್ತು ಶಿರೋವೇಷ್ಟನಗಳನ್ನು ಧರಿಸಿದ್ದಾರೆ. ಇವರನ್ನು ಒರಟಾಗಿ ಚಿತ್ರಿಸಲಾಗಿದೆ. ಮಾಹುತ ಮತ್ತು ಚೌರಿಹಿಡಿದಿರುವವರು ಸ್ವಲ್ಪ ಮಟ್ಟಿಗೆ ನೋಡಲು ಬಡಕಲಾಗಿ ಕಾಣಿಸುತ್ತಾರೆ. ಅವರು ತಮ್ಮ ಬಲಕೈಗಳಲ್ಲಿ ಕ್ರಮವಾಗಿ ತಿವಿಗೋಲು (ಅಂಕುಶ) ಮತ್ತು ಚೌರಿಗಳನ್ನು ಹಿಡಿದಿದ್ದಾರೆ. ಸೊಂಡಿಲನ್ನು ಮತ್ತು ಬಾಲವನ್ನು ಎತ್ತಿ ಹಿಡಿದ ಭಾರೀ ಗಾತ್ರದ ಆನೆಯು ಝೂಲ, ಹೌಡ, ಬಳೆಗಳು ಮತ್ತು ಹಾರಗಳಿಂದ ಅಲಂಕೃತವಾಗಿದೆ. ಸ್ವಲ್ಪಮಟ್ಟಿಗೆ ಬಗ್ಗಿರುವ ಆನೆಯ ಕಾಲು ಅದರ ಚಲನೆಯನ್ನು ಸೂಚಿಸುವುದಲ್ಲದೆ ಅದರ ಸ್ವಭಾವದ ಪರಿಚಯ ಕಲಾವಿದನಿಗಿದೆ ಎಂಬುದನ್ನು ಸಮರ್ಥಿಸುತ್ತದೆ. ಹಳದಿ ಮತ್ತು ಕಾವಿಬಣ್ಣದಲ್ಲಿ ಚಿತ್ರಿತವಾಗಿರುವ ಎಲೆಯ ಹಿಂಬದಿ ವೃತ್ತಾಕಾರದ ಗೆರೆಗಳಿಂದ ಮತ್ತು ಹೂವಿನ ಅಂಚಿನಿಂದ ಅಲಂಕೃತವಾಗಿದೆ. ಹಲವಾರು ಕಡೆಗಳಲ್ಲಿ ಬಣ್ಣಗಳು ಮಾಸಿರುವುದರಿಂದಾಗಿ ಚಿತ್ರದ ಸೌಂದರ್ಯ ಕೆಟ್ಟುಹೋಗಿದೆ. ಎಲೆಯ ಎಡಗೈ ಭಾಗದ ಅಂಚುಗಳೂ ಹಾಳಾಗಿಹೋಗಿವೆ.

ಕೃಷ್ಣ ಅಮಾತ್ಯ

ನೀಲಿವರ್ಣದ ಮುಖಛಾಯೆಯ ಸ್ವಾಮಿಯು ಕೈಯಲ್ಲಿ ಕೊಳಲನ್ನು ಹಿಡಿದುಕೊಂಡು ಪದ್ಮಾಸನದಲ್ಲಿ ರಥದಲ್ಲಿ ಪಾರ್ಶ್ವನೋಟದಲ್ಲಿ ಕುಳಿತಿದ್ದಾನೆ. ಸಾರಥಿ ರಥವನ್ನು ಓಡಿಸುತ್ತಿದ್ದಾನೆ. ಬೇರೆ ಬೇರೆ ಸ್ಥಳಗಳಲ್ಲಿ ಅಂಚು, ಸ್ವಾಮಿಯ ಬಲಭಾಗದ ಅರ್ಧಭಾಗ, ಕುದುರೆಗಳ ಮತ್ತು ರಥದ ಚಕ್ರಗಳ ಬಣ್ಣಗಳು ಮಾಸಿರುವುದರಿಂದ ಹಾಳಾಗಿದೆ. ಸ್ವಾಮಿಯು ಹಳದಿಬಣ್ಣದ ಧೋತಿಯನ್ನು ಉಟ್ಟಿದ್ದಾನೆ, ಕೆಂಪು ದುಪ್ಪಟ್ಟಾವನ್ನು ಹೊದ್ದಿದ್ದಾನೆ. ಹಾರಗಳು, ಕೈಕಡಗಗಳು, ನವಿಲುಗರಿಯಿಂದ ಮಾಡಿದ ಕಿರೀಟವನ್ನು ಧರಿಸಿದ್ದಾನೆ. ಪಾರ್ಶ್ವನೋಟದಲ್ಲಿ ಚಿತ್ರಿತವಾಗಿರುವ ಪುಟ್ಟ ಸಾರಥಿ ರಥದ ಮುಂದುಗಡೆ ಕುಳಿತಿದ್ದಾನೆ.

---

೩೪. Dr. Sarala Chopra: Ganjifa, PP. 204-206



ಇಂದ್ರನ ಜಾಕಿಯಲ್ಲಿ ಯೋಧನ ಎಲೆ



ಕೃಷ್ಣನ ಜಾಕಿಯಲ್ಲಿ ಧ್ವಜದ ಎಲೆ



ವೀರಭದ್ರನ ಎಣಿಕಿ ಎಲೆ



ದಶಾನನೆ



ಷಣ್ಮುಖ ಸೈನಾನಿ ಎಲೆ



ಕುರ್ಮ

ಸಂಗ್ರಹ ; ಜಗನ್ಮೋಹನ ವಸ್ತುಸಂಗ್ರಹಾಲಯ ಮೈಸೂರು

ಅವನು ಕೆಂಪು ಬಟ್ಟೆಗಳನ್ನುಟ್ಟಿದ್ದಾನೆ, ಶಿರೋವೇಷ್ಟನ ಧರಿಸಿದ್ದಾನೆ, ಬಲಗೈಯಲ್ಲಿ ತಿವಿಗೋಲನ್ನು (ಚಾವಟಿ) ಹಿಡಿದು ರಥವನ್ನು ಎಡಗಡೆಗೆ ನಡೆಸುತ್ತಿದ್ದಾನೆ. ರಥವು ಶಿಖರ, ಎರಡು ಬಾವುಟಗಳು ಮತ್ತು ಬಾಳೆಕಂಬಗಳಿಂದ ಅಲಂಕೃತವಾಗಿದೆ. ಕಟ್ಟಿನ ಇತರ ಎಲೆಗಳಂತೆ ಅಂಚಿನ ಅಲಂಕಾರ ಮತ್ತು ಎಲೆಯ ತಳವರ್ಣಗಳು ಇವೆ.

ಕೃಷ್ಣಸೇನಾನಿ

ನೀಲವರ್ಣದ ಮುಖಛಾಯೆಯಿಂದ ಕೂಡಿದ ಸ್ವಾಮಿಯು ಕೈಯಲ್ಲಿ ಕೊಳಲನ್ನು ಹಿಡಿದಿದ್ದು ನಾಗಾಲೋಟದಿಂದ ಓಡುತ್ತಿರುವ ಬೂದು ಬಣ್ಣದ ಕುದರೆಯನ್ನೇರಿ ಎಡಕ್ಕೆ ಹೋಗುತ್ತಿರುವಂತೆ ಚಿತ್ರಿಸಿದೆ. ಕುದುರೆಯ ಚಿತ್ರವನ್ನು ಪಾರ್ಶ್ವನೋಟದಲ್ಲಿ ಚಿತ್ರಿಸಿದೆ. ಸ್ವಾಮಿಯ ದೇಹ ಅಭಿಮುಖವಾಗಿದೆ. ಸ್ವಾಮಿಯ ಕೆಳಭಾಗವನ್ನು ಮತ್ತು ಕುದುರೆಯ ಬಹುಭಾಗವನ್ನು ಮಾಸಿರುವ ಬಣ್ಣಗಳು ಹಾಳುಗೆಡಿಸಿವೆ. ಜೊತೆಗೆ ಎಲೆಯ ಹಿನ್ನೆಲೆ ಮತ್ತು ಅಂಚು ಹಾಳಾಗಿದೆ. ಸ್ವಾಮಿಯ ಎದ್ದು ಕಾಣುವ ಲಕ್ಷಣವೆಂದರೆ, ಆತನ ಮುಗುಳ್ನಗೆಯ ಮುಖ ಮತ್ತು ಆತನ ಹಲ್ಲುಗಳು ಸ್ವಲ್ಪವಾಗಿ ಕಾಣುತ್ತಿವೆ. ಕೃಶಕಾಯದ ಕುದುರೆ ಜೀನು ಮತ್ತಿತರ ಆಭರಣಗಳಿಂದ ಅಲಂಕೃತವಾಗಿದೆ. ಸೌಂದರ್ಯಮೀಮಾಂಸೆಯ ದೃಷ್ಟಿಯಿಂದ ಸ್ವಾಮಿಯ ಮುಖವನ್ನು ಮೆಚ್ಚಿಕೊಳ್ಳಲಾಗದಿದ್ದರೂ ಹಾರಾಡುತ್ತಿರುವ ಶಲ್ಯ, ನಾಗಾಲೋಟದಿಂದ ಓಡುತ್ತಿರುವ ಕುದುರೆಯ ಕಾಲುಗಳು ಮೆಚ್ಚಿಕೊಳ್ಳುವಂಥದು. ಸ್ವಾಮಿಯ ಅಭಿಮುಖವಾದ ದೇಹ, ಕುದುರೆಯ ಪಾರ್ಶ್ವನೋಟದಲ್ಲಿ ಅದರ ಬೆನ್ನಿನ ಮೇಲೆ ಹಾಕಿರುವ ಕಾಲು ಅಷ್ಟೊಂದು ಹಿತಕರವಾದ ಭಂಗಿಯಲ್ಲಿಲ್ಲ. ಇದರಿಂದ ಈ ಚಿತ್ರದ ರಚನೆಯ ಬಗೆಗೆ ಕಲಾವಿದನಿಗೆ ಸಮರ್ಪಕವಾದ ವಿವೇಚನೆಯಿಲ್ಲವೆಂಬುದನ್ನು ತೋರಿಸುತ್ತದೆ. ಸ್ವಾಮಿಗೆ ಕೆಂಪು ದುಪ್ಪಟ್ಟಾವನ್ನು ಕಲಾವಿದ ಹೊದಿಸಿದ್ದಾನೆ. ಆದರೆ ಪ್ರತಿಮಾಶಾಸ್ತ್ರಕ್ಕೆ ಸಂಬಂಧಿಸಿದ ಪಠ್ಯಗಳು ಸ್ವಾಮಿಗೆ ಹಳದಿ (ಪಿತಾಂಬರ) ವಸ್ತ್ರವನ್ನು ಗೊತ್ತುಪಡಿಸಿವೆ. ಅದರಿಂದ ಕಲಾವಿದ ಪ್ರತಿಮಾರಚನಾ ನಿಯಮಗಳನ್ನು ಪಾಲಿಸಿಲ್ಲವೆಂಬದು ಸ್ಪಷ್ಟವಾಗುತ್ತದೆ. ಪಠ್ಯಕ್ಕೆ ಅನುಸಾರವಾಗಿ ದೇವರ ಪ್ರತಿಮಾಶಾಸ್ತ್ರದ ಮೂಲಭೂತ ತತ್ತ್ವಗಳನ್ನು ಅನುಸರಿಸಿದ್ದಾನಾದರೂ ಸಣ್ಣ ಪುಟ್ಟ ವಿಷಯಗಳ ಬಗ್ಗೆ (ಉಡುಪುಗಳ ಬಣ್ಣಗಳು ಇತ್ಯಾದಿ) ಕೆಲವೊಂದು ಬದಲಾವಣೆಗಳನ್ನು ತನ್ನ ಆಯ್ಕೆಗನುಗುಣವಾಗಿ ಮಾಡಿಕೊಂಡಿದ್ದಾನೆ.

ಕೃಷ್ಣಕಟ್ಟಿನ ಧ್ವಜ

ನೀಲಿ ಮುಖವರ್ಣದ ಸ್ವಾಮಿಯು ಕೊಳಲನ್ನು ಹಿಡಿದುಕೊಂಡು ಅಭಿಮುಖವಾಗಿ ಪದ್ಮಾಸನಸ್ಥನಾಗಿ ಮೆಟ್ಟಲುಗಳಿಂದ ಕೂಡಿದ ಪೀಠದ ಮೇಲೆ ವಿರಾಜಮಾನನಾಗಿದ್ದಾನೆ. ಎಡಭಾಗದಲ್ಲಿ ಕೆಂಪು ಧ್ವಜವಿದ್ದು ಅದು ಬೂದು ಮತ್ತು ಹಳದಿ ಅಂಚಿನಿಂದ ಅಲಂಕೃತಗೊಂಡಿದ್ದು ಮಧ್ಯದಲ್ಲಿ ಸಣ್ಣ ದುಂಡುಬಿಲ್ಲೆಯನ್ನು ಮತ್ತು ಮೇಲುಗಡೆ ಎರಡು ಕುಚ್ಚುಗಳನ್ನು ಒಳಗೊಂಡಿದೆ. ಬಣ್ಣಗಳು ಮಸುಕಾಗಿರುವುದರಿಂದ ಕಲಾಕೃತಿಯ ಬಹುಭಾಗ ಹಾಳಾಗಿದೆ. ಉಳಿದಿರುವ ಭಾಗಗಳನ್ನು ಗಮನಿಸಿದಾಗ ಕಟ್ಟಿನ ಇತರ ಎಲೆಗಳಂತೆಯೇ ಸ್ವಾಮಿಯು ನೇರಳೆ ಬಣ್ಣದ ಧೋತಿಯನ್ನುಟ್ಟು, ತೆಳು ಹಸಿರಿನ ದುಪ್ಪಟ್ಟಾ (ವಲ್ಲಿ) ವನ್ನು ಹೊದ್ದಿದ್ದಾನೆ. ನವಿಲುಗರಿಗಳಿಂದ ಕಿರೀಟವನ್ನು ಮಾಡಿದೆ. ಅಂಗವಸ್ತ್ರದ ಅಂಚುಗಳು ಅತ್ತಿತ್ತ ಗಂಭೀರವಾಗಿ ಹಾರಾಡುತ್ತಿವೆ. ಎಲೆಯ ನಸುಹಳದಿ ಕಂದುಬಣ್ಣದ ತಳಭಾಗವು ಹೂಗಳ ಅಂಚಿನಿಂದ ಕಪ್ಪು ಬಣ್ಣದಿಂದ ಅಲಂಕೃತವಾಗಿದೆ.

ಕೃಷ್ಣಕಟ್ಟಿನ ಮೊದಲನೆ ಎಲೆ

ನೀಲಿ ಮುಖವರ್ಣದ ಸ್ವಾಮಿಯು ಕೊಳಲನ್ನೂದುತ್ತ ಅರ್ಧವೃತ್ತಾಕಾರದ ಪೀಠದ ಮೇಲೆ ಪದ್ಮಾಸನ ಹಾಕಿಕೊಂಡು ಕುಳಿತಿರುವಂತೆ ಕಾಣಿಸುತ್ತಿದೆ. ಎಲೆಯ ಸಂಖ್ಯಾತ್ಮಕ ಮೌಲ್ಯವಾದ ಒಂದನ್ನು ಸೂಚಿಸುವ ವೇಷ ರಾಶಿಯ ಚಿಹ್ನೆಯಾದ ಟಗರು ಪೀಠದ ಕೆಂಪುತಳದ ಕೆಳಗೆ ಚಿತ್ರಿತಗೊಂಡಿವೆ. ಸ್ವಾಮಿಯ ಮುಖದ ಮತ್ತು ಟಗರಿನ ದೇಹದ ಬಹುಭಾಗ ಮಾಸಿರುವ ಬಣ್ಣಗಳಿಂದ ಹಾಳಾಗಿರುವುದರ ಜೊತೆಗೆ ಎಲೆಯ ತಳಭಾಗದ ಬಣ್ಣ ಮತ್ತು ಅಂಚು ಹಾಳಾಗಿದೆ. ಉಳಿದಿರುವ ಭಾಗವನ್ನು ಪರಿಶೀಲಿಸಿದಾಗ ಸ್ವಾಮಿಯು ಹಳದಿ ಬಣ್ಣದ ಧೋತಿಯನ್ನು ಧರಿಸಿ, ತಿಳಿ ಹಸಿರು ಅಂಚುಗಳಿಂದ ಕೂಡಿದ ವಲ್ಲಿಯನ್ನು ಸೊಗಸುಗಾರಿಕೆಯಿಂದ ಹೊದ್ದಂತೆ ತೋರುತ್ತದೆ. ಟಗರನ್ನು ಪಾರ್ಶ್ವನೋಟದಲ್ಲಿ ಚಿತ್ರಿಸಲಾಗಿದೆ. ಕೈಬಳೆಗಳು, ಕೈಕಡಗಗಳು ಮತ್ತು ನವಿಲುಗರಿಗಳಿಂದ ಕೂಡಿದ ಕಿರೀಟಗಳಿಂದ ಅಲಂಕೃತನಾಗಿದ್ದಾನೆ. ಪಾರ್ಶ್ವನೋಟದಲ್ಲಿ ಚಿತ್ರಿಸಲಾದ ಟಗರು ಬೊಂಬೆಯಂತೆ ತೋರುತ್ತಿದ್ದು ಅದರಲ್ಲಿ ಯಾವ ಅಭಿವ್ಯಕ್ತಿಯೂ ಕಾಣಿಸುತ್ತಿಲ್ಲ. ಅದು ಮರದ ಟಗರಿನಂತೆ ತೋರುತ್ತಿದೆ. ಇದಕ್ಕೆ ಹೋಲಿಸಿದಾಗ ಸ್ವಾಮಿಯ ಆಕೃತಿ ಅರ್ಥಗರ್ಭಿತವಾಗಿದೆ. ಅಲ್ಲದೆ ಪ್ರಾಣಿಯ ಚಿತ್ರ ಬಗೆಯುವಲ್ಲಿ ಕಲಾವಿದ ತೋರಿರುವ ಅನಾಸಕ್ತಿ ಗೋಚರವಾಗುತ್ತದೆ. ಅಂಚಿನ ಅಲಂಕಾರ ಮತ್ತು ಎಲೆಯ ತಳಭಾಗದ ಬಣ್ಣ ಈ ಕಟ್ಟಿನ ಇತರ ಎಲೆಗಳಂತೆ ಇವೆ.

ಕೃಷ್ಣಕಟ್ಟಿನ ಮೂರನೆಯ ಎಲೆ

ಬಣ್ಣಗಳು ಮಾಸಿರುವುದರಿಂದ ಚಿತ್ರದ ಬಹುಭಾಗ ಹಾಳಾಗಿದೆ. ಎಲೆಯೂ ಕೂಡ ಅಂಚಿನಲ್ಲಿ ಹಾಳಾಗಿದೆ. ಸ್ವಾಮಿಯ ತಲೆಯ ಮೇಲ್ಭಾಗ, ಬಲಗೈ, ಕಾಲುಗಳ ಕೆಳಭಾಗ ಮತ್ತು ಪೀಠಭಾಗ ಮಾತ್ರ ಕಾಣಿಸುತ್ತದೆ. ಚಿತ್ರದ ಉಳಿದ ಭಾಗದಿಂದ ಕಟ್ಟಿನ ಇತರ ಎಲೆಗಳಂತೆ ಸ್ವಾಮಿಯು ಕೈಯಲ್ಲಿ ಕೊಳಲು ಹಿಡಿದು ಅರ್ಧವೃತ್ತಾಕಾರದ ಪೀಠದಲ್ಲಿ ಪದ್ಮಾಸೀನನಾಗಿ ಅಭಿಮುಖನಾಗಿ ಕುಳಿತಿದ್ದಾನೆಂದು ಊಹಿಸಬಹುದು. ನವಿಲುಗರಿಗಳಿಂದ ಮಾಡಿದ ಕಿರೀಟದಿಂದ ಅಲಂಕೃತನಾದ ಈತನು ಕೆಂಪನೆಯ ದುಪ್ಪಟ್ಟಾವನ್ನು ಮತ್ತು ಧೋತಿಯನ್ನು ಧರಿಸಿದ್ದಾನೆ. ಅಡ್ಡಗೆರೆಗಳ ನಮೂನೆಯಲ್ಲಿ ಚಿತ್ರಿಸಲಾದ ವೀಣೆ ಮತ್ತು ಗದೆಗಳ ಮೇಲ್ಭಾಗದ ಅರ್ಧಭಾಗದ ಉಳಿಕೆಗಳು ಮಿಥುನರಾಶಿಯನ್ನು ಸೂಚಿಸುವುದರ ಜೊತೆಗೆ ಎಲೆಯ ಮೂರನೆಯ ಸಂಖ್ಯೆಯ ಮೌಲ್ಯವನ್ನು ಸೂಚಿಸುತ್ತದೆ. ಕಟ್ಟಿನ ಇತರ ಎಲೆಗಳಂತೆ ತಳಭಾಗದ ಬಣ್ಣ ಮತ್ತು ಅಂಚಿನ ಅಲಂಕಾರಗಳು ಈ ಎಲೆಯಲ್ಲೂ ಇವೆ.

ಕೃಷ್ಣಕಟ್ಟಿನ ನಾಲ್ಕನೆಯ ಎಲೆ

ನೀಲಿವರ್ಣದಿಂದ ಚಿತ್ರಿತನಾಗಿರುವ ಕೃಷ್ಣಸ್ವಾಮಿಯು ಅರ್ಧವೃತ್ತಾಕಾರದ ಪೀಠದಲ್ಲಿ ಪದ್ಮಾಸನಾಸೀನನಾಗಿ ಅಭಿಮುಖನಾಗಿ ಕುಳಿತಿದ್ದಾನೆ. ಎಲೆಯ ಸಂಖ್ಯಾತ್ಮಕ ಮೌಲ್ಯವಾದ ನಾಲ್ಕನೆಯ ಸಂಖ್ಯೆಯನ್ನು ಸೂಚಿಸುವ ಕಟಕರಾಶಿಯ ಚಿಹ್ನೆಯಾದ ಏಡಿಯನ್ನು ಪೀಠದ ಕೆಂಪುತಳದ ಕೆಳಗೆ ಚಿತ್ರಿಸಲಾಗಿದೆ. ಕೊಳಲನ್ನೂದುತ್ತಿರುವ ಸ್ವಾಮಿಯು ಹರ್ಷಚಿತ್ತನಾಗಿರುವಂತೆ ಚಿತ್ರಿಸಲಾಗಿದೆ. ಆತ ಧೋತಿಯನ್ನುಟ್ಟು ದುಪ್ಪಟ್ಟಾವನ್ನು ಹೊದ್ದಿದ್ದಾನೆ. ಕೈಕಡಗಗಳು, ತೋಳಬಂಧಿಗಳು, ಹಾರಗಳು ಮತ್ತು ನವಿಲುಗರಿಗಳಿಂದ ಮಾಡಿದ ಕಿರೀಟವನ್ನು ಧರಿಸಿದ್ದಾನೆ. ನಸುಗೆಂಪುಬಣ್ಣದ ದುಪ್ಪಟ್ಟಾವು ತೆಳು ಹಸಿರು ಅಂಚುಗಳಿಂದ ಕೂಡಿದ್ದು ಎರಡು ಕಡೆ ಜೋಲಾಡುತ್ತಿದೆ. ಅನೇಕ ಕಡೆಗಳಲ್ಲಿ ಬಣ್ಣಗಳು ಮಾಸಿರುವುದರಿಂದ ಚಿತ್ರದ ಸೌಂದರ್ಯ ಹಾಳಾಗಿದೆ. ತಳಭಾಗದ ಬಣ್ಣ ಮತ್ತು ಎಲೆಯ ಅಂಚಿನ ಅಲಂಕರಣ ಕಟ್ಟಿನ ಇತರ ಎಲೆಗಳಂತಿವೆ.



ಚಕ್ರವರ್ತಿ ಎಲೆ



ನಾಗ ಜಾಕಿಯ ರಾಜನ ಎಲೆ



ಕೃಷ್ಣನ ಜಾಕಿಯ ಸೇನಾನಿ ಎಲೆ



ಸೂರ್ಯ



ನರಸಿಂಹ ಜಾಕಿಯ ರಾಜನ ಎಲೆ

ಸಂಗ್ರಹ ; ಜಗನ್ಮೋಹನ ವಸ್ತುಸಂಗ್ರಹಾಲಯ ಮೈಸೂರು

ಕೃಷ್ಣಕಟ್ಟಿನ ಆರನೆಯ ಎಲೆ

ಕೈಗಳಲ್ಲಿ ಕೊಳಲನ್ನು ಹಿಡಿದಿರುವ ನೀಲಬಣ್ಣದ ಸ್ವಾಮಿಯು ಅಭಿಮುಖನಾಗಿ ಪದ್ಮಾಸೀನನಾಗಿ ಅರ್ಧವೃತ್ತಾಕಾರದ ಪೀಠದ ಮೇಲೆ ಕುಳಿತಿದ್ದಾನೆ. ಎಲೆಯ ಸಂಖ್ಯಾತ್ಮಕ ಮೌಲ್ಯ ಆರನ್ನು ಸೂಚಿಸುವ, ದೋಣಿಯಲ್ಲಿನ ಹೆಂಗಸಿನ ತಲೆಯ ರಾಶಿಚಕ್ರದ ಕನ್ಯಾರಾಶಿಯ ಚಿಹ್ನೆಯು ಪೀಠದ ಕೆಳಗೆ ಕೆಂಪು ತಳಭಾಗದಲ್ಲಿ ಕಾಣಿಸಿಕೊಂಡಿದೆ. ಹೆಂಗಸು ಮತ್ತು ದೋಣಿಯ ಚಿತ್ರವನ್ನು ಪಾರ್ಶ್ವನೋಟದಲ್ಲಿ ಚಿತ್ರಿಸಲಾಗಿದೆ. ಅನೇಕ ಕಡೆಗಳಲ್ಲಿ ಬಣ್ಣಗಳು ಮಸುಕಾಗಿರುವುದರಿಂದ ಎಲೆಯ ತಳಭಾಗದ ಮತ್ತು ಅಂಚಿನ ಬಣ್ಣ ಹಾಗೂ ಹೆಂಗಸಿನ ದೇಹದ ಎಡಭಾಗ ಮತ್ತು ಮುಖ ಹಾಳಾಗಿದೆ. ಹಾಗಾಗಿ ಸ್ವಾಮಿಯ ಮುಖದ ಭಾವನೆಗಳನ್ನು ಗುರುತಿಸಲು ಬರುವುದಿಲ್ಲ. ಕೆಂಪು ದುಪ್ಪಟ್ಟಾಗಳು ಹಸಿರು ಅಂಚುಗಳಿಂದ ಕೂಡಿ ಎರಡೂ ಕಡೆ ಕೊನೆ ಅಲುಗಾಡುತ್ತಿವೆ. ಹಳದಿ ಧೋತಿಯನ್ನುಟ್ಟುಕೊಂಡಿದ್ದಾನೆ. ಸ್ವಾಮಿಯ ಹಾರಗಳು, ಕೈಬಳೆಗಳು ಮತ್ತು ನವಿಲುಗರಿಗಳಿಂದ ಮಾಡಿದ ಕಿರೀಟವನ್ನು ಧರಿಸಿದ್ದಾನೆ. ಹಳದಿ ಬಣ್ಣದಲ್ಲಿ ಚಿತ್ರಿತವಾದ ಹೆಂಗಸಿನ ಮುಖದ ಮೇಲೆ ಮುಗುಳ್ನಗೆಯಿದೆ, ವಿಶಾಲವಾದ ಕಣ್ಣುಗಳಿವೆ. ಕೂದಲನ್ನು ಬಾಚಿ ಜಡೆ ಹೆಣೆದುಕೊಂಡಿದ್ದಾಳೆ. ಎಲೆಯ ತಳಭಾಗದ ಬಣ್ಣ ಮತ್ತು ಅಂಚಿನ ಅಲಂಕಾರವು ಕಟ್ಟಿನ ಇತರ ಎಲೆಗಳಂತಿವೆ.[೩೫]

ಮನ್ಮಥ ಕಟ್ಟಿನ ಅಮಾತ್ಯ

ತೆಳು ಹಸಿರುಬಣ್ಣದಲ್ಲಿ ಚಿತ್ರಿತನಾಗಿರುವ ಮನ್ಮಥನು ಎರಡು ಕುದುರೆಗಳು ಎಳೆಯುತ್ತಿರುವ ರಥದಲ್ಲಿ ಮಂಡಿಯೂರಿ ಕುಳಿತಿದ್ದಾನೆ. ಬಲಗೈಯಲ್ಲಿ ಚಾವಟಿ ಹಿಡಿದ ಸಾರಥಿಯು ಬಲಗಡೆಗೆ ರಥವನ್ನು ಓಡಿಸುತ್ತಿದ್ದಾನೆ. ಮನ್ಮಥನು ಕುಳಿತ ಭಂಗಿ ಮುಕ್ಕಾಲುಪಾಲು ಪಾರ್ಶ್ವನೋಟದಿಂದ ಕೂಡಿದೆ. ಸಾರಥಿ ಮತ್ತು ಕುದುರೆಗಳನ್ನು ಮೀಸೆಯುಳ್ಳ ಮನ್ಮಥನು ಹಿಡಿದಿದ್ದಾನೆ. ಕೆಂಪು ಧೋತಿ ಉಟ್ಟಿದ್ದಾನೆ, ಅರೆ ತೋಳಿನ ಬಿಗಿಯಾದ ಅಂಗಿಯನ್ನು ತೊಟ್ಟಿದ್ದಾನೆ ಹಾಗೂ ಪಟಕಾ (ಪೇಟ), ಕವಚವನ್ನು ಧರಿಸಿದ್ದಾನೆ. ಕಿರೀಟ, ಕೈಬಳೆಗಳು ಮತ್ತು ತಿಲಕವನ್ನು ಧರಿಸಿದ್ದಾನೆ. ಆತನ ವಿಶಾಲ ಕಣ್ಣುಗಳು, ಎಚ್ಚರಿಕೆಯ ನೋಟ, ಉತ್ಸಾಹದ ಭಂಗಿಗಳು ಯೋಧನ ಕಲಿತನದಂತಿವೆ. ಕುದುರೆಗಳು ಮತ್ತು ಸಾರಥಿಯರು ಸ್ವಲ್ಪ ಮಟ್ಟಿಗೆ ಚಿಕ್ಕವರಾಗಿ ಕಾಣುತ್ತಾರೆ. ಸಾರಥಿಯು ಪೂರ್ಣತೋಳಿನ ಕೆಂಪು ಉಡುಪುಗಳನ್ನು ಮತ್ತು ಶಿರೋವೇಷ್ಟನವನ್ನು ಧರಿಸಿದ್ದಾನೆ. ಕುದುರೆಯ ಬಹಳಷ್ಟು ಭಾಗ ಹಾಳಾಗಿದೆ. ಎಲೆಯ ವರ್ತುಲಾಕಾರದ ಗೆರೆಯನ್ನು ದಾಟಿರುವ ಕುದುರೆಯ ಹಿಂದಿನ ತೆಳು ಕಾಲುಗಳ ಗೊರಸುಗಳು ಅದರ ವೇಗವಾದ ಚಲನೆಯನ್ನು ಸೂಚಿಸುತ್ತಿವೆ. ಹಳದಿ ರಥವು ಶಿಖರ, ಧ್ವಜ, ಬಾಳೆಯ ಕಂಬಗಳಿಂದ ಕೂಡಿ ಚುಕ್ಕಿ ಮತ್ತು ವೃತ್ತದ ವಿನ್ಯಾಸ ಹೊಂದಿದೆ. ನಾಲ್ಕು ಚಕ್ರದ ರಥದಲ್ಲಿ ಎರಡು ಚಕ್ರಗಳು ಮಾತ್ರ ಕಾಣಿಸುತ್ತಿವೆ. ಎಲೆಯ ಕಂದುಬಣ್ಣದ ಹಿನ್ನೆಲೆಯು ಹೂವಿನ ಅಂಚು ಮತ್ತು ವೃತ್ತಾಕಾರದ ಗೆರೆಗಳಿಂದ ಕಪ್ಪು ಬಣ್ಣದಲ್ಲಿ ಚಿತ್ರಿತವಾಗಿದೆ. ಮಸುಕಾಗಿರುವ ಬಣ್ಣದಿಂದಾಗಿ ಚಿತ್ರದ ಸೌಂದರ್ಯಕ್ಕೆ ಧಕ್ಕೆಯೊದಗಿದೆ. ಆದರೂ ಮನ್ಮಥನ ಆಕೃತಿಯಲ್ಲಿ ಕಾಣಬರುವ ಉತ್ಸಾಹ, ಚೈತನ್ಯಗಳು ನೋಡುಗನ ಮನಸ್ಸನ್ನು ಸೆರೆಹಿಡಿಯುತ್ತವೆ.

ಮನ್ಮಥ ಕಟ್ಟಿನ ಧ್ವಜ

ತೆಳು ನೀಲಿಬಣ್ಣದಲ್ಲಿ ಚಿತ್ರಿತವಾಗಿರುವ ಮನ್ಮಥಪ್ರಭು ಪೂರ್ಣವಾಗಿ ಬಗ್ಗಿದ ಕಬ್ಬಿನ ಜಲ್ಲೆಯ

೩೫. Dr. Sarala Chopra., Ganjifa, PP. 207-211

ಬಿಲ್ಲನ್ನು ಹಿಡಿದು ಮೆಟ್ಟಿಲುಗಳ ವೇದಿಕೆಯ ಮೇಲೆ ಆಲೀಢಾಸನದಲ್ಲಿ ಕುಳಿತಿದ್ದಾನೆ. ಹಳದಿ ಅಂಚಿನಿಂದ ಅಲಂಕೃತವಾದ ಕೆಂಪು ಧ್ವಜ ಮತ್ತು ಅದರ ಮೇಲೆ ಎರಡು ಕುಚ್ಚುಗಳು, ಮಧ್ಯದಲ್ಲಿ ಹಳದಿ ವೃತ್ತ, ಇವು ಬಲಭಾಗದಲ್ಲಿ ಚಿತ್ರಿತವಾಗಿವೆ. ಬಣ್ಣಗಳು ಮಾಸಿರುವುದರಿಂದ ಪೀಠದ ಬಹು ಪಾಲು, ಪ್ರಭುವಿನ ದೇಹದ ಮುಖ ಮತ್ತು ಕೆಳಭಾಗಗಳು ಹಾಳಾಗಿವೆ. ಮುಕ್ಕಾಲು ಭಾಗ ಪಾರ್ಶ್ವನೋಟದಲ್ಲಿ ಪ್ರಭು ಚಿತ್ರಿತನಾಗಿದ್ದು ಹಳದಿ ಕವಚ, ಕೆಂಪು ಧೋತಿ, ಪೇಟ (ಪಟಕಾ) ಮತ್ತು ಕಿರೀಟವನ್ನು ಧರಿಸಿದ್ದಾನೆ. ಕೈಬಳೆಗಳನ್ನು ಮತ್ತು ತೋಳಬಂಧಿಗಳನ್ನು ಹಾಕಿಕೊಂಡಿದ್ದಾನೆ. ಮುಖಲಕ್ಷಣಗಳನ್ನು ಗುರುತಿಸಲಾಗದಿದ್ದರೂ ಪ್ರಭುವಿನ ಚೈತನ್ಯಪೂರ್ಣವಾದ ಆಕೃತಿಯು ವೀರನ ಸಾಹಸ ಮತ್ತು ಶಕ್ತಿಯನ್ನು ಸೂಚಿಸುತ್ತದೆ. ಬಲಭಾಗದಲ್ಲಿರುವ ಧ್ವಜದ ಸ್ಥಾನ ಕಟ್ಟಿನಲ್ಲಿರುವ ಆಕೃತಿಯ ಇತರ ಧ್ವಜ ಎಲೆಗಳಿಗಿಂತ ಭಿನ್ನವಾಗಿದೆ. ಬಹುಶಃ ಈ ಎಲೆಯು ಇನ್ನೊಂದು ಕಟ್ಟಿಗೆ ಸಂಬಂಧಿಸಿದ್ದಿರಬಹುದು. ಮನ್ಮಥ ಎಲೆಗಳ ಕಟ್ಟು ಸಂಖ್ಯೆ ಎರಡನ್ನು ಪ್ರತಿನಿಧಿಸುವ ಎರಡು ಎಲೆಗಳನ್ನು ಹೊಂದಿದೆ. ಒಂದು ಎಲೆ ದ್ವಿಪ್ರತಿಯಾಗಿರಬಹುದು. ಇನ್ನೂ ಹೇಳುವುದಾದರೆ ಪ್ರಭು ಮನ್ಮಥನನ್ನು ಎರಡು ವಿವಿಧ ಬಣ್ಣಗಳಲ್ಲಿ, ಎಂದರೆ ತಿಳಿ ಹಸಿರು ಮತ್ತು ಕಂದುಬಣ್ಣಗಳಲ್ಲಿ ಚಿತ್ರಿಸಿದೆ. ಎಲೆಗಳ ಕಟ್ಟಿನಲ್ಲಿ ದೇವತೆಯನ್ನು ಎರಡು ಬೇರೆ ಬೇರೆ ಮುಖಛಾಯೆಗಳಲ್ಲಿ ಪ್ರಕಟಿಸುವುದು ಗಂಜೀಫಾ ಕಟ್ಟುಗಳ ಪ್ರತಿಮಾವಿವರಣಾ ಚಿತ್ರದ ನಿಯಮಗಳಿಗೆ ವಿರುದ್ಧವಾದುದು. ಈ ಎಲ್ಲ ಅಂಕಗಳನ್ನು ಮನಗಂಡು ಎರಡು ಬೇರೆ ಬೇರೆ ಕಟ್ಟುಗಳ ಎಲೆಗಳು ಇಲ್ಲಿ ಮಿಶ್ರಣಗೊಂಡಿರುವುದರಿಂದ ಮುಖಛಾಯೆಗಳಲ್ಲಿ, ಧ್ವಜದ ಸ್ಥಾನ ಇತ್ಯಾದಿಗಳಲ್ಲಿ ವ್ಯತ್ಯಾಸಗಳಾಗಿವೆಯೆಂದು ಊಹಿಸಬಹುದು. ಮತ್ತೊಂದು ಸಂಭಾವ್ಯತೆಯೆಂದರೆ ಮೇಲೆ ಹೇಳಿದ ಕಟ್ಟನ್ನು ಸಿದ್ಧಪಡಿಸುವಾಗ ಒಂದಕ್ಕಿಂತ ಹೆಚ್ಚು ಕೈಗಳಿಗೆ (ಕಲಾವಿದರಿಗೆ) ಅವಕಾಶ ಕಲ್ಪಿಸಿರಬಹುದು. ಇದರಿಂದಾಗಿ ಕಟ್ಟನ್ನು ರೂಪಿಸುವಾಗ ಬೇರೆ ಬೇರೆ ಬದಲಾವಣೆಗಳಾಗಿರಬಹುದು. ಅಂಚಿನ ಅಲಂಕಾರ ಮತ್ತು ಎಲೆಯ ತಳಭಾಗದ ಬಣ್ಣ ಎಲೆಗಳ ಕಟ್ಟಿನ ಅಮಾತ್ಯ ಎಲೆಯಂತಿದೆ.

ಮನ್ಮಥ ಎಲೆಗಳ ಕಟ್ಟಿನ ಎರಡನೆ ಎಲೆ

ತಿಳಿ ಹಸಿರು ಬಣ್ಣದಲ್ಲಿ ಚಿತ್ರಿತನಾಗಿರುವ ಮನ್ಮಥ ಸ್ವಾಮಿಯು ಅರ್ಧವೃತ್ತಾಕಾರದ ಪೀಠದ ಮೇಲೆ ಆಲೀಢಾಸನದಲ್ಲಿ ಕುಳಿತಿದ್ದಾನೆ. ಪೂರ್ಣವಾಗಿ ಬಗ್ಗಿರುವ ಕಬ್ಬಿನ ಜಲ್ಲೆಯ ಬಿಲ್ಲಿನಿಂದ ಬಾಣಗಳನ್ನು ಬಿಡುತ್ತಿದ್ದಾನೆ. ಎಲೆಯ ಸಂಖ್ಯಾತ್ಮಕ ಮೌಲ್ಯವಾದ ಎರಡನ್ನು ಸೂಚಿಸುವ ವೃಷಭರಾಶಿಯ ಸಂಕೇತವಾದ ತೆಳು ಊದಾ ಬಣ್ಣದ ಗೂಳಿಯನ್ನು ಪಾರ್ಶ್ವನೋಟದಲ್ಲಿ ಚಿತ್ರಿಸಿದ್ದಾನೆ. ಇದು ಪೀಠದ ಕೆಂಪು ತಳಭಾಗದ ಕೆಳಗೆ ಚಿತ್ರಿತವಾಗಿದೆ. ಮುಕ್ಕಾಲು ಭಾಗ ಪಾರ್ಶ್ವನೋಟದಲ್ಲಿ ಈತನ ಬಲಿಷ್ಠ ದೇಹ ಹಾಗೂ ವೀರೋದಾತ್ತ ಚೈತನ್ಯವನ್ನು ಸೂಸುತ್ತಿರುವ ಕಣ್ಣುಗಳನ್ನು ಚಿತ್ರಿಸಲಾಗಿದೆ. ಹೆಚ್ಚು ಕಡಿಮೆ ಚಚ್ಚೌಕವಾಗಿರುವ ಸ್ವಾಮಿಯ ಮುಖ ಮೀಸೆಯಿಂದ ಶೋಭಿತವಾಗಿದೆ. ಹಳದಿ ಕವಚ, ಕೆಂಪು ಪೇಟಾ (ಪಟಕಾ) ಮತ್ತು ಧೋತಿಯನ್ನು ಧರಿಸಿದ್ದಾನೆ. ತಿಲಕ, ಹಾರಗಳು, ಕರ್ಣಕುಂಡಲಗಳು, ಕೈಕಡಗಗಳು ಮತ್ತು ಕಿರೀಟದಿಂದ ಅಲಂಕೃತನಾಗಿದ್ದಾನೆ. ಹಲವಾರು ಕಡೆಗಳಲ್ಲಿ ಬಣ್ಣಗಳು ಮಾಸಿದ್ದು, ಗೂಳಿಯ ದೇಹದ ಬಹುಭಾಗ ಹಾನಿಗೀಡಾಗಿದೆ. ಉಳಿದ ಭಾಗಗಳು, ಈ ಗೂಳಿ ಡುಬ್ಬವನ್ನು ಹೊಂದಿದ್ದು ಅನೇಕ ಕಡೆಗಳಲ್ಲಿ ಹಾರಗಳಿಂದ ಅಲಂಕೃತವಾಗಿರುವುದನ್ನು ತೋರಿಸುತ್ತದೆ. ಎಲೆಯ ಕಂದು ಬಣ್ಣದಿಂದ ಕೂಡಿದ ಭೂತಳವು (ಖಾಲಿಜಾಗ) ಕಪ್ಪನೆಯ ಹೂವಿನ ಅಂಚಿಗೆ ವೈದೃಶ್ಯವನ್ನು ಬಳಸಿದ್ದಾನೆ. ಬಲಗಡೆಗೆ ಅಭಿಮುಖವಾಗಿರುವ ಮನ್ಮಥ

ಮೂರ್ತಿಯನ್ನು ಎಡಗಡೆಗೆ ಅಭಿಮುಖವಾದ ಗೂಳಿಯೊಡನೆ ಹೋಲಿಸಿದಾಗ ತುಂಬ ಸ್ಫೂರ್ತಿಯಾಗಿ ಆಕರ್ಷಕನಾಗಿ ಕಾಣುತ್ತಾನೆ. ಗೂಳಿಯು ಯಾವುದೇ ಪ್ರತಿಕ್ರಿಯೆ ತೋರದೆ ಶಾಂತವಾಗಿ ಕುಳಿತಿದೆ.

ಮನ್ಮಥ ಎಲೆಗಳ ಕಟ್ಟಿನ ಎರಡನೆ ಎಲೆ

ತಿಳಿ ಹಸಿರು ಬಣ್ಣದಲ್ಲಿ ಚಿತ್ರಿತನಾಗಿರುವ ಮನ್ಮಥ ಸ್ವಾಮಿಯು ಪೂರ್ಣವಾಗಿ ಬಗ್ಗಿರುವ ಕಬ್ಬಿನ ಜಲ್ಲೆಯ ಬಿಲ್ಲನ್ನು ಹಿಡಿದು, ಐದು ಬಾಣಗಳಿಂದ ಕೂಡಿ, ಅರ್ಧವೃತ್ತಾಕಾರದ ಪೀಠದ ಮೇಲೆ ಆಲೀಢಾಸನದಲ್ಲಿ ಮುಕ್ಕಾಲು ಭಾಗ ಪಾರ್ಶ್ವನೋಟದಲ್ಲಿ ಕುಳಿತಿದ್ದಾನೆ. ಪೀಠದ ಕೆಂಪು ಭೂತಳದಲ್ಲಿ ವೃಷಭರಾಶಿಯ ಸಂಕೇತವಾಗಿ ಊದಾಬಣ್ಣದ ಛಾಯೆಯುಳ್ಳ ಬಿಳಿ ಗೂಳಿಯಿದೆ. ಎಲೆಯ ಸಂಖ್ಯಾತ್ಮಕ ಮೌಲ್ಯ ಎರಡನೆ ಸಂಖ್ಯೆಯಾಗಿದ್ದು ಗೂಳಿಯ ಪಾರ್ಶ್ವನೋಟದಲ್ಲಿ ಚಿತ್ರಿತವಾಗಿದೆ. ಸ್ವಾಮಿಯ ಆಕೃತಿಯನ್ನು ಮಸುಕು ಮಸುಕಾದ ಬಣ್ಣಗಳು ಹಾನಿಗೊಳಗು ಮಾಡಿದ್ದರೂ ಸ್ವಾಮಿಯ ಕ್ರಿಯಾಶೀಲ ಭಂಗಿ, ಹುಬ್ಬೇರಿದ ಕಣ್ಣೋಟ ಮತ್ತು ಉದ್ವಿಗ್ನದಿಂದ ಕೂಡಿದ ವಿಶಾಲ ಕಣ್ಣುಗಳು ಆತನ ವೀರೋದಾತ್ತ ಸ್ವರೂಪವನ್ನು ಸೂಚಿಸುತ್ತವೆ. ಸ್ವಾಮಿಯು ಕೆಂಪು ಪಟಕಾ, ಧೋತಿ ಮತ್ತು ಹಳದಿ ಕವಚವನ್ನು ಮತ್ತು ಕಿರೀಟ, ಕೈಕಡಗಗಳು, ತೋಳಬಂಧಿಗಳು, ತಿಲಕವನ್ನು ಧರಿಸಿದ್ದಾನೆ. ಪಾರ್ಶ್ವನೋಟದಲ್ಲಿ ಚಿತ್ರಿತವಾದ ಗೂಳಿಯು ಎಡಗಡೆಗೆ ಮುಖಮಾಡಿ ಶಾಂತವಾಗಿ ಕುಳಿತಿದೆ. ಪೀಠಬಂಧ ಮತ್ತು ಹಾರಗಳಿಂದ ಅಲಂಕೃತವಾಗಿದೆ. ಅನೇಕ ಕಡೆಗಳಲ್ಲಿ ಬಣ್ಣ ಮಸುಕಾಗಿದೆ. ಆದರೂ ಚೈತನ್ಯಪೂರ್ಣವಾದ ಸ್ವಾಮಿಯ ಸ್ವರೂಪವನ್ನು ಕಲಾವಿದನ ಶಕ್ತಿಪೂರ್ಣ ರೇಖೆಗಳು ಸೆರೆಹಿಡಿದಿವೆ. ಅಂಚು ವಿನ್ಯಾಸ ಮತ್ತು ತಳಭಾಗದ ಬಣ್ಣವು ಇತರ ಎಲೆಗಳಂತೆಯ ಇದೆ.

ಮನ್ಮಥ ಎಲೆಗಳ ಕಟ್ಟಿನ ಮೂರನೆಯ ಎಲೆ

ಕಂದು ಬಣ್ಣದ ಮನ್ಮಥ ಸ್ವಾಮಿಯು ಅರ್ಧವೃತ್ತಾಕಾರದ ಪೀಠದಲ್ಲಿ ಆಲೀಢಾಸನದಲ್ಲಿ ಕುಳಿತಿದ್ದಾನೆ. ಇಕ್ಷುದಂಡ (ಕಬ್ಬಿನ ಜಲ್ಲೆ) ದಿಂದ ಬಗ್ಗಿಸಲ್ಪಟ್ಟ ಬಿಲ್ಲಿನಿಂದ ಬಾಣಗಳನ್ನು ಬಿಡುತ್ತಿರುವಂತೆ ಚಿತ್ರಿಸಲಾಗಿದೆ. ಎಲೆಯ ಸಂಖ್ಯಾತ್ಮಕ ಸಂಖ್ಯೆ ಮೂರನ್ನು ಸೂಚಿಸುವ, ಅಡ್ಡಗೆರೆಗಳಿಂದ ಚಿತ್ರಿಸಲ್ಪಟ್ಟ ಮೀಸೆ ಮತ್ತು ಗದೆಗಳು ಪೀಠದ ಕೆಂಪು ತಳದ ಅಡಿಯಲ್ಲಿ ಚಿತ್ರಿತವಾಗಿವೆ. ಹೆಚ್ಚು ಕಡಿಮೆ ಚೌಕಾಕಾರದ ಮುಖದ ಮೀಸೆಯಿಂದ ಕೂಡಿದ ಸ್ವಾಮಿಯು ಬಲಗಡೆಗೆ ತಿರುಗಿದ್ದಾನೆ. ಕೆಂಪು ಪಟಕಾ, ಧೋತಿ ಹಾಗೂ ಹಳದಿ ಬಣ್ಣದ ಕವಚ ತೊಟ್ಟಿದ್ದಾನೆ. ಕಿರೀಟ, ಹಾರಗಳು, ಕರ್ಣಕುಂಡಲಗಳು ಮತ್ತು ತಿಲಕಗಳಿಂದ ಶೋಭಿತನಾಗಿದ್ದಾನೆ. ವಿಶಾಲವಾದ ತೆರೆದ ಕಣ್ಣುಗಳೊಂದಿಗಿನ ಆತನ ಚಟುವಟಿಕೆಯಿಂದ ಕೂಡಿದ ದೇಹವು ಸ್ವಾಮಿಯ ದಿಟ್ಟ ಸಂಕಲ್ಪವನ್ನು ಸೂಚಿಸುತ್ತದೆ. ನೀಟಾದ ಹುಬ್ಬುಗಳಿವೆ. ಎಲೆಯ ಕಂದು ಬಣ್ಣದ ಹಿನ್ನೆಲೆಯಲ್ಲಿ ಹೂವಿನ ಅಂಚು ಮತ್ತು ವರ್ತುಲಾಕಾರದ ಗೆರೆಗಳಿವೆ. ಅನೇಕ ಕಡೆಗಳಲ್ಲಿ ಬಣ್ಣಗಳು ಮಾಸಿರುವುದರಿಂದ ಚಿತ್ರದ ಸೌಂದರ್ಯ ಹಾಳಾಗಿದೆ.

ಮನ್ಮಥಕಟ್ಟಿನ ನಾಲ್ಕನೆಯ ಎಲೆ

ತಿಳಿ ಹಸಿರು ಮುಖಛಾಯೆಯಿಂದ ಕೂಡಿದ ಮನ್ಮಥ ಸ್ವಾಮಿಯು ಬಲಗಡೆ ಅಭಿಮುಖವಾಗಿ ಅರ್ಧವೃತ್ತಾಕಾರದ ಪೀಠದ ಮೇಲೆ ಆಲೀಢಾಸನದಲ್ಲಿ ಕುಳಿತುಕೊಂಡು ಪೂರ್ಣವಾಗಿ ಬಗ್ಗಿರುವ ಇಕ್ಷುದಂಡದ (ಕಬ್ಬಿಣಜಲ್ಲೆ) ಬಿಲ್ಲಿನಿಂದ ಐದು ಬಾಣಗಳನ್ನು ಹೊಡೆಯುತ್ತಿದ್ದಾನೆ. ಎಲೆಯ ಸಂಖ್ಯಾತ್ಮಕ ಮೌಲ್ಯವಾದ ನಾಲ್ಕನ್ನು ಸೂಚಿಸುವ ಕಟಕ ರಾಶಿಯ ಚಿಹ್ನೆಯಾದ ಏಡಿಯನ್ನು ಕೆಂಪು ತಳಭಾಗದಲ್ಲಿ



ಮನ್ಮಥ



ರತಿ



ಸಮುದ್ರ ರಾಜ



ರಾಣಿ



ಪರ್ವತ ರಾಜ



ರಾಣಿ

ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಚಿತ್ರಿಸಲಾಗಿದೆ. ದಪ್ಪನೆಯ ಮುಖದ ಉದ್ದನೆಯ ಮೀಸೆಯ ಸ್ವಾಮಿಯ ಪ್ರಧಾನವಾದ ಲಕ್ಷಣವೆಂದರೆ ಆತನ ವಿಶಾಲವಾದ ಕಣ್ಣುಗಳು ಮತ್ತು ಚುರುಕು ನೋಟ. ಹಳದಿ ಕವಚ, ಕೆಂಪು ಪಟಕಾ ಮತ್ತು ಬಿಳಿ ಧೋತಿಯನ್ನು ಉಟ್ಟ ಸ್ವಾಮಿಯು ತಿಲಕ ಮತ್ತು ಕಿರೀಟವನ್ನು ಧರಿಸಿದ್ದಾನೆ. ಎಲೆಯ ಅಂಚಿನ ವಿನ್ಯಾಸ ಮತ್ತು ಹಿನ್ನೆಲೆಯ ಬಣ್ಣ ಈ ಕಟ್ಟಿನ ಇತರ ಎಲೆಗಳಂತೆ ಇವೆ. ಬಣ್ಣ ಮಾಸಿರುವುದರಿಂದಾಗಿ ಸ್ವಾಮಿಯ ದೇಹದ ಬಲಭಾಗದ ಮೇಲ್ಭಾಗ, ಆತನ ಕೈಗಳು ಮತ್ತು ಅಂಚಿನ ಅನೇಕ ಸ್ಥಳಗಳು ಮತ್ತು ಎಲೆಯ ಹಿನ್ನೆಲೆಗಳಿಗೆ ಧಕ್ಕೆಯುಂಟಾಗಿದೆ. ಆದರೂ ಸ್ವಾಮಿಯ ವೀರೋಚಿತ ರೂಪ ಕಳೆಗುಂದಿಲ್ಲ. ಪೂರ್ಣ ಉತ್ಸಾಹ ಮತ್ತು ಅಭಿವ್ಯಕ್ತಿಗಳು ಕಲಾವಿದನ ಅದ್ಭುತ ನೈಪುಣ್ಯಶಕ್ತಿಯನ್ನು ಪ್ರದರ್ಶಿಸುತ್ತವೆ.

ಮನ್ಮಥ ಕಟ್ಟಿನ ಐದನೆಯ ಎಲೆ

ತಿಳಿ ಹಸಿರು ಮುಖಛಾಯೆಯಿಂದ ಕೂಡಿದ ಸ್ವಾಮಿಯು ಪೂರ್ಣವಾಗಿ ಬಗ್ಗಿರುವ ಬಿಲ್ಲನ್ನು ಮತ್ತು ಐದು ಬಾಣಗಳನ್ನು ಹಿಡಿದುಕೊಂಡು ಅರ್ಧವೃತ್ತಾಕಾರದ ಪೀಠದ ಮೇಲೆ ಆಲೀಢಾಸನದಲ್ಲಿ ಕುಳಿತಿದ್ದಾನೆ. ಸಿಂಹರಾಶಿಯ ಚಿಹ್ನೆಯಾದ ಸಿಂಹವು ಪೀಠದ ಕೆಂಪುತಳ ಕೆಳಗೆ ಕಾಣಿಸಿಕೊಂಡಿದೆ. ಇದರ ಸಂಖ್ಯಾತ್ಮಕ ಮೌಲ್ಯ ಐದು. ಬಲಗಡೆಗೆ ಅಭಿಮುಖವಾಗಿರುವ ಮೀಸೆಯುಳ್ಳ ಸ್ವಾಮಿ ಮುಕ್ಕಾಲು ಭಾಗ ಪಾರ್ಶ್ವನೋಟದಲ್ಲಿ ಕಾಣಿಸಿಕೊಂಡಿದ್ದಾನೆ. ಹಳದಿ ಕವಚ ತೊಟ್ಟು, ಬಿಳಿ ಧೋತಿ ಮತ್ತು ಕೆಂಪು ಪಟಕಾವನ್ನು ಧರಿಸಿದ್ದಾನೆ. ಕಿರೀಟವು, ಕೈಕಡಗಗಳು, ತೋಳಬಂಧಿಗಳು ಮತ್ತು ತಿಲಕಗಳಿಂದ ಶೋಭಿತನಾಗಿದ್ದಾನೆ. ಸಿಂಹದ ತಲೆ ನೇರವಾಗಿ ಅಭಿಮುಖವಾಗಿದೆ ಮತ್ತು ದೇಹ ಪಾರ್ಶ್ವನೋಟದಿಂದ ಕೂಡಿದೆ. ತನ್ನ ಬಾಲವನ್ನೆತ್ತಿಕೊಂಡ ಸಿಂಹವು ಎಡಭಾಗಕ್ಕೆ ಚಲಿಸಿ ತನ್ನ ತಲೆಯನ್ನು ಮುಂದುಗಡೆ ತಿರುಗಿಸಿ ಏನನ್ನೋ ನೋಡುತ್ತಿರುವಂತಿದೆ. ಸ್ವಾಮಿಯ ದೇಹ, ಸಿಂಹದ ಮುಂಗಾಲು, ಅಂಚಿನ ಅನೇಕ ಭಾಗಗಳು ಮತ್ತು ಎಲೆಯ ಹಿನ್ನೆಲೆಯ ಬಣ್ಣ ಇವುಗಳೆಲ್ಲ ಬಣ್ಣಗಳು ಮಾಸಿರುವುದರಿಂದ ಹಾನಿಗೀಡಾಗಿವೆ. ಆದಾಗ್ಯೂ ಸ್ವಾಮಿಯ ಉದಾತ್ತವಾದ ಪ್ರತಿಮೆಯು ತನ್ನ ಚೈತನ್ಯದಿಂದ, ಆಕರ್ಷಕ ಭಂಗಿಯಿಂದ ಮತ್ತು ನೋಟದಿಂದ ಮನಸ್ಸನ್ನು ಸೆಳೆಯುತ್ತದೆ. ಎಲೆಯ ಕಂದುಬಣ್ಣದ ಹಿನ್ನೆಲೆ, ಈ ಕಟ್ಟಿನಲ್ಲಿ ಇತರ ಎಲೆಗಳಂತೆ ಕಪ್ಪು ಬಣ್ಣದಿಂದ ಕೂಡಿ ಹೂಗಳ ಅಂಚಿನಿಂದ ವರ್ತುಲಾಕಾರದ ಗೆರೆಯಿಂದ ಅಲಂಕೃತವಾಗಿದೆ.

ಮನ್ಮಥಕಟ್ಟಿನ ಏಳನೆಯ ಎಲೆ

ತಿಳಿ ಹಸಿರುಬಣ್ಣದಲ್ಲಿ ಚಿತ್ರಿತನಾಗಿರುವ ಮನ್ಮಥಸ್ವಾಮಿಯು ಅರ್ಧವೃತ್ತಾಕಾರದ ಪೀಠದಲ್ಲಿ ಆಲೀಢಾಸನದಲ್ಲಿ ಕುಳಿತಿದ್ದಾನೆ. ತುಲಾರಾಶಿಯ ಚಿಹ್ನೆಯಾದ ಹಾಗೂ ಸಂಖ್ಯಾತ್ಮಕ ಮೌಲ್ಯವಾದ ಎಲೆಯ ಏಳನೆಯ ಸಂಖ್ಯೆಯನ್ನು ಪ್ರತಿನಿಧಿಸುವ ತಕ್ಕಡಿಯನ್ನು ಪೀಠದ ಕೆಂಪು ತಳಭಾಗದಲ್ಲಿ ಚಿತ್ರಿಸಲಾಗಿದೆ. ಮಿಸೆಯಿಂದ ಕೂಡಿದ ಸ್ವಾಮಿಯು ಬಲಗಡೆಗೆ ಅಭಿಮುಖನಾಗಿದ್ದಾನೆ. ಕಣ್ಣುಗಳು ಪ್ರಧಾನವಾಗಿವೆ. ಸಂಪೂರ್ಣವಾಗಿ ಬಗ್ಗಿದ ಬಿಲ್ಲಿನಿಂದ ಬಾಣಗಳನ್ನು ಬಿಡುತ್ತಿದ್ದಾನೆ. ಚಿತ್ರದ ಅನೇಕ ಕಡೆಗಳಲ್ಲಿ ಪದರ ಪದರಗಳಾಗಿ ಬಣ್ಣಗಳು ಎದ್ದು ಬಂದಿರುವುದರಿಂದ ಹಾನಿಗೀಡಾಗಿದೆ. ಬಹುಮಟ್ಟಿಗೆ ಸ್ವಾಮಿಯ ಮುಖ, ಆತನ ದೇಹದ ಕೆಳಭಾಗ, ಮಧ್ಯದ ಮೇಲ್ಭಾಗ, ಎದೆ ಮತ್ತು ಕುತ್ತಿಗೆಗಳು ಹಾಳಾಗಿವೆ. ಉಳಿದವುಗಳು, ಕಟ್ಟಿನ ಇತರ ಚಿತ್ರಗಳಲ್ಲಿರುವಂತೆ, ಸ್ವಾಮಿಯನ್ನು ಮುಕ್ಕಾಲು ಭಾಗ ಪಾರ್ಶ್ವನೋಟದಲ್ಲಿ ಚಿತ್ರಿಸಿದೆ. ಆತನು ಸ್ಫೂರ್ತಿಯ ಚಿಲುಮೆಯಂತಿದ್ದಾನೆ. ಆತನು ಊದಾಬಣ್ಣದ ಧೋತಿಯನ್ನು, ಕೆಂಪು ಪಟಕಾವನ್ನು ಧರಿಸಿದ್ದಾನೆ. ಹಳದಿ ಕವಚವಿದೆ. ಕಿರೀಟ, ಕೈಕಡಗಗಳು ಮತ್ತು

ತೋಳಬಂಧಿಗಳಿಂದ ಅಲಂಕೃತನಾಗಿದ್ದಾನೆ. ಪ್ರತಿಮಾಶಾಸ್ತ್ರಗಳ ಪಠ್ಯಗಳಿಗನುಗುಣವಗಿ ಕಲಾವಿದನು ಇಕ್ಷುದಂಡದಿಂದ ಮಾಡಿದ ಬಿಲ್ಲು ಮತ್ತು ಐದು ಬಾಣಗಳನ್ನು ಚಿತ್ರಿಸಿದ್ದಾನೆ. ಎಲೆಯು ಕಂದುಬಣ್ಣದ ಹಿನ್ನೆಲೆ ಹೂವಿನ ಅಂಚಿನಿಂದ ಮತ್ತು ವೃತ್ತಾಕಾರದ ಗೆರೆಗಳಿಂದ ಅಲಂಕೃತವಾಗಿದೆ. ಅಂಚುಗಳ ಕೆಳಭಾಗದಲ್ಲಿ ಮತ್ತು ಬಲಭಾಗದಲ್ಲಿ ಎಲೆ ಹಾನಿಗೀಡಾಗಿದೆ.

ಮನ್ಮಥ ಕಟ್ಟಿನ ಎಂಟನೆಯ ಎಲೆ

ತೆಳು ಹಸಿರು ಮುಖವರ್ಣದ ಮನ್ಮಥ ಸ್ವಾಮಿಯು ಅರ್ಧವೃತ್ತಾಕಾರದ ಪೀಠದ ಮೇಲೆ ಆಲೀಢಾಸನದಲ್ಲಿ ಕುಳಿತಿರುವಂತೆ ತೋರುತ್ತದೆ. ಕಬ್ಬಿನ ಜಲ್ಲೆಯ ಕೋಲನ್ನು ಪೂರ್ಣವಾಗಿ ಬಗ್ಗಿಸಿ ಮಾಡಿರುವ ಬಿಲ್ಲನ್ನು ಹಿಡಿದಿದ್ದಾನೆ. ಎಲೆಯ ಸಂಖ್ಯಾತ್ಮಕ ಮೌಲ್ಯವನ್ನು ಸೂಚಿಸುವ ಎಂಟನೆಯ ಸಂಖ್ಯೆಯು ವೃಶ್ಚಿಕ ರಾಶಿಯದಾಗಿದ್ದು ಅದು (ಚೇಳು) ಪೀಠದ ಕೆಂಪನೆಯ ತಳಭಾಗದಲ್ಲಿ ಚಿತ್ರಿತಗೊಂಡಿದೆ. ಪ್ರೇಮದ ದೇವತೆಯಾದ ಮನ್ಮಥನು ಬಲಭಾಗಕ್ಕೆ ಅಭಿಮುಖನಾಗಿ, ಐದು ಕಾಮನೆಗಳ ಪ್ರತೀಕವಾದ ಐದು ಬಾಣಗಳನ್ನು ಹೊಡೆಯುತ್ತಿದ್ದಾನೆ. ಹೆಚ್ಚು ಕಡಿಮೆ ಚಚ್ಚೌಕ ಮುಖವುಳ್ಳ, ಮೀಸೆ ಬಿಟ್ಟಿರುವ ಸ್ವಾಮಿಯು ಬಿಳಿಯ ಧೋತಿಯನ್ನು, ಕೆಂಪು ಪಟಕಾವನ್ನು ಧರಿಸಿದ್ದಾನೆ. ಹಳದಿ ಕವಚ ತೊಟ್ಟಿದ್ದಾನೆ. ಕಿರೀಟ, ಕೈಕಡಗಗಳು, ತೋಳಬಂಧಿಗಳು ಮತ್ತು ತಿಲಕದಿಂದ ಅಲಂಕೃತನಾಗಿದ್ದಾನೆ. ಸ್ವಾಮಿಯ ಆಕೃತಿಯಲ್ಲಿ ಪ್ರಧಾನವಾಗಿ ಕಾಣುವ ಅಂಶಗಳೆಂದರೆ ಆತನ ವಿಶಾಲ ಕಣ್ಣುಗಳು, ಉತ್ಸಾಹಪೂರ್ಣ ಭಂಗಿ, ದೃಢ ಶರೀರ ಮತ್ತು ಉತ್ಸಾಹದ ಚೈತನ್ಯ. ಅನೇಕ ಕಡೆಗಳಲ್ಲಿ ಬಣ್ಣಗಳು ಮಾಸಿವೆ. ಅಂಚು, ಹಿನ್ನೆಲೆ, ಚೇಳಿನ ದೇಹದ ಮೇಲ್ಭಾಗ, ಸ್ವಾಮಿಯ ಬಲಗೈ ಮತ್ತು ಕಿರೀಟದ ಮೇಲ್ಭಾಗ ಮಸುಕಾಗಿವೆ. ಆದರೂ ಸ್ವಾಮಿಯ ವೀರೋಚಿತ ವಿಶಿಷ್ಟ ವ್ಯಕ್ತಿತ್ವಕ್ಕೆ ಕುಂದುಂಟಾಗಿಲ್ಲ. ಆಕೃತಿಗಳ ಸೌಂದರ್ಯವನ್ನು ಹೆಚ್ಚಿಸಲು ಕಲಾವಿದ ವೈರುಧ್ಯಗಳನ್ನು ಬಳಸಿದ್ದಾನೆ. ಪೀಠದ ಮೇಲೆ ಕುಳಿತು ಬಲಗಡೆಗೆ ಅಭಿಮುಖವಾಗಿ ಸ್ವಾಮಿಯು ಪೂರ್ಣ ಉತ್ಸಾಹದಿಂದ ಬಾಣಗಳನ್ನು ಬಿಡುತ್ತಿದ್ದಾನೆ. ಪೀಠದ ಕೆಳಗೆ ಚಿತ್ರಿತವಾದ ಚೇಳು ಎಡಗಡೆಗೆ ನಿಧಾನವಾಗಿ ಚಲಿಸುತ್ತಿದೆ. ಒಂದು ಕಡೆ ಚೈತನ್ಯದಾಯಕ ಭಂಗಿ, ಮತ್ತೊಂದೆಡೆ ಮಂದಗತಿ, ಒಂದು ಬಲಗಡೆಗೆ ಅಭಿಮುಖವಾಗಿದ್ದರೆ ಇನ್ನೊಂದು ಎಡಗಡೆಗೆ ಅಭಿಮುಖವಾಗಿದೆ. ಹೀಗೆ ವೈರುಧ್ಯವನ್ನು ಚಿತ್ರಿಸುವ ಮೂಲಕ ಆಕೃತಿಗಳನ್ನು ಕಲಾವಿದ ಆಕರ್ಷಕವಾಗಿ, ಮನೋಹರವಾಗಿ ಕಾಣುವಂತೆ ಮಾಡಿದ್ದಾನೆ. ಈ ಎಲೆಯ ಅಂಚಿನ ಅಲಂಕಾರ ಮತ್ತು ತಳಭಾಗದ ಬಣ್ಣಗಳು ಕಟ್ಟಿನ ಇತರ ಎಲೆಗಳಂತೆ ಇವೆ.

ಮನ್ಮಥ ಕಟ್ಟಿನ ಹತ್ತನೆಯ ಎಲೆ

ತೆಳು ಹಸಿರು ಮುಖಛಾಯೆಯ ಮನ್ಮಥ ಸ್ವಾಮಿಯು ಅರ್ಧವೃತ್ತಾಕಾರದ ಪೀಠದ ಮೇಲೆ ಆಲೀಢಾಸನದಲ್ಲಿ ಬಲಗಡೆಗೆ ಅಭಿಮುಖನಾಗಿ ಕುಳಿತಿದ್ದಾನೆ. ಎಲೆಯ ಸಂಖ್ಯಾತ್ಮಕ ಮೌಲ್ಯವನ್ನು ಸೂಚಿಸುವ ಹತ್ತನೆಯ ಸಂಖ್ಯೆಯ ಮಕರ ರಾಶಿಯ ಚಿಹ್ನೆ ತೆಳು ಹಸಿರುಬಣ್ಣದ ಮೊಸಳೆಯು ಕೆಳಗಡೆ ಚಿತ್ರಿತವಾಗಿದೆ. ಅದು ಎಡಗಡೆಗೆ ಚಲಿಸುತ್ತಿರುವಂತೆ ತೋರುತ್ತಿದೆ. ಮೊಸಳೆಯ ಪಾರ್ಶ್ವನೋಟದಲ್ಲಿ ಮತ್ತು ಸ್ವಾಮಿಯು ಮುಕ್ಕಾಲು ಭಾಗ ಪಾರ್ಶ್ವನೋಟದಲ್ಲಿ ಚಿತ್ರಿತರಾಗಿದ್ದಾರೆ. ಹೆಚ್ಚು ಕಡಿಮೆ ಚೌಕ ಮುಖದ, ಮೀಸೆ ಬಿಟ್ಟು ಸ್ವಾಮಿಯು ಹಳದಿ ಕವಚ, ಕೆಂಪು ಪಟಕಾ ಮತ್ತು ಧೋತಿಗಳನ್ನು ಧರಿಸಿದ್ದಾನೆ. ಕೈಕಡಗಗಳು, ಕಿರೀಟ, ಹಾರಗಳು, ಕರ್ಣಕುಂಡಲಗಳು ಮತ್ತು ತಿಲಕದಿಂದ ಅಲಂಕೃತನಾಗಿದ್ದಾನೆ. ದೇವತಾಶಾಸ್ತ್ರಗಳ ಪಠ್ಯಗಳಿಗನುಗುಣವಾಗಿ ಇಕ್ಷುದಂಡದ ಸಂಪೂರ್ಣವಾಗಿ

ಬಗ್ಗಿರುವ ಬಿಲ್ಲಿನಿಂದ ಐದು ಬಾಣಗಳನ್ನು ಬಿಡುತ್ತಿದ್ದಾನೆ. ಅನೇಕ ಕಡೆಗಳಲ್ಲಿ ಮೇಲ್ಮೈಯಲ್ಲಿ ಬಣ್ಣಗಳು ಮಾಸಿದ್ದರೂ ಮುಖ್ಯ ಚಿತ್ರಕ್ಕೆ ಏನೂ ಧಕ್ಕೆಯುಂಟಾಗಿಲ್ಲ. ಬಿಗಿಹಿಡಿದ ತುಟಿಗಳು, ವಿಶಾಲವಾದ ಹುಬ್ಬೇರಿಸಿದ ಕಣ್ಣುಗಳು, ಸದೃಢವಾದ ಮೈಕಟ್ಟು, ಕೈಗಳ ಮತ್ತು ಕಾಲುಗಳ ಕ್ರಿಯಾಶೀಲ ಭಂಗಿಗಳು ಸ್ವಾಮಿಯ ಕಾಂತಿಯನ್ನು ಹೊರಸೂಸುತ್ತಿದೆ. ತೇಲುತ್ತಿರುವ ಮೊಸಳೆಯ ಚಲನೆಯೂ ಶ್ಲಾಘನೀಯವಾದದ್ದೇ. ಪ್ರಾಣಿಯ ಎಡಗಡೆ ಮತ್ತು ಬಲಗಡೆಗೆ ಸ್ವಾಮಿಯು ಬಾಣಬಿಡುತ್ತಿರುವ ದೃಶ್ಯ ಚಿತ್ರದ ಸೌಂದರ್ಯವನ್ನು ಹೆಚ್ಚಿಸಿದೆಯಲ್ಲದೆ ಚಿತ್ರವನ್ನು ಹೆಚ್ಚು ಆಕರ್ಷಣೀಯವನ್ನಾಗಿ ಮಾಡಿದೆ. ಎಲೆಯ ಅಂಚಿನ ಅಲಂಕಾರ ಮತ್ತು ಒಳ ಬಣ್ಣಗಳು ಕಟ್ಟಿನ ಇತರ ಎಲೆಗಳಂತಿವೆ.

ಮನ್ಮಥ ಕಟ್ಟಿನ ಹನ್ನೊಂದನೆ ಎಲೆ

ಮನ್ಮಥ ಸ್ವಾಮಿಯು ತೆಳು ಹಸಿರುಮುಖವರ್ಣದಿಂದ ಕೂಡಿದ್ದು ಬಲಭಾಗಕ್ಕೆ ಮುಖ ಮಾಡಿದ್ದಾನೆ. ಇಕ್ಷುದಂಡದಿಂದ ಮಾಡಿದ ಪೂರ್ಣವಾಗಿ ಬಗ್ಗಿದ ಬಿಲ್ಲಿನಿಂದ ಬಾಣಗಳನ್ನು ಬಿಡುತ್ತಿರುವಂತೆ ಕಾಣುತ್ತದೆ. ಕುಂಭರಾಶಿಯ ಸಂಕೇತವಾದ ಹೂಜಿಯು ಅರ್ಧವೃತ್ತಾಕಾರದ ಪೀಠದ ಕೆಳಭಾಗದಲ್ಲಿದ್ದು ಇದರ ಸಂಖ್ಯೆ ಹನ್ನೊಂದು. ಸ್ವಾಮಿಯು ಆಲೀಢಾಸನದಲ್ಲಿ ಮುಕ್ಕಾಲು ಭಾಗ ಪಾರ್ಶ್ವನೋಟದಲ್ಲಿ ಕುಳಿತಿದ್ದಾನೆ. ಆತನಿಗೆ ಹಳದಿಬಣ್ಣದ ಕವಚವಿದೆ. ಕೆಂಪು ಪಟಗಾ ಮತ್ತು ಧೋತಿಗಳನ್ನು ಧರಿಸಿದ್ದಾನೆ. ಕಿರೀಟ, ಹಾರಗಳು, ತೋಳಬಂಧಿಗಳು ಮತ್ತು ಕೈಕಡಗಗಳನ್ನು ಹಾಕಿಕೊಂಡಿದ್ದಾನೆ. ಅನೇಕ ಕಡೆಗಳಲ್ಲಿ ಬಣ್ಣಗಳು ಮಸುಕಾಗಿರುವುದರಿಂದ ಎಲೆಯ ಹಿನ್ನೆಲೆಯ ಬಣ್ಣ, ಅಂಚಿನ ಹಲವು ಭಾಗಗಳು, ಹೂಜಿಯ ಮೇಲ್ಭಾಗ, ಬಲಗೈ ಮತ್ತು ಕಾಲುಗಳು ಹಾಗೂ ಸ್ವಾಮಿಯ ದೇಹದ ಇತರ ಭಾಗಗಳು ಹಾನಿಗೀಡಾಗಿವೆ. ಆದರೂ ಸ್ವಾಮಿಯ ಚೈತನ್ಯಪೂರ್ಣ ಮುಖ ಎದ್ದು ಕಾಣುತ್ತದೆ. ಮುಖದಲ್ಲಿನ ಮೀಸೆ, ವಿಶಾಲ ಕಣ್ಣುಗಳು, ಬಿಲ್ಲಿನಂತೆ ಬಾಗಿರುವ ಹುಬ್ಬುಗಳು, ವೈಷ್ಣವ ತಿಲಕ, ಚೂಪಾದ ಮೂಗು, ಕಿರಿದಾದ ತುಟಿಗಳು ನೋಡುಗನ ಮನಸ್ಸನ್ನು ಆಕರ್ಷಿಸುತ್ತವೆ. ಚಿತ್ರವನ್ನು ನೋಡಿದರೆ ಮೂರ್ತಿಯು ಇನ್ನೇನು ಮಾತನಾಡುವಂತೆಯೊ ಅಥವಾ ಬೇರೆ ಭಂಗಿಗೆ ಬದಲಾಯಿಸಲು ಸನ್ನದ್ಧನಾಗಿರುವಂತೆಯೊ ತೋರುತ್ತದೆ. ಕಟ್ಟಿನ ಇತರ ಮನ್ಮಥ ಆಕೃತಿಗಳಿಗೆ ಹೋಲಿಸಿದಾಗ ಈ ಎಲೆಯಲ್ಲಿ ಚಿತ್ರಿತನಾಗಿರುವ ಮನ್ಮಥನದು ವಿಶೇಷವಾದದ್ದು, ಕಲಾವಿದ ಸಮರ್ಥವಾಗಿ ಇದನ್ನು ಚಿತ್ರಿಸಿದ್ದಾನೆ. ಎಲೆಯ ಅಂಚಿನ ಅಲಂಕಾರ ಮತ್ತು ಒಳಬಣ್ಣಗಳು ಕಟ್ಟಿನ ಇತರ ಎಲೆಗಳಂತಿವೆ.

ರಾಣಿ

ಹಳದಿ ಬಣ್ಣದಲ್ಲಿ ಚಿತ್ರಿತವಾದ ದೇವಿಯನ್ನು ಆ ಕಡೆ ಮತ್ತು ಈ ಕಡೆ ಇಬ್ಬಿಬ್ಬರಂತೆ ಸೇವಕಿಯರು ಪಲ್ಲಕ್ಕಿಯಲ್ಲಿ ಕರೆದುಕೊಂಡು ಹೋಗುತ್ತಿದ್ದಾರೆ. ಆಕೆ ಅಭಿಮುಖವಾಗಿ ಕುಳಿತಿದ್ದಾಳೆ. ಬಣ್ಣಗಳು ಮಾಸಿರುವುದರಿಂದ ಮುಂಡ, ಕೈಗಳು ಮತ್ತು ದೇವಿಯ ವಿಶಿಷ್ಟ ಲಕ್ಷಣಗಳು ಹಾಳಾಗಿದ್ದು ದೇವಿಯನ್ನು ಗುರುತಿಸುವುದು ಕಷ್ಟವಾಗಿದೆ. ಹಾಗಾಗಿ ಯಾವುದೇ ಒಂದು ಕಟ್ಟಿಗೆ ಆಕೆಯನ್ನು ಸೇರಿಸಲಾಗುತ್ತಿಲ್ಲ. ದೇವಿಯು ಕೆಂಪು ಸೀರೆ ಧರಿಸಿ ಕಿರೀಟಧಾರಿಯಾಗಿದ್ದಾಳೆ. ದೇವತೆಯ ಮುಖದ ಬಣ್ಣ ಮಾಸಿದರೂ ಮೂಗು, ಹುಬ್ಬು, ಕಣ್ಣುಗಳು, ಕುಂಕುಮದ ಬೊಟ್ಟು ಆಕೆಯ ಸುಂದರ ಮುಖವನ್ನು ಸೂಚಿಸುತ್ತವೆ. ಎಡಗಡೆಗೆ ಮುಖ ಮಾಡಿರುವ ಸೇವಕರು ಪಾರ್ಶ್ವನೋಟದಲ್ಲಿ ಚಿತ್ರಿತರಾಗಿದ್ದಾರೆ. ಅವರು ಕೆಂಪು ಸೀರೆಯುಟ್ಟಿದ್ದಾರೆ, ಬರಿಗಾಲಿನಲ್ಲಿದ್ದಾರೆ. ಸೇವಕರ ಎದ್ದುಕಾಣುವ ಲಕ್ಷಣವೆಂದರೆ ಇಳಿಜಾರಾದ ಹಣೆಗಳು,

ಎದ್ದು ಕಾಣುವ ಮೂಗುಗಳು, ವಿಶಾಲವಾದ ಕಣ್ಣುಗಳು ಮತ್ತು ಅಭಿವ್ಯಕ್ತಿಗೊಳಿಸುವ ಮುಖಗಳು. ತೀರ ಬಲಗಡೆಯಲ್ಲಿರುವ ಸೇವಕಿ ಮುಗುಳ್ನಗೆಯಿಂದ ಕೂಡಿದ ಮುಖವುಳ್ಳವಳು ಮತ್ತು ಅವಳಿಗೆ ಜಡೆಯಿದೆ. ಬೂದು ಬಣ್ಣದ ಪಲ್ಲಕ್ಕಿ ವೃತ್ತಗಳಿಂದ ಮತ್ತು ಮುತ್ತುಗಳ ವಿನ್ಯಾಸಗಳಿಂದ ಕೂಡಿದೆ. ಎಲೆಯ ಒಳಬಣ್ಣ ಕಾವಿ ಬಣ್ಣದ್ದು ಮತ್ತು ಕಪ್ಪುಬಣ್ಣದಿಂದ ಕೂಡಿದ ಹೂವಿನ ಅಂಚಿನಿಂದ ಮತ್ತು ವೃತ್ತಾಕಾರದ ಗೆರೆಗಳಿಂದ ಕೂಡಿದೆ.[೩೬]

೨೦ ದೇವಿ ದಶಾವತಾರ ಛದ್

೧೯ನೆಯ ಶತಮಾನದ ಮೈಸೂರಿನಲ್ಲಿ ಗಂಜೀಫಾ ಚಿತ್ರಗಳು ಕಾಗದ ಪದರುಗಳಿಂದ ವೃತ್ತಾಕಾರದಲ್ಲಿ ಮೆರುಗಿನಿಂದ ಕೂಡಿದೆ. ಪ್ರಸ್ತುತ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಈ ಚಿತ್ರಗಳು ಸಂಗ್ರಹಗೊಂಡಿವೆ. ಈ ಆರು ಎಲೆಗಳು ಎರಡು ವಿಬಿನ್ನ ದೇವಿದಶಾವತಾರ ಕಟ್ಟುಗಳಿಗೆ ಸಂಬಂಧಿಸಿವೆ. ಹತ್ತು ಕಟ್ಟುಗಳ ದೇವಿದಶಾವತಾರ ಸಮಗ್ರ ಕಟ್ಟಿನಲ್ಲಿ ಕೇವಲ ಮೂರು ಕಟ್ಟುಗಳು ಚಾಮುಂಡಾ, ಬ್ರಹ್ಮಾಣಿ ಮತ್ತು ಮಾಹೇಶ್ವರಿ ಪ್ರತಿನಿಧಿತವಾಗಿವೆ. ಕಟ್ಟುಗಳು ಸಂಖ್ಯೆಯಿಂದ ಇಲ್ಲವೆ ದರ್ಬಾರು ಎಲೆಗಳಿಂದ ಪ್ರತಿನಿಧಿಸಲ್ಪಟ್ಟಿದೆ. ಮೂರು ಕಟ್ಟುಗಳ ಪೈಕಿ ಎರಡು, ಚಾಮುಂಡಾ ಮತ್ತು ಬ್ರಹ್ಮಾಣಿಗಳು ಒಂದೇ ದರ್ಬಾರು ಎಲೆಯಿಂದ ಪ್ರತಿನಿಧಿಸಲ್ಪಟ್ಟಿದೆ. ಮಾಹೇಶ್ವರಿ ಕಟ್ಟಿನಲ್ಲಿ ಸಂಖ್ಯೆಗಳ ಮತ್ತು ದರ್ಬಾರ್ ಎಲೆಗಳಿವೆ. ದರ್ಬಾರು ಎಲೆಗಳ ಪೈಕಿ ಯುವರಾಜ್ಞಿ, ಮಂತ್ರಿಣಿ, ದಂಡಿನಿ ಮತ್ತು ಪದಾತಿಗಳು ಇಲ್ಲವೇ ಇಲ್ಲ. ಮೂರು ಕಟ್ಟುಗಳು ಚಾಮುಂಡಾ, ಬ್ರಹ್ಮಾಣಿ ಮತ್ತು ಮಾಹೇಶ್ವರಿಗಳು ಮಹಾರಾಜ್ಞಿ ಎಲೆಯನ್ನು ಪ್ರತಿನಿಧಿಸುತ್ತದೆ. ದೇವಿಯು ಸಿಂಹಾಸನದ ಮೇಲೆ ಕುಳಿತಂತೆ ತೋರುತ್ತದೆ. ಮಾಹೇಶ್ವರಿ ಕಟ್ಟು ಮಾತ್ರ ಧ್ವಜದ ಎಲೆಗೆ ಉದಾಹರಣೆಯಾಗಿದೆ. ಸಂಖ್ಯಾತ್ಮಕ ಎಲೆಗಳು ಒಂದರಿಂದ ಹನ್ನೆರಡರವರೆಗೆ ರಾಶಿಚಿಹ್ನೆಗಳನ್ನು ಹೊಂದಿವೆ. ಇದು ಮಾಹೇಶ್ವರಿ ಕಟ್ಟಿನ ಎಂಟು ಮತ್ತು ಹತ್ತು ಸಂಖ್ಯೆಗಳಿಂದ ಕ್ರುತವಾಗುತ್ತದೆ.

ಈಗಿರುವ ಉದಾಹರಣೆಗಳನ್ನು ಗಮನಿಸಿದರೆ ಕಟ್ಟಿನ ಸ್ವರೂಪವನ್ನು ಪುನರ್‌ರಚಿಸಬಹುದು. ಪ್ರತಿಯೊಂದು ಕಟ್ಟಿನಲ್ಲಿರುವ ಎಲೆಗಳ ಸಂಖ್ಯೆ ಹದಿನೆಂಟು. ಅದರಲ್ಲಿ ಆರು ದರ್ಬಾರ್ ಎಲೆಗಳಿವೆ (ಮಹಾರಾಜ್ಞೀ, ಯುವರಾಜ್ಞಿ, ಮಂತ್ರಿಣೀ, ದಂಡಿನೀ, ಧ್ವಜ ಮತ್ತು ಪದಾತಿ) ಹಾಗೂ ಹನ್ನೆರಡು ಸಂಖ್ಯಾತ್ಮಕ ಎಲೆಗಳಿವೆ. ಪ್ರತಿಯೊಂದು ಕಟ್ಟಿನ ಮಹಾರಾಜ್ಞಿಯನ್ನು ಸಿಂಹಾಸನದ ಮೇಲೆ ಕುಳಿತಂತೆ ಚಿತ್ರಿಸಲಾಗಿದೆ. ಕಟ್ಟಿನ ಅಧಿದೇವತೆಯ ಮೆಟ್ಟಲುಳ್ಳ ಪೀಠದ ಮೇಲೆ ಧ್ವಜವನ್ನು ಸೂಚಿಸುವ ಧ್ವಜ ಎಲೆಯನ್ನು ಚಿತ್ರಿಸಿದೆ. ಯುವರಾಜ್ಞೀ, ಮಂತ್ರಿಣೀ, ದಂಡಿನೀ, ಮತ್ತು ಪದಾತಿಗಳನ್ನು ಚಿತ್ರಿಸುವ ಎಲೆಗಳು ಒಟ್ಟಾರೆ ಕಾಣೆಯಾಗಿವೆ. ಸಂಖ್ಯೆಯನ್ನು ಸೂಚಿಸುವ ಎಲೆಗಳ ಬಗ್ಗೆ ಹೇಳುವುದಾದರೆ ಕಟ್ಟಿನ ಅಧಿದೇವತೆ ಪೀಠದ ಮೇಲೆ ಕುಳಿತಿದ್ದಾಳೆ. ಅರ್ಧವೃತ್ತಾಕಾರದ ಪೀಠಗಳ ಕೆಳಗೆ ರಾಶಿ ಚಿಹ್ನೆಗಳ ಮೂಲಕ ಸಂಖ್ಯೆಯ ಮೌಲ್ಯಗಳನ್ನು ತೋರಿಸುವ ಕಟ್ಟುಗಳನ್ನು ತೋರಿಸಲಾಗಿದೆ.

ಕಟ್ಟಿನಲ್ಲಿ ಪ್ರತಿನಿಧಿತವಾಗಿರುವ ದೇವತೆಗಳು ಕಟ್ಟು ನಿಟ್ಟಾಗಿ ದೇವತಾಶಾಸ್ತ್ರಗಳಿಗನುಗುಣವಾಗಿವೆ. ಅವು ಚತುರ್ಭುಜಗಳಿಂದ ಇಲ್ಲವೆ ಎರಡು ಕೈಗಳಿಂದ ಕೂಡಿವೆ. ಸಂಖ್ಯಾತ್ಮಕ ಎಲೆಗಳಲ್ಲೂ ದೇವಿ ಮಾಹೇಶ್ವರಿ ಚತುರ್ಭುಜಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಚಾಮುಂಡಾ ಮತ್ತು ಬ್ರಹ್ಮಾಣಿಯರು ಎರಡು ಕೈಗಳಲ್ಲಿ ಚಿತ್ರಿತರಾಗಿದ್ದಾರೆ. ಹೆಚ್ಚು ಪದೋನ್ನತಿಯಿಂದ ಕೂಡಿದ ಮಹಾರಾಜ್ಞಿಯೂ ಎರಡೂ ಕೈಗಳನ್ನು

೩೬. Dr. Sarala Chopra., Ganjifa, PP.213-215

ಹೊಂದಿದ್ದಾಳೆ. ಇದೊಂದು ಮಹತ್ವಪೂರ್ಣ ಸಂಗತಿಯಾಗಿದ್ದು ರಚನಾ ವೈವಿಧ್ಯಗಳನ್ನು ತೋರಿಸುತ್ತದೆ. ಈ ಹಿಂದೆ ಸೂಚಿಸಿದಂತೆ ಎರಡು ಬೇರೆ ಬೇರೆ ಕಟ್ಟುಗಳ ಎಲೆಗಳು ಮಿಶ್ರಣಗೊಂಡಿರುವುದರಿಂದ ಬ್ರಹ್ಮಾಣಿ ಮತ್ತು ಚಾಮುಂಡಾ ಎಲೆಗಳು ಮಾಹೇಶ್ವರಿ ಎಲೆಗಳಿಗಿಂತ ಬೇರೆಯಾದ ದೇವಿ ದಶಾವತಾರ ಕಟ್ಟಿಗೆ ಸಂಬಂಧಿಸಿವೆ. ಕಲಾವಿದನು ದೇವಿಯ ಶಾಂತ ಮತ್ತು ಉಗ್ರ ರೂಪಗಳನ್ನು ಸಮರ್ಥವಾಗಿ ಚಿತ್ರಿಸಿದ್ದಾನೆ. ಚಾಮುಂಡಾದೇವಿ ಮುಖದಲ್ಲಿ ಉಗ್ರಸ್ವರೂಪ ಹೊಂದಿದ್ದರೂ ಮಹಾರಾಜ್ಞೀ ಎಲೆಯ ಮಾಹೇಶ್ವರಿಯು ಶಾಂತ ಮತ್ತು ಸೌಮ್ಯಭಾವಗಳನ್ನು ಹೊಂದಿರುವುದನ್ನು ಎಲೆಯು ತೋರಿಸುತ್ತದೆ. ಮಹಾರಾಜ್ಞೀ ಎಲೆಗಳಲ್ಲಿ ಸಾಮಾನ್ಯವಾಗಿ ದೇವಿಯರ ಕಾಲುಗಳು ಸೀರೆಗಳಲ್ಲಿ ಮುಚ್ಚಿರುವುದನ್ನು ನೋಡಬಹುದು. ದೇವಿಯರ ಕೈಗಳನ್ನು ಒರಟಾಗಿ ಚಿತ್ರಿಸಲಾಗಿದೆ.

ದೇವಿಯರು ಸಾಂಪ್ರದಾಯಿಕ ಹಿಂದೂ ಉಡುಪುಗಳಲ್ಲಿ ಶೋಭಿಸಿದ್ದಾರೆ. ಅವರು ಸೀರೆ ಮತ್ತು ದುಪ್ಪಟ್ಟಾಗಳನ್ನು ಧರಿಸಿದ್ದಾರೆ. ದುಪ್ಪಟ್ಟಾಗಳನ್ನು ವಿಶಿಷ್ಟ ಶೈಲಿಯಲ್ಲಿ ಹೊದ್ದಿರುವುದರಿಂದ ಅವುಗಳ ಅಂಚುಗಳು ತೊನೆದಾಡುತ್ತಿವೆ. ಬಳೆಗಳು, ತೋಳಬಂಧಿಗಳು, ಹಾರಗಳು, ಕಿರೀಟ ಮತ್ತು ತಿಲಕಗಳಿಂದ ಶೋಭಿತರಾಗಿದ್ದಾರೆ. ಹಣೆಯ ಮೇಲೆ ಗಂಧವಿದೆ.

ದೇವಿಯನ್ನು ಅಭಿಮುಖವಾಗಿ ಚಿತ್ರಿಸಲಾಗಿದೆ. ದೇವಿಯರನ್ನು ಈ ಭಂಗಿಯಲ್ಲಿ ಚಿತ್ರಿಸಬೇಕೆಂಬ ಕಲಾವಿದನ ಆಸಕ್ತಿಯು ಅವಾಸ್ತವಿಕತೆಗೆ ಮತ್ತು ದೋಷಪೂರ್ಣ ಚಿತ್ರಣಗಳಿಗೆ ಎಡೆಮಾಡಿಕೊಟ್ಟಿದೆ. ಇದನ್ನು ಮಹಾರಾಜ್ಞೀ ಎಲೆಗಳಿಗೆ ಅನ್ವಯಿಸಬಹುದು. ಪಾರ್ಶ್ವನೋಟದಲ್ಲಿ ಚಿತ್ರಿತವಾಗಿರುವ ದೇವಿಯರು ಸಿಂಹಾಸನದ ಮೇಲೆ ಕುಳಿತಿದ್ದಾರೆ ಮತ್ತು ಅವರ ದೇಹದ ಕೆಳಭಾಗಗಳು ಪಾರ್ಶ್ವನೋಟದಿಂದ ಕೂಡಿವೆ. ಆದರೆ ಮೇಲ್ಭಾಗ ಅಭಿಮುಖವಾಗಿವೆ. ಈ ಹಿಂದೆ ಗಮನಿಸದಂತೆ ದೇವಿಯು ಸಿಂಹಾಸನದ ಮೇಲೆ ಅಭಿಮುಖವಾಗಿ ಹಾಗು ಪಾರ್ಶ್ವನೋಟದಲ್ಲಿ ಚಿತ್ರಿತವಾಗಿರುವುದು ಅಷ್ಟೊಂದು ಹಿತಕರವಾದ ಭಂಗಿಯೇನಲ್ಲ.

ಕಲಾವಿದನು ರಾಶಿಚಿಹ್ನೆಗಳನ್ನು ಮತ್ತು ಮುಖ್ಯ ಆಕೃತಿಗಳನ್ನು ಸಮಾನವಾದ ಆಸಕ್ತಿಯಿಂದ ಮತ್ತು ಏಕತೆಯಿಂದ ಚಿತ್ರಿಸಿದ್ದಾನೆ. ವಿಷಪೂರಿತವಾದ ಚೇಳಿನ ಸಹಜ ಚಿತ್ರಣ, ಮಾಹೇಶ್ವರಿ ಕಟ್ಟಿನ ಕ್ರಿಯಾಶೀಲವಾದ ಮತ್ತು ಮೊಸಳೆಯ ಜಾಗೃತನೋಟಗಳು ಜಂತುಗಳ ಮತ್ತು ಪ್ರಾಣಿಗಳ ಆಂತರಿಕ ಸ್ವಭಾವವನ್ನು ಕಲಾವಿದ ಸಮರ್ಥವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಈ ಪ್ರಾಣಿಗಳನ್ನು ಬಹಳ ಸುಂದರವಾಗಿ ಚಿತ್ರಿಸಲಾಗಿದೆ.

ಎಲೆಗಳ ಹಿಂಬದಿಯನ್ನು ಸಾದಾ ಕಿತ್ತಳೆ ಬಣ್ಣದಿಂದ ಚಿತ್ರಿಸಿದೆ. ಹೂಗಳ ಅಂಚಿನಿಂದ ಮತ್ತು ವೃತ್ತಾಕಾರದ ಗೆರೆಗಳಿಂದ ಅಲಂಕರಿಸಿದೆ. ಮಾಹೇಶ್ವರಿ ಕಟ್ಟಿನ ಎಂಟು ಮತ್ತು ಹತ್ತನೆಯ ಸಂಖ್ಯೆಯ ಎಲೆಗಳ ಅಂಚನ್ನು ಕಟ್ಟಿನ ಇತರ ಎಲೆಗಳಿಗಿಂತ ವಿಭಿನ್ನವಾಗಿ ಕೆಂಪುಬಣ್ಣದಿಂದ ಚಿತ್ರಿಸಿದೆ. ಇತರ ಎಲೆಗಳನ್ನು ಹೂವಿನ ಬೇರೆ ವಿನ್ಯಾಸದಿಂದ ಕಪ್ಪುಬಣ್ಣದಲ್ಲಿ ಚಿತ್ರಿಸಿದೆ. ಬೇರೆ ಬೇರೆ ಕಟ್ಟುಗಳ ಎಲೆಗಳು ಹೀಗೆ ಮಿಶ್ರಣಗೊಂಡಿರುವುದರಿಂದ ಅಂಚುಗಳಲ್ಲಿ ಮೇಲಿನಂತೆ ವ್ಯತ್ಯಾಸಗಳನ್ನು ನೋಡುತ್ತೇವೆ.

ಎಲೆಗಳನ್ನು ಬಹುವಾಗಿ ಉಪಯೋಗಿಸಿರುವುದರಿಂದ ಅವುಗಳ ಬಣ್ಣಗಳು ಮಸುಕಾಗಿವೆ. ತಾಂತ್ರಿಕ ದೃಷ್ಟಿಯಿಂದ ಹೇಳುವುದಾದರೆ ಈ ಎಲೆಗಳನ್ನು ಎರಡು ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಬಹುದು. ಮಾಹೇಶ್ವರಿ ಎಲೆಗಳ ಮೇಲ್ಮೈಯಲ್ಲಿ ಗೀರುಗಳಿವೆ. ಎಲೆಗಳ ಮೇಲ್ಪದರಗಳಲ್ಲಿ ಹೊಪ್ಪಳಿಕೆಗಳಾಗಿದ್ದು ಚಿತ್ರಗಳಿಗೆ ಬಹುವಾಗಿ ಧಕ್ಕೆಯುಂಟಾಗಿದೆ. ಆದರೆ ಬ್ರಹ್ಮಾಣಿ ಮತ್ತು ಚಾಮುಂಡಾ ಎಲೆಗಳ ತಾಂತ್ರಿಕತೆ

ವಿಶಿಷ್ಟವಾಗಿವೆ. ಈ ಎಲೆಗಳ ಮೇಲ್ಮೈ ಈಗಲೂ ನುಣುಪಾಗಿವೆ ಮತ್ತು ಸದೃಢವಾಗಿವೆ. ಈ ಎಲೆಗಳಲ್ಲಿ ಗೀರುಗಳಾಗಲಿ ಮತ್ತು ಹೊಪ್ಪಳುಗಳಾಗಲೀ ಇಲ್ಲ.

ಮಹಾರಾಜ್ಞೀ ಚಾಮುಂಡಾ

ಆಕಾಶವರ್ಣದ ಮುಖಛಾಯೆಯುಳ್ಳ ದೇವಿಯು ತನ್ನ ಎಡಗೈಯಲ್ಲಿ ಹಿಡಿಯುಳ್ಳ ಗುರಾಣಿಯನ್ನು ಮತ್ತು ಬಲಗೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ಯೂರೋಪಿಯನ್ ಶೈಲಿಯ ಕುರ್ಚಿಯಲ್ಲಿ ಕುಳಿತಂತೆ ಕಾಣುತ್ತಾಳೆ. ಸ್ವಲ್ಪ ಬಾಯಿತೆರೆದ, ಹಲ್ಲುಗಳು ಕಾಣಿಸುತ್ತಿರುವ ದೇವಿಯು ತನ್ನ ಮುಖದಲ್ಲಿ ಭಯಂಕರ ಭಾವವನ್ನು ಅಭಿವ್ಯಕ್ತಿಗೊಳಿಸುತ್ತಿದ್ದಾಳೆ. ಮೂರು ಬಣ್ಣಗಳ (ಕೆಂಪು, ಹಸಿರು ಮತ್ತು ಹಳದಿ) ಸೀರೆಯನ್ನುಟ್ಟು ಜೋಲಿ (ಕುಪ್ಪುಸ) ಧರಿಸಿದ್ದಾಳೆ. ಬಳೆಗಳು, ಹಾರಗಳು ಮತ್ತು ಕರ್ಣಕುಂಡಲಗಳನ್ನು ಹಾಕಿಕೊಂಡಿದ್ದಾಳೆ. ಆಕೆಯ ಕೂದಲು ಸುತ್ತುಪಟ್ಟಿಯಿಂದ ಗಂಟುಹಾಕಲ್ಪಟ್ಟಿದೆ. ಪಾರ್ಶ್ವನೋಟದಲ್ಲಿ ಚಿತ್ರಿತವಾಗಿರುವ ಹಳದಿ ಮತ್ತು ಬೂದು ಬಣ್ಣದ ಸಿಂಹಾಸನದ ಮೇಲೆ ಕುಳಿತಿದ್ದಾಳೆ. ಆಕೆಯ ದೇಹದ ಮೇಲುಭಾಗ ನೇರ ನೋಟದಲ್ಲಿ ಮತ್ತು ಕೆಳಭಾಗ ಪಾರ್ಶ್ವನೋಟದಲ್ಲಿದೆ. ದೇವಿಯ ಭಂಗಿಯನ್ನು ನೋಡಿದಾಗ ಆಕೆಯ ಮುಖ ಭಕ್ತರ ಕಡೆ ತಿರುಗಿದೆಯೆಂದು ಊಹಿಸಬಹುದು. ಆದರೆ ಆಕೆಯ ವಪೆಭಾಗ ತಿರುಗಿರುವುದರ ಬಗ್ಗೆ ಯಾವ ಸೂಚನೆಯನ್ನೂ ಕೊಡದೆಯಿರುವುದರಿಂದ ದೇವಿಯ ನೇರನೋಟ ಒಂದು ರೀತಿಯ ದೋಷಪೂರಿತ ಹಾಗೂ ಅಸಹಜ ನೋಟವನ್ನು ನೀಡುವುದಲ್ಲದೆ ಹಳದಿ, ಕಾವಿ, ಬಣ್ಣದ ಹಿನ್ನೆಲೆಯ ಎಲೆಯು ಹೂವಿನ ವಿನ್ಯಾಸ ಮತ್ತು ವರ್ತುಲಾಕಾರದ ಗೆರೆಗಳಿಂದ ಅಲಂಕೃತವಾಗಿದೆ. ಹಲವು ಸ್ಥಳಗಳಲ್ಲಿ ಬಣ್ಣಗಳು ಮಸುಕಾಗಿದ್ದು ಆಕೃತಿಯ ಸೌಂದರ್ಯಕ್ಕೆ ಧಕ್ಕೆಯನ್ನು ತಂದಿದೆ.

ಮಹಾರಾಜ್ಞೀ ಬ್ರಹ್ಮಾಣಿ

ಕಿತ್ತಳೆ ಊದಾಬಣ್ಣದ ಛಾಯೆಯ ನಾಲ್ಕು ತಲೆಗಳ ದೇವತೆ ಬ್ರಹ್ಮಾಣಿಯು ಕೆಂಪು ಸಿಂಹಾಸನದ ಮೇಲೆ ಕುಳಿತಿದ್ದಾಳೆ. ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾಳೆ. ಕೆಂಪು ಸೀರೆಯನ್ನುಟ್ಟಿದ್ದಾಳೆ, ಕಿರೀಟಗಳನ್ನು ಧರಿಸಿದ್ದಾಳೆ. ಹಾರಗಳನ್ನು ಮತ್ತು ಬಳೆಗಳನ್ನು ಹಾಕಿಕೊಂಡಿದ್ದಾಳೆ. ದೇಹದ ಮೇಲ್ಭಾಗ ಮತ್ತು ಮಧ್ಯದ ತಲೆಯನ್ನು ನೇರವಾಗಿ ಚಿತ್ರಿಸಿದ್ದಾರೆ. ದೇಹದ ಕೆಳಬಾಗ ಮತ್ತು ಹೆಚ್ಚಿನ ತಲೆಗಳನ್ನು ಪಾರ್ಶ್ವನೋಟದಲ್ಲಿ ಚಿತ್ರಿಸಲಾಗಿದೆ. ದೇವಿಯ ದೇಹದ ಬಹುಭಾಗ, ಅನೇಕ ಕಡೆಗಳಲ್ಲಿನ ಅಂಚು, ಎಲೆಯ ಹಿನ್ನೆಲೆಗಳು ಬಣ್ಣಗಳು ಮಾಸಿರುವುದರಿಂದ ಹಾನಿಗೀಡಾಗಿವೆ. ಉಳಿಕೆ ಭಾಗಗಳನ್ನು ಪರಿಶೀಲಿಸಿದಾಗ ದೇವಿಯ ತಲೆಯು ಗುಂಡುಮುಖ, ವಿಶಾಲ ಕಣ್ಣುಗಳು ಮತ್ತು ಚೂಪಾದ ಮೂಗಿನಿಂದ ಕೂಡಿರುವಂತೆ ಕಾಣಿಸುತ್ತದೆ. ಎಲೆಯ ಹಿನ್ನೆಲೆಯ ಬಣ್ಣ ಕಾವಿಬಣ್ಣವಾಗಿದ್ದು ಅದು ಕಪ್ಪು ಹೂಗಳ ಅಂಚಿನಿಂದ ಮತ್ತು ಎರಡು ಕೆಂಪು ವೃತ್ತಾಕಾರದ ಗೆರೆಗಳಿಂದ ಕೂಡಿದೆ. ಸಿಂಹಾಸನದ ಮೇಲೆ ಕುಳಿತಿರುವ ದೇವಿಯ ನೇರ ಭಂಗಿಯು ಹಿಂದಿನ ಎಲೆಯಂತೆ ಅಸಹಜವಾದ ಮತ್ತು ದೋಷಪೂರಿತ ಚಿತ್ರವೆಂದು ಹೇಳುವುದರ ಜೊತೆಗೆ ಈ ಚಿತ್ರ ದುರ್ಬಲ ರಚನೆಯಾಗಿ ಮಾರ್ಪಟ್ಟಿದೆ.

ಮಹಾರಾಜ್ಞೀ ಮಾಹೇಶ್ವರೀ

ಆಕಾಶನೀಲಿಯ ಕಾಂತಿಯ ದೇವತೆಗೆ ನಾಲ್ಕು ಭುಜಗಳಿದ್ದು ಹಳದಿ ಸಿಂಹಾಸನದ ಮೇಲೆ ಕುಳಿತಿದ್ದಾಳೆ. ದೇಹದ ಕೆಳಭಾಗ ಪಾರ್ಶ್ವನೋಟದಲ್ಲಿ ಚಿತ್ರಿತವಾಗಿದ್ದರೆ ಮೇಲ್ಭಾಗ ನೇರನೋಟದಲ್ಲಿ

ಚಿತ್ರಿತವಾಗಿದೆ. ತನ್ನ ಮೇಲ್ಭಾಗದ ಬಲಗೈಯಲ್ಲಿ ಚಕ್ರವನ್ನೂ, ಶಂಖವನ್ನೂ ಹಿಡಿದುಕೊಂಡಿದ್ದು, ಕೆಳಭಾಗದ ಎಡಗೈಯಲ್ಲಿ ಗುರಾಣಿಯನ್ನು ಮತ್ತು ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡಿದ್ದಾಳೆ. ಕೆಂಪು ಸೀರೆ ಮತ್ತು ಪಟಕಾವನ್ನು ಧರಿಸಿದ್ದಾಳೆ. ಕೆಂಪುಜ್ವಾಲೆಯ ಪ್ರಭಾವಳಿಯಿಂದ ಕೂಡಿದ ಕಿರೀಟವನ್ನು ಹಾಕಿಕೊಂಡಿದ್ದಾಳೆ. ಹಾರಗಳನ್ನು ಮತ್ತು ಬಳೆಗಳನ್ನು ಧರಿಸಿದ್ದಾಳೆ. ಹಣೆಯ ಮೇಲೆ ಗಂಧವಿದೆ. ಕಿರೀಟದ ಹತ್ತಿರ ಅರ್ಧ ಚಂದ್ರನಿದ್ದಾನೆ. ಮೀನಲೋಚನೆಯಾದ ದೇವಿ ಪ್ರಸನ್ನವದನದಿಂದ ಕೂಡಿದ್ದಾಳೆ. ಅವಳ ಒಂದು ಕಾಲು ಸೀರೆಯಲ್ಲಿ ಮುಚ್ಚಿ ಹೋಗಿದೆ. ಕೈಗಳನ್ನು ಒರಟಾಗಿ ಚಿತ್ರಿಸಿದೆ. ಹಿನ್ನೆಲೆ, ಅಂಚು, ಸಿಂಹಾಸನ ಮತ್ತು ದೇವಿಯ ಆಕೃತಿಗಳು ಹೊಪ್ಪುಳವೆದ್ದಿರುವುದರಿಂದ ಹಾನಿಗೀಡಾಗಿವೆ. ಎಲೆಯ ಹಿನ್ನೆಲೆಯ ಬಣ್ಣ ಸುಟ್ಟ ಕಂದುಬಣ್ಣವಾಗಿದೆ. ಅದರ ಅಂಚು ಹೂವಿನ ಕಪ್ಪುಬಣ್ಣದಿಂದ ಕೂಡಿದೆ. ಹಿಂದಿನ ಮಹಾರಾಜ್ಞೀ ಎಲೆಗಳಂತೆ, ಸಿಂಹಾಸನದ ಮೇಲೆ ಕುಳಿತ ದೇವಿಯ ನೇರನೋಟವನ್ನು ಪಾರ್ಶ್ವನೋಟವಾಗಿ ಚಿತ್ರಿಸಿರುವುದರಿಂದ ಅಸಹಜವಾಗಿದೆ ಹಾಗೂ ಅನುಭವವಿಲ್ಲದ ಕಲಾವಿದನಿಂದ ರಚಿತವಾದ ಚಿತ್ರದಂತೆ ಕಾಣಿಸುತ್ತದೆ.

ಮಾಹೇಶ್ವರೀ ಕಟ್ಟಿನ ಧ್ವಜ

ನೀಲಿ ವರ್ಣದ ನಾಲ್ಕು ಕೈಗಳಿಂದ ಕೂಡಿ ಮೆಟ್ಟಲುಗಳುಳ್ಳ ಪೀಠದ ಮೇಲೆ ಪದ್ಮಾಸನ ಹಾಕಿಕೊಂಡು ನೇರಮುಖವಾಗಿ ದೇವಿ ಕುಳಿತಿದ್ದಾಳೆ. ಮೇಲುಗಡೆ ಎರಡು ಕುಚ್ಚಗಳುಳ್ಳ ಕೆಂಪು ಧ್ವಜ, ಮಧ್ಯದಲ್ಲಿ ಹಳದಿ ಅಂಚಿನಿಂದ ಕೂಡಿದ ಹಳದಿವೃತ್ತ ಕಾಣಿಸುತ್ತದೆ. ದೇವಿಯು ಮೇಲುಗಡೆ ಬಲಗೈಯಲ್ಲಿ ತ್ರಿಶೂಲವನ್ನು ಎಡಗೈಯಲ್ಲಿ ಶಂಖವನ್ನು ಹಿಡಿದಿದ್ದಾಳೆ. ಅವಳ ಕೆಳಗಡೆ ಬಲಗೈಯಲ್ಲಿ ಅಭಯ ಮುದ್ರೆಯಿದ್ದರೆ ಎಡಗೈಯಲ್ಲಿ ವರದಮುದ್ರೆಯಿದೆ. ತ್ರಿಶೂಲದ ಮೇಲ್ಭಾಗದಲ್ಲಿ ಶಂಖದ ಚಿಹ್ನೆಯಿದೆ. ದೇವಿಯು ಕೆಂಪು ಸೀರೆ ಮತ್ತು ಚೋಲಿಯನ್ನು ಧರಿಸಿದ್ದಾಳೆ. ನಡುವಿಗೆ ಡಾಬನ್ನು ಧರಿಸಿರುವಂತೆ ಕಾಣಿಸುತ್ತದೆ. ಬಳೆಗಳು, ಕಿರೀಟ ಮತ್ತು ಗಂಧದಿಂದ ಅಲಂಕೃತಳಾಗಿದ್ದಾಳೆ. ಕಿರೀಟದ ಹಿಂದೆ ಕೆಂಪನೆಯ ಪ್ರಭಾವಳಿಯಿದೆ. ಕಿರೀಟದ ಬಳಿ ಅರ್ಧಚಂದ್ರಾಕೃತಿಯಿದೆ. ದೇವಿಯ ದೇಹ ಮತ್ತು ಮುಖಗಳೆರಡು ಒಂದು ರೀತಿ ಪುರುಷನಂತೆ ತೋರುತ್ತವೆ. ಬಹುಶಃ ಉಗ್ರಸ್ವರೂಪ ತೋರಿಸುತ್ತಿರಬಹುದು. ದೇವಿಯ ಕೈಗಳನ್ನು ಒರಟಾಗಿ ಚಿತ್ರಿಸಿದೆ. ಎಲೆಯ ಹಿನ್ನೆಲೆ ಬಣ್ಣ ಮತ್ತು ಅಂಚು ಮಹಾರಾಜ್ಞೀ ಕಟ್ಟಿನ ಎಲೆಯಂತಿದೆ. ಬಣ್ಣಗಳು ಮಾಸಿರುವುದರಿಂದ ಸೌಂದರ್ಯಕ್ಕೆ ಧಕ್ಕೆಯುಂಟಾಗಿದೆ.

ಮಾಹೇಶ್ವರಿ ಕಟ್ಟಿನ ಎಂಟನೆಯ ಎಲೆ

ಶ್ವೇತವರ್ಣದ ಮಾಹೇಶ್ವರಿ ದೇವಿಯು ಅರ್ಧವೃತ್ತಾಕಾರದ ಪೀಠದ ಮೇಲೆ ಉತ್ಕುಟಕಾಸನದಲ್ಲಿ ನೇರ ನೋಟದಲ್ಲಿ ಕುಳಿತಿದ್ದಾಳೆ. ಮೇಲುಗಡೆ ಚಲಿಸುತ್ತಿರುವ ಚೇಳು (ವೃಶ್ಚಿಕರಾಶಿಯ ಸಂಕೇತ) ಎಲೆಯ ಸಂಖ್ಯಾತ್ಮಕ ಸಂಖ್ಯೆ ಎಂಟನ್ನು ಸೂಚಿಸುತ್ತದೆ. ಪೀಠದ ಕೆಳಭಾಗದಲ್ಲಿ ಚಿತ್ರಿತವಾಗಿದೆ. ದೇವಿಗೆ ನಾಲ್ಕು ಕೈಗಳಿದ್ದು ಬಲಗೈ ಮತ್ತು ಎಡಗೈಗಳಲ್ಲಿ ಕ್ರಮವಾಗಿ ದಂಡ ಮತ್ತು ಮುಂಡಗಳನ್ನು ಹಿಡಿದಿದ್ದಾಳೆ. ಅವಳ ಬಲಗಡೆಯ ಕೈಯಲ್ಲಿ ಅಭಯ ಮುದ್ರೆ ಮತ್ತು ಎಡಗೈಯಲ್ಲಿ ವರದ ಮುದ್ರೆಗಳಿವೆ. ಯೋಗಪಟ್ಟದಿಂದ ಕಾಲುಗಳು ಬಂಧಿತವಾಗಿವೆ. ದೇವಿ ಕಿರೀಟವನ್ನು ಮತ್ತು ತಿಲಕವನ್ನು ಧರಿಸಿದ್ದಾಳೆ. ಸೀರೆ, ಚೋಲಿ, ದುಪ್ಪಟ್ಟಾ ಮತ್ತು ಕವಚವನ್ನು ತೊಟ್ಟಿದ್ದಾಳೆ. ದುಪ್ಪಟ್ಟಾದ ಅಂಚುಗಳು ಎರಡು ಕಡೆ ಹಾರಾಡುತ್ತಿರುವಂತೆ ತೋರುತ್ತಿದೆ. ಅಸ್ಪಷ್ಟವಾದ ದೇವಿಯ ಮುಖದ ಮೇಲೆ ಕಣ್ಣುಗಳನ್ನು ಮತ್ತು ಹುಬ್ಬುಗಳನ್ನು ಮಾತ್ರ ಗುರುತಿಸಬಹುದು. ಚೇಳಿನ ಚಿತ್ರವನ್ನು ಸ್ಪಷ್ಟವಾಗಿ ಚಿತ್ರಿಸಿದೆ. ಅದರ ಗುಂಡನೆಯ ಕಣ್ಣುಗಳು ಮತ್ತು

ಕೊಂಡಿಗಳು ಚೇಳಿನ ವಿಷದ ಸ್ವರೂಪವನ್ನು ನೈಜವಾಗಿ ತೋರ್ಪಡಿಸುತ್ತವೆ. ಅನೇಕ ಕಡೆಗಳಲ್ಲಿ ಮಾಸಿರುವ ಬಣ್ಣಗಳು ಮತ್ತು ಮೇಲೆ ಎದ್ದಿರುವ ಹೊಪ್ಪಳಿಕೆಗಳಿಂದ ಚಿತ್ರಕ್ಕೆ ಹಾನಿಯುಂಟಾಗಿದೆ. ಜೊತೆಗೆ ಎಲೆಯ ಅಂಚುಗಳು ಹಾಳಾಗಿವೆ. ಎಲೆಯು ವೃತ್ತಾಕಾರದ ಗೆರೆಗಳಿಂದ ಮತ್ತು ಕೆಂಪು ಬಣ್ಣದ ಹೂ ಅಂಚಿನಿಂದ ಅಲಂಕೃತವಾಗಿದೆ. ಮಹಾರಾಜ್ಞೀ ಕಟ್ಟಿನ ಎಲೆಯಲ್ಲಿ ಕಪ್ಪು ಹೂ ಅಂಚು ಕಂಡು ಬಂದರೆ ಇಲ್ಲಿ ಕೆಂಪು ಹೂ ಅಂಚು ಕಂಡುಬರುತ್ತದೆ. ಬಹುಶಃ ಮಹಾರಾಜ್ಞಿ ಮಾಹೇಶ್ವರೀ ಮತ್ತು ಈಗಿನ ಎಲೆ ಎರಡು ಬೇರೆ ಬೇರೆ ಕಟ್ಟುಗಳಿಗೆ ಸಂಬಂಧಿಸಿರಬಹುದು. ಕಟ್ಟಿನ ಮಾಲಿಕನಾಗಲಿ ಅಥವಾ ಮಾರಾಟಗಾರನಾಗಲಿ ಈ ಎರಡು ಎಲೆಗಳು ದೇವಿದಶಾವತಾರ ಭದ್'ದ ಮಾಹೇಶ್ವರಿಕಟ್ಟನ್ನು ಪ್ರತಿನಿಧಿಸುವುದರಿಂದ ಅವುಗಳನ್ನು ಮಿಶ್ರ ಮಾಡಿರಬಹುದು.

ಮಾಹೇಶ್ವರಿ ಕಟ್ಟಿನ ಹತ್ತನೆಯ ಎಲೆ

ಅರ್ಧ ವೃತ್ತಾಕಾರದ ಪೀಠದ ಮೇಲೆ ಉತ್ಕುಟಿಕಾಸನದಲ್ಲಿ ನೇರನೋಟದಲ್ಲಿ ನಾಲ್ಕು ಭುಜಗಳ ದೇವಿ ಕುಳಿತಿರುವಂತೆ ತೋರುತ್ತದೆ. ಮಕರರಾಶಿಯ ಚಿಹ್ನೆಯಾದ ತೇಲುತ್ತಿರುವ ಮೊಸಳೆಯು, ಎಲೆಯ ಹತ್ತನೆ ಸಂಖ್ಯೆಯ ಮೌಲ್ಯವನ್ನು ಸೂಚಿಸುತ್ತದೆ. ಅದು ಪೀಠದ ಕೆಂಪುವರ್ಣದ ತಳದಲ್ಲಿ ಚಿತ್ರಿತವಾಗಿದೆ. ದೇವಿಯು ಸೀರೆ, ಚೋಲಿ, ಕವಚ ಮತ್ತು ದುಪ್ಪಟ್ಟಾಗಳನ್ನು ಧರಿಸಿದ್ದಾಳೆ. ದುಪ್ಪಟ್ಟಾವನ್ನು ಕಲಾತ್ಮಕವಾಗಿ ಹಾಕಿಕೊಂಡಿರುವುದರಿಂದ ಅದರ ಎರಡು ಕಡೆ ಹಾರಾಡುತ್ತಿದೆ. ಕಿರೀಟ, ಬಳೆಗಳು, ತೋಳುಬಂಧಿಗಳು ಮತ್ತು ಹಾರಗಳನ್ನು ಹಾಕಿಕೊಂಡಿದ್ದಾಳೆ. ಎಡಗಡೆ ಅರ್ಧ ಚಂದ್ರನಿದ್ದಾನೆ. ದೇವಿಯು ತ್ರಿಶೂಲ ಮತ್ತು ಮುಂಡಗಳನ್ನು ಮೇಲಿನ ಬಲ ಮತ್ತು ಎಡಗೈಗಳಲ್ಲಿ ಹಿಡಿದುಕೊಂಡಿದ್ದಾಳೆ. ಅವಳ ಕೆಳಭಾಗದ ಬಲಗೈಯಲ್ಲಿ ವರದ ಮುದ್ರೆಯೂ ಎಡಗೈಯಲ್ಲಿ ಅಭಯ ಮುದ್ರೆಯೂ ಇದೆ. ದೇವಿಯ ಮುಖದ ಮೇಲೆ ಹೊಪ್ಪಳಿಕೆ ಎದ್ದು ಹಾಳಾಗಿದೆ. ಅಲ್ಲದೆ ಎಲೆಯ ಇಡೀ ಮೇಲ್ಮೈ ಕೂಡ ಹಾಳಾಗಿದೆ. ಅಂಚಿನ ಹಲವಾರು ಕಡೆಗಳೂ ಹಾಳಾಗಿವೆ. ಹಾಗಾಗಿ ದೇವಿಯ ಮುಖವೂ ಸ್ಪಷ್ಟವಾಗಿ ಕಾಣುತ್ತಿಲ್ಲ. ಕಲಾವಿದನು ಮುಖ್ಯ ಆಕೃತಿಯನ್ನು ಮತ್ತು ಕಟ್ಟಿನ ಚಿಹ್ನೆಯನ್ನು ಏಕರೀತಿಯಲ್ಲಿ ತಾದಾತ್ಮ್ಯದಿಂದ ಚಿತ್ರಿಸಿದ್ದಾನೆ. ಮೊಸಳೆಯು ತನ್ನ ಪ್ರಧಾನವಾದ ಕಣ್ಣುಗಳಿಂದ ಮತ್ತು ಚುರುಕುನೋಟದಿಂದ ನೋಡುವವರನ್ನು ಆಕರ್ಷಿಸುತ್ತಿದೆ. ಹಿನ್ನೆಲೆ ಬಣ್ಣ ಮತ್ತು ಎಲೆಯ ಅಂಚು ಮಾಹೇಶ್ವರಿ ಕಟ್ಟಿನ ಎಲೆ (ಸಂಖ್ಯೆ ಎಂಟು)ಯಂತೆ ಇವೆ.[೩೭]

❖❖❖

೩೭. Dr. Sarala Chopra: Ganjifa, PP.215-217



ಸಂಗ್ರಹ ; ಮಂಜುಷಾ ವಸ್ತುಸಂಗ್ರಹಾಲಯ ದರ್ಮಸ್ಥಳ



ಸಂಗ್ರಹ ; ಮಂಜುಷಾ ವಸ್ತುಸಂಗ್ರಹಾಲಯ ದರ್ಮಸ್ಥಳ



ಸಂಗ್ರಹ ; ಮಂಜುಷಾ ವಸ್ತುಸಂಗ್ರಹಾಲಯ ಧರ್ಮಸ್ಥಳ





ಸಂಗ್ರಹ ; ಮಂಜುಷಾ ವಸ್ತುಸಂಗ್ರಹಾಲಯ ಧರ್ಮಸ್ಥಳ





ಸಂಗ್ರಹ ; ಮಂಜುಷಾ ವಸ್ತುಸಂಗ್ರಹಾಲಯ ಧರ್ಮಸ್ಥಳ



ನರಸಿಂಹ



ವಾಮನ



ವರಹಾ



ವರಹಾ

ಸಂಗ್ರಹ ; ಜಗನ್ಮೋಹನ ವಸ್ತುಸಂಗ್ರಹಾಲಯ ಮೈಸೂರು



ಹಂಸ ಪಕ್ಷಿ



ನವಿಲುಗಳು



ಹಂಸ ಮತ್ತು ಲೀಲಾ ಶುಕ



ನವಿಲು



ಗಿಳಿಗಳು

ಸಂಗ್ರಹ ; ಜಗನ್ಮೋಹನ ವಸ್ತುಸಂಗ್ರಹಾಲಯ ಮೈಸೂರು



ಅಧ್ಯಾಯ – ಆರು
ಗಂಜೀಫಾ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆ ತಂತ್ರಗಾರಿಕೆ ಮತ್ತು ಶೈಲಿ

ಭಾರತದಂತ ವೈವಿಧ್ಯಪೂರ್ಣ ದೇಶ ಜಗತ್ತಿನಲ್ಲಿಲ್ಲ. ಒಂದೇ ದೇಶದಲ್ಲಿ ಇಷ್ಟು ವಿಭಿನ್ನ ಭಾಷೆಗಳು, ರುಚಿಗಳು, ಕ್ರಮಗಳು ಬೇರೆಲ್ಲೂ ಕಾಣಲಾರದು. ಇದು ನಮ್ಮ ಸಾಹಿತ್ಯ, ಸಂಗೀತ, ಚಿತ್ರಕಲೆ, ಶಿಲ್ಪ ಎಲ್ಲವುಗಳಲ್ಲಿ ಅಭಿವ್ಯಕ್ತವಾದುದೆ. ಇಷ್ಟೆಲ್ಲ ವೈವಿಧ್ಯವಿದ್ದರೂ ನಮ್ಮ ಸಮಗ್ರ ದೇಶದಲ್ಲಿ ಒಂದು ಏಕಸೂತ್ರತೆ ಇದೆ. ಅಂತಹಸ್ಸತ್ವ ಒಂದೇ ಆಗಿದೆ. ಅದೇ ವೈಶಿಷ್ಟ್ಯ 'ಏಕಂಸತ್ ವಿಪ್ರಾ ಬಹುಧಾವದಂತಿ' ಅಂದರೆ ಇದೇ ಅಭಿವ್ಯಕ್ತಿ. ಯಾವ ಧರ್ಮದಲ್ಲೂ ದೇಶದಲ್ಲೂ ಇಷ್ಟು ದೇವರುಗಳಿಲ್ಲ. ಆದರೂ ನಾವು ದೇವರು ಒಬ್ಬನೆ ಎಂದು ನಂಬಿದ್ದೇವೆ. ದೇವರಿಗೆ ಬೇರೆ, ಬೇರೆ ಹೆಸರುಗಳು, ಅವತಾರಗಳು, ರೂಪಗಳು ನಮ್ಮ ಕಲೆಯಲ್ಲಿ ಅಭಿವ್ಯಕ್ತಿಗೊಂಡಿವೆ. ಈ ಅಭಿವಯಕ್ತಿ ಸ್ವಾತಂತ್ರ್ಯ ಜಗತ್ತಿನ ಯಾವ ದೇಶದಲ್ಲೂ ಇಲ್ಲ. ಹಾಗೆಯೇ ಇಷ್ಟು ವೈವಿಧ್ಯವನ್ನು ಎಲ್ಲೂ ಕಾಣಲಾರೆವು. ಗಂಜೀಫಾ ಕಲೆಯ ವೈವಿಧ್ಯಕ್ಕೂ ಇದೇ ಕಾರಣ ಹಲವು ಶೈಲಿಗಳಿಗೂ ಮೂಲ.

ಜೀವನಕ್ಕೂ ಕಲೆಗೂ ನಿಕಟವಾದ ಸಂಬಂಧವಿದೆ. ವ್ಯಕ್ತಿ ತಾನು ಅನುಭವಿಸಿದ ನೋವು-ನಲಿವುಗಳಿಂದ ಒಂದೊಂದು ರೀತಿಯ ಸಂವೇದನೆಯನ್ನು ಪಡೆಯುತ್ತಾನೆ. ಪ್ರಕೃತಿ ಮಡಿಲಿನಲ್ಲಿರುವ ಗಿಡ, ಮರ, ಬಳ್ಳಿ ಹೀಗೆ ಅವನು ನೆಲೆಸಿರುವ ವಾತಾವರಣವು ಅವನಲ್ಲಿ ಪ್ರೇರಣೆಯನ್ನು ತುಂಬುತ್ತದೆ. ಆ ಪರಿಸರದ ವಾತಾವರಣವನ್ನು ಕಲಾವಿದನು ಆಸ್ವಾದಿಸಿದಾಗ ಅವನಿಂದ ಕಲಾಕೃತಿಗಳು ಹೊರಹೊಮ್ಮುತ್ತವೆ. ಒಂದರ್ಥದಲ್ಲಿ ಕಲಾವಿದರನ್ನು ಆವರಿಸಿರುವ ಸಾಮಾಜಿಕ, ಸಾಂಸ್ಕೃತಿಕ ಪರಿಸರ ಸೂಕ್ಷ್ಮಾತಿಸೂಕ್ಷ್ಮವಾಗಿ ಅವರ ಮೇಲೆ ದೀರ್ಘ ಕಾಲದ ಪ್ರಭಾವವನ್ನು ಬೀರುತ್ತದೆ. ಈ ರೀತಿಯ ಪ್ರಭಾವ, ಪ್ರೇರಣೆ ಕರ್ನಾಟಕ ಗಂಜೀಫಾ ಕಲಾವಿದರಲ್ಲಿ ಕಾಣುತ್ತೇವೆ.

ಭಾರತದಲ್ಲಿ ಇಪ್ಪತ್ತಕ್ಕೂ ಹೆಚ್ಚು ಬಗೆಯ ಶೈಲಿಗಳ ಗಂಜೀಫಾ ಕಲೆ ಮತ್ತು ಆಟ ಇತ್ತು. ಇಂದು

ಅವುಗಳಲ್ಲಿ ಕೆಲವು ಮಾತ್ರ ಉಳಿದುಕೊಂಡಿವೆ. ಸ್ವಾತಂತ್ರ್ಯಾನಂತರ ಗಂಜೀಫಾ ಆಟವೇ ಅಳಿದು ಹೋಯಿತು. ಇಂದು ಹೆಚ್ಚು ಕಡಿಮೆ ಚಿತ್ರಕಲೆಯಾಗಿ, ಕೇವಲ ಪಳಿಯುಳಿಕೆಯಾಗಿ ಮಾತ್ರ ಈ ಕಲೆ ಉಳಿದಿದೆ. ವಿದೇಶೀಯರ ಬೇಡಿಕೆ, ಕಲಾತ್ಮಕ ದೃಷ್ಟಿಯಿಂದ ಕೆಲವರ ಸಂಗ್ರಹದ ಹವ್ಯಾಸದಿಂದಾಗಿ ಈ ಕಲೆ ಉಳಿದಿದೆ. ಆದರೆ ಅತ್ಯಂತ ಸೂಕ್ಷ್ಮವಾದ ರೀತಿಯಲ್ಲಿ ಕೆಲಸ ಮಾಡುವ ಗಂಜೀಫಾ ಚಿತ್ರಗಾರರು ಮಾತ್ರ ತೀರಾ ವಿರಳವಾಗಿದ್ದಾರೆ.

ಕರ್ನಾಟಕದಲ್ಲಿ ಕಂಡುಬರುವ ಈ ಗಂಜೀಫಾ ಚಿತ್ರಗಳು ಅನೇಕ ಧಾರ್ಮಿಕತೆಗೆ, ಸಾಮಾಜಿಕತೆಯಿಂದ ಕೂಡಿದ ಆಟದ ನೆಲೆಯಲ್ಲಿ ಚಿತ್ರಿತಗೊಂಡಿವೆ. ಇಂತಹ ಚಿತ್ರಗಳಲ್ಲಿ ದೇವಾನುದೇವತೆಗಳು, ರಾಮಾಯಣ, ಮಹಾಭಾರತ, ದಶಾವತಾರ, ನವಗ್ರಹಗಳ ಚಿತ್ರಗಳು ನಮಗೆ ಪ್ರಧಾನವಾಗಿ ಗೋಚರಿಸುತ್ತವೆ. ಇದಕ್ಕೆ ಕಾರಣಗಳು ಮೈಸೂರು ಸಂಸ್ಥಾನದ ೨೧ನೆಯ ದೊರೆಯಾಗಿದ್ದ ಕಲಾಭಿಮಾನಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆರಾಧ್ಯ ದೇವಿಯಾದ ಚಾಮುಂಡೇಶ್ವರಿಯನ್ನು ಪ್ರಧಾನವಾಗಿ ಇಟ್ಟುಕೊಂಡು ಆಟಕ್ಕೆ ಹೊಂದಾಣಿಕೆಯಾಗುವಂತೆ ಕಲಾವಿದರಿಂದ ಮತ್ತು ಸ್ವತಃ ತಾವೇ ಕಲಾಕೃತಿಗಳನ್ನು ರಚಿಸಿ ತಮ್ಮ ದೈವಭಕ್ತಿಯನ್ನು ಚಿತ್ರಗಳಲ್ಲಿ ಅಭಿವ್ಯಕ್ತಿಪಡಿಸಿದ್ದಾರೆ.

ಮೊಘಲ್ ಹಾಗೂ ವಿಜಯನಗರ ಅರಸರ ಪತನಾನಂತರ ಚಿಕ್ಕ ಚಿಕ್ಕ ಸಂಸ್ಥಾನಿಕರು, ಮಾಂಡಲಿಕರು, ಅಧಿಕಾರಿ ವರ್ಗದವರು ಸ್ವತಂತ್ರವಾಗಿ ಅಧಿಕಾರವನ್ನು ನಡೆಸತೊಡಗಿದರು. ಅದರಲ್ಲೂ ವಿಶೇಷವಾಗಿ ೧೮ ಮತ್ತು ೧೯ನೇ ಶತಮಾನದ ಸಂದರ್ಭದಲ್ಲಿ ಬ್ರಿಟೀಷರ ಪ್ರಾಬಲ್ಯ ಇಡೀ ಭಾರತದ ತುಂಬಾ ವ್ಯಾಪಿಸಿತ್ತು. ಎಲ್ಲ ಕ್ಷೇತ್ರಗಳಲ್ಲಿ ಅವರದೇ ನೀತಿ-ನಿಯಮಗಳನ್ನು ಪಾಲಿಸಲಾಗಿತ್ತು. ಹೀಗಾಗಿ ಕಲಾವಿದರು ತಮ್ಮ ಸ್ವತಂತ್ರತೆಯನ್ನು ಕಂಡುಕೊಳ್ಳಲು ಆಶ್ರಯ ನೀಡುವ ಅರಸರ ನೆರಳಲ್ಲಿ ಬದುಕುವಂತಾಯಿತು. ಅವರ ಆಶಯಗಳಂತೆ ಕೆಲಸ ನಿರ್ವಹಿಸಿ ಉದರ ತುಂಬಿಕೊಳ್ಳುವಂತಾಯಿತು. ಹೀಗಾಗಿ ಗಂಜೀಫಾ ಚಿತ್ರಗಳು ಅಪ್ರಾದಿಕತೆಯನ್ನು ಮೈಗೂಡಿಸಿಕೊಂಡಿವೆ.

ಗಂಜೀಫಾ ಚಿತ್ರಗಳಲ್ಲಿ ರಚನಾಕ್ರಮವು ಬಹುತೇಕ ಏಕಪ್ರಕಾರವಾದ ಶೈಲಿಗಳಂತೆ ಕಂಡುಬರುತ್ತಿದ್ದರೂ ಹಲವು ವೈವಿಧ್ಯವನ್ನು ಕಾಣಬಹುದಾಗಿದೆ. ವಿಜಯನಗರ ಪತನಾನಂತರ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ್ ರಾಜವಂಶವು ಚಿತ್ರಕಲೆಗೆ ಅಪಾರ ಕಾಣಿಕೆಗಳನ್ನು ನೀಡಿತು. ಕ್ರಿ.ಶ. ೧೮ನೇ ಶತಮಾನದ ವೇಳೆಗೆ ಚಿತ್ರಕಲೆ ಮೈಸೂರಿನ ಒಡೆಯರ ಮತ್ತು ತಂಜಾವೂರಿನ ಸರ್ಮೋಜಿ ವಂಶದವರ ಉದಾರ ಪ್ರೋತ್ಸಾಹದಿಂದ ಸಾಂಪ್ರದಾಯಿಕ ಮೈಸೂರು ಮತ್ತು ತಂಜಾವೂರು ಶೈಲಿಗಳೆಂಬ ಹೆಸರನ್ನು ಪಡೆದುಕೊಂಡರೂ ಗಂಜೀಫಾ ಚಿತ್ರಕಲೆಯಲ್ಲಿ ಅಪ್ಪಟ ಕರ್ನಾಟಕದ ದೇಶೀಯ ಅಂಶಗಳು ರಚನೆಗೊಂಡಿವೆ. ಉದಾಹರಣೆ ರಾಮಾಯಣ, ಮಹಾಭಾರತ, ನವಗ್ರಹ ಚಾಮುಂಡಿ ದಶಾವತಾರಗಳ ಚಿತ್ರಗಳು ಮುಂತಾದ ಸ್ಥಳೀಯ ದೇವತೆಗಳ ಹೆಸರಿನ ಚಿತ್ರಗಳನ್ನು ಇಲ್ಲಿ ಗಮನಿಸಬಹುದು.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಿರ್ಮಿಸಿದ ಅನೇಕ ದೇವಾಲಯಗಳ ಒಳಗೋಡೆಗಳ ಮೇಲೆ ಮೈಸೂರು ಶೈಲಿಯ ಚಿತ್ರಕಲೆಯ ವಿವಿಧ ವರ್ಣಚಿತ್ರಗಳನ್ನು ನಾವು ನೋಡಬಹುದಾಗಿದೆ. ಈ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಕೆಲವು ಹೆಸರಾಂತ ಚಿತ್ರಕಲಾವಿದರು : ಜಾವಗಲ್ಲು ನರಸಿಂಹಯ್ಯ, ನಗುವನಹಳ್ಳಿ ನಾರಣಪ್ಪ, ಎಲ್ಲಯ್ಯ, ವೀರಣ್ಣ, ಅಳಸಿಂಗಾರ್ಯ, ಸುಂದರಯ್ಯ, ನೆಲಮಂಗಲದ ರಂಗಪ್ಪ, ಹುಲಿಯೂರುದುರ್ಗದ ಕೃಷ್ಣಪ್ಪ, ಗುರಿಕಾರ ತಿಪ್ಪಣ್ಣ, ತಂಜಾವೂರು ಕೊಂಡಯ್ಯ ಮತ್ತು

ವೆಂಕಟಸುಬ್ಬಯ್ಯ. ಇವರಲ್ಲದೆ ಮೈಸೂರು ಸಂಸ್ಥಾನದಾದ್ಯಂತ ಅನೇಕ ಚಿತ್ರಕಲಾವಿದರು, ದೇವಾಲಯಗಳು, ವಿವಿಧ ಮಠಗಳು ಮತ್ತು ಅರಮನೆಗಳ ಭಿತ್ತಿಚಿತ್ರಗಳನ್ನಲ್ಲದೆ ಕ್ರೀಡೆಗಳಿಗೆ ಸಂಬಂಧಪಟ್ಟಂತೆ ಕಾಗದದ ಮೇಲೆ ಗಂಜೀಫಾ ಚಿತ್ರಗಳನ್ನು ರಚಿಸುತ್ತಿದ್ದರು.

ಮುಮ್ಮಡಿಯವರು ಕಲಾರಸಿಕರು. ಸಂಗೀತ, ನೃತ್ಯಗಳಂತೆ ಚಿತ್ರ–ಶಿಲ್ಪಕಲೆಗಳಲ್ಲೂ ಅವರದ್ದು ನೈಜವಾದ ಆಸಕ್ತಿ. ಚಿತ್ರಕಲೆಗಂತೂ ಅವರು ನೀಡಿದ ಪ್ರೋತ್ಸಾಹ ಹೆಚ್ಚಿನದು. ಅವರ ಹತ್ತಿರದ ಆಶ್ರಿತರಲ್ಲಿ ಜಾವಗಲ್ಲು ನರಸಿಂಹಯ್ಯ, ನಗುವನಹಳ್ಳಿ ನಾರಣಪ್ಪ, ಯಲ್ಲಯ್ಯ, ವೀರಣ್ಣ, ಅಳಸಿಂಗಯ್ಯ, ಸುಂದರಯ್ಯ, ನೆಲಮಂಗಲದ ರಂಗಪ್ಪ, ದುರ್ಗದ ಕೃಷ್ಣಪ್ಪ, ಗುರಿಕಾರ ತಿಪ್ಪಣ್ಣ, ತಂಜಾವೂರು ಕೊಂಡಯ್ಯ, ವೆಂಕಟಸುಬ್ಬು ಮೊದಲಾದವರು ವ್ಯಕ್ತಿಚಿತ್ರಗಳನ್ನೂ ಬಿಡಿಸುವಂತೆ ಪ್ರೇರಿಸುತ್ತಿದ್ದರು. ಇಂಥ ಬಿಡಿಚಿತ್ರಗಳೇ ಮುಮ್ಮಡಿಯವರ ಕಾಲದಲ್ಲಿ ಸಿದ್ಧವಾದವು ಒಂದು ಸಾವಿರದಷ್ಟಿವೆ. ಅರಮನೆಯಲ್ಲಿ ಪುರಾಣಕತೆಗಳಿಂದ ಪ್ರಸಂಗಗಳನ್ನಾಯ್ದು ಚಿತ್ರಗಳನ್ನು, ಮನೆಗಳಲ್ಲಿರಿಸಿಕೊಳ್ಳಲು ಮತ್ತು ಭಜನಾಮಂದಿರಗಳಿಗಾಗಿ ದಶಾವತಾರ, ವಿಶ್ವರೂಪದರ್ಶನ, ಚಾಮುಂಡೇಶ್ವರಿ, ರಾಜರಾಜೇಶ್ವರಿ ಮುಂತಾದ ದೇವತಾಚಿತ್ರಗಳನ್ನೂ ತಮ್ಮ ಚಿತ್ರಗಾರರಿಂದ ಬರೆಯಿಸುತ್ತಿದ್ದರು. ತಾವು ಕಟ್ಟಿಸಿದ ಅಥವಾ ಜೀರ್ಣೋದ್ಧಾರ ಮಾಡಿದ ಹಲವು ಗುಡಿಗಳಲ್ಲೂ ಇವರ ಕಾಲದಲ್ಲಿ ಭಿತ್ತಿಚಿತ್ರಗಳು ತೋರಿಕೊಂಡವು.

ಮೈಸೂರು ಅರಸೊತ್ತಿಗೆಯಲ್ಲಿ ರಾಜ ಒಡೆಯರ ಕಾಲದಿಂದಲೂ ಚಿತ್ರಕಲೆಗೆ ಪ್ರೋತ್ಸಾಹವಿದ್ದಿತು. ವಿಜಯನಗರ ಸಾಮ್ರಾಜ್ಯದಲ್ಲಿದ್ದ ಕಲಾಸಕ್ತಿ ಇವರ ಕಾಲದಲ್ಲಿ ಮೈಸೂರಿಗೆ ಬಂದಿಳಿಯಿತು. ಆ ಸಾಮ್ರಾಜ್ಯ ಮುರಿದುಬಿದ್ದ ಮೇಲೆ ಅಲ್ಲಿದ್ದ ಕಲಾವಿದರಲ್ಲಿ ಬಹುಮಂದಿ ಮೈಸೂರು ಕಡೆ ಬಂದರು. ವಿಜಯನಗರ ದೊರೆಗಳಲ್ಲಿ ಕಡೆಯವನಾದ ತಿರುಮಲರಾಯನು ಶ್ರೀರಂಗಪಟ್ಟಣದಲ್ಲಿರುತ್ತಿದ್ದು, ಆ ಮನೆತನ ಆಳಿದ ಮೇಲೆ ರಾಜ ಒಡೆಯರು ಶ್ರೀರಂಗಪಟ್ಟಣವನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡರು. ವಿಜಯನಗರ ಸಾಮ್ರಾಜ್ಯವೇ ಮುಂದುವರಿಯದಂತೆ ಆಯಿತು. ಚಿತ್ರಗಾರರನ್ನೆಲ್ಲ ತಮ್ಮಲ್ಲಿಗೆ ಕರೆಯಿಸಿಕೊಂಡು ಅವರಿಗೆ ನೆಲೆಗಾಣಿಸಿದರು. ಬಂದವರು ಬಹುಮಟ್ಟಿಗೆ ಕ್ಷತ್ರಿಯ ರಾಜಮನೆತನದ ಚಿತ್ರಗಾರರು; ಅವರ ಕುಲದೇವತೆ ನಿಮಿಷಾಂಬೆ. ರಾಜ ಒಡೆಯರ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ಚಿತ್ರಗಾರರದ್ದೇ ಪ್ರತ್ಯೇಕವಾಗಿ ವಸತಿಯಿದ್ದು ಅದರ ನಡುವೆ ನಿಮಿಷಾಂಬಾದೇವಿಯ ಗುಡಿಯನ್ನು ಅರಸರೇ ಕಟ್ಟಿಸಿಕೊಟ್ಟರಂತೆ. ಕಂಠೀರವ ನರಸರಾಜ ಒಡೆಯರ (೧೬೩೮–೧೬೫೯) ಆಸ್ಥಾನದಲ್ಲಿದ್ದ ಗೋವಿಂದ ವೈದ್ಯನೆಂಬ ಕವಿ ತಾನು ಬರೆದ 'ಕಂಠೀರವ ನರಸರಾಜವಿಜಯಂ' ಎಂಬ ಸಾಂಗತ್ಯಕೃತಿಯಲ್ಲಿ ಶ್ರೀರಂಗಪಟ್ಟಣವನ್ನು ಬಣ್ಣಿಸುತ್ತ, ಊರಲ್ಲಿ ಚಿತ್ರಗಾರರದ್ದೇ ಕೇರಿಯೊಂದು ಇದ್ದುದನ್ನು ಉಲ್ಲೇಖಿಸುತ್ತಾನೆ.

ಆದರೆ ಮುಮ್ಮಡಿಯವರ ಕಲಾಪ್ರೇಮ ಹಿಂದಿನ ಅರಸರಿಗೂ ಇರಲಿಲ್ಲ. ಮುಂದೆ ಬಂದವರಿಗೂ ಇರಲಿಲ್ಲ. ಇವರ ಆಸಕ್ತಿಯ ಕುರುಹಾಗಿರುವುದು ಮೈಸೂರಿನಲ್ಲಿರುವ ಜಗನ್ಮೋಹನಮಹಲು. ಮುಮ್ಮಡಿಯವರೇ ಕಲಾಕೃತಿಗಳ ಸಂಗ್ರಹಕ್ಕಾಗಿ, ಪ್ರದರ್ಶನಕ್ಕಾಗಿ ೧೮೫೧ರಲ್ಲಿ ಈ ಕಲಾದೇಗುಲವನ್ನು ಕಟ್ಟಿಸಿದರು. ಇದಲ್ಲದೆ ಕಾರಂಜಿಕೆರೆಯ ಹತ್ತಿರ, ಕೋಟೆಯ ಹೊರಗೆ ಲೋಕರಂಜನಮಹಲೆಂಬ ಇನ್ನೊಂದು ಮಂದಿರವನ್ನೂ ಕಟ್ಟಿಸಿದರು. ಇಲ್ಲಿ ಅರ್ಧನಾರೀಶ್ವರ, ಹರಿಹರ, ಗಣಪತಿ, ಕೃಷ್ಣ, ಶಿವ ಮೊದಲಾದ ದೇವತಾಮೂರ್ತಿಗಳನ್ನು ಶಿಲ್ಪದಲ್ಲಿ ಮಾಡಿಸಿಟ್ಟರು. ಜಗನ್ಮೋಹನಮಹಲಿನಲ್ಲಿ ಮುಮ್ಮಡಿಯರಸರ ಕಾಲದ ವರ್ಣಚಿತ್ರಗಳಲ್ಲಿ ಅತ್ಯುತ್ತಮವಾದುವನ್ನು ಕಾಣಬಹುದು. ಅರಸರು

ಸಮ್ಮುಖದ ಚಿತ್ರಗಾರರಿಂದ ತಮ್ಮ ಪ್ರತಿಕೃತಿಗಳನ್ನೇ ಅಲ್ಲದೆ, ತಮ್ಮ ಬಳಗದವರು, ಆಸ್ಥಾನದ ಅಧಿಕಾರಿಗಳು, ವಿದ್ವಾಂಸರು, ಸಂಗೀತಗಾರರು, ಆ ಕಾಲದ ಪ್ರಸಿದ್ಧರಾದ ಸಾಧುಸಂತರು, ಸ್ವಾಮಿಗಳು ಮುಂತಾದ ಸಮಸ್ತರ ಭಾವಚಿತ್ರಗಳನ್ನು ಸಿದ್ಧಪಡಿಸಿದರು; ಚಿತ್ರಗಾರರ ವ್ಯಕ್ತಿಚಿತ್ರಣಗಳನ್ನೂ ಈ ಸಂಗ್ರಹದಲ್ಲಿ ಕಾಣಬಹುದು.

ಆ ಕಾಲದ ಚಿತ್ರಕಲಾಶೈಲಿಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬೇಕೆಂದರೆ ಹಿನ್ನೆಲೆಯಾಗಿ ವಿಜಯನಗರ ಸಾಮ್ರಾಜ್ಯವು ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ಅಲ್ಲಿ ಬೆಳೆದು ಬಂದ ಕಲಾಧೋರಣೆಯನ್ನೂ ಗಮನಿಸಬೇಕು; ವಿಜಯನಗರ ಸಾಮ್ರಾಜ್ಯ ಮಣ್ಣುಗೂಡಿದ ಮೇಲೆ ಈ ಧೋರಣೆ ಕೆಲವು ಮಾರ್ಪಾಟುಗಳನ್ನು ತಳೆದು ದಖ್ಖಣಿಶೈಲಿ, ಮೈಸೂರು ಶೈಲಿ, ತಂಜಾವೂರು ಶೈಲಿಗಳಾಗಿ ಮೈದಳೆದುದನ್ನೂ ಪರಿಶೀಲಿಸಬೇಕು. ವಿಜಯನಗರದ ಕಲಾಶೈಲಿಯನ್ನು ಒಳಗೊಂಡ ಪರ್ಶಿಯನ್, ಮುಘಲ್, ಅವಧ, ಬಿಜಾಪುರ ಶೈಲಿಗಳ ಪ್ರಭಾವವನ್ನಾಗಲಿ ಮರೆಯುವಂತಿಲ್ಲ. ಇದಕ್ಕೆ ಹಿಂದಿನ ಇತಿಹಾಸದ ಹಲವು ಹಾಳೆಗಳ ಮೇಲೆ ಕಣ್ಣಾಡಿಸುವದ ಅಗತ್ಯವಿದೆ. ಹಿಂದಿನವರ ಜಾಡನ್ನು ಹಿಡಿದು ತಾನೆ ಮುಂದಿನವರ ನಡಿಗೆ?

ಮುಮ್ಮಡಿಯವರ ಆಶ್ರಯದಲ್ಲಿ ಮೈದಳೆದ ಚಿತ್ರಕಲಾಪ್ರಕಾರವು ಯಾವೊಂದು ನಿರ್ದಿಷ್ಟಶೈಲಿಯ ಒಂದು ಘಟ್ಟವೆಂದಾಗಲಿ, ಫಲವೆಂದಾಗಲಿ ಹೇಳುವಂತಿಲ್ಲ; ಇದ್ದಕ್ಕಿದ್ದಂತೆ, ಯಾವ ಪೂರ್ವೋತ್ತರವೂ ಇರದೆ ಕಾಣಿಸಿಕೊಂಡದ್ದೂ ಅಲ್ಲ. ಆಗ ಸಿದ್ಧವಾಗಿ ಈಗ ಉಳಿದುಬಂದಿರುವ ಕಲಾಕೃತಿಗಳನ್ನು ಪರಿಶೀಲಿಸಿದರೆ ಕೆಲವು ವಿವರಗಳು ಸ್ಪಷ್ಟವಾಗುತ್ತವೆ. ರಾಜಸ್ಥಾನಕಲಾಸಂಪ್ರದಾಯದಲ್ಲಿದ್ದಂತೆ (ಹದಿನಾರು–ಹದಿನೇಳನೆಯ ಶತಮಾನಗಳಲ್ಲಿ ಮೊದಲಾಗಿ ಹದಿನೆಂಟನೆಯ ಶತಮಾನದಲ್ಲಿ ಬಸ್ಸೊಲಿ, ಗುಲೆರ್, ಕಾಂಗ್ರಾ, ಘರ್ವಾಲ್ ಮೊದಲಾದ ಉಪಪ್ರಕಾರಗಳಾದ ಸಂಪ್ರದಾಯ) ಇಲ್ಲಿಯೂ ೧. ಮಹಾಭಾರತ, ರಾಮಾಯಣ, ಕೃಷ್ಣಲೀಲೆ ಮೊದಲಾದ ಗ್ರಂಥಗಳಿಗೆ ಚಿತ್ರಣವಾಗಿಯೂ, ೨. ರಾಗ–ರಾಗಿಣಿ ಚಿತ್ರಣಗಳಾಗಿಯೂ, ೩. ಶೃಂಗಾರ–ಪ್ರಧಾನವಾದ (ಎಂದರೆ ವಿಪ್ರಲಂಭವೇ ಮೊದಲಾದ ದಶಾವಿಶೇಷಗಳ, ನಾಯಕ–ನಾಯಿಕಾಭೇದಗಳ) ಚಿತ್ರಣವಾಗಿಯೂ ಚಿತ್ರಗಳು ಬಹುಮಟ್ಟಿಗೆ ಕಾಣಿಸಿಕೊಂಡಿವೆ. ಇವುಗಳಲ್ಲದೆ ಇಲ್ಲಿ ಸ್ವತಂತ್ರವಾದ ದೇವತಾಚಿತ್ರಗಳೂ (ವಿಷ್ಣುವಿನ ಅವತಾರಗಳು, ಶಿವನ ಲೀಲಾಮೂರ್ತಿಗಳು, ದೇವಿಯ ರೂಪಗಳು ಇತ್ಯಾದಿ) ಚಿತ್ರಕಲೆಗೆ ವಸ್ತುಗಳಾಗಿವೆ.

ಅಲ್ಲಿದ್ದಂತೆ ಇಲ್ಲಿಯೂ ಭಿತ್ತಿಚಿತ್ರಗಳ ಪ್ರೇರಣೆಯನ್ನೇ, ಸ್ವಭಾವವನ್ನೇ ಅಳವಡಿಸಿಕೊಂಡು ಕಿರುಚಿತ್ರಗಳು ಸಿದ್ಧವಾದವು. ಚಿತ್ರಗಳ ಸ್ವಾರಸ್ಯ ಇರುವುದು ನೈಜನಿರೂಪಣೆಯಲಿಲ್ಲ, ಭಾವದ್ಯೋತಕವಾದ ಸ್ವರೂಪದಲ್ಲಿ. ಅವೇನು ಮೆದುಳಿಗೆಂದು ಮೈದಳೆದವಲ್ಲ; ಹೃದಯಸಂವಾದ ಅವುಗಳ ಗುರಿ. ಮುಂದೆ ಮೊಗಲಾಯಿ ಸಂಪ್ರದಾಯದ ಪ್ರಭಾವದಿಂದ ರಾಜಸ್ಥಾನದ ಸಂದರ್ಭ, ಮೆರವಣಿಗೆ, ಬೇಟೆ, ವ್ಯಕ್ತಿಚಿತ್ರಣ ಇವೂ ರಾಜಸ್ಥಾನ ಕಲಾಸಂಪ್ರದಾಯದಲ್ಲಿ ಕಾಣಿಸಿಕೊಂಡಂತೆ ಇಲ್ಲಿಯೂ ಸೇರಿಕೊಂಡವು.[೧]

ಸಂಪ್ರದಾಯದ ಉಳಿಕೆಗೂ ಮೈಸೂರಿನಲ್ಲಿ ತೋರಿಕೊಂಡ ಶೈಲಿಗೂ ನಡುವೆ ಇನ್ನೊಂದು ಕಲಬೆರಕೆ ಶೈಲಿ ಕಾಣಿಸಿಕೊಂಡು ಮರೆಯಾಯಿತು. ಅದು 'ಕಂಪೆನಿಶೈಲಿ'ಯೆಂದು ಹೆಸರಾಗಿದೆ. ಕಂಪೆನಿಯೆಂದರೆ ಈಸ್ಟ್ ಇಂಡಿಯಾ ಕಂಪೆನಿ; ಬ್ರಿಟಿಷರು ಭಾರತದಲ್ಲಿ ತಮ್ಮ ಚಕ್ರಾಧಿಪತ್ಯವನ್ನು ಸ್ಥಾಪಿಸಿಕೊಳ್ಳಲು ದಾರಿ ಮಾಡಿಕೊಟ್ಟ ವಾಣಿಜ್ಯ ಸಂಸ್ಥೆ. ಇಂಗ್ಲೆಂಡಿನ ಎಲಿಜಬೆತ್ ರಾಣಿಯು ಲಂಡನ್ನಿನ ವರ್ತಕರ ಕಂಪೆನಿಯೊಂದಕ್ಕೆ

೦೧. ಸಂ. ಎಸ್. ಕೆ. ರಾಮಚಂದ್ರರಾವ್., ಶ್ರೀ ತತ್ವನಿಧಿ ಸಂಪುಟ ೧ ಪುಟ ೨೧–೨೩

ಈಸ್ಟ್ ಇಂಡಿಯಾದೊಂದಿಗೆ ವಾಣಿಜ್ಯ ಸಂಪರ್ಕವನ್ನು ಬೆಳೆಸಿಕೊಳ್ಳಲು ಅನುಜ್ಞೆ ನೀಡಿದಂದು ಈ ಈಸ್ಟ್ ಇಂಡಿಯಾ ಕಂಪೆನಿ ಮೈದಳೆಯಿತು. ಅಂದಿನಿಂದ ಇಂಗ್ಲೆಂಡಿನ ಜನರಿಗೂ ನಮ್ಮವರಿಗೂ ನಂಟು.

ಸಂಪರ್ಕಕ್ಕೆ ಇದೇ ಮೊದಲ ಹೆಜ್ಜೆಯೆಂದೇನಲ್ಲ. ಅಲ್ಲಿನ ಅರಸ ಮೊದಲನೆಯ ಜೇಮ್ಸ್ ೧೬೧೫ರಲ್ಲಿ ಸರ್ ಥಾಮಸ್ ರೋ ಎಂಬುವರನ್ನು ಜಹಾಂಗೀರನ ಆಸ್ಥಾನಕ್ಕೆ ರಾಯಭಾರಿಯಾಗಿ ಕಳುಹಿಸಿದ್ದುಂಟು; ಸೂರತ್‌ನಲ್ಲಿ ಕಾರ್ಖಾನೆಯೊಂದನ್ನು ತೆರೆಯಲು ಅನುಮತಿಗಾಗಿ. ಔರಂಗಜೇಬನ ಮರಣಾನಂತರ ಗೊಂದಲ ಪರಿಸ್ಥಿತಿ ಏರ್ಪಟ್ಟು ಇಂಗ್ಲಿಷ್ ಜನರೂ ಫ್ರೆಂಚರೂ ತಂತಮ್ಮ ಪ್ರಭಾವವನ್ನು ಬೇರೂರಿಸಿಕೊಳ್ಳಲು ಹೆಣಗಾಡುತ್ತಿರುವಾಗ ಐರೋಪ್ಯ ಸಂಸ್ಕೃತಿಯ ಪರಿಚಯ ನಮ್ಮವರಿಗೆ ಆಗತೊಡಗಿತು. ಅಕ್ಬರ್‌ನ ಆಸ್ಥಾನಕ್ಕೆ ಜೆಸ್ಯೂಟ್ ಪಾದರಿಗಳು ೧೫೮೦ರಲ್ಲಿ ಹಿಂದೆಯೇ ಬಂದಿದ್ದು ದೊರೆಗೆ ಬಹುಭಾಷೆಗಳ ಬೈಬಲ್ ಗ್ರಂಥವನ್ನು ನೀಡಿದ್ದರು; ಅವರಲ್ಲಿದ್ದ ಫ್ಲೆಮಿಷ್ ಚಿತ್ರಗಳು ದೊರೆಯ ಮನಸ್ಸನ್ನಾಕರ್ಷಿಸಿ ತನ್ನ ಆಶ್ರಿತರಾದ ಚಿತ್ರಕಾರರಿಗೆ ಅವುಗಳ ನಕಲನ್ನು ಮಾಡಲು ಅಪ್ಪಣೆ ಮಾಡಿದ್ದನು. ಮುಂದೆ ಡ್ಯುರೆರ್ ಎಂಬ ಐರೋಪ್ಯ ಕಲಾವಿದನ ಕೊರೆದ ಚಿತ್ರಗಳ ವರ್ಣಪ್ರತಿಗಳು ದಿಲ್ಲಿಯ ಚಿತ್ರಗಾರರ ಕೈಸೇರಿದವು.

ಇದರಿಂದಾಗಿ ಮೊಗಲಾಯಿ ಕಲಾಪ್ರಕಾರದಲ್ಲಿ ಐರೋಪ್ಯ ಚಿತ್ರಗಳಲ್ಲಿ ಕಾಣುತ್ತಿದ್ದ ನೆರಳು-ಬೆಳಕು, ಇವುಗಳ ಅಂತರ, ನಿಸರ್ಗವನ್ನು ಯಥಾರ್ಥವಾಗಿ ಚಿತ್ರಿಸುವ ರೀತಿ, ಕಣ್ಣೆಳೆಯ ಜಾಣತನ (ಪರ್‌ಸ್ಪೆಕ್ಟಿವ್) ಮುಂತಾದ ವಿವರಗಳ ಬಳಕೆ ಅಷ್ಟಿಷ್ಟು ಆಗತೊಡಗಿತು. ಉದ್ದ-ಅಗಲ ಎರಡೇ ವಿಭಾಗವನ್ನು ಅರಿತಿದ್ದ ನಮ್ಮ ಚಿತ್ರಗಾರರಿಗೆ ಆಳವೆಂಬ ಇನ್ನೊಂದು ವಿಭಾಗವೂ ಮನವರಿಕೆಯಾಯಿತು. ಪಾಶ್ಚಾತ್ಯ ಚಿತ್ರಗಾರರಿಗೆ ಪರ್ಶಿಯನ್ ಚಿತ್ರಪದ್ಧತಿಯ ಕೆಲವು ಗುಣಗಳು ಹಿಡಿಸಿದುವೆನ್ನಿ, ನಿದರ್ಶನಕ್ಕೆ ಕಿರುವ್ಯಕ್ತಿಚಿತ್ರಗಳಲ್ಲಿ ಕಂಡು ಬರುವ ನೈಜಚಿತ್ರಣ, ಎದ್ದು ಕಾಣುವಂತೆ ಮೂಡಿಸಲಾದ ಬಣ್ಣಗಳು, ಪ್ರಕೃತಿಯ ಸಹಜ ನಿರೂಪಣೆ ಇವು. ಅವರಿಗೆ ಹಿಡಿಸಲಾರದ ವಿವರಗಳೆಂದರೆ ನಮ್ಮವರಿಗೆ ಕಣ್ಣೆಳೆಯ ಅಗತ್ಯ ಕಾಣದಿದ್ದುದು, ಮತ್ತು ವಸ್ತುಗಳು ವ್ಯಕ್ತಿಗಳ ಯಥಾವತ್ತಾದ ಗಾತ್ರದ ಕಡೆ ಗಮನವಿಲ್ಲದಿರುವುದು.

ಪಾಶ್ಚಾತ್ಯರೆಂದರೆ ಅವಿಚಾರಿತ ಗೌರವ ನಮ್ಮ ಜನರಿಗೆ ಬಹುಕಾಲದಿಂದ ಇರುವುದೆ. ಅದಕ್ಕೆ ಕಾರಣವಿರಲಿ ಇಲ್ಲದಿರಲಿ; ಬಿಳಿಯ ತೊಗಲು, ಅರಿಯದ ಭಾಷೆ, ವೇಷಭೂಷಣಗಳ ಹೊಸತನ ಇಷ್ಟೇ ಸಾಕು ಎನ್ನುವ ಮಂದಿಗೆ ನಮ್ಮ ದೇಶದಲ್ಲಿ ಕೊರತೆ ಯಾವಾಗಲೂ ಇರಲಿಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ ನಮ್ಮಲ್ಲಿ ಹದಿನಾರು-ಹದಿನೇಳನೆಯ ಶತಮಾನಗಳಿಂದಲೂ ಬೆಳೆದುಬಂದಿರುವ ಲಕ್ಷಣವೆ. ಐರೋಪ್ಯ ಚಿತ್ರಗಾರರನ್ನು ಆದರ್ಶವಾಗಿ ಗ್ರಹಿಸಿದ ನಮ್ಮ ಚಿತ್ರಗಾರರು ಅಲ್ಲಿನ ಅಂಶಗಳನ್ನೆಲ್ಲ ಸಾಧ್ಯವಾದಷ್ಟು ಬಳಸಿಕೊಂಡರು. ಹೊರಗಿನಿಂದ ಬಂದ ಕಾಗದದ ಮೇಲೆ ಜಲವರ್ಣಚಿತ್ರಣವನ್ನು ಮಾಡತೊಡಗಿದರು; ಕಣ್ಣೆಳೆಯ ಸ್ವಾರಸ್ಯವನ್ನು ಅರಿತುಕೊಂಡು ವ್ಯಕ್ತಿಯಾಗಲಿ ವಸ್ತುವಾಗಲಿ ಹಿಂಬದಿಯ ಭಾಗವೂ ಒಂದಿದೆಯೆಂಬ ಸೂಚನೆಯನ್ನೂ, ವಿಭಿನ್ನದೂರಗಳಲ್ಲಿ ಅಂತರಗಳಲ್ಲಿ ವಸ್ತುವಿನ್ಯಾಸವನ್ನೂ, ಒಂದೇ ಚಿತ್ರದಲ್ಲಿ ಬೇರೆ ಬೇರೆ ನೆಲೆಗಳನ್ನೂ ತೋರಿಸತೊಡಗಿದರು.

ಇದರಿಂದಾಗಿ ಸಂಪ್ರದಾಯದಿಂದ ಬಂದ ಚಿತ್ರಕಲೆಯ ಶೈಲಿಯನ್ನು ಬಹುಮಟ್ಟಿಗೆ ಕೈಬಿಟ್ಟಂತಾಯಿತು. ಚಿತ್ರಣಕ್ಕೆ ಪಾಶ್ಚಾತ್ಯರ ಸಂವಿಧಾನಗಳನ್ನೇ ಹೆಚ್ಚು ಹೆಚ್ಚಾಗಿ ಬಳಸತೊಡಗಿದರು. ಹಳೆಯ ಕಾಲದ ದೇವ-ದೇವತೆಯರು, ರಾಜ-ರಾಣಿಯರು, ನಾಯಕ-ನಾಯಕಿಯರು, ಶೃಂಗಾರ ರಸ, ರಾಗಮಾಲೆ ಇವೆಲ್ಲವನ್ನೂ ಬದಿಗೊತ್ತಿ ಐರೋಪ್ಯ ಅಧಿಕಾರಿಗಳು ಕಚೇರಿಗಳು, ಮಾರುಕಟ್ಟೆ, ಹುಂಜದ ಕಾಳಗ,

ಬೇಟೆ ಮುಂತಾದ ಸಮಸಾಮಯಿಕ ವಸ್ತುಗಳನ್ನೇ ಚಿತ್ರಣಕ್ಕೆ ಆರಿಸಿಕೊಳ್ಳತೊಡಗಿದರು. ಮೊಗಲಾಯಿ ಮತ್ತು ದಕ್ಖಣಿ ಪ್ರಕಾರಗಳೂ ಹೀಗೆ ಮಾರ್ಪಟ್ಟವು; ಐರೋಪ್ಯ ರೀತಿಯ ವ್ಯಕ್ತಿಚಿತ್ರಗಳೇ ಹೊರಬಂದವು. ಇಂಗ್ಲೆಂಡಿನಿಂದ ಬಂದ ಅಧಿಕಾರಿಗಳೂ ವರ್ತಕರೂ, ಶ್ರೀಮಂತರೂ ತಮ್ಮೊಂದಿಗೆ ಇಂಗ್ಲಿಷ್ ಚಿತ್ರಗಾರರನ್ನೂ ಕರೆತಂದು ಅವರಿಗೆ ಇಲ್ಲಿ ನೆಲೆಯನ್ನು ಕಲ್ಪಿಸಿಕೊಟ್ಟರು. ನಮ್ಮವರಿಗೆ ಅವರು ಗುರುಗಳೂ ಆದರು!

ಇದು ಕಂಪೆನಿಕಾಲದ ಚಿತ್ರಕಲೆಯ ಘಟ್ಟ. ಗೋಲ್ಕೊಂಡದಲ್ಲಿದ್ದ ದಕ್ಖನಿ ಶೈಲಿಯು ಕಂಪೆನಿಯ ಚಿತ್ರಗಾರರಿಂದ ಪ್ರಭಾವಿತವಾಗಿ ಮುಂದೆ ಅದು ತಂಜಾವೂರಿನಲ್ಲಿ ಬೆಳೆದುಬಂದಿತು. ತಂಜಾವೂರಿನ ಮರಾಠಾ ದೊರೆ ಶರಭೋಜಿ (೧೭೭೮-೧೮೩೨) ಪಾಶ್ಚಾತ್ಯ ಸಂಸ್ಕೃತಿಯನ್ನು ಬಹುವಾಗಿ ಮೆಚ್ಚಿಕೊಂಡಿದ್ದವನು. ಡೇನಿಷ್ ಚಿತ್ರಗಾರನೊಬ್ಬನನ್ನು ಅರಮನೆಯಲ್ಲಿರಿಸಿಕೊಂಡು ಅವನ ಬಳಿ ಚಿತ್ರಕಲಾಭ್ಯಾಸವನ್ನೂ ಮಾಡಿದ್ದವನು. ಅವನು ಕಲಿತದ್ದು ಐರೋಪ್ಯ ಪದ್ಧತಿಯ ಕಲೆಯನ್ನೇ. ಹೀಗಾಗಿ ತಂಜಾವೂರಿನ ಚಿತ್ರಕಲಾಶೈಲಿಯಲ್ಲಿ ದಕ್ಖನಿಮೂಲದ ಮೇಲೆ ಕಂಪೆನಿ ಪ್ರಭಾವ ಬಲವಾದುದನ್ನು ಗುರುತಿಸಬಹುದು.

ನಮ್ಮ ಪುಣ್ಯಕ್ಕೆ ೧೮೮೦ರ ತರುವಾಯ ಈ ಕಂಪೆನಿಶೈಲಿ ಮರೆಯಾಗುತ್ತ ಬಂದಿತು. ಆನೆಯ ದಂತದ ಮೇಲೆ ಮಾಡುತ್ತಿದ್ದ ಚಿಕಣಿಚಿತ್ರ ಸಂಪ್ರದಾಯವೊಂದು ಹಾಗೂ ಹೀಗೂ ಉಳಿದುಕೊಂಡು ಬಂದಿತು. ಫೋಟೊಗ್ರಾಫಿ, ಲಿತೋಗ್ರಫಿ, ಎನ್‌ಗ್ರೇವಿಂಗ್ ಇಂಥವು ಜನಪ್ರಿಯವಾಗತೊಡಗಿದ ಮೇಲೆ ಕಂಪೆನಿಶೈಲಿಯ ಚಿತ್ರಗಾರರಿಗೆ ಆಸರೆ ತಪ್ಪಿತು. ಮತ್ತೆ ಒಂದು ಬಗೆಯ ಸಾಂಸ್ಕೃತಿಕ ಪುನರುಜ್ಜೀವನ ನಮ್ಮ ದೇಶದಲ್ಲಿ ಮೊದಲಾಗಿ, ನಮ್ಮವರಿಗೆ ಸ್ವಾಭಿಮಾನವೂ ತಲೆದೋರತೊಡಗಿತು. ಮೈಸೂರಿನ ಅರಸೊತ್ತಿಗೆಯವರಿಗೆ ಈ ವಿಚಾರದಲ್ಲಿ ಪ್ರಶಂಸೆ ಸ್ವಲ್ಪಮಟ್ಟಿಗೆ ಸಲ್ಲುತ್ತದೆ. ಮುಮ್ಮಡಿಯವರಂತೂ ನಮ್ಮ ಸಂಸ್ಕೃತಿಯಲ್ಲಿ ಮುಳುಗಿದ್ದವರು; ಕಲೆ, ಸಾಹಿತ್ಯ, ಸಂಗೀತ, ಧರ್ಮ ಎಲ್ಲದರಲ್ಲೂ ಅವರಿಗೆ ಅಭಿಮಾನ ಮಾತ್ರವಲ್ಲ, ವಿಶೇಷವಾದ ಪರಿಚಯವೂ ಇದ್ದಿತು. ಮುಮ್ಮಡಿಯವರು ತಮ್ಮ ಅಧಿಕಾರವನ್ನು ಇಂಗ್ಲಿಷ್ ಆಳರಸರಿಂದ ಮತ್ತೆ ಪಡೆದುಕೊಳ್ಳಲು ಹಾತೋರೆಯುತ್ತಿದ್ದರಾಗಿ, ಬೇರೆ ದಾರಿಯಿಲ್ಲದೆ ಅವರ ಸ್ತೋತ್ರಪಾಠವನ್ನು ಸಮಯ ಸಿಕ್ಕಾಗಲೆಲ್ಲ ಮಾಡುತ್ತಿದ್ದರು; ಅವರ ಮನಃಸಮಾಧಾನಕ್ಕೆಂದು ಮೈಸೂರಿನಲ್ಲಿ ಇಂಗ್ಲಿಷ್ ಶಾಲೆಯೊಂದನ್ನೂ ತೆರೆದರು. ಆದರೆ ಮನಸಾರೆ ಅವರನ್ನು ಮೆಚ್ಚಿಕೊಂಡಿದ್ದಂತೆ ಕಾಣುವುದಿಲ್ಲ.

ಅವರ ಆದರವಿದ್ದುದು ವಿಜಯನಗರ ಸಾಮ್ರಾಜ್ಯದ ಆಶೋತ್ತರಗಳ ಮೇಲೆ. ಹೀಗಾಗಿ ಅವರ ಪ್ರೋತ್ಸಾಹದಿಂದ ಇಲ್ಲಿ ಬೆಳೆದ ಚಿತ್ರ, ಶಿಲ್ಪ ಎರಡೂ ವಿಜಯನಗರದ ಶೈಲಿಗಳನ್ನು ಅಳವಡಿಸಿಕೊಂಡವು. ತಂಜಾವೂರಿನಲ್ಲಾದಂತೆ ಗೋಲ್ಕೊಂಡಾ ದಕ್ಖಣಿ ಶೈಲಿ, ಕಂಪೆನಿ ಶೈಲಿಗಳ ದಾರಿಯನ್ನು ಹಿಡಿಯಲಿಲ್ಲ. ವಿಜಯನಗರದ ಚಿತ್ರಶೈಲಿಯಲ್ಲೂ ಮುಂದೆ ಬಿಜಾಪುರ ದಕ್ಖಣಿಶೈಲಿ, ರಜಪುತಶೈಲಿ ಎರಡರ ಸಮಾವೇಶವಾದುದುಂಟು. ಮುಮ್ಮಡಿಯವರ ಕಾಲದ ಚಿತ್ರಗಳಲ್ಲಿ ಇದನ್ನು ಗುರುತಿಸಬಹುದು. ಕಂಪೆನಿ ಶೈಲಿ ಮಾತ್ರ ಇಲ್ಲಿ ತಲೆ ಹಾಕಲಿಲ್ಲ. ಪ್ರಾಚೀನ ಕಲಾಸಂಪ್ರದಾಯದ ಮೂಲಭೂತ ವಿವರಗಳು ಮರೆಯಾಗದೆ ಮೊಗಲಾಯಿ, ರಾಜಸ್ಥಾನ, ದಕ್ಖಣಿಶೈಲಿಗಳಲ್ಲೂ ಉಳಿದುಬಂದಿತೆನ್ನುವುದನ್ನು ಮೈಸೂರಿನ ಶೈಲಿ ಸಮರ್ಥಿಸುತ್ತದೆ.[೨]

ಮುಮ್ಮಡಿಯವರಿಗೆ ಪರ್ಶಿಯನ್, ಹಿಂದುಸ್ಥಾನಿ, ಮರಾಠಿ ಭಾಷೆಗಳ ಪರಿಚಯ ಚೆನ್ನಾಗಿದ್ದಿತೆಂದು

---

೦೨. (ಸಂ.) ಎಸ್. ಕೆ. ರಾಮಚಂದ್ರರಾವ್ : ಶ್ರೀ ತತ್ವನಿಧಿ ಸಂಪುಟ ೧ ಪುಟ ೪೨-೪೪

ಉಲ್ಲೇಖವಿದೆ. ಅಂದಮೇಲೆ ಆ ಭಾಷೆಗಳಲ್ಲಿನ ಸಾಹಿತ್ಯವೂ, ಅದರಲ್ಲಿ ಪ್ರಕಟವಾಗುವ ಸಂಸ್ಕೃತಿಯೂ ಅವರಿಗೆ ತಿಳಿದಿದ್ದಿರಬೇಕು. ಆ ಭಾಷೆಗಳನ್ನಾಡುವ ಜನರೊಂದಿಗೆ ಒಡನಾಟವೂ ಇದ್ದಿರಬಹುದು. ಚಿತ್ರಕಲೆಯಲ್ಲಿ ಇಷ್ಟು ಆಸಕ್ತಿಯಿದ್ದವರು ಪರ್ಶಿಯನ್, ಮೊಗಲಾಯಿ, ದಕ್ಷಣಿ ಮೊದಲಾದ 'ಕಲಂ'ಗಳ ನಿದರ್ಶನಗಳನ್ನೂ ಕಂಡಿರಬೇಕು. ಸೂಕ್ಷ್ಮವೇದಿಗಳಾದ ಇವರು ತಮ್ಮ ಚಿತ್ರಗಾರರಿಗೆ ಮಾರ್ಗದರ್ಶನ ಮಾಡುವಾಗ ಇವನ್ನೆಲ್ಲ ಬಳಸಿಕೊಂಡಿರಲಾರರೆ? ಈ ಕಾಲದ ಚಿತ್ರಗಳೆಲ್ಲ ಹೀಗೆಯೇ ಎಂದು ಹೇಳಬರುವುದಿಲ್ಲ. ಮೈಸೂರು ರಾಜಮಂದಿರ, ಭಜನೆಮನೆ, ಗುಡಿ, ಮಠ ಮೊದಲಾದೆಡೆ ಕಾಣಸಿಗುವ ಆ ಕಾಲದ ಚಿತ್ರಗಳಲ್ಲಿರುವ ಸಂವಿಧಾನವೇ ಬೇರೆ. ಎರಡನೆಯ ವರ್ಗದ ನಿದರ್ಶನಗಳಲ್ಲಿ ಪರ್ಶಿಯನ್, ಮೊಗಲಾಯಿ, ದಕ್ಷಣಿ ಶೈಲಿಗಳ ಪ್ರಭಾವವಿರದು; ವಿಜಯನಗರ ಶೈಲಿಯ ಮುಂದುವರಿಕೆಯಿದೆ ಅಷ್ಟೆ. ಆ ಕಾಲದ ರೇಖಾಚಿತ್ರಗಳಂತೂ ಸಂಪ್ರದಾಯದ ಚೌಕಟ್ಟಿನಲ್ಲಿ ಇವೆ.[೩]

ಮೈಸೂರು ಶೈಲಿಯ ವರ್ಣಚಿತ್ರಕಲೆಗೆ ಮೈಸೂರು ನಗರದಲ್ಲಿರುವ ಜಗನ್ಮೋಹನ ಅರಮನೆಯನ್ನು ಒಂದು ಪ್ರಮುಖ ಉದಾಹರಣೆಯನ್ನಾಗಿ ಹೇಳಬಹುದಾಗಿದೆ. ಕ್ರಿ.ಶ. ೧೮೬೧ರಲ್ಲಿ ಇದನ್ನು ನಿರ್ಮಿಸಲಾಯಿತು. ಜಗನ್ಮೋಹನ ಅರಮನೆಯ ಎರಡನೆಯ ಮಹಡಿಯಲ್ಲಿರುವ ಗೋಡೆಗಳ ಮೇಲೆ ಒಡೆಯರ ರಾಜವಂಶದ ವಂಶಾವಳಿಯನ್ನು ಚಿತ್ರಿಸಲಾಗಿದೆ. ಇದಲ್ಲದೆ ಮೈಸೂರು ಸಂಸ್ಥಾನದ ದಿವಾನರಾಗಿ ಕಾರ್ಯ ನಿರ್ವಹಿಸಿದ ವ್ಯಕ್ತಿಗಳ ಭಾವಚಿತ್ರವನ್ನು ಚಿತ್ರಿಸಲಾಗಿದೆ. ಸಂಭ್ರಮದ ದಸರೆಯ ಪ್ರಸಿದ್ಧ ಜಂಬೂಸವಾರಿ, ಮುಮ್ಮಡಿ ಕೃಷ್ಣರಾಜ ಒಡೆಯರ 'ವಂಶಾವತರಣ ವೈಭವ' ಎಂಬ ಹೆಸರನ್ನು ಹೊಂದಿರುವ ಗೋಡೆಯ ಮೇಲಿನ ಚಿತ್ರಣ ಚಿತ್ತಾಕರ್ಷಕವಾಗಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರ 'ಶ್ರೀತತ್ವನಿಧಿ' ಎಂಬ ಗ್ರಂಥ ಕೃತಿಕರ್ಮ, ಕೌಶಲಗಳ ಸಾಕ್ಷಿಯಾದ ವಸ್ತುಪ್ರಾವೀಣ್ಯತೆ, ಶಾಸ್ತ್ರ ಪಾಂಡಿತ್ಯದಿಂದ ಕೂಡಿ ೧೮೮೮ ವರ್ಣಚಿತ್ರಗಳು ಮತ್ತು ೪೫೮ ರೇಖಾಚಿತ್ರಗಳನ್ನು ಹೊಂದಿರುವ ಅದ್ಭುತ ಕೃತಿ. ಶ್ರೀತತ್ವನಿಧಿಯನ್ನು ಮೈಸೂರು ಚಿತ್ರಕಲಾಶೈಲಿಯ ಕೋಶವೆಂದು ಕರೆಯುವದರಲ್ಲಿ ತಪ್ಪೇನಿಲ್ಲ. ಈ ಅವಧಿಯಲ್ಲಿಯೇ ಗಂಜೀಫಾ ಚಿತ್ರಕಲೆ ವಿಕಾಸಗೊಂಡಿತು. ಇದು ರಾಜಮನೆತನದ ಸದಸ್ಯರು ಆಡಲು ಬಳಸುತ್ತಿದ್ದ ದಪ್ಪನೆಯ ರಟ್ಟಿನ ಮೇಲೆ ಬರೆದ ಸೂಕ್ಷ್ಮ ಪ್ರತಿರೂಪ ಚಿತ್ರಲೇಖನ. ಒಡೆಯರು ಚಾಮುಂಡೇಶ್ವರಿ ಗಂಜೀಫಾ, ಜಗನ್ಮೋಹನ ಗಂಜೀಫಾ, ಪಂಚಪಾಂಡವ ಗಂಜೀಫಾ, ನವಗ್ರಹ ಗಂಜೀಫಾ, ದಿಕ್ಪಾಲ ಗಂಜೀಫಾ ಮುಂತಾದ ವಿಶೇಷ ಕಲೆಗೆ ಕಾರಣರಾದರು. ಒಡೆಯರು ಹಲವು ವಿದೇಶಿ ಚಿತ್ರಕಲಾವಿದರಾದ ಗೆರಾಲ್ಡೈನ್, ಜರ್ಮನಿಯ ವ್ಯಾಂಡ್ಡಿಲ್, ಸ್ಟರ್ಲಿಂಗ್ ರಾಬರ್ಟ್ಸ್ ಕಾಟ್, ಗ್ರೇಟ್ ಬ್ರಿಟನ್ನಿನ ವೆಕಸ್ಲರ್ ಮೊದಲಾದವರಿಗೂ ಪ್ರೋತ್ಸಾಹವನ್ನು ನೀಡಿ ಆದರಿಸಿದ್ದರು.

ಗಂಜೀಫಾ ಚಿತ್ರಗಳಲ್ಲಿ ಮುಖ್ಯವಾಗಿ ಧಾರ್ಮಿಕ ಹಾಗೂ ಸಾಂಪ್ರದಾಯಿಕ ಚಿತ್ರಗಳ ಪ್ರಭಾವ ಪ್ರಧಾನವಾಗಿ ಕಂಡುಬರುತ್ತದೆ. ಗಂಜೀಫಾ ಚಿತ್ರಗಳು ಧಾರ್ಮಿಕತೆ, ಅಲಂಕಾರಿಕತೆ, ಕಾಲ್ಪನಿಕತೆಯ ಸೂತ್ರಗಳನ್ನು ಅನುಸರಿಸುತ್ತವೆ. ಯಾವುದೇ ಕಲೆಯು ಒಂದು ವ್ಯವಸ್ಥೆಯನ್ನು ಸೃಜಿಸುತ್ತದೆ. ಅದರಂತೆ ಅನೇಕ ಕಲೆಗಳು ಒಂದರೊಳಗೊಂದು ವಿಲೀನಗೊಂಡು ಆಯಾ ಕಲೆಗಳ ಮೇಲೆ ಪ್ರಭಾವ ಬೀರುತ್ತವೆ. ಕಲೆಯ ಸಾರ ವೈಯಕ್ತಿಕವಲ್ಲ. ಅದು ಜನಪರವಾದದ್ದು. ಕಲಾಕಾರ ಪರಂಪರೆಯ ಪ್ರತಿನಿಧಿಯಾಗಿ ವರ್ತಿಸುತ್ತಾನೆ. ಹೀಗಾಗಿ ಈ ಕಲಾವಿದರು ಆಶಯ ಹಾಗೂ ಕಾಲಮಾನವನ್ನು ಗಮನಿಸಿ, ರಾಜರ ಆಜ್ಞೆಯಂತೆ ತಮ್ಮ ಅಭಿರುಚಿಯನ್ನು ಅಭಿವ್ಯಕ್ತಿಗೊಳಿಸಿದ್ದಾರೆ.

---

೦೩. (ಸಂ.) ಎಸ್. ಕೆ. ರಾಮಚಂದ್ರರಾವ್ : ಶ್ರೀ ತತ್ವನಿಧಿ ಸಂಪುಟ ೧ ಪುಟ ೪೮

ಗಂಜೀಫಾ ಚಿತ್ರಗಳನ್ನು ಇಲ್ಲಿ ಮುಖ್ಯವಾಗಿ ಧಾರ್ಮಿಕ ಹಾಗೂ ಧಾರ್ಮಿಕೇತರವಾಗಿ ವಿಭಾಗಿಸಿಕೊಂಡು ಆ ಚಿತ್ರಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿಯನ್ನು ಕುರಿತು ವಿವೇಚಿಸಲಾಗುತ್ತದೆ. ಧಾರ್ಮಿಕವಾಗಿ ಶೈವ ಸಂಪ್ರದಾಯಕ್ಕೆ ಸಂಬಂಧಿಸಿದ, ವೈಷ್ಣವ ಸಂಪ್ರದಾಯಕ್ಕೆ ಸಂಬಂಧಿಸಿದ ಹಾಗೂ ರಾಮಾಯಣ, ಮಹಾಭಾರತ ಹಿಂದೂಧರ್ಮಕ್ಕೆ ಸಂಬಂಧಿಸಿದ ವಿಷಯಗಳ ಪ್ರಭಾವ ಪ್ರಧಾನವಾಗಿ ಗೋಚರಿಸುತ್ತದೆ. ರಾಮಾಯಣ, ಮಹಾಭಾರತಗಳಂತಹ ಮಹಾಕಾವ್ಯಗಳ ಧರ್ಮಸಾರವನ್ನು ಪ್ರಕಟಪಡಿಸುವುದಲ್ಲದೇ, ನಮ್ಮ ಪುರಾಣ-ಶಾಸ್ತ್ರಗಳ ಹಾಗೂ ಧಾರ್ಮಿಕ ಪುರುಷರ ವೇಷ-ಭೂಷಣಗಳಲ್ಲಿ, ರೂಪ-ಲಕ್ಷಣಗಳಲ್ಲಿ ಆಯಾ ಕಾಲಮಾನದ ಚಿತ್ರಕಲೆಯ ಪ್ರಭಾವವು ಬಿಂಬಿತವಾಗಿದೆ. ಅಲ್ಲದೇ ಪ್ರಾದೇಶಿಕ ಆಚರಣೆಯ ವಿಧಿ-ವಿಧಾನಗಳನ್ನು ತರಲಾಗಿದೆ. ಇಲ್ಲಿ ವಿಶೇಷವಾಗಿ ಶಿವ-ಪಾರ್ವತಿ, ಗಣಪ, ವೀರಭದ್ರ, ಉಮಾಮಹೇಶ್ವರ, ಶಂಕರ, ಚಾಮುಂಡೇಶ್ವರಿ, ಷಣ್ಮುಖ, ವಿಷ್ಣು, ಬ್ರಹ್ಮ ಹೀಗೆ ಹಲವಾರು ದೇವಾನುದೇವತೆಗಳ ರೂಪ-ಲಕ್ಷಣಗಳು ಶೈವಸಂಪ್ರದಾಯದ ಹಿನ್ನೆಲೆಯಲ್ಲಿ ಅಭಿವ್ಯಕ್ತಿಗೊಂಡಿದ್ದು, ಆಯಾ ದೇವತೆಗಳ ಸಂಕೇತಗಳು, ಉಡುಗೆ-ತೊಡುಗೆಗಳು, ದೇಹದಾರ್ಢ್ಯ, ಆಭರಣ ವಿನ್ಯಾಸಗಳು, ವಿಷಯ ಸನ್ನಿವೇಶಗಳು ಹಾಗೂ ವರ್ಣವೈವಿಧ್ಯಗಳು ರಸಭಾವ ನಿರೂಪಣೆಯಿಂದ ಕೂಡಿವೆ. ಈ ಪ್ರತಿಮೆಗಳಲ್ಲಿ ಧಾರ್ಮಿಕ ಭಕ್ತಿ, ಭಯ ಹಾಗೂ ಭಾವಪರವಶತೆಯ ಪ್ರಭಾವ ಎದ್ದು ತೋರುತ್ತದೆ. ಚಿತ್ರ ಸಂಖ್ಯೆ- ರಾಮ, ಇನ್ನೊಂದು ಎಲೆಯಲ್ಲಿ ಸೀತಾ ಮತ್ತು ಲಕ್ಷ್ಮಣ ಬಿಡಿ ಬಿಡಿ ಚಿತ್ರಗಳಾಗಿವೆ. ಇಲ್ಲಿ ಕಲಾವಿದನು ೩ ಇಂಚು ಹಾಗೂ ೪ ಇಂಚು ಚೌಕಾಕಾರದ ಎಲೆಯಲ್ಲಿ ರಾಮನ ಸಂಯೋಜನೆ ಮಾಡಲಾಗಿ ಕುಳಿತಿರುವ ಭಂಗಿ, ಭಾವ ನಿರೂಪಣೆ, ಉಡುಗೆ-ತೊಡುಗೆಗಳು ಹಾಗೂ ಹಿನ್ನೆಲೆಯು ಒಬ್ಬ ಸುಸಂಸ್ಕೃತ ದಂಪತಿಗಳ ಅನ್ಯೋನ್ಯ ಬದುಕಿನ ಆಶಯವನ್ನು ಅಭಿವ್ಯಕ್ತಿಸುತ್ತದೆ.

ಶಿವನ ಇನ್ನೊಂದು ಅವತಾರರೂಪ ಕಂಕಾಳ ಮೂರ್ತಿ ವಿಶಿಷ್ಟ ಸ್ವರೂಪದಿಂದ ಪ್ರಕಟಗೊಂಡರೆ, ವೀರಭದ್ರ ಸೂಟ್‌ನಲ್ಲಿ ಚಿತ್ರದಲ್ಲಿ ಅವನ ಉಗ್ರ ಸ್ವರೂಪ ಹಾಗೂ ಶಕ್ತಿಯನ್ನು ನಿರೂಪಿಸುತ್ತದೆ. ಬಾಲಕೃಷ್ಣನ ಚಿತ್ರಗಳು, ಕೃಷ್ಣ, ಬಲರಾಮ,ವಿಷ್ಣುವಿನ ದಶಾವತಾರಗಳ ಕಾಲ್ಪನಿಕ ಸನ್ನಿವೇಶಗಳನ್ನು ಅಭಿವ್ಯಕ್ತಿಸುವ ವೈಷ್ಣವ ಪರಂಪರೆಯನ್ನು ಅನುಸರಿಸುವ ಚಿತ್ರಗಳಲ್ಲಿ ಆಯಾ ವ್ಯಕ್ತಿಗೆ ಸಂಬಂಧಿಸಿದಂತೆ ದೈಹಿಕ ದಾರ್ಢ್ಯ, ಉಡುಗೆ-ತೊಡುಗೆ, ಭಾವ ನಿರೂಪಣೆ ಈ ಪರಂಪರೆಯ ಧಾರ್ಮಿಕತೆಯ ಪ್ರಭಾವವಿಲ್ಲಿ ಉದ್ದೀಪನೆಗೊಂಡಿದೆ. ಈ ದೇವತೆಗಳ ಪ್ರತಿಮೆಗಳಲ್ಲಿ ಆಯಾ ದೇವತೆಗಳ ವ್ಯಕ್ತಿತ್ವದ ದೇಹಸಿರಿಯನ್ನು ದೇವತೆಗಳಾದ ಬ್ರಹ್ಮ, ವಿಷ್ಣು, ಸರಸ್ವತಿ, ಲಕ್ಷ್ಮೀ ಚಿತ್ರಗಳಲ್ಲಿ ಆ ದೇವತೆಗಳ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತವೆ.

ಕೆಲವು ಚಿತ್ರಗಳಲ್ಲಿ ಭಾರತೀಯ ಸಾಂಪ್ರದಾಯಿಕ ಚಿತ್ರಗಳ ಪ್ರಭಾವ ಕಂಡುಬರುತ್ತದೆ. ಕೆಲವು ಚಿತ್ರಗಳಲ್ಲಿ ಜನಪದರ ಆಶಯದ ಹಾಗೂ ಅಲಂಕಾರ ಆಶಯದ ಪ್ರಭಾವವು ಗೋಚರಿಸುತ್ತದೆ. ಸ್ತ್ರೀ ಹಾಗೂ ಪುರುಷ ದೇವತೆಗಳ ದೈಹಿಕ ಲಕ್ಷಣಗಳನ್ನು ತರುವಲ್ಲಿ ಆಭರಣಗಳನ್ನು ಸಂಯೋಜಿಸುವಲ್ಲಿ, ಉಡುಪುಗಳನ್ನು ಸಂಯೋಜಿಸುವಲ್ಲಿ ಹಾಗೂ ಚಿತ್ರದ ಹಿನ್ನೆಲೆಯನ್ನು ಸಂಯೋಜಿಸುವಲ್ಲಿ ಈ ಪ್ರಭಾವಗಳ ವೈಪರೀತ್ಯಗಳನ್ನು ಗಮನಿಸಬಹುದು. ಕೆಲವೊಂದು ಸಲ ಗಂಜೀಫಾ ಚಿತ್ರಕಲಾವಿದರು ಸ್ವತಂತ್ರವಾಗಿ ವಿಷಯ ವಿವೇಚನೆ ಮಾಡದೇ ಆ ಸಂದರ್ಭದಲ್ಲಿ ಪ್ರಚಲಿತವಿದ್ದ ಸಾಂಪ್ರದಾಯಿಕ ಕಲಾಪ್ರಕಾರಗಳನ್ನು ಅನುಸರಿಸಿರಬಹುದೆಂದು ತೋರುತ್ತದೆ. ಉದಾಹರಣೆಗೆ ಚೌಕಾಕಾರದಲ್ಲಿ ರಚಿಸಿದ ಗಂಜೀಫಾಗಳು. ಹೀಗಾಗಿ ಈ ಗಂಜೀಫಾ ಚಿತ್ರಗಳಲ್ಲಿ ಒಂದು ನಿರ್ದಿಷ್ಟತೆಯನ್ನು ಕಾಣಬಹುದು.



ದಾಸಿ ಎಲೆ



ಕಂಕಾಳ ಮೂರ್ತಿ (ಜನನ್ಮೋಹ ಗಂಜೀಪಾ)



ಜಾಕಿ ಎಲೆ



ಚಕ್ರವತಿ ಎಲೆ



ರಾಣಿ ಜಾಕಿ ಎಲೆ



ರತಿ ರಾಣಿ ಎಲೆ

ಸಂಗ್ರಹ ; ಜಗನ್ಮೋಹನ ವಸ್ತುಸಂಗ್ರಹಾಲಯ ಮೈಸೂರು

ಧಾರ್ಮಿಕ ಗಂಜೀಫಾ ಚಿತ್ರ : ದೇವರ ಸಾನ್ನಿಧ್ಯದಲ್ಲಿ ಈ ಆಟ ನಡೆಯುತ್ತಿದ್ದರಿಂದ ಮನೋರಂಜನೆಯೊಂದಿಗೆ ಮನಸ್ಸು ಆಧ್ಯಾತ್ಮಿಕದ ಮೆಲಕನ್ನು ಹಾಕುತ್ತಿತ್ತು. ಕೈಯಲ್ಲಿ ದೇವರುಗಳ ಚಿತ್ರಗಳಿರುವುದರಿಂದ ಭಕ್ತಿಭಾವ ಸದಾ ಜಾಗೃತವಾಗಿರುತ್ತಿತ್ತು. ಚಿತ್ರಗಳನ್ನು ಕುರಿತು ಹೇಳುವುದಾದರೆ ದಶಾವತಾರಗಳಿಗೆ ಸಂಬಂಧಿಸಿದ ಘಟನೆಗಳನ್ನು ಅಧಿಕವಾಗಿ ಚಿತ್ರಗಳಲ್ಲಿ ಸಂಯೋಜನೆಗೊಳಿಸಲಾಗಿದೆ. ಹೀಗಾಗಿ ನೋಡುವವರಿಗೆ, ಆಡುವವರಿಗೆ ದೈವೀಭಾವ, ಭಕ್ತಿ ಹುಟ್ಟುವಂತೆ ಅವು ಕಾಣಿಸಿಕೊಳ್ಳುತ್ತವೆ. ದಶಾವತಾರಗಳಲ್ಲದೇ ರಾಮಾಯಣ, ಮಹಾಭಾರತ, ನವಗ್ರಹಗಳು, ಚಾಮುಂಡೇಶ್ವರಿಯಂತಹ ದೈವ ಮೂಲದ ಚಿತ್ರಗಳು ಇಲ್ಲಿರುತ್ತವೆ.

ಧಾರ್ಮಿಕೇತರ ಗಂಜೀಫಾ ಚಿತ್ರ : ಗಂಜೀಫಾ ಎಲೆಗಳಲ್ಲಿ ಧರ್ಮ, ದೈವದ ಚಿತ್ರಗಳಲ್ಲದೇ ಸಾಂಕೇತಿಕ ಚಿತ್ರಗಳು ರಚನೆಗೊಂಡಿವೆ. ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ, ಹಾಗೂ ದೇವಾನುದೇವತೆಗಳ ಆಯುಧಗಳಾದ ಕತ್ತಿ, ಕೊಡಲಿ, ಬಿಲ್ಲು, ಬಾಣ, ಧ್ವಜ, ರಾಶಿಗೆ ಸಂಬಂಧಪಟ್ಟಂತೆ ಮೀನು, ಸಿಂಹ, ಇತ್ಯಾದಿ ಚಿತ್ರಗಳನ್ನು ಸಣ್ಣಗಾತ್ರದ ಗಂಜೀಫಾ ಎಲೆಗಳಲ್ಲಿ ಕಾಣುತ್ತೇವೆ. ಆಯಾ ಆಟದ ಸನ್ನಿವೇಶದ ಔಚಿತ್ಯಕ್ಕನುಗುಣವಾಗಿ ಇವುಗಳನ್ನು ಚಿತ್ರಿಸಲಾಗಿದೆ.

ಒಟ್ಟಿನಲ್ಲಿ ದುಂಡನೆಯ ಆಕಾರದ ಈ ಬಿಲ್ಲೆಗಳ ಮೇಲ್ಗಡೆಯ ವಿನ್ಯಾಸಕ್ಕೆ ಹೆಚ್ಚು ಪ್ರಾಧಾನ್ಯವಿದೆ. ಹಿಂಬದಿ ಮಾತ್ರ ಖಾಲಿಯಾಗಿದ್ದು ಯಾವುದಾದರೂ ಬಣ್ಣದ ಲೇಪನವಿರುತ್ತದೆ. ಬಿಲ್ಲೆಯ ನಡುವೆ ವರ್ತುಲದಲ್ಲಿ ಚಿತ್ರವಿರುತ್ತದೆ. ಚಿತ್ರವನ್ನು ಒಳಗಿಟ್ಟುಕೊಂಡ ಮತ್ತೊಂದು ವರ್ತುಳವಿದ್ದು ಚಿತ್ರದಿಂದ ಈ ದೊಡ್ಡ ವರ್ತುಳದ ಮಧ್ಯದ ಜಾಗವನ್ನು ಸುಳುಹು, ಅಲಂಕಾರಗಳು ಅವರಿಸುತ್ತವೆ. ಆದರೆ ಮಧ್ಯ ವರ್ತುಳದಲ್ಲಿರುವ ಪ್ರಧಾನ ಚಿತ್ರವೇ ಈ ಕೇಂದ್ರ ವಸ್ತು. ಉಳಿದೆಲ್ಲವೂ ನಂತರದ ಸ್ಥಾನಕ್ಕೆ ಮೀಸಲು.ಇವು ಪ್ರಾದೇಶಿಕ ಶೈಲಿಯಲ್ಲಿ ರಚನೆಗೊಂಡು, ಆಯಾ ಪ್ರದೇಶದ ವ್ಯಾಪ್ತಿಯನ್ನು ವರ್ಗೀಕರಿಸುವಲ್ಲಿ ಪ್ರಾಧಾನ್ಯತೆಯನ್ನು ತೋರುತ್ತಿದ್ದವು.[೪]

೧೮ ಹಾಗೂ ೧೯ನೇ ಶತಮಾನದಲ್ಲಿ ರಚನೆಗೊಂಡಿರುವ ಬಹುತೇಕ ಗಂಜೀಫಾ ಚಿತ್ರಗಳು ಕರ್ನಾಟಕದ ಮೈಸೂರಿನಲ್ಲಿ ಕಂಡುಬರುತ್ತವೆ. ಈ ಶತಮಾನದ ಗಂಜೀಫಾ ಚಿತ್ರಗಳನ್ನು, ಮೈಸೂರಿನ ಜಗನ್‌ಮೋಹನ ಅರಮನೆ ಮತ್ತು ಜಾನಪದ ವಸ್ತುಸಂಗ್ರಹಾಲಯ, ಧರ್ಮಸ್ಥಳದ ಮಂಜೂಷಾ ವಸ್ತುಸಂಗ್ರಹಾಲಯ ಹಾಗೂ ಇಂದಿನ ಗಂಜೀಫಾ ಕಲಾವಿದರಾದ ಸುಧಾ ವೆಂಕಟೇಶ, ಚಂದ್ರಿಕಾ ಪದ್ಮನಾಭನ್, ರಘುಪತಿ ಭಟ್ ಅವರ ಸಂಗ್ರಹದಲ್ಲಿರುವುದನ್ನು ಕಾಣಬಹುದು. ಇತ್ತೀಚಿನ ಗಂಜೀಫಾ ಚಿತ್ರಗಳಲ್ಲಿ ಆಧುನಿಕ ರೀತಿಯ ರಚನಾ ವೈವಿಧ್ಯವು ಕಂಡುಬರುತ್ತಿದ್ದು ಇತ್ತೀಚಿನ ತಂತ್ರಗಾರಿಕೆಯನ್ನು ಬಳಸಿಕೊಂಡು ಸಿಂಥೆಟಿಕ್ ವರ್ಣಗಳಿಂದ ಈಗಿನ ಗಂಜೀಫಾ ಕಲಾವಿದರು ಹೊಸ ಶೈಲಿಗೆ ಇಳಿದಿದ್ದಾರೆ. ಐತಿಹಾಸಿಕ ಹಿನ್ನೆಲೆಯ ಸ್ತ್ರೀ-ಪುರುಷರ ಚಿತ್ರಗಳು ಹಾಗೂ ದೇವಾನುದೇವತೆಗಳ ಸಂಯೋಜನಾ ಚಿತ್ರಗಳು ಸಾಕಷ್ಟು ಸಂಖ್ಯೆಯಲ್ಲಿ ರೂಪಗೊಂಡಿದ್ದನ್ನು ಮನಗಾಣಬಹುದು. ಇವು ಕೂಡ ಭಾರತೀಯ ಹಾಗೂ ವಿದೇಶಿ ಕಲಾವಿದರಿಂದ ರಚಿಸಲ್ಪಟ್ಟಿವೆ. ಕೆಲವು ಚಿತ್ರಗಳು ಭಾರತೀಯ ಸಂಪ್ರದಾಯದ ಪ್ರತಿಮೆಗಳನ್ನು ಹೊಂದಿದ್ದರೆ, ಕೆಲವೊಂದು ಯುರೋಪಿಯನ್ ಶೈಲಿಯ ಗಂಜೀಫಾಗಳನ್ನು ದಖನ್‌ದಲ್ಲಿ ಕಾಣಬಹುದು. ದಖನ್‌ದ ಗಂಜೀಫಾಗಳಲ್ಲಿ ಸ್ಥಳೀಯ ರಾಜ, ರಾಣಿಯರು ಹಾಗೂ ಬ್ರಿಟಿಷ್ ಅಧಿಕಾರಿಗಳ ಚಿತ್ರಗಳು ಕಂಡುಬರುತ್ತವೆ.

---

೦೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ ೧೬೧

ಧಾರ್ಮಿಕೇತರ ಗಂಜೀಫಾದಲ್ಲಿ ದಖನ್‌ದಲ್ಲಿ ಬಹಳ ವ್ಯತ್ಯಾಸವನ್ನು ಕಾಣಬಹುದಾಗಿದೆ. ಆನೆಗಳ ಹಿಂಡು, ಕುದುರೆಗಳು, ಕುದುರೆ ಕಾದಾಟ, ಕುದುರೆಗಳು ಲೈಂಗಿಕತೆಯಲ್ಲಿ ತೊಡಗಿರುವುದು, ಒಂಟೆಗಳು, ರಾಜ ಚಿಗರೆ ಬೇಟೆಯಾಡುವುದು, ನಾಯಿಗಳ ಹಿಂಡು, ಕರಡಿಗಳನ್ನು ಪಳಗಿಸುತ್ತಿರುವುದು, ಎತ್ತುಗಳು (ನಂದಿ), ಚಿಗರೆಗಳ ಗುಂಪು, ಹುಲಿಗಳ ಗುಂಪು, ಬಾತುಕೋಳಿಗಳು ಹೀಗೆ ಅನೇಕ ಧಾರ್ಮಿಕೇತರ ಚಿತ್ರಗಳಲ್ಲಿ ತಾವು ಹೊರಗಡೆ ಬೇಟೆಗೆ ಹೋದಂತಹ ಸಂದರ್ಭದಲ್ಲಿ ಪ್ರಾಣಿಗಳ ಚಲನ-ವಲನಗಳ ಕುರಿತು ಗಂಜೀಫಾ ಆಟಕ್ಕೆ ಸಂಬಂಧಿಸಿದಂತೆ ಅನೇಕ ಚಿತ್ರಗಳನ್ನು ಗಂಜೀಫಾಎಲೆಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಇನ್ನೂ ವಿಶೇಷವೆಂದರೆ ದರ್ಬಾರಿನ ಒಳಗಡೆ ರಾಜ ಮಹಾರಾಜರ ನಿತ್ಯ ಜೀವನದಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಗಂಜೀಫಾದಲ್ಲಿ ಚಿತ್ರಿಸುವುದು ವಿಶೇಷ. ಅವುಗಳಲ್ಲಿ ರಾಜ ಶಿಕ್ಷೆ ನೀಡುತ್ತಿರುವುದು, ಗಂಜೀಫಾ ಆಡುತ್ತಿರುವುದು, ರಾಜರು ಮಹಿಳೆಯರ ಜೊತೆ ವಿಲಾಸೀಜೀವನ ನಡೆಸುತ್ತಿರುವುದು, ಮದ್ಯಪಾನ ಮಾಡುತ್ತಿರುವುದು ಹೀಗೆ ರಾಜರ ನಿತ್ಯ ಜೀವನದ ವಿಲಾಸೀ ಜೀವನವನ್ನು ಗಂಜೀಫಾ ಕಲಾವಿದರು ಆಟದ ಎಲೆಗಳಲ್ಲಿ ಸೃಷ್ಟಿಸಿದ್ದಾರೆ.

ಆಯಾ ಕಾಲಮಾನದ ವ್ಯಕ್ತಿಗಳ ಶ್ರೀಮಂತಿಕೆಯ ಬದುಕು, ಅಧಿಕಾರ ಹಾಗೂ ಸ್ತ್ರೀ-ಪುರುಷರ ಸ್ವಚ್ಛಂದ ಬದುಕಿನ ಪ್ರಭಾವಗಳು ಇವರ ಚಿತ್ರಗಳಲ್ಲಿ ಪ್ರಧಾನವಾಗಿ ಮೂಡಿವೆ. ಅಂದಿನ ಕಲಾವಿದರಿಗೆ ರಾಜ-ಮಹಾರಾಜರೆಂದರೆ ಗಂಧರ್ವರಿದ್ದಂತೆ ಎಂಬ ಭಾವನೆ. ರಾಜನು ಸಾಮಾನ್ಯ ಪೋಷಾಕಿನಲ್ಲಿ ಇದ್ದರೂ ರಾಣಿಯನ್ನು ಗಂಧರ್ವ ಕನ್ಯೆಯಂತೆ ಚಿತ್ರಿಸಿ, ರಾಜನಿಗೂ ತನ್ನ ಪಟ್ಟದ ರಾಣಿ ಗಂಧರ್ವ ಕನ್ಯೆ ಎಂಬಂತಹ ಭಾವಗಳನ್ನು ತುಂಬುವಷ್ಟರ ಮಟ್ಟಿಗೆ ಕಲಾವಿದರಿಗೆ ಅರಮನೆಯ ಜೀವನಪದ್ಧತಿಯು ಪ್ರಭಾವ ಬೀರಿದೆ. ಗೌಪ್ಯವಾಗಿರುತ್ತಿದ್ದ ಅರಮನೆಯ ಶೃಂಗಾರ ಘಟನೆಗಳನ್ನು ಅತ್ಯಂತ ದಿಟ್ಟತನದಿಂದ ಹೊರಜಗತ್ತಿಗೆ ಚಿತ್ರದ ಮೂಲಕ ಅನಾವರಣಗೊಳಿಸಿರುವ ಕಲಾವಿದರು ಚಿತ್ರಗಳಲ್ಲಿ ಭಾವಪ್ರಚೋದಕ ಗುಣಗಳನ್ನು ತುಂಬಿದ್ದಾರೆ. ರಾಜ, ರಾಣಿಯರ ಚಿತ್ರಗಳನ್ನು ಅರಮನೆಯ ವಿಲಾಸೀ ಜೀವನದ ಪ್ರಭಾವದಿಂದ ಕಲಾವಿದರು ರಚಿಸಿದ್ದು ಇಲ್ಲಿನ ಗಂಜೀಫಾ ಚಿತ್ರಗಳಲ್ಲಿ ಕಂಡುಬರುತ್ತದೆ. ಚಿತ್ರಗಳಿಗೆ ಅಲಂಕಾರಿಕ ಪೋಷಾಕುಗಳನ್ನು ಚಿತ್ರಿಸಿರುವ ಕಲಾವಿದರು, ಹಿನ್ನಲೆಯಲ್ಲಿ ವೈಭವೀಕರಣ ನೀಡಿಲ್ಲ.

ದಖನ್‌ದಲ್ಲಿ ವಿಜಯನಗರ ಸಾಮ್ರಾಜ್ಯ ಹಾಗೂ ದಖನ್ ಸುಲ್ತಾನ ರಾಜ್ಯಗಳು ಪತನ ಹೊಂದಿದ ನಂತರ ೧೮ನೇ ಶತಮಾನದಲ್ಲಿ ಕೇಂದ್ರೀಕೃತ ಆಡಳಿತ ಕೊನೆಗೊಂಡು ಸ್ಥಳೀಯ ಸಾಮಂತರು ತಲೆ ಎತ್ತಿದರು. ಈ ಸಾಮ್ರಾಜ್ಯಗಳಲ್ಲಿ ಸ್ಥಾಪನೆಯಾಗಿದ್ದ ಚಿತ್ರಕಲಾ ಕಾರ್ಖಾನೆಗಳು ರಾಜಾಶ್ರಯವಿಲ್ಲದೆ ಮುಚ್ಚತೊಡಗಿದವು. ಇಲ್ಲಿ ಕೆಲಸ ಮಾಡುತ್ತಿದ್ದ ಕಲಾವಿದರು ಚಿಕ್ಕಪುಟ್ಟ ಅರಸರ ಅಥವಾ ಶ್ರೀಮಂತ ಐರೋಪ್ಯ ಅಧಿಕಾರಿಗಳನ್ನು ಆಶ್ರಯಿಸಿದರು. ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳು ಈ ಕಲಾವಿದರಿಂದ ತಮ್ಮ ವೈಯಕ್ತಿಕ ಚಿತ್ರಗಳನ್ನು ಹಾಗೂ ತಮ್ಮ ಮೆಚ್ಚಿನ ಪ್ರಾಣಿ, ಪಕ್ಷಿ, ನಾಡಿನ ಐತಿಹಾಸಿಕ ಸ್ಮಾರಕ ಇತ್ಯಾದಿಗಳನ್ನು ರಚಿಸಿಕೊಳ್ಳುತ್ತಿದ್ದರು. ಹೀಗಾಗಿ ಸ್ಥಳೀಯ ಹಾಗೂ ಐರೋಪ್ಯ ಕಲಾವಿದರು ಈ ಪ್ರಭಾವೀ ವ್ಯಕ್ತಿಗಳ ಚಿತ್ರಗಳನ್ನು ಬರೆದು ಉದರ ತುಂಬಿಸಿಕೊಳ್ಳುತ್ತಿದ್ದರು. ಮುಂಬೈ, ಗೋವಾ, ವಿಶಾಖ ಪಟ್ಟಣ, ಮದ್ರಾಸ್, ಹೈದ್ರಾಬಾದ್ ಮುಂತಾದ ಸ್ಥಳಗಳು ಕಂಪನಿ ಚಿತ್ರಕಲೆಯ ಪ್ರಮುಖ ಕೇಂದ್ರಗಳಾಗಿದ್ದವು. ಈ ಕೇಂದ್ರಗಳ ಮೂಲಕ ಜನರ ಬೇಡಿಕೆಗನುಗುಣವಾಗಿ, ಆಟಕ್ಕೆ ಅನುಗುಣವಾಗಿ ಗಂಜೀಫಾ ಚಿತ್ರ ಬರೆದು ಆಟಕ್ಕೆ ಅನುವು ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಆಟದ



(l to r) Surkh 5, Ghulam 8 (4)



Shamsher mir, Ghulam 2,3,5,6,10 (2)

ಎಲೆಗಳ ಬೇಡಿಕೆ ಅಪಾರ ಪ್ರಮಾಣದಲ್ಲಿದ್ದುದು ಕಂಡುಬರುತ್ತದೆ. ಶ್ರೀಮಂತ ಹಾಗೂ ಅಧಿಕಾರಿಗಳ ಪ್ರೇರಣೆಯೇ ಈ ಚಿತ್ರಗಳಿಗೆ ಕಾರಣವಾಗಿದೆ.

ಪ್ರಕೃತಿಯನ್ನು ನಿದರ್ಶಿಸುವ ಹಲವಾರು ನಿಸರ್ಗದೃಶ್ಯಗಳು ಮೊಘಲರ ಗಂಜೀಫಾ ಆಟದ ಎಲೆಗಳ ಮೇಲೆ ಚಿತ್ರಿತಗೊಂಡಿದ್ದನ್ನು ಕಾಣುತ್ತೇವೆ. ಈ ಚಿತ್ರಗಳು ವೈವಿಧ್ಯಮಯ ಚೌಕಾಕಾರ ಹಾಗೂ ವೃತ್ತಾಕಾರದಲ್ಲಿ ಚಿತ್ರಿತಗೊಂಡಿವೆ. ಈ ಚಿತ್ರಗಳು ಅಲಂಕಾರಿಕ ಆಶಯಗಳನ್ನು ಹೊಂದಿದ್ದು ಗಿಡ, ಮರ, ಬೆಟ್ಟ, ನವಿಲು, ಆನೆ, ಬಾತುಕೋಳಿ, ಗಿಳಿ, ಪಾರಿವಾಳ, ಚಿಗರೆ, ಹುಲಿ, ಕರಡಿ ಹಾಗೂ ಇತರ ಪಕ್ಷಿಗಳ ಸಮೂಹವು ಚಿತ್ರಗಳಲ್ಲಿ ಅಭಿವ್ಯಕ್ತಗೊಂಡಿವೆ. ಇಂತಹ ಚಿತ್ರಗಳು ಜನರ ಪರಿಸರಪ್ರಜ್ಞೆಯನ್ನು ಹಾಗೂ ಸಕಲ ಪ್ರಾಣಿಗಳ ಹಾಗೂ ಪಕ್ಷಿಗಳ ಮೇಲಿನ ಪ್ರೀತಿಯನ್ನು ನಿದರ್ಶಿಸುತ್ತವೆ. ಈ ಜನರ ಪರಿಸರ ಕಾಳಜಿಯ ಪ್ರಭಾವದಿಂದ ಗಂಜೀಫಾ ಎಲೆಗಳಲ್ಲಿ ಪರಿಸರದ ಚಿತ್ರಗಳು ಒಡಮೂಡಿವೆ. ಗಂಜೀಫಾ ಎಲೆಗಳಲ್ಲಿ ಅಲಂಕಾರಿಕ ನೆಲೆಯಲ್ಲಿಅನೇಕ ನಕ್ಷಾವಿನ್ಯಾಸಗಳನ್ನೊಳಗೊಂಡ ಚಿತ್ರಗಳು ರಚನೆಗೊಂಡಿವೆ. ಇವು ಸಂಪೂರ್ಣ ಅಲಂಕಾರಿಕ ಆಶಯ, ಸಾಂಪ್ರದಾಯಿಕ ಹಾಗೂ ಆಧುನಿಕ ರೀತಿಯ ರೇಖಾ ವಿನ್ಯಾಸಗಳಿಂದ ಕೂಡಿವೆ. ಪ್ರಕೃತಿಯಲ್ಲಿ ಕಂಡುಬರುವ ಪ್ರಾಣಿ, ಪಕ್ಷಿಗಳು, ಎಲೆಗಳು, ಹೂಗಳು, ಬಳ್ಳಿಗಳು ಹಾಗೂ ವೈವಿಧ್ಯಮಯ ವಸ್ತುಗಳನ್ನು ಜ್ಯಾಮಿತಿಕವಾಗಿ, ನೈಸರ್ಗಿಕವಾಗಿ ಹಾಗೂ ಅಲಂಕಾರಿಕವಾಗಿ, ಚಿತ್ರವಿನ್ಯಾಸಗಳ ಮೂಲಕ ಬಿಂಬಿಸಲಾಗಿದೆ. ಈ ಚಿತ್ರಗಳಿಗೆ ಮೂಲಪ್ರೇರಣೆ ಪ್ರಕೃತಿಯಲ್ಲಿರುವ ಸಸ್ಯಸಂಪತ್ತು ಹಾಗೂ ಪ್ರಾಣಿ ಸಂಪತ್ತೇ ಕಾರಣವೆನ್ನಬಹುದು. ಇಂಥ ಚಿತ್ರಗಳಲ್ಲಿ ಕಲಾಕಾರರ ಕುಶಲತೆಯು ಅನಾವರಣಗೊಂಡಿದೆ.

ತಂತ್ರ ಮತ್ತು ಶೈಲಿ

ಕರ್ನಾಟಕದ ಗಂಜೀಫಾ ಚಿತ್ರಗಳು ಗಾತ್ರದಲ್ಲಿ ಬಂಗಾಳದ(ವಿಷ್ಣು)ಪುರದ ಗಂಜೀಫಾಗಳಿಗಿಂತ ಚಿಕ್ಕವಾಗಿರುತ್ತವೆ. ಅಲ್ಲಿ ಸುಮಾರು ಐದು ಅಂಗುಲ ವ್ಯಾಸವುಳ್ಳ ಬಟ್ಟೆಯಿಂದ ತಯಾರಿಸಿದ ರಟ್ಟಿನ ಮೇಲೆ ಚಿತ್ರಿಸುತ್ತಾರೆ. ಆಂಧ್ರದ ಹೈದ್ರಾಬಾದ್‌ನಲ್ಲಿ ಮರದ ಹಾಳೆಗಳ ಮೇಲೆ ಚಿತ್ರಿಸುತ್ತಾರೆ. ಇವಕ್ಕೆ ನಿರ್ಮಲ್ ಗಂಜೀಫಾ ಎಂದೂ ಕರೆಯಲಾಗುತ್ತದೆ. ಓರಿಸ್ಸಾದ ಗಂಜೀಫಾ ಚಿತ್ರಗಳು 'ಪುರಿಯ' ಜಗನ್ನಾಥನ ಪ್ರಭಾವ, ಪ್ರೇರಣೆ ಪಡೆದಿರುತ್ತವೆ. ಸಾವಂತವಾಡಿಯ ಚಿತ್ರಗಳು ದಶಾವತಾರಕ್ಕೆ ಪ್ರಾಧಾನ್ಯ ನೀಡಿವೆ. ಮೈಸೂರಿನ ಚಿತ್ರಗಳು ವರ್ತುಳಾಕಾರ, ಸೂಕ್ಷ್ಮವಾದ ಈ ಚಿತ್ರಗಳ ವರ್ಣವಿನ್ಯಾಸವು. ಕಿರುಚಿತ್ರ ಪರಂಪರೆಯನ್ನು ಹೋಲುತ್ತದೆ. ಇಂಥ ಕಿರುರೂಪ ಚಿತ್ರಗಳ ಪರಂಪರೆಯ ಹುಟ್ಟು ಹಾಕಿದವರು ಕರ್ನಾಟಕದವರೇ ಎಂಬುದೇ ಹೆಮ್ಮೆಯ ಸಂಗತಿಯಾಗಿದೆ.

ಯಾವ ಪ್ರದೇಶದಲ್ಲಿ ಈ ಚಿತ್ರಗಳು ಸಿದ್ಧಗೊಂಡಿರುತ್ತವೆಯೋ ಆ ಪ್ರದೇಶಗಳ ಹೆಸರಿನಿಂದ ಕರೆಯಲಾಗುತ್ತದೆ. ಕೆಲವು ಸಲ ಸಿದ್ಧಪಡಿಸಿದ ಕಲಾವಿದನ ಹೆಸರಿನಿಂದಲೂ ಗಂಜೀಫಾವನ್ನು ಕರೆಯುವ ರೂಢಿ ಇದೆ. ಕರ್ನಾಟಕೇತರ ಪ್ರದೇಶಗಳಲ್ಲಿ ಕರ್ನಾಟಕದ ಗಂಜೀಫಾಗಳು ಕರ್ನಾಟಕದ ಗಂಜೀಫಾಗಳೆಂದೇ ಹೆಸರು ಹೊತ್ತಿವೆ. ಮೈಸೂರು ಭಾಗದಲ್ಲಿ ಗಂಜೀಫಾ ಚಿತ್ರದಲ್ಲಿ ಉಬ್ಬು ವಿನ್ಯಾಸದ ಶೈಲಿ ಇದ್ದರೆ, ಉತ್ತರ ಕರ್ನಾಟಕದ ಮೊಘಲ್ ಅರಸರ ಪ್ರಭಾವ, ಮುಸ್ಲಿಂ ಶೈಲಿ, ವರ್ಣಗಾರಿಕೆಯ ಶ್ರೀಮಂತಿಕೆಯನ್ನು ಗುರುತಿಸುತ್ತೇವೆ. ಈ ಭಾಗದ ಗಂಜೀಫಾ ಚಿತ್ರಗಳು ಅಂಗವಿನ್ಯಾಸ, ಪೀಠ, ಆಭರಣಗಳ ಅಲಂಕಾರ, ಮೊದಲಾದವುಗಳಲ್ಲಿ ಪ್ರಾದೇಶಿಕ ವೈಶಿಷ್ಟ್ಯನ್ನು ಮೈಗೂಡಿಸಿಕೊಂಡಿರುತ್ತವೆ.

ಗಂಜೀಫಾ ಚಿತ್ರಗಳ ಪ್ರಾದೇಶಿಕ ವೈಶಿಷ್ಟ್ಯ

ಕಲಾವಿದರ ವಿಭಿನ್ನ ಮನೋಧರ್ಮಗಳಿಗೆ ಪ್ರಾದೇಶಿಕ ಗಂಜೀಫಾ ಕಲೆಯ ವೈಶಿಷ್ಟ್ಯವೆಂದು ಹೇಳಬೇಕಾಗುತ್ತದೆ. ಅವರು ಬೆಳೆದ ಪರಿಸರ, ಹೊಂದಿದ ಧೋರಣೆ, ಬೀರಿದ ಪ್ರಭಾವಕ್ಕೆ ಒಳಗಾಗಿ ಗಂಜೀಫಾ ಎಲೆಯ ಚಿತ್ರ ರಚನೆಗೊಂಡಿರುವುದನ್ನು ನೋಡುತ್ತೇವೆ. ಪ್ರಾಚೀನ ಭಾರತೀಯ ಎಲೆಯಲ್ಲಿ ದಶಾವತಾರದ ಹತ್ತು ರಂಗುಗಳಿದ್ದವು; ರಾಶಿಚಿತ್ರಗಳಿದ್ದವು. ಫ್ರಾನ್ಸ್, ಇಟಲಿ, ಸ್ಪೇನಿನ ಎಲೆಗಳಲ್ಲಿ ನಾಲ್ಕು ಚಕ್ರವರ್ತಿಗಳ ಚಿತ್ರವಿರುತ್ತದೆ. ಕಾಲಕ್ರಮದಲ್ಲಿ ಕಪ್ಪು, ಕೆಂಪು ಬಣ್ಣದ ಬಳಕೆ ಹೆಚ್ಚಾಗುತ್ತ ಆಕಾರ, ಸಂಖ್ಯಾಕ್ರಮ, ಅಲಂಕಾರ ನಿರಂತರ ಬದಲಾಗುತ್ತ ಬಂದಿತು. ಫ್ರಾನ್ಸಿನಲ್ಲಿ ಈ ಎಲೆಗಳಿಗೆ ಮೊದಲು ಆಧುನಿಕ ರೂಪ ಬಂದಿತು. ಪ್ರಥಮ ಬಾರಿಗೆ ಅವರು ಬಳಸಿದ ನಾಲ್ಕು ಪ್ರತೀಕಗಳೇ ಮುಂದೆ ವಿಶ್ವದಾದ್ಯಂತ ಪ್ರಚಲಿತವಾದವು. ಏಳನೆಯ ಮತ್ತು ಎಂಟನೆಯ ಹೆನ್ರಿಗಳ ಕಾಲದಿಂದ (ಕ್ರಿ.ಶ. ೧೫-೧೬ನೆಯ ಶತಕ) ಇದೊಂದು ಪರಂಪರೆಯಾಯಿತು. ಚೌಕವಾಗಿ, ಉದ್ದವಾಗಿ, ದುಂಡನೆಯ ಆಕಾರದಲ್ಲಿದ್ದ ಎಲೆಗಳು ಈಗ ಆಯತಾಕಾರದಲ್ಲಿ ಮಾತ್ರ ತಯಾರಾಗುತ್ತಿವೆ. ಪ್ರಾರಂಭದಲ್ಲಿ ೬x೪ ಆಕಾರದ ಕಟ್ಟಿಗೆಯ ಬ್ಲಾಕ್‌ಗಳನ್ನು ತಯಾರಿಸಿ ಅದರ ಮೇಲೆ ಕೈಯಿಂದ ಮಾಡಲಾಗುತ್ತಿತ್ತು. ಫ್ರಾನ್ಸಿನ ನಾಲ್ಕನೆಯ ದೊರೆ ಚಾರ್ಲ್ಸನು ಒಬ್ಬ ಕಲಾವಿದನಿಗೆ ಇಂಥ ಚಿತ್ರ ಬಿಡಿಸಿದ್ದಕ್ಕೆ ೫೦೦ ಫ್ರಾಂಕ್ ಬಹುಮಾನ ನೀಡಿದ ವಿವರ ತಿಳಿದುಬರುತ್ತದೆ.

ಕರ್ನಾಟಕದ ಗಂಜೀಫಾ ಚಿತ್ರಗಳು ಆಕಾರದಲ್ಲಿ ಚಿಕ್ಕಗಾತ್ರದವಾಗಿವೆ. ಇವು ಸೂಕ್ಷ್ಮವಾದ, ಹಿತಮಿತವಾದ ಮಿಶ್ರವರ್ಣವಿನ್ಯಾಸಗಳಿಂದ ಕೂಡಿರುತ್ತವೆ. ಓರಿಸ್ಸಾ, ಬಿಷ್ಣುಪುರದ ಗಂಜೀಫಾ ಚಿತ್ರಗಳಲ್ಲಿ ಬಣ್ಣಗಳ ಗಡಸುತನವಿದೆಯಲ್ಲದೆ ಅವುಗಳದೇ ಆದ ವೈಶಿಷ್ಟ್ಯವೂ ಇದೆ. ಮೈಸೂರುಭಾಗದಲ್ಲಿ ವಿಜಯನಗರ ಪರಂಪರೆಯ ಅಪ್ಪಟ ಹಿಂದೂ ಸಂಸ್ಕೃತಿಯ ಸಂಕೇತಗಳಾಗಿ ಚಿತ್ರಗಳು ಈ ಎಲೆಯಲ್ಲಿ ಕಾಣಿಸಿಕೊಂಡರೆ, ಸಾವಂತವಾಡಿಯ ಭಾಗದಲ್ಲಿ ಮುಸ್ಲಿಂ ಸಂಸ್ಕೃತಿಯ ಪ್ರಭಾವವನ್ನು ಗುರುತಿಸಬಹುದಾಗಿದೆ.

ಗಂಜೀಫಾ ಚಿತ್ರಕಲೆ ಮೂಲತಃ ಪಾಶ್ಚಿಮಾತ್ಯ ಕಲೆ. ಈ ಕಲೆಯು ಭಾರತದಲ್ಲಿ ೧೭-೧೮ನೆಯ ಶತಮಾನಗಳಲ್ಲಿ ಕಾಣಿಸಿಕೊಂಡು ೨೧ನೆಯ ಶತಮಾನದ ತನಕವೂ ಪ್ರಚಲಿತದಲ್ಲಿದೆ. ಅದರಲ್ಲೂ ವಿಶೇಷವಾಗಿ ೧೮-೧೯ನೆಯ ಶತಮಾನಗಳ ಕಾಲಾವಧಿಯಲ್ಲಿ ಉತ್ತುಂಗ ಸ್ಥಿತಿಯಲ್ಲಿತ್ತೆಂದು ಹೇಳಬಹುದು. ಗಂಜೀಫಾ ಕಲೆಯು ಪಾಶ್ಚಿಮಾತ್ಯರ ವ್ಯಾಪಾರದ ಮೂಲಕ ಭಾರತದ ಕರಾವಳಿ ಪ್ರದೇಶಗಳಲ್ಲಿ ಕಾಣಿಸಿಕೊಂಡಿತು. ಅದರಲ್ಲಿ ಕರ್ನಾಟಕದ ಕರಾವಳಿ ಭಾಗವೂ ಒಂದಾಗಿದೆ. ಗಂಜೀಫಾ ಕಲೆಯನ್ನು ಪರ್ಷಿಯಾ, ಯುರೋಪ್, ಚೀನಾ ವ್ಯಾಪಾರಸ್ಥರು ವಿಪುಲವಾಗಿ ಬಳಸಿಕೊಂಡು ಸಮುದ್ರತೀರದ ಮೂಲಕ ಕರಾವಳಿ ದೇಶಗಳಿಗೆ ರಪ್ತು ಮಾಡುತ್ತಿದ್ದರು. ಕ್ರಮೇಣ ಸ್ವತಃ ಚೀನಾ ಕಲಾವಿದರು ಪರ್ಷಿಯನ್ ಶೈಲಿಯ ಈ ಕಲೆಯ ತಂತ್ರಗಳನ್ನು ಸರಿಯಾಗಿ ಬಳಸಿಕೊಂಡು, ತಮ್ಮದೇ ವಿಷಯಗಳನ್ನು ಹಾಗೂ ತಂತ್ರಗಳನ್ನು ವಿನಿಯೋಗಿಸಿಕೊಂಡು ಸ್ವತಂತ್ರ ಶೈಲಿಯಲ್ಲಿ ಚಿತ್ರಗಳನ್ನು ಬರೆಯಲು ಪ್ರಾರಂಭಿಸಿದರು. ಟಿಪ್ಪು ಸುಲ್ತಾನನು ಯುರೋಪ್, ಪರ್ಷಿಯಾ ರಾಷ್ಟ್ರಗಳ ಜೊತೆ ಅದರಲ್ಲೂ ಫ್ರೆಂಚರ ಜೊತೆಗೆ ಉತ್ತಮ ವಾಣಿಜ್ಯ ವಹಿವಾಟನ್ನು ಹೊಂದಿದ್ದನು. ಇದರ ಪರಿಣಾಮವಾಗಿ ಯುರೋಪ್, ಪರ್ಷಿಯಾ ವ್ಯಾಪಾರಿಗಳು ಹಾಗೂ ಕಲಾವಿದರು ಮತ್ತು ಇತರ ಕುಶಲಗಾರರು ಭಾರತಕ್ಕೆ ಬಂದು ನೆಲೆಯೂರುವಂತಾಯಿತು. ಇವರಿಗೆ ವ್ಯಾಪಾರ ಮಾಡಲು ಮುಕ್ತ ಅವಕಾಶ ಮಾಡಿಕೊಟ್ಟಿದ್ದರಿಂದ



ಚಕ್ರವರ್ತಿ ಎಲೆ



ಬಲರಾಮ



ಮತ್ಸ್ಯ ರಾಜನ ಧ್ವಜದ ಎಲೆ



ಬಲರಾಮ



ಕಲ್ಕಿ ಸೇನಾನಿ

ಸಂಗ್ರಹ ; ಜಗನ್ಮೋಹನ ವಸ್ತುಸಂಗ್ರಹಾಲಯ ಮೈಸೂರು

ಕಲಾವಿದರೂ ಸಹ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವಂತಾಯಿತು. ಸ್ವತಃ ಟಿಪ್ಪು ಸುಲ್ತಾನ ತನ್ನ ಆಸ್ಥಾನದಲ್ಲಿ ಯುರೋಪ್, ಪರ್ಷಿಯಾ ಕಲಾವಿದರನ್ನು ಕರೆಯಿಸಿ ಚಿತ್ರಗಳನ್ನು ಮಾಡಿಸುತ್ತಿದ್ದನು.

ಟಿಪ್ಪು ಸುಲ್ತಾನನ ಮರಣದ ನಂತರ ಬ್ರಿಟಿಷರ ಪ್ರಾಬಲ್ಯ ಹೆಚ್ಚಿ ಕಲಾವಿದರು ಹಾಗೂ ವ್ಯಾಪಾರಿಗಳು ಹೊಸ ತಿರುವುಗಳನ್ನು ಕಂಡುಕೊಂಡರು. ಕರ್ನಾಟಕದಲ್ಲಿ ಗಂಜೀಫಾ ಚಿತ್ರಗಳ ಉಗಮಕ್ಕೆ ಹಾಗೂ ಬೆಳವಣಿಗೆಗೆ ಟಿಪ್ಪುಸುಲ್ತಾನನು ಮೂಲ ಪ್ರೇರಣೆಯೆನ್ನಬಹುದು. ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಟಿಪ್ಪು ಸುಲ್ತಾನನಿಗೆ ಸಂಬಂಧಿಸಿದ ಹಾಗೂ ಅವನ ಸಮಕಾಲೀನ ವ್ಯಕ್ತಿಗಳ ಚಿತ್ರಗಳು ಸಂಗ್ರಹಗೊಂಡಿವೆ.

ಟೀಪುಸುಲ್ತಾನನ ನಂತರ ಯುರೋಪ್, ಚೀನಾ, ಪರ್ಷಿಯನ್ ಕಲಾವಿದರು ಇದ್ದರೂ ಸಹ ಮೈಸೂರು ಅರಸರು ವಿದೇಶೀಯರ ಚಿತ್ರಕಲೆಯನ್ನು ಮುಕ್ತವಾಗಿ ಒಪ್ಪದಿದ್ದರಿಂದ ಪಾಶ್ಚಿಮಾತ್ಯರ ಕಲೆ ಏಳ್ಗೆಯಾಗಲಿಲ್ಲ ಎಂದು ಜಯಾ ಅಪ್ಪಾಸ್ವಾಮಿಯವರ ಅಭಿಪ್ರಾಯವಾಗಿದೆ. ಮೈಸೂರು ಚಿತ್ರಶೈಲಿಯ ಚಿತ್ರಗಳಲ್ಲಿ ಮೂರು ಇಂಚು ಅಥವಾ ನಾಲ್ಕು ಇಂಚು ವೃತ್ತಾಕಾರದಲ್ಲಿ ಚಿಕ್ಕ ಗಾತ್ರದ ಗಂಜೀಫಾಗಳನ್ನು ನೋಡಬಹುದು. ಆಕೃತಿಗಳು ಸಹ ಚಿಕ್ಕ ಚಿಕ್ಕವಾಗಿ ಆಟಕ್ಕೆ ತಕ್ಕಂತೆ ಸಂಯೋಜನೆಗೊಂಡಿವೆ. ಧಾರ್ಮಿಕ ವಿಷಯಗಳನ್ನು ಒಳಗೊಂಡಿದ್ದು, ಆಡಂಬರತೆಯು ಕಂಡುಬರುವುದಿಲ್ಲ. ಸರಳ ಶೈಲಿಯ ರೇಖೆಗಳು, ವರ್ಣಸಂಯೋಜನೆ, ರೇಖಾಲಾವಣ್ಯವು ವಿಶಿಷ್ಟವಾಗಿದೆ. ಅಲಂಕಾರಕ್ಕಾಗಿ ಅಷ್ಟೊಂದು ಆಭರಣಗಳ ವೈಭವೀಕರಣ ಕಂಡು ಬರುವುದಿಲ್ಲವಾದರೂ ಸರಳತೆಯ ಅಲಂಕಾರ ಬಿಂಬಿತವಾಗಿದೆ. ಅದರಲ್ಲೂ ದೇವತೆಗಳ ಪ್ರತಿಮೆಗಳಿಗನುಗುಣವಾಗಿ ವಸ್ತ್ರಾಭರಣಗಳನ್ನು ಸಂಯೋಜಿಸಲಾಗಿದೆ.

೧೯೦೦ರ ಕೊನೆಯ ಭಾಗದಲ್ಲಿ ಮೈಸೂರು ಶೈಲಿಯ ಗಂಜೀಫಾ ಚಿತ್ರಗಳು ಧಾರ್ಮಿಕವಾಗಿದ್ದು, ಚಾಮುಂಡಿ, ವಿಷ್ಣು, ಬ್ರಹ್ಮ, ಸರಸ್ವತಿ, ಕೃಷ್ಣ, ಮಹಿಷಾಸುರ ಮರ್ದಿನಿ, ರಾಮ, ಶಿವ, ಪಾರ್ವತಿ ಇತ್ಯಾದಿ ಚಿತ್ರಗಳು ಮೈಸೂರು ಶೈಲಿಯಲ್ಲಿ ರಚನೆಗೊಂಡಿವೆ. ಈ ಚಿತ್ರಶೈಲಿಯಲ್ಲಿ ವಿಶೇಷವಾಗಿ ಚಿತ್ರಗಳ ಸುತ್ತಲೂ ಹೂವಿನ ನಕ್ಷಾವಿನ್ಯಾಸಗಳು ರೂಪಗೊಂಡಿವೆ. ಚಿತ್ರಗಳಿಗೆ ಇವು ಆಕರ್ಷಕ ಮೆರಗನ್ನು ಕೊಡುತ್ತವೆ. ಈ ಶೈಲಿಯ ಚಿತ್ರಗಳಲ್ಲಿ ಕೆಂಪು, ಹಳದಿ, ಬಿಳಿ, ನೀಲಿ, ಕಪ್ಪು, ಹಸಿರು ವರ್ಣಗಳಲ್ಲದೆ ಚಿನ್ನದ ರೇಖನ್ನು ವಿಶಿಷ್ಟವಾಗಿ ಬಳಸಿದ್ದಾರೆ. ಈ ಚಿತ್ರಶೈಲಿಯಲ್ಲಿನ ರೇಖೆಗಳು ಚಲನಾತ್ಮಕ ಹಾಗೂ ಜೀವಂತಿಕೆಯಿಂದ ಕೂಡಿವೆ. ಈ ಚಿತ್ರಗಳನ್ನು ಆಸ್ಥಾನದ ಸಾಂಪ್ರದಾಯಿಕ ವೃತ್ತಿಪರ ಕಲಾವಿದರು ರಚಿಸಿರಬಹುದೆಂದು ತೋರುತ್ತದೆ. ಕರ್ನಾಟಕದಲ್ಲಿ ಮೈಸೂರು ಅರಸರ ರಾಜಮನೆತನಗಳೂ ಗಂಜೀಫಾ ಕಲೆ ಮತ್ತು ಆಟಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದು ತಿಳಿದುಬರುತ್ತದೆ.

ಕರ್ನಾಟಕದಲ್ಲಿ ಕಂಡುಬರುವ ಗಂಜೀಫಾ ಆಟದ ಎಲೆಗಳ ಚಿತ್ರಗಳು ವೃತ್ತಿಪರ ಕಲಾವಿದರು, ಹವ್ಯಾಸಿ ಕಲಾವಿದರು, ಕುಶಲ ಕಲಾವಿದರು ಹಾಗೂ ಜನಪದ ಕಲಾವಿದರ ಕೈಯಲ್ಲಿ ಮೂಡಿ ಬಂದಿವೆ. ವೃತ್ತಿಪರ ಕಲಾವಿದರ ಚಿತ್ರಗಳಲ್ಲಿ ಶಿಷ್ಟತೆಯಿಂದ ಕೂಡಿದ ಪ್ರತಿಮೆಗಳು, ರೇಖೆಗಳು ವರ್ಣವೈವಿಧ್ಯದ ಸಂಯೋಜನೆ ಒಡಮೂಡಿವೆ. ಹವ್ಯಾಸಿ ಕಲಾವಿದರ ಚಿತ್ರಗಳಲ್ಲಿ ಕ್ರಮಬದ್ಧತೆಯನ್ನು ಅನುಸರಿಸಿಲ್ಲ. ಕುಶಲ ಕಲಾವಿದರ ಚಿತ್ರಗಳಲ್ಲಿ ಪರಿಕರಗಳ ವೈಭವೀಕರಣ, ಆಡಂಬರತೆ ಎದ್ದು ತೋರುತ್ತದೆ. ಜನಪದ ಚಿತ್ರ ಕಲಾವಿದರಲ್ಲಿ ಸ್ವಚ್ಛಂದ ರೇಖೆಗಳು, ನಿರ್ಭಯ ವರ್ಣವೈವಿಧ್ಯದ ವಿಷಯವಿವೇಚನೆಯು ಮೂಡಿ ಬಂದಿವೆ. ಇವರೆಲ್ಲರ ತಂತ್ರವು ಒಂದೇ ಆಗಿದ್ದರೂ ನಿರೂಪಣಾ ವಿಧಾನ ಹಾಗೂ ಅನುಭವದ ವೈಪರೀತ್ಯ ಕಂಡುಬರುತ್ತದೆ.

ಕರ್ನಾಟಕದಲ್ಲಿ ಸಂಗ್ರಹಗೊಂಡಿರುವ ಹಾಗೂ ಸಂಗ್ರಹೇತರ ಗಂಜೀಫಾ ಚಿತ್ರಗಳು ಬಹುತೇಕ ಮೈಸೂರು ಶೈಲಿ, ಕೇರಳ ಹಾಗೂ ಮರಾಠಾ ಶೈಲಿಯಲ್ಲಿ ಸ್ಪಷ್ಟವಾಗಿ ರಚನೆಗೊಂಡಿವೆ. ಈ ಎರಡು ಶೈಲಿಗಳಲ್ಲದೇ ಭಾರತೀಯ ಪ್ರಾದೇಶಿಕ ಚಿತ್ರಕಲೆಯ ಪ್ರಭಾವವು ಸಹ ಚಿತ್ರಗಳಲ್ಲಿ ಕಂಡುಬರುತ್ತದೆ. ಶೈಲಿ ಎಂಬುದನ್ನು ಅರ್ಥೈಸಬಹುದಾದರೆ ಯಾವುದೇ ಒಂದು ಕೆಲಸದ ನಿರ್ದಿಷ್ಟ ಕ್ರಮ, ಅಂದರೆ ಒಂದು ಕೆಲಸದ ನಿರ್ದಿಷ್ಟತೆಯನ್ನು ಗುರುತಿಸುವುದು. ಹೀಗಾಗಿ ಕಲೆಯ ಪ್ರಕಾರಗಳನ್ನು ಸಹ ಒಂದು ಕೆಲಸದ ಕ್ರಮ ಅಥವಾ ನಿರ್ದಿಷ್ಟತೆಯಿಂದ ಕಂಡುಕೊಳ್ಳಬಹುದು. ಗಂಜೀಫಾ ಚಿತ್ರಗಳಲ್ಲಿಯೂ ಸಹ ಇಂಥ ನಿರ್ದಿಷ್ಟತೆಯನ್ನು ಗುರುತಿಸುವುದೇ ಆ ಕಲೆಯ ಕಲಾಶೈಲಿಯ ಬಗೆ. ಕರ್ನಾಟಕದಲ್ಲಿ ಸಾಕಷ್ಟು ಬಗೆಯ ಸಾಂಪ್ರದಾಯಿಕ ಚಿತ್ರಶೈಲಿಗಳಿವೆ. ೧೮-೧೯ನೆಯ ಶತಮಾನಗಳ ಸಂದರ್ಭಗಳಲ್ಲಿ ಹಲವಾರು ಕಲಾಪ್ರಕಾರಗಳು ಹುಟ್ಟಿಕೊಂಡಿವೆ. ಉತ್ತರದಲ್ಲಿ ಮೊಘಲ್, ದಖನಿ, ವಿಜಯನಗರ ಅರಸರ ಪತನದ ನಂತರ ಅನೇಕ ಸಮ್ಮಿಶ್ರ ಶೈಲಿಗಳು ಉದಯಗೊಂಡವು. ಇವು ಒಂದು ಕಲಾಪ್ರಕಾರಗಳ ಜೊತೆಗೆ ಮಗದೊಂದು ಕಲಾಪ್ರಕಾರಗಳು ಮಿಲನಗೊಂಡು ಸ್ವತಂತ್ರ ಶೈಲಿಗಳಾಗಿ ಮಾರ್ಪಾಟುಗೊಂಡವು. ಅಂಥ ಕಲಾಶೈಲಿಗಳಲ್ಲಿ ತಂಜಾವೂರು, ಮರಾಠಾ, ಮೈಸೂರು ಪ್ರಮುಖವಾದವು.

ಮರಾಠರು, ಮೈಸೂರು ಅರಸರು ಗಂಜೀಫಾ ಚಿತ್ರಕಲೆ ಮತ್ತು ಆಟದ ವಿಧಾನಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ನೀಡಿ, ಈ ಕಲೆಯನ್ನು ಪ್ರೋತ್ಸಾಹಿಸಿ ಪೋಷಿಸಿದ ಕಾರಣದಿಂದಾಗಿ ಇಡೀ ದಕ್ಷಿಣ ಭಾರತದ ತುಂಬ ಈ ಕಲಾಪ್ರಕಾರವು ವ್ಯಾಪಿಸಿಕೊಂಡು ಅಸಂಖ್ಯ ಕಲಾಕೃತಿಗಳು ಬೆಳಕಿಗೆ ಬಂದವು. ಮರಾಠರ ಆಡಳಿತ ಸರದಾರ ಶಿವಾಜಿಯ ಹೋರಾಟಗಳಿಂದ ಪ್ರಾರಂಭಗೊಂಡು ರಾಜ್ಯಭಾರದ ಕೊನೆಯ ತನಕವೂ ಯುದ್ಧ ಮಾಡುವುದರಲ್ಲಿಯೇ ತೊಡಗಿತ್ತು. ಮರಾಠರ ಇತಿಹಾಸ ಕೇವಲ ಯುದ್ಧಗಳ ಇತಿಹಾಸವೆಂದು ವಿದ್ವಾಂಸರ ಅಭಿಪ್ರಾಯ. ಬೇರೆ ರಾಜ್ಯಗಳಲ್ಲಿ ಬೆಳೆದು ಬಂದಂತೆ ಕಲೆ, ವಾಸ್ತುಶಿಲ್ಪ ಮತ್ತು ಸಾಹಿತ್ಯ ಇವರ ಕಾಲದಲ್ಲಿ ಬೆಳೆದು ಬಂದಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಮರಾಠರು ಕೇವಲ ಮಹಾರಾಷ್ಟ್ರ ರಾಜ್ಯವಲ್ಲದೇ ದಕ್ಷಿಣದ ತಮಿಳುನಾಡಿನವರೆಗೂ ತಮ್ಮ ರಾಜ್ಯವನ್ನು ವಿಸ್ತಾರಗೊಳಿಸಿದರು. ಆ ಕಾರಣದಿಂದಾಗಿ ಉತ್ತರ ಮತ್ತು ದಕ್ಷಿಣ ಭಾರತದ ಕಲೆಯ ಕಲಾವಿದರು ಇವರ ಆಶ್ರಯ ಪಡೆದಿದ್ದರು. ಈ ವಿಭಿನ್ನ ಶೈಲಿಯ ಹಿನ್ನೆಲೆಯ ಕಲಾವಿದರಿಂದ ರಚನೆಯಾದ ಚಿತ್ರಕಲೆ ಮರಾಠರ ಆಶ್ರಯದಲ್ಲಿ ಬೆಳೆದು ಬಂದಿತು. ಇದು ಮರಾಠಾ ಚಿತ್ರಕಲೆ ಎಂದು ಕರೆಯಲ್ಪಡುತ್ತದೆ. ಹೀಗಾಗಿ ಇವರ ಕಲೆಯಲ್ಲಿ ಸಮ್ಮಿಶ್ರ ಶೈಲಿಗಳ ಜೊತೆಗೆ ಮರಾಠಾ ಚಿತ್ರಶೈಲಿ ಎಂದು ಗುರುತಿಸುವ ಮಟ್ಟಕ್ಕೆ ಬೆಳೆದು ಬಂದಿತು. ಇವರ ಕಲೆಯನ್ನು ಭಿತ್ತಿಚಿತ್ರಕಲೆ ಹಾಗೂ ಗಂಜೀಫಾ ಚಿಕಣಿ ಚಿತ್ರಕಲೆ ಎಂದು ವಿಭಾಗಿಸಿಕೊಂಡು ನೋಡಲಾಗುತ್ತದೆ. ಈ ಎರಡು ವಿಧಾನಗಳಲ್ಲಿ ಒಂದೇ ರೀತಿಯ ಶೈಲಿಯನ್ನು ಕಾಣಬಹುದಾಗಿದೆ. ಎಸ್.ಕೆ. ಅರುಣಿಯವರು ಮರಾಠರ ಚಿತ್ರಕಲೆಯ ಮುಖ್ಯ ಲಕ್ಷಣಗಳನ್ನು ಹೀಗೆ ಗುರುತಿಸುತ್ತಾರೆ : ಮರಾಠಾ ಚಿತ್ರಶೈಲಿಯ ಮುಖ್ಯ ಲಕ್ಷಣಗಳೆಂದರೆ ೧) ಮುಕ್ಕಾಲು ಭಾಗ ಪಾರ್ಶ್ವಮುಖವನ್ನು ಆಕೃತಿಗಳು ಹೊಂದಿವೆ. ೨) ಆಕೃತಿಗಳ ಗಾತ್ರ ಹಾಗೂ ಪ್ರಮಾಣತೆಗೆ ಪ್ರಾಧಾನ್ಯ ನೀಡಿಲ್ಲ. ೩) ಆಕೃತಿಗಳ ಸೌಂದರ್ಯಕ್ಕೆ ಹೆಚ್ಚು ಪ್ರಾಮುಖ್ಯ ಕೊಡಲಾಗಿದೆ. ೪) ಪುರುಷ ಹಾಗೂ ಸ್ತ್ರೀಯರ ಚಿತ್ರಗಳು ಸ್ಥಳೀಯ ಮರಾಠಾ ಜನಾಂಗದ ದೈಹಿಕ ಲಕ್ಷಣಗಳನ್ನು ಹೋಲುತ್ತವೆ. ೫) ಎತ್ತರವಾದ ಹಣೆ, ೬) ಚೂಪಾದ ಮೂಗು, ದಪ್ಪ ತುಟಿ, ಅಗಲವಾದ ಮುಖ, ೭) ನೀಳವಾದ

ಕೇಶ, ಚಿಕ್ಕ ಗಾತ್ರದ ಕತ್ತು, ಅಗಲವಾದ ಎದೆ ಇತ್ಯಾದಿ ಎಲ್ಲ ದೈಹಿಕ ಲಕ್ಷಣಗಳನ್ನು ಗಂಜೀಫಾ ಚಿತ್ರಗಳಲ್ಲಿ ಕಾಣಬಹುದಾಗಿದೆ.[೫]

ಸ್ತ್ರೀಯರ ಉಡುಪುಗಳು ಮಹಾರಾಷ್ಟ್ರದ ಸ್ತ್ರೀಯರು ಧರಿಸುವ ಶೈಲಿಯಲ್ಲಿದ್ದು ಸೀರೆ ಧರಿಸಿರುವರು. ಕೈಯಲ್ಲಿ ಬಳೆ, ಕೊರಳುಗಳಲ್ಲಿ ಮುತ್ತಿನ ಹಾಗೂ ಚಿನ್ನಾಭರಣಗಳು, ವಿವಿಧ ಬಗೆಯ ಕರ್ಣಾಭರಣಗಳು, ಮೂಗಲ್ಲಿ ಉದ್ದನೆಯ ಮುತ್ತಿನ ನತ್ತು ಧರಿಸಿದ್ದರೆ ಸ್ತ್ರೀಯರು ನೀಳವಾದ ಕೇಶವನ್ನು ಹೊಂದಿದ್ದು, ಅವುಗಳನ್ನು ಹಿಂಭಾಗದಲ್ಲಿ ಗಟ್ಟಿಯಾಗಿ ಕಟ್ಟಿಕೊಂಡಿರುವರು. ಪಶ್ಚಿಮ ಮಹಾರಾಷ್ಟ್ರದ ಮಹಿಳೆಯರು ಹಣೆಯ ಮೇಲೆ ಅಡ್ಡಲಾಗಿ ಗೆರೆಯಂತೆ ಕುಂಕುಮ ಧರಿಸುವ ಸಂಪ್ರದಾಯವಿದ್ದು, ಅದೇ ರೀತಿಯ ಕುಂಕುಮವನ್ನು ಚಿತ್ರದ ಸ್ತ್ರೀಯರು ಹಣೆಯ ಮೇಲೆ ಧರಿಸಿರುವರು. ಇವರ ಚಿತ್ರಗಳಲ್ಲಿ ಪ್ರಧಾನ ಆಕೃತಿಯನ್ನು ತೋರಿಸಬೇಕಾದರೆ ವಿಶಿಷ್ಟವಾದ ಅಲಂಕಾರ ಮಾಡಿದ್ದು ಕಂಡುಬರುತ್ತದೆ.[೬]

ಮರಾಠಾ ಚಿತ್ರಗಳಲ್ಲಿ ಆಕೃತಿಗಳ ಬಾಹ್ಯರೇಖೆಗಳು ದಪ್ಪ ರೇಖೆಗಳಲ್ಲಿ ಕಂಡುಬರುತ್ತವೆ. ವರ್ಣಗಳನ್ನು ಚಪ್ಪಟೆಯಾಗಿ ಬಾಹ್ಯರೇಖೆಗಳ ಮಧ್ಯದಲ್ಲಿ ಲೇಪಿಸಲಾಗಿದೆ. ಇವರು ಹೆಚ್ಚಾಗಿ ಉಷ್ಣವರ್ಣಗಳನ್ನು ಬಳಸಿದ್ದು ಹಳದಿ ಬಣ್ಣ ಪ್ರಮುಖವಾಗಿದೆ. ದಖನಿ ಮೂಲದ ಕಲಾವಿದರು ರಚಿಸಿದ ಚಿತ್ರಗಳಲ್ಲಿ ಪಾರದರ್ಶಕವನ್ನು ಬಳಸಲಾಗಿದೆ. ಗುಜರಾತ, ರಾಜಸ್ಥಾನ ಮೂಲದ ಕಲಾವಿದರು ನೀಲಿ, ಪಾಟಲ, ಹಸಿರು ಇತ್ಯಾದಿ ಬಣ್ಣಗಳನ್ನು ಬಳಸಿರುವರೆಂದು ಗುರುತಿಸಿದ್ದಾರೆ. ಇವರ ಅಭಿಪ್ರಾಯದಲ್ಲಿ ಲಕ್ಷಣಗಳನ್ನು ಧಾರ್ಮಿಕ ಹಿನ್ನೆಲೆಯ ಗಂಜೀಫಾ ಚಿತ್ರಗಳಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಅಲ್ಲದೆ ಕೆಲವೊಂದು ಲಕ್ಷಣಗಳು ಧಾರ್ಮಿಕ ಚಿತ್ರಗಳಲ್ಲಿ ಕಂಡುಬರುತ್ತವೆ. ಸ್ತ್ರೀಯರ ಆಕೃತಿಗಳ ದೈಹಿಕ ಲಕ್ಷಣಗಳನ್ನು ಸ್ಥಳೀಯ ಮರಾಠಾ ಜನಾಂಗದ ದೇಹಸಿರಿಯನ್ನು ಗಂಜೀಫಾಚಿತ್ರಗಳಲ್ಲಿ ಕಾಣಬಹುದಾಗಿದೆ. ಸ್ತ್ರೀಯರು ಸೀರೆ, ಕುಪ್ಪಸ ಧರಿಸುವ ಪದ್ಧತಿಯು ಆ ಜನಾಂಗದವರ ಪದ್ಧತಿಯಂತೆ ಇವೆ. ಮುಖಲಕ್ಷಣಗಳು ಸಹ ಅವರಂತೆಯೇ ಹೋಲುತ್ತವೆ. ಆಕರ್ಷಕ ಮುಖಲಕ್ಷಣ, ಸಂಪದ್ಭರಿತ ಹಾಲುಬಿಳುಪು ದೇಹಸಿರಿ, ಆಕರ್ಷಕ ನಿಲುವು, ಕಚ್ಚೆ, ಹದಿನಾರು ಮೊಳದ ಸೀರೆ, ಚಿನ್ನಾಭರಣಗಳು ಮರಾಠಾ ಜನಾಂಗದ ಶ್ರೀಮಂತ ಸ್ತ್ರೀಯಂತೆ ಗಂಜೀಫಾ ಚಿತ್ರಗಳಲ್ಲಿ ಬಿಂಬಿತಗೊಂಡಿವೆ.[೭]

ಭಾರತದ ಸ್ವಾತಂತ್ರ್ಯದ ತನಕ ಆಂಧ್ರಪ್ರದೇಶದಲ್ಲಿ ಹೈದ್ರಾಬಾದಿನ ನಿಜಾಮರ ಆಳ್ವಿಕೆ ತಪ್ಪಲಿಲ್ಲ. ಹಿಂದೂ ಹಾಗೂ ಮುಸ್ಲಿಂ ಸಂಸ್ಕೃತಿಗಳು ಇಲ್ಲಿ ಸುಲಭವಾಗಿ ಹೊಂದಾಣಿಕೆಗೆ ಒಳಪಟ್ಟಿದ್ದವು. ಇಲ್ಲಿಯ ಅನೇಕ ತೆಲುಗು ಕಲಾವಿದರು ಪ್ರತಿಭಾಸಂಪನ್ನರಾಗಿದ್ದರು. ಅವರು ವಿಜಯನಗರ ಸಾಮ್ರಾಜ್ಯದ ಪರಂಪರೆಯನ್ನು, ಸಂಸ್ಕೃತಿಯನ್ನು ತಮ್ಮ ಕಲೆಯ ಮೂಲಕ ಮುಂದುವರಿಸಿಕೊಂಡು ಬಂದರು. ವಿಜಯನಗರ ಕಲೆಯು ಅವರಲ್ಲಿ ರಕ್ತಗತವಾಗಿತ್ತು. ಅವರು ಮೊಘಲ್ ನವಾಬರ, ಸುಬೇದಾರರ, ಹಿಂದೂ ಅರಸರ ಮತ್ತು ಸಂಸ್ಥಾನಗಳಲ್ಲಿ ಕಲಾಸೇವೆ ಮಾಡುತ್ತಿದ್ದರು.

ಹೈದ್ರಾಬಾದ(ಆಂಧ್ರದಲ್ಲಿ)ದಲ್ಲಿ ೧೯ನೇ ಶತಮಾನದಲ್ಲೇ ಗಂಜೀಫಾ ಚಿತ್ರಕಲೆ ಹಾಗೂ ಆಟ ಮುಂಚೂಣಿಯಲ್ಲಿತ್ತು. ಆಂಧ್ರದ ನಿರ್ಮಲ್ ಕರ್ನೂಲ್ ಮತ್ತು ಕಡಪಾದ ಗಂಜೀಫಾ ಎಲೆಗಳು ವಿಭಿನ್ನವಾಗಿ ಮೂಡಿಬಂದಿವೆ. ನಿರ್ಮಲ್ ಎಲೆಗಳಲ್ಲಿ ಮೊಘಲ್ ಪ್ರಭಾವ ಕಂಡರೆ ಕಡಪಾದ ಎಲೆಗಳಲ್ಲಿ

---

೧೫. ಎಸ್. ಕೆ. ಅರುಣಿ : ದಖನಿ ಚಿತ್ರಕಲೆ, ಪುಟ-೮೫

೧೬. ಎಸ್. ಕೆ. ಅರುಣಿ : ದಖನಿ ಚಿತ್ರಕಲೆ, ಪುಟ-೮೫

೧೭. ಎನ್ ಎಂ. ಅಂಗಡಿ., ಕರ್ನಾಟಕ ಗಾಜಿನ ಮೇಲಿನ ಚಿತ್ರಕಲೆ, (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ), ಪು-೨೬೦

ದಕ್ಷಿಣ ಭಾರತದ ಸಂಸ್ಕೃತಿಯನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ಇವು ಮಧುರೈನ ನಾಯಕ್ ಶೈಲಿಯಲ್ಲಿವೆ. ಆಟದ ಎಲೆಗಳ ಸಂಪ್ರದಾಯವು ಮೊಘಲ್ ವಸ್ತ್ರಾಲಂಕಾರ ಶೈಲಿಯನ್ನು ಹೋಲುತ್ತಿದ್ದು, ಪೇಟಾ ಧರಿಸಿರುವ ವ್ಯಕ್ತಿಗಳ ಸಣ್ಣ ಚಿತ್ರಗಳು ಆಯಾ ಸೇವಕರ ಸ್ಥಾನಮಾನವನ್ನು ಸೂಚಿಸುತ್ತವೆ. ವರ್ಣಚಿತ್ರ ಹೊಂದಿದ ಪೊಟ್ಟಣಗಳು ವಿಶೇಷ ಕರ್ನೂಲ್‌ಶೈಲಿಯಲ್ಲೇ ಇವೆ. ಓರ್ವ ಮಹಿಳೆ ಸೀರೆ ಉಟ್ಟು ಎರಡು ಭುಜಗಳ ಮೇಲೆ ಒಂದು ಸ್ಕರ್ಪ್ ಧರಿಸಿರುವ ಚಿತ್ರಗಳು ಕಾಣಸಿಗುತ್ತವೆ. ಆ ಮಹಿಳೆಯು ಗಿಡದ ಇಳಿ ಬಿದ್ದ ರೆಂಬೆಯ ಕೆಳಗೆ ನಿಂತಿರುವಂತೆಯೂ (ರಾಗಮಾಲಾ ಚಿತ್ರದಲ್ಲಿ ಕಂಡುಬಂದಂತೆ) ಇದರ ಗುಣಮಟ್ಟ ಅತ್ಯುತ್ತಮವಾಗಿದ್ದು ಎಲೆಯ ಚಿತ್ರಗಾರರು ಅಲ್ಲದೆ ಇತರ ಚಿತ್ರಗಾರರು ಇಲ್ಲಿ ಕೃತಿ ರಚಿಸಿರುವುದು ಕಂಡುಬರುತ್ತದೆ.

ಕರ್ನೂಲ ರಾಯಲ್ ಸೊಸೈಟಿಯಿಂದ ಎರವಲು ಪಡೆದ ಮದ್ರಾಸ್‌ನ ಕರ್ನೂಲ್ ಎಂಬ ಸ್ಥಳಕ್ಕೆ ಸೇರಿದ ಕೆಲವು ಗಂಜೀಫಾಗಳು ೧೮೪೧ರಲ್ಲಿ ಸಂಗ್ರಹಿಸಲ್ಪಟ್ಟಿವೆ. ದಕ್ಷಿಣ ಭಾರತದ ಚಾಲುಕ್ಯರ ಸಂಸ್ಥಾನದ ಕಾಲದಲ್ಲಿ ವರಹ ಬಂಗಾರದ ನಾಣ್ಯದ ರೂಪದಲ್ಲಿ ಚಲಾವಣೆಯಲ್ಲಿತ್ತು. (೧೧ನೇ ಶತಮಾನ) ೧೫ರಿಂದ ೧೯ನೇ ಶತಮಾನದವರೆಗೆ ಚಿನ್ನದ ನಾಣ್ಯಗಳು ವರಹ ಎಂದೇ ಕರೆಯಲ್ಪಡುತ್ತಿದ್ದವು. ಬ್ರಿಟೀಷರು ಅವುಗಳನ್ನು ಪಗೋಡ್ಸ್ ಎಂದು ಕರೆದರು. ಹೀಗಾಗಿ ಕರ್ನೂಲಿನ ರಾಜ ಮತ್ತು ಪ್ರಧಾನ ಎಲೆಗಳಲ್ಲಿ ಕೃಷ್ಣನ ಚಿತ್ರವನ್ನು ನೀಲವರ್ಣದಲ್ಲಿ ಚಿತ್ರಿಸಲಾಗಿದೆ. ಚಿಕ್ಕ ತಲೆ ನವಿಲಿನ ಕಿರೀಟವು ವಿಶೇಷ. ಕೆಲವು ಕರ್ನೂಲ್ ಸೂಟಗಳ ಒಂಬತ್ತನೇ ಸ್ಥಾನವು ಕೃಷ್ಣನನ್ನು ಹೊಂದಿದೆಯೋ ಅಥವಾ ಬುದ್ಧನನ್ನು ಹೊಂದಿದೆಯೊ ಎಂಬುದನ್ನು ನಿರ್ಧರಿಸಲು ಕಷ್ಟಸಾಧ್ಯ. ಏಕೆಂದರೆ ಸಾಮಾನ್ಯವಾಗಿ ಇವು ಬಿಳಿಯ ಬಣ್ಣಗಳಲ್ಲಿ ಕಂಡುಬರುತ್ತವೆ. ಉಳಿದಂತೆ ಪ್ರಧಾನ ಕುದುರೆ ಓಡಿಸುವುದು, ರಾಜ ಸಿಂಹಾಸನದಲ್ಲಿ ಆಸೀನನಾಗಿರುವುದು, ಉಳಿದಂತೆ ಎಲ್ಲರೂ ಧೋತಿ ಧರಿಸಿದ ಚಿತ್ರಗಳು ಕರ್ನೂಲ್ ಎಲೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ಗಂಜೀಫಾ ಎಲೆಯ ಅಂಚುಗಳು ಸ್ವಾಚಿರೇ ಕೆಂಪು ಬಣ್ಣಗಳನ್ನು ಹೊಂದಿವೆ. ಇನ್ನುಳಿದಂತೆ ವಿಷ್ಣುವು ಚಕ್ರಧಾರಿಯಾಗಿ ಛತ್ರಿಯ ಕೆಳಗೆ ನಿಂತಿರುವುದು ಕಂಡುಬರುತ್ತದೆ. ದೇವತೆಗಳಾದ ಸಿರಿ (ಲಕ್ಷ್ಮೀ) ಮತ್ತು ಭೂದೇವಿಯರು ಸೀರೆ ಧರಿಸಿದ್ದಾರೆ. ಇವರು ವಿಷ್ಣುವಿನ ಎಡ ಮತ್ತು ಬಲಭಾಗಕ್ಕೆ ನಿಂತಿದ್ದಾರೆ. ಹತ್ತು ದಶಾವತಾರದ ಎಲ್ಲಾ ಎಲೆಗಳನ್ನು ಗಡಿಯಾರದ ಮುಳ್ಳು ತಿರುಗುವ ವಿರುದ್ಧ ದಿಕ್ಕಿನಿಂದ ಚಲಾವಣೆ ಮಾಡಲಾಗುತ್ತಿತ್ತು. ಅಂದರೆ ಈ ಆಟದ ಎಲೆಗಳು ಮುಸಲ್ಮಾನರ ಎಲೆಗಳಾಗಿದ್ದವು ಎಂದು ಕಂಡುಬರುತ್ತದೆ. ಕರ್ನೂಲಿನ ಎಲ್ಲ ಎಲೆಗಳು ಮೊಘಲ್‌ಶೈಲಿಯಲ್ಲಿ ಚಿತ್ರಿತಗೊಂಡಿವೆ. ಕೆಲವು ಆಕೃತಿಗಳಲ್ಲಿ ಯಾವುದೇ ಸ್ಪಷ್ಟ ರೇಖೆ, ಪ್ರಮಾಣಬದ್ಧ ಆಕೃತಿಗಳು ಕಂಡುಬರುವುದಿಲ್ಲ.

ಆಂಧ್ರಪ್ರದೇಶದ ಹೈದ್ರಾಬಾದನ ನಿರ್ಮಲ್ ಪ್ರದೇಶದಲ್ಲಿ ೧೮ನೇ ಶತಮಾನದಿಂದ ಆಟದ ಎಲೆಗಳ ತಯಾರಿಕೆಯು ಪ್ರಾರಂಭವಾಗಿತ್ತು. ಸ್ಥಳಿಯ ಚಿತ್ರಕಾರರು ಆಟದ ಎಲೆಗಳಿಗೆ ನಕ್ಷಾ ಎಂದು ಕರೆಯುತ್ತಿದ್ದರು. ಕರ್ನೂಲ್ ಎಲೆಗಳಂತೆ ಮೀರ್ ಇಲ್ಲಿ ಸಿಂಹಾಸನಾರೋಹಿಯಾಗಿ ಕುಳಿತಿದ್ದಾನೆ. ಆದರೆ ಅವನ ಮುಂದೆ ಚಹಾದ ಕಿತ್ತಲಿ ಲೋಟಗಳಂಥ ವಸ್ತುಗಳನ್ನು ಇಡಲಾಗಿದೆ. ಚಾಂಗ್‌ದ ಮೀರ್ ಓರ್ವ ಮಹಿಳೆ ಮತ್ತು ಸೇವಕಿಯರಿಂದ ಸೇವೆಗೆ ನಿಂತಿರುವಂತೆ ವರ್ಣಿಸಲಾಗಿದೆ. ಇವುಗಳನ್ನು ಚಾಂಗ್‌ರಾಣಿ ಎಂದು ಕರೆಯಲಾಗುತ್ತಿತ್ತು. ವಜೀರ್ ಎಲೆಗಳು ಬೇಟೆಯಾಡುತ್ತಿರುವ ಚಿತ್ರಗಳನ್ನು ಹೊಂದಿದೆ.

ಸಂಖ್ಯಾತ್ಮಕ ಎಲೆಗಳ ಸೂಟ್‌ಚಿಹ್ನೆಗಳು ನಿರ್ಮಲ್‌ನ ವಿಶೇಷ ಮಾದರಿಯಲ್ಲಿ ಕಂಡುಬಂದಿವೆ. ಆದರೆ ನಿರ್ಮಲ್ ಎಲೆಗಳನ್ನು ವಿಭಿನ್ನ ಶೈಲಿಯ ಎಲೆಗಳನ್ನಾಗಿ ಮಾಡುವ ಅಂಶವೆಂದರೆ ಅವುಗಳ ಸಂಖ್ಯಾತ್ಮಕ ಎಲೆಗಳಲ್ಲಿ ಮಾನವರ ವರ್ಣಚಿತ್ರ ಹಾಗೂ ಅವರ ವಿವಿಧ ವೃತ್ತಿಗಳನ್ನು ವಿವರಿಸಲಾಗಿದೆ. ಇವುಗಳಲ್ಲಿ ಕ್ರೀಡಾಪಟುಗಳು, ವಾದ್ಯ ನುಡಿಸುತ್ತಿರುವ ಮಹಿಳೆಯರು, ಬೇಟೆಗಾರರು, ಕತ್ತಿ ವರಸೆಯ ಸೈನಿಕರು, ಹಲಗೆ ಬಾರಿಸುವವರು. ಹೀಗೆ ಅನೇಕ ಚಿತ್ರಗಳು ಇಲ್ಲಿ ಕಂಡುಬರುತ್ತವೆ.

ಕೆಲವೊಂದು ಚಿತ್ರಗಳಲ್ಲಿ ಸ್ತ್ರೀ ಚಿತ್ರಗಳಿಗೆ ವಿಶಿಷ್ಟವಾದ ಸಲ್ವಾರ ಕಮೀಜ್ (ಚೂಡಿದಾರ) ಅಲಂಕಾರಿಕವಾಗಿ ರೂಪಗೊಳಿಸಿದ್ದನ್ನು ಕಾಣುತ್ತೇವೆ. ಇವುಗಳಲ್ಲಿ ಕಲಾವಿದನು ಅಲಂಕಾರದ ಆಶಯದೊಂದಿಗೆ ಕೆಲಸದ ನಿರ್ದಿಷ್ಟತೆಯನ್ನು ಅನುಸರಿಸಿಲ್ಲ. ಆಟಕ್ಕೆ ಅನುಗುಣವಾಗಿ ತನಗೆ ಸುಂದರವಾಗಿ ಕಂಡದ್ದನ್ನು ಈ ಸಂದರ್ಭಗಳಲ್ಲಿ ಬಳಸಿಕೊಂಡಿದ್ದಾನೆಂದು ತಿಳಿಯುತ್ತದೆ. ಇಲ್ಲಿನ ರಚನೆಯಲ್ಲಿ ಕ್ರಮಬದ್ಧತೆ ಮೂಡಿ ಬಂದಿಲ್ಲ. ವಸ್ತ್ರಾಭರಣಗಳಲ್ಲಿ ವೈರುಧ್ಯ ಕಂಡುಬರುತ್ತದೆ. ಚಿತ್ರಗಳಲ್ಲಿ ಪಾಶ್ಚಿಮಾತ್ಯರ ಚಿತ್ರಶೈಲಿಗಳ ಪ್ರಭಾವ ಮೂಡಿಬಂದಿದೆ. ಬಿಗಿಯಾದ ಪ್ಯಾಂಟ್, ಆಕರ್ಷಕ ಬೂಟುಗಳು ಯುರೋಪಿಯನ್ ಪ್ರಭಾವವನ್ನು ಹೋಲುತ್ತವೆ. ಕಲಾವಿದರು ಇಲ್ಲಿ ಸ್ವತಂತ್ರ ಅಭಿವ್ಯಕ್ತಿಯನ್ನು ವ್ಯಕ್ತಪಡಿಸಿದ್ದಾರೆಂದು ತೋರುತ್ತದೆ. ಅಥವಾ ಆಂಗ್ಲರ ಆಶಯಗಳು ಅವರ ಆಟದಂತೆ ಕೂಡಾ ಬಿಂಬಿತವಾಗಿವೆ ಎಂದು ತೋರುತ್ತದೆ.

ಮೊಘಲ್ ದಶಾವತಾರ ಚಿತ್ರಗಳಲ್ಲಿ ಸ್ಪಷ್ಟವಾದ ರೇಖೆಗಳು, ವರ್ಣವಿನ್ಯಾಸ, ಸಂಯೋಜನೆಗಳು ಅತ್ಯುತ್ತಮವಾಗಿ ಮೂಡಿ ಬಂದಿವೆ. ಕರ್ನಾಟಕದಲ್ಲಿ ದಶಾವತಾರದ ಒಂದೇ ಚಿತ್ರವು ವೃತ್ತದಲ್ಲಿ ಚಿತ್ರಿಸಿದರೆ, ಇಲ್ಲಿ ೪ ಇಂಚ್ ಒಂದೇ ವೃತ್ತದಲ್ಲಿ ಕಥೆಗೆ ಸಂಬಂಧಿಸಿದಂತೆ ಎರಡು, ಮೂರು ಚಿತ್ರಗಳನ್ನು ಚಿತ್ರಿಸಿದ್ದಾರೆ. ಹೆಚ್ಚಾಗಿ ಇಲ್ಲಿ ಹಳದಿ ವರ್ಣಗಳನ್ನು ಬಳಸಿಕೊಂಡಿದ್ದಾರೆ. ಈ ಚಿತ್ರಗಳಲ್ಲಿ ಪರ್ಷಿಯಾದ ಪ್ರಭಾವವಿರುವುದು ಚಿತ್ರಗಳ ವೇಷ-ಭೂಷಣಗಳಿಂದ ಕಂಡುಬರುತ್ತದೆ.

ಕೊಂಕಣ ಮಹಾರಾಷ್ಟ್ರದ ಸಾವಂತವಾಡಿ ಒಂದು ಸಣ್ಣ ಪ್ರಾಂತ. ೧೪ನೇ ಶತಮಾನದಲ್ಲಿ ಇದು ವಿಜಯನಗರ ಅರಸರಿಂದ, ೧೫ನೇ ಶತಮಾನದಲ್ಲಿ ಬ್ರಾಹ್ಮಣ ಅರಸರಿಂದ ಹಾಗೂ ನಂತರದ ಅವಧಿಯಲ್ಲಿ ಬಿಜಾಪುರದ ರಾಜಮನೆತನದಿಂದ ಆಳಲ್ಪಟ್ಟಿತು. ಈ ಎಲೆಗಳ ಮೇಲೆ ದಕ್ಷಿಣದ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ. ೧೬ನೇ ಶತಮಾನದಲ್ಲಿ ಇದು ಭೋಸ್ಲೆ ಆಡಳಿತಕ್ಕೆ ಒಳಪಟ್ಟಿತು. ಸಾವಂತರು ನಂತರ ಮರಾಠಾಶಿವಾಜಿಯ ಆಡಳಿತದಲ್ಲಿ ದಕ್ಷಿಣ ಕೊಂಕಣದ ಸರ್ದೇಸಾಯಿಗಳಾದರು. ಈ ಸಣ್ಣ ಗ್ರಾಮವು ಮೂರನೇ ಕೀಮ ಸಾವಂತನ ಕಾಲದಲ್ಲಿ ಅಭಿವೃದ್ಧಿ ಹೊಂದಿತು. ಈತನು ಸಿಂಧ ಕುಟುಂಬದ ಮಹಿಳೆಯನ್ನು ಮದುವೆಯಾಗಿದ್ದನು. ಹಾಗೂ ಪೂನಾದ ಪೇಶ್ವೆಯವರೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಿದ್ದನು.

ಸಾವಂತವಾಡಿಯ (ಮಹಾರಾಷ್ಟ್ರ) ೧೮೬೭ರಲ್ಲಿನ ಗಂಜೀಫಾ ಚಿತ್ರಗಳು ಅದ್ಭುತವಾದವುಗಳಾಗಿದ್ದವು. ಪ್ರತಿ ಸಂಖ್ಯಾತ್ಮಕ ಎಲೆಗಳಲ್ಲಿ ಸಂಖ್ಯೆಯು ಮಧ್ಯದಲ್ಲಿ ಕಂಡುಬರುತ್ತಿತ್ತು. ಇವೆಲ್ಲವುಗಳೂ ಒಂದೇ ರೀತಿಯಿಂದ ಚಿತ್ರಗಳನ್ನು ಹೊಂದಿದ್ದವು. ಈ ಚಿತ್ರಗಳು ನಿರ್ದಿಷ್ಟತೆಯನ್ನು ಹೊಂದಿದ್ದವು. ಮೊಘಲ್ ಗಂಜೀಫಾಗಳಿಗೆ ಹೋಲಿಸಿದರೆ ಅಂದರೆ ಮೊಘಲ್ ಗಂಜೀಫಾದಲ್ಲಿ ದಶಾವತಾರ ಚಿತ್ರಗಳು ರಾಜರು ಸಿಂಹಾಸನದ ಮೇಲೆ ಕುಳಿತಿರುವಂತೆ ಇವೆ. ಸಾವಂತವಾಡಿಯ ಚಿತ್ರಕಾರರಲ್ಲಿ ಕಲೆಯ ವೈವಿಧ್ಯವನ್ನು ಕಾಣಬಹುದು. ಅಂದರೆ ಇಲ್ಲಿ ದಶಾವತಾರಿ ಚಿತ್ರಗಳನ್ನು ಜೀವಂತಿಕೆ ಎನ್ನುವಂತೆ ಹಾಗೂ ಗುಂಪು

ಗುಂಪುಗಳಲ್ಲಿ ಸುಂದರವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಬಹುಸಂಖ್ಯಾತ ಎಲೆಗಳು ಮೊಘಲ್ ಭೂಷಣಗಳನ್ನು ಅಥವಾ ಮಹಾರಾಷ್ಟ್ರಶೈಲಿ ಪೇಟ ಧಾರಣೆಯ ಶೈಲಿಯನ್ನು ಹೊಂದಿವೆ. ಸಾವಂತವಾಡಿಯ ಎಲ್ಲ ಅವತಾರಗಳನ್ನು ಹಿಂದೂ ಶೈಲಿಯಲ್ಲಿ ಧೋತಿ ಹಾಗೂ ದುಪ್ಪಟ್ಟವನ್ನು ಧರಿಸಿರುವಂತೆ ಚಿತ್ರಿಸಲಾಗಿದೆ.

ಕೀಮ ಸಾವಂತನು ಕಲೆಯ ಬಗ್ಗೆ ಅಪಾರ ಅಭಿಮಾನ ಹಾಗೂ ಹುಚ್ಚನ್ನು ಹೊಂದಿದವನಾಗಿದ್ದನು. ಈತನು ತನ್ನ ಆಸ್ಥಾನಕ್ಕೆ ಕಲಾಕಾರರನ್ನು ಆಹ್ವಾನಿಸಿದ. ಕೀಮ ಸಾಮಂತನು ಅಕ್ಕಿಯಲ್ಲಿ ದೇವಸ್ಥಾನಗಳನ್ನು ಕಟ್ಟಿಸಿದನು. ವಿಶೇಷವೇನೆಂದರೆ ಈ ದೇವಾಲಯಗಳು ಸ್ಥಳೀಯ ಗಂಜೀಫಾ ಆಟದ ಶೈಲಿಯನ್ನು ಹೊಂದಿರುವಂತೆ ಕಲಾವಿದರಿಂದ ಮಾಡಿಸಿದನು.

ಶ್ರೀನಗರ ಮತ್ತು ಕಾಶ್ಮೀರದಲ್ಲಿ ೧೯ನೇ ಶತಮಾನದಲ್ಲಿ ಅನೇಕ ಗಂಜೀಫಾ ಎಲೆಗಳು ಆಟಕ್ಕೆ ತಕ್ಕ ಹಾಗೆ ಸೃಷ್ಟಿಯಾದವು. ಅವುಗಳಲ್ಲಿ ದಮೀರ್ (ರಾಜಾ)ನು ಆಯತಾಕಾರದ ಸಿಂಹಾಸನದ ಮೇಲೆ ಕುಳಿತಿದ್ದು ಸೂರ್ಯನ ಕಾಂತಿ ಸೂಸುವಂತೆ ಕಂಡುಬರುತ್ತದೆ. ರಾಜನು ಗಡ್ಡಧಾರಿಯಾಗಿದ್ದು ತ್ರಿಕೋನ ಆಕಾರದ ಕಿರೀಟವನ್ನು ಧರಿಸಿರುವನು. ಮೊಘಲ್ ಶೈಲಿಯಲ್ಲಿ ಉಡುಪುಗಳನ್ನು ಧರಿಸಿರುವನು. ಅವನ ಸುತ್ತಲೂ ಸೇವಕರು, ಮಂತ್ರಿಗಳು ಇದ್ದಾರೆ. ವಜೀರ ಕುದುರೆಗಳ ಚಿತ್ರವನ್ನು ಅತ್ಯುತ್ತಮವಾಗಿ ಚಿತ್ರಿಸಲಾಗಿದೆಯಾದರೂ ಅವುಗಳ ತಲೆಗಳು ದೊಡ್ಡ ಗಾತ್ರದಲ್ಲಿವೆ. ಈ ಕುದುರೆಯ ಕೆಳದೆ ಪದಾತಿದಳದ ಗುಂಪು ಕಂಡುಬರುತ್ತದೆ. ಈ ಚಿತ್ರಗಳು ರಾಜಸ್ಥಾನಿ ಮತ್ತು ದಕ್ಷಿಣ ಭಾರತದ ಎಲೆಗಳಲ್ಲಿ ಕಂಡುಬರುತ್ತವೆ.

ಕಾಶ್ಮೀರ ಮತ್ತು ಪಂಜಾಬನ ಆಟದ ಎಲೆಗಳು ದೇಶದ ಇತರೆ ಎಲ್ಲಾ ಎಲೆಗಳಂತೆ ಬಹು ಶ್ರೀಮಂತ ಎಲೆಗಳಾಗಿವೆ. ಇಲ್ಲಿ ಒಂದು ಸೂಟ್‌ನಿಂದ ಇನ್ನೊಂದು ಸೂಟ್‌ಗೆ ವಿನ್ಯಾಸವು ಬದಲಾಗುತ್ತಾ ಸಾಗುತ್ತದೆ. ಇಲ್ಲಿ ಮೊಘಲ್ ಶೈಲಿಯ ಪ್ರಭಾವ ಎದ್ದು ಕಾಣುತ್ತದೆ.

ದರ್ಬಾರಿನ ಸೂಟ್‌ಗಳು ಇತರೆ ಭಾಗಗಳಲ್ಲಿಯ ಸೂಟ್‌ಗಳಿಗಿಂತ ಭಿನ್ನವಾಗಿವೆ. ಈ ದರ್ಬಾರಿ ಎಲೆಗಳಲ್ಲಿ ಎರಡು ಸಿಂಹಗಳು ತಮ್ಮ ತಲೆಯನ್ನು ಹಿಂದಕ್ಕೆ ಸರಿಸಿ ನೋಡುತ್ತಿರುವ ಚಿತ್ರ, ಹಕ್ಕಿಗಳು ಸೂರ್ಯನ ಕಡೆಗೆ ಹಾರುತ್ತಿರುವ ಚಿತ್ರವನ್ನು ಮೀರ್ ಎಲೆಗಳಲ್ಲಿ ಕಂಡರೆ, ವಜೀರ್ ಎಲೆಗಳಲ್ಲಿ ಹಾರುತ್ತಿರುವ ಪಕ್ಷಿಗಳ ಚಿತ್ರವನ್ನು ಕಾಣುತ್ತೇವೆ. ಇವುಗಳು ಪರ್ಶಿಯನ್ ಮಾದರಿಯ ಪ್ರಭಾವವನ್ನು ಹೊಂದಿವೆ.

ಓರಿಸ್ಸಾದ ವಿಷ್ಣುಪುರದಲ್ಲಿ ನಾಲ್ಕರಿಂದ ನಾಲ್ಕುವರೆ ಇಂಚು ವ್ಯಾಸವುಳ್ಳ ಬಹುದೊಡ್ಡ ಅಳತೆಯ ಗಂಜೀಫಾ ಎಲೆಗಳನ್ನು ತಯಾರಿಸುತ್ತಿತ್ತು. ದಶಾವತಾರದ ಕಟ್ಟುಗಳಿಗೆ ಅದು ಆಗ ತುಂಬ ಪ್ರಸಿದ್ಧವಾಗಿತ್ತು. ಪಟ ಚಿತ್ರದ ತಾಂತ್ರಿಕ ಅಂಶಗಳನ್ನು ಬಳಸಿಕೊಂಡು ಕಲಾವಿದರು ದೊಡ್ಡದಾದ ಶಕ್ತಿಶಾಲಿ ಎಲೆಗಳೊಂದಿಗೆ ತಯಾರಿಸುತ್ತಿದ್ದರು. ಓರಿಸ್ಸಾದ ವಿಸ್ತಾರದ ದಶಾವತಾರದ ಕಟ್ಟುಗಳು ಮತ್ತು ಸೋನೆಪುರದ ರಾಮಾಯಣ ಕಟ್ಟುಗಳು, ಮುಘಲ್ ಕಟ್ಟುಗಳು ಇಲ್ಲಿ ಪ್ರಸಿದ್ಧವಾಗಿದ್ದವು. ಸ್ಥಳೀಯ ಕಲಾವಿದರು ಇದರ ರಚನೆಯಲ್ಲಿ ಪಾಲ್ಗೊಂಡ ಕಾರಣ ಅದರ ಅರ್ಥ, ವಿವರಣೆಯಲ್ಲಿಯೇ ಅನೇಕ ವ್ಯತ್ಯಾಸಗಳಾದವು. ಗುಲಾಮನನ್ನು ಗುಲಾಬ ಎಂದು ತಪ್ಪಾಗಿ ಪರಿಚಯಿಸಲಾಯಿತು. ತಲೆಕಿರೀಟವನ್ನು ಹೂಗುಚ್ಛವೆಂದು ತಪ್ಪಾಗಿ ತಿಳಿಸಲಾಯಿತು. ಸಾರಖಿ ಮತ್ತು ಸಾಫೇದ ಸುರಜೀಯಾ ಮತ್ತು ಚಂದ್ರಾ ಎಂದು ಕ್ರಮವಾಗಿ ಕರೆಯಲಾಗುವುದು. ಅವುಗಳು ಮೂಲ ಅರ್ಥಗಳ ನಿರಂತರತೆಯನ್ನು ಕಾಯ್ದಿಟ್ಟುಕೊಳ್ಳುತ್ತಿವೆ. ಸಾವಂತವಾಡಿಯ ಕಟ್ಟುಗಳು ದಶಾವತಾರ ಮತ್ತು ಮೊಘಲ್ ಶೈಲಿಗೆ ಸುಪ್ರಸಿದ್ಧ. ಈ ಎಲೆಗಳನ್ನು ಕಾಗದದ ತಿಳು ಪದರಗಳಿಂದ ನಿರ್ಮಿಸಲಾಗುವುದು. ಅವುಗಳ ಹೊಂದಿಕೊಳ್ಳುವಿಕೆ ಮತ್ತು ನಿರ್ವಹಣೆಯು

ಸುಲಭವಾಗಿರುತ್ತದೆ. ಮೈಸೂರು ಅದರ ಭದ್ ಕಟ್ಟುಗಳಿಗೆ ತುಂಬಾ ಪ್ರಸಿದ್ಧ. ಅವು ದೈವಿಕ ಲಕ್ಷಣ ಮತ್ತು ಸಭೆಯ ಪ್ರಾತಿನಿಧಿಕ ಚಿತ್ರಗಳನ್ನು ಒಳಗೊಂಡಿರುತ್ತವೆ. ರಾಜಸ್ಥಾನೀಯ ಕಟ್ಟುಗಳು ದಶಾವತಾರ ಮತ್ತು ಮೊಘಲ್ ಕಟ್ಟುಗಳಿಗೆ ತುಂಬ ಪ್ರಸಿದ್ಧ. ಅವುಗಳ ಮೇಲೆ ಪಕ್ಷಿಗಳ, ಪ್ರಾಣಿಗಳ ಚಿತ್ರಗಳಿರುವಂತೆ ಮತ್ತು ಇಲ್ಲಿ ನಕ್ಷಾ ಕಟ್ಟುಗಳನ್ನು ಜೂಜಿಗಾಗಿಯೇ ಸಿದ್ಧಪಡಿಸಲಾಗುವುದು. ಸಾಮಾನ್ಯವಾಗಿ ಈ ಎಲೆಗಳು ೧.೧/೨ ನಿಂದ ೩ಗಳ ಅಳತೆಗಳನ್ನೊಳಗೊಂಡಿರುತ್ತವೆ. ಅವು ಅರಸರ ದರಬಾರು ಮತ್ತು ಬಜಾರುಗಳ ದೃಶ್ಯಗಳನ್ನು ಒಳಗೊಂಡಿರುತ್ತವೆ. ಕಾಶ್ಮೀರಿಯ ಕಟ್ಟುಗಳು ಅಲಂಕೃತವಾದ ಗಂಜೀಫಾ ಎಲೆಗಳನ್ನು ಹೊಂದಿರುವಂತೆ ಹಿಮಾಚಲ ಪ್ರದೇಶದ ಕಟ್ಟುಗಳಲ್ಲಿ ಪಹಾಡಿ ಶೈಲಿಯ ಕಿರುರೂಪದ ಸಭಾಚಿತ್ರಗಳಿರುತ್ತವೆ. ಕೇಂದ್ರಾಡಳಿತದ ನೆಲೆಯಾಗಿರುವ ದೆಹಲಿಯಲ್ಲಿ ಅಲ್ಲಿಯ ಅರಸರ ಆಶ್ರಯ ಮತ್ತು ಪೋಷಣೆಯಲ್ಲಿ ಅಂದಿನ ಸಭೆಯ ಚಿತ್ರಗಳಿರುತ್ತಿದ್ದವು. ಅವುಗಳ ಮೇಲೆ ಹಿತ್ತಾಳೆ, ಅರಗಿನೊಂದಿಗೆ ಆಮೆಯ ಚಿಪ್ಪುಗಳನ್ನು ಬಳಸುತ್ತಿದ್ದರು. ದಶಾವತಾರ ಮತ್ತು ಉಳಿದ ಭಿನ್ನ ಭಿನ್ನವಾದ ಗಂಜೀಫಾ ಕಟ್ಟುಗಳಲ್ಲಿ ಅಂದಿನ ನ್ಯಾಯಾಲಯದ ಮತ್ತು ಜಾನಪದ ಶೈಲಿಯ ಕಲಾಕೃತಿಗಳನ್ನು ಅವುಗಳ ಘನತೆಗೆ ಅನುಸರಿಸಿ ಸುಲಭವಾಗಿ ವ್ಯತ್ಯಾಸಗಳನ್ನು ಗುರುತಿಸಬಹುದಾಗಿತ್ತು. ಅವುಗಳಿಗೆ ಬಳಸಿದ ವಸ್ತುಗಳಿಂದಲೂ ಅವುಗಳಲ್ಲಿಯ ಭಿನ್ನತೆಗಳನ್ನು ಅರಿಯಬಹುದಾಗಿತ್ತು. ಆನೆಯ ದಂತ, ಹಿತ್ತಾಳೆಗಳಂತಹ ಅತಿ ವೆಚ್ಚದ ಪರಿಕರಗಳನ್ನು ನ್ಯಾಯಾಲಯದ ಕಟ್ಟುಗಳಲ್ಲಿ ಉಪಯೋಗಿಸಲಾಗುತ್ತಿತ್ತು. ಹತ್ತಿ, ಚಿಂದಿ ಮತ್ತು ಕಾಗದದ ಚೂರುಗಳು ಸಾಮಾನ್ಯ ಕಟ್ಟುಗಳಲ್ಲಿ ಬಳಕೆಯಾಗುತ್ತಿದ್ದವು. ಬಜಾರ ಕಟ್ಟುಗಳಲ್ಲಿ ದರಬಾರಿ ಕಟ್ಟುಗಳಲ್ಲಿಯು ಜೀವಂತ ದೃಶ್ಯಗಳು ಸಂಗೀತದ ಮಾದರಿಗಳ ಸಾಮಾಜಿಕ ಮನೋರಂಜನೆಯಂತಹ ಅನೇಕ ಸಮಕಾಲೀನ ಕಿರುರೂಪದ ಚಿತ್ರಗಳನ್ನು ಒಳಗೊಂಡಿರುತ್ತಿದ್ದವು. ಆದರೂ ಕೂಡಾ ಸಭೆಯ ಕಾರ್ಡುಗಳಲ್ಲಿ ರಾಜಾ ಮತ್ತು ಪ್ರಧಾನರ ಎರಡು ವಿಧದ ಚಿತ್ರಗಳೂ ಇರುತ್ತಿದ್ದವು. ಕೆಲವು ಸಲ ರಾಜಾ ಮತ್ತು ಪ್ರಧಾನರ ಕಟ್ಟುಗಳಲ್ಲಿ ನುರಿತ ಕಲಾವಿದರ ಪ್ರೌಢಿಮೆ ತೋರಿಸುವಂತಹ ಚಿತ್ರಗಳೂ ಇರುತ್ತಿದ್ದವು. ಕೆಲವು ಸಲ ಒಂದು ಅಥವಾ ಎರಡರ ಮೇಲೂ ಇಂತಹ ಚಿತ್ರಗಳು ಕಾಣುತ್ತಿದ್ದವು.

ಸಾವಂತವಾಡಿಯ ಕಲೆಯನ್ನು ರಾಜಾಕಟ್ಟುಗಳಲ್ಲೇ ಕಾಣಬಹುದು. ಧಾರ್ಮಿಕ ಕತೆಗಳಿಗೆ ಸಂಬಂಧಿಸಿದ ಅವತಾರದ ಕತೆಗಳನ್ನು ಹೇಳುವ ನಯ-ನಾಜೂಕಿನ ಕೌಶಲದ ಕಟ್ಟುಗಳನ್ನು ದಶಾವತಾರದ ಕಟ್ಟುಗಳಲ್ಲಿ ಕಾಣಬಹುದು. ವಿಷ್ಣುಪುರದ ಎಲೆಗಳಲ್ಲಿ ಪ್ರಧಾನರ ಕ್ರಿಯಾತ್ಮಕ ಭರಣಿಗಳಿರುತ್ತವೆ. ಓರಿಸ್ಸಾ ಕಟ್ಟುಗಳಲ್ಲಿ ಹಲವು ವಿಧದ ವಿನ್ಯಾಸಗಳು ಕಾಣುತ್ತವೆ.

ಜನಪದ ಕಲಾವಿದರು ಈ ಕಟ್ಟುಗಳ ಸಿದ್ಧತೆಯಲ್ಲಿ ಪಾಲ್ಗೊಳ್ಳುವ ಇತರ ಕುಟುಂಬಗಳೊಂದಿಗೆ ಕೆಲಸ ಮಾಡುತ್ತಾರೆ. ಸಾಮಾನ್ಯವಾಗಿ ಪೂರ್ವತಯಾರಿಯ ಕಾರ್ಯವು ಮಹಿಳೆಯರಿಂದಲೇ ಪೂರ್ಣಗೊಂಡಿರುತ್ತದೆ. ಸಂಖ್ಯಾಧಾರಿತ ಎಲೆಗಳನ್ನು ಕಿರಿಯ ಕಲಾವಿದರು ಚಿತ್ರಿಸಿದರೆ, ಸಭಾಭವನದ ಎಲೆಗಳನ್ನು ಹಿರಿಯ ಕಲಾವಿದರು ನಿರ್ವಹಿಸುತ್ತಾರೆ. ಸಭಾಭವನದ ಎಲೆಗಳಲ್ಲಿಯ ಆಕೃತಿಗಳಿಗೆ "ಚರಬಿ"ಯನ್ನು ಬಳಕೆ ಮಾಡಲಾಗುವುದು. ಕೆಲವು ಸಂದರ್ಭದಲ್ಲಿ ಕಲಾವಿದರು ಮುಕ್ತ ಹಸ್ತಗಳಿಂದಲೇ ಕಾರ್ಯ ನಿರ್ವಹಿಸುತ್ತಾರೆ. ಹಲವು ಸಲ ದರಬಾರಿ ಮತ್ತು ಸಂಕೀರ್ಣ ವಿನ್ಯಾಸದ ಕಟ್ಟುಗಳಿಗೆ ಕಲಾವಿದರು ವರ್ಣ ಲೇಪಿಸುವಾಗ ಅವುಗಳ ಆಕಾರ, ದೈವೀ ಪ್ರಭಾವಳಿ ಮುಂತಾದ ಭದ್ ಕಟ್ಟುಗಳಿಗೆ ತಮ್ಮಲ್ಲಿರುವ ಮೂಲ ಪುಸ್ತಕವನ್ನು ಆಕರವಾಗಿ ಬಳಸುತ್ತಾರೆ.

ಬಜಾರದ ಕಟ್ಟುಗಳನ್ನು ಸ್ವತಃ ಕಲಾವಿದರೇ ಸಿದ್ಧಪಡಿಸಿಕೊಳ್ಳವರು. ಆದರೆ 'ದರಬಾರ' ಕಟ್ಟುಗಳಿಗೆ ಆಡಳಿತಗಾರರು, ಪ್ರಮುಖರು ವಿಶೇಷವಾಗಿ ವಿನ್ಯಾಸಕ್ಕೆ, ಆದೇಶಕ್ಕೆ ಪರಿಣಿತ ಕಲಾವಿದರು ಸೇರಿ ಈ ಕಟ್ಟುಗಳನ್ನು ಸಿದ್ಧಪಡಿಸುವರು. ಆದುದರಿಂದ ಸಭಾಭವನದ ಮತ್ತು ಜಾನಪದ ಶೈಲಿಯ ಒಂದರ ಪಥ್ಯದಲ್ಲಿ ಮತ್ತೊಂದು ಪ್ರಕಾಶನಗೊಂಡಿತು. ಒಂದೇ ಸಲ ಹೆಚ್ಚು ಜನ ಸೇರಿ ಸಿದ್ಧಪಡಿಸುವರು. ಸಾಮಾನ್ಯ ಕಟ್ಟುಗಳಲ್ಲಿ ಸಣ್ಣ ಪುಟ್ಟ ಕೆಲ ವ್ಯತ್ಯಾಸಗಳು ಕಂಡುಬರುತ್ತವೆ.

ಬಂಗಾರ, ಬೆಳ್ಳಿ, ಹಿತ್ತಾಳೆ, ದಂತ, ಅರಗಿನ ಹಲಗೆ ಮತ್ತು ಆಮೆಯ ಚಿಪ್ಪುಗಳಂತಹ ವಸ್ತುಗಳನ್ನು ದರಬಾರಿ ಎಲೆಗಳಿಗೆ ಬಳಸುತ್ತಾರೆ. ಅದೇ ರೀತಿ ಒಂಟೆ, ರೀನೋಗಳ ಚರ್ಮ, ಕಾಗದದ ತಿರುಳು, ಕಟ್ಟಿಗೆಯ ಪಟ್ಟಿ, ಮೀನಿನ ದೇಹದೊಳಗಿನ ಮುಳ್ಳುಗಳನ್ನು ಸಾಮಾನ್ಯರ ಮತ್ತು ಅತಿ ವೆಚ್ಚದ ಕಟ್ಟುಗಳ ನಿರ್ಮಾಣದಲ್ಲಿ ಬಳಸುತ್ತಾರೆ. ಸಾಮಾನ್ಯವಾಗಿ ಕಾಗದದ ರದ್ದಿ, ಹತ್ತಿಯ ಚಿಂದಿಗಳನ್ನು ಬಜಾರು ಕಟ್ಟುಗಳಾಗಿ ಬಳಸುವರು. ಆದರೆ ಕೆಲವು ಸಲ ಅವೇ ವಸ್ತುಗಳನ್ನು ದರಬಾರಿ ಕಟ್ಟುಗಳಿಗೆ ಬಳಸುವುದು ಉಂಟು. ಇವುಗಳಿಗೆ ಖನಿಜಯುಕ್ತ ಅಥವಾ ಸಸ್ಯಜನ್ಯ ವರ್ಣಗಳನ್ನೂ ಬಳಸುತ್ತಾರೆ. ಆಧುನಿಕ ಗಂಜೀಫಾ ಕಲಾವಿದರು ಬಜಾರದಲ್ಲಿ ದೊರೆಯುವ ವಾರ್ನಿಶ್ ಬಣ್ಣಗಳನ್ನು ಬಳಸುತ್ತಾರೆ. ಕಲಾವಿದರು ಸಾಮಾನ್ಯವಾಗಿ ಈ ಗಂಜೀಫಾ ಎಲೆಗಳನ್ನು ವರ್ತುಳ ಅಥವಾ ಆಯತಾಕೃತಿಗಳಲ್ಲಿ ರಚಿಸುತ್ತಾರೆ. ಎಲೆಗಳ ಹಿಂಬದಿಯು ಸಮತಟ್ಟಾದ ಕಿತ್ತಳೆ, ಕೆಂಪು, ಹಳದಿ, ಹಸಿರು, ನೀಲಿ ಮತ್ತು ಕಪ್ಪು ವರ್ಣದಲ್ಲಿರುತ್ತವೆ. ಕೆಲವು ಸಲ ಎಲೆಯ ತುದಿಗಳನ್ನು ತಿಳು ನೇರ ರೇಖೆಗಳಿಂದ, ಕೆಲವು ಸಲ ಮಧ್ಯದಲ್ಲಿ ಅಲಂಕೃತ ಹೂವಿನ, ಆಭರಣದ ಹಿನ್ನೆಲೆಯಲ್ಲೂ ಸಿದ್ಧಪಡಿಸುತ್ತಾರೆ. ಇವು ಸಭೆಯ ಎಲೆಗಳ ಲಕ್ಷಣಗಳನ್ನೊಳಗೊಂಡಿವೆ. ಇಂತಹ ಲಕ್ಷಣಗಳನ್ನು ಮೈಸೂರು, ಕಾಶ್ಮೀರ, ನಿರ್ಮಲ ಮತ್ತು ಫರ್ಲ್ಲಾರ ಮುಂಡಿಯ ಚಿತ್ರಗಳಲ್ಲೂ ಕಾಣಬಹುದು.

ಗಂಜೀಫಾ ಎಲೆಗಳಿಗೆ ಕಲಾವಿದರಿಂದಲೇ ಮರದ ಕಟ್ಟಿಗೆಯ ಸಂಪುಟಗಳು ಸಿದ್ಧಗೊಳ್ಳುತ್ತಿವೆ. ಮತ್ತು ಅದೇ ಕಲಾವಿದರಿಂದ ಅತಿ ಸುಂದರವಾಗಿ ಆ ಸಂದೂಕಗಳು ಸಭೆಯ ಮತ್ತು ಬಜಾರದ ಎಲೆಗಳಾಗಿ ಸಿದ್ಧಗೊಳ್ಳುತ್ತಿವೆ. ಸಾಮಾನ್ಯವಾಗಿ ಈ ಪಟ್ಟಿಕೆಗಳನ್ನು ಹಗುರವಾದ ಮರದ ಹಲಗೆಗಳಿಂದ ಸಿದ್ಧಪಡಿಸುತ್ತಾರೆ. ಅವುಗಳ ಮೇಲಿನ ಮುಚ್ಚಳಿಕೆಗಳು ಪ್ರದೇಶದಿಂದ ಪ್ರದೇಶಕ್ಕೆ ಹೋದಂತೆ ಅವುಗಳ ಉದ್ದ, ಅಗಲ, ಆಕರಗಳು ಬದಲಾಗುತ್ತ ಸಾಗುತ್ತವೆ. ಅವುಗಳ ಅಲಂಕಾರದ ವಿನ್ಯಾಸಗಳು ಬದಲಾಗುತ್ತವೆ. ರಾಜಸ್ಥಾನಿಯ ಪೆಟ್ಟಿಗೆಗಳು ದೀರ್ಘವಾದ ಚತುಸ್ತಾಕಾರವನ್ನು ಹೊಂದಿದ್ದರೆ, ಕಾಶ್ಮೀರದ ಗಂಜೀಫಾದ ಪೆಟ್ಟಿಗೆಗಳು ನೇರ ಉದ್ದನೆಯ ಆಕಾರದಲ್ಲಿರುತ್ತವೆ. ಪರಲಾಖಮುಂಡಿ ಘನಾತ್ಮಕ ಆಕಾರ ಹೊಂದಿರುತ್ತವೆ. ನಿರ್ಮಲಾ, ಕಡಪಾದ ಪೆಟ್ಟಿಗೆಗಳು ಉದ್ದವಾಗಿರುತ್ತವೆ. ಮೈಸೂರು ದೀರ್ಘ ಚತುಸ್ರಾಕಾರ ಅಥವಾ ಘನಾಕೃತಿಯನ್ನು ಹೊಂದಿರುತ್ತವೆ. ಸೋನೆಪುರದ ಪೆಟ್ಟಿಗೆಗಳು ಚಿಕ್ಕವಾದರೂ ಉದ್ದನೆಯ ಆಕಾರದಲ್ಲಿರುತ್ತವೆ. ಗಂಜಾಮ್ ಜಿಲ್ಲೆಯ ಪೆಟ್ಟಿಗೆಗಳು ಅವಶ್ಯಕತೆಗೆ ತಕ್ಕಂತೆ ದುಂಡಾಗಿಯೇ ಇರುತ್ತವೆ.

ಸುರಪುರ ಭಾಗದಲ್ಲಿಯೂ ಸಹ ಗಂಜೀಫಾ ಚಿತ್ರಗಳು ವಾಸ್ತುಶಿಲ್ಪಗಳ ಹಿನ್ನೆಲೆಯಲ್ಲಿ ರೂಪಗೊಂಡಿದ್ದನ್ನು ಕಾಣುತ್ತೇವೆ. ಈ ಚಿತ್ರಗಳಲ್ಲಿ ನಾಲ್ಕು ಇಂಚು ವೃತ್ತಾಕಾರದ ಎಲೆಗಳಲ್ಲಿ ಶ್ವೇತವರ್ಣದಿಂದ ತಾಜಮಹಲನ್ನು ಮೊಘಲ್ ಶೈಲಿಯಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ. ಈ ಚಿತ್ರಗಳು ೧೯ನೇ ಶತಮಾನದ ಪ್ರಾರಂಭದಲ್ಲಿ ಚಿತ್ರಿತಗೊಂಡಿರಬಹುದು. ಓರಿಸ್ಸಾ, ಹೈದ್ರಾಬಾದ್, ಉತ್ತರ ಪ್ರದೇಶ, ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ ಇತ್ಯಾದಿ ಪ್ರದೇಶಗಳ ಕಲಾಶೈಲಿಗಳ ಪ್ರಭಾವ ಇಲ್ಲಿ ಕಂಡುಬರುತ್ತದೆ.

ಮೊಘಲ್ ಶೈಲಿ

ಒಂದು ಕಲಾಶೈಲಿ ಇನ್ನೊಂದು ಶೈಲಿಯ ಸಂಪರ್ಕಕ್ಕೆ ಬಂದಾಗ ಅದರಿಂದ ಪ್ರಭಾವಿತವಾಗುವುದು ಸಹಜ. ಆದರೆ ಹಾಗೆ ಪ್ರಭಾವವನ್ನು ಒಡಮೂಡಿಸಿಕೊಳ್ಳುವಾಗ ತನ್ನತನವನ್ನೇನು ಕಳೆದುಕೊಳ್ಳುವುದಿಲ್ಲ. ಮಾರ್ಪಾಟು ಒದಗುವುದು ಮೂಲಭೂತವಾದ, ಮುಖ್ಯವಾದ ವಸ್ತುವಿನಲ್ಲಲ್ಲ, ಸಂವಿಧಾನದಲ್ಲಿ. ಸಂವಿಧಾನದಲ್ಲಿಯೂ ಸಂಪ್ರದಾಯದ ಚೌಕಟ್ಟು ಉಳಿದೇ ಉಳಿದುಕೊಳ್ಳುತ್ತದೆ; ಗೌಣವಾದ ವಿವರಗಳು ಮಾರ್ಪಡುತ್ತವೆ. ದಿಲ್ಲಿಯಲ್ಲಿ ಮೊಗಲಾಯಿದೊರೆಗಳು ಕಾರುಬಾರು ನಡೆಸುತ್ತಿದ್ದ ಕಾಲದಲ್ಲಿ ಚಿತ್ರಕಲೆಗೆ ವಿಶೇಷವಾದ ಪ್ರೋತ್ಸಾಹ ದೊರಕಿತಷ್ಟೆ. ಆ ಅರಸರ ಆಶ್ರಯದಲ್ಲಿ ಅವರು ಇಲ್ಲಿಗೆ ಕರೆಯಿಸಿಕೊಂಡ ಪರ್ಶಿಯನ್ ಚಿತ್ರಗಾರರೊಂದಿಗೆ ನಮ್ಮ ಚಿತ್ರಗಾರರೂ ಕೆಲಸ ಮಾಡುತ್ತಿದ್ದರು. ಆಗಿನ ಕಲೆಗಾರಿಕೆಯಲ್ಲಿ ಸುಪ್ರಸಿದ್ಧವಾದ ಕಾವ್ಯವೊಂದಕ್ಕೆ ಸಂದರ್ಭೋಚಿತವಾಗಿ ಚಿತ್ರಗಳನ್ನಳವಡಿಸುವುದು ಅವರ ಕೆಲಸ. 'ಹಮ್ ಜಾನಾಮ' (ದಸ್ತನ್–ಇ–ಅಮೀರ್ ಹಂಜ) ಎಂಬ ಹನ್ನೆರಡು ಸಂಪುಟಗಳ ಪರ್ಶಿಯನ್ ಗ್ರಂಥದಲ್ಲಿ ಒಂದು ಸಾವಿರದ ಮುನ್ನೂರೆಪ್ಪತ್ತೈದು ಚಿತ್ರಗಳಿವೆ! ಇದರ ರಚನೆಯನ್ನು ಮೊದಲು ಮಾಡಿದವನು ಮೊಘಲ್ ದೊರೆ ಹುಮಾಯುನ್ (೧೫೫೫); ಅದನ್ನು ಮುಗಿಸಿದವನು ಅಕ್ಬರ್ (೧೫೫೬–೧೬೦೫). ಮೊದಲು ಮಾಡಿದಾಗ ಅಬ್ದ್–ಅಲ್–ಸಮದ್ (ಪರ್ಶಿಯಾದ ಪ್ರತಿಭಾಶಾಲಿ ಬಿಹ್ಜದ್‌ನ ಶಿಷ್ಯ) ಮತ್ತು ಮೀರ್–ಸಯ್ಯದ್–ಅಲಿ (ಅದೇ ಗುರುವಿನ ಶಿಷ್ಯ) ಎಂಬಿಬ್ಬರು, ಪರ್ಶಿಯನ್ ಕಲಾವಿದರು ಮಾರ್ಗದರ್ಶಕರಾಗಿದ್ದು ಹಲವರು ನಮ್ಮವರೇ ಚಿತ್ರಗಾರರು ಕೆಲಸ ಮಾಡಿದರು. ಎಲ್ಲ ಚಿತ್ರಗಳು ಹೆಚ್ಚು ಕಡಿಮೆ ಒಂದೇ ಶೈಲಿಯಲ್ಲಿವೆ. ಆಗಿನ ಕಲಾಪ್ರಕಾರವೆಂದರೆ ಅನೇಕರು ಸೇರಿ ಒಂದು ಕಲಾಕೃತಿಯನ್ನು ಮುಗಿಸುತ್ತಿದ್ದುದು. ರೇಖಾಚಿತ್ರವನ್ನು (ತರ್‍ಹಾ) ಒಬ್ಬನು ಮೂಡಿಸಿದರೆ, ವ್ಯಕ್ತಿಚಿತ್ರಣ (ಚಿರ ನುಮ) ಇನ್ನೊಬ್ಬನ ಕೆಲಸ, ಹಿಂದಣ ನಿಸರ್ಗ (ಸುರತ್) ಮತ್ತೊಬ್ಬನ ಚಿತ್ರಣ, ಬಣ್ಣ ಹಚ್ಚುವದು (ಅಮ್ಲ್) ಮಗುದೊಬ್ಬ, ಈ ರೀತಿಯಲ್ಲಿ ನಿರ್ವಹಣೆ.

ಹೀಗಿರುವಾಗ ಪರ್ಶಿಯನ್ ಪ್ರಭಾವ ನಮ್ಮ ಕಲಾವಿದರ ಮೇಲೆ ಆಗದೆ ಇರುವುದು ಸಾಧ್ಯವೇ? ಮೊಗಲಾಯಿ ಕಲಾಪ್ರಕಾರ ಮೈದಳೆದದ್ದು ಹೀಗೆ. ಆರಂಭದಲ್ಲಿ ಪರ್ಶಿಯನ್ ಪ್ರಭಾವವೇ ಮುಖ್ಯವಾಗಿದ್ದಿತಾದರೂ ಬರುಬರುತ್ತ ನಮ್ಮ ಕಲಾಸ್ವಭಾವದ್ದೇ ಮೇಲುಗೈಯಾಯಿತು. ಮೊಗಲಾಯಿ ಕಲಾಪ್ರಕಾರ ಪರ್ಶಿಯನ್‌ಗೋತ್ರಕ್ಕೆ ಸೇರುವುದಿಲ್ಲ; ಅದು ಭಾರತೀಯ ಕಲೆಯ ಇತಿಹಾಸದಲ್ಲೇ ಒಂದು ಘಟ್ಟ. ಇದರಲ್ಲಿ ಪರ್ಶಿಯನ್ ಪ್ರಭಾವವೊಂದೇ ಅಲ್ಲದೆ ಸೆರಾಸೆನಿಕ್, ಮಧ್ಯ ಏಷಿಯಾ ಪ್ರಭಾವಗಳೂ (ಪ್ರಮುಖವಾಗಿ ಹೆರತ್ ಮತ್ತು ಸಮರಕಂದ್ ಶೈಲಿಗಳು) ಸೇರಿಕೊಂಡವು. ಕಿರುಚಿತ್ರಗಳು, ವ್ಯಕ್ತಿಚಿತ್ರಣ, ನಿರೂಪಣೆಗಳಿಗೆ ಚಿತ್ರಣ, ಅಕ್ಷರ ಅಲಂಕರಣ, ಹೂಬಳ್ಳಿಯಂತೆ ಚೌಕಟ್ಟನ್ನು ಚಿತ್ರಕ್ಕೆ ಹಾಕುವುದು. ಇವೆಲ್ಲ ಭಾರತೀಯ ಸಾಂಕೇತಿಕತೆಯೊಂದಿಗೆ, ದೇವತಾಚಿತ್ರಣದೊಂದಿಗೆ, ಶಾಸ್ತ್ರ ಪ್ರಮಾಣಬದ್ಧತೆಯೊಂದಿಗೆ ಬೆರೆತುಕೊಂಡವು.[೮]

ಅಕ್ಬರನು ರಾಜ್ಯವಾಳುತ್ತಿರುವಾಗ (೧೫೫೬–೧೬೦೫) ಅವನ ಆಸ್ಥಾನದಲ್ಲಿ ಪರ್ಶಿಯನ್ ಚಿತ್ರಗಾರರೂ, ಇಲ್ಲಿನ ಮುಸಲ್ಮಾನ ಚಿತ್ರಕಾರರೂ, ಹಿಂದೂ ಚಿತ್ರಕಾರರೂ ಅನೇಕರಿದ್ದರು. ಮಧ್ಯ ಏಶಿಯಾದ ಕಲಾ ಸಂಪ್ರದಾಯ ಸ್ವಲ್ಪಮಟ್ಟಿಗೆ ಮುಂದುವರಿಯಿತು. ಹಿಂದೂ ಚಿತ್ರಕಾರರಲ್ಲಿ ಮಾಧು, ಭಗವತಿ, ಮುಕುಂದ್,

೦೮. (ಸಂ.) ಎಸ್. ಕೆ. ರಾಮಚಂದ್ರರಾವ್ : ಶ್ರೀ ತತ್ವನಿಧಿ ಸಂಪುಟ ೧ ಪುಟ ೨೧–೨೩



ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ರಾಮದಾಸ್, ಮುಸ್ಕೀನ್, ಕೇಶು (ಕೇಶವ) ಮುಂತಾದವರ ಹೆಸರುಗಳು ಉಳಿದುಬಂದಿವೆ. ದೊರೆಯ ಆಣತಿಯಂತೆ 'ಶಾ-ನಾಮಾ' (ಪರ್ಶಿಯನ್ ಅರಸರ ವಂಶಾವಳಿ), ಮಹಾಭಾರತ (೧೫೮೨), 'ರಜ್-ನಾಮಾ' (ರಾಮಾಯಣ, ೧೫೯೧) ಈ ಗ್ರಂಥಗಳನ್ನು ಸಿದ್ಧಪಡಿಸಲು ಇವರೆಲ್ಲ ನೆರವಾದರು. ಕಡೆಯ ಪುಸ್ತಕದಲ್ಲಿ ಒಂದು ನೂರ ಅರವತ್ತೆಂಟು ಚಿತ್ರಗಳಿದ್ದುವಂತೆ. ಸಂವಿಧಾನ ಪರ್ಶಿಯನ್, ವಸ್ತು ಭಾರತೀಯ; ಅಲಂಕರಣ ಅವರದ್ದು, ನಿರೂಪಣೆ ನಮ್ಮದು. ಅಕ್ಬರ್‌ನ ಪ್ರಧಾನ ಚಿತ್ರಗಾರ ಶಿರಾಜಿನ ಕ್ವಾಜಾ ಅಬ್ದ್ ಅಲ್-ಸಮದ್. ಇವನಿಂದ ಇಂಡೋ-ಪರ್ಶಿಯನ್ ಶೈಲಿ ರೂಪುಗೊಂಡಿತೆಂದು ಹೇಳುವುದಿದೆ.

ಜಹಾಂಗಿರನ ಕಾಲದಲ್ಲಿ (೧೬೦೫-೧೬೨೭) ಅವನ ಆಶ್ರಿತರಾಗಿದ್ದುಕೊಂಡು 'ಬಾಬರ್-ನಾಮ' ಗ್ರಂಥದ ಸಿದ್ಧತೆಗೆ ನೆರವಾದ ಚಿತ್ರಗಾರರ ಸಂಖ್ಯೆ ಒಂದು ನೂರು ಎಂಬತ್ತು. ಇವರಲ್ಲಿ ನಲವತ್ತೆಂಟು ಮಂದಿ ಚಿತ್ರಗಾರರ ಹೆಸರುಗಳು ಉಳಿದುಕೊಂಡು ಬಂದಿವೆ; ಈ ಹೆಸರುಗಳನ್ನು ನೋಡಿದರೆ ನಲವತ್ತು ಮಂದಿ ನಮ್ಮವರೇ. ಇಂಡೋ-ಪರ್ಶಿಯನ್ ಶೈಲಿಯೇನೋ ಜಹಾಂಗಿರನ ಕಾಲದಲ್ಲೂ ಹೆಸರಿಗೆ ಮುಂದುವರಿಯಿತು. ಆದರೆ ಇರಾನದ ರೇಖಾಚಿತ್ರವನ್ನು ಇರಿಸಿಕೊಂಡು, ಇರಾನದ ಇತರ ಚಿತ್ರಸಮಯಗಳನ್ನು ಕೈಬಿಟ್ಟಿದ್ದು ಕಾಣುತ್ತದೆ. ರಾಜಸ್ಥಾನದ ಕಿರುಚಿತ್ರಶೈಲಿಯ ಪ್ರಭಾವವೇ ಇಲ್ಲಿ ಎದ್ದು ಕಾಣುತ್ತದೆ; ಅದು ಅಜಂತಾದ ಭಿತ್ತಿಚಿತ್ರಗಳ ಶೈಲಿಯನ್ನವಲಂಬಿಸಿದ್ದು; ನೈಜಚಿತ್ರಣದ ಕಡೆ ಒಲವೂ ಹೆಚ್ಚಿತು. ವ್ಯಕ್ತಿಚಿತ್ರಣದಲ್ಲಿ ಮಗ್ಗುಲ ಮುಖವಲ್ಲದೆ, ಮುಕ್ಕಾಲುಭಾಗ ಎದುರಾಗಿರುವ ಮುಖವೂ ಹೆಚ್ಚು ಹೆಚ್ಚಾಗಿ ಬಳಕೆಗೆ ಬಂದಿತು. ವ್ಯಕ್ತಿಯೊಬ್ಬನನ್ನು ಚಿತ್ರಿಸುವಾಗ ಅವನ ಸ್ವಭಾವ, ಗಾಂಭೀರ್ಯ, ಉದಾತ್ತತೆಗಳನ್ನು ತೋರಿಸಬೇಕೆಂಬ ಶಾಸ್ತ್ರದ ವಿಧಿ, ಮೇಲ್ಮೈ ರೇಖೆಗಳು ಸರಳವಾಗಿದ್ದು ಸ್ಪಷ್ಟವಾಗಿರಬೇಕೆಂಬ ಪ್ರಾಚೀನ ಭಾರತೀಯ ಕಲ್ಪನೆ, ಅಲಂಕರಣ ಹೇರಳವಾಗಿರುವ ನಮ್ಮದೇ ಪದ್ಧತಿ ಇವು ಮೊಗಲಾಯಿ ಕಲೆಯ ಮುಖ್ಯಲಕ್ಷಣಗಳಾದುವು. ವ್ಯಕ್ತಿಯದು ಯಥಾರ್ಥ ಪ್ರತಿಕೃತಿಯಾದರೂ ಕಲೆಯಿಂದ ಪರಿಷ್ಕಾರಗೊಂಡ ರೂಪ, ಪ್ರಾಣಿಗಳನ್ನು ಚಿತ್ರಿಸುವಾಗ ಸಹಜತೆ, ಪ್ರಾಣಿಸ್ವಭಾವದ ಮೇಲೆ ಒತ್ತು, ನಿಸರ್ಗ ಚಿತ್ರಣ ಸ್ವತಂತ್ರವಾಗಿರದೆ ಹಿನ್ನೆಲೆಯಲ್ಲಿದ್ದರೂ ಅದರ ಭಾವವೈಶಿಷ್ಟ್ಯ ಎದ್ದು ಕಾಣುವಂತೆ ಮಾಡುವುದು ಇವೆಲ್ಲ ನಮ್ಮ ಸಂಪ್ರದಾಯದ ಕಲ್ಪನೆಗಳೇ. ಇವೆಲ್ಲವನ್ನೂ ಮೊಗಲಾಯಿ ಕಲೆಯಲ್ಲಿ ಕಾಣಬಹುದು.

ಮೊಗಲಾಯಿ ಕಲೆಗಳಲ್ಲಿ ಭಾರತೀಯತೆಯ ಬಗ್ಗೆ ಒಲವು ಮೂಡಿಬಂದದ್ದು ಆಕಸ್ಮಿಕವೇನಲ್ಲ. ಅಕ್ಬರನಿಗೆ ಮತಾಂಧತೆಯಿರಲಿಲ್ಲ; ಎಲ್ಲ ಧರ್ಮಗಳ ವಿಚಾರವಾಗಿಯೂ ಆದರವಿದ್ದಿತು. ಚಿತ್ರಕಲೆ ಇಸ್ಲಾಂ ಧರ್ಮದ ಕರ್ಮಠರಿಗೆ ನಿಷಿದ್ಧವೆಂದಾದರೂ ಮೊಗಲಾಯಿ ಅರಸರು ಅದನ್ನು ಪ್ರೋತ್ಸಾಹಿಸಿದರು. ನಮ್ಮಲ್ಲಿ ಚಿತ್ರಕಲೆ ಶಾಸ್ತ್ರಸಮ್ಮತವಾದದ್ದು ಮಾತ್ರವಲ್ಲ, ಅದಕ್ಕೆ ಧಾರ್ಮಿಕ ಮೌಲ್ಯವೂ ಉಂಟು. ಇದನ್ನು ಆ ಅರಸರು ಗ್ರಹಿಸಿದರು. ಮೇಲಾಗಿ ಅಕ್ಬರನಿಗೆ ಹಿಂದೂ ಹೆಂಡತಿಯರು ಹಲವರಿದ್ದರು. ಅವನ ಮೇಲೆ ಪ್ರಭಾವವನ್ನು ಬೀರಿದ ಸೂಫೀ ಸಂತ ಶೆಯ್ಕ್ ಮುಬಾರಕ್ ವೇದಾಂತಿಯಾಗಿದ್ದವನು; ಹಿಂದೂ ದರ್ಶನಗಳ ಆಳವಾದ ಪರಿಚಯವನ್ನು ಪಡೆದುಕೊಂಡಿದ್ದವನು; ಅವನ ಇಬ್ಬರು ಮಕ್ಕಳು ಅಬುಲ್ ಫಸಲ್ ಮತ್ತು ಶೆಯ್ಕ್ ಫಯಿಸಿ ಇಬ್ಬರೂ ಸರ್ವಧರ್ಮ ಸಮನ್ವಯದ ಗೀಳನ್ನು ಬೆಳೆಸಿಕೊಂಡಿದ್ದರು. ಅಕ್ಬರನು ಭಗವದ್ಗೀತೆ, ರಾಮಾಯಣ, ಮಹಾಭಾರತಗಳನ್ನು ಪರ್ಶಿಯನ್‌ಭಾಷೆಗೆ ಅನುವಾದ ಮಾಡಿಸಿದನು.

ಅಕ್ಬರ್‌ನ ಆಸರೆಯಲ್ಲಿ ಇದ್ದ ನೂರೈವತ್ತು ಚಿತ್ರಗಾರರಲ್ಲಿ ನಾಲ್ಕನೆಯ ಒಂದು ಭಾಗಕ್ಕೂ ಕಡಿಮೆ ಮುಸಲ್ಮಾನ ಚಿತ್ರಗಾರರಿದ್ದರು; ಕೆಲವರು ಜೆಸ್ಯೂಟರಿದ್ದರು. ಉಳಿದವರೆಲ್ಲ ಹಿಂದೂಗಳೆ. ಅವನ ಮಗ ಸಲೀಮ್ (ಜಹಾಂಗೀರ್) ರಾಜಪುತ್ರಿಯೊಬ್ಬಳನ್ನು ಪ್ರೀತಿಸಿ ಮದುವೆಯಾದನು. ಅವನಿಗೂ ಮತಾಂಧತೆಯೇನಿರಲಿಲ್ಲ. ಇರಾನದ ಪ್ರಭಾವ, ಭಾರತೀಯ ಸಂಪ್ರದಾಯದ ಪ್ರಭಾವ ಎರಡೂ ಚಿತ್ರಕಲೆಯಲ್ಲಿ ಒಡಮೂಡಿಕೊಳ್ಳಲು ಕಾರಣನಾದುದು ಮಾತ್ರವಲ್ಲದೆ, ಇವನು ಐರೋಪ್ಯ ಕಲೆಯ ಅನೇಕ ಅಂಶಗಳನ್ನೂ ಬಳಸಿಕೊಳ್ಳಲು ಪ್ರೇರಿಸಿದನು.[೯]

❖❖❖❖

೦೯. (ಸಂ.) ಎಸ್. ಕೆ. ರಾಮಚಂದ್ರರಾವ್ : ಶ್ರೀ ತತ್ವನಿಧಿ ಸಂಪುಟ ೧ ಪುಟ ೪೩-೪೫



ಅಧ್ಯಾಯ – ಏಳು
ಗಂಜೀಫಾ ಚಿತ್ರಕಲೆಯ ಕರ್ನಾಟಕೇತರ ಪ್ರದೇಶಗಳ ತೌಲನಿಕ ಅಧ್ಯಯನ

ಗಂಜೀಫಾ ಎಲೆಗಳ ಇತಿಹಾಸವನ್ನು ಹಿಂದಿನ ಪ್ರಮುಖ ಪುಟಗಳಲ್ಲಿ ದಾಖಲಿಸುತ್ತಾ ಸಾಗುತ್ತಿರುವಂತೆ ಹಲವಾರು ವಿಧದ ಕಟ್ಟುಗಳ ಹಲವಾರು ಜನರಿಂದ ಆಡಿದ ಅನುಭವಗಳು ಮತ್ತು ಈ ಕಟ್ಟುಗಳ ಸ್ವಭಾವವನ್ನು ಅರಿಯುವುದು ಕೂಡಾ ಅವಶ್ಯವಾದುದಾಗಿದೆ. ಗಂಜೀಫಾ ಕಟ್ಟುಗಳ ರಚನಾಕ್ರಮದ ವಿವರಣೆಯು ಸಾಹಿತ್ಯಿಕ ಆಧಾರಗಳನ್ನು ಅವಲಂಬಿಸಿದೆ. ಇವುಗಳಲ್ಲಿ ಮೊಟ್ಟ ಮೊದಲನೆಯದು ಮೊಘಲ್ ಕಾಲಕ್ಕೆ ಸೇರಿದುದು. ಆದರೂ ಬಾಬರನಾಮಾ ಯಾವ ವಿವರಣೆಯನ್ನೂ ಈ ಎಲೆಗಳ ಸ್ಥಿತಿಯ ಬಗ್ಗೆ ಹೇಳುವುದಿಲ್ಲ. ಇದಕ್ಕೆ ಹೋಲಿಸಿದರೆ ಗುಲ್ಲ ಬದನ್ನದ ವಿವರ ಇದಕ್ಕಿಂತಲೂ ಸ್ವಲ್ಪ ಚೆನ್ನಾಗಿದೆ.[೧] ಆದರೂ ಅದು ಇಂದಿಗೂ ನಿಖರವಾಗಿಲ್ಲ. ಈ ಕುರಿತು ಅಬುಲ್ ಫಜಲ್‌ನು ಇವುಗಳ ಕುರಿತು ವಿವರವಾಗಿ ವಿವರಣೆಯನ್ನು ನೀಡಿದ್ದಾನೆ. ಅಬುಲ್ ಫಜಲ್‌ನಂತೆ ಎಂಟು ಹಂತಗಳ ಮತ್ತು ಹನ್ನೆರಡು ಹಂತಗಳಿವೆ. ಆ ಹನ್ನೆರಡು ಹಂತಗಳು ಮತ್ತು ಅವುಗಳ ಸಂಖ್ಯಾಸೂಚಿ ಸಂಕೇತಗಳು ಈ ಕೆಳಗಿನಂತಿವೆ.

೦೧.	ಅಶ್ವಪತಿ	ದಿಲ್ಲಿಯ ಅರಸು	ಕುದುರೆ
೦೨.	ಗಜಪತಿ	ಓರಿಸ್ಸಾ ಅರಸು	ಆನೆ
೦೩.	ನರಪತಿ	ಬಿಜಾಪುರ ಅರಸು	ಕಾಲ್ದಳಗಳು
೦೪.	ಗೃಹಪತಿ	ಕೋಟೆಗಳ ಅರಸು	ಕೋಟೆ
೦೫.	ಧನಪತಿ	ಸಂಪತ್ತಿನ ಅರಸು	ನಾಣ್ಯ ತುಂಬಿದ ಹೂಜಿ
೦೬.	ದಳಪತಿ	ಸವಾರಶೂರ	ಗದೆಗಳ ವೀರ
೦೭.	ನಾವೆಯಪತಿ	ನಾವೆಗಳ ಅರಸು	ಹಡಗು
೦೮.	ತಿಪತಿ ಸ್ತ್ರೀಪತಿ	ರಾಣಿ	ಮಹಿಳೆ

೦೧. Dr. Sarala Chopra: Ganjifa, PP. 20

೦೮.	ತಿಪತಿ ಸ್ತ್ರೀಪತಿ	ರಾಣಿ	ಮಹಿಳೆ
೦೯.	ಸುರಪತಿ	ದೇವತೆಗಳ ಅರಸು	ದೈವಂಗಳು
೧೦.	ಅಸುರ ದೊರೆ	ರಕ್ಕಸ ಅರಸು	ರಕ್ಕಸ
೧೧.	ವನಪತಿ	ಕಾನನದರಸು	ಕಾಡ ಮೃಗಗಳು
೧೨.	ಅಹಿಪತಿ	ಸರ್ಪದೊರೆ	ಸರ್ಪಗಳು

ಅಬುಲ್ ಫಜಲ್‌ನು ಈ ಎಲೆಗಳಲ್ಲಿಯ ಚಿತ್ರಗಳ ಮತ್ತು ಎಲೆಗಳ ಸ್ಥಿತಿ ಕುರಿತು ಕೂಲಂಕುಷವಾಗಿ ಈ ಕೆಳಗಿನಂತೆ ವಿವರಿಸಿದ್ದಾನೆ :

ಅಶ್ವಪತಿ : ಕುದುರೆಗಳ ಅಧಿಪತಿ. ಇದು ಎಲೆಗಳಲ್ಲಿಯೇ ದೊಡ್ಡದಾಗಿದ್ದು ಕುದುರೆಯ ಮೇಲೆ ಕುಳಿತಿರುವ ಅರಸನು ದೆಹಲಿಯ ದೊರೆಯೆಂದು ಸಂಕೇತಿಸುತ್ತದೆ. ದೊರೆಯ ಹಿಂದಿರುವ ರಾಜಗೊಡೆ, ಆಲಮ್‌ಗಳು ಸಾರ್ವಭೌಮತ್ವದ ಸಂಕೇತಗಳಂತಿವೆ. ಎರಡನೆಯ ದೊಡ್ಡ ಎಲೆ ಮಂತ್ರಿ ಅಥವಾ ವಜೀರನದಾಗಿರುತ್ತದೆ. ಇದು ಅರಸನ ಎಲೆಗಿಂತ ಚಿಕ್ಕದಾಗಿರುತ್ತದೆ. ಇಲ್ಲಿ ಕೊಡೆ ಇರದೆ ಕುದುರೆಯ ಮೇಲೆ ಕುಳಿತ ವ್ಯಕ್ತಿಯೇ ಮಂತ್ರಿಯಾಗಿರುತ್ತಾನೆ. ಇದೇ ತರಹದ ಬೇರೆ ಹತ್ತು ಎಲೆಗಳಿರುತ್ತವೆ. ಅವುಗಳಲ್ಲಿ ಕುದುರೆಯ ಚಿತ್ರಗಳು ಸಾಮಾನ್ಯವಾಗಿರುತ್ತವೆ.

ಗಜಪತಿ : ಆನೆಗಳ ಅಧಿಪತಿ. ಇದು ಯಾವ ಅರಸನ ಶಕ್ತಿಯು ಆನೆಗಳ ಬಲದಲ್ಲಿರುವುದೋ? ಎಂಬುದನ್ನು ಸಾಂಕೇತಿಸುವುದು. ಇದು ಓರಿಸ್ಸಾದ ಗಜಪತಿಯ ಅರಸನಿಗೆ ಸಂಬಂಧಿತವಾಗಿದೆ. ಇದರಲ್ಲಿ ಎರಡನೆಯ ದೊಡ್ಡ ಎಲೆಯ ಹತ್ತು ಎಲೆಗಳು ವಜೀರನದಾಗಿರುತ್ತದೆ. ಇದು ಆನೆಗಳೊಂದಿಗೆ ಅಲಂಕೃತವಾಗಿರುತ್ತದೆ.

ನರಪತಿ : ಇದು ಕಾಲ್ದಳವನ್ನು ಆಶ್ರಯಿಸಿದ ಅರಸನನ್ನು ಪ್ರತಿನಿಧಿಸುವುದು. ಇದು ಬಿಜಾಪುರದ ಅರಸನಂತೆ ಎಲೆಗಳಲ್ಲಿ ಅರಸನು ಭವ್ಯವಾದ ಸಿಂಹಾಸನದ ಮೇಲೆ ಆಸೀನನಾಗಿದ್ದಾನೆ. ನಂತರದ ಎಲೆಯಲ್ಲಿ ಆತನ ಮಂತ್ರಿಯು ಮೂರು ಕಾಲಿನ ಚಂದೇಲಿ ಆಸನದ ಮೇಲೆ ಕುಳಿತಿದ್ದಾನೆ. ಈ ಹಂತದ ಹತ್ತು ಎಲೆಗಳಿವೆ. ಅದೇ ರೀತಿ ಎರಡನೇ ಹತ್ತು ಎಲೆಗಳಲ್ಲಿ ಕ್ರಮವಾಗಿ ಒಂದರಿಂದ ಹತ್ತು ಎಲೆಗಳವರೆಗೆ ಕಾಲ್ದಳದ ಸೈನಿಕರಿದ್ದಾರೆ.[೨]

ಧನಪತಿ : ಈತ ಸಂಪತ್ತಿನ ಅಧಿಪತಿ. ಈ ವಿಶೇಷ ಎಲೆಯಲ್ಲಿ ವ್ಯಕ್ತಿಯೋರ್ವನು ಬಂಗಾರ, ಬೆಳ್ಳಿಗಳ ರಾಶಿ ರಾಶಿ ಸಂಪತ್ತಿನ ಮಧ್ಯೆ ಸಿಂಹಾಸನವನ್ನೇರಿ ಕುಳಿತಿದ್ದಾನೆ. ಆತನ ಎದುರಿಗೆ ಚಿಕ್ಕ ಆಸನದ ಮೇಲೆ ಆತನ ವಜೀರನು ಈ ಸಂಪತ್ತಿನ ಲೆಕ್ಕವನ್ನು ಬರೆದಿಟ್ಟುಕೊಳ್ಳುತ್ತಿರುವಂತೆ ಚಿತ್ರಿಸಲಾಗಿದೆ. ಉಳಿದ ೧೦ ಎಲೆಗಳಲ್ಲಿ ಹೂಜಿಯಲ್ಲಿ ತುಂಬಿ ಹರಿಯುತ್ತಿರುವ ನಾಣ್ಯಗಳ ರಾಶಿಯನ್ನು ಚಿತ್ರಿಸಲಾಗಿದೆ.

ದಳಪತಿ : ಇದು ಯುದ್ಧವೀರನ ಚಿತ್ರವನ್ನು ಒಳಗೊಂಡಿದೆ. ಆತ ಯುದ್ಧದ ಕವಚದ ಉಡುಗೆಯನ್ನು ಉಟ್ಟಿದ್ದಾನೆ. ಸಿಂಹಾಸನದ ಮೇಲೆ ಕುಳಿತಿರುವ ಆ ವೀರನ ಸುತ್ತಲೂ ಯುದ್ಧವೀರರು ಇದ್ದಾರೆ. ಯಥಾರೀತಿ ವಜೀರನು ಯಾವುದೋ ವಿಷಯವನ್ನು ವಿವರಿಸುತ್ತಿದ್ದಾನೆ. ಆತನು ಅರಸನ ಮುಂದೆ ಚಿಕ್ಕ ಆಸನವೊಂದರಲ್ಲಿ ಆಸೀನನಾಗಿದ್ದಾನೆ. ಆತನೂ ಕೂಡಾ ಯುದ್ಧದ ಎದೆಕವಚ ಜಯಾಬನ್ನೂ ಧರಿಸಿಕೊಂಡಿದ್ದಾನೆ. ಉಳಿದ ಹತ್ತು ಎಲೆಗಳಲ್ಲಿ ಯುದ್ಧಾಸ್ತ್ರವನ್ನು ಹೊತ್ತ ವೀರರ ಚಿತ್ರಗಳಿವೆ.

ನಾವೆಯ ಪತಿ : ಇದು ಜಲನೌಕೆಯ ಅಧಿಪತಿಯ ಚಿತ್ರವನ್ನು ಹೊಂದಿದೆ. ವಿಶಾಲವಾದ

೦೨. Dr. Sarala Chopra : Structure of Ganjifa Pack, PP. 20

ಹಡಗಿನ ಮೇಲೆ ಸಿಂಹಾಸನದ ಮೇಲೆ ವ್ಯಕ್ತಿಯೊಬ್ಬ ಆಸೀನನಾಗಿದ್ದಾನೆ. ಆತನ ಮಂತ್ರಿಯು ಯಥಾರೀತಿ ಒಂದೇ ಆಸನದ ಮೇಲೆ ಆಸೀನನಾಗಿದ್ದಾನೆ. ಉಳಿದ ಒಂದರಿಂದ ಹತ್ತು ಎಲೆಗಳಲ್ಲಿ ಜಲನೌಕೆಯ ಚಿತ್ರಗಳನ್ನು ಅಲಂಕರಿಸಲಾಗಿದೆ.

ತಿಪಾತಿ : ಹಿರಿದಾದ ಎಲೆಯು ತೋರಿಸುವಂತೆ ರಾಣಿಯು ಸಿಂಹಾಸನದ ಮೇಲೆ ಆಸೀನಳಾಗಿದ್ದಾಳೆ. ಆಕೆಯ ಸುತ್ತ ರಾಣಿಯ ಸಖಿಯರಿದ್ದಾರೆ. ಎರಡನೇ ಹಂತದ ಎತ್ತರದ ಎಲೆಯಲ್ಲೂ ಮಹಿಳಾ ಮಂತ್ರಿಯು ಚಂದೇಲಿಯಂತಹ ಚಿಕ್ಕ ಆಸನದ ಮೇಲೆ ಕುಳಿತುಕೊಂಡಿದ್ದಾಳೆ. ಉಳಿದ ಸಂಖ್ಯಾಸೂಚಿ ಎಲೆಗಳಲ್ಲಿ ಒಂದರಿಂದ ಹತ್ತರವರೆಗೆ ವಿವಿಧ ಸ್ತ್ರೀಯರ ಚಿತ್ರಗಳಿವೆ.

ಸುರಪತಿ : ಇದರಲ್ಲಿ ದೇವತೆಗಳ ದೊರೆಯಾದ ದೇವರಾಜನ ಚಿತ್ರವಿದೆ. ಈತನನ್ನು ಇಂದ್ರ ಎಂದೂ ಕರೆಯುವರು. ಆತ ಹಿರಿದಾದ ಸಿಂಹಾಸನದ ಮೇಲಿದ್ದಾನೆ. ಆತನ ಮಂತ್ರಿ ಕಿರು ಆಸನದ ಮೇಲೆ ಕುಳಿತುಕೊಂಡಿದ್ದಾನೆ. ಉಳಿದ ಹತ್ತು ಎಲೆಗಳಲ್ಲಿ ವಿವಿಧ ದೇವತೆಗಳ ಚಿತ್ರಗಳಿವೆ.

ಅಸುರಪತಿ : ಈ ಎಲೆಯಲ್ಲಿ ದೈತ್ಯರ ದೊರೆಯ ಚಿತ್ರವಿದೆ. ಹಿರಿದಾದ ಅಳತೆಯ ಎಲೆಯಲ್ಲಿ ದೊರೆಯ ಸುಲೇಮಾನನ ಚಿತ್ರವಿದೆ. ಆತ ದಾವುದ (ಡೆವಿಡ್ಡನ ಮಗ), ಆತ ಸಿಂಹಾಸನದ ಮೇಲೆ ಕುಳಿತುಕೊಂಡಿದ್ದಾನೆ. ಆತನ ಮಂತ್ರಿ ಕಿರು ಆಸನದ ಮೇಲೆ ಕುಳಿತುಕೊಂಡಿದ್ದಾನೆ. ಉಳಿದ ಒಂದರಿಂದ ಹತ್ತು ಎಲೆಗಳಲ್ಲಿ ವಿವಿಧ ರಕ್ಕಸರ ಚಿತ್ರಗಳಿವೆ.

ವನರಾಜ : ಈ ಎಲೆಯಲ್ಲಿ ಕಾಡಿನ ದೊರೆಯ ಚಿತ್ರವಿದೆ. ದೊರೆತನದ ಹಿರಿದಾದ ಅಳತೆಯಲ್ಲಿ ಹುಲಿಯ ರಾಜನ ಚಿತ್ರವಿದೆ. ಉಳಿದ ಪ್ರಾಣಿಗಳು ಆತನ ಸುತ್ತಲೂ ಇವೆ. ಚಿರತೆಯನ್ನು ವಜೀರನನ್ನಾಗಿ ಚಿತ್ರಿಸಲಾಗಿದೆ. ಉಳಿದ ಒಂದರಿಂದ ಹತ್ತು ಎಲೆಗಳಲ್ಲಿ ವಿವಿಧ ರೀತಿಯ ಕಾಡುಪ್ರಾಣಿಗಳ ಚಿತ್ರಗಳಿವೆ.

ಅಹಿಪತಿ : ಇದರಲ್ಲಿ ಸರ್ಪರಾಜನ ಚಿತ್ರವಿದೆ. ಅರಸನ ಅಳತೆಯ ಹಿರಿದಾದ ಎಲೆಯಲ್ಲಿ ದೊಡ್ಡದಾದ ಹಾವೊಂದು ಡ್ರಾಗಲ್ ಪ್ರಾಣಿಯ ಮೇಲೆ ಕುಳಿತುಕೊಂಡಿದೆ. ಮಂತ್ರಿಯ ಸ್ಥಾನದಲ್ಲಿ ಒಂದು ಸರ್ಪವು ಮತ್ತೊಂದು ಸರ್ಪದ ಮೇಲೆ ಕುಳಿತುಕೊಂಡಿದೆ. ಯಥಾರೀತಿ ಉಳಿದ ಹತ್ತು ಎಲೆಗಳಲ್ಲಿ ವಿವಿಧ ಸರ್ಪಗಳ ಚಿತ್ರಗಳಿಂದ ಅಲಂಕರಿಸಲಾಗಿದೆ. ಅಬುಲ್ ಫಜಲ್‌ನ ಮಾತಿನ ವ್ಯಾಖ್ಯಾನದಂತೆ ಮೊದಲಿನ ಆರು ಹಂತದ ಎಲೆಗಳು ಸಶಕ್ತವಾಗಿವೆ. ಉಳಿದ ಆರು ಎಲೆಗಳು ದುರ್ಬಲವಾದ ಎಲೆಗಳಾಗಿವೆ.[೩]

ಈವರೆಗೂ ವಿವರಿಸಿದಂತೆ ಎಂಟು ಹಂತಗಳ ಗಂಜೀಫಾ ಕಟ್ಟುಗಳು ೯೬ ಎಲೆಗಳ ಮಂಗಲ ಕಟ್ಟುಗಳ ಶ್ರೇಣಿಯ ಸಾಲಿನಲ್ಲಿಯೇ ನಿಂತಿವೆ. ಮತ್ತೊಮ್ಮೆ ಅವುಗಳ ವಿವರ ಮರುಕಳಿಸದಂತೆ ನಂತರ ವಿವರಿಸುತ್ತ ಪ್ರತಿ ಹಂತದಲ್ಲೂ ೧೨ ಎಲೆಗಳಿವೆ. ಅವುಗಳಲ್ಲಿ ಎರಡು ಸಭಾಭವನದ ಎಲೆಗಳಿದ್ದರೆ ಉಳಿದ ಹತ್ತು ಎಲೆಗಳು ಸಂಖ್ಯಾಸೂಚಿಯಂತಿವೆ. ಪ್ರತಿ ಹಂತದಲ್ಲೂ 'ಮೀರ್' ಎಲೆಯೇ ಅತಿ ದೊಡ್ಡ ಎಲೆಯಾಗಿರುತ್ತದೆ. ಆತನೊಂದಿಗೆ ವಜೀರ ಇರುವುದು ಕಂಡುಬರುತ್ತದೆ. ಈ ಎಲೆಯಲ್ಲಿ ವಜೀರನು ಈ ಹಂತದ ಸಾಂಕೇತಿಕ ಕಟ್ಟನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ವಾಹನವೊಂದನ್ನು ಏರಿ ಹೇಳುತ್ತ ಸಾಗಿದ್ದಾನೆ. ಸಾಮಾನ್ಯವಾಗಿ ದೊರೆಯಾದ ಮೀರನನ್ನು ಎತ್ತರದ ಸ್ಥಾನದಲ್ಲಿ ಕೂಡಿಸಲಾಗಿದೆ. ಸಂಖ್ಯಾಸೂಚಿ ಎಲೆಗಳು ಆತನ ಹಂತಗಳ ವಿವಿಧ ಲಕ್ಷಣಗಳನ್ನು ಪ್ರತಿನಿಧಿಸುತ್ತಿರುವಂತಿವೆ. ಅವುಗಳ ವಿವರಣೆಗಳು ಈ ರೀತಿಯಲ್ಲಿ ಇವೆ :

---

೦೩. Dr. Sarala Chopra : Structure of Ganjifa Pack, PP. 21



ಸಂಗ್ರಹ ; ಕರ್ನಾಟಕ ಚಿತ್ರಕಲಾ ಪರಿಷತ್ ಗ್ರಂಥಾಲಯ, ಬೆಂಗಳೂರು

ತಾಜ್ : ತಾಜ್ ಇದೊಂದು ಉರ್ದು ಭಾಷೆಯ ಪದ. ತಾಜ್ ಎಂದರೆ ಕಿರೀಟ ಎಂದು ಮೂಲಾರ್ಥದಲ್ಲಿದ್ದು ಅದು ನಿರಂಕುಶನಾದ ಮೊಘಲ್ ಅರಸರ ಸಭಾಸ್ಥಾನದ ಪಾರಮ್ಯದ ಸಂಕೇತದಂತಿದೆ. ಇವುಗಳಲ್ಲಿ ಪ್ರಾದೇಶಿಕವಾಗಿ ಅರಸರ ಕಿರೀಟ, ಆಕಾರ, ಮಜಲುಗಳ ಸಂಕೇತವು ಮತ್ತು ಗುಣಾತ್ಮಕತೆಗಳು ಭಿನ್ನ-ವಿಭಿನ್ನವಾಗಿರುತ್ತವೆ. ಮೂಲದಲ್ಲಿ ಅರಸರ ಕಿರೀಟವು ಮಂಗೋಲಿಯನ್ನರ ವಾಡಿಕೆಯ ಟೋಪಿಯಂತಿತ್ತು. ಅದು ಮುಂದೆ ಆಭರಣಗಳಿಂದ ಅಲಂಕಾರಗೊಂಡಿತು. ಮೂರು ಅಂಶಗಳ ಈ ಶಿರೋ ಆಭರಣದಲ್ಲಿ ಮಧ್ಯಪ್ರದೇಶ, ಕಾಶ್ಮೀರಗಳೊಂದಿಗೆ ಮೂರು ದಳಗಳ ಪದ್ಮದಂತಿದೆ. ಓರಿಸ್ಸಾದ ಎಲೆಗಳಲ್ಲಿಯ ಮಜಲುಗಳನ್ನು ಪುಲಾ ಅಥವಾ ಪುಲಿ ಎನ್ನುತ್ತಾರೆ. ಇಡಿ ಕಿರೀಟವನ್ನು ಸುಂದರವಾದ ಹೂವಿನಂತೆ ಚಿತ್ರಿಸಲಾಗಿರುತ್ತದೆ. ರಾಜಸ್ಥಾನಿಯ ಎಲೆಗಳಲ್ಲಿ ಸಣ್ಣ ರುಮಾಲಿನಂತಿದ್ದು ಹಸಿರು, ಕೆಂಪುಚುಕ್ಕೆಗಳು ಆಭರಣದಂತೆ ಗೋಚರಿಸುತ್ತವೆ. ಕಂದು ಅಥವಾ ಕೋಕೋದ ವರ್ಣದ ಮಜಲುಗಳನ್ನು ರಾಜಸ್ಥಾನಿ, ಓರಿಸ್ಸಾದ ಎಲೆಕಟ್ಟುಗಳಲ್ಲಿ ಕಾಣುತ್ತೇವೆ. ಕಾಶ್ಮೀರ ಮತ್ತು ಮಹಾರಾಷ್ಟ್ರಗಳಲ್ಲಿ ಹಳದಿಯ ವರ್ಣವಿದ್ದರೆ ದಕ್ಷಿಣ ಪ್ರಾಂತದ ಎಲೆಗಳಲ್ಲಿ ಹಸಿರುವರ್ಣದ ಶಿರಪೇಟಾಗಳಿರುತ್ತವೆ.

ಸಫೇದ : ಎಂಬ ಪದಕ್ಕೆ ಫಾರ್ಸಿ, ಉರ್ದುಗಳಲ್ಲಿ ಬಂಕಾ, ಸಿಕ್ಕಾ, ದಿರಾಮ ಅಥವಾ ರೂಪಾ ಎಂಬ ಅರ್ಥಗಳಿವೆ. ಇವುಗಳ ಮೂಲ ಅರ್ಥವನ್ನು ಬಿಳಿ ಅಥವಾ ಬೆಳ್ಳಿ ಮತ್ತು ಗುಣಮಟ್ಟದ ಬೆಳ್ಳಿಯ ನಾಣ್ಯವೆಂದೇ ಹೇಳುತ್ತಾರೆ. ಈ ಉಡುಗೆ ಬಿಳಿ ಅಥವಾ ಬೆಳ್ಳಿಯ ವರ್ತುಳದಲ್ಲಿಯೇ ಗುರುತಿಸಲಾಗುವುದು ಅದಕ್ಕೆ ಕೆಂಪು ಅಥವಾ ಬಂಗಾರದ ಅಂಚಿನ ಪರಿಧಿ ಇರುತ್ತದೆ. ಇದಕ್ಕೆ ಮೆಹತಾಬ ಮತ್ತು ಚಂದಿ ಎಂದು ಸಾಂಕೇತಿಕವಾಗಿ ಗುರುತಿಸಿ ಪ್ರತಿನಿಧಿಸುತ್ತಾರೆ. ಸಾವಂತವಾಡಿಯ ಮಂಗಲ ಕಟ್ಟುಗಳಲ್ಲೆ ದೊರೆ ವೀರನನ್ನಾಗಿ ಬಿಳಿಯ ಚಂದಿರನಂತೆ ಗುರುತಿಸಲಾಗುವುದು. ಕಾಶ್ಮೀರದ ಕಟ್ಟುಗಳ ಮೇಲೆ ಬಿಳಿ ವರ್ತುಳದ ಚಕ್ರಗಳ ಮೇಲೆ ಮುದ್ದಾದ ಮುಖದ ಆಕೃತಿಗಳನ್ನು ಚಿತ್ರಿಸಲಾಗುತ್ತದೆ. ಮತ್ತು ಇದೇ ರೀತಿ ಸೇಪುರ, ಮಧ್ಯಪ್ರದೇಶಗಳ ಎಲೆಗಳಲ್ಲಿ ಶ್ವೇತಕಮಲದ ಚಿತ್ರಣಗಳಿರುತ್ತವೆ. ಅರಸರ ವಾಸಸ್ಥಾನದ ಮಜಲಿನ ಹಿನ್ನೆಲೆ ಸದಾ ಕಪ್ಪಾಗಿ ಇರುತ್ತದೆ. ಅಕಸ್ಮಾತ್ ಈ ಎಲೆಗಳನ್ನು ರಾತ್ರಿಯಲ್ಲಿ ಆಡಿದರೆ ಅಪತಾಬ್‌ನೇ ಅರಸನ ಎಲೆಯಾಗಿರುತ್ತದೆ. ಈ ದೊಡ್ಡೆಲೆ ಹೊಂದಿದವರು ಈ ಆಟವನ್ನು ಸೂರ್ಯೋದಯ ಅಥವಾ ಸೂರ್ಯಾಸ್ತದ ಸಮಯದಲ್ಲಿ ಪ್ರಾರಂಭಿಸುತ್ತಾರೆ.[೦೪]

ಶಮ್‌ಶೇರ್ : ಈ ಮಜಲಿನ ಹಂತವು ಮೂಲತಃ ರಾಜಸಭೆಯ ಅರಮನೆಯ ಕಾವಲುಪಡೆಯನ್ನು ಸಾಂಕೇತಿಸುವುದು. ಎಲೆಯ ಮೇಲೆ ಉದ್ಧವಾಗಿ ಬಾಗಿರುವ ಪರ್ಷಿಯಾದೇಶದ ಖಡ್ಗವನ್ನು ಚಿತ್ರಿಸಲಾಗಿರುತ್ತದೆ. ಅದರ ಮೇಲಿನ ಚಿತ್ರವು ಭಾರತದ ಬಾಗಿದ ತಲ್ವಾರದಂತೆ ಕಾಣಿಸುವುದು. ಕೆಲವು ಸಲ ಹೆಚ್ಚುವರಿ ಸೇರ್ಪಡೆಯಾಗದೆ ಇರುವ ಕೀಲು ಕವಚ ಅಥವಾ ಖಡ್ಗದ ಹಿಡಿಕೆಯ ಹತ್ತಿರ ಇರುವ ಉಬ್ಬಿದ ಹಿಡಿ ಇರದ ಚಿತ್ರದಂತೇ ಕಾಣಿಸುವುದು. ಓರಿಸ್ಸಾದ ಎಲೆಗಳ ಮೇಲೆ ನೇರ ಅಲುಗಿನ ಖಡ್ಗದಂತೆ ಕಾಣುವುದು. ಸಭಾಭವನದ ಎಲೆಯ ಕಟ್ಟುಗಳಲ್ಲಿಯ ಚಿತ್ರಗಳು ಕೆಲವು ಸಲ ದೇಹಕವಚ ಮತ್ತು ಶಿರಕವಚಗಳಿಲ್ಲದಂತೆ ಕಾಣುತ್ತವೆ. ಈ ಹಂತದಲ್ಲಿ ಬಳಕೆಯಾದ ವರ್ಣವು ಕೆಂಪು, ರಕ್ತವರ್ಣದ ಕೆಂಪು, ಕೆಮ್ಮನೆಯ ಕಂದು ಅಥವಾ ಕಂದಿನ ಕನಕವರ್ಣದಂತೆ ಕಾಣಿಸುವುದು.

ಗುಲಾಮ : ಎಂದರೆ ಸೇವಕ ಅಥವಾ ಆಳು ಎಂದು ಹೇಳಬಹುದು. ಆದರೆ ಇಲ್ಲಿ ವೇತನದ

---

೦೪. Dr. Sarala Chopra : Structure of Ganjifa Pack, PP. 22

ಅಥವಾ ಕೂಲಿಯು ಸೇವಕನೆಂದೆ ಅರ್ಥವಾಗುವುದು. ಈ ಅರಮನೆಯ ಮಂಜಲಿನಲ್ಲಿ ಮನೋರಂಜನಾಕಾರರ, ಸಭಾಸದಸ್ಯರ ಮತ್ತು ಸೇವಕರ ಚಿತ್ರಗಳಿಸುತ್ತವೆ. ಈ ಅಂಕಣದಲ್ಲಿ ಯಾವಾಗಲೂ ಮಾನವ ಆಕೃತಿಗಳೇ ಇರುತ್ತವೆ. ಅಲಂಕೃತವಾದಂತಹ ಸಭಾಭವನದ ದೃಶ್ಯಾವಳಿಗಳು ಜೀವಂತ ದೃಶ್ಯಗಳಂತಿರುತ್ತವೆ. ಈ ಗುಲಾಮರ ವಸ್ತ್ರಗಳ ಮೇಲಿರುವ ಅಂಕಿ-ಸಂಖ್ಯೆಗಳು, ದಟ್ಟವಾದ ವರ್ಣಛಾಯೆಗಳು ಈ ಎಲೆಗಳ ಕಟ್ಟುಗಳಿಗೆ ವಿಶೇಷ ವೈಭವವನ್ನು ತರುತ್ತವೆ. ಸಾಮಾನ್ಯವಾಗಿ ಮಾರುಕಟ್ಟೆಯ ಕಟ್ಟುಗಳ ಮೇಲೆ ಮನುಷ್ಯಾಕೃತಿಗಳು ಇರುತ್ತವೆ.

ಗುಲಾಮ 'ವೀರ'ನನ್ನು ಯಾವಾಗಲೂ ಗಜಸವಾರನನ್ನಾಗಿ ಅಥವಾ ಆನೆಗಳ ಮೆರವಣಿಗೆಯಲ್ಲಿ ತೋರಿಸಲಾಗುವುದು. ಮಂತ್ರಿ 'ವಜೀರ'ನನ್ನು ಎತ್ತುಗಳ ಸವಾರನನ್ನಾಗಿ ಅಥವಾ ಎತ್ತುಗಳು ಎಳೆಯುವ ವಾಹನದ ಮೇಲೆ ಅಧಿಕಾರದ ದಂಡವನ್ನು ಅಥವಾ ಕೋಲನ್ನೋ ಹಿಡಿದುಕೊಂಡು ಕುಳಿತಿರುತ್ತಾನೆ. ಇಂತಹ ಸಂಲಕ್ಷಣವುಳ್ಳದ್ದು ಪ್ರಾಚೀನ ಗಜಪತಿಯ ಕಟ್ಟನ್ನು ನೆನಪಿಸುವಂತಿದೆ. ಇದರ ಆಟವನ್ನು ಅಕ್ಬರ ಮತ್ತು ಮಮ್ಲುಕ ಆಡುತ್ತಿದ್ದರಂತೆ. ಈ ಅಂಕಣದ ಹೆಸರನ್ನು ಪುರಿಯಲ್ಲಿ ತಪ್ಪಾಗಿಸಲಾಗಿದೆ. ಓರಿಸ್ಸಾ ಅದೊಂದು ಗುಲಾಬಿ ಹೂ; ವಿಶೇಷವಾಗಿ ಕೆಂಪು ಗುಲಾಬಿಯು ಈ ಅಂಕಣವನ್ನು ಪ್ರತಿನಿಧಿಸುವುದು. ಕಾಶ್ಮೀರ ಮತ್ತು ಓರಿಸ್ಸಾಗಳ ಅಂಕಣಗಳು ಬಿಳಿಯ ವರ್ಣದವಾಗಿರುತ್ತವೆ. ಮಹಾರಾಷ್ಟ್ರದಲ್ಲಿ ಕೆಂಪು ಮತ್ತು ಬಂಗಾರ, ಹಳದಿ ಅಥವಾ ಬಂಗಾರಬಣ್ಣದ ಹಳದಿಯನ್ನು ರಾಜಸ್ಥಾನ ಮತ್ತು ದಕ್ಷಿಣ ದಿಸೆಗಳಲ್ಲಿ ಬಳಸುತ್ತಾರೆ.

ಚಾಂಗ : ಈ ಅಂಕಣವು ಅರಸನ ಸಂಗೀತ ಮತ್ತು ರಾಜವೈಭವದ ಮನೋರಂಜನೆಗಳನ್ನು ಪ್ರತಿನಿಧಿಸುವುದು. ಇದು ಚಿಕ್ಕದಾದ ಹಾರ್ಪನಂತಹ ತಂತಿಯ ವಾದ್ಯವನ್ನು ಸಂಲಕ್ಷಣವನ್ನಾಗಿ ಮಾಡಿಕೊಂಡಿದೆ. ಅದು ಸಾಮಾನ್ಯವಾಗಿ ಪ್ರಾದೇಶಿಕವಾಗಿ ನೋಡಲು ಬೇರೆ ಬೇರೆಯಾಗಿಯೇ ಕಾಣುವುದು. ರಾಜಸ್ಥಾನಿಯ ಎಲೆಗಳಲ್ಲಿ ಈ ಹಾರ್ಪ ತಂತಿವಾದ್ಯದ ತುದಿಯ ಕಮಾನಿನಲ್ಲಿ ಪಕ್ಷಿಯ ಶಿರವಿರುವುದು. ಓರಿಸ್ಸಾದ ಮಾರುಕಟ್ಟೆಯ ಕಲಾವಿದ, ದಕ್ಷಿಣ ಮತ್ತು ಮಹಾರಾಷ್ಟ್ರದ ಕಟ್ಟುಗಳಲ್ಲಿ ಈ ವಾದ್ಯವನ್ನು ನಿರ್ಲಕ್ಷಿಸಲಾಗಿರುವುದು. ಅದನ್ನು ಶಂಕುವಿನ ತುದಿಯಂತೆ ಚಿತ್ರಿಸಲಾಗಿರುವುದು. ಟೋಪಿಗಳಲ್ಲಿ ಕೋಡು ಅಥವಾ ಚಾಪು ಪುರಾತನ ಗ್ರೀಕ್ ಟೋಪಿಯಂತಿರುವುದು.[೨೫] ಈ ಕಟ್ಟುಗಳ ಹಿನ್ನೆಲೆಯು ಸಾಮಾನ್ಯವಾಗಿ ದಟ್ಟವಾಗಿ ಅಥವಾ ಖಡು ಆಲಿವ್ಹ ಹಸಿರಿನದಾಗಿರುತ್ತದೆ. ಇಲ್ಲಿ ಚಾಂಗಮೀರಳನ್ನು ಸಾಮಾನ್ಯವಾಗಿ ಸಖಿಯರೊಂದಿಗೆ ಸ್ತ್ರೀ ಆಸನದ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿರುವುದು. ವಜೀರನ ಎಲೆಯಲ್ಲಿ ಮಹಿಳೆಯು ಒಂಟೆಯನ್ನು ಸವಾರಿ ಮಾಡಿಕೊಂಡು ಹಾರ್ಪ ವಾದ್ಯ ಬಾರಿಸುತ್ತಾ ಹೋಗುವಂತೆ ಚಿತ್ರಿಸಲಾಗಿರುತ್ತದೆ. ಸಭಾಭವನದ ಸಾಮಾನ್ಯವಾಗಿ ಅನೇಕ ಎಲೆಗಳಲ್ಲಿ ಚಾಂಗ ಮಂಜಲನ್ನು ಮಹಿಳೆಯಂತೆ ತೋರಿಸಲಾಗುವುದು. ಕೆಲವು ಸಲ ಅದು ಅರಸರ ಅಂತಃಪುರ ಜನಾನಾವನ್ನೂ ಕೂಡಾ ಸಂಕೇತಿಸುವುದು. ಅಲ್ಲಿ ಸಂಗೀತ ಕಚೇರಿ ಸಾಗಿರುವುದನ್ನು ಕಾಣಬಹುದು. ಶ್ರೀಯುತ ಆರ್.ವಿ. ಲಾಡೆನ್‌ರು ಅಭಿಪ್ರಾಯ ಪಡುವಂತೆ ಈ ಹಂತಗಳು ತಿಪಾತಿ ಹಂತಗಳೊಂದಿಗೆ ಸಂಬಂಧಪಟ್ಟಿವೆ. ಅದನ್ನು ಐನ್-ಎ-ಅಕಬರಿಯಲ್ಲಿ ಆದೇಶಗಳೊಂದಿಗೆ ಮಹಿಳಾ ಸಂಗೀತಗಾರ್ತಿಯರು ವಾದ್ಯ ನಿರತರಾಗಿರುವುದನ್ನು ತೋರಿಸಲಾಗಿರುತ್ತದೆ.

ಸುರಖ : ಈ ಕಟ್ಟಿನ ಅರ್ಥವೆಂದರೆ ಕೆಂಪು ಅಥವಾ ಮೂಲದಲ್ಲಿ ಬಂಗಾರದ ನಾಣ್ಯವನ್ನೇ

೦೫. Dr. Sarala Chopra : Structure of Ganjifa Pack, PP. 22

ಪ್ರತಿನಿಧಿಸುತ್ತಿತ್ತು. ಈ ಕುರಿತು ಹಲವಾರು ಹೆಸರುಗಳನ್ನು ನೋಡಬಹುದು ಮೋಹರಾ, ಅಶ್ರಫಿ, ಜಾರ್-ಎ-ಸುರ್ಕ್ಕ ಅಥವಾ ಕಾಂಚನ. ಯಾವಾಗ ಈ ಹಂತವನ್ನು ಸೂರ್ಯನೊಂದಿಗೆ ಗುರುತಿಸಲಾಯಿತೋ ಆಗ ಇದನ್ನು ಸೂರಬ ಮತ್ತು ಸೂರ್ಯ ಎಂದೇ ಕರೆಯಲಾಯಿತು. ಈ ಮಂಜಿಲದ ಮೀರ ಎಂದರೆ ಅಫತಾಬ ಅಥವಾ ಅಕ್ಕಿ ಮತ್ತು ಮತ್ತೊಂದು ಅರ್ಥದಲ್ಲಿ ಸೂರ್ಯನೇ ನಡೆಸುವವನು ಎಂದಾಗುವುದು. ಈ ಆಟವನ್ನು ಸೂರ್ಯೋದಯ ಅಥವಾ ಸೂರ್ಯಾಸ್ತದ ಕಾಲದಲ್ಲಿ ಆಡುತ್ತಿದ್ದರೆ ಈ ಎಲೆಯುಳ್ಳವನೇ ಈ ಆಟವನ್ನು ಆರಂಭಿಸಬೇಕು. ಸುರಖಮೀರವು ಸಾರ್ವಭೌಮತ್ವದ ಸಂಕೇತದಂತೆ ಸಿಂಹ ಮತ್ತು ಹುಲಿಗಳ ಹಿನ್ನೆಲೆಯಲ್ಲಿ ಕಾಣುವುದು. ಉದ್ದನೆಯ ಕೊಡೆಯನ್ನು ಸೂರ್ಯನಿಗೆ ಹಿಡಿದಿರಲಾಗಿರುತ್ತದೆ. ಈ ಕಟ್ಟುಗಳ ವಜೀರನನ್ನು ಸಿಂಹ ಅಥವಾ ಹುಲಿಸವಾರನಂತೇ ತೋರಿಸಲಾಗುವುದು. ಕಾಶ್ಮೀರದ ಎಲೆಯ ಕಟ್ಟುಗಳಲ್ಲಿ ವಜೀರನನ್ನು ರೆಕ್ಕೆಗಳಿರುವ ದೇವಕನ್ಯೆಯಂತೆ ತೋರಿಸಲಾಗುವುದು. ಮುಖಕ್ಕೆ ವರ್ತುಳ ಹಾಕಿ ಸೂರ್ಯನಂತೆ ಚಿತ್ರಿಸಲಾಗುವುದು. ಈ ಮಂಜಿಲನ ಸಂಕೇತವು ಬಂಗಾರದ ಹಳದಿಯಾಗಿದೆ ಅಥವಾ ಬಿಳಿಯ ವರ್ತುಳ. ಸಾಮಾನ್ಯವಾಗಿ ಅದಕ್ಕೆ ಕೆಂಪು ಪರಿಧಿಯ ಅಂಚು ಇರುತ್ತದೆ. ಕಾಶ್ಮೀರದಲ್ಲಿ ಈ ಮನೆಯ ವರ್ಣ ಕಪ್ಪು ಆಗಿರುತ್ತದೆ. ಕೇಸರಿ ಮತ್ತು ಅಥವಾ ರಕ್ತಕೆಂಪು ವರ್ಣವನ್ನು ದಕ್ಷಿಣದ ಎಲೆಗಳಲ್ಲಿ ಉಪಯೋಗಿಸುವರು. ಓರಿಸ್ಸಾದಲ್ಲಿ ನೀಲಿ ಮತ್ತು ರಾಜಸ್ಥಾನ, ಮಹಾರಾಷ್ಟ್ರಗಳಲ್ಲಿ ತಿಳಿ ಹಸಿರನ್ನು ಉಪಯೋಗಿಸುವರು. ಆರ್.ವಿ. ಲೇಡೆನ್‌ರು ಸರಿಯಾಗಿ ಇದನ್ನು ಗುರುತಿಸಿದ್ದಾರೆ. ಇದನ್ನು ಖಗೋಳ ಸಂಕೇತ ಸೂರ್ಯನ ನೆಲೆಯಲ್ಲಿ ಸೂರ್ಯೋದಯದ ಹಿನ್ನೆಲೆ ಸಿಂಹ ಅಧೀರ ಹುಲಿಗಳನ್ನು ತಾರರೆಯ ಸೆಲಜಖ ಸಂತತಿಯ ಕೋನ್ಯಾದವರು ಬಿಲ್ಲೆಯಂತೆ ಬಳಸಿದ್ದಾರೆ. ಇದನ್ನೆ ಅವರು ಕ್ರಿ.ಶ. ೧೨೩೬-೧೨೪೨ರ ಕಾಲದಲ್ಲಿ ಬಳಕೆಗೆ ತಂದ ಬೆಳ್ಳಿ ನಾಣ್ಯದ ಮೇಲೆ ಬಳಸಿಕೊಂಡಿದ್ದಾರೆ. ಮತ್ತೊಂದು ಉದಾಹರಣೆ ಎಂದರೆ-ಮೊಘಲ್ ದೊರೆ ಜಹಾಂಗೀರನ ಬಂಗಾರದ ನಾಣ್ಯದಲ್ಲೂ ಸಿಂಹ ಮತ್ತು ಹುಲಿಯ ಚಿತ್ರಗಳನ್ನು ಕ್ರಿ.ಶ. ೧೬೧೧ರಿಂದ ೧೬೧೩ರಲ್ಲಿ ಜಾರಿಗೆ ತರಲಾಯಿತು. ಲ್ಯಾಡೆನ್‌ನ ಅಭಿಪ್ರಾಯದಂತೆ ಗಂಜೀಫಾ ಕಲಾವಿದರು ಸರುಖಮೀರ ಎಲೆಗಳಿಗಾಗಿ ಈ ಬಂಗಾರದ ನಾಣ್ಯಗಳಂತೆ ಊಹಿಸಿರಬಹುದೆಂದು ಊಹಿಸುತ್ತಾರೆ. ಇದು ಹಾಗೇ ಆಗಿರಬಹುದು. ಆದರೆ ಈ ಕಟ್ಟುಗಳ ಮೂಲವು ಅನಿಶ್ಚಿತವಾಗಿದೆ. ಇದರ ಖಚಿತತೆಯ ಬಗ್ಗೆ ಭರವಸೆ ಕಾಣದು. ಆದರೆ ಈ ಕಟ್ಟುಗಳು ಮಾತ್ರ ಇದಕ್ಕಿಂತಲೂ ಪೂರ್ವದವಾಗಿದ್ದವು. ಇದರ ತತ್ವವನ್ನು ಪರಿಷ್ಕರಿಸಬೇಕಾಗಿದೆ.[೬]

ಭರತ : ಎಂದರೆ ದಾಖಲೆ, ಆಜ್ಞೆ ಅಥವಾ ಆಶ್ವಾಸನೆಯನ್ನು ನೀಡಿರುವ ಹುಂಡಿ ಅಥವಾ ಚೆಕ್ಕು ಇದ್ದಂತೆ. ಅದು ಅರಸರ ಸಭಾಭವನದ ಕಾರ್ಯಾಲಯವನ್ನು ಸಂಕೇತಿಸುವುದು. ಈ ಹಂತವು ಆಯತದ ಅಥವಾ ಬಹುಬಾಣಾಕೃತಿಯ ಚಪ್ಪಟೆಯನ್ನು ಹೊಂದಿರುವಂತಹುದಾಗಿರುವುದು. ಓರಿಸ್ಸಾದಲ್ಲಿ ಬಿಳಿಯ ಹಿಡಿಯ ವರ್ತುಳವನ್ನು ಸಂಕೇತಿಸುವುದು. ಇದರ ಮಧ್ಯ ಪರ್ಷಿಯಾದ ಭಾಷೆಯಲ್ಲಿ ಬರಾತ ಎಂದು ಜೋಡಿಸಿದೆ. ಅಥವಾ ಆಕಾರರಹಿತ ಲಿಪಿಗಳು ಬರವಣಿಗೆಯನ್ನು ಸೂಚಿಸುತ್ತವೆ. ಸಭಾಭವನದ ಕಲಾವಿದರು ಈ ವಾಕ್ಯವನ್ನು ಬಹು ಜಾಗರೂಕತೆಯಿಂದ ಕೆತ್ತಿದ್ದಾರೆ. ಮಾರುಕಟ್ಟೆಯಲ್ಲಿ ಬರಿ ಲಿಪಿಗಳನ್ನು ಕಾಣುತ್ತೇವೆ. ಈ ಹಂತದಲ್ಲಿಯ ವರ್ಣವು ಕಿತ್ತಳೆಯಿಂದ ಕೆಂಪಿಗೆ ಬಳಸಲಾಗುತ್ತಿರುತ್ತದೆ. ಆದರೆ ಮಹಾರಾಷ್ಟ್ರದಲ್ಲಿ ಸಾಮಾನ್ಯವಾಗಿ ಹಸಿರೇ ಇರುವುದು.

೦೬. Dr. Sarala Chopra : Structure of Ganjifa Pack, PP. 23



[illegible] Safed gir [illegible] Shamsher [illegible] Chang [illegible] Qimash [illegible]









ಸಂಗ್ರಹ ; ಕರ್ನಾಟಕ ಚಿತ್ರಕಲಾ ಪರಿಷತ್ ಗ್ರಂಥಾಲಯ, ಬೆಂಗಳೂರು



(l to r) 8,10 of Dog suit (5) 4 of Elephant suit [illegible] of camel suit 10 of Elephant suit, [illegible]
[illegible]6 of Bull suit, 4 of Horse suit, 6 of Stag suit, 10 of Gaja Sardula suit, (6

ಖಿಮಾಶ್ ಅಥವಾ ಟೋಮಾಶ್ : ಇದು ಪರ್ಶಿಯಾದೇಶದ ಶಬ್ದವಿದ್ದು ಇದಕ್ಕೆ ಅನೇಕ ಅರ್ಥಗಳಿರುತ್ತವೆ. ಉದಾ : ತಾಂಡು, ನೇಯ್ಗೆ, ಮನೆಯ ಪೀಠೋಪಕರಣಗಳು ಅಥವಾ ವಣಿಕನೆಂದು. ಈ ಕುರಿತು ಐನ್-ಎ-ಅಕ್ಬರಿಯು ವಿವರಿಸುವಂತೆ ಖಿಮೋಶ ಎಲೆಗಳಲ್ಲಿ ಭಾರ ಹೊತ್ತು ಸಾಗುತ್ತಿರುವ ಪ್ರಾಣಿಗಳನ್ನು ನಡೆಸಿಕೊಂಡು ಹೋಗುವಂತಿದೆ. ವಸ್ತುಗಳನ್ನು ಪರಿಶೀಲಿಸಿದ ಮತ್ತು ಸಂಗ್ರಹಿಸುವ ಅಥವಾ ಸಂಗ್ರಹ ಕೋಣೆ. ಈ ಹಂತವನ್ನು ದೊಡ್ಡ ಮೆತ್ತನೆಯ ಹಾಸಿಗೆ, ದಿಂಬುಗಳಿರುವ ಅಥವಾ ತಕ್ಕಾಯಿಗಳಿರುವಂತೆ ಚಿತ್ರಿಸಲಾಗುವುದು. ಆಗಾಗ ಅದನ್ನು ಬೇಯಿಸಿದ ಒಣ ರೊಟ್ಟಿಯಂತೆ ತಪ್ಪು ತಿಳಿದುಕೊಳ್ಳಲಾಗುವುದು. ಅದರ ವರ್ಣ ಹಳದಿ. ಇದು ಅದರ ಛಾಯೆಯು. ಕಾಶ್ಮೀರ ಹೊರತಾಗಿ ಹಸಿರಾಗಿ ಇರುವುದು.[೭]

ವೈವಿಧ್ಯಮಯವಾದ ಎಂಟು ಹಂತಗಳ ಮೊಘಲ್ ಗಂಜೀಫಾ ಎಲೆಗಳು

ಅ. ಪ್ರಾಣಿ, ಪಕ್ಷಿ ಮತ್ತು ಪುಷ್ಪಗಳಿರುವ ಗಂಜೀಫಾ ಎಲೆಗಳು :

ವೈವಿಧ್ಯಮಯ ಪಕ್ಷಿಗಳನ್ನು ಮತ್ತು ಪ್ರಾಣಿಗಳನ್ನು ಸೇರಿಸುವುದು ಸಾಮಾನ್ಯ ಹಂತದ ಗಂಜೀಫಾ ಎಲೆಗಳ ಲಕ್ಷಣ. ಆದರೆ ಇಂದಿಗೂ ರಾಜಸಭೆಯ ಕಟ್ಟುಗಳು ತಮ್ಮ ವರ್ಣಗಾರಿಕೆ ಮತ್ತು ವಿನ್ಯಾಸಗಳನ್ನು ಉಳಿಸಿಕೊಂಡಿವೆ. ಸಾಮಾನ್ಯಹಂತದ ಲಕ್ಷಣವಿರುವ ಎಲೆಯ ಕಟ್ಟುಗಳಲ್ಲಿ ಆಗಾಗ ಪ್ರಾಣಿಗಳು ಮತ್ತು ಪಕ್ಷಿಗಳು ಕಲಾತ್ಮಕವಾಗಿ ಸೇರುತ್ತಲೇ ಇರುತ್ತವೆ.[೮] ಶ್ರೀಯುತ ಆರ್.ವಿ. ಲ್ಯಾಡೆನ್‌ರು ಅಭಿಪ್ರಾಯಪಡುವಂತೆ, ಪ್ರಾಚೀನ ಕಾಲದ ಹಲಗೆಯ ಮಣೆಯ ಮೇಲಿನ ಆಟಗಳು ಅವುಗಳ ಪ್ರಾಣಿಗಳು ಈ ಎಲೆಯಾಟಗಳ ಗಂಜೀಫಾದ ಮೇಲೆ ಪ್ರಭಾವ ಬೀರಿರಬಹುದೆನ್ನುತ್ತಾರೆ. ಪ್ರಾರಂಭಿಕ ಕಾಲದ ಸಫೇದಿ ಅರಗಿನ ಚಿತ್ರಗಳು ಮತ್ತು ಅವುಗಳಲ್ಲಿ ನಕ್ಷೆ ಮತ್ತು ಕನಿಷ್ಠ ಎರಡಾದರೂ ಪ್ರಾಣಿಗಳಿರುತ್ತಿದ್ದವು. ಕೆಲವು ಗಂಜೀಫಾ ಎಲೆಗಳಂತೂ ಪ್ರಾಣಿಗಳನ್ನೇ ಪ್ರತಿನಿಧಿಸುವಂತಹ ಎಲೆಗಳ ಕಟ್ಟುಗಳಾಗಿವೆ. ಪಕ್ಷಿ ಮತ್ತು ಪ್ರಾಣಿಗಳಿರುವ ರಾಜಸ್ಥಾನ ಮತ್ತು ಓರಿಸ್ಸಾದ ಎಲೆಗಳ ಕಟ್ಟುಗಳು ಅದ್ಭುತ ಜನಪ್ರಿಯತೆಯನ್ನು ಹೊಂದಿವೆ. ಪಕ್ಷಿಗಳದೆ ಒಂದು ಕಟ್ಟಿಗೆ ಕಥೇರಿ ಸರಾ ಎಂದು ಕರೆಯುವರು. ಅವುಗಳನ್ನು ಮಾರುಕಟ್ಟೆ ಹಂತದಲ್ಲಿ ಸಾಮಾನ್ಯರಿಗಾಗಿ ಸಿದ್ಧಪಡಿಸಿರಲಾಗುವುದು. ಕಾಶ್ಮೀರದ ಹೂಗಳಿರುವ ಕೆಲವು ಕಟ್ಟುಗಳು ಉಳಿದುಕೊಂಡಿದ್ದು ಅವು ಕಾಶ್ಮೀರಮೂಲದ ಕೃತಿಗಳಾಗಿವೆ.

ಹಿಂದೂ ಕಥಾನಕದ ಗಂಜೀಫಾ ಎಲೆಗಳು :

ಆಕಸ್ಮಿಕವಾಗಿ, ಆಟದ ಅನಿವಾರ್ಯತೆಗಾಗಿ ಹಿಂದೂಧರ್ಮದ ಕೆಲ ಪ್ರಸಂಗಗಳನ್ನು ಆಟದ ಎಲೆಗಳ ಚಿತ್ರಗಳಲ್ಲಿ ಚಿತ್ರಿಸಲಾಗಿದೆ. ಓರಿಸ್ಸಾದ ಎಲೆಗಳಲ್ಲಿ ಎಂಟು ಮಜಲುಗಳ ಗಂಜೀಫಾ ಎಲೆಗಳನ್ನು 'ಆಟತರಂಗಿ-ಸರಾ' ಎಂದು ಕರೆಯುತ್ತಾರೆ. ಈ ಎಲೆಯ ಕಟ್ಟುಗಳಲ್ಲಿ ಮೊಘಲ್ ಗಂಜೀಫಾದ ಕೆಲ ಲಕ್ಷಣಗಳನ್ನು ಉಳಿಸಿಕೊಂಡು ಚಿಕ್ಕ ಬದಲಾವಣೆಯೊಂದಿಗೆ ಸಭಾಭವನದ ಎಲೆಕಟ್ಟುಗಳನ್ನು ರಚಿಸಲಾಗಿದೆ. ಆದರೆ ಸಭಾಭವನದ ಎಲೆಯ ಕಟ್ಟುಗಳಲ್ಲಿ ಹಿಂದೂದೇವತೆಗಳ ಮತ್ತು ವೀರರ ಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಮಂತ್ರಿಯ ಅಷ್ಟಮಾಲಾ ಸಾರಾದ ಎಲೆಯ ಮೇಲೆ ಕೃಷ್ಣನ ಎಂಟು ಲೀಲೆಗಳನ್ನು ಚಿತ್ರಿಸಲಾಗಿದೆ. ಎಂಟು ಹಂತಗಳ ರಾಮಾಯಣದ ಕಟ್ಟನ್ನು ಪರಲ್ಕೆಮಂಡಿಯಿಂದ ಸಂಗ್ರಹಿಸಿ ಅದನ್ನು ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದೆ. ಹಿಂದೂ

೦೭. Dr. Sarala Chopra : Structure of Ganjifa Pack, PP. 24

೦೮. ಸಂತೋಷಕುಮಾರ ಗುಲ್ವಾಡಿ : ಗಂಜೀಫಾ, ಪುಟ-೯

ಆಕಾರ ಮತ್ತು ಶೈಲಿಯ ಇದೊಂದು ಸುಂದರ ಕೃತಿಯಾಗಿದೆ. ಅದು ಆಯತಾಕೃತಿಯ ಆನೆಯ ದಂತದ ಕೃತಿಯಾಗಿದ್ದು, ಅದು ಮೈಸೂರು ಮೂಲದ ಕೃತಿಯಾಗಿದೆ. ಇದನ್ನು ದಿವಾನ ಬಹದ್ದೂರ ಜಲಾನ ಕಿಲ್ಲಾ ಪಾಟ್ನಾದ ಸಂಗ್ರಹಾಲಯದಿಂದ ಸಂಗ್ರಹಿಸಲಾಗಿದೆ. ಮತ್ತೊಂದು ವರ್ತುಳಾಕೃತಿಯಂತಿದ್ದು ಅದು ದಕ್ಷಿಣದ ಶೈಲಿಯನ್ನು ಹೊಂದಿರುವ 'ಕಾರಿ' ಸಂಗ್ರಹಾಲಯದ್ದಾಗಿದೆ. ಈ ಮಜಲಿನಲ್ಲಿ ಈ ಮೇಲೆ ಹೇಳಿದ ಎರಡು ವಿಧದ ಲಕ್ಷಣಗಳನ್ನು ಹೊಂದಿದೆ. ಮತ್ತು ಅಷ್ಟ ದಿಕ್ಪಾಲಕರ ವಾಹನಗಳನ್ನು ಅದು ಒಳಗೊಂಡಿದೆ. ಇಂದ್ರನ ಆನೆ, ಅಗ್ನಿಯ ಟಗರು, ಯಮನ ಕೋಣ, ವಾಯುವಿನ ಹರಿಣಿ ಮುಂತಾದವು. ಪ್ರಾಣಿಗಳಿಗೆ ಅತಿ ಹತ್ತಿರದ ಗಂಜೀಫಾ ಕಟ್ಟು ಇಲ್ಲಿದೆ. ಸಪ್ತಋಷಿಗಳ ಆನೆದಂತದ ಗಂಜೀಫಾ ಮತ್ತು ಸತಿ ಅರುಂಧತಿ (ವಸಿಷ್ಠನ ಹೆಂಡತಿ) ಎಂಟು ಹಂತಗಳ ಕೃತಿಯು ಹಿಂದೂ ಕಥಾನಕದ ಗಂಜೀಫಾ ಕಟ್ಟು ಆಗಿರುವುದು ಮತ್ತೊಂದು ಉದಾಹರಣೆಯಾಗಿದೆ.

ಮೊಘಲ್ ಗಂಜೀಫಾದ ವಿಸ್ತೃತ ರೂಪಗಳು :

ಮಜಲುಗಳನ್ನು ಹೆಚ್ಚಿಸುವ ಉದ್ದೇಶದಿಂದ ಮತ್ತು ಆಟಗಳ ಎಲೆಗಳನ್ನು ವಿಸ್ತೃತಗೊಳಿಸುವ ಕ್ರಮವು ಭಾರತ ದೇಶದಲ್ಲಿ ಪ್ರಾರಂಭಿಕ ಹಂತದ ದಿನಗಳಲ್ಲೇ ಇತ್ತು. ಈ ಕುರಿತು ಆರ್.ವಿ. ಲಾಡೇನ್‌ರು ಚರ್ಚಿಸಿರುವಂತೆ ಎಂಟು ಅಂಕಣಗಳ ಸೇನಾದಳದ (ಮಿಲಿಟರಿ) ಆಟವನ್ನು ಹನ್ನೆರಡು ಅಂಕಣಗಳಿಗೆ ವಿಸ್ತರಿಸಲಾಯಿತು. ಅದರಲ್ಲಿ ನಾಲ್ಕು ಪ್ರಧಾನ ಸ್ವರ ಸಂಗತಿಗಳು ಸೇರಿಕೊಂಡಿರುವುದು ಅಸಮರ್ಪಕ ಅಂಕಣವಾಗಿದೆ. ಮೊಘಲ್ ಗಂಜೀಫಾಗಳನ್ನು ಹತ್ತು ಮತ್ತು ಹನ್ನೆರಡು ಅಂಕಣಗಳಿಗೆ ವಿಸ್ತರಿಸಲಾಯಿತು. ಅದರಲ್ಲಿ ಹೆಚ್ಚುವರಿ ಅಂಕಣಗಳಾಗಿ ಬಾಟಲ್ಲು, ಕಪ್ಪು, ನವಿಲು, ಹೂ ಮತ್ತು ಪ್ರಾಣಿಗಳನ್ನು ಸೇರಿಸಲಾಯಿತು. ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ್ ವಸ್ತುಸಂಗ್ರಹಾಲಯದ ಒಡೆತನದಲ್ಲಿ ಹತ್ತು ಅಂಕಣಗಳ ಮೊಘಲ್ ಗಂಜೀಫಾ ಕಟ್ಟುಗಳಿವೆ. ಅವು ೧೯ನೆಯ ಶತಮಾನದಲ್ಲಿ ಆಂಧ್ರಪ್ರದೇಶದ ಬನಗನಪಲ್ಲಿಯಿಂದ ಬಂದಂಥವು. ಅವುಗಳಲ್ಲಿ ಕುದುರೆ ಮತ್ತು ಕರಡಿಗಳಿವೆ. ಇದರ ಪಕ್ಕದಲ್ಲಿಯೇ ಮೊಘಲ್ ಕಟ್ಟಿನ ಮೂಲ ಪ್ರತಿಯೂ ಇದೆ. ಮತ್ತೊಂದು ಉದಾಹರಣೆ ಎಂದರೆ ಗುಲ್ ಮತ್ತು ಬುಲ್‌ಬುಲ್ (ಗುಲಾಬಿ ಮತ್ತು ಪಕ್ಷಿ)ನ ಗಂಜೀಫಾ ಆಟದ ಎಲೆಯ ಕಟ್ಟನ್ನು ಲೇಯಿನ್ ಪಿಲ್ಡೆನ್‌ದ ಸ್ಟೈಯಿಲ್ ಕರಟೇನ್ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿ ಇಡಲಾಗಿದೆ.

ಗಂಜೀಫಾದಲ್ಲಿ ದಶಾವತಾರಗಳು

ಸಂಸ್ಕೃತ ಮತ್ತು ಮರಾಠಿಯ ಪಠ್ಯಗಳು ದಶಾವತಾರ ಗಂಜೀಫಾದ ವಿವರವನ್ನು ನೀಡುತ್ತವೆ. ಹರಿಕೃಷ್ಣನ ಕ್ರೀಡಾಕೌಶಲಮ್, ದಾಜಿ ಜ್ಯೋತಿರ್ವಿದರ ಶೇಟ್ ವಿನೋದನಾ ಕಾವ್ಯ, ಬಾಹು ಗೋವಿಂದ ಸಾಪಕರ ಅವರ ಉಪಯುಕ್ತ ಕಮತಕರಾ ಸಂಗ್ರಹ ಮತ್ತು ಭಗವಾನ್ ಗಂಗಾಧರ ಪಾಂಡೆಯವರ ಗಂಜೀಪಾಂಚ ಖೇಲಗಳಂತಹ ಮೂಲ ಕೃತಿಗಳು ಗಂಜೀಫಾದ ಮರುಚರಿತ್ರೆ ಬರೆಯಬಲ್ಲ ಕೃತಿಗಳಾಗಿರುತ್ತವೆ. ಇದರೊಂದಿಗೆ ಕೆಲ ಲೇಖನಗಳನ್ನು ಬರೆದಿರುವ ಹರಿಪ್ರಸಾದ ಶಾಸ್ತ್ರಿಯವರ ಮತ್ತು ಆನಂದ ಬಾಬಾಜಿ ದೇವಧರ ಅವರ ಸಚಿತ್ರ ಮರಾಠಿಯ ದಶಾವತಾರ ಗಂಜೀಫಾಗಳ ಪ್ರಸಿದ್ಧ ಕೃತಿಗಳಾಗಿವೆ. ಈ ಕುರಿತು ಅದರ ಕಟ್ಟುಗಳ ರಚನೆ ಮತ್ತು ವಿವರಣೆಯೊಂದಿಗೆ ಮೇಲಿನ ವಿಷಯದಲ್ಲಿ ಅಲ್ಲಲ್ಲಿ ಉಳಿದುಕೊಂಡಂತಹ ಆಯ್ದ ಉದಾಹರಣೆಗಳೊಂದಿಗೆ ನೀಡಲಾಗಿದೆ.

ವಿಷ್ಣುವಿನ ದಶಾವತಾರಗಳನ್ನು ಈ ಕಟ್ಟುಗಳು ಸಾಂಕೇತಿಸುತ್ತವೆ. ಅವತಾರಗಳ ಯಾದಿಯು ಪ್ರದೇಶದಿಂದ ಪ್ರದೇಶಕ್ಕೆ ಒಂದೇ ರೀತಿಯದಾಗಿರುವುದಿಲ್ಲ. ಅವುಗಳ ಸ್ಥಾನಗಳು ಕೂಡಾ ಹಲವು ಕಟ್ಟುಗಳಲ್ಲಿ ವಿಭಿನ್ನವಾಗಿರುತ್ತವೆ. ಉದಾಹರಣೆಗೆ ಹೇಳುವುದಾದರೆ ರಾಜಸ್ಥಾನ, ನೇಪಾಲ್ ಮತ್ತು ಬಂಗಾಲದ ದಕ್ಷಿಣಭಾಗದ ಕಟ್ಟುಗಳಲ್ಲಿ ಕೃಷ್ಣನನ್ನು ಸೇರಿಸಿಕೊಂಡಿಲ್ಲ ಮತ್ತು ಓರಿಸ್ಸಾದ ಜಗನ್ನಾಥನು ಉಳಿದ ಪ್ರಾದೇಶಿಕ ಕಟ್ಟುಗಳಲ್ಲಿ ಇರದಿದ್ದರೂ ಇಲ್ಲಿಯ ಕಟ್ಟುಗಳಲ್ಲಿ ಉಳಿದುಕೊಂಡಿದ್ದಾನೆ. ಇದಕ್ಕೆ ಕಾರಣವೆಂದರೆ ಜಗನ್ನಾಥ, ಕೃಷ್ಣ, ಬಲರಾಮ ಮತ್ತು ಬುದ್ಧನಂಥವರಿಗೆ ಪ್ರತ್ಯೇಕ ಕಟ್ಟುಗಳನ್ನು ಮಾಡುವುದೇ ಮುಖ್ಯ ಕಾರಣವಾಗಿತ್ತು. ಮತ್ತು ಪ್ರಾದೇಶಿಕವಾಗಿ ಅವರ ಸ್ಥಾನಗಳು ಬೇರೆ ಬೇರೆಯಾಗುತ್ತಿದ್ದವು. ಪ್ರಾದೇಶಿಕ ನಂಬುಗೆ ಮತ್ತು ಆದ್ಯತೆಗಳಿಗೆ ಅನುಸರಿಸಿ ಬಲರಾಮ, ಕೃಷ್ಣ, ಬುದ್ಧ ಮತ್ತು ಜಗನ್ನಾಥ ಸ್ಥಾನಗಳು ಎಂಟು ಮತ್ತು ಒಂಭತ್ತನೇ ಸ್ಥಾನಕ್ಕೆ ಬರುತ್ತವೆ.[೯]

ಈ ಕೆಳಗೆ ತೋರಿಸಿದಂತೆ ಅವತಾರಗಳು ಬೇರೆ ಬೇರೆ ಸ್ಥಳಗಳಲ್ಲಿ ಬೇರೆಯಾಗಿರುತ್ತವೆ :

ವಿಷ್ಣುಪುರ, ಪಶ್ಚಿಮ ಬಂಗಾಲ ಮತ್ತು ಓರಿಸ್ಸಾ

೦೧. ಮತ್ಸ್ಯ	೦೬. ಪರಶುರಾಮ
೦೨. ಕೂರ್ಮ	೦೭. ರಾಮ
೦೩. ವರಾಹ	೦೮. ಬಲರಾಮ
೦೪. ನರಸಿಂಹ	೦೯. ಜಗನ್ನಾಥ
೦೫. ವಾಮನ	೧೦. ಕಲ್ಕಿ

ರಾಜಸ್ಥಾನ, ಪೂರ್ವಾಂಚಲ ಮತ್ತು ನೇಪಾಲ್

೦೧. ಮತ್ಸ್ಯ	೦೬. ಪರಶುರಾಮ
೦೨. ಕೂರ್ಮ	೦೭. ರಾಮ
೦೩. ವರಾಹ	೦೮. ಬಲರಾಮ
೦೪. ನರಸಿಂಹ	೦೯. ಬುದ್ಧ
೦೫. ವಾಮನ	೧೦. ಕಲ್ಕಿ

ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ

೦೧. ಮತ್ಸ್ಯ	೦೬. ಪರಶುರಾಮ
೦೨. ಕೂರ್ಮ	೦೭. ರಾಮ
೦೩. ವರಾಹ	೦೮. ಕೃಷ್ಣ
೦೪. ನರಸಿಂಹ	೦೯. ಬುದ್ಧ
೦೫. ವಾಮನ	೧೦. ಕಲ್ಕಿ

ಮೈಸೂರು ಮತ್ತು ದಕ್ಷಿಣ ಭಾಗ

೦೧. ಮತ್ಸ್ಯ	೦೬. ಪರಶುರಾಮ
೦೨. ಕೂರ್ಮ	೦೭. ರಾಮ

೦೯. Dr. Sarala Chopra : Structure of Ganjifa Pack, PP-24


JOKER



(l. to r.) Sáheb, Bibi; Pari; Pahalwan Phúla 3; Sańkha 4. Fruit 5. Phūla 6: Dawal 7. Phula 8 Phula 9: Phula 10 (22)



(l. to r.) *Matsya rājā, pradhāna; Varāha rājā, pradhāna; Vāmana rājā, pradhāna; Buddha rājā, pradhana* (13)

(l. to r.) *Kūrma rājā, pradhāna; Narasiṁha rājā, pradhāna; Rāma rājā pradhāna; Kalki rājā, pradhana.* (13)

೦೩. ವರಾಹ ೦೮. ಬಲರಾಮ

೦೪. ನರಸಿಂಹ ೦೯. ಕೃಷ್ಣ

೦೫. ವಾಮನ ೧೦. ಕಲ್ಕಿ

ಪ್ರತಿಯೊಂದು ಕಟ್ಟು ೧೨೦ ಎಲೆಗಳನ್ನು ಮತ್ತು ಹತ್ತು ಮಜಲುಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಮಜಲಿನಲ್ಲೂ ಹನ್ನೆರಡು ಎಲೆಗಳಿರುತ್ತವೆ. ಪ್ರತಿ ಹಂತವೂ ಶ್ರೀ ವಿಷ್ಣುವಿನ ಅವತಾರವನ್ನು ಪ್ರತಿನಿಧಿಸುವುದು. ಇದರೊಂದಿಗೆ ಹತ್ತು ಅವತಾರದ ಕಟ್ಟು, ಹನ್ನೆರಡು, ಹದಿನಾರು ಮತ್ತು ಇಪ್ಪತ್ತು ಮಜಲುಗಳ ಕಟ್ಟುಗಳನ್ನು ಕೂಡಾ ಓರಿಸ್ಸಾದಲ್ಲಿ ಸಿದ್ಧಪಡಿಸುತ್ತಾರೆ.[೧೦] ಹನ್ನೆರಡು ಹಂತಗಳ ಕಟ್ಟು ೧೪೪ ಎಲೆಗಳನ್ನು ಒಳಗೊಂಡಂತೆ ಗಣೇಶ, ಸ್ಕಂದ ಮತ್ತು ಉಳಿದ ಹಲವು ದೇವತೆಗಳನ್ನು ಒಳಗೊಂಡಿರುತ್ತದೆ. ಈ ಎಲ್ಲಾ ಕಟ್ಟುಗಳು ಇಂದಿಗೂ ಬಳಕೆಯಲ್ಲಿವೆ. ಪ್ರತಿ ಹಂತದಲ್ಲೂ ರಂಗ, ವರ್ಣ, ಬಾಜಿ, ಜಾತಿಯ ಎರಡು ಸಭಾಭವನದ ಎಲೆಗಳಿವೆ. ರಾಜಾ ಮತ್ತು ಮಂತ್ರಿ ಅಥವಾ ಪ್ರಧಾನರ ಮತ್ತು ಹತ್ತು ಅಂಕಿಗಳ ಚಿಹ್ನೆಗಳೊಂದಿಗೆ ಹಲವು ಎಲೆಗಳಿರುತ್ತವೆ. ಸಭಾಭವನದ ಆಟದ ಎಲೆಗಳಲ್ಲಿ ಕಲಾವಿದನ ಕಲೆಯನ್ನು ತೋರಿಸಲು ಅವಕಾಶ ಒದಗಿಸಲಾಗಿದೆ. ಕೆಲವು ಸಲ ಅತ್ಯುತ್ತಮವಾದ ಜಾಣ್ಮೆಯನ್ನು ರಾಜಾ ಮತ್ತು ಪ್ರಧಾನರ ಎಲೆಗಳಿಗೆ ವಿನಿಯೋಗಿಸಲಾಗುವುದು. ಉಳಿದ ಎಲೆಗಳಲ್ಲಿ ಹೆಚ್ಚಿನ ಲಕ್ಷ್ಯವನ್ನು ಒಂದು ಅಥವಾ ಇತರ ಎಲೆಗಳಿಗೆ ನೀಡಲಾಗುವುದು. ಸಾವಂತವಾಡಿ ಮತ್ತು ಮಧ್ಯಪ್ರದೇಶದ ಕಲಾವಿದರು ರಾಜಾ ಕಾರ್ಡಿನ ಮೇಲೆ ತಮ್ಮ ಕಲಾತ್ಮಕ ಜಾಣ್ಮೆಯನ್ನು ತೋರಿಸಿರುವರು. ಇದರೊಂದಿಗೆ ದಂತಕತೆಯ ಸಂಬಂಧಿತ ಹಲವು ಅವತಾರಗಳ ಕತೆಗಳನ್ನು ಜಾಣ್ಮೆ ಮತ್ತು ಎಚ್ಚರಿಕೆಯಿಂದ ರಚಿಸಿದ್ದಾರೆ. ವಿಷ್ಣುಪುರದ ಕಾರ್ಡುಗಳಲ್ಲಿ ಪ್ರಧಾನರದು ಬಹುದೊಡ್ಡ ಪಾತ್ರವಿರುತ್ತದೆ. ಓರಿಸ್ಸಾದ ಸಭಾಭವನದ ಎಲೆಯ ಕಟ್ಟುಗಳಲ್ಲಿ ಗಣನೀಯವಾದ ನಕ್ಷಾ ಚಿತ್ರಗಳು ಕಂಡುಬರುತ್ತವೆ.[೧೧] ಸಂಖ್ಯಾಸೂಚಿ ಎಲೆಗಳಲ್ಲಿ ವಾಹನಗಳಾದ ಪ್ರಾಣಿ, ಆಯುಧ, ಪಾತ್ರಗಳು ಮನೋಭಾವಗಳಿಗೆ ಸಂಬಂಧಿತ ಅವತಾರದ ಚಿಹ್ನೆಗಳೂ ಆಗಿದ್ದವು. ಅವುಗಳೊಂದಿಗೆ ಪ್ರಾದೇಶಿಕ ಭಿನ್ನತೆಯು ಇರುತ್ತಿತ್ತು. ಪ್ರಾದೇಶಿಕ ಭಿನ್ನ ಶೈಲಿಗಳನ್ನು ಗುರುತಿಸಲು ಆ ಕಟ್ಟುಗಳಿಗಿರುವ ಹಿನ್ನೆಲೆಯ ವರ್ಣಗಳಿಂದಲೂ ಮತ್ತು ಹಂತದ ಸಂಖ್ಯಾಸೂಚಿ ಚಿಹ್ನೆಗಳಿಂದಲೂ ಗುರುತಿಸಬಹುದು. ಮಾರುಕಟ್ಟೆಯ ಕಟ್ಟುಗಳಲ್ಲಿ ದೇವರ ಮನೋಭಾವಗಳಿಗನುಗುಣವಾಗಿ ದಟ್ಟ ವರ್ಣಛಾಯೆಗಳಿಂದ ಸಂಖ್ಯಾಸೂಚಿ ವಿನ್ಯಾಸಗಳೊಂದಿಗೆ ಚಿತ್ರಿಸಿರುವುದನ್ನು ಗಮನಿಸಬಹುದು. ದರಬಾರಿ ಕಟ್ಟುಗಳ ಕಲಾವಿದನು ಕೂಡಾ ಈ ಸಂಖ್ಯಾಸೂಚಿ ಎಲೆಗಳಲ್ಲಿ ತನ್ನ ಜಾಣ್ಮೆಯನ್ನು ಮೆರೆಯಬಲ್ಲ. ಸರಳ ಮನೋಭಾವದ ಚಿತ್ರಗಳಿಂದಲೇ ತನ್ನತನ ತೋರಿಸಬಲ್ಲವನಾಗಿರುತ್ತಿದ್ದ. ಉದಾಹರಣೆಗೆ ಹೇಳುವುದಾದರೆ ರಾಮನ ಮಜಲಿನಲ್ಲಿ ಬಿಲ್ಲು ಮತ್ತು ಬಾಣಗಳಿಂದಲೆ ಮಾರುಕಟ್ಟೆಯ ಕಟ್ಟುಗಳಲ್ಲಿ ತೋರಿಸಬಲ್ಲವನಾಗಿದ್ದನು. ಅದನ್ನೇ ಸಾವಂತವಾಡಿಯ ದರಬಾರಿ ಕಟ್ಟುಗಳ ಚಿತ್ರಗಳಲ್ಲಿ ರಾಮನ ಬದಲು ವಾನರರನ್ನೇ ಬಳಸಿಕೊಳ್ಳಲಾಯಿತು.

ಗಂಜೀಫಾದಲ್ಲಿ ಇತರ ಹಿಂದೂ ದೇವತೆಗಳ ಸ್ವರೂಪಗಳು

ಗಂಜೀಫಾ ಎಲೆಯ ಕಟ್ಟುಗಳಲ್ಲಿ ದಶಾವತಾರದ ದೇವತೆಗಳನ್ನು ಬಳಸಿದಂತೆ ಎಂಟು ಮಜಲುಗಳಲ್ಲಿ ಅಷ್ಟದಿಕ್ಪಾಲಕರನ್ನು, ಹನ್ನೆರಡು ಅಂತಸ್ತುಗಳಲ್ಲಿ ರಾಮಾಯಣ ಮತ್ತು ಋಷಿಗಳನ್ನು, ಒಂಭತ್ತು ಹಂತಗಳಲ್ಲಿ

೧೦. ಎಂ. ಎಲ್. ಶಿವಶಂಕರ : ಗಂಜೀಫಾ, ಪುಟ – ೯

೧೧. Dr. Sarala Chopra : Structure of Ganjifa Pack, PP-25

ನವಗ್ರಹದ ಚಿತ್ರಗಳನ್ನು, ಇತರೆ ಹಿಂದೂ ದೇವತೆಗಳ ಆಕಾರ-ಸ್ವರೂಪಗಳನ್ನು ಗಂಜೀಫಾ ಎಲೆಗಳಲ್ಲಿ ಕಾಣುತ್ತೇವೆ.

ಈ ಮೇಲೆ ಹೇಳಿದ ಹಲವು ಕಟ್ಟುಗಳಲ್ಲಿ ರಾಮಾಯಣದ ಕಟ್ಟು ಒಂದೇ ೧ಳಳ ಎಲೆಗಳನ್ನು ಹೊಂದಿದೆ. ಪ್ರತಿ ಹಂತದಲ್ಲಿ ಹನ್ನೆರಡು ಭಾಗಗಳಲ್ಲಿ ವಿತರಿಸಲ್ಪಟ್ಟಿದೆ. ಪ್ರತಿ ಹಂತಕ್ಕೂ ೧೨ ಎಲೆಯ ಕಟ್ಟುಗಳಿವೆ. ಇದರಲ್ಲಿ ೬ ಭಾಗ ಶ್ರೀರಾಮನಿಗೆ ಮತ್ತು ೬ ಭಾಗ ರಾವಣನಿಗೆ ಮೀಸಲಾಗಿವೆ. ಈ ವಿಭಾಗೀಕೃತ ಆಟದ ಎಲೆಯ ಕಟ್ಟು ಓರಿಸ್ಸಾದಲ್ಲಿ ತುಂಬಾ ಜನಪ್ರಿಯವಾದುದಾಗಿದೆ. ಆದರೆ ತುಂಬಾ ದೊಡ್ಡದಾದ ಮತ್ತು ತುಂಬಾ ಜಟಿಲವಾದ ಆಟದ ಎಲೆಯ ಕಟ್ಟನ್ನು ಒಳಗೊಂಡು ಹಿಂದೂಧರ್ಮದ ವಿಷಯಗಳನ್ನು ಒಳಗೊಂಡಿರುವುದು ಮೈಸೂರಿನ ಛದ್-ಕಟ್ಟು. ಅದನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಪರಿಚಯಿಸಿದರು. ಅದರಲ್ಲಿ ದಕ್ಷಿಣ ಭಾರತದ ಸಂಖ್ಯಾತೀತ ದೇವತೆಗಳ ಛಾಯೆ ಇದೆ. ಅದರ ಮುಖ್ಯಸ್ಥೆಯ ಮೈಸೂರಿನ ಅಧಿದೇವತೆಯ 'ಚಾಮುಂಡೇಶ್ವರಿ'ಯಾಗಿದ್ದಾಳೆ. ಮೈಸೂರಿನ ಪರಿಪಾಲಿಕೆಯಾಗಿರುವ ಆಕೆ ಈ ಕಟ್ಟುಗಳ ಅಧಿದೇವತೆಯಾಗಿದ್ದಾಳೆ. ಈ ಛದ್‌ದ ವಿವರಣೆಗಾಗಿ ಮೈಸೂರಿನಲ್ಲಿ ವಿವರಣೆ ನೀಡಿರುವುದನ್ನೇ ಭಾರತ ಕಲಾ ಭವನವು ಸಂಗ್ರಹಿಸಿ ಪ್ರಕಟಿಸಿದೆ. ಇದೇ ಕ್ರಮವನ್ನು ನಕ್ಷಾಕಟ್ಟುಗಳಿಗೂ ಅನುಸರಿಸಲಾಗಿದೆ. ವಿವರಣೆಯನ್ನು ನೀಡಲು ವಸ್ತುಸಂಗ್ರಹಾಲಯದ ನಕ್ಷೆಗಳು ಎಂಬ ವಿವರಣಾ ಪುಸ್ತಿಕೆ ಇದೆ.

೧. ಮುಗಲ್ ಗಂಜೀಫಾ

ಡೆಕ್ಕನ್‌ನಲ್ಲಿ ಹದಿನೆಂಟನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೬.೨. ಸೆಂ.ಮೀ. ಅಳತೆಯಲ್ಲಿವೆ ಮತ್ತು ಗಂಜೀಫಾ ಎಲೆಗಳು ೭ ರಿಂದ ೯೬ ಇವೆ. ಎಲೆಗಳ ಮೇಲೆ ಕಲಾವಿದನ ಜಾಣತನವು ಅನ್ಯರಿಗೆ ಮಾದರಿಯಾಗುವಂತಿದೆ. ಸಾಮಾನ್ಯವಾಗಿ ರಾಜಸಭೆಯ ಎಲೆಗಳನ್ನು ಬಜಾರದ ಎಲೆಗಳಿಗೆ ಅಥವಾ ಸಾಮಾನ್ಯ ಮಟ್ಟದ ಆಟದ ಎಲೆಗಳಿಗೆ ಹೋಲಿಸಿದರೆ ಅರಮನೆಯ ಎಲೆಗಳು ಮೇಲ್ಮಟ್ಟದ ಎಲೆಗಳಾಗಿವೆ. ಅರಮನೆಯ ಕಲಾವಿದರು ಅವುಗಳನ್ನು ಬಹು ಜಾಣ್ಮೆಯಿಂದ ಚಿತ್ರಿಸಿದ್ದಾರೆ. ಅರಮನೆಗೆ ಸಂಬಂಧಿಸಿದ ಅನೇಕ ಜೀವಂತ ಶೈಲಿಯ ಬದುಕನ್ನೂ ನಾವು ಅಲ್ಲಿ ಕಾಣಬಹುದು. ಅಲ್ಲಿ ಸೂಕ್ಷ್ಮವಾದ ನವಿರಾದ ವಿವರವಾದ ಕಲಾತ್ಮಕಕಾರ್ಯವನ್ನು ನಾವು ನೋಡಬಹುದು. ಇಲ್ಲಿಯ ಪ್ರತಿ ಪಾತ್ರಗಳನ್ನೂ ಯುರೋಪಿನ ವರ್ಣಗಳೊಂದಿಗೆ ಮೊಘಲ್ ಶೈಲಿಯಲ್ಲಿ ರಚಿಸಲಾಗಿದೆ. ಇಲ್ಲಿ ಕಲಾವಿದರು ನೇರವಾಗಿ ಅರಗಿನ ಮೇಲೆಯೇ ಬಂಗಾರವನ್ನು ಪ್ರಮುಖ ವರ್ಣದಂತೆ ಚಿತ್ರಿಸಿದ್ದಾರೆ. ಈ ವರ್ತುಳದ ಚಿತ್ರಕ್ಕೆ ಆಭರಣದಂತೆ ತ್ರಿಗಾತ್ರಗಳ ಸ್ಥಿತಿಯಲ್ಲಿ ಚಿತ್ರಿಸಲಾಗಿದೆ.

ತಾಜ್‌ಮೀರ್

ಡೆಕ್ಕನ್‌ನಲ್ಲಿ ಹದಿನೆಂಟನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೬.೨. ಸೆಂ.ಮೀ. ಅಳತೆಯಲ್ಲಿವೆ. ಅಮೂಲ್ಯವಾದ ಕಿರೀಟ ಧರಿಸಿ, ಮೆತ್ತನೆಯ ಹಾಸಿಗೆಗೆ ಒತ್ತಾಸೆಯಾಗಿರುವ ತಲೆದಿಂಬುಗಳೊಂದಿಗೆ ಇರುವ ಸುವರ್ಣಪೀಠದ ಮೇಲೆ ರಾಜಕುಮಾರ ಕುಳಿತಿರುವನು. ಆತನ ಬಲಭಾಗದಲ್ಲಿ ಸೇವಕ ನಿಂತಿದ್ದರೆ, ಎಡಭಾಗದಲ್ಲಿ ಸಂಸದರು ಇರುತ್ತಾರೆ. ಈ ಎಲೆಯ ಕೆಳ ಅರ್ಧಭಾಗವನ್ನು ಸಂಗೀತಗಾರರು ಆವರಿಸಿಕೊಂಡಿದ್ದಾರೆ. ಈ ಎಲೆಯ ರಾಜಕಿರೀಟದ



ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಚಿತ್ರವು ಮೇಲ್ಭಾಗದಲ್ಲಿದೆ. ಅದನ್ನು ತಿಳಿ ಗುಲಾಬಿ, ಕಂದು, ಬಿಳಿಯ ವರ್ಣಮಿಶ್ರಣಗಳೊಂದಿಗೆ ರಚಿಸಲಾಗಿದೆ. ಈ ಎಲೆಯೊಳಗಿನ ಎಲ್ಲ ಮುಖಗಳು ನೇರವಾಗಿರದೆ ಓರೆಯಾಗಿಯೇ ಚಿತ್ರಿತವಾಗಿವೆ.

ಮೀರ ಮತ್ತು ರಾಜಕುಮಾರರು ಪರಸ್ಪರ ನೋಡುವಂತೆ, ಮಾತನಾಡುತ್ತಿರುವಂತೆ, ಎದುರು ಬದುರಾಗಿ ಕುಳಿತಿದ್ದಾರೆ. ಮೀರನ ಎಡಗೈಯು ಆತನ ಎದೆಯ ಮೇಲಿದೆ. ಬಲಗೈಯು ರಾಜಕುಮಾರನನ್ನು ತೋರಿಸುತ್ತಿದ್ದು ಇದೇ ರೀತಿ ಅರಸುಕುಮಾರನ ಬಲಗೈ ಕೂಡಾ ವಜೀರನತ್ತವೇ ಇದ್ದು ಪರಸ್ಪರರು ಸೌಹಾರ್ದಯುತ ಸಂಭಾಷಣೆಯಲ್ಲಿ ನಿರತರಾಗಿರುವಂತಿದೆ. ಮೀರನ ಮುಖದ ವರ್ಣವು ಸಾಮಾನ್ಯವಾಗಿ ಬಾಡಿಹೋಗಿದೆ. ಆತನ ಮುಖದ ಆಕೃತಿ ಗಮನಿಸಿದರೆ ಆತನೇ ಮೊಘಲ್ ದೊರೆ ಎನ್ನಬಹುದು ಎಂದು ಅನಿಸುತ್ತದೆ. ಆತನ ಮುಖದ ಮೇಲಿರುವ ಕಿರು ಮೀಸೆಗಳು ಅಕಬರನನ್ನು ನೆನಪಿಸುವಂತೆ ಇವೆ. ಅಕಸ್ಮಾತ್ ಅವನೇ ಅಕ್ಬರನಾಗಿದ್ದರೆ ಆತನ ಎದುರಿಗೆ ಇರುವ ಯುವರಾಜನದು ಸಲೀಮನದಾಗಿರುತ್ತದೆ. ಅರಸುಕುಮಾರನ ಎಡಬದಿಯಲ್ಲಿರುವ ಸಭಾಸದರ ಚಿತ್ರಗಳು ಕೂಡಾ ದೊರೆಯೊಂದಿಗೆ ಮಾತನಾಡುತ್ತಿರುವಂತಿವೆ. ಸೇವಕರು ತಮ್ಮ ಬಲಗೈ ಎತ್ತಿ ಚೌರಿ ಬೀಸಲು ಹೇಳುತ್ತಿರುವಂತಿದೆ. ಇದರ ಕೆಳಗೆ ನಾಲ್ಕು ಚಿತ್ರಗಳು ಇವೆ. ಅವುಗಳ ಕೊನೆಯ ಎಡಭಾಗದ ವ್ಯಕ್ತಿಯ ಎಡಗೈಯು ಆತನ ತೊಡೆಯ ಮೇಲಿದೆ. ಬಹುಶಃ ಆತ 'ವಾಝೀರಾ' ಹಾಡುತ್ತಿರುವಂತೆ ಇದೆ. ಸಂಕೇತಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಮಧ್ಯಭಾಗದಲ್ಲಿ ಪರಸ್ಪರರನ್ನು ನೋಡುತ್ತಾ ಕುಳಿತಿರುವ ಎರಡು ಚಿತ್ರಗಳಲ್ಲಿ ಒಂದಂತೂ ಡೋಲಾಕ, ಮದ್ದಳೆಯಂತಹ ವಾದ್ಯ ಬಾರಿಸುತ್ತಿರುವವನಂತಿದೆ. ಆತ ಆನಂದದ ಭಾವದಲ್ಲಿರುವಂತೆ ಕಾಣುತ್ತಾನೆ. ಆತನ ಎದುರಿಗೆ ಇರುವ ಚಿತ್ರದ ದೇಹ ಎದುರಾಗಿದ್ದು ಮುಖ ಮಾತ್ರ ಓರೆಯಾಗಿದೆ. ಆತ ಕಾಲುಗಳೆರಡನ್ನೂ ಕೂಡಿಸಿಕೊಂಡು ಕುಳಿತಿದ್ದು ಈ ಮದ್ದಳೆಕಾರನನ್ನು ಪ್ರೋತ್ಸಾಹಿಸುತ್ತಿರುವಂತೆ ಕಾಣುತ್ತಿದೆ. ಇವೆರಡು ಚಿತ್ರಗಳ ಬಲಭಾಗದಲ್ಲಿ ಕುಳಿತಿರುವ ವ್ಯಕ್ತಿ ಕೇಳುಗನಿದ್ದಂತೆ ಕಾಣಿಸುತ್ತಾನೆ. ಈ ಎಲೆಯಲ್ಲಿರುವ ಎಲ್ಲ ಚಿತ್ರಗಳು ಪಟಕಾ, ರುಮಾಲು ಸುತ್ತಿಕೊಂಡಿದ್ದಾರೆ. ಕಿವಿಗಳಲ್ಲಿ ಆಭರಣ ಧರಿಸಿಕೊಂಡಿದ್ದಾರೆ. ಬೆಲೆಯುಳ್ಳ ಉಡುಗೆಗಳನ್ನು ಬಂಗಾರದ ವರ್ಣದಲ್ಲಿ ಚಿತ್ರಿಸಲಾಗಿದೆ. ಹಲವು ಬಗೆಯ ನಕ್ಷೆಗಳ ಪಟ್ಟಿ ಪಟ್ಟಿಯಂತಹ ರೇಖಾಕೃತಿಯ ವಸ್ತ್ರಗಳನ್ನು ಈ ಎಲೆಯ ಒಳಗಿರುವವರು ಧರಿಸಿಕೊಂಡಿದ್ದಾರೆ.

ಎರಡು ತಾಜ್ ಚಿತ್ರಗಳು

ಡೆಕ್ಕನ್‌ನಲ್ಲಿ ಹದಿನೆಂಟನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು ಇವು ೬.೨. ಸೆಂ.ಮೀ. ಅಳತೆಯಲ್ಲಿವೆ. ಈ ಪತ್ರದಲ್ಲಿರುವ ಬೇಟೆಗಾರ ಮತ್ತು ಆತನ ಜೊತೆಗಾರರು ಪರಸ್ಪರ ಎದುರು ಬದುರಾಗಿ ಮುಖ ಮಾಡಿಕೊಂಡು ನಿಂತಿದ್ದಾರೆ. ಅವರೀರ್ವರ ಮುಖಗಳು ಎದುರಾಗಿರುವಂತೆ ಓರೆಯಾಗಿವೆ. ಈ ಎಲೆಯಲ್ಲಿ ತಾಜ್ ಕಿರೀಟವನ್ನು ಮೇಲಿನ ಮಧ್ಯಭಾಗದಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಬೇಟೆಗಾರನು ಉದ್ದನೆಯ ಕೋವಿಯನ್ನು ಬಲಗೈಯಲ್ಲಿ ಹಿಡಿದು ಬಲಭುಜದ ಮೇಲೆ ಹೊತ್ತಿದ್ದಾನೆ. ಎಡಗೈಯನ್ನು ಖಡ್ಗದ ಹಿಡಿಯ ಮೇಲಿಟ್ಟುಕೊಂಡಿದ್ದಾನೆ. ಮೀಸೆಗಳುಳ್ಳ ಈ ಬೇಟೆಗಾರ ರುಮಾಲು ಸುತ್ತಿಕೊಂಡಿದ್ದಾನೆ. ಉದ್ದನೆಯ ಬೂಟು, ಪಟಗಾ ಮತ್ತು ಖಡ್ಗಗಳು ನೇತಾಡುತ್ತಿವೆ.

ಆತನ ಜೊತೆಗಾರ ನಿಚ್ಚಳವಾಗಿ ಕಾಣುವಂತೆ ಎಡಗೈಯಲ್ಲಿ ಸತ್ತಿರುವ ಹಕ್ಕಿ ಬೇಟೆಗಾರನಿಗೆ ತೋರಿಸುವಂತೆ ಎತ್ತಿ ಹಿಡಿದುಕೊಂಡಿದ್ದಾನೆ. ಆತನ ಬಲಗೈ ಆತನ ಎದೆಯ ಮೇಲಿದೆ. ಆತನು

ವರ್ಣಮಯ ಉಡುಗೆಗಳನ್ನು ಧರಿಸಿದ್ದು ಕಿವಿಯಾಭರಣದೊಂದಿಗೆ ಮುತ್ತಿನ ಹಾರ ಧರಿಸಿ ಆತನ ಉಡುಗೆಗಳು ಹಲವು ನಕಾಶೆಗಳಿಂದ ಅಲಂಕೃತವಾಗಿವೆ. ಆತನ ರುಮಾಲಿನ ಮೇಲೆ ಗೊಂಡೆಯಂತಹ ಸರಪೇಚ್ ಇದೆ. ಈ ಎಲೆಗೆ ಎರಡು ಕನಕವರ್ಣದ ವರ್ತುಳಗಳು ಆವರಿಸಿವೆ.

ಚಾಂಗ್ ಮೀರ್

ಡೆಕ್ಕನ್‌ನಲ್ಲಿ ಹದಿನೆಂಟನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೬.೨. ಸೆಂ.ಮೀ. ಅಳತೆಯಲ್ಲಿವೆ. ಈ ಆಟದ ವರ್ತುಳಾಕೃತಿಯ ಎಲೆಯು ಮುರಿದು ಎರಡು ಭಾಗಗಳಾಗಿವೆ. ಮೇಲಿನ ಭಾಗದಲ್ಲಿ ದೊರೆಯು ಚೌಕನೆಯ ಸಿಂಹಾಸನದ ಮೇಲೆ ವರ್ಣಛಾಯೆಯಿದ್ದು ಮೆತ್ತನೆಯ ದಿಂಬುಗಳಿಗೆ ಆನಿಸಿಕೊಂಡು ಕುಳಿತಿದ್ದಾನೆ. ಬಲಕ್ಕೆ ಚೌರಿ ಬೀಸುವವಳು, ಎಡಕ್ಕೆ ಇಬ್ಬರು ಮಹಿಳಾ ಸೇವಕಿಯರು ನಿಂತಿದ್ದಾರೆ. ಈ ಎಲೆಯ ಸಂಕೇತವಾಗಿರುವ ಹಾರ್ಪ ತಂತಿಯ ವಾದ್ಯವನ್ನು ಎಡಭಾಗದಲ್ಲಿ ಚಿತ್ರಿಸಲಾಗಿದೆ. ಈ ಎಲೆಯ ಕೆಳಗಿನ ಭಾಗದಲ್ಲಿ ಇಬ್ಬರು ಮಹಿಳೆಯುರು ಕುಳಿತುಕೊಂಡು ದೊರೆಗೆ ತಿಂಡಿಯನ್ನೋ ಅಥವಾ ಪರಿಮಳವನ್ನೋ ಸಿದ್ಧಪಡಿಸುತ್ತಿರುವಂತಿದೆ. ಮಹಿಳಾ ಸೇವಕಿಯು ಅರಸನ ಮುಂದೆ ಕನ್ನಡಿಯನ್ನು ಹಿಡಿದುಕೊಂಡು ಅವನಿಗೆ ತೋರಿಸುತ್ತಿದ್ದಾಳೆ. ಅರಸನ ಹಿಂದೆ ಇರುವವಳು ಕೂಡಾ ಅರಸನತ್ತ ಓರೆ ಮುಖ ಮಾಡಿಕೊಂಡು ನಿಂತಿದ್ದಾಳೆ.

ಸುರಕ್–ಮೀರ

ಡೆಕ್ಕನ್‌ನಲ್ಲಿ ಹದಿನೆಂಟನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೬.೨. ಸೆಂ.ಮೀ. ಅಳತೆಯಲ್ಲಿವೆ. ಸಾಮಾನ್ಯವಾಗಿ ಸುರಕಥ ಅರಸನಾಗಿ ಸಿಂಹವನ್ನು ಚಿತ್ರಿಸಲಾಗಿದೆ. ಇದಕ್ಕೆ ಹಿನ್ನೆಲೆಯಾಗಿ ಉದಯಿಸುವ ಸೂರ್ಯನಿದ್ದಾನೆ. ಸೂರ್ಯನ ಮೇಲೊಂದು ಹಗುರವಾದ ಕೊಡೆಯಿದೆ. ಬಲಭಾಗದಲ್ಲಿ ಸೇವಕನೋರ್ವನ ಚಿತ್ರವಿದೆ. ಇವನ ಮುಖದ ವರ್ಣವು ಹಾಳಾಗಿ ಹೋಗಿದೆ. ಅವನ ಲಕ್ಷಣಗಳು ಕೂಡಾ ಕಾಣುವುದಿಲ್ಲ. ಆತನ ಭಾವ ಭಂಗಿ ಗಮನಿಸಿದರೆ ದೊರೆ ಮೀರನತ್ತ ಹೋಗುತ್ತಿರುವಂತೆ ಕಾಣುವುದು. ಇಲ್ಲಿ ಸೂರ್ಯನು ಮಾನವರ ಮುಖದೊಂದಿಗೆ ತನ್ನ ಪರಿಧಿಯಲ್ಲಿದ್ದಾನೆ. ಆತನ ಕಿರಣಗಳನ್ನು ಕನಕವರ್ಣಗಳಿಂದ ಎಳೆಯಲಾಗಿದೆ. ಸೂರ್ಯನ ಮುಖದ ಸುತ್ತಲೂ ಅಲಂಕಾರಿಕ ಆಭರಣವಿದ್ದು ಸೂರ್ಯ ಕಿವಿಯ ಆಭರಣಗಳನ್ನು ಧರಿಸಿಕೊಂಡಿದ್ದಾನೆ. ಅರೆ ಕಣ್ಣು ಮುಚ್ಚಿರುವ ಆತನ ತುಟಿಗಳ ಮೇಲೆ ಮುಗುಳುನಗೆ ಇದೆ. ಆತನ ಹಣೆಯಲ್ಲಿ ತಿಲಕವಿದೆ. ಆತನ ಮೇಲೆ ಕನಕದ ಛತ್ರಿ ಇದೆ. ಈ ಎಲೆಯ ಮೇಲಿನ ಅರ್ಧಭಾಗ ಬಂಗಾರವರ್ಣರಚಿತವಾದಂತೆ ಕೆಳಭಾಗ ಹೂ–ಎಲೆ, ಹಸಿರುಗಳಿಂದ ವರ್ಣರಂಜಿತವಾಗಿದೆ.

ಸುರಖಿಯ ಮತ್ತೆರಡು ಕಟ್ಟುಗಳು

ಡೆಕ್ಕನ್‌ನಲ್ಲಿ ಹದಿನೆಂಟನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದು, ಇವು ೬.೨. ಸೆಂ.ಮೀ. ಅಳತೆಯಲ್ಲಿವೆ. ಫಕೀರ ತನ್ನ ೩/೪ ಭಾಗವನ್ನು ತೋರಿಸುತ್ತಾ ಉದ್ದನೆಯ ಕೋಲನ್ನು ಹಿಡಿದುಕೊಂಡು ನಿಂತಿದ್ದಾನೆ. ಈತನ ಬಲಕ್ಕೆ ಯುವರಾಜ ಸಂದರ್ಶನಕ್ಕೆ ಬಂದಂತಿದೆ. ಈ ಎಲೆಯ ಮೇಲು ಎಡಭಾಗದಲ್ಲಿ ಬಂಗಾರದ ನಾಣ್ಯವು ಇದೆ. ಉದ್ದನೆಯ ಶರೀರದ ಈ ಫಕೀರನು ನೀಲಿ ವರ್ಣಛಾಯೆಯ ವಸ್ತ್ರಗಳನ್ನು ಧರಿಸಿದ್ದಾನೆ. ಮುಂಗೋಲಿಯಾದ

ಮುಖದ ಆತ ವಿದೇಶಿಯ ವಸ್ತ್ರಗಳನ್ನು ಧರಿಸಿದ್ದಾನೆ. ಆತ ಅಂಧನಂತೆ ಕಾಣುತ್ತಾನೆ. ಆದರೂ ಕಣ್ಣು ಪೂರ್ಣ ತೆರೆದಂತೆ ಚಿತ್ರಿಸಲಾಗಿದೆ. ಆತನ ಶಿಷ್ಯಂದಿರು ಕಣ್ಮರೆಯಾದಂತೆ ಕಾಣುತ್ತಾರೆ. ಈ ಆಟದ ಎಲೆಯ ಸುತ್ತ ಎರಡು ಬಳೆಗಳನ್ನು ಚಿತ್ರಿಸಲಾಗಿದೆ. ಅರಸನ ಹಿಂಭಾಗದಲ್ಲಿ ಹಲವು ಸಸ್ಯಗಳ ಚಿತ್ರಗಳನ್ನು ಅಲ್ಲಲ್ಲಿ ಹಿನ್ನೆಲೆಯಂತೆ ಮುನ್ನಲೆಯಂತೆ ಚಿತ್ರಿಸಲಾಗಿದೆ.

ಎರಡು ಬಾರಾತ ಎಲೆಗಳು

ಡೆಕ್ಕನ್‌ನಲ್ಲಿ ಹದಿನೆಂಟನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೬.೨. ಸೆಂ.ಮೀ. ಅಳತೆಯಲ್ಲಿವೆ. ಈ ಎಲೆಯೊಳಗಿನ ದೃಶ್ಯದಲ್ಲಿ ಯುರೋಪಿಯನ್ ಬೇಟೆಗಾರನು ಅರಣ್ಯದಲ್ಲಿ ತನ್ನ ನಾಯಿಯೊಂದಿಗೆ ನಿಂತಿದ್ದಾನೆ. ಈ ಎಲೆಯ ಚಿಹ್ನೆಯಾದ ಆಯತದೊಳಗೆ 'ಬಾರಾತ' ಎಂಬ ಪರ್ಶಿಯನ್ ಅಕ್ಷರಗಳಿವೆ. ಅದನ್ನು ಈ ಎಲೆಯ ಎಡಭಾಗದಲ್ಲಿ ತೋರಿಸಲಾಗಿದೆ. ನಾಯಿ ಮತ್ತು ಬೇಟೆಗಾರರ ಮುಖಗಳು ಓರೆಯಾಗಿದ್ದು ಒಂದಕ್ಕೆ ಮತ್ತೊಂದು ಎದುರು-ಬದುರಾಗಿದೆ. ಬೇಟೆಗಾರನ ಬಹುಭಾಗ ದುಂಡಾಗಿದೆ. ಆತ ಕೋವೆಯನ್ನು ಬಲಭುಜದ ಮೇಲಿಟ್ಟು ಬಲಗೈಯಲ್ಲಿ ಹಿಡಿದುಕೊಂಡಿದ್ದಾನೆ. ತನ್ನ ಎಡಗೈಯನ್ನು ನಡುವಿನ ಮೇಲೆ ಇರಿಸಿಕೊಂಡಿದ್ದಾನೆ. ಬೇಟೆಗಾರ ಯುರೋಪಿನ ಟೋಪಿ, ಉದ್ದನೆಯ ಬೂಟು ಧರಿಸಿದ್ದಾನೆ. ನಿಲುವಂಗಿ ಮತ್ತು ಟೋಪಿ ಆತನ ಭುಜದ ಮೇಲಿದೆ. ಆತನ ಕಣ್ಣು, ಮುಖ ಮತ್ತು ಇತರ ಲಕ್ಷಣಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಬಿಳಿಯ ನಾಯಿಯ ಬಾಲವನ್ನು ಮೇಲಿರಿಸಿಕೊಂಡು ಕತ್ತನ್ನು ಅವನತ್ತ ತಿರುಗಿಸಿದೆ.

ಖೀಮಾಸ್ ವಜೀರ

ಡೆಕ್ಕನ್‌ನಲ್ಲಿ ಹದಿನೆಂಟನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೬.೨. ಸೆಂ.ಮೀ. ಅಳತೆಯಲ್ಲಿವೆ. ವಜೀರನು ಈ ಎಲೆಯ ಚಿಹ್ನೆಯನ್ನು ಬಲಕೈಯಲ್ಲಿ ಹಿಡಿದುಕೊಂಡಿದ್ದಾನೆ. ಆತನ ಸಕಲ ಸಹಬಾವುಗಳೊಂದಿಗೆ ಇರುವ ಕುದುರೆಯ ಮೇಲೆ ಕುಳಿತಿದ್ದು ಆತನಿಗೆ ಸಹಾಯಕನಾಗಿ ಒಬ್ಬ ಸೇವಕನಿದ್ದಾನೆ. ವಜೀರನ ಸೇವಕನ ಮತ್ತು ಕುದುರೆಯ ಮುಖ ಓರೆಯಾಗಿದೆ. ವಜೀರನು ಈ ಎಲೆಯ ಚಿಹ್ನೆಯನ್ನು ತೋರಿಸುತ್ತಿರುವಂತೆ ತನ್ನ ಭುಜದವರೆಗೂ ಹಿಡಿದುಕೊಂಡಿದ್ದಾನೆ. ಆತನಿಗೆ ಕಿರಿದಾದ ಮೀಸೆ ಇದೆ. ತಲೆಯ ಮೇಲೆ ರುಮಾಲು ಇದೆ.

ಆತ ಧರಿಸಿದ ತಲೆಯ ಕಿರೀಟ ಅಲಂಕೃತವಾಗಿದೆ. ಆತ ಕರ್ಣಾಭರಣಗಳನ್ನು ಧರಿಸಿದ್ದಾನೆ. ಸೇವಕ ಎಲೆಯ ಅರ್ಧಭಾಗದಿಂದ ಕೆಳಗೆ ಇದ್ದಾನೆ. ಕುದುರೆಯ ಕೆಳಭಾಗವು ತ್ರುಟಿತಗೊಂಡಿದೆ. ಆದರೆ ಸೇವಕನ ಕೆಳಭಾಗ ಕಣ್ಮರೆಯಾಗಿದೆ. ಸೇವಕನ ಮುಖ ಸ್ಪಷ್ಟವಾಗಿಲ್ಲ. ಆದರೆ ಆತ ಕುದುರೆಯನ್ನು ಮುನ್ನಡೆಯಿಸಿಕೊಂಡು ಸಾಗಿರುವಂತಹ ಭಾಗಿ ಇದೆ. ತಿಳು ಕಂದ ವರ್ಣ ಕುದುರೆಯು ಅಲಂಕೃತವಾಗಿದೆ. ಅದಕ್ಕೆ ಹಲವು ಆಭರಣಗಳಿಂದ ಅಲಂಕರಿಸಿದೆ.

ಮೊಘಲ್ ಗಂಜೀಫಾ ಜಯಪುರ

ಡೆಕ್ಕನ್‌ನಲ್ಲಿ ೧೯ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಕಾಗದದ ಮೇಲೆ ವಾರ್ನಿಶ್ ಬಳಸಿ, ಅಲಂಕೃತ ಕೆಂಪು ಕನಕವರ್ಣಗಳಿಂದ ಕೂಡಿದ್ದು, ಇವು ೫.೯. ಸೆಂ.ಮೀ. ಅಳತೆಯಲ್ಲಿವೆ ಮತ್ತು ೬ರಿಂದ ೯ ಗಂಜೀಫಾ ಎಲೆಗಳಿವೆ. ಆರು ಎಲೆಗಳ ಈ ಪಂಕ್ತಿಯು ನುರಿತ ಅನುಭವಿ ಕಲಾವಿದರಿಂದ ರೂಪಗೊಂಡಿದ್ದು ಯಾವುದೋ ಅರಸುಮನೆತನಕ್ಕೆ ಸೇರಿರುವುದಾಗಿದೆ. ಐದು ಎಲೆಗಳು

ಗುಲಾಬಿಯದಿದ್ದು, ಆರನೆಯ ಒಂದು ಎಲೆಯು ಖಡ್ಗಧಾರಿ ಅರಸನದಾಗಿದೆ. ದೊರೆಯ ಎಲೆಯು ಮೊಘಲ್ ರಾಜಭವನದ ದೃಶ್ಯವನ್ನು ವಿವರಿಸುವುದು. ಉಳಿದ ಎಲೆಗಳು ವಿವಿಧ ದೃಶ್ಯಗಳ ಮೂಲಕ ಸಮಕಾಲೀನ ಬದುಕನ್ನು ವಿವರಿಸುತ್ತವೆ.

ಶಮ್‌ಶೀರ್ ಮೀರ್

ಡೆಕ್ಕನ್‌ನಲ್ಲಿ ೧೯ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಕಾಗದದ ಮೇಲೆ ವಾರ್ನಿಶ್ ಬಳಸಿ, ಅಲಂಕೃತ ಕೆಂಪು ಕನಕವರ್ಣಗಳಿಂದ ಕೂಡಿದ್ದುನ ಇವು ೫.೯. ಸೆಂ.ಮೀ. ಅಳತೆಯಲ್ಲಿವೆ. ದೊರೆಯು ಸಿಂಹಾಸನದ ಮೇಲೆ ಕುಳಿತಿರುವನು. ಆತ ಈ ಎಲೆಕಟ್ಟಿನ ಚಿಹ್ನೆಯಾದ ಖಡ್ಗವನ್ನು ಬಲಗೈಯಲ್ಲಿ ಹಿಡಿದಿದ್ದಾನೆ. ಆತನ ಎಡಗೈಯಲ್ಲಿ ಯಾವುದೋ ಒಂದು ದಾಖಲಾತಿ ಇದೆ. ಆತನ ರಾಜ್ಯಸಭೆಯ ಒಬ್ಬ ಸದಸ್ಯ ಅರಸನ ಎದುರಿಗೆ ನಿಂತಿದ್ದರೆ ಇಬ್ಬರು ಸೇವಕರು ಹಿಂದೆ ನಿಂತಿದ್ದಾರೆ. ಚಿಕ್ಕದಾದ ಟೀಪಾಯಿ ಹೂಜಿಯೊಂದಿಗೆ ಆತನ ಎಡಭಾಗದಲ್ಲಿ ಇಡಲಾಗಿದೆ. ಎಲ್ಲ ಚಿತ್ರಗಳು ಓರೆಯಾಗಿದ್ದು ಶರೀರಮಾತ್ರ ಮುಕ್ಕಾಲು ಭಾಗದಲ್ಲಿದೆ. ಅರಸನ ಮೇಲುಭಾಗದಲ್ಲಿ ಛತ್ರಿ ಇದೆ. ಆತ ಸಿಂಹಾಸನದ ಮೇಲೆ ಎರಡು ಕಾಲುಗಳಲ್ಲಿ ಬೂಟು ಧರಿಸಿಕೊಂಡು ಕುಳಿತಿದ್ದಾನೆ.

ಎರಡು ಗುಲಾಮಿ ಎಲೆಗಳು

ಡೆಕ್ಕನ್‌ನಲ್ಲಿ ೧೯ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಕಾಗದದ ಮೇಲೆ ವಾರ್ನಿಶ್ ಬಳಸಿ, ಅಲಂಕೃತ ಕೆಂಪು ಕನಕವರ್ಣಗಳಿಂದ ಕೂಡಿದ್ದು, ಇವು ೫.೯. ಸೆಂ.ಮೀ. ಅಳತೆಯಲ್ಲಿವೆ. ಈ ಎಲೆಯ ಮಧ್ಯದಲ್ಲಿ ರಾಜಮನೆತನದ ಇಬ್ಬರು ಮಹಿಳೆಯರು ವರ್ಣಮಯ ವಸ್ತ್ರ ಮತ್ತು ಆಭರಣಗಳೊಂದಿಗೆ ನಿಂತಿದ್ದಾರೆ. ಅವರೀರ್ವರ ಮುಖಗಳು ಓರೆಯಾಗಿವೆ. ಪರಸ್ಪರ ಮಾತನ್ನಾಡುತ್ತಿರುವಂತಿರುವ ಈ ದೃಶ್ಯದಲ್ಲಿ ಮುಂದಿರುವ ಮಹಿಳೆಯು ಹಿಂದಿರುವ ಮಹಿಳೆಯ ಎಡಭುಜದ ಮೇಲೆ ತನ್ನ ಕೈಯಿಂದ ಏನನ್ನೋ ವಿವರಿಸುತ್ತಿದ್ದಾಳೆ. ಆಕೆ ತೆಳು ಶರೀರ ಮತ್ತು ಚುರುಕುತನದ ಲಕ್ಷಣ ಹೊಂದಿದ್ದಾಳೆ. ಮತ್ತೊಬ್ಬಳು ಕಿರಿಯಳಾಗಿದ್ದಾಳೆ. ಉಭಯತರು ಆಭರಣಗಳನ್ನು ಧರಿಸಿದ್ದಾರೆ. ಎಡಮಹಿಳೆಯ ವಸ್ತ್ರಗಳು ಕಪ್ಪು ಕೇಸರಿ ಇದ್ದರೆ, ಎರಡನೆಯವಳು ಕೇಸರಿ ಮತ್ತು ತಿಳಿಹಸಿರು ವಸ್ತ್ರ ಧರಿಸಿದ್ದಾಳೆ. ತಿಳು ಕಂದು ವರ್ಣ ಈ ಎಲೆಯ ಚಿತ್ರಕ್ಕೆ ಹಿನ್ನೆಲೆಯಾಗಿದೆ.

೩. ಗುಲಾಮರ ಎಲೆಕಟ್ಟು

ಡೆಕ್ಕನ್‌ನಲ್ಲಿ ೧೯ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಕಾಗದದ ಮೇಲೆ ವಾರ್ನಿಶ್ ಬಳಸಿ, ಅಲಂಕೃತ ಕೆಂಪು ಕನಕವರ್ಣಗಳಿಂದ ಕೂಡಿದ್ದು, ಇವು ೫.೯. ಸೆಂ.ಮೀ. ಅಳತೆಯಲ್ಲಿವೆ. ಈ ಆಟದ ಎಲೆಯ ಮಧ್ಯದಲ್ಲಿ ನಿಂತಿರುವ ಮೂವರು ತರುಣಿಯರು ವರ್ಣಮಯವಾದ ಸಿರಿತನದ ವಸ್ತ್ರಾಭರಣಗಳನ್ನು ಧರಿಸಿಕೊಂಡಿದ್ದಾರೆ. ಮೂವರು ಮಹಿಳೆಯರ ಮುಖಗಳು ಓರೆಯಾಗಿವೆ. ಎಡಭಾಗದ ಮಹಿಳೆ ಬಲಕೈಯಲ್ಲಿ ಖಡ್ಗವನ್ನು ಕೆಳಮುಖವಾಗಿ ಹಿಡಿದುಕೊಂಡಿದ್ದಾಳೆ. ಅವಳ ಮುಖ ಅವಳ ಜತೆಗಾರ್ತಿಯರತ್ತ ತಿರುಗಿದೆ. ಮಧ್ಯದ ಮಹಿಳೆ ಬಲಗೈಯಲ್ಲಿ ಹೂ ಹಿಡಿದುಕೊಂಡಿದ್ದಾಳೆ. ಮೂರು ಮಹಿಳೆಯರ ಕೇಶಗಳು ಅವರ ಭುಜಗಳ ಮೇಲೆ ಹರಡಿಕೊಂಡಿವೆ. ಅವರು ಪ್ಯಾಂಟು, ಕುರ್ತಾ ಮತ್ತು ರುಮಾಲು ಧರಿಸಿಕೊಂಡಿದ್ದಾರೆ. ಅವರ ಕರಗಳು ಬಳೆಗಳಿಂದ ಅಲಂಕೃತವಾಗಿವೆ.

೫ ಗುಲಾಮರ ಎಲೆಕಟ್ಟು

ಡೆಕ್ಕನ್‌ನಲ್ಲಿ ೧೯ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಕಾಗದದ ಮೇಲೆ ವಾರ್ನಿಶ್ ಬಳಸಿ, ಅಲಂಕೃತ ಕೆಂಪು ಕನಕವರ್ಣಗಳಿಂದ ಕೂಡಿದ್ದು, ಇವು ೫.೯. ಸೆಂ.ಮೀ. ಅಳತೆಯಲ್ಲಿವೆ. ಈ ಚಿತ್ರದ ಕಟ್ಟಿನಲ್ಲಿ ಎರಡು ಕರಡಿಗಳನ್ನು ಒಬ್ಬ ಪಳಗಿಸುತ್ತಿದ್ದಾನೆ. ಇಬ್ಬರು ಅವುಗಳನ್ನು ನೋಡುತ್ತಾ ನಿಂತಿದ್ದಾರೆ. ಎಲೆಯ ಮಧ್ಯದಲ್ಲಿ ಎರಡು ಕರಡಿಗಳಿವೆ. ಒಂದು ದೊಡ್ಡದಿದ್ದರೆ ಮತ್ತೊಂದು ಚಿಕ್ಕದಿದೆ. ಎಲ್ಲವುಗಳ ಮುಖವೂ ಓರೆಯಂತಿದೆ. ತರಬೇತುದಾರನು ಬಲಗೈಯಲ್ಲಿ ಕೋಲನ್ನಿಡಿದುಕೊಂಡು ಕೈ ಎತ್ತಿ ಪಳಗಿಸುತ್ತಿದ್ದಾನೆ. ಆತ ಆ ಕಾಡುಮೃಗಗಳನ್ನು ನಿಯಂತ್ರಿಸುತ್ತಿರುವಂತೆ ಇದ್ದಾನೆ. ಎರಡೂ ಪ್ರಾಣಿಗಳು ಹಗ್ಗಗಳಿಂದ ಕಟ್ಟಲ್ಪಟ್ಟಿವೆ. ಇವುಗಳ ಕಪ್ಪು ರೋಮದ ಶರೀರದ ಮೇಲೆ ಬಂಗಾರದ ರೇಖೆಗಳ ಗೆರೆ ಎಳೆಯಲಾಗಿದೆ.

೬ ಗುಲಾಮರ ಎಲೆಕಟ್ಟು

ಡೆಕ್ಕನ್‌ನಲ್ಲಿ ೧೯ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಕಾಗದದ ಮೇಲೆ ವಾರ್ನಿಶ್ ಬಳಸಿ, ಅಲಂಕೃತ ಕೆಂಪು ಕನಕವರ್ಣಗಳಿಂದ ಕೂಡಿದ್ದು, ಇವು ೫.೯. ಸೆಂ.ಮೀ. ಅಳತೆಯಲ್ಲಿವೆ. ಈ ಎಲೆಯು ಪಗಡೆಯಾಟದಲ್ಲಿ ನಿರತರಾದವರ ವಿವರಗಳನ್ನು ತೋರಿಸುವುದು. ನಾಲ್ಕು ಜನರು ಆಟವಾಡುತ್ತಿದ್ದರೆ ಒಬ್ಬ ನೋಡುತ್ತಿರುವ. ಮತ್ತೊಬ್ಬ ಬಹುಶಃ ಸೇವಕನು ಆಜ್ಞೆಗಾಗಿ ನಿಂತಿರುವಂತಿದೆ. ಎಲೆಯ ಮಧ್ಯದಲ್ಲಿ ಐದು ಜನರು ವಜ್ರಾಸನದಲ್ಲಿ ಕುಳಿತುಕೊಂಡು ಆಟದ ಪ್ರಾರಂಭದ ಹಂತದಲ್ಲಿದೆ. ಏಕೆಂದರೆ ಆಟದ ಕಾಯಿಗಳು ಪಟದ ಮೇಲೆ ಇರದೆ ಇನ್ನೂ ಆಟಗಾರರ ಹತ್ತಿರದಲ್ಲಿವೆ. ಆಟಗಾರರು ಸಿರಿತನದ ವಸ್ತ್ರಾಭರಣ ಧರಿಸಿದ್ದಾರೆ. ಆಟಕ್ಕೆ ಆಮಂತ್ರಣ ನೀಡಿದವನು ಉದ್ದ ಗೆರೆಯ ದಿಂಬಿನ ಮೇಲೆ ಆಸೀನನಾಗಿ ಕುಳಿತುಕೊಂಡಿದ್ದಾನೆ.

೧೦ ಗುಲಾಮರ ಎಲೆಕಟ್ಟು

ಡೆಕ್ಕನ್‌ನಲ್ಲಿ ೧೯ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಕಾಗದದ ಮೇಲೆ ವಾರ್ನಿಶ್ ಬಳಸಿ, ಅಲಂಕೃತ ಕೆಂಪು ಕನಕವರ್ಣಗಳಿಂದ ಕೂಡಿದ್ದು, ಇವು ೫.೯. ಸೆಂ.ಮೀ. ಅಳತೆಯಲ್ಲಿವೆ. ಯಕ್ಷಿಣಿಗಾರನು ತನ್ನ ಎರಡು ಕೋತಿಗಳೊಂದಿಗೆ ಏಳು ಜನ ವೀಕ್ಷಕರಿಗೆ ತನ್ನ ಮನೋರಂಜನೆಯ ಆಟವನ್ನು ಪ್ರದರ್ಶಿಸುತ್ತಿದ್ದಾನೆ. ದೃಶ್ಯವು ಮನೋರಂಜನಾ ವಾತಾವರಣವನ್ನು ಸೃಷ್ಟಿಸಿದೆ. ವರ್ತುಳಾಕೃತಿಯ ಈ ಎಲೆಯ ಚಿತ್ರಕ್ಕೆ ಕಂದುವರ್ಣವು ಹಿನ್ನೆಲೆಯಾಗಿದೆ. ಇದರಲ್ಲಿ ಪ್ರಾಣಿ ಮತ್ತು ಮನುಷ್ಯರ ಮುಖಗಳನ್ನು ಓರೆಯಾಗಿ ಚಿತ್ರಿಸಲಾಗಿದೆ. ಆಟಗಾರ ತನ್ನ ಬಲಗೈಯಿಂದ ವಾದ್ಯವನ್ನು ಬಾರಿಸುತ್ತಿದ್ದಾನೆ. ಆತ ಎಡಗೈಯ ಹಗ್ಗಗಳಿಂದ ಕೋತಿಗಳನ್ನು ನಿಯಂತ್ರಿಸುತ್ತಿದ್ದಾನೆ. ಬಂಗಾರವರ್ಣದ ಕಟ್ಟುಗಳಿರುವ ಕೋತಿಗಳು ವಿನಯದಿಂದ ಒಡೆಯನ ಆಜ್ಞೆಯನ್ನು ಪಾಲಿಸುತ್ತಿವೆ.

೩. ಮೊಘಲ್ ಗಂಜೀಫಾ

ಮೇವಾರದಲ್ಲಿ ಕ್ರಿ.ಶ. ೧೭೦೦ರಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೫.೮-೪.೩. ಸೆಂ.ಮೀ. ಅಳತೆಯಲ್ಲಿವೆ. ಇವುಗಳಲ್ಲಿ ೧-೯೬ ಗಂಜೀಫಾ ಎಲೆಗಳಿವೆ. ಈ ಕಟ್ಟು ವೈಭವದ ಮನೋರಂಜನೆಯನ್ನು ತೋರಿಸುವುದು. ಅರಸನು ಸಿಂಹಾಸನದಂತಹ ಆಸನದಲ್ಲಿ ಮೆತ್ತನೆಯ











ಸಂಗ್ರಹ ; ಕರ್ನಾಟಕ ಚಿತ್ರಕಲಾ ಪರಿಷತ್ ಗ್ರಂಥಾಲಯ, ಬೆಂಗಳೂರು

ದಿಂಬಿನ ಮೇಲೆ ಕುಳಿತುಕೊಂಡಿದ್ದಾನೆ. ಆತ ನೃತ್ಯ ಮತ್ತು ಸಂಗೀತಗಳನ್ನು ಆಸ್ವಾದಿಸುತ್ತಿದ್ದಾನೆ. ಆತನ ಹಿಂದೆ ಚೌರಿ ಬೀಸುವವನಿದ್ದಾನೆ. ಕೆಳ ಅರ್ಧ ಭಾಗದಲ್ಲಿ ಇಬ್ಬರು ಮಹಿಳೆಯ ಮೂವರು ಪುರುಷರ ಚಿತ್ರಗಳಿವೆ. ಮಹಿಳೆ ಡೊಲಕ ಭಾರಿಸುತ್ತಿದ್ದರೆ, ಪುರುಷ ಮಾಜಿರಾ ತಾಳಗಳನ್ನು ಬಾರಿಸುತ್ತಿದ್ದಾನೆ. ಮತ್ತೊಬ್ಬ ಮಹಿಳೆಯ ವೀಕ್ಷಿಸುತ್ತಿದ್ದಾಳೆ. ಮತ್ತೊಬ್ಬ ಹುಕ್ಕಾ ಹಿಡಿದಿದ್ದಾನೆ.

೪ ಮೊಘಲ್ ಗಂಜೀಫಾ

೫ ಗುಲಾಮಿ ಎಲೆಗಳು

ಜೈಪುರದಲ್ಲಿ ಕ್ರಿ.ಶ. ೧೮ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೫.೫. ಸೆಂ.ಮೀ. ಅಳತೆಯಲ್ಲಿವೆ. ಈ ಆಟದ ಎಲೆಯ ಕಟ್ಟು ವಿಶ್ರಮಿಸುತ್ತಿರುವ, ಮನೋರಂಜನೆಯನ್ನು ಅನುಭವಿಸುತ್ತಿರುವವರ ಬಗೆಗೆ ವಿವರಿಸುತ್ತದೆ. ಐದು ಜನರಲ್ಲಿ ನಾಲ್ಕು ಜನ ಪುರುಷರು, ಒಬ್ಬ ಮಹಿಳೆಯು ಹುಕ್ಕಾ ಮತ್ತು ಮದ್ಯಸೇವನೆಯ ಆನಂದದಲ್ಲಿದ್ದಾರೆ. ಇವರಲ್ಲಿ ಇಬ್ಬರು ರಾಜ ಮನೆತನದವರು ಒಬ್ಬ ಸಂಗಾತಿ ಉಳಿದ ಇಬ್ಬರು ಸೇವಕರಂತೆ ಕಾಣುತ್ತದೆ. ಇಬ್ಬರು ತಮ್ಮ ಒಡೆಯರಿಗೆ ಬೇಕಾದ ಪಾನೀಯ ಸಿದ್ಧಪಡಿಸಲು ನಿರತರಾಗಿರುವರು. ಅವರು ಜರತಾರಿ ಬಟ್ಟೆಗಳನ್ನು ತೊಟ್ಟಿದ್ದಾರೆ. ಈ ದೃಶ್ಯದಲ್ಲಿಯ ಎಲ್ಲರ ಮುಖಗಳು ಓರೆಯಾಗಿವೆ. ಕೆಳಭಾಗದಲ್ಲಿ ಕುಳಿತಿರುವ ದೊರೆಗಳು ದಿಂಬಿಗೆ ಆಸರೆಯಾಗಿ ಪಾನೀಯದ ಆನಂದವನ್ನು ಅನುಭವಿಸುತ್ತಿದ್ದಾರೆ.

೫ ಸುರಖೀ ಎಲೆಕಟ್ಟು

ಜೈಪುರದಲ್ಲಿ ಕ್ರಿ.ಶ. ೧೮ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೫.೫. ಸೆಂ.ಮೀ. ಅಳತೆಯಲ್ಲಿವೆ. ಇಬ್ಬರು ಬೇಟೆಗಾರರು ಕೋವಿಗಳನ್ನು ಮುಂದೆ ಓಡುತ್ತಿರುವ ಎರಳೆಗಳತ್ತ ಗುರಿಯಾಗಿಟ್ಟಿದ್ದರೆ, ಈ ಕಟ್ಟಿನ ಸಂಕೇತವಾಗಿರುವಂತಹ ಸುರಖಿಯ ಐದು ಬಂಗಾರದ ನಾಣ್ಯಗಳಿದ್ದು ಕೇಸರಿಯ ಬಣ್ಣದಿಂದ ಅವುಗಳಿಗೆ ಅಂಚಿನಂತೆ ಎಳೆಯಲಾಗಿದೆ. ಎರಡು ಚಿಗರೆಗಳಲ್ಲಿ ಒಂದು ಬಿಳಿ ಮತ್ತೊಂದು ಕಪ್ಪಾಗಿದೆ. ಎಲೆಯಳ ಎಡಭಾಗಗಳು ಚಿಗರೆಗಳು ಓಡುತ್ತಿದ್ದರೆ ಬಲಭಾಗದಲ್ಲಿ ಬೇಟೆಗಾರರಿದ್ದಾರೆ. ಅವರು ತಮ್ಮ ತಲೆಯ ಮೇಲಿನ ವಸ್ತ್ರ ಬೀಳದಂತೆ ಥಡಿಯಿಂದ ಬಿಗಿದಿದ್ದಾರೆ. ಬೇಟೆಗಾರರ ಮುಖದಲ್ಲಿ ಜಿಗಿಯುತ್ತಿರುವ ಜಿಂಕೆಗಳತ್ತ ಗುರಿ ಕಟ್ಟಿ ಹೊಡೆಯುವ ಸುಖದ ಭಾವ ಎದ್ದು ಕಾಣುತ್ತದೆ.

ಇಲ್ಲಿ ಕಲಾವಿದರು ತಮ್ಮ ಜಾಣ್ಮೆಯನ್ನು ಮೆರೆದಿದ್ದಾರೆ. ಈ ವರ್ತುಳಾಕಾರದ ಕಟ್ಟಿಗೆ ಅಲಂಕೃತ ವರ್ತುಳಾಕಾರದ ಅಂಚಿನಿಂದ ಅಲಂಕರಿಸಲಾಗಿದೆ. ಅಂಚಿನ ಒಳಭಾಗದಲ್ಲಿ ಬೆಳ್ಳಿ ವರ್ತುಳಾಕಾರವಾಗಿ ಹರಡಿಕೊಂಡಿದೆ.

೫ ಮೊಘಲ್ ಗಂಜೀಫಾ

ಮೇವಾರದಲ್ಲಿ ಕ್ರಿ.ಶ. ೧೮ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೬.೭-೫.೫. ಸೆಂ.ಮೀ. ಅಳತೆಯಲ್ಲಿವೆ. ಇವುಗಳಲ್ಲಿ ೨೦-೯೬ ಗಂಜೀಫಾ ಎಲೆಗಳಿವೆ. ಎಂಟು ನಾಯಿಗಳನ್ನು ಕನಕವರ್ಣದ ಹಿನ್ನೆಲೆಯಲ್ಲಿ ಬಾಗಿದಂಚಿನ ಕಮಾನಿನ ಒಳಗೆ ರಚಿಸಲಾಗಿದೆ. ಕಮಾನಿನ ತುದಿಗಳು ಅಲಂಕೃತವಾಗಿವೆ. ಇಲ್ಲಿ ವಿವಿಧ ವರ್ಣಗಳ, ವಿವಿಧ ಭಂಗಿಗಳ ಬೇಟೆನಾಯಿಗಳ



ಸಂಗ್ರಹ ; ಕರ್ನಾಟಕ ಚಿತ್ರಕಲಾ ಪರಿಷತ್ ಗ್ರಂಥಾಲಯ, ಬೆಂಗಳೂರು

ಚಿತ್ರಗಳನ್ನು ನಾವಿಲ್ಲಿ ಕಾಣಬಹುದು. ಪ್ರತಿ ಶುನಕವನ್ನು ವಿಶೇಷ ಭಂಗಿಯಲ್ಲಿ ಚಿತ್ರಿಸಲಾಗಿದೆ. ಇಲ್ಲಿ ನಾಯಿಗಳ ಮುಖಗಳು ಒರೆಯಾದರೂ ಕೆಲವು ನಾಯಿಗಳು ಏನೇನೋ ತಿನ್ನುತ್ತಿರುವಂತೆ ಕೆಲವು ಹುಡುಕುತ್ತಿರುವಂತೆ, ಮತ್ತೆ ಕೆಲವು ಎಚ್ಚರಗೊಂಡಂತೆ ಚಿತ್ರಿಸಲಾಗಿದೆ. ಪ್ರತಿಯೊಂದು ಭಿನ್ನ ಭಿನ್ನ ಭಾವಗಳಲ್ಲಿವೆ. ತಮ್ಮ ಮುಖವನ್ನು ಹಿಂದಕ್ಕೆ ಮುಂದಕ್ಕೆ, ಮೇಲೆ, ಕೆಳಗೆ ಪಕ್ಕಕ್ಕೆ ತಿರುಗಿಕೊಂಡ ಭಂಗಿಗಳಿವೆ.

೧೦ ನಾಯಿಗಳ ಆಟದ ಎಲೆಕಟ್ಟು

ಮೇವಾರದಲ್ಲಿ ಕ್ರಿ.ಶ. ೧೮ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೬.೭-೫.೫. ಸೆಂ.ಮೀ. ಅಳತೆಯಲ್ಲಿವೆ. ಬಂಗಾರದ ಬಣ್ಣದ ಹಿನ್ನೆಲೆಯಲ್ಲಿಯ ಕಮಾನಿನ ಒಳಗಡೆ ಬಿಳಿ, ಕಪ್ಪು, ಹಸಿರು, ಕೆಂಪು, ಕಂದುವರ್ಣಗಳಲ್ಲಿ ೧೦ ನಾಯಿಗಳನ್ನು ಚಿತ್ರಿಸಲಾಗಿದೆ. ಈ ಕಾಡು ನಾಯಿಗಳ ಮುಖಗಳು ಒರೆಯಾಗಿವೆ. ವಿವಿಧ ಭಂಗಿಯ ನಾಯಿಗಳಲ್ಲಿ ಕೆಲವು ಆಟ ಆಡುತ್ತಿವೆ. ಕೆಲವು ವಿಶ್ರಮಿಸುತ್ತಿರುವ ಭಂಗಿಗಳಲ್ಲಿವೆ. ಕೆಲವು ಆಟವಾಡುತ್ತಿದ್ದರೆ ಕೆಲವು ಸಂಗಾತಿಗಳನ್ನು ಕಚ್ಚುವ ಭಂಗಿಗಳಲ್ಲಿವೆ. ಅವೆಲ್ಲವೂ ವಿವಿಧ ಕೋನಗಳಲ್ಲಿ ವೀಕ್ಷಿಸುತ್ತಿರುವಂತೆ ರಚಿಸಲಾಗಿದೆ.

ಎರಡು ಆನೆಗಳ ಕಟ್ಟು

ಮೇವಾರದಲ್ಲಿ ಕ್ರಿ.ಶ. ೧೮ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಅರಗಿನ ಬಣ್ಣಗಳಿಂದ ಕೂಡಿದ್ದು, ಇವು ೬.೭-೫.೫. ಸೆಂ.ಮೀ. ಅಳತೆಯಲ್ಲಿವೆ. ಎರಡು ಕರಿಯ ವರ್ಣದ ಕರಿಗಳನ್ನು ಕಂದು ಹಸಿರು ಕಮಾನಿನ ಒಳಗಡೆಯ ಹಿನ್ನೆಲೆಯಲ್ಲಿ ಚಿತ್ರಿಸಲಾಗಿದೆ. ಈ ಎರಡು ಗಜಗಳಲ್ಲಿ ಮೇಲಿನದು ಎಡದಿಂದ ಬಲಕ್ಕೆ ಸಾಗುತ್ತಿದ್ದರೆ, ಕೆಳಗಿನ ಆನೆ ಬಲದಿಂದ ಎಡಕ್ಕೆ ಬಾಲ ಎತ್ತಿಕೊಂಡು ಓಡುವ ಭಂಗಿಯಲ್ಲಿದೆ. ಪ್ರತಿಯೊಂದೂ ಮಣಿಗಳಿಂದ ಅಲಂಕೃತವಾಗಿವೆ ಮತ್ತು ಪ್ರತಿಯೊಂದರ ಮೇಲೆ ಅಂಬಾರಿಗಳನ್ನು ಸರಪಳಿಗಳಿಂದ ಬಿಗಿಯಲಾಗಿದೆ. ಕೊರಳಲ್ಲಿ, ಹಣೆಯಲ್ಲಿ, ಕಾಲುಗಳಲ್ಲಿ ಸುವರ್ಣ ಸರಪಳಿಗಳಿಂದ ಈ ಆನೆಗಳು ಅಲಂಕಾರಗೊಂಡಿವೆ.[೧೨]

ರಾಜಸ್ಥಾನ

ರಾಜಸ್ಥಾನವು ಅನೇಕ ಶಾಸ್ತ್ರೀಯ ಸ್ಥಾನಗಳಲ್ಲಿ ಗಂಜೀಫಾ ಆಟಕ್ಕೆ ಒಂದು ಸ್ಥಾನವನ್ನು ನೀಡಿದೆ. ಈ ಪ್ರದೇಶದ ಜನರು ತಮ್ಮ ಬಿಡುವಿನ ವೇಳೆಯಲ್ಲಿ ಗಂಜೀಫಾ ಆಟವನ್ನು ಆಡುತ್ತಿದ್ದರು. ಈ ಆಟವು ಆಸ್ಥಾನಗಳ ಪುರುಷವರ್ಗದ ನಡುವೆಯೂ, ಸೈನಿಕರ ನಡುವೆಯೂ ಹೆಚ್ಚು ಕಂಡುಬರುತ್ತಿತ್ತು.

ಶ್ರೀಮಂತರ ವೇಳೆ ಕಳೆಯುವ ಆಟವಾಗಿದ್ದ ಇದು ನಂತರ ಸಾಮಾನ್ಯ ವರ್ಗಕ್ಕೂ ಆಡುವುದಕ್ಕೆ ಅನುಮತಿ ಕೊಟ್ಟ ನಂತರ ಕಡಿಮೆ ಬೆಲೆಯ ಗಂಜೀಫಾಗಳಿಗೆ ಹೆಚ್ಚಿನ ಬೇಡಿಕೆ ಬಂದಿತು. ರಜಪೂತ ದರ್ಬಾರಿನಲ್ಲಿ ಗಂಜೀಫಾ ತಯಾರಿಕೆಗೆ ವಿಶೇಷವಾಗಿ ಕಲಾಕಾರರನ್ನು ನೇಮಿಸಿ ಅವರ ಅಭಿರುಚಿಗೆ ತಕ್ಕಂತೆ ಚಿತ್ರಿಸಿಕೊಳ್ಳತೊಡಗಿದರು. ಕೇವಲ ಎರಡು ಸಣ್ಣ ಚಿತ್ರಗಳಲ್ಲಿ ಜನರು ಆಡುತ್ತಿರುವುದನ್ನು ಚಿತ್ರಿಸಲಾಗಿದೆ.

ಏಕರಂಗ್ ನಕ್ಷ

ದಕ್ಷಿಣ ಮತ್ತು ಪಶ್ಚಿಮ ಭಾರತದಲ್ಲಿ ೧೯ನೆಯ ಶತಮಾನದಲ್ಲಿ ೬೮.ಮಿ.ಮೀ ಸುತ್ತಳತೆಯ ಕಂದು ಮತ್ತು ಹಳದಿ ಬಣ್ಣಗಳಿಂದ ಗಂಜೀಫಾ ಎಲೆಗಳು ಕೂಡಿವೆ. ಇವುಗಳಲ್ಲಿ ೧೧-೪೮ ಎಲೆಗಳಿವೆ.

೧೨. Dr. Sarala Chopra : Ganjifa, PP. 43-66



Mogul Ganjifa, Tiervariante, (Jahrhundert)



ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಏಕರಂಗ ನಕ್ಷದ ಹನ್ನೊಂದು ಎಲೆಗಳು ಮೀರ್ ಮತ್ತು ವಜೀರ ಎಲೆಗಳಿಂದ ಕೂಡಿದ್ದು ಪ್ರತಿಯೊಂದು ೭, ೮, ೯ ಮತ್ತು ೧೦ರ ಎಲೆಗಳನ್ನು ಹೊಂದಿದ್ದು ಮೊಘಲ್ ಸಂಸ್ಥಾನದ ಗಂಜೀಫಾ ಕಟ್ಟನ್ನು ಹೋಲುತ್ತವೆ. ನಾಲ್ಕು ಮೀರ ಮತ್ತು ಮೂರು ವಜೀರ ಎಲೆಗಳ ಪುನರಾವರ್ತಿಯು ಸೂಚಿಸುವುದೇನೆಂದರೆ ಅಲ್ಲಿ ೧೨ ಎಲೆಗಳ ಒಂದು ಸೂಟ್ ಇರುತ್ತದೆ ಎಂದು ಇವುಗಳನ್ನು ಗಂಜಾಮ್ ಜಿಲ್ಲೆಯ ಅನೇಕ ಸ್ಥಾನಗಳಲ್ಲಿ ಮಾಡುತ್ತಿದ್ದರು. ಡಾ. ಗುಪ್ತಾ ವರದಿ ಮಾಡಿರುವಂತೆ ೪೮ ಎಲೆಗಳ ನಕ್ಷೆ ಆಟದಲ್ಲಿ ಒಂದು ಸೂಟ್ ಪುನರ್ ಬಳಕೆಯಾಗುತ್ತಿತ್ತು.

ನಕ್ಷೆ ಆಟವನ್ನು ಜೂಜಾಟದ ಆಟವನ್ನಾಗಿ ಆಡಲಾಗುತ್ತಿತ್ತು. ಇದನ್ನು ಈಗಲೂ ಭಾರತದಲ್ಲಿ ಆಡುತ್ತಾರೆ. ಬಂಗಾಳ ಮತ್ತು ಓರಿಸ್ಸಾದಲ್ಲಿ ದಸರಾ ಹಾಗೂ ದೀಪಾವಳಿಯ ಮೂರು ವಾರಗಳಲ್ಲಿ ಈ ಆಟವನ್ನು ಆಡುತ್ತಾರೆ. ಆಟದ ಎಲೆಗಳು ಬಹು ಸಾಮಾನ್ಯವಾಗಿ ಚಿತ್ರಿಸಲ್ಪಟ್ಟರೂ ಜನಸಾಮಾನ್ಯರ ಜೀವನ ಶೈಲಿಯನ್ನು ನಿರೂಪಿಸುತ್ತಿದ್ದವು. ಮೀರ್‌ನು ಸಿಂಹಾಸನದ ಮೇಲೆ ಕುಳಿತಿದ್ದು, ಇತರೆ ಜನರು ಸುತ್ತಲೂ ನಿಂತಿದ್ದು, ವಜೀರನು ಕುದುರೆ, ಆನೆ ಹತ್ತಿ ಕುಳಿತಿರುವುದು ಹೀಗೆ ಅನೇಕ ವರ್ಣರಂಜಿತ ಚಿತ್ರಗಳು ಈ ಭಾಗದಲ್ಲಿ ಕಂಡುಬರುತ್ತವೆ.[೧೩]

ಕಾಶ್ಮೀರ ಮತ್ತು ಪಂಜಾಬಿನ ಆಟದ ಎಲೆಗಳು

ಕಾಶ್ಮೀರ ಎಲೆಗಳು ದೇಶದ ಇತರೆ ಎಲ್ಲಾ ಎಲೆಗಳಂತೆ ಬಹು ಶ್ರೀಮಂತ ಎಲೆಗಳಾಗಿದ್ದವು. ಉತ್ತಮ ದರ್ಜೆಯ ಹಾಳೆಯನ್ನು ಬಳಸಿ ವರ್ಣರಂಜಿತ ಕಾರ್ಡುಗಳನ್ನು ತಯಾರಿಸಲಾಗಿತ್ತು. ಒಂದು ಸೂಟ್‌ನಿಂದ ಇನ್ನೊಂದು ಸೂಟ್‌ಗೆ ಈ ವಿನ್ಯಾಸವು ಬದಲಾಗುತ್ತವೆ. ವಸ್ತುಸಂಗ್ರಹಾಲಯದಲ್ಲಿ ಕಂಡುಬರುವಂತೆ ಕೆಲವು ಎಲೆಗಳ ಮೇಲೆ ಕಂಡುಬರುವ ಉಡುಪು, ಪೇಟಾ ಮತ್ತು ಹಕ್ಕಿಗಳು ಸಿಕ್ಕ ಆಗಿದ್ದು ಇನ್ನು ಕೆಲವು ಎಲೆಗಳು ಮೊಘಲ್ ಶೈಲಿಯನ್ನು ಹೊಂದಿವೆ.

ದರ್ಬಾರಿನ ಸೂರಣ್ಯಸೂಟ್‌ಗಳು ಇತರೆ ಕಡೆಗಿನ ಸೂಟ್‌ಗಳಿಗಿಂತ ಭಿನ್ನವಾಗಿವೆ. ಈ ದರ್ಬಾರಿ ಎಲೆಗಳಲ್ಲಿ ಎರಡು ಸಿಂಹಗಳು ತಮ್ಮ ಶಿರೋಭಾಗವನ್ನು ಹಿಂದಕ್ಕೆ ಸರಿಸಿ ನೋಡುತ್ತಿರುವ ಚಿತ್ರ ಹಾಗೂ ಹಕ್ಕಿಗಳು ಸೂರ್ಯನ ಕಡೆಗೆ ಹಾರುತ್ತಿರುವ ಚಿತ್ರಗಳನ್ನು ಮಿರ್ ಎಲೆಗಳಲ್ಲಿ ಕಂಡರೆ, ವಜೀರ ಎಲೆಗಳಲ್ಲಿ ಹಾರುತ್ತಿರುವ ಪಕ್ಷಿಗಳ ಚಿತ್ರವನ್ನು ಕಾಣುತ್ತೇವೆ. ಈ ಚಿತ್ರಗಳು ಪರ್ಶಿಯನ್ ಮಾದರಿಯನ್ನು ಹೋಲುತ್ತವೆ.

ಸೂಟ್‌ನ ಬಣ್ಣಗಳು

ತಾಜ	–	ಹಳದಿ	ಸಫೇದ	–	ಕಪ್ಪು
ಗುಲಾಮ್	–	ಹಳದಿ	ಶಮಶೇರ್	–	ಕೆಂಪು
ಚಾಂಗ್	–	ಹಸಿರು	ಸುರಕ್ಯಾ	–	ಕಪ್ಪು
ಬರ್ಟ	–	ಕೆಂಪು	ಕಿಮಾಂಶ್	–	ಕಪ್ಪು ಅಥವಾ ಹಸಿರು

ಮೊಘಲ್ ಗಂಜೀಫಾ

ಶ್ರೀನಗರ, ಕಾಶ್ಮೀರದಲ್ಲಿ ೧೯ನೇ ಶತಮಾನದ ಉತ್ತರಾರ್ಧದಲ್ಲಿ ವಿವಿಧ ಹೂವುಗಳಿಂದ ಕೂಡಿದ ಧಾರ್ಮಿಕೇತರ ಗಂಜೀಫಾ ಚಿತ್ರಗಳನ್ನು ಕಾಣಬಹುದಾಗಿದೆ. ಅವು ೫೬.ಮಿ.ಮೀ ಅಳತೆಯುಳ್ಳವುಗಳಾಗಿವೆ. ಇವುಗಳಲ್ಲಿ ೩೬ ಗಂಜೀಫಾ ಎಲೆಗಳಿವೆ. ಆಟದ ಎಲೆಗಳ ಹಿಂಭಾಗದಲ್ಲಿ ಮತ್ತು ಮುಂಭಾಗ ಯಥೇಚ್ಛವಾಗಿ

೧೩. R and N. Y. Leyden : The Playing Cards of India, PP. 76

ವರ್ಣರಂಜಿತವಾಗಿದ್ದು ವಿಶಿಷ್ಟವಾದ ಕಾಶ್ಮೀರಿಶೈಲಿಯಲ್ಲಿ ಹೂಗಳ ವರ್ಣಚಿತ್ರಗಳು ಕಂಡುಬರುತ್ತವೆ.

ಮಿರ್ ರಾಜನು ಕರಿಯ ಆನೆಯ ಮೇಲೆ ಸವಾರಿ ಮಾಡುತ್ತಿರುವುದು ಮತ್ತು ವಜೀರನು ಹಳದಿಯ ವರ್ಣವಿರುವ ಹೋರಿಯ ಮೇಲೆ ಸವಾರಿ ಮಾಡುತ್ತಿದ್ದಾನೆ. ಇನ್ನೊಂದರಲ್ಲಿ ಚಾಂಗ ಮತ್ತು ವಜೀರ ಒಂಟೆಯ ಮೇಲೆ ಸವಾರಿ ಮಾಡುತ್ತಿರುವುದು ಚಿತ್ರದಲ್ಲಿ ಕಂಡುಬರುತ್ತದೆ. ಇನ್ನೊಂದು ಚಿತ್ರದಲ್ಲಿ ಮೀರ್ (ರಾಜಾ)ನು ಆಯತಾಕಾರದ ಸಿಂಹಾಸನದ ಮೇಲೆ ಕುಳಿತಿದ್ದು ಸೂರ್ಯನ ಕಾಂತಿ ಸೂಸುವಂತೆ ಕಂಡುಬರುತ್ತದೆ. ರಾಜನು ಗಡ್ಡಧಾರಿಯಾಗಿದ್ದು ಮೂರು ಮೂಲೆಯ ಕಿರೀಟವನ್ನು ಧರಿಸಿದ್ದು ಸುತ್ತಲೂ ಸೇವಕರು, ಮಂತ್ರಿಗಳು ಕಾಣಸಿಗುತ್ತಾರೆ. ವಜೀರರ ಕುದುರೆಗಳ ಚಿತ್ರಗಳನ್ನು ಉತ್ತಮವಾಗಿ ಚಿತ್ರಿಸಲಾಗಿದೆಯಾದರೂ ಅವುಗಳ ಶಿರೋಭಾಗವು ದೊಡ್ಡದಾಗಿದೆ. ಈ ಚಿತ್ರಗಳು ರಾಜಸ್ಥಾನಿ ಮತ್ತು ದಕ್ಷಿಣ ಭಾರತದ ಎಲೆಗಳಲ್ಲಿ ಕಂಡುಬರುತ್ತವೆ. ಸಂಖ್ಯಾತ್ಮಕ ಎಲೆಗಳಾದ ಗುಲಾಮ್ ಎಲೆಗಳ ವರ್ಣಚಿತ್ರ ಆಕರ್ಷಕವಾಗಿದೆ. ಇದರಲ್ಲಿ ಎಕ್ಕಾದ ಚಿತ್ರಗಳು ಅದ್ಭುತವಾಗಿ ಮೂಡಿಬಂದಿವೆ. ಇಲ್ಲಿ ದೇವಕನ್ಯೆಯರು ಬಟ್ಟಲು ಹಿಡಿದು ಹಾಗೂ ಒಂದು ಸೂಟ್‌ನ ಮೇಲೆ ಕುಳಿತು ರಾಜನಿಗೆ ಮುಖಮಾಡಿ ನಿಂತಿರುವ ಚಿತ್ರಗಳು ಗಮನ ಸೆಳೆಯುತ್ತವೆ.[೧೪]

ಸಾವಂತವಾಡಿ (ಮಹಾರಾಷ್ಟ್ರ) ಆಟದ ಎಲೆಗಳು

ಕೊಂಕಣ ಮಹಾರಾಷ್ಟ್ರ ಸಾವಂತವಾಡಿಯ ಒಂದು ಸಣ್ಣ ಪ್ರಾಂತ. ೧೪ನೇ ಶತಮಾನದಲ್ಲಿ ಇದು ವಿಜಯನಗರ ಅರಸರಿಂದ ೧೫ನೇ ಶತಮಾನದಲ್ಲಿ ಬ್ರಾಹ್ಮಣಅರಸರಿಂದ ಹಾಗೂ ನಂತರದ ಅವಧಿಯಲ್ಲಿ ಬಿಜಾಪುರ ರಾಜಮನೆತನದಿಂದ ಆಳಲ್ಪಟ್ಟಿತ್ತು. ೧೬ನೇ ಶತಮಾನದಲ್ಲಿ ಇದು ಭೋಸ್ಲೆ ಆಡಳಿತಕ್ಕೊಳಪಟ್ಟಿತು. ಸಾವಂತರು ನಂತರ ಮರಾಠಾ ಶಿವಾಜಿಯ ಆಡಳಿತದಲ್ಲಿ ದಕ್ಷಿಣ ಕೊಂಕಣದ ಸರ್ದೇಸಾಯಿಗಳಾದರು. ಈ ಸಣ್ಣ ಗ್ರಾಮವು ಮೂರನೇ ಕಾಲದಲ್ಲಿ ಸಾವಂತನ ಆಡಳಿತದಲ್ಲಿ ಅಭಿವೃದ್ಧಿ ಹೊಂದಿತು. ಈತನು ಸಿಂಧ ಕುಟುಂಬದ ಮಹಿಳೆಯನ್ನು ಮದುವೆಯಾಗಿ ಪೂನಾದ ಪೇಶ್ವೆಯರೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಿದ್ದನು.

ಕೀಮ ಸಾವಂತನು ಕಲೆಯ ಬಗ್ಗೆ ಅಪಾರ ಅಭಿಮಾನ ಹಾಗೂ ಹುಚ್ಚನ್ನು ಹೊಂದಿದವನಾಗಿದ್ದನು. ಈತನು ತನ್ನ ಆಸ್ಥಾನಕ್ಕೆ ಕಲಾಕಾರರನ್ನು ಆಕರ್ಷಿಸಿ ಅನೇಕ ಪ್ರಕಾರದ ಕಲಾವಿದರನ್ನು ಆಸ್ಥಾನಕ್ಕೆ ಕರೆ ತಂದನು. ಆಕೇರಿಯಲ್ಲಿ ಗಂಜೀಫಾ ಆಟದ ಶೈಲಿಯನ್ನು ಹೊಂದುವ ಹಾಗೆ ದೇವಸ್ಥಾನಗಳನ್ನು ಕಟ್ಟಿಸಿದನು. ೧೮ನೇ ಶತಮಾನದ ಹೊತ್ತಿಗೆ ಸಾವಂತವಾಡಿಯಲ್ಲಿ ಕಟ್ಟಿಗೆಯ ಪೀಠೋಪಕರಣಗಳು ಮಾರುಕಟ್ಟೆ ಪ್ರವೇಶಿಸಿದವು. ಚಿತ್ರಕಾರರು ಈ ಕಸುಬಿನಲ್ಲಿ ನಿರತರಾದರು. ೧೭೭೮ರಲ್ಲಿ ನಾನಾ ಫಡ್ನವೀಸ್‌ನು ಸಾವಂತರಿಗೆ ಪತ್ರ ಬರೆದು ಮೂರು ಜೊತೆ ಕಟ್ಟಿಗೆಯ ಬೂಟು, ಒಂದು ಸೆಟ್ ಗಂಜೀಫಾ ಬೇಕೆಂದು ತರಿಸಿಕೊಂಡನು. ಇದೇ ಸಮಯದಲ್ಲಿ ಲೇಪೀಡನ್ ಸಂಗ್ರಹಾಲಯದಲ್ಲಿ ಕಂಡುಬರುವ ದಂತದ ದಶಾವತಾರಿ ೧೨ ಎಲೆಗಳ ಗಂಜೀಫಾಗಳು ಕಂಡುಬಂದವು. ಅದರ ಚಿತ್ರಗಳು ಮೊಘಲ್ ಮತ್ತು ದಕ್ಷಿಣ ಶೈಲಿಯನ್ನು ಹೊಂದಿದ್ದು ಇಂತಹ ಎಲೆಗಳು ಮತ್ತೆಲ್ಲೂ ಕಂಡುಬಂದಿಲ್ಲ.

ಎಸ್.ಎಸ್. ಭೋಸ್ಲೆ ಅವರ ಪ್ರಕಾರ ಈ ಕಸುಬಿನಲ್ಲಿ ತೊಡಗಿದವರು ಆಂಧ್ರದ ಬ್ರಾಹ್ಮಣರು.

೧೪. R and N. Y. Leyden : The Playing Cards of India, PP. 77



ಸಂಗ್ರಹ ; ಜನಪದ ವಸ್ತು ಸಂಗ್ರಹಾಲಯ, ಮೈಸೂರು

ಇವರು ಇಂದಿಗೂ ಈ ಕಲೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಅಲ್ಲದೆ ಇವರು ಗಂಜೀಫಾ ಎಲೆಗಳ ವಿಶೇಷ ಚಿತ್ರಗಾರರಾಗಿದ್ದರು. ಸಾವಂತವಾಡಿಯಲ್ಲಿ ಇಂದಿಗೂ ಏಳು ಕುಟುಂಬಗಳು ಗಂಜೀಫಾ ಎಲೆಗಳ ತಯಾರಿಕೆಯಲ್ಲಿ ಕಾರ್ಯನಿರತವಾಗಿ ಕೇವಲ ರಫ್ತುಗಾರಿಕೆಯಲ್ಲಿ ತೊಡಗಿವೆ.

ಸಾವಂತವಾಡಿಯ ಗಂಜೀಫಾ ಎಲೆಗಳು ಶೈಲಿಯಲ್ಲಿ ಮತ್ತು ಗುಣಮಟ್ಟದಲ್ಲಿ ವೈವಿಧ್ಯವನ್ನು ಹೊಂದಿವೆ. ಮಹಾರಾಷ್ಟ್ರದ ಬ್ರಾಹ್ಮಣರು ಗಂಜೀಫಾ ಎಲೆಗಳನ್ನು ತಮ್ಮ ಪ್ಯಾಂಟಿನ ಜೇಬಿನಲ್ಲಿಟ್ಟುಕೊಂಡು ಎಲ್ಲೆಂದರಲ್ಲಿ ತೆಗೆದುಕೊಂಡು ಹೋಗುತ್ತಿದ್ದರು. ಸಾವಂತವಾಡಿಯ ಎಲೆಗಳು ತೆಳುವಾದ ಹಾಳೆಗಳ ಮೂಲಕ ತಯಾರಿಸಲ್ಪಟ್ಟಿದ್ದು ಎಲೆಗಳು ಅತಿ ಹೊಂದಾಣಿಕೆಯನ್ನು ಹೊಂದಿವೆ. ಎಲ್ಲೆಂದರಲ್ಲಿ ತೆಗೆದುಕೊಂಡು ಹೋಗಲು ಅತೀ ಸುಲಭವಾದವುಗಳಾಗಿದ್ದವು. ಈ ಎಲೆಗಳು ಮೃದು ಮತ್ತು ಸುಂದರ ಎಲೆಗಳಾಗಿವೆ. ಇವುಗಳ ಮೇಲ್ಭಾಗ ಉತ್ತಮ ಗುಣಮಟ್ಟದ್ದಾಗಿದ್ದು ಒಂದಕ್ಕೊಂದು ಎಲೆಗಳು ಅಂಟಿಕೊಳ್ಳುವುದಿಲ್ಲ. ಎಲೆಗಳ ಮೇಲಿನ ಸುಂದರವಾದ ಚಿತ್ರಗಳು ಮುದ ನೀಡುತ್ತವೆ ಹಾಗೂ ಆಸಕ್ತಿ ಮೂಡಿಸುತ್ತವೆ. ಇದರ ಸುತ್ತ ಕಪ್ಪು, ಹಳದಿ, ಹಸಿರು, ಕೆಂಪು ಮತ್ತು ಕಂದು ಬಣ್ಣಗಳನ್ನು ಕಾಣಬಹುದು. ಈ ಎಲೆಗಳ ಮೇಲೆ ದಕ್ಷಿಣದ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ. ತಯಾರಿಸಿದ ಎಲೆಗಳ ಸೂಟನ್ನು ಸುಂದರವಾಗಿ ಚಿತ್ರಿಸಿದ ಕಟ್ಟಿಗೆಯ ಪೊಟ್ಟಣದಲ್ಲಿ ಹಾಕಿ ಇಡಲಾಗುತ್ತಿತ್ತು.[೧೫]

ಸಾವಂತವಾಡಿ ದಶಾವತಾರಿ ಗಂಜೀಫಾ ಎಲೆಗಳು

ಮಹಾರಾಷ್ಟ್ರದ ಸಾವಂತವಾಡಿಯಲ್ಲಿ ೧೮ನೇ ಶತಮಾನದ ನಂತರದಲ್ಲಿ ಹೊಂಬಣ್ಣದ ಗಚ್ಚಿ ಎಣ್ಣೆಯಿಂದ ಕೂಡಿದ ಧಾರ್ಮಿಕೇತರ ಗಂಜೀಫಾ ಚಿತ್ರಗಳನ್ನು ಕಾಣಬಹುದಾಗಿದೆ. ಅವು ೧೧೨. ಮಿ.ಮೀ ಅಳತೆಯುಳ್ಳವುಗಳಾಗಿವೆ. ಇವುಗಳಲ್ಲಿ ೧೧೨ರಿಂದ ೧೨೦ ಕುರ್ಮರಾಜ ಪ್ರಧಾನ, ನರಸಿಂಹರಾಜ, ಪರಶುರಾಮ ಪ್ರಧಾನ ಗಂಜೀಫಾ ಎಲೆಗಳಿವೆ.

ಸಾವಂತವಾಡಿಯ ದಶಾವತಾರ ಗಂಜೀಫಾಗಳಲ್ಲಿ ಕೃಷ್ಣ ಪ್ರಧಾನ ಎಲೆಗಳು ಕಾಣಸಿಗುವುದಿಲ್ಲ. ಸಾವಂತವಾಡಿಯ ಗಂಜೀಫಾ ಎಲೆಗಳು ಶ್ರೇಷ್ಠ ಮಟ್ಟದ ಎಲೆಗಳು, ಪ್ರತಿ ಸಂಖ್ಯಾತ್ಮಕ ಎಲೆಗಳು ಸಂಖ್ಯೆಯ ಮಧ್ಯದಲ್ಲಿ ಕಂಡುಬರುತ್ತವೆ. ಇವೆಲ್ಲವುಗಳೂ ಒಂದೇ ರೀತಿಯ ಚಿತ್ರಗಳನ್ನು ಹೊಂದಿದ್ದು ಈ ಚಿತ್ರಗಳು ನಿರ್ದಿಷ್ಟತೆಯನ್ನು ಹೊಂದಿವೆ. ಮೊಘಲ್ ಗಂಜೀಫಾಗಳಿಗೆ ಹೋಲಿಸಿದರೆ, ಮೊಘಲರ ಗಂಜೀಫಾದಲ್ಲಿ ದಶಾವತಾರಿ ಚಿತ್ರಗಳು ರಾಜರು ಸಿಂಹಾಸನದ ಮೇಲೆ ಕುಳಿತಿರುವಂತೆ ಕಂಡುಬರುತ್ತದೆ. ಸಾವಂತವಾಡಿಯ ಗಂಜೀಫಾ ಎಲೆಗಳಲ್ಲಿ ಕಲೆಯ ವೈವಿಧ್ಯವನ್ನು ಕಾಣಬಹುದು. ಅಂದರೆ ಇಲ್ಲಿ ದಶಾವತಾರಿ ಚಿತ್ರಗಳನ್ನು ಜೀವಂತಿಕೆಯೋ ಎನ್ನುವಂತೆ ಗುಂಪು ಗುಂಪುಗಳಲ್ಲಿ ಸುಂದರವಾಗಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಇದರ ಶ್ರೇಣಿ ಪದ್ಧತಿಯಲ್ಲಿ ಕೃಷ್ಣನನ್ನು ಎಂಟನೇ ಸ್ಥಾನದಲ್ಲಿಯೂ ಹಾಗೂ ಬುದ್ಧನನ್ನು ಒಂಬತ್ತನೇ ಸ್ಥಾನದಲ್ಲಿ ಇಟ್ಟಿರುವುದು ಸಾವಂತವಾಡಿಯ ದಶಾವತಾರ ಗಂಜೀಫಾಗಳಲ್ಲಿ ಮಾತ್ರ ಕಾಣಸಿಗುತ್ತದೆ. ಈ ಮೇಲೆ ತಿಳಿಸುವ ಅಂಶಗಳು 'ರಾಜ' ಎಲೆಯ ವರ್ಣನೆಗಳಾಗಿದ್ದು ಅವುಗಳ ಗುಂಪು ಹಾಗೂ ಬಣ್ಣಗಳ ವಿವರಣೆಯನ್ನು ಹೊಂದಿವೆ. ಮೊದಲನೆಯದಾಗಿ

ಮತ್ಸ್ಯ – ಮೀನು – ಕೆಂಪು ಬಣ್ಣ

ವಿಷ್ಣುವು ಮೀನಿನ ಬಾಯಿಂದ ಉದ್ಭವಿಸುವುದನ್ನು ಚಿತ್ರಿಸಲಾಗಿದೆ. ಇವನು ನಾಲ್ಕು ಕೈಗಳನ್ನು ಹೊಂದಿದ್ದು ಖಡ್ಗ, ಶಂಖ ಮತ್ತು ಚಕ್ರವನ್ನು ಕೈಯಲ್ಲಿ ಹಿಡಿದಿರುತ್ತಾನೆ. ನವಿಲಿನ ಗರಿಯಿಂದ ರಂಜಿಸುವ

---

೧೫. R and N. Y. Leyden : The Playing Cards of India, PP. 81

ದಶಾವತಾರ ಚಿತ್ರಗಳು



ಸಂಗ್ರಹ ; ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು



ಸಂಗ್ರಹ ; ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

ದಶಾವತಾರ ಚಿತ್ರಗಳು



ಸಂಗ್ರಹ ; ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

ಬುದ್ಧ–ಕಮಲ–ಕಪ್ಪುಬಣ್ಣ

ಬುದ್ಧನು ಕಮಲದ ಮೇಲೆ ಕುಳಿತಿದ್ದು ಹಿಂಭಾಗ ಹಸಿರು ಬಣ್ಣವನ್ನು ಹೊಂದಿದೆ. ಬುದ್ಧನಿಗೆ ನಾಲ್ಕು ಕೈಗಳನ್ನು ಚಿತ್ರಿಸಿದ್ದು ಎಡ ಮತ್ತು ಬಲಭಾಗದಲ್ಲಿ ಪೂಜಿಸುತ್ತ ನಿಂತ ಇಬ್ಬರು ಬ್ರಾಹ್ಮಣರು ಕಂಡುಬರುತ್ತಾರೆ. ಇವರು ಧೋತಿಗೆ ಹಾಕಿರುವ ವಸ್ತ್ರ ವಿನ್ಯಾಸವು ಈ ಚಿತ್ರದಲ್ಲಿ ಕಂಡುಬರುತ್ತದೆ.

ಕಲ್ಕಿ–ಕುದುರೆ – ಕಪ್ಪುಬಣ್ಣ

ಈ ಚಿತ್ರದಲ್ಲಿ ಕಲ್ಕಿಯು ನಾಲ್ಕು ಕೈಗಳು ಹಾಗೂ ಬಿಳಿ ರೆಕ್ಕೆಗಳ ಕುದುರೆಯ ಚಿತ್ರವನ್ನು ಕಾಣಬಹುದು. ಪಕ್ಕದಲ್ಲಿ ಚಾಮರ ಹಿಡಿದ ಸೇವಕರು ಎಡ ಮತ್ತು ಬಲಭಾಗದಲ್ಲಿ ಕಂಡುಬರುತ್ತಾರೆ. ಚಿತ್ರವನ್ನು ಕಪ್ಪು ಬಣ್ಣದಲ್ಲಿ ಚಿತ್ರಿಸಲಾಗಿದೆ.

ಪ್ರಧಾನ ಎಲೆಯ ಇಬ್ಬರು ಕುದುರೆ ಸವಾರರು ಹಾಗೂ ಮೂವರು ಕಾಲ್ದಳದವರ್‍ಲ್ಲು ಕಂಡುಬರುತ್ತಾರೆ. ಬಹುಸಂಖ್ಯೆಯ ಎಲೆಗಳು ಮೊಘಲ್ ವೇಷ–ಭೂಷಣಗಳನ್ನು ಅಥವಾ ಮಹಾರಾಷ್ಟ್ರ ಶೈಲಿಯ ವಸ್ತ್ರಾಭರಣಗಳ ಶೈಲಿಯನ್ನು ಹೊಂದಿವೆ. ಸಂಖ್ಯಾತ್ಮಕ ಎಲೆಗಳು ಕೃಷ್ಣ, ಬಲರಾಮ, ಗೋವಿಂದರ ಪ್ರಮುಖ ಚಿತ್ರಗಳನ್ನು ಮಧ್ಯದಲ್ಲಿ ಹೊಂದಿವೆ. ಎಕ್ಕಾ ಅಥವಾ ಎರಡು ಎಲೆಗಳನ್ನು, ಬಂಗಾರದ ಬಣ್ಣದಿಂದ ಹಾವಿನ ಚಿತ್ರವನ್ನು ಸುತ್ತಲೂ ಚಿತ್ರಿಸಲಾಗಿದೆ. ಅಲ್ಲದೆ ಹೂಗಳ ಚಿತ್ರವನ್ನು ಚಿತ್ರಿಸಲಾಗಿದೆ. ಈ ಚಿತ್ರಗಳು ಸಾವಂತವಾಡಿಯ ಎಲ್ಲಾ ಗಂಜೀಫಾ ಎಲೆಗಳಲ್ಲಿ ಕಂಡುಬರುತ್ತವೆ.

ಎಲೆಗಳನ್ನು ಸಂಗ್ರಹಿಸುವ ಪೊಟ್ಟಣಗಳ ಮೇಲೆ ಅನೇಕ ಚಿತ್ರಗಳು ಕಾಣಸಿಗುತ್ತವೆ. ಗೌರಿಶಂಕರ, ಕೃಷ್ಣ, ಕಲ್ಕಿ, ತ್ರಿಮೂರ್ತಿ, ದತ್ತಾತ್ರೇಯ, ರಾಮ, ಸೀತೆ ಮತ್ತು ಲಕ್ಷ್ಮಣರ ಚಿತ್ರ, ಹನುಮಾನ್ ಮತ್ತು ಸೇವಕರ ಚಿತ್ರಗಳನ್ನು ಕಾಣಬಹುದು. ಒಳಗಡೆ ಕೆಂಪುಬಣ್ಣ, ಸುತ್ತಲೂ ಕಪ್ಪು ಹಸಿರಿನಿಂದ ಚಿತ್ರಿಸಲಾಗಿದೆ.

ವಿಷ್ಣುವಿನ ನವಿಲುಗರಿಯ ಕಿರೀಟದ ಜೊತೆ ಜೊತೆಗೆ ವಿಶೇಷ ಉಡುಪುಗಳನ್ನು ಧರಿಸಿರುವ ಚಿತ್ರಗಳು ಎಲೆಗಳ ಮೇಲೆ ಕಂಡುಬರುತ್ತವೆ. ಕಿರೀಟ, ಮುಕುಟ ಹಾಗೂ ಇತರೆ ಚಿತ್ರಗಳು ಕೇವಲ ಸಾವಂತವಾಡಿಯಲ್ಲಿ ಮಾತ್ರ ಕಂಡುಬರುತ್ತವೆ. ಅಲ್ಲದೆ ಎಲ್ಲಾ ಅವತಾರಗಳು ಹಿಂದೂಶೈಲಿಯಲ್ಲಿ ಧೋತಿ ಹಾಗೂ ದುಪ್ಪಟ್ಟಗಳನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಈ ಸೂಟ್‌ಗಳು ಬಹು ಸಂಖ್ಯಾತವಾಗಿ ಕಛೇರಿಯಲ್ಲಿ ಮಾರಾಟವಾಗುತ್ತಿದ್ದವು. ಇವುಗಳ ಮೂಲವನ್ನು ಸಾವಂತವಾರೀ ಎಂದು ಕರೆಯಲಾಗುತ್ತಿತ್ತು.[೧೭]

ಆಂಧ್ರಪ್ರದೇಶದ ಆಟದ ಎಲೆಗಳು

ಆಂಧ್ರ, ಮಹಾರಾಷ್ಟ್ರ ಮತ್ತು ಕರ್ನಾಟಕದ ಭಾಗಗಳು ಉತ್ತಮ ಮತ್ತು ದಕ್ಷಿಣದ ನಡುವಿನ ಮುಗಿಯದ ಯುದ್ಧಗಳ ಸಾಕ್ಷಿಯಾಗಿ ನಿಂತಿದ್ದವು. ಭಾರತ ಸ್ವಾತಂತ್ರ್ಯದ ನಂತರ ಆಂಧ್ರ ಪ್ರದೇಶದಲ್ಲಿ ಹೈದ್ರಾಬಾದಿನ ನಿಜಾಮರ ಆಳ್ವಿಕೆ ತಪ್ಪಲಿಲ್ಲ. ಹಿಂದೂ ಹಾಗೂ ಮುಸ್ಲಿಂ ಸಂಸ್ಕೃತಿಗಳು ಇಲ್ಲಿ ಸುಲಭವಾಗಿ ಹೊಂದಾಣಿಕೆಗೆ ಒಳಪಟ್ಟಿದ್ದವು. ಇಲ್ಲಿಯ ಅನೇಕ ತೆಲುಗುಕಲಾವಿದರು ಪ್ರತಿಭಾಸಂಪನ್ನರಾಗಿದ್ದರು. ಅವರು ವಿಜಯನಗರ ಸಾಮ್ರಾಜ್ಯದ ಪರಂಪರೆಯನ್ನು, ಸಂಸ್ಕೃತಿಯನ್ನು ತಮ್ಮ ಕಲೆಯ ಮೂಲಕ ಮುಂದುವರಿಸಿಕೊಂಡೇ ಬಂದರು. ವಿಜಯನಗರ ಕಲೆಯು ಅವರಲ್ಲಿ ರಕ್ತಗತವಾಗಿಬಿಟ್ಟಿತ್ತು. ಅವರು ಮೊಘಲ್ ನವಾಬರ, ಸುಬೇದಾರರ, ಹಿಂದೂ ಅರಸರ ಮತ್ತು ಸಂಸ್ಥಾನಗಳ ಸೇವೆ ಮಾಡಿದರು. ೧೬ನೇ ಶತಮಾನದಿಂದ ಈಚೆ ಇಸ್ಪೇಟ್ ಆಟವು ಒಂದು ಐಶಾರಾಮಿ ಜನರ ಮನೋರಂಜನೆಯ ಆಟವಾಗಿ ಬೆಳೆದು ಬಂತು.

೧೭. R and N. Y. Leyden : The Playing Cards of India, PP. 83

ಕೆಲವು ಪೂರ್ವ ಇಸ್ಪೇಟ್ (ಗಂಜೀಫಾ) ಎಲೆಗಳ ದಿನಾಂಕಗಳನ್ನು ಗುರುತಿಸಬಹುದು. ಗೆಜೆಟಿಯರ್ಸ್ ಹಾಗೂ ಯಾತ್ರಿಕರು ಹೇಳುವ ಆಧಾರಗಳ ಮೇಲೆ ಕೆಲವು ಕೇಂದ್ರಗಳನ್ನು ಗುರುತಿಸಬಹುದಾಗಿದೆ. "Mena Saverees" ಹಾಗೂ ಗಂಜೀಫಾ ಎಲೆಗಳು ನಿಜಾಮುದ್ದೀನ್ ಜಿಲ್ಲೆಯ ಬಾಲ್ಕೊಂಡಾದಲ್ಲಿ ಮುದ್ರಿತವಾಗುತ್ತಿದ್ದವು. ಇವುಗಳನ್ನು ಹೈದ್ರಾಬಾದಗೆ ಹೋಗಿ ಮಾರಾಟ ಮಾಡುತ್ತಿದ್ದರು. ಕರ್ನೂಲ್ ಮತ್ತು ಕಡಪಾಗಳಲ್ಲಿಯೂ ಗಂಜೀಫಾ ಎಲೆಗಳನ್ನು ತಯಾರಿಸುತ್ತಿದ್ದರು. ಬಿಮಾಲ್ ಮತ್ತು ನಿರ್ಮಲ್‌ಗಳಲ್ಲಿ ಟ್ರೇಗಳಿಗೆ, ಟೇಬಲ್‌ಗಳಿಗೆ, ಗೊಂಬೆಗಳಿಗೆ ಸ್ಥಳೀಯ ಆಟದ ಎಲೆಗಳಿಗೆ ಬಣ್ಣ ಲೇಪಿಸುತ್ತಿದ್ದರು. ನಿರ್ಮಲ್, ಕರ್ನೂಲ್ ಮತ್ತು ಕಡಪಾದ ಎಲೆಗಳು ವಿಭಿನ್ನವಾಗಿವೆ. ನಿರ್ಮಲ್ ಎಲೆಗಳಲ್ಲಿ ಮೊಘಲ್‌ದ ಪ್ರಭಾವ ಕಂಡರೆ, ಕಡಪಾದ ಎಲೆಗಳು ದಕ್ಷಿಣ ಭಾರತದ ಸಂಸ್ಕೃತಿಯ ಅಭಿವ್ಯಕ್ತಿಯನ್ನು ಹೊಂದಿವೆ. ಇವು ಮಧುರೈನ ನಾಯರ್ ಶೈಲಿಯಲ್ಲಿವೆ. ದಶಾವತಾರದ ವರ್ಣನೆಗಳೂ ಕಂಡುಬರುತ್ತವೆ.

ಮೊಘಲ್ ಗಂಜೀಫಾ

ಕರ್ನೂಲ್, ಆಂಧ್ರಪ್ರದೇಶದಲ್ಲಿ ೧೯ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಕೆಂಪುಬಣ್ಣದಿಂದ ಕೂಡಿದೆ. ಇವು ೪೩ಮಿ.ಮೀ ಸುತ್ತಳತೆಯನ್ನು ಹೊಂದಿದ್ದು. ಇವುಗಳಲ್ಲಿ ಒಟ್ಟು ೯೬ ಎಲೆಗಳಿವೆ. ಮದ್ರಾಸ್‌ದ ಮಮ್ಮಡನ್ ಆಟದ ಎಲೆಗಳು, ಬಜಾರದಲ್ಲಿ ಐದು ರೂಪಾಯಿ ಎಂಬುದು ಪೊಟ್ಟಣದ ಮೇಲಿದ್ದಿತು. ೧೮೪೧ರ ಕರ್ನೂಲ್ ಶೈಲಿಯು ಮದ್ರಾಸ್ ಸರ್ಕಾರದ ಆಡಳಿತ ವಶಕ್ಕೆ ಬಂದಿತು. ಆಗಿನ ಕಾಲಕ್ಕೆ ಉತ್ತಮ ಬೆಲೆಯನ್ನು ನೀಡಿ ಕರ್ನೂಲ್ ಗಂಜೀಫಾ ಎಲೆಗಳನ್ನು ಕೊಂಡುಕೊಳ್ಳಲಾಗುತ್ತಿತ್ತು. ಕೆಲವು ಗಂಜೀಫಾ ಎಲೆಗಳ ವಿವರ ಈ ಕೆಳಗಿನಂತಿದೆ :

ಮೀರ್ – ಮೀರ್‌ನು ಷಟ್‌ಭುಜ ಸಿಂಹಾಸನದ ಮೇಲೆ ಕುಳಿತಿರುತ್ತಾನೆ. ಬಲಭಾಗಕ್ಕೆ ಛತ್ರಿ ಹಿಡಿದುಕೊಂಡ ಓರ್ವ ಸೇವಕ ನಿಂತಿದ್ದಾನೆ. ಆಸ್ಥಾನವಾಸಿಗಳು ಎಡಭಾಗಕ್ಕೆ ನಿಂತಿದ್ದಾರೆ.

ಸುರ್ಖ್ಯಾ – ಸುರ್ಖ್ಯಾದ ಮೀರ್ ಎಲೆಯು ಸಿಂಹದ ಚಿತ್ರವನ್ನು ಮುಂಭಾಗದಲ್ಲಿಯೂ ಹಾಗೂ ಹೊಳೆಯುವ ಸೂರ್ಯನ ಚಿತ್ರವನ್ನು ಹಿಂಭಾಗದಲ್ಲಿಯೂ ಹೊಂದಿದ್ದವು. ಗುಲಾಮ್‌ನ ಮೀರನು ಆನೆಯನ್ನು ಸವಾರಿ ಮಾಡುತ್ತಿದ್ದನು. ಗುಲಾಮದ ವಜೀರನು ಕುದುರೆಸವಾರಿಯಲ್ಲಿ ನಿರತ ದೃಶ್ಯವಿದೆ.

ಆಟದ ಎಲೆಗಳು ಸಂಪ್ರದಾಯದ ಮೊಘಲ್ ವಸ್ತ್ರಾಲಂಕಾರ ಶೈಲಿಯನ್ನು ಹೋಲುತ್ತಿತ್ತು. ಪೇಟಾ ಧರಿಸಿರುವ ವ್ಯಕ್ತಿಗಳ ಸಣ್ಣ ಚಿತ್ರಗಳು ಆಯಾ ಸೇವಕರ ಸ್ಥಾನಮಾನವನ್ನು ಸೂಚಿಸುತ್ತಿದ್ದವು. ವರ್ಣಚಿತ್ರ ಹೊಂದಿದ ಪೊಟ್ಟಣವು ವಿಶೇಷ ಕರ್ನೂಲ್ ಶೈಲಿಯಲ್ಲೇ ಕಂಡುಬರುತ್ತದೆ. ಓರ್ವ ಮಹಿಳೆ ಸೀರೆ ಧರಿಸಿ, ಎರಡೂ ಹೆಗಲ ಮೇಲೆ ಒಂದು ಶರ್ಟ್ ಧರಿಸಿ ನಿಂತಿರುವ ಚಿತ್ರಗಳು ಕಂಡುಬರುತ್ತವೆ. ಮಹಿಳೆಯು ಗಿಡದ ಇಳಿಬಿದ್ದ ರೆಂಬೆಯ ಕೆಳಗಡೆ ನಿಂತಿರುವಂತೆಯೂ ರಾಗಮಾಲಾಚಿತ್ರದಂತೆ ಕಂಡುಬಂದಿದೆ. ಇದರ ಗುಣಮಟ್ಟ ಅತ್ಯುತ್ತಮವಾಗಿದ್ದು ಎಲೆಯ ಚಿತ್ರಕಾರರಲ್ಲದೆ ಇತರ ವರ್ಗದ ಚಿತ್ರಕಾರರು ವರ್ಣ ಲೇಪನ ಮಾಡಿದಂತಿದೆ.

ಕರ್ನೂಲ್ (ಆಂಧ್ರಪ್ರದೇಶ)

ಕರ್ನೂಲ್, ಆಂಧ್ರಪ್ರದೇಶದಲ್ಲಿ ೧೯ನೆಯ ಶತಮಾನದಲ್ಲಿನ ಗಂಜೀಫಾ ಚಿತ್ರಗಳು ಕೆಂಪುಬಣ್ಣದಿಂದ ಕೂಡಿದೆ. ಇವು ೫೨. ಮಿ.ಮೀ ಸುತ್ತಳತೆಯನ್ನು ಹೊಂದಿದೆ. ಇವುಗಳಲ್ಲಿ ಒಟ್ಟು ೧೨೦ ಎಲೆಗಳಿವೆ. ರಾಯಲ್ ಎಷಿಯಾಟಿಕ್ ಸೊಸೈಟಿಯಿಂದ ಎರವಲು ಪಡೆದಿದ್ದು, ವಸ್ತುಸಂಗ್ರಹಾಲಯಗಳು ತಿಳಿಸುವಂತೆ

ಈ ಬಗೆಯ ಗಂಜೀಫಾ ಎಲೆಗಳು ಮದ್ರಾಸ್ ಪ್ರಾಂತದ ಕರ್ನೂಲ್ ಎಂಬ ಸ್ಥಳಕ್ಕೆ ಸೇರಿದವಾಗಿವೆ. ಈ ಪೊಟ್ಟಣಗಳು ಪ್ರಾಯಶಃ ೧೮೪೧ರಲ್ಲಿ ಸಂಗ್ರಹಗೊಂಡಿವೆ.

ಬಲರಾಮ ಸೂಟ್‌ನಲ್ಲಿ ಸ್ಪಷ್ಟವಾಗಿ ಕಾಣುವಂತೆ ಈ ಗಂಜೀಫಾ ಎಲೆಗಳನ್ನು ಅನುಪಯುಕ್ತ ಹಾಳೆಗಳ ಪದರುಗಳಿಂದ ತಯಾರಿಸಲಾಗಿದೆ. ಕರ್ನೂಲಿನ ವರಹ ಸೂಟಿನ ಎಲೆಗಳು ಯಾವಾಗಲೂ ಬಂಗಾರದ ವರ್ಣಗಳಾಗಿದ್ದವು. ನೊಸ್ಸಾರ್, ಕಡಪಾಪೊಟ್ಟಣಗಳನ್ನು ಕೃಷ್ಣಾ ಸೂಟ್‌ಗೆ ಅಳವಡಿಸಲಾಗುತ್ತಿತ್ತು. ದಕ್ಷಿಣ ಭಾರತದ ಚಾಲುಕ್ಯರ ಸಂಸ್ಥಾನದ ಕಾಲದಲ್ಲಿ ವರಹವು ಬಂಗಾರದ ಚಲಾವಣೆ ನಾಣ್ಯ (೧೧ನೇ ಶತಮಾನ). ೧೫ರಿಂದ ೧೯ನೇ ಶತಮಾನದವರೆಗೆ ಚಿನ್ನದ ನಾಣ್ಯಗಳು ವರಹ ಎಂದೇ ಕರೆಯಲ್ಪಡುತ್ತಿದ್ದವು. ಬ್ರಿಟಿಷರು ಅವುಗಳನ್ನು ಪಗೋಡಾ ಎಂದು ಕರೆದರು. ಹೀಗಾಗಿ ಕರ್ನೂಲಿನ ವರಹಸೂಟ್‌ನ ಎಲೆಗಳು ಹೀಗೆ ಕರೆಯಲ್ಪಟ್ಟಿವೆ.

ಕರ್ನೂಲ್‌ನ ರಾಜ ಮತ್ತು ಪ್ರಧಾನ ಎಲೆಗಳಲ್ಲಿ ಕೃಷ್ಣನ ಚಿತ್ರವನ್ನು ನೀಲವರ್ಣದಲ್ಲಿ ಚಿತ್ರಿಸಲಾಗಿದೆ. ಚಿಕ್ಕತಲೆ, ನವಿಲಿನ ಗರಿಯ ಕಿರೀಟವು ವಿಶೇಷ. ಕೆಲವು ಕರ್ನೂಲ್‌ಸೂಟ್‌ಗಳಲ್ಲಿ ಒಂಬತ್ತನೇ ಸ್ಥಾನವು ಕೃಷ್ಣನನ್ನು ಹೊಂದಿದೆಯೋ ಅಥವಾ ಬುದ್ಧನನ್ನು ಹೊಂದಿದೆಯೋ ಎಂಬುದನ್ನು ನಿರ್ಧರಿಸಲು ಕಷ್ಟಸಾಧ್ಯ. ಏಕೆಂದರೆ ಸಾಮಾನ್ಯವಾಗಿ ಇವು ಬಿಳಿಯ ಬಣ್ಣಗಳಲ್ಲಿ ಕಂಡುಬರುತ್ತವೆ. ಉಳಿದಂತೆ ಪ್ರಧಾನ ಕುದುರೆ ಓಡಿಸುವುದು, ರಾಜರು ಸಿಂಹಾಸನದಲ್ಲಿ ಆಸೀನರಾಗಿರುವುದು, ಉಳಿದಂತೆ ಎಲ್ಲರೂ ಧೋತಿ, ಧರಿಸಿದ ಚಿತ್ರಗಳು ಕರ್ನೂಲ್ ಗಂಜೀಫಾ ಎಲೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ಎಲೆಯ ಅಂಚುಗಳು ಸ್ಟ್ರಾಬೇರಿ ಕೆಂಪು ಬಣ್ಣವನ್ನು ಹೊಂದಿವೆ. ಇನ್ನುಳಿದಂತೆ ವಿಷ್ಣುವು ಚಕ್ರಧಾರಿಯಾಗಿ ಛತ್ರಿಯ ಕೆಳಗಡೆ ನಿಂತಿರುವುದು ಕಂಡುಬರುತ್ತದೆ. ದೇವತೆಗಳಾದ ಸಿರಿ (ಲಕ್ಷ್ಮಿ) ಮತ್ತು ಭೂದೇವಿಯರು ಸೀರೆ ಧರಿಸಿದ್ದಾರೆ. ಇವರು ವಿಷ್ಣುವಿನ ಎಡ ಮತ್ತು ಬಲಭಾಗಕ್ಕೆ ನಿಂತಿದ್ದಾರೆ. ಹತ್ತು ಅವತಾರದ ಎಲ್ಲಾ ಗಂಜೀಫಾ ಎಲೆಗಳನ್ನು ಗಡಿಯಾರದ ಮುಳ್ಳು ತಿರುಗುವ ವಿರುದ್ಧ ದಿಕ್ಕಿನಿಂದ ಚಲಾವಣೆ ಮಾಡಲಾಗುತ್ತಿತ್ತು. ಕರ್ನೂಲ್ ಮತ್ತು ನೊಸ್ಸರಿನ ಎಲ್ಲಾ ಎಲೆಗಳು ದಶಾವತಾರಿ ಪೊಟ್ಟಣಗಳು ಸಾಮ್ಯವನ್ನು ಹೊಂದಿವೆ.

ಈ ಹತ್ತು ಅವತಾರಗಳು, ಅವುಗಳ ಬಣ್ಣ, ಸೂಟ್ ಚಿಹ್ನೆ ಹಾಗೂ ರಾಜ ಮತ್ತು ಪ್ರಧಾನರ ವಿವರಣೆಯನ್ನು ಈ ಕೆಳಗೆ ಕಾಣಿಸಿದ ಚೌಕಟ್ಟಿನಲ್ಲಿ ವಿವರಿಸಲಾಗಿದೆ :

ಸೂಟ್	**ಬಣ್ಣ**	**ಚಿಹ್ನೆ**	**ರಾಜ ಮತ್ತು ಪ್ರಧಾನರು**
೦೧. ಮತ್ಸ್ಯ	ಕೆಂಪು	ಮೀನು	ಬಿಳಿಯ ದೇಹ,ನಾಲ್ಕು ಕೈಗಳು
೦೨. ಕೂರ್ಮ		ಆಮೆ	ಬಿಳಿಯ ದೇಹ, ನಾಲ್ಕು ಕೈಗಳು
೦೩. ವರಾಹ	ಬಂಗಾರ	ಹಂದಿ	ನೀಲವರ್ಣದ ಮೈ, ನಾಲ್ಕು ಕೈಗಳು
೦೪. ನರಸಿಂಹ	ಕಪ್ಪು, ಹಸಿರು	ಸಿಂಹ	ಬಿಳಿವರ್ಣ, ನಾಲ್ಕು ಕೈಗಳು
೦೫. ವಾಮನ	ಕೆಂಪು, ಕಂದು	ಛತ್ರಿ	ಬಿಳಿವರ್ಣ, ಎರಡು ಕೈಗಳು
೦೬. ಪರಶುರಾಮ	ಕೆಂಪು	ಕೊಡಲಿ	ಬಿಳಿವರ್ಣ, ಎರಡು ಕೈಗಳು
೦೭. ರಾಮ	ಗಿಳಿಹಸಿರು/ತಿಳಿನೀಲಿ	ಮಂಗ	ಸೀತೆ ಮತ್ತು ಹನುಮಂತ
೦೮. ಬಲರಾಮ	ಕೇಸರಿ, ಬಿಳಿ	ಆಕಳು	ಬಿಳಿ ದೇಹ, ಎರಡು ಕೈ

೦೯. ಕೃಷ್ಣ	ತಿಳಿಕಂದು	ಕಿರೀಟ	ನೀಲವರ್ಣದ ದೇಹ, ಎರಡು ಕೈ,
೧೦. ಕಲ್ಕಿ	ಕಪ್ಪು	ಬಿಳಿ ಕುದುರೆ	ಬಿಳಿವರ್ಣದ ದೇಹ, ನಾಲ್ಕು ಕೈಗಳು

ನಿರ್ಮಲ್ (ಆಂಧ್ರಪ್ರದೇಶ)

ನಿರ್ಮಲ್(ಆಂಧ್ರಪ್ರದೇಶ)ನಲ್ಲಿ ೧೮೫೦ರಲ್ಲಿನ ಗಂಜೀಫಾ ಚಿತ್ರಗಳು ಹಸಿರು ಮತ್ತು ಬಿಳಿಬಣ್ಣ ಅಂಚು ಕೆಂಪುಬಣ್ಣ ಹಾಗೂ ಮಧ್ಯದಲ್ಲಿ ಶೃಂಗಾರದಿಂದ ಕೂಡಿವೆ. ಇದರ ಸುತ್ತಳತೆ –೫೩ ಮಿ.ಮೀ.ಆಂಧ್ರಪ್ರದೇಶದ ಹೈದರಾಬಾದಿನ ನಿರ್ಮಲ್ ಪ್ರದೇಶದಲ್ಲಿ ೧೮ನೇ ಶತಮಾನದ ಆಟದ ಎಲೆಗಳ ತಯಾರಿಕೆಯು ಚಾಲ್ತಿಯಲ್ಲಿತ್ತು. ಸ್ಥಳಿಯ ಚಿತ್ರಕಾರರ ಈ ಆಟದ ಎಲೆಗಳಿಗೆ ನಕ್ಷಾ ಎಂದು ಕರೆಯುತ್ತಿದ್ದರು. ಇಲ್ಲಿನ ಗಂಜೀಫಾ ಚಿತ್ರಕಾರರು ಇವತ್ತಿಗೂ ಸಹ ಸಹಕಾರಿ ಸಹಾಯಕ ಸಂಘವನ್ನು ಹೊಂದಿದ್ದು, ಗೊಂಬೆಗಳು, ಉಡುಗೊರೆಯ ವಸ್ತುಗಳು ಹಾಗೂ ಆಟದ ಎಲೆಗಳನ್ನು ತಯಾರಿಸುತ್ತಾರೆ. ಇವರು ಅತೀವ ತಾಂತ್ರಿಕ ಜ್ಞಾನವನ್ನು ಹೊಂದಿರುವರು.

ಈ ಮೇಲೆ ವಿವರಿಸಿರುವ ಈ ಸೂಟ್ (೯೬) ತೊಂಬತ್ತಾರು ಗಂಜೀಫಾ ಎಲೆಗಳನ್ನು ಹೊಂದಿದೆ. ಅನೇಕ ಎಲೆಗಳು ನಕಲು ಇದ್ದು ಹಲವು ಮಾಯವಾಗಿವೆ. ಕರ್ನೂಲ್ ಎಲೆಗಳಂತೆ ಮೀರ್ ಇಲ್ಲಿ ಸಿಂಹಾಸನರೂಢನಾಗಿ ಕುಳಿತಿದ್ದಾನೆ. ಆದರೆ ಅವನ ಮುಂದೆ ಚಹಾದ ಕಿತ್ತಲಿ ಲೋಟಗಳಂಥ ವಸ್ತುಗಳನ್ನು ಇಡಲಾಗಿದೆ. ಚಾಂಗದ ಮೀರ್‌ವು ಮಹಿಳೆ ಮತ್ತು ಸೇವಕಿಯರಿಂದ ಸೇವೆಗೆ ನಿಂತಿರುವಂತೆ ವರ್ಣಿಸಲಾಗಿದೆ. ಇವುಗಳನ್ನು ಚಾಂಗ್ ರಾಣಿ ಎಂದು ಕರೆಯಲಾಗಿತ್ತು. ದಕ್ಷಿಣದಲ್ಲಿ ಈ ಆಟಕ್ಕೆ ಇದೇ ಹೆಸರಿನಿಂದ ಕರೆದರು. ಸುರ್ಖ್ಯನ ಮೀರ್ ಎಲೆಯು ಎರಡು ತಲೆಯುಳ್ಳ ನಾಲ್ಕು ಸಿಂಹಗಳ ಚಿತ್ರಣವನ್ನು ಹೊಂದಿದ್ದು ಹಿಂಭಾಗದಲ್ಲಿ ಸೂರ್ಯನ ಚಿತ್ರವಿರುವುದು. ನಿರ್ಮಲ್ ಎಲೆಗಳಲ್ಲಿ ಕಂಡುಬರುವ ಈ ಎಲೆಗಳು ಸರ್ವೇಸಾಮಾನ್ಯವಾಗಿವೆ.

ವಜೀರ್ ಎಲೆಗಳು ಬೇಟೆಯಾಡುತ್ತಿರುವ ಚಿತ್ರಗಳನ್ನು ಹೊಂದಿದ್ದು, ಆರಕ್ಕೂ ಹೆಚ್ಚು ಜನ ಮಚ್ಚ್‌ಗಳನ್ನು ಹಿಡಿದು ಕಾದಾಡುವುದನ್ನು ಚಿತ್ರಿಸಲಾಗಿದೆ. ಸಂಖ್ಯಾತ್ಮಕ ಗಂಜೀಫಾ ಎಲೆಗಳ ಸೂಟ್‌ನ ಚಿಹ್ನೆಗಳು ನಿರ್ಮಲ್‌ನ ವಿಶೇಷ ಮಾದರಿಯಲ್ಲಿ ಕಂಡುಬಂದಿವೆ. ಆದರೆ ನಿರ್ಮಲ್ ಗಂಜೀಫಾ ಎಲೆಗಳನ್ನು ವಿಭಿನ್ನ ಶೈಲಿಯ ಎಲೆಗಳನ್ನಾಗಿ ಮಾಡುವ ಅಂಶವೆಂದರೆ ಅವುಗಳ ಸಂಖ್ಯಾತ್ಮಕ ಎಲೆಗಳಲ್ಲಿ ಅರ್ಧಭಾಗದಲ್ಲಿ ಮಾನವರ ವರ್ಣಚಿತ್ರಗಳನ್ನು ಹಾಗೂ ಅವರ ವಿವಿಧ ವೃತ್ತಿಗಳನ್ನು ವರ್ಣಿಸಲಾಗಿದೆ. ಇವುಗಳಲ್ಲಿ ಕ್ರೀಡಾಪಟುಗಳು, ವಾದ್ಯ ನುಡಿಸುತ್ತಿರುವ ಮಹಿಳೆಯರು, ಬೇಟೆಗಾರರು, ಕತ್ತಿವರಸೆಯ ಸೈನಿಕರು, ಹಲಗೆ ಬಾರಿಸುವವರು ಹೀಗೆ ಅನೇಕ ಚಿತ್ರಗಳು ಎಲೆಯ ಕೆಳಭಾಗದಲ್ಲಿ ಕಂಡುಬರುತ್ತವೆ. ಎಲ್ಲಾ ಎಲೆಗಳ ಹಿಂಭಾಗ ಬಂಗಾರ ಬಣ್ಣದ ಚುಕ್ಕೆಗಳಿಂದ ಅಲಂಕೃತವಾಗಿದೆ. ಸಂಖ್ಯಾತ್ಮಕ ಗುಲಾಮ್ ಸೂಟ್‌ಗಳು ವೈಭವದ ಎಲೆಗಳಾಗಿವೆ. ಪ್ರತಿ ಎಲೆಯೂ ಒಂದು ನಕ್ಷಾಚಿತ್ರವಾಗುತ್ತದೆ. ಚಿತ್ರವು ಕೌಶಲಪೂರಿತವೂ ಹಾಗೂ ಬಣ್ಣಗಳಲ್ಲಿ ಅದ್ದೂರಿ ಶ್ರೀಮಂತಿಕೆಯನ್ನು ಹೊಂದಿದೆ. ನಿರ್ಮಲ್‌ನ ಸಂಖ್ಯಾತ್ಮಕ ಎಲೆಗಳಲ್ಲಿ ಕಂಡುಬರುವ ಚಿತ್ರಗಳ ಸಂಕ್ಷಿಪ್ತ ವರ್ಣನೆಯನ್ನು ಅವುಗಳ ಸಂಖ್ಯೆಯ ಎಲೆಗಳೊಂದಿಗೆ ಇಲ್ಲಿ ವಿವರಿಸಲಾಗಿದೆ.

ಎರಡನೆ ಎಲೆ – ಯುದ್ಧದ ದೃಶ್ಯ, ಸವಾರನು ತನ್ನ ಬಂದೂಕನ್ನು ಕತ್ತಿ ಸವಾರನತ್ತ ಗುರಿಯಿಡುತ್ತಿದ್ದಾನೆ.

ನಾಲ್ಕನೆ ಎಲೆ – ಓರ್ವ ಮಹಿಳೆಯು ಸರಾಯಿಯನ್ನು ಓರ್ವ ಪುರುಷನ ಮೇಲೆ ಹಾಕುತ್ತಿದ್ದಾಳೆ. ಪಕ್ಕದಲ್ಲಿ ಇನ್ನಿಬ್ಬರು ಪುರುಷರಿದ್ದಾರೆ.

ಆರನೆ ಎಲೆ – ಓರ್ವ ಯೋಗಿ ತಪಸ್ಸಿಗೆ ಕುಳಿತಿದ್ದು ಸುತ್ತಲೂ ಹಾವುಗಳಿವೆ. ಐದು ಜನ ಸ್ತ್ರೀಯರು ಹಾಡುತ್ತಿದ್ದಾರೆ.

ಎಂಟನೆ ಎಲೆ – ಮೇಲಂತಸ್ತಿನಲ್ಲಿ ಕುಳಿತ ನಾಯಕನಿಗೆ ಸ್ತ್ರೀ ಸೇವಕಿಯರು ಊಟವನ್ನು ತೆಗೆದುಕೊಂಡು ಹೊರಟಿದ್ದಾರೆ. ಇದರ ಕೆಳಗೆ ಓರ್ವ ಸೈನಿಕನ ಚಿತ್ರವಿದೆ. ಸೈನಿಕನು ಕೆಂಪು ಕೋಟು, ಕಪ್ಪು ಬಣ್ಣದ ಪ್ಯಾಂಟ್, ತಲೆಗೆ ಹೆಲ್ಮೆಟ್ ಹಾಗೂ ಕೈಯಲ್ಲಿ ಬಂದೂಕು ಹಿಡಿದಿದ್ದಾನೆ. ಸೈನಿಕನು ಬ್ರಿಟಿಷ್ ವ್ಯಕ್ತಿಯಾಗಿದ್ದು, ಬ್ರಿಟೀಷರು ಹೈದರಾಬಾದಿನ ನಿಜಾಮರಿಂದ ಸುಂಕ ವಸೂಲಿ ಮಾಡುತ್ತಿದ್ದರು ಎನ್ನುವುದಕ್ಕೆ ಈ ಚಿತ್ರಗಳೇ ಸಾಕ್ಷಿ.

ಒಂಭತ್ತನೆ ಎಲೆ – ಅರಮನೆಯ ಪ್ರಾಂಗಣದಲ್ಲಿ ಐದು ಜನ ಪುರುಷರು ಒಬ್ಬ ಸ್ತ್ರೀ ನೃತ್ಯ ಮಾಡುವುದನ್ನು ನೋಡುತ್ತಾ ಕುಳಿತಿದ್ದಾರೆ ಹಾಗೂ ಮೂರು ಜನ ಸಂಗೀತಗಾರರು ಕಂಡುಬರುತ್ತಾರೆ.

ಹತ್ತನೆಯ ಎಲೆ – ಐದು ಜನ ತಮ್ಮ ತಲೆಯ ಮೇಲೆ ಆಯುಧ ಹೊತ್ತು ಕೋಟೆಯ ಬಾಗಿಲ ಕಡೆಗೆ ಮುಖ ಮಾಡಿ ನಿಂತಿರುತ್ತಾರೆ. ಬಾಣ ಬಿಡುವ ಶೈಲಿಯಲ್ಲಿ ಸೈನಿಕರು ಸನ್ನದ್ಧರಾಗಿದ್ದಾರೆ.

ಈ ಎಲ್ಲ ಗಂಜೀಫಾಎಲೆಗಳು ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಎಲೆಗಳು ಕಲಾತ್ಮಕವಾಗಿಯೂ, ಸುಂದರವಾಗಿಯೂ ಇವೆ. ಎಲೆಗಳಲ್ಲಿ ಕಲಾತ್ಮಕ ಬಣ್ಣಗಳ ಬಳಕೆ ಇದೆ. ಈ ಎಲ್ಲ ಗಂಜೀಫಾ ಎಲೆಗಳು ಅನೇಕ ಸಮಕಾಲೀನ ಎಲೆಗಳನ್ನು ಹೋಲುತ್ತವೆ.

ಬಾಗಾನಪಲ್ಲಿ, ಆಂಧ್ರಪ್ರದೇಶ,

ಬಾಗಾನಪಲ್ಲಿ (ಆಂಧ್ರಪ್ರದೇಶ)ಯಲ್ಲಿ ೧೮೫೦ರಲ್ಲಿನ ಗಂಜೀಫಾ ಚಿತ್ರಗಳು ಕಿತ್ತಳೆ ಮತ್ತು ಕೆಂಪು ಬಣ್ಣಗಳಿಂದ ಕೂಡಿದ್ದು, ಇದರ ಸುತ್ತಳತೆ ೪೭ ಮಿ.ಮೀ, ಇವುಗಳಲ್ಲಿ ೧೨೦ (ಸಂಪೂರ್ಣ) ಗಂಜೀಫಾ ಎಲೆಗಳಿವೆ. ಅಸಾಮಾನ್ಯವೆಂಬಂತೆ ಈ ಪೊಟ್ಟಣವು ಎಂಟು ಸಾಮಾನ್ಯ ಸೂಟನ್ನು ಎರಡು, ಹೆಚ್ಚುವರಿ ಸೂಟನ್ನು ಹೊಂದಿದ್ದು ಒಟ್ಟೂ ಹತ್ತು ಸೂಟ್‌ಗಳನ್ನು ಹೊಂದಿ ದಶಾವತಾರಿ ಎಲೆಗಳನ್ನು ಹೋಲುತ್ತದೆ. ಇದರ ಇನ್ನೊಂದು ವಿಭಿನ್ನ ಲಕ್ಷಣವೆಂದರೆ ಎಲ್ಲಾ ಎಲೆಗಳ ಮೇಲೂ ಸೂಟ್‌ಚಿಹ್ನೆಯು ಕೇವಲ ಒಂದು ಬಾರಿ ಮಾತ್ರ ಬರುತ್ತದೆ. ಉಳಿದಂತೆ ಎಲೆಯ ಬೆಲೆಯು ಅವುಗಳ ಮೇಲಿನ ಪ್ರಾಣಿಗಳ ಚಿತ್ರ ಮತ್ತು ಸಂಖ್ಯೆಗಳೊಂದಿಗೆ ಗುರುತಿಸಿಕೊಳ್ಳಲ್ಪಡುತ್ತದೆ. ಅವುಗಳ ಸೂಟ್ ಚಿಹ್ನೆ ಹಾಗೂ ಪ್ರಾಣಿಗಳ ಚಿತ್ರಗಳು ಈ ಕೆಳಗಿನಂತಿವೆ :

	ಹೆಸರು	**ಬಣ್ಣ**	**ಚಿತ್ರ**
೦೧.	ತಾಜ್	ತಿಳಿಕಂದು,	ಕಿರೀಟ , ಬಿಳಿ ಮೋಡಗಳು
೦೨.	ಸಫೇದ್	ಕಪ್ಪು ಬಿಳಿ	ಹಂಸಗಳು
೦೩.	ಶಮ್ಶ್ಯಾರ್	–	ಕೇಸರಿ ಖಡ್ಗ
೦೪.	ಗುಲಾಮ್	ಬಂಗಾರ	ಒಂದು ಅಥವಾ ಎರಡು ಸಾಲಿನಲ್ಲಿ ಮನುಷ್ಯರು
೦೫.	ಚಂಗ್	ಕಪ್ಪು ಹಸಿರು	ವೀಣೆ, ನವಿಲು
೦೬.	ಸುರ್ಖ	ಕೆಂಪು ಹಸಿರು	
೦೭.	ಬರತ್	ಕಡುಗೆಂಪು	ಆಯತಾಕಾರದ್ದು, ಮೀನು
೦೮.	ಬಿಮಾಶ್	ತಿಳಿ ಹಸಿರು	ಅಳಿಲುಗಳು

೦೯. ಅಶ್ವ ಕೆಂಪು ಬಂಗಾರದ ಹೂ, ಕುದುರೆ

೧೦. ವರಾಹ ಬಂಗಾರ ಗಂಡುಹಂದಿ

ಆಂಧ್ರಪ್ರದೇಶದ ಬನಗನಪಲ್ಲಿಯ ಗಂಜೀಫಾ ಸುಮಾರು ೧೫೫೦ರಲ್ಲಿ ಕಾಗದದಲ್ಲಿ ತಯಾರಿಸಿ, ಬಣ್ಣ ಮತ್ತು ಅರಗಿನ ಲೇಪನದೊಡನೆ ತಯಾರಿಸಿದ ಹಸಿರು, ಬಿಳಿಬಣ್ಣ ಸಹಿತ ಮತ್ತು ಕೆಂಪು ಅಂಚಿನ ಗೆರೆಗಳು ಮತ್ತು ಪುಷ್ಪಾಕೃತಿಯ ಅಲಂಕಾರ ಇವುಗಳ ಮಧ್ಯದಲ್ಲಿದೆ. ಇದರ ಸುತ್ತಳತೆ ೪೩ ಮಿಮೀ. ಹದಿನೆಂಟನೆಯ ಶತಮಾನದಲ್ಲಿ ನಿರ್ಮಲ್ ಗಂಜೀಫಾ ಎಲೆಗಳ ತಯಾರಿಕಾ ಕೇಂದ್ರವಾಗಿದ್ದು, ಬಹು ಚಿತ್ರಗಾರರು ಬಡಗಿಗಳಾಗಿದ್ದು ನಕ್ಷ್ ಎಂದು ಕರೆಯಲ್ಪಟ್ಟ ಎಲೆಗಳನ್ನು ಇವರು ತಯಾರಿಸುತ್ತಿದ್ದರು. ಇವರು ಪ್ರಾಣಿ, ಪಕ್ಷಿಗಳಿಗೆಲ್ಲ ಚಿನ್ನದ ಬಣ್ಣವನ್ನು ಉಪಯೋಗಿಸಿದ್ದಾರೆ. ಕಿತ್ತಳೆ ಹಾಗೂ ಕೆಂಪುವರ್ಣದ ೪೭ ಮಿ.ಮೀ. ಸುತ್ತಳತೆಯ ೧೨೦ ಎಲೆಗಳಲ್ಲಿ ಪ್ರಾಣಿ–ಪಶು–ಪಕ್ಷಿಗಳನ್ನು ಚಿತ್ರಿಸಿದ್ದಾರೆ.

೦೧. ತಾಜ್, ತೆಳು ಕಂದು ಬಣ್ಣದ ಬಿಳಿ ಪಾರಿವಾಳಗಳು.

೦೨. ಸಫೇದ, ಕಪ್ಪು, ಬಿಳಿತಟ್ಟೆ, ಹಂಸಗಳು

೦೩. ಷಂಷೇರ, ಕ್ರಿಮಿಸನ್ (ಕಡುಗೆಂಪು) ಖಡ್ಗಗಳು.

೦೪. ಗುಲಾಮ್, ಚಿನ್ನ, ಮಾನವರ ಒಂದು ಅಥವಾ ಎರಡು ಸಾಲು.

೦೫. ಚಾಂಗ, ಕಡುಹಸಿರು, ಹಾರ್ಪ್, ಮಯೂರಗಳು.

೦೬. ಸಕ್ಯಾನ ಕೆಂಪು, ಚಿನ್ನದ ತಟ್ಟೆ (ದುಂಡುವಸ್ತು), ಮೀನು.

೦೭. ಬರಾತ್, ಕಡುಕೆಂಪು, ದೀರ್ಘ ಚತುರಸ್ರ ಮೀನು.

೦೮. ಕಿಮಾಷ್, ಆಲಿವ್ ವೃಕ್ಷ ಹಸಿರು, ಅಂಡಾಕಾರ, ಅಳಿಲುಗಳು.

೦೯. ಅಶ್ವ, ಕೆಂಪು, ಚಿನ್ನದ ಪುಷ್ಪ.

೧೦. ವರಹ, ಚಿನ್ನ.[೧೮]

ಓರಿಸ್ಸಾ ನವಗ್ರಹ ಗಂಜೀಫಾ ಚಿತ್ರಗಳು

ಕರ್ನಾಟಕದ ಗಂಜೀಫಾ ಕಲಾವಿದೆ ಸುಧಾ ವೆಂಕಟೇಶರವರು ಓರಿಸ್ಸಾದ ಆಧುನಿಕ ಗಂಜೀಫೋಆ ಚಿತ್ರಗಳನ್ನು ಸಂಗ್ರಹಿಸಿದ್ದು ಇವು ನವಗ್ರಹಗಳ ವಿಷಯಕ್ಕೆ ಸಂಬಂಧಿಸಿವೆ. ಈ ಗಂಜೀಫಾ ಎಲೆಯ ಚಿತ್ರಗಳು ಆಯತಾಕಾರದಲ್ಲಿ ರೂಪುಗೊಂಡಿದ್ದು. ಚಪ್ಪಟೆಯ ವರ್ಣ ವೈವಿಧ್ಯವನ್ನು ಹೊಂದಿವೆ. ಗಾಢವಾದ ಕಪ್ಪು ಬಣ್ಣದ ಹೊರಮೈ ರೇಖೆಗಳು ಪ್ರಾಥಮಿಕ ವರ್ಗಗಳ ಸಂಯೋಜನೆಯು ಅಲಂಕಾರಿಕವಾಗಿ ಅನಾವರಣಗೊಂಡಿವೆ. ಸೂರ್ಯದೇವರ ಎಲೆಯಲ್ಲಿ ಸೂರ್ಯದೇವನು ಅಶ್ವರಥದಲ್ಲಿ ಪಯಣಿಸುತ್ತಿರುವಂತೆ ಬಿಂಬಿತಗೊಂಡಿದ್ದಾನೆ. ದ್ವಿಭುಜಧಾರಿಯಾಗಿದ್ದು ಸ್ವರ್ಣಾಭರಣಗಳಿಂದ ಭೂಷಿತಗೊಂಡಿದ್ದಾನೆ. ಎಲೆಯ ಸುತ್ತಲೂ ಹಸಿರು ಬಣ್ಣದ ನಕ್ಷಾವಿನ್ಯಾಸಗಳನ್ನು ಅಲಂಕೃತಗೊಳಿಸಲಾಗಿದೆ. ಎಲೆಯನ್ನು ಇಂಗ್ಲೀಷಿನ ಏ ಅಕ್ಷರದಿಂದ ಸಂಕೇತಿಸಲಾಗಿದ್ದು. ಇದನ್ನು ರಾಜಎಲೆಯೆಂದು ಗುರುತಿಸಲಾಗಿದೆ.

ಚಂದ್ರಎಲೆಯಲ್ಲಿ ಚಂದ್ರದೇವನು ಒಂಟೆ, ಕುದುರೆಯ ರಥವನ್ನು ಚಲಿಸುತ್ತಿದ್ದರೆ ಅವನ್ನು ಪಾರ್ಶ್ವಮುಖವಾಗಿ ಚಿತ್ರಿಸಲಾಗಿದೆ. ರಥದ ವಿನ್ಯಾಸ, ಹಿನ್ನೆಲೆ ಹಾಗೂ ವರ್ಣಕ್ರಮ ಎಲ್ಲ ಎಲೆಗಳಲ್ಲಿಯೂ ಸಾಮ್ಯ ಕಂಡುಬರುತ್ತದೆ. ಮಂಗಳನನ್ನು ಮೇಕೆಯ ಮೇಲೆ, ಬುಧನನ್ನು ಸಿಂಹದ ಮೇಲೆ, ಗುರುವನ್ನು

೧೮. R and N. Y. Leyden., The Playing Cards of India, PP. 85-95

ನವಗ್ರಹಗಳು



ಸೂರ್ಯ



ಚಂದ್ರ



ಮಂಗಳ



ಬುಧ



ಗುರು



ಶುಕ್ರ



ಶನಿ



ಕೇತು



ರಾಹು

ನಂದಿಯ ಮೇಲೆ, ಶುಕ್ರನನ್ನು ಪಾರಿವಾಳದ ಮೇಲೆ, ಶನಿಯನ್ನು ಕಾಗೆಯ ಮೇಲೆ, ಕೇತುವನ್ನು ಹಾವಿನ ರೂಪದಲ್ಲಿ ಹಾಗೂ ರಾಹುವನ್ನು ನರಸಿಂಹನ ರೂಪದಲ್ಲಿ ಸಂಯೋಜಿಸಲಾಗಿದೆ. ಆಟಕ್ಕೆ ಸಂಬಂಧಿಸಿದಂತೆ ಎಲ್ಲ ಎಲೆಗಳಿಗೂ ಇಂಗ್ಲೀಷ್ ಅಕ್ಷರ ಹಾಗೂ ಅಂಕಗಳನ್ನು ಕೊಡಲಾಗಿದೆ. ಈ ಎಲ್ಲ ಎಲೆಯ ಆಟಕ್ಕೆ ಸಂಬಂಧಿಸಿದಂತೆ ರೂಪುಗೊಂಡಿರಬಹುದಾದರೂ ಸಹ ಚಿತ್ರಪ್ರಜ್ಞೆಯಿಂದ ರಚನೆಗೊಂಡಿದೆ ಎನ್ನಬಹುದು. ಇಲ್ಲಿ ಆಕೃತಿಗಳು ಮಾನವರೂಪ, ಪಕ್ಷಿಗಳು, ಆಯುಧಗಳು ಹಾಗೂ ಹಿನ್ನೆಲೆಯು ಆಯಾ ದೇವತೆಗಳಿಗೆ ಸಂಬಂಧಿಸಿದಂತೆ ರೂಪುಗೊಂಡಿವೆ.

ಓರಿಸ್ಸಾದ ಇನ್ನೊಂದು ಆಟದ ಚಿತ್ರಗಳು ಭಾರತೀಯ ಧರ್ಮದ ಸ್ತ್ರೀದೇವತೆಗಳನ್ನು ಪ್ರತಿನಿಧಿಸುತ್ತವೆ. ಈ ಎಲೆಗಳು ವೃತ್ತಾಕಾರದಲ್ಲಿ ರೂಪುಗೊಂಡಿದ್ದು, ಕೆಂಪು, ಕಪ್ಪು, ಹಳದಿ, ಬಿಳಿ, ನೀಲಿ, ಬೂದು, ಹಸಿರು ಬಣ್ಣಗಳು ಸಂಯೋಜನೆಗೊಂಡಿವೆ. ಈ ಎಲ್ಲ ಚಿತ್ರಗಳು ಒಬ್ಬೊಬ್ಬ ದೇವತೆಗಳನ್ನು ಪ್ರತಿನಿಧಿಸುತ್ತವೆ. ಕೆಲವೊಂದು ಎಲೆಗಳಲ್ಲಿ ದೇವತೆಗಳು ವಾಹನಗಳಲ್ಲಿ ಚಲಿಸುತ್ತಿದ್ದರೆ, ಕೆಲವೊಂದು ಎಲೆಗಳಲ್ಲಿ ಶಕ್ತಿದೇವತೆಗಳು ತಮ್ಮ ಭಯಂಕರ ಮುಖಭಾವಗಳಿಂದ ವೀರಾವೇಶವನ್ನು ಪ್ರದರ್ಶಿಸುತ್ತಿದ್ದಾರೆ. ಇನ್ನು ಕೆಲವೊಂದು ಎಲೆಗಳಲ್ಲಿ ದೇವತೆಗಳು ಪದ್ಮಾಸನವಾಗಿ ಕುಳಿತು ವಿವಿಧ ಮುಖಭಾವನೆಗಳನ್ನು ಅಭಿವ್ಯಕ್ತಪಡಿಸುತ್ತಿದ್ದಾರೆ.

ಈ ಚಿತ್ರಗಳಲ್ಲಿ ಬಿಂಬಿತವಾಗಿರುವ ದೇವತೆಗಳು ಆಯಾ ದೇವತೆಗಳ ವೇಷ-ಭೂಷಣಗಳಿಂದ ರೂಪಿತಗೊಂಡಿದ್ದಾರೆ. ಜೊತೆಗೆ ಎಲ್ಲ ದೇವತೆಗಳು ಸಾಂಕೇತಿಕವಾಗಿ ಚಿತ್ರಿತಗೊಂಡಿದ್ದನ್ನು ಇಲ್ಲ ಸ್ಮರಿಸಬಹುದು. ಚಿತ್ರಗಳ ಅಂಚು, ಹಿನ್ನೆಲೆ ಹಾಗೂ ಸಾಂಕೇತಿಕ ವಸ್ತುಗಳು ರೇಖಾಪ್ರಧಾನವಾಗಿದ್ದು ಅಲಂಕಾರದ ಆಶಯವನ್ನು ಹೊಂದಿವೆ. ಈ ಎಲೆಗಳಲ್ಲಿಯೂ ಸಹ ಇಂಗ್ಲೀಷ್ ಅಕ್ಷರಗಳನ್ನು ಬಳಸಿಕೊಳ್ಳಲಾಗಿದೆ. ರೇಖೆ, ವರ್ಣ, ಆಕೃತಿಗಳ ಯಥಾದೃಷ್ಟಿ, ಭಾವಲಕ್ಷಣಗಳು ಚಿತ್ರಲಕ್ಷಣಗಳಿಂದ ಅನಾವರಣಗೊಂಡಿವೆ.

ಟ್ಯಾರೋ ಎಲೆಗಳು (ಮಧ್ಯಯುಗ – ಯುರೋಪ್)

ಭವಿಷ್ಯ ತಿಳಿದುಕೊಳ್ಳುವ ತವಕ ಯಾರಿಗಿಲ್ಲ? ಜ್ಯೋತಿಷ್ಯಶಾಸ್ತ್ರ ಭಾರತದಲ್ಲಿ ಮತು ಈಜಿಪ್ಟ್‌ನಲ್ಲಿ ಅನಾದಿಕಾಲದಲ್ಲೇ ಬೆಳೆದಿತ್ತು. ಪುರಾತನ ಗ್ರೀಕ್ ಡೆಲ್ಫಿಯ ಓರಾಕಲ್‌ನ ಬಳಿ ಪ್ರಶ್ನೆ ಕೇಳುತ್ತಿದ್ದರು. ಚೀನಿಯರು ಬದಲಾವಣೆಗಳ ಪುಸ್ತಕ (ಯಿ-ಜಿಂಗ್ ಅಥವಾ ಐ-ಚಿಂಗ್)ದ ಮೊರೆ ಹೋಗುತ್ತಿದ್ದರು.

ಮಧ್ಯಯುಗದಲ್ಲಿ ಯುರೋಪ್‌ನಲ್ಲಿ ಬೆಳೆದು ಬಂದ ಭವಿಷ್ಯಶಾಸ್ತ್ರ ಟ್ಯಾರೋ. ಇದು ಎಷ್ಟು ನಿಗೂಢವೋ ಅಷ್ಟೇ ಸರಳ. ಹೀಗಾಗಿ ಆಧುನಿಕ ಯುಗದಲ್ಲಿ ಇದರ ಜನಪ್ರಿಯತೆ ಭರದಿಂದ ಬೆಳೆಯುತ್ತಿದೆ. ಬಣ್ಣದ ಚಿತ್ರಗಳಿರುವ ಎಲೆಗಳ ಕಟ್ಟು ಟ್ಯಾರೋ. ಇದರಲ್ಲಿ ವರ್ತಮಾನದ ಪ್ರಶ್ನೆಗಳಿಗೆ ಉತ್ತರ ಇದೆ, ಭವಿಷ್ಯಕ್ಕೆ ಬೆಳಕಿಂಡಿ ಇದೆ. ಇಷ್ಟೇ ಅಲ್ಲ, ಅನೇಕ ವಿಶ್ವಾಸಿಗಳ ಪಾಲಿಗೆ ಆತ್ಮಾವಲೋಕನಕ್ಕೆ ಮಾರ್ಗ ತೋರಿಸುವ ಸಾಧನವೇ ಟ್ಯಾರೋ.

ಟ್ಯಾರೋ ವಿಶ್ವಾಸಿಗಳಿಗೆ ಇದೊಂದು ದೈವಿಕ ಸಂದೇಶ. ಬದುಕನ್ನು ಅರ್ಥಮಾಡಿಕೊಳ್ಳುವ, ಸಾರ್ಥಕ್ಯ ಸಾಧಿಸುವ ಮಾರ್ಗ, ಜೀವನದಲ್ಲಿ ಸಮತೋಲನ, ಸಾಮರಸ್ಯ ತರುವ ಜೀವಧಾರೆ.[೧೯] ಜೀವನದಲ್ಲಿ ಸಮಸ್ಯೆ ಬಂದಾಗ, ಸಂಬಂಧಗಳಲ್ಲಿ ತೊಡಕು ಕಾಣಿಸಿದಾಗ, ಆಯ್ಕೆಯಲ್ಲಿ ಗೊಂದಲ ಹುಟ್ಟಿದಾಗ, ಸನ್ನಿವೇಶದಲ್ಲಿ ದಿಗ್ಭ್ರಮೆ ಮೂಡಿದಾಗ ಜನರು ಪರಿಹಾರ ತಿಳಿಯಲು ಟ್ಯಾರೋದ ಮೊರೆ

೧೯. ಟಿ.ಜಿ. ಶೆಟ್ಟಿ : ತರಂಗ (ವಾರಪತ್ರಿಕೆ), ಪುಟ- ೩೫

ಹೋಗುತ್ತಾರೆ. ಜ್ಯೋತಿಷ್ಯಶಾಸ್ತ್ರದಂತೆ ಟ್ಯಾರೋ ಭವಿಷ್ಯದ ಘಟನೆಗಳನ್ನು, ಅದರ ಕಾಲಮಾನಗಳನ್ನು ದಾಖಲಿಸುವುದಿಲ್ಲ. ಆದರೆ ಕಾಲಕಾಲಕ್ಕೆ ತಕ್ಕ ಹಾಗೆ ಸಮಸ್ಯೆಗಳಿಗೆ ಪರಿಹಾರ ಕೊಡುತ್ತದೆ. ನಿರ್ದಿಷ್ಟ ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ. ಬಿಡುಗಡೆಯ ದಾರಿ ತೋರಿಸುತ್ತದೆ. ಆತ್ಮಾವಲೋಕನ ನಡೆಸುವವರಿಗೆ ಟ್ಯಾರೋ, ಆತ್ಮದ ಬೆಳಕಿಂಡಿಯಾಗುತ್ತದೆ, ಸತ್ಯವನ್ನು ಅರಸುವವರಿಗೆ ತಮ್ಮನ್ನೇ ಅರಿತುಕೊಳ್ಳಲು ಮಾರ್ಗದರ್ಶಿಯಾಗುತ್ತದೆ.

ಟ್ಯಾರೋ ಚರಿತ್ರೆ

ಟ್ಯಾರೋ ಯುರೋಪ್‌ನಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡದ್ದು ಸುಮಾರು ೧೪ನೆಯ ಶತಮಾನದ ಆರಂಭದಲ್ಲಿ. ಇಟಲಿಯಲ್ಲಿ ಟ್ಯಾರೋಚಿ ಎಂಬ ಇಸ್ಪೀಟು ಆಟ (ಆಧುನಿಕ ಬ್ರಿಜ್ ಆಟದಂತೆ) ಆಡುತ್ತಿದ್ದರು. ರಾಜಮನೆತನದವರು, ಸಂಪನ್ನರು ಮತ್ತು ಮಧ್ಯಮ ವರ್ಗದ ಜನರಲ್ಲಿ ಜನಪ್ರಿಯವಾಗಿದ್ದ ಆಟ ಇದು. ೧೫ನೆಯ ಶತಮಾನದ ಮಧ್ಯಭಾಗದಲ್ಲಿ ಬೊನಿಫೇಶಿಯೋ ಬೆಂಬೋ ಎಂಬ ಕಲಾಕಾರ ಸುವರ್ಣ ಚಿತ್ರಗಳ ಟ್ಯಾರೋ ಎಲೆಗಳನ್ನು ರಚಿಸಿದ.

ಆರಂಭದಲ್ಲಿ ಟ್ಯಾರೋ ಡೆಕ್(ಕಟ್ಟು)ನಲ್ಲಿ ಇದ್ದದ್ದು ಕೇವಲ ೨೨ ಎಲೆಗಳು. ಇದರಲ್ಲಿ ಫೂಲ್ (ಮೂರ್ಖ), ಚಕ್ರವರ್ತಿ, ರಾಣಿ, ಧರ್ಮಾಧಿಕಾರಿ ಅಥವಾ ಪೋಪ್ ಮುಂತಾದ ಚಿತ್ರಗಳ ಎಲೆಗಳಿದ್ದವು. ಮಹಿಳಾ ಪೋಪ್ ಎಂಬ ತಮಾಷೆಯ ಕಾರ್ಡ್ ಕೂಡ ಇದರಲ್ಲಿದೆ. (ಮಧ್ಯಯುಗದಲ್ಲಿ ಕೆಲವು ಕ್ರಿಶ್ಚಿಯನ್ ವಿದ್ರೋಹಿಗಳು ಮಾರಿಯಾ ವಿಸ್ಕೋಂಟಿ ಎಂಬಾಕೆಯನ್ನು ಮಹಿಳಾ ಪೋಪ್ ಎಂದು ಚುನಾಯಿಸಿದ್ದರು. ಚರ್ಚ್ ಅಧಿಕಾರಿಗಳು ಈಕೆಯನ್ನು ಸೆರೆಹಿಡಿದು ಸುಟ್ಟು ಹಾಕಿದ್ದರು.[೨೦] ಟ್ಯಾರೊದ ಮಹಿಳಾ ಪೋಪ್ ಇವಳೇ).

ವೆನಿಸ್‌ನಲ್ಲಿ ಟ್ಯಾರೋ ಎಲೆಗಳಿಗೆ ೫೬ ಆಟದ ಎಲೆಗಳನ್ನು ಸೇರಿಸಲಾಯಿತು. ಇವುಗಳಲ್ಲಿ ನಾಲ್ಕು (ಸೂಟ್) ವಿಭಾಗಗಳಿವೆ. ಪ್ರತಿಯೊಂದು ಸೂಟ್‌ನಲ್ಲಿ ಒಂದರಿಂದ ೧೦ರ ಸಂಖ್ಯೆಯ ಪಿಪ್ ಎಲೆಗಳು, ಗುಲಾಮ, ಸರದಾರ, ರಾಣಿ, ರಾಜ ಎಂಬ ನಾಲ್ಕು ಚಿತ್ರದ ಎಲೆಗಳು, ಹೀಗೆ ೧೪ ಎಲೆಗಳಿವೆ. ಹೀಗೆ ಸಂಪೂರ್ಣ ಟ್ಯಾರೋ ಡೆಕ್‌ನಲ್ಲಿ ಇರುವುದು ೭೮ ಎಲೆಗಳು. ರೋಮನಿ ಅಥವಾ ಜಿಪ್ಸಿಗಳು ಟ್ಯಾರೋ ವಿದ್ಯೆಯನ್ನು ಬೆಳೆಸಿದ್ದರು ಎಂದು ಕೆಲವು ಇತಿಹಾಸಕಾರರು ಹೇಳುತ್ತಾರೆ. ಜಿಪ್ಸಿಗಳು ಯುರೋಪ್‌ನಿಂದ ಉತ್ತರ ಆಫ್ರಿಕಾಗೆ ಪಯಣಿಸುವಾಗ ಪುರಾತನ ಈಜಿಪ್ತ್‌ನಲ್ಲಿ ಈ ವಿದ್ಯೆ ಕಲಿತುಕೊಂಡರು ಎಂದು ಹೇಳುತ್ತಾರೆ. ಇದು ನಿಜವಾದರೆ ಟ್ಯಾರೋಗೆ ಭಾರತದ ಸಂಪರ್ಕ ಕೂಡ ಇದೆ. ಜಿಪ್ಸಿ/ ರೋಮಾನಿಗಳು ಮೂಲತಃ ಬಂದಿರುವುದು ಭಾರತದಿಂದ. ಮಧ್ಯ ಭಾರತದ ಲಂಬಾಣಿಗಳೇ ರಾಜಸ್ಥಾನ, ಇರಾನ್, ಅರೇಬಿಯಾ, ಈಜಿಪ್ತ್ ಮಾರ್ಗವಾಗಿ ಯುರೋಪ್‌ಗೆ ಹೋಗಿ ಜಿಪ್ಸಿ ಎಂಬ ಹೆಸರು ಪಡೆದರು. ಭಾರತದ ಜ್ಯೋತಿಷವಿದ್ಯೆ ಮತ್ತು ಯುರೋಪ್‌ನ ಇಸ್ಪೀಟು ಎಲೆಗಳ ನಡುವೆ ಇವರೇ ಬೆಸುಗೆ ಹಾಕಿರಲು ಸಾಧ್ಯವಿದೆ. ಭಾರತೀಯ 'ತಾರಾಫಲ'ವೇ ತಾರೋ/ಟ್ಯಾರೋ ಆಗಿರಲು ಸಾಧ್ಯವಿದೆ (ಟಾರೋಚಿ ಆಟಕ್ಕೆ ಆರಂಭದಲ್ಲಿ ಟಾಓಕ್ ಎಂದೂ ಹೆಸರಿತ್ತು. ಇದು ತಾರಾಲೋಕ್ ಎಂಬ ಭಾರತೀಯ ಮೂಲದಿಂದ ಬಂದಿರಬಹುದು).[೨೧]

ಟ್ಯಾರೋ ಮೂಲ ಯಾವುದೇ ಇರಲಿ, ಟ್ಯಾರೋ ಭವಿಷ್ಯ ಹೇಳುವುದರಲ್ಲಿ ಜಿಪ್ಸಿಗಳನ್ನು ಮೀರಿಸಿದವರೇ ಇಲ್ಲ ಎಂದು ಎಲ್ಲರೂ ನಂಬುತ್ತಾರೆ. ಪುರಾತನ ಈಜಿಪ್ತ್‌ನ ಮಂತ್ರವಿದ್ಯೆಯ ಗ್ರಂಥ 'ದ ಬುಕ್ ಆಫ್

೨೦. ಟಿ.ಜಿ. ಶೆಟ್ಟಿ : ತರಂಗ (ವಾರಪತ್ರಿಕೆ), ೨೦೧೦, ಪುಟ- ೩೫

ಥೋತ್' ಮತ್ತು ಟ್ಯಾರೋಗೆ ಹತ್ತಿರದ ನಂಟು ಇದೆಯೆಂದು ಹೇಳುತ್ತಾರೆ. ಟ್ಯಾರೋದಲ್ಲಿ ಸೈತಾನನ, ಮೃತ್ಯುವಿನ ಚಿತ್ರಗಳೂ ಕಾಣಿಸುತ್ತವೆ. ಮಂತ್ರವಾದಿಗಳನ್ನು, ಮಂತ್ರಗಾರ್ತಿಯರನ್ನು ಸೆರೆಹಿಡಿದು ಸುಟ್ಟುಹಾಕಲಾಗುತ್ತಿದ್ದ ಮಧ್ಯಯುಗದ ಯುರೋಪ್‌ನಲ್ಲಿ ಭವಿಷ್ಯ ಹೇಳುವುದು ಮಂತ್ರ-ಮಾಟದ ಕೆಲಸ ಎಂಬ ಆಪಾದನೆ ಇತ್ತು. ಹೀಗಾಗಿ ಟ್ಯಾರೋಗೆ ಮಾಟಗಾರರ ಸಲಕರಣೆ ಎಂಬ ಕಳಂಕ ಬಂದಿತ್ತು.

೧೪೫೦ರ ಕಾಲದಲ್ಲಿ ಪೋಪ್ ಮತ್ತು ಧರ್ಮಾಧಿಕಾರಿಗಳು ಟ್ಯಾರೋ ಬಳಸಿ ಒಂದು ಧಾರ್ಮಿಕ ಆಟ ಆಡುತ್ತಿದ್ದರು. ಹೀಗಾಗಿ ಟ್ಯಾರೋದ ಮೇಲಿದ್ದ ಕಳಂಕಗಳು ಅಲ್ಲಿಗೆ ನಿವಾರಣೆಯಾದವು. ಆದರೆ ಟ್ಯಾರೋ ಎಲೆಗಳಿಗೆ ಇಂದಿಗೂ "ಸೈತಾನನ ಚಿತ್ರದ ಪುಸ್ತಕ!" ಎಂಬ ಹೆಸರಿದೆ. ಟ್ಯಾರೋ ವಿದ್ಯೆಗೆ ಅಪಾರ್ಥ ಕೊಡುವ ಹೆಸರು ಇದು. ಸೈತಾನನ ಪೂಜೆಗೆ ಜಗತ್ತಿನ ಎಲ್ಲೂ ಟ್ಯಾರೋ ಬಳಕೆ ಆಗುವುದಿಲ್ಲ. ಹಿಂದೆ ಜಿಪ್ಸಿಗಳು ಟ್ಯಾರೋ ಎಲೆಗಳ ಚಿತ್ರಗಳನ್ನು ತಾವೇ ತಯಾರಿಸುತ್ತಿದ್ದರು. ಹೀಗಾಗಿ ಕಾಲಾಂತರದಲ್ಲಿ ಟ್ಯಾರೋದ ಚಿತ್ರ ಮತ್ತು ಸಂಕೇತಗಳಲ್ಲಿ ಹಲವಾರು ಬದಲಾವಣೆಗಳು ಕಾಣಿಸಿದ್ದವು. ೧೮೮೮ರಲ್ಲಿ ಅತೀಂದ್ರಿಯ ಶಕ್ತಿಗಳ ಅಧ್ಯಯನಕ್ಕಾಗಿ 'ಹೆರ್ಮೆಟಿಕ್ ಆರ್ಡರ್ ಆಫ್ ದ ಗೋಲ್ಡನ್ ಡಾನ್' ಎಂಬ ಸಂಸ್ಥೆ ಸ್ಥಾಪನೆಯಾಯಿತು. ಡ್ರಾಕುಲಾ ಖ್ಯಾತಿಯ ಲೇಖಕ ಬ್ರಾಂ ಸ್ಟೋಕರ್, ವಿಶ್ವವಿಖ್ಯಾತ ಕವಿ ಡಬ್ಲ್ಯೂ.ಬಿ. ಯೀಟ್ಸ್ ಮುಂತಾದ ಅನೇಕ ಲೇಖಕರು, ಕವಿಗಳು, ದಾರ್ಶನಿಕರು ಈ ಸಂಘಟನೆಯ ಸದಸ್ಯರಾಗಿದ್ದರು. ಕಬಾಲಾ, ಸಂಖ್ಯಾಶಾಸ್ತ್ರ, ಜ್ಯೋತಿಷ ಇವೆಲ್ಲ ಒಂದೇ ಶಾಸ್ತ್ರದ ವಿವಿಧ ಭಾಗಗಳು. ಟ್ಯಾರೋ ಇವೆಲ್ಲ ಆಯಾಮಗಳ ಜೀವನಾಡಿ ಎಂದು ಇವರ ನಂಬಿಕೆಯಾಗಿತ್ತು. ಇವರೆಲ್ಲರ ಪ್ರಯತ್ನ ಮತ್ತು ಸಹಕಾರದ ಫಲವಾಗಿ ರೈಡರ್ ವೈಟ್ ಸ್ಮಿತ್ ಟ್ಯಾರೋ ಡೆಕ್ ಎಂಬ ಟ್ಯಾರೋ ಎಲೆಗಳು ಸೃಷ್ಟಿಯಾಗಿವೆ. ಇವುಗಳಲ್ಲಿ ಅಲಿಸ್ಟರ್ ಕ್ರಾವ್ಲೀಯ ಥೋತ್ ಟ್ಯಾರೋ ಡೆಕ್, ಗೋಲ್ಡನ್ ಡಾನ್ ಡೆಕ್, ಟ್ಯಾರೋ ಆಫ್ ದ ಕ್ಯಾಟ್ ಪೀಪಲ್ (ಇದರ ಎಲ್ಲ ಎಲೆಗಳಲ್ಲಿ ಬೆಕ್ಕುಗಳ ಚಿತ್ರಗಳಿವೆ.) ಟ್ರೀ ಆಫ್ ಲೈಫ್, ಕಾಸ್ಮಿಕ್ ಟ್ಯಾರೋ, ಆಲ್ಕೆಮಿಕಲ್ ಟ್ಯಾರೋ, ವೃತ್ತಾಕಾರದ ಮದರ್ ಪೀಸ್ ಟ್ಯಾರೋ ಸುಪ್ರಸಿದ್ಧವಾಗಿವೆ. ಇವೆಲ್ಲ ಡೆಕ್‌ಗಳಲ್ಲಿ ಮೂಲ ಸಂಕೇತಗಳು ಒಂದೇ ರೀತಿ ಇದ್ದು, ಚಿತ್ರಣದಲ್ಲಿ ಮಾತ್ರ ವಿಭಿನ್ನತೆ ಇರುತ್ತದೆ.

ಎಲ್ಲ ಟ್ಯಾರೋ ಎಲೆಗಳೂ ದರ್ಶನ ಶಾಸ್ತ್ರಕ್ಕೆ ಬಳಕೆಯಾಗುವುದಿಲ್ಲ. ಫ್ರಾನ್ಸ್‌ನಲ್ಲಿ ಆಸ್ಟೆರಿಕ್ಸ್, ಮಿಕ್ಕಿ ಮೌಸ್ ಮುಂತಾದ ಕಾರ್ಟೂನ್ ಪಾತ್ರಗಳ ಚಿತ್ರಗಳಿರುವ ಟ್ಯಾರೋ ಡೆಕ್‌ಗಳನ್ನು ಆಟಕ್ಕಾಗಿ ಬಳಸಲಾಗುತ್ತದೆ. ಟ್ಯಾರೋ ಎಲೆಗಳ ಅರ್ಥ ತಿಳಿದುಕೊಳ್ಳಲು ಅತೀಂದ್ರಿಯ ಶಕ್ತಿ ಬೇಕು ಎನ್ನುವ ಭಾವನೆ ತಪ್ಪು. ಸಂಖ್ಯಾಶಾಸ್ತ್ರ, ಜ್ಯೋತಿಷ, ಹಸ್ತರೇಖಾ ಶಾಸ್ತ್ರಗಳಿಗೆ ಬೇಕಾಗಿರುವಂತೆ ಆಳವಾದ ಅಧ್ಯಯನ ಟ್ಯಾರೋಗೆ ಬೇಕಿಲ್ಲ. ಕೆಲವೇ ವಾರಗಳ ಅಧ್ಯಯನದಲ್ಲಿ ಟ್ಯಾರೋ ಕರಗತ ಮಾಡಿಕೊಳ್ಳಲು ಸಾಧ್ಯವಿದೆ.[೨೧] ಆಸಕ್ತಿ ಇದ್ದರೆ ಸಾಕು, ಯಾರು ಬೇಕಾದರೂ ಟ್ಯಾರೋ ಕಲಿತುಕೊಳ್ಳಬಹುದು, ಅರ್ಥ ಮಾಡಿಕೊಳ್ಳಬಹುದು. ಸನ್ನಿವೇಶಗಳಿಗೆ ತಕ್ಕಂತೆ ಸೂಚನೆಗಳ ಅರ್ಥ ಹೇಳುವ ಕಲೆ ರೂಢಿಸಿಕೊಳ್ಳಬೇಕು. ಅನುಭವ ಹೆಚ್ಚಿದಂತೆ ಅರ್ಥ ಹೇಳುವ ಶಕ್ತಿ ಬೆಳೆಯುತ್ತದೆ. ಕ್ರಮೇಣ ಅಂತರ್ಜ್ಞಾನ ವರ್ಧಿಸುತ್ತದೆ. ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಕೊಡುವ ಸಾಮರ್ಥ್ಯ ದಕ್ಕುತ್ತದೆ.

ಟ್ಯಾರೋ ಎಲೆಗಳಿಂದ ಪ್ರಶ್ನೆಗಳಿಗೆ ಉತ್ತರ ತಿಳಿಯಲು, ಭವಿಷ್ಯ ಹೇಳಲು ಯಾವುದೇ ಅಧಿಕೃತ

೨೧. ಎಚ್ಕೆ ಕರ್ಕೇರ : ತರಂಗ (ವಾರಪತ್ರಿಕೆ), ೧೯೯೫, ಪುಟ - ೨೪

ಪಠ್ಯಪುಸ್ತಕ ಇಲ್ಲ. ಟ್ಯಾರೋ ಹೇಳುವಾತ ಚಿತ್ರದಲ್ಲಿರುವ ಚಿತ್ರ, ಸಂಕೇತಗಳನ್ನು ನೋಡಿ, ಪ್ರಶ್ನೆ ಕೇಳುವವರ ವಯಸ್ಸು, ಲಿಂಗ, ಸನ್ನಿವೇಶಗಳಿಗೆ ಸರಿಯಾಗಿ, ತನ್ನ ಅನುಭವ, ಅಂತರ್ಜ್ಞಾನದ ಬೆಳಕಿನಲ್ಲಿ ಅರ್ಥ ಹೇಳುತ್ತಾನೆ.

ವಿದೇಶದಲ್ಲಿ ಟ್ಯಾರೋ ಡೆಕ್‌ಗಳು ಸುಲಭವಾಗಿ ಸಿಗುತ್ತವೆ. ನಮ್ಮಲ್ಲಿ ಟ್ಯಾರೋ ಡೆಕ್ ಬಗ್ಗೆ ಕೇಳಿದವರು ವಿರಳ. ಈ ಪುಟಗಳಲ್ಲಿ ಮೂಲ ರೈಡರ್ ವೈಟ್ ಸ್ಮಿತ್ ಟ್ಯಾರೋ ಡೆಕ್‌ನ ೭೮ ಚಿತ್ರಗಳಿವೆ. ಇವುಗಳನ್ನು ಬಳಸಿ ನಿಮ್ಮದೇ ಟ್ಯಾರೋ ಡೆಕ್ ತಯಾರಿಸಬಹುದು. ಈ ಚಿತ್ರಗಳನ್ನು ಕತ್ತರಿಸಿ ಲ್ಯಾಮಿನೇಷನ್ ಮಾಡಬಹುದು ಅಥವಾ ಇಸ್ಪೀಟು ಎಲೆಗಳ ಮೇಲೆ ಅಂಟಿಸಬಹುದು. ಮೈನರ್ ಆರ್ಕಾನಾದ ಎಲೆಗಳಿಗೆ ಇಸ್ಪೀಟು ಎಲೆಗಳನ್ನು ನೇರವಾಗಿ ಬಳಸಲೂ ಸಾಧ್ಯವಿದೆ. ಮುಂದೆ ಈ ಬಗ್ಗೆ ಮಾಹಿತಿ ಇದೆ.

ಪ್ರತಿಯೊಂದು ಟ್ಯಾರೋ ಎಲೆಯ ಸಂಕ್ಷಿಪ್ತ ವಿವರಣೆ ಇಲ್ಲಿದೆ. ಈ ವಿವರಣೆಯನ್ನು ಬಾಯಿಪಾಠ ಮಾಡಿಕೊಳ್ಳುವ ಅಗತ್ಯವೇನೂ ಇಲ್ಲ. ಚಿತ್ರಗಳನ್ನು ನೋಡಿ, ಸನ್ನಿವೇಶಕ್ಕೆ ತಕ್ಕ ಹಾಗೆ ಅರ್ಥ ಹೇಳಬಹುದು. ಉದಾಹರಣೆಗೆ, ಮೇಜರ್ ಆರ್ಕಾನಾದ ಮೊಟ್ಟಮೊದಲ ಮೂರ್ಖನ ಚಿತ್ರ ನೋಡಿ. ಅವನು ಕೋಲಿನ ಕೊನೆಯಲ್ಲಿ ಚೀಲ ಹಿಡಿದು ನಡೆಯುತ್ತಿದ್ದಾನೆ. ಪ್ರಶ್ನೆ ಕೇಳುವಾತ ಪ್ರಯಾಣ ಮಾಡಲಿದ್ದಾನೆ ಎಂದು ಅರ್ಥೈಸಬಹದು. ಅವನ ಹಿಂದೆ ಇರುವ ನಾಯಿಯ ಚಿತ್ರ ನೋಡಿ, ಪ್ರಶ್ನೆ ಕೇಳುವಾತನಿಗೆ ಒಬ್ಬ ವಿಶ್ವಾಸಾರ್ಹ, ವಿಧೇಯ ಮಿತ್ರನಿದ್ದಾನೆ ಎಂದು ಅರ್ಥೈಸಬಹುದು. ಇದೆಲ್ಲ ಪ್ರಶ್ನೆ ಮತ್ತು ಉತ್ತರ ನಿಮ್ಮ ಅಂತರ್ಜ್ಞಾನಕ್ಕೆ ಬಿಟ್ಟಿದ್ದು!

ಟ್ಯಾರೋ ಡೆಕ್‌ನ್ನು ಕಪ್ಪು ಅಥವಾ ನೇರಳೆ ರೇಶ್ಮೆ ಬಟ್ಟೆಯಲ್ಲಿ ಕಟ್ಟಿ ಒಂದು ಮರದ ಪೆಟ್ಟಿಗೆಯಲ್ಲಿ ಇಡಬೇಕೆಂದು ಹೇಳುತ್ತಾರೆ. ಇದರಿಂದ ಟ್ಯಾರೋ ಎಲೆಗಳ ಚೈತನ್ಯ ಕ್ಷೀಣವಾಗದೆ ಉಳಿದುಕೊಳ್ಳುತ್ತದೆ. ಟ್ಯಾರೋ ಡೆಕ್‌ಗಳ ಸುತ್ತ ಅದರದ್ದೇ ತೇಜಸ್ಸು, ಪ್ರಭಾವಲಯ ಹುಟ್ಟುತ್ತದೆ ಎಂದು ವಿಶ್ವಾಸಿಗಳು ನಂಬುತ್ತಾರೆ. ಪ್ರತಿಯೊಂದು ಟ್ಯಾರೋ ಡೆಕ್‌ನಲ್ಲಿ ಅದನ್ನು ಬಳಸುವಾತನ ಚೈತನ್ಯ ಸೇರಿಕೊಳ್ಳುತ್ತದೆ. ಟ್ಯಾರೋ ಎಲೆಗಳನ್ನು ಮೋಜಿನ ಆಟವೆಂದು ಪರಿಗಣಿಸಬೇಡಿ, ಅದನ್ನು ಬರೆಯುವವರು ಮೋಜಿಗಾಗಿ ಬಳಸದಂತೆ ಸಂರಕ್ಷಿಸಿ ಆಗಲೇ ಅದರ ತೇಜಸ್ಸನ್ನು ಕಾಪಾಡಿ ಬೆಳೆಸಬಹುದು.

ಟ್ಯಾರೋ ಪ್ರಶ್ನೋತ್ತರ

ಟ್ಯಾರೋ ಪ್ರಶ್ನೋತ್ತರ ಒಂದು ಪ್ರಶಾಂತ ಕೋಣೆಯಲ್ಲಿ ನಡೆಯಬೇಕು. ಇದರಿಂದ ಟ್ಯಾರೋ ಓದುವಾತ (ರೀಡರ್) ಮತ್ತು ಪ್ರಶ್ನೆ ಕೇಳುವಾತ ಇಬ್ಬರೂ ಏಕಾಗ್ರತೆಯಲ್ಲಿರಲು ಸಾಧ್ಯವಾಗುತ್ತದೆ. ಟ್ಯಾರೋ ಪ್ರಶ್ನೋತ್ತರದ ಪ್ರಕ್ರಿಯೆ ಏಕಮುಖವಾಗಿರುವುದಿಲ್ಲ.[೨೩] ಪ್ರಶ್ನಕರ್ತ ಮತ್ತು ಟ್ಯಾರೋ ಓದುಗ ಇವರಿಬ್ಬರ ನಡುವಿನ ಸಹ ಪ್ರಯಾಣ ಇದು. ಇವರಿಬ್ಬರ ನಡುವೆ ಸಾಮರಸ್ಯ ಇರಬೇಕು. ಇಲ್ಲಿ ಪ್ರಶ್ನೆ ಕೇಳುವಾತ ಟ್ಯಾರೋ ವಿದ್ಯೆಯ ಬಗ್ಗೆ ಯಾವುದೇ ಛಾಲೆಂಜ್ ಮಾಡುತ್ತಿಲ್ಲ. ಅವನಿಗೆ ತನ್ನ ಪ್ರಶ್ನೆಗಳ ಉತ್ತರ ಬೇಕು. ಪ್ರಶ್ನೆಗಳ ಉತ್ತರ ಕಂಡು ಹಿಡಿಯುವ ದಾರಿಯಲ್ಲಿ ಟ್ಯಾರೋ ಎಲೆಗಳ ಅರ್ಥ ಓದುವಾತ ಮಾರ್ಗದರ್ಶಿಯಾಗಿ ಸಹಕಾರ ಮಾಡುತ್ತಾನೆ. ಇವರಿಬ್ಬರೂ ಒಂದೇ ದಿಕ್ಕಿನಲ್ಲಿ ಸಾಗಿದಾಗಲೇ ಸೂಕ್ತ ಉತ್ತರ, ಪರಿಹಾರ ಸಿಗುತ್ತದೆ, ಭವಿಷ್ಯ ನಿಚ್ಚಳವಾಗಿ ಕಾಣಿಸುತ್ತದೆ.

ಪ್ರಶ್ನೆ ಕೇಳುವಾತ ಮೊದಲು ಏಕಾಗ್ರತೆಗಾಗಿ ಧ್ಯಾನ ಮಾಡಬಹುದು. ತಾನು ಕೇಳಿರುವ ಪ್ರಶ್ನೆಯ

೨೨. ಟಿ.ಜಿ. ಶೆಟ್ಟಿ : ತರಂಗ (ವಾರಪತ್ರಿಕೆ), ೨೦೧೦, ಪುಟ- ೩೬
೨೩. ಟಿ.ಜಿ. ಶೆಟ್ಟಿ : ತರಂಗ (ವಾರಪತ್ರಿಕೆ), ೨೦೧೦, ಪುಟ- ೩೭


ಬಗ್ಗೆ ಗಹನವಾಗಿ ಯೋಚಿಸಿದ ಬಳಿಕವೇ ಟ್ಯಾರೋ ಎಲೆಗಳನ್ನು ತಿರುಗಿಸುತ್ತಾನೆ. (ಇಸ್ಪೀಟು ಎಲೆಗಳನ್ನು ಕಲಸುವಂತೆ ಮೇಲೆ ಕೆಳಗೆ ತಿರುಗಿಸಬಹುದು) ನಡುವೆ ಎಲೆಗಳ ನಡುವೆ ಗಾಳಿ ಊದಬಹುದು. ಕೊನೆಗೆ ಎಲೆಗಳನ್ನು ಎರಡು ಅಥವಾ ಮೂರು ಕಟ್ಟುಗಳನ್ನಾಗಿ ವಿಭಾಗಿಸುತ್ತಾನೆ. ಅನಂತರ ಕಟ್ಟುಗಳ ಮೇಲಿನ ಎಲೆಯನ್ನು ಯಾವುದಾದರೂ ಕ್ರಮದಲ್ಲಿ ಆರಿಸಿ ಟ್ಯಾರೋ ಓದುಗನ ಕೈಗೆ ಕೊಡುತ್ತದೆ. ಟ್ಯಾರೋ ಓದುಗ ಈ ಎಲೆಯನ್ನು ಒಂದು ಕಪ್ಪು ಅಥವಾ ಗಾಢವರ್ಣದ ರೇಶ್ಮೆ ಬಟ್ಟೆಯ ಮೇಲೆ ಇಟ್ಟರೆ ಉತ್ತಮ. ಇದರಿಂದ ಟ್ಯಾರೋ ಸಾಧ್ಯವಾಗುತ್ತದೆ.

ಟ್ಯಾರೋ ಸ್ಪ್ರೆಡ್

ಟ್ಯಾರೋ ಅರ್ಥ ಹೇಳಲು ಪ್ರತಿಯೊಂದು ಎಲೆಯನ್ನು ಅಭ್ಯಸಿಸಬೇಕು. ಕೆಲವರು ಒಂದೇ ಎಲೆಯಲ್ಲಿ ಉತ್ತರ ಹೇಳಬಹುದು, ಕೆಲವರು ಹಲವಾರು ಎಲೆಗಳನ್ನು ತೆಗೆಸಬಹುದು. ಕೆಲವು ಓದುಗರು ಪ್ರತಿಯೊಂದು ಪ್ರಶ್ನೆಗೆ ಒಂದೊಂದು ಕಾರ್ಡ್ ತೆಗೆಸಿ, ಉತ್ತರ ಹೇಳುತ್ತಾರೆ. ಕೆಲವರು ಪ್ರಶ್ನೆ ಕೇಳುವಾತ ತೆಗೆದು ಕೊಡುವ ಎಲೆಗಳನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಇರಿಸುತ್ತಾರೆ. ಎಲೆ ಇರಿಸುವ/ ಜೋಡಿಸುವ ರೀತಿಗೂ ಅದರದ್ದೇ ಗುಣಗಳಿವೆ. ನಿರ್ದಿಷ್ಟ ಜೋಡಣೆಯಲ್ಲಿ ಪ್ರತಿಯೊಂದು ಎಲೆಗೆ ವಿಶಿಷ್ಟ ಅರ್ಥ ಬರುತ್ತದೆ. ಎಲೆಗಳನ್ನು ಜೋಡಿಸುವ ಹಲವಾರು ವಿಧಾನಗಳಿವೆ. ಇವುಗಳಿಗೆ ಸ್ಪ್ರೆಡ್ ಎಂದು ಹೆಸರು. ಸ್ಪ್ರೆಡ್‌ನಲ್ಲಿ ಪ್ರತಿಯೊಂದು ಎಲೆಯ ಸ್ಥಾನಕ್ಕೆ ನಿರ್ದಿಷ್ಟ ಅರ್ಥವಿದೆ. ಈ ಸ್ಥಾನಮೌಲ್ಯಕ್ಕೆ ಸರಿಯಾಗಿ ಪ್ರಶ್ನೆಯ ಉತ್ತರ ಹೇಳಲಾಗುತ್ತದೆ. ಒಮ್ಮೆ ಎಲೆಗಳ ಸ್ಪ್ರೆಡ್ ತಯಾರಿಸಿದ ಬಳಿಕ ಹಲವಾರು ಪ್ರಶ್ನೆಗಳಿಗೆ ಅದೇ ಸ್ಪ್ರೆಡ್‌ನ ಆಧಾರದಲ್ಲಿ ವಿಭಿನ್ನ ಉತ್ತರ ಹೇಳಬಹುದು.

ಟ್ಯಾರೋ ಓದುಗ ತನಗೆ ಬೇಕಾದ ಸ್ಪ್ರೆಡ್ ಆರಿಸುತ್ತಾನೆ. ಇದು ಅವನ ಇಷ್ಟದ ಸ್ಪ್ರೆಡ್ ಆಗಿರಬಹುದು. ಅಥವಾ ಪ್ರಶ್ನೆಗೆ ತಕ್ಕ ಹಾಗೆ ವಿಭಿನ್ನವಾಗಿರಬಹುದು. ಟ್ಯಾರೋ ಥ್ರೀ ಕಾರ್ಡ್ಸ್ (ಮೂರು ಎಲೆಗಳು) ಸ್ಪ್ರೆಡ್, ಸೆಲ್ಟಿಕ್ ಸ್ಪ್ರೆಡ್, ಕ್ರಿಯೇಟಿವ್ ಪ್ರೊಸೆಸ್ (ಸೃಷ್ಟಿಶೀಲ ಪ್ರಕ್ರಿಯೆ), ಕ್ರಾಸ್ ಅಂಡ್ ಟ್ರೈಯಾಂಗಲ್ (ತಿರುವು ಮತ್ತು ತ್ರಿಕೋನ), ರಿಲೇಶನ್ ಶಿಪ್ (ಸಂಬಂಧಗಳು), ಸ್ಯಾಡೋ ಟ್ರುತ್ (ನೆರಳಿನ ಸತ್ಯ). ಟ್ವಿಸ್ಟಿಂಗ್ ಪಾತ್ (ಅಂಕುಡೊಂಕಾದ ದಾರಿ) ಟೂ ಪಾತ್ (ಎರುಡ ದಾರಿಗಳು) – ಇವು ಕೆಲವು ಜನಪ್ರಿಯ ಸ್ಪ್ರೆಡ್‌ಗಳು.

ಇಲ್ಲಿ ಎರಡು ಸ್ಪ್ರೆಡ್‌ಗಳ ಉದಾಹರಣೆಗಳಿವೆ.



ಟ್ಯಾರೋ ಓದುಗ ಮೇಲಿನ ಕ್ರಮದಲ್ಲಿ ಮೂರು ಎಲೆಗಳನ್ನು ಇರಿಸುತ್ತಾನೆ. ಇಲ್ಲಿ ಮೊದಲನೆಯ ಎಲೆ ಭೂತಕಾಲವನ್ನು ಸೂಚಿಸುತ್ತದೆ. ಎರಡನೆಯ ಎಲೆ ವರ್ತಮಾನವನ್ನು ಸೂಚಿಸಿದರೆ ಮೂರನೆಯ ಎಲೆ ಭವಿಷ್ಯತ್ ಕಾಲವನ್ನು ಸೂಚಿಸುತ್ತದೆ.[೨೪]


ಸೆಲ್ಟಿಕ್ ಸ್ಪ್ರೆಡ್

ಇದು ಹತ್ತು ಎಲೆಗಳ ಜೋಡಣೆ. ಎಲೆಗಳನ್ನು ಇರಿಸುವ ಕ್ರಮ ಮತ್ತು ಸರತಿಸಂಖ್ಯೆಯನ್ನು ಗಮನಿಸಿ.

---

೨೪. ಟಿ.ಜಿ. ಶೆಟ್ಟಿ : ತರಂಗ (ವಾರಪತ್ರಿಕೆ), ೨೦೧೦, ಪುಟ– ೩೭

ಎಲೆಗಳನ್ನು ಈ ಕ್ರಮದಲ್ಲಿ ಇರಿಸಬೇಕು. ಇಲ್ಲಿ ಸ್ಥಾನಗಳ ಅರ್ಥ ಹೀಗಿದೆ :



೦೧. ವರ್ತಮಾನ/ ಪ್ರಧಾನ ವಿಷಯ.
೦೨. ಅಡಚಣೆಗಳು.
೦೩. ಪೂರ್ವಕಾಲದ ಪ್ರಭಾವಗಳು
೦೪. ಭವಿಷ್ಯದ ಪ್ರಭಾವಗಳು/ ಇತ್ತೀಚಿನ ಬದಲಾವಣೆಗಳು
೦೫. ಭೂತಕಾಲದ ಘಟನೆಗಳು
೦೬. ಭವಿಷ್ಯದ ಪ್ರಭಾವಗಳು/ ಇತ್ತೀಚಿನ ಪ್ರಭಾವಗಳು.
೦೭. ವ್ಯಕ್ತಿತ್ವ (ಪ್ರಶ್ನಕರ್ತನ).
೦೮. ಕುಟುಂಬ ಜೀವನ/ ಪರಿಸರ.
೦೯. ಆಕಾಂಕ್ಷೆ ಮತ್ತು ಭಯಗಳು.
೧೦. ಪರಿಣಾಮ.

ಎಲೆಗಳನ್ನು ಆರಿಸಿ ನಿರ್ದಿಷ್ಟ ಸ್ಪ್ರೆಡ್‌ನಲ್ಲಿ ಇರಿಸಿದ ಬಳಿಕ ಪ್ರತಿಯೊಂದು ಎಲೆಯನ್ನು ಓದಬೇಕು. ಸ್ಥಾನಮೌಲ್ಯದ ಪ್ರಕಾರ ಎಲೆಗಳ ಅರ್ಥವನ್ನು ನಿರ್ಧರಿಸಬೇಕು.

ಎಲೆಗಳ ಪರಿಚಯ :

ಆರ್ಕಾನಾ

ಟ್ಯಾರೋ ಲೋಕದಲ್ಲಿ ಆರ್ಕಾನಾ ಎಂದರೆ ಸಾಧಕನಿಗೆ ಮಾತ್ರ ತಿಳಿದಿರುವ ನಿಗೂಢ ಜ್ಞಾನ. ಆರ್ಕಾನಾದಲ್ಲಿ ಎರಡು ವಿಭಾಗಗಳಿವೆ. ಇವುಗಳಲ್ಲಿ ಮುಖ್ಯ ವಿಭಾಗ ಮೇಜರ್ ಆರ್ಕಾನಾ. ಎರಡನೆಯದು ಮೈನರ್ ಆರ್ಕಾನಾ.

ಮೇಜರ್ ಆರ್ಕಾನಾ

ಮೇಜರ್ ಆರ್ಕಾನಾಗೆ ಟ್ಯಾರೋ ಟ್ರಂಪ್ಸ್ ಎಂದೂ ಹೆಸರು. ಕೆಲವರು ಟ್ಯಾರೋ ಭವಿಷ್ಯ ನೋಡಲು ಮೇಜರ್ ಆರ್ಕಾನಾದ ಎಲೆಗಳನ್ನು ಮಾತ್ರ ಬಳಸುತ್ತಾರೆ. ಈ ಎಲೆಗಳ ಚಿತ್ರಗಳಿಗೆ ಗಾಢ ಸಾಂಕೇತಿಕ ಅರ್ಥಗಳಿವೆ.[೨೫]

ಮೇಜರ್ ಆರ್ಕಾನಾದ ಕಾರ್ಡ್‌ಗಳಲ್ಲಿ ಆಧ್ಯಾತ್ಮಿಕ ಜ್ಞಾನ ಇದೆ, ಜೀವನದ ರಹಸ್ಯ ಇದೆ ಎಂದು ದಾರ್ಶನಿಕರು ಹೇಳುತ್ತಾರೆ. ಈ ಚಿತ್ರಗಳಲ್ಲಿ ಆತ್ಮದ ಪ್ರಯಾಣ (ಒಂದು ಜೀವನ ಕಾಲದಲ್ಲಿ)ದ ಸಂಪೂರ್ಣ ದರ್ಶನ ಇದೆ. ಸೊನ್ನೆ ಕ್ರಮಾಂಕದ ಮೂರ್ಖ, ಬಾಲ್ಯದ ಮುಗ್ಧತೆಯ ಸೂಚನೆ. ಇಲ್ಲಿಂದ ಚಿತ್ರಗಳು ಕ್ರಮವಾಗಿ ಪ್ರೌಢತೆ, ವೃದ್ಧಾಪ್ಯ ಮೃತ್ಯು ಮತ್ತು ಪರಲೋಕದತ್ತ ಸಾಗುತ್ತವೆ. ಈ ಎಲೆಗಳಲ್ಲಿ ವಿಶ್ವದ ಎಲ್ಲ ಧರ್ಮಗಳ ಛಾಯೆ ಇದೆ. ಅರ್ಥವಾಗದ, ಅಸ್ಪಷ್ಟ ನಿಗೂಢ ಕನಸುಗಳ ಮೇಲೆ ಬೆಳಕು ಹರಿಸುತ್ತದೆ ಟ್ಯಾರೋ.

ಮೇಜರ್ ಆರ್ಕಾನಾದ ಎಲೆಗಳಿಗೆ ನಿರ್ದಿಷ್ಟ ಹೆಸರುಗಳಿವೆ. ಆದರೆ ಈ ಹೆಸರುಗಳು ಧಾರ್ಮಿಕ ನಂಬಿಕೆಗೆ ತಕ್ಕಂತೆ ಬದಲಾಗಬಹುದು. ಇಲ್ಲಿರುವ ಚಕ್ರವರ್ತಿಯನ್ನು ದೇವಿ, ಜಗನ್ಮಾತೆ ಎಂದು

೨೫. ಟಿ.ಜಿ. ಶೆಟ್ಟಿ : ತರಂಗ (ವಾರಪತ್ರಿಕೆ), ೨೦೧೦, ಪುಟ- ೩೮

ತಿಳಿದುಕೊಳ್ಳಬಹುದು., ಹೀರೋಫಾಂಟ್ ಅಥವಾ ಪೋಪ್, ಯಾವುದೇ ಧರ್ಮಾಧಿಕಾರಿ ಆಗಬಹುದು. ಮೃತ್ಯುದೇವತೆ ಯಮನಾಗಬಹುದು. ಮೇಜರ್ ಆರ್ಕಾನಾದ ಎಲೆಗಳಿಗೆ ಹಲವಾರು ಅರ್ಥಗಳಿವೆ. ಈ ಅರ್ಥಗಳೇ ಅಂತಿಮವಾಗಿರಬೇಕಿಲ್ಲ. ಈ ಚಿತ್ರಗಳಲ್ಲಿರುವ ಸಂಕೇತಗಳನ್ನು ನೋಡಿ ನಿಮ್ಮ ಸಂಸ್ಕೃತಿ, ಧಾರ್ಮಿಕ ನಂಬಿಕೆಗಳಿಗೆ ತಕ್ಕ ಅರ್ಥ ಹೇಳಲೂ ಸಾಧ್ಯ. ಕೆಲವು ಮೇಜರ್ ಆರ್ಕಾನಾದ ಎಲೆಗಳಿಗೆ ಗಾಳಿ, ನೀರು, ಭೂಮಿ ಮತ್ತು ಬೆಂಕಿ ಎಂಬ ಮೂಲಧಾತುಗಳಿಗೆ ಸಂಪರ್ಕ ಇದೆ. ಇವುಗಳಿಗೆ ಗ್ರಹಗಳು ಅಥವಾ ರಾಶಿಯ ಜೊತೆಗೂ ಹೊಂದಾಣಿಕೆ ಇರುತ್ತದೆ.

ಪ್ರಶ್ನೆ ಕೇಳುವ ವ್ಯಕ್ತಿ ಮತ್ತು ಆತನ ಪ್ರಶ್ನೆಗೆ ತಕ್ಕ ಹಾಗೆ ಈ ಅರ್ಥ ಬದಲಾಗಬಹುದು. ನಿರ್ದಿಷ್ಟ ಎಲೆಗಳಲ್ಲಿರುವ ಚಿತ್ರ ಪ್ರಶ್ನೆ ಕೇಳುವಾತನನ್ನು ಸೂಚಿಸಬಹುದು. ಅವನ ಪರಿಚಯದ ಅಥವಾ ಸದ್ಯದಲ್ಲೇ ಭೇಟಿಯಾಗಲಿರುವ ವ್ಯಕ್ತಿಯನ್ನು ಅಥವಾ ಘಟನೆಯನ್ನು ಸೂಚಿಸಬಹುದು. ಅವನ ಭೂತಕಾಲವಾಗಿರಬಹುದು ಅಥವಾ ಭವಿಷ್ಯವನ್ನು ಸೂಚಿಸಬಹುದು. ಪ್ರಶ್ನೆ ಮತ್ತು ಸನ್ನಿವೇಶ ಮತ್ತು ಸ್ಪ್ರೆಡ್‌ಗೆ ತಕ್ಕ ಹಾಗೆ ಅರ್ಥ ಬದಲಾಗಬಹುದು.

ಮೇಜರ್ ಆರ್ಕಾನಾದ ಎಲೆಗಳ ಅಂಕಗಣನೆ ಸೊನ್ನೆಯಿಂದ ಆರಂಭವಾಗುತ್ತದೆ. ಸೊನ್ನೆಯಿಂದ ೨೧ರ ವರೆಗೆ ಒಟ್ಟು ೨೨ ಎಲೆಗಳ ಅರ್ಥ ಹೀಗಿದೆ. ಅವುಗಳಲ್ಲಿ ಕೆಲವು ಎಲೆಗಳನ್ನು ಇಲ್ಲಿ ವಿವರಿಸಲಾಗಿದೆ.

೦ – ಮೂರ್ಖ (ದ ಫೂಲ್)

ಮೂಲ ಧಾತು : ವಾಯು,

ಗ್ರಹ : ಯುರೇನಸ್

ಚಿತ್ರದ ವಿವರಣೆ : ಇವನೊಬ್ಬ ಯುವಕ. ರಂಗುರಂಗಿನ ಬಟ್ಟೆ ತೊಟ್ಟಿದ್ದಾನೆ. ಕೈಯಲ್ಲಿರುವ ಕೋಲಿನ ತುದಿಯಲ್ಲಿ ತನ್ನೆಲ್ಲ ಸೊತ್ತುಗಳನ್ನು ಕಟ್ಟಿಕೊಂಡಿದ್ದಾನೆ. ಇನ್ನೊಂದು ಕೈಯಲ್ಲಿ ಹೂ ಹಿಡಿದುಕೊಂಡಿದ್ದಾನೆ. ಒಂದು ನಾಯಿ ಅವನನ್ನು ಹಿಂಬಾಲಿಸಿಕೊಂಡು ಬರುತ್ತಿದೆ. ಸಾಹಸದ ಬದುಕು ಹುಡುಕಿಕೊಂಡು ಹೊರಟಿದ್ದಾನೆ ಈ ಉತ್ಸಾಹಿ ಯುವಕ. ಈ ಯುವಕ ಥಟ್ಟನೆ ನಿರ್ಧಾರ ತೆಗೆದುಕೊಳ್ಳುವವನು. ಎಲ್ಲರನ್ನೂ ಸುಲಭವಾಗಿ ನಂಬುವ ಅನನುಭವಿ. ಕಾಣದ ಅಪಾಯಗಳಿಗೆ ಎದೆಗೊಡಲು ತಯಾರಾಗಿರುವ ಉತ್ಸಾಹಿ.[೨೬]

ಅರ್ಥ : ಜಗತ್ತಿನ ಬಗ್ಗೆ ಹೊಸ ನೋಟ ಕಾಣಲಿದೆ. ಸ್ವಂತಿಕೆ, ಸಾಹಸ, ವ್ಯಕ್ತಿತ್ವ ಮತ್ತು ಕನಸುಗಳನ್ನು ಹಿಂಬಾಲಿಸಿಕೊಂಡು ಹೋಗುವ ಹುಮ್ಮಸ್ಸು. ಹೊಸ ಜ್ಞಾನ, ಕೌಶಲಗಳನ್ನು ಗಳಿಸಿಕೊಳ್ಳುವ ಅವಕಾಶ. ಬದುಕಿನಲ್ಲಿ ಹೊಸ ದಾರಿಗಳು ತೆರೆದುಕೊಳ್ಳುತ್ತವೆ. ಹೊಸ ಅವಕಾಶಗಳು ಬರಲಿವೆ, ಬದುಕು ಬದಲಾಗುತ್ತಿರುವ ಸೂಚನೆ.

ತಲೆಕೆಳಗಾದ ಎಲೆ : ಬಾಲಿಶ ವ್ಯಕ್ತಿತ್ವ, ದುಡುಕು, ಪರಿಣಾಮದ ಬಗ್ಗೆ ಯೋಚಿಸದೆ ಆತುರ ಪಡುವ ಸಾಧ್ಯತೆ.

೧ – ಮಾಂತ್ರಿಕ (ದ ಮೆಜೀಶಿಯನ್)

ಮೂಲಧಾತು : ವಾಯು

ಗ್ರಹ : ಬುಧ

೨೬. ಟಿ.ಜಿ. ಶೆಟ್ಟಿ : ತರಂಗ (ವಾರಪತ್ರಿಕೆ), ೨೦೧೦, ಪುಟ– ೩೮

ಚಿತ್ರದ ವಿವರಣೆ : ಮೇಜಿನ ಹಿಂದೆ ನಿಂತಿರುವ ಮಾಂತ್ರಿಕನ ತಲೆಯ ಮೇಲೆ ದೊಡ್ಡ ಟೋಪಿ ಅಥವಾ ೮ ಆಕೃತಿಯ ಪ್ರಭಾವಲಯ. ಕೈಯಲ್ಲಿ ಮಂತ್ರದಂಡ. ಮೇಜಿನ ಮೇಲೆ ಮಾಂತ್ರಿಕನ ಸಲಕರಣೆಗಳು; ಜೂಜುದಾಳ, ಕಪ್, ಗೋಳ.

ಅರ್ಥ: ವ್ಯವಹಾರ ಕೌಶಲ, ಸಂಪರ್ಕ, ಆತ್ಮವಿಶ್ವಾಸ – ಇವು ಮಾಂತ್ರಿಕನ ಗುಣಗಳು. ಜ್ಞಾನ ವರ್ಧನೆ ಆಗಲಿದೆ. ಜ್ಞಾನವನ್ನು ಬಳಸಿ ಪರರ ಮೇಲೆ ಪ್ರಭಾವ ಬೀರಲು ಸಾಧ್ಯ. ವಿದ್ಯಾಭ್ಯಾಸ, ವಿದ್ಯಾದಾನ, ಜ್ಞಾನ ಮತ್ತು ಕೌಶಲಗಳ ಬೆಳವಣಿಗೆ, ಪರರ ಜೊತೆ ಸಂಪರ್ಕ ವರ್ಧಿಸಲಿದೆ. ವ್ಯಕ್ತಿಗೆ, ಅವನ ಮಾತಿಗೆ ಹೆಚ್ಚು ಬೆಲೆ, ಗೌರವ ಸಿಗಲಿದೆ.

ತಲೆಕೆಳಗಾದ ಎಲೆ : ಮೋಸ, ವಿಳಂಬ, ಮಿಥ್ಯೆ.

೨ – ಮಹಾ ಪೂಜಾರಿಣಿ (ದ ಹೈ ಪ್ರೀಸ್ಟೆಸ್)

ಗ್ರಹ : ಚಂದ್ರ.

ಚಿತ್ರದ ವಿವರಣೆ : ಉದ್ದ ನಿಲುವಂಗಿ ತೊಟ್ಟು ಆಸನದಲ್ಲಿ ಕುಳಿತಿರುವ ಪೂಜಾರಿಣಿ. ತಲೆಯ ಮೇಲೆ ಮೂರು ಕೊನೆಗಳ ಕಿರೀಟ. ಕೈಯಲ್ಲಿ ತೆರೆದ ಪುಸ್ತಕ ಅಥವಾ ಕಾಗದದ ಹಾಳೆ (ಕೆಲವೊಂದು ಎಲೆಗಳಲ್ಲಿ ಈಕೆ ಮಹಿಳಾ ಪೋಪ್ ಆಗಿಯೂ ಕಾಣಿಸುತ್ತಾಳೆ). ಅಂತರ್ಜ್ಞಾನ, ಕನಸುಗಳು, ಜ್ಞಾನ ಇವಳ ತಾಕತ್ತು.

ಅರ್ಥ : ಸಾಮಾನ್ಯಜ್ಞಾನ, ಅಂತರ್ಜ್ಞಾನ. ಒಳಗಿನ ಗುಟ್ಟು ತಿಳಿದುಕೊಳ್ಳುವ ಶಕ್ತಿ. ಹಿಂದಿನ ಅನುಭವಗಳಿಂದ ಪ್ರಶ್ನೆಗೆ ಉತ್ತರ ತಿಳಿದುಕೊಳ್ಳಲು ಅಂತರ್ಜ್ಞಾನವನ್ನು ಬಳಸಿ ಬದುಕಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸೂಚನೆ. ಮುಂದಿನ ಬದುಕಿಗೆ ಸ್ಫೂರ್ತಿ ಬರುವುದು ಇದೇ ಅಂತರ್ಜ್ಞಾನ (ಇಂಟ್ಯೂಶನ್)ದಿಂದ.

ತಲೆಕೆಳಗಾದ ಪೂಜಾರಿಣಿ : ಅಂಧಶ್ರದ್ಧೆ ಮತ್ತು ಮಿಥ್ಯಾಚಾರ, ಅಭದ್ರತೆ, ಒಳನೋಟದ ಅಭಾವ, ಸುಳ್ಳಾಗುವ ಲೆಕ್ಕಾಚಾರಗಳು.[೨೭]

೩ – ಸಾಮ್ರಾಜ್ಞಿ/ ಮಹಾರಾಣಿ (ದ ಎಂಪ್ರೆಸ್)

ಗ್ರಹ : ಶುಕ್ರ.

ಚಿತ್ರದ ವಿವರಣೆ : ಸಿಂಹಾಸನದ ಮೇಲೆ ಕುಳಿತವಳು. ಕೈಯಲ್ಲಿ ರಾಜದಂಡ. ಪಕ್ಕದಲ್ಲಿ ಗುರಾಣಿ. ಕೆಲವೊಂದು ಎಲೆಗಳಲ್ಲಿ ಇದೇ ಚಕ್ರವರ್ತಿನಿ ದೇವಿಯಾಗಿರುತ್ತಾಳೆ. ಸುಭದ್ರತೆ, ತಾಯ್ತನ, ಸುಖ ಸಂತೋಷಗಳ ಲಕ್ಷಣ ಈಕೆ.

ಅರ್ಥ : ಸೃಷ್ಟಿ, ಕ್ರತುಶೀಲತೆ, ಸಂತಾನಶಕ್ತಿ, ಹೊಸದನ್ನು ಸೃಷ್ಟಿಸುವ ಶಕ್ತಿ, ಸ್ವಂತ ಕ್ರತುಶೀಲತೆಯನ್ನು ಬಳಸಿ ಹೊಸ ದಾರಿಹಿಡಿಯುವ ಸೂಕ್ತಕಾಲ. ಮಹಿಳೆಯಾಗಿದ್ದರೆ ಸಂತಾನಭಾಗ್ಯದ ಸೂಚನೆ. ಯಾವುದೇ ಸೃಷ್ಟಿಶೀಲ ಉದ್ಯಮ ಆರಂಭಿಸುವ ಸೂಚನೆ.

ತಲೆಕೆಳಗಾದ ಎಲೆ : ಅಸೂಯೆ, ದ್ವೇಷಗಳಿಂದ ಕಾರ್ಯವೈಫಲ್ಯ, ಸರ್ವಾಧಿಕಾರಿ ವ್ಯಕ್ತಿತ್ವದಿಂದ ದಂಗೆಯ ಸಾಧ್ಯತೆ.

ಮೈನರ್ ಆರ್ಕಾನಾ


ಮೈನರ್ ಆರ್ಕಾನಾ ಸಾಮಾನ್ಯವಾಗಿ ಆಧುನಿಕ ಇಸ್ಪೀಟು ಎಲೆಗಳನ್ನು ಹೋಲುತ್ತದೆ. ಇದರಲ್ಲಿ

೨೭. ಟಿ.ಜಿ. ಶೆಟ್ಟಿ : ತರಂಗ (ವಾರಪತ್ರಿಕೆ), ೨೦೧೦, ಪುಟ- ೩೯


I
THE MAGICIAN.


O
THE FOOL.


II
B
J
THE HIGH PRIESTESS


IV
THE EMPEROR.


III
THE EMPRESS.


V
THE HIEROPHANT


VI
THE LOVERS.

ಇರುವುದು ೫೬ ಎಲೆಗಳು, ಇವುಗಳಲ್ಲಿ ನಾಲ್ಕು ವಿಭಾಗಗಳು: ಕತ್ತಿ, ಮಂತ್ರದಂಡ, ಕಪ್ ಮತ್ತು ನಾಣ್ಯ ಅಥವಾ ಪಂಚಕೋಣದ ನಕ್ಷತ್ರ (ಪೆಂಟಾಕಲ್). ಮೈನರ್ ಆರ್ಕಾನದ ಬದಲು ಇಸ್ಪೀಟು ಆಟದ ಎಲೆಗಳನ್ನು ಬಳಸಬಹುದು. ಆಟದ ಎಲೆಗಳ ಇಸ್ಪೀಟು (ಸ್ಪೇಡ್) ಕತ್ತಿಯಾಗುತ್ತದೆ. ಕಳಾವರ್ (ಕ್ಲಬ್) ಮಂತ್ರದಂಡವಾಗುತ್ತದೆ, ಬದಾಮ್ (ಹಾರ್ಟ್ಸ್) ಕಪ್ ಆಗುತ್ತದೆ. ಡೈಮಂಡ್, ಪೆಂಟಾಕಲ್/ ನಾಣ್ಯವಾಗುತ್ತದೆ.

ಎಕ್ಕದಿಂದ ಹಿಡಿದು ೧೦ ಸಂಖ್ಯೆಯ ಎಲೆಗಳಿಗೆ ಪಿಪ್ಸ್ ಎಂದು ಹೆಸರು. ಮೇಜರ್ ಆರ್ಕಾನಾದ ಎಲೆಗಳು ಮಾನವನ ಹತೋಟಿಗೆ ಮೀರಿದ ಸನ್ನಿವೇಶಗಳನ್ನು ಸೂಚಿಸಿದರೆ, ಪಿಪ್ಸ್ ಎಲೆಗಳು ಪ್ರಶ್ನಕರ್ತನ ಬದುಕು ಮತ್ತು ವೈಯಕ್ತಿಕ ಭಾವನೆಗಳನ್ನು ಸೂಚಿಸುತ್ತವೆ. ಪಿಪ್ಸ್ ಎಲೆಗಳ ಬಳಿಕ ಗುಲಾಮ (ಸೇವಕ/ ಪೇಜ್), ಸರದಾರ (ನೈಟ್) ರಾಣಿ ಮತ್ತು ರಾಜ ಎಂಬ ನಾಲ್ಕು ಎಲೆಗಳಿವೆ. ಇವುಗಳಿಗೆ ಕೋರ್ಟ್ ಎಲೆಗಳು ಎಂದು ಹೆಸರು. ಪ್ರಶ್ನಕರ್ತ, ಅವನ ಸಂಬಂಧಿಕರು, ಪರಿಚಿತರು ಅಥವಾ ಭವಿಷ್ಯದಲ್ಲಿ ಅವನ ಸಂಪರ್ಕಕ್ಕೆ ಬರಲಿರುವ ವ್ಯಕ್ತಿಗಳನ್ನು ಈ ನಾಲ್ಕು ಕೋರ್ಟ್ ಎಲೆಗಳು ಸೂಚಿಸುತ್ತವೆ.[೨೮]

ಗುಲಾಮ, ಸರದಾರ ಮತ್ತು ರಾಜ ಪುರುಷರ ಸೂಚನೆ, ರಾಣಿ ಸ್ತ್ರೀಯರ ಸೂಚನೆ.

ರಾಜ : ಪುರುಷ, ಶಕ್ತಿಶಾಲಿ, ಪ್ರಭಾವಶಾಲಿ ನಾಯಕ

ರಾಣಿ : ಸ್ತ್ರೀ, ಶಕ್ತಿಶಾಲಿ, ಆದರೆ ಭಾವನಾಶೀಲೆ

ಸರದಾರ : ಪುರುಷ ಕುಶಲ, ಶಕ್ತಿ ಮತ್ತು ಅಭಿವೃದ್ಧಿ

ಗುಲಾಮ : ಪುರುಷ ತರುಣ, ಅವಿವೇಕಿ.

ಕತ್ತಿ

ಮೂಲಧಾತು : ವಾಯು

ರಾಶಿ : ಮಿಥುನ, ತುಲಾ ಮತ್ತು ಕುಂಭ. ಇದು ಪುರುಷಸೂಚಕ.

ಕತ್ತಿ ಭಾವನೆ, ಕಲ್ಪನೆ ಮತ್ತು ವಿಚಾರಗಳನ್ನು ಸೂಚಿಸುತ್ತದೆ. ಇದು ಸಂಪರ್ಕ, ವಾಗ್ವಾದ, ವಿವಾದ ಮತ್ತು ಯುದ್ಧದ ಸೂಚನೆ.

ಪಂಚಕೋನ/ ನಾಣ್ಯ

ಮೂಲಧಾತು : ಭೂಮಿ

ರಾಶಿ : ವೃಷಭ, ಕನ್ಯಾ, ಮಕರ.

ಪಂಚಕೋನ (ಪೆಂಟಾಕಲ್) ಅಥವಾ ನಾಣ್ಯ ಭೂಮಿಯನ್ನು ಸೂಚಿಸುತ್ತದೆ. ಐಶ್ವರ್ಯ ಮತ್ತು ಶ್ರೀಮಂತಿಕೆಯ ಸೂಚನೆ. ವ್ಯಾಪಾರ, ವ್ಯಾವಹಾರಿಕತೆ, ವಿಶ್ವಾಸಾರ್ಹತೆ. ಅವಗುಣದಲ್ಲಿ ದುಂದುವೆಚ್ಚ ಮತ್ತು ನಾಸ್ತಿಕತೆ ಇರಬಹುದು.

ಮಂತ್ರದಂಡ

ಮೂಲಧಾತು : ಬೆಂಕಿ

ರಾಶಿ : ಮೇಷ, ಸಿಂಹ, ಧನು.

ಪುರುಷ ಮತ್ತು ಬಹಿರ್ಮುಖಿ ಗುಣ. ಶಕ್ತಿ ಮತ್ತು ತೇಜಸ್ಸಿನ ಪ್ರತಿಬಿಂಬ. ಯಾವುದೇ ಸನ್ನಿವೇಶದಲ್ಲಿ ಸುಪ್ತ ಸಾಮರ್ಥ್ಯವನ್ನು ಕಾಣುವ ಶಕ್ತಿ. ಬೌದ್ಧಿಕ ಅಥವಾ ದೈಹಿಕ ಸಾಮರ್ಥ್ಯ ಜೊತೆಯಲ್ಲಿ ಸೇರಿದ್ದರೆ ವಿನಾಶವೂ ಸಾಧ್ಯ.

೨೮. ಟಿ.ಜಿ. ಶೆಟ್ಟಿ : ತರಂಗ (ವಾರಪತ್ರಿಕೆ), ೨೦೧೦, ಪುಟ– ೪೩

ಕಪ್ಸ್ (ಲೋಟ, ಬಟ್ಟಲು)

ಮೂಲಧಾತು : ಜಲ

ರಾಶಿ : ಕರ್ಕ, ವೃಶ್ಚಿಕ, ಮೀನ

ಸ್ತ್ರೀ ಗುಣ, ಅಂತರ್ಮುಖಿ, ಸೂಕ್ಷ್ಮಗ್ರಾಹಿ. ಭಾವನಾಪ್ರಧಾನ ಮತ್ತು ಪ್ರೇಮ, ಮಾರ್ದವತೆ, ಸಂವೇದನಾಶೀಲತೆ ಇದರ ಲಕ್ಷಣಗಳು. ಅವಗುಣಗಳಲ್ಲಿ ಸ್ವಾರ್ಥ್ ಮತ್ತು ಪರರ ಭಾವನೆಗಳ ದುರುಪಯೋಗ.ಇದು ಮೈನರ್ ಆರ್ಕಾನಾದ ಸ್ಥೂಲ ಪರಿಚಯ.[೨೯]

❖❖❖

೨೯. ಟಿ.ಜಿ. ಶೆಟ್ಟಿ : ತರಂಗ (ವಾರಪತ್ರಿಕೆ). ಪುಟ : ೪೩



ಅಧ್ಯಾಯ – ಎಂಟು

ಗಂಜೀಫಾ ಚಿತ್ರಕಲೆಯ ಕಲಾವಿದರು, ಪೋಷಕರು ಮತ್ತು ಸಧ್ಯದ ಸ್ಥಿತಿಗತಿ

ಗಂಜೀಫಾ ಚಿತ್ರಕಲೆ ನಶಿಸಿ/ಒಣಗಿ ಹೋಯಿತು ಎಂದರೆ ಗಂಜೀಫಾ ಚಿತ್ರಕಲೆ ಮತ್ತು ಆಟ ಸಂಪೂರ್ಣವಾಗಿ ಭಾರತೀಯ ಕಲೆಯಿಂದ ಮತ್ತು ಭಾರತೀಯರ ಸಾಮಾಜಿಕ ಜೀವನದಿಂದಲೇ ದೂರ ಸರಿಯಿತು ಎಂದು ಅರ್ಥವಲ್ಲ. ಇಂದಿಗೂ ಅಲ್ಲಲ್ಲಿ ಗಂಜೀಫಾ ಎಲೆಗಳನ್ನು ಮಾಡುತ್ತಿರುವ ಕಲಾವಿದರನ್ನು ಕರ್ನಾಟಕದ ಮೈಸೂರು, ಓರಿಸ್ಸಾದ ಪುರಿ ಮತ್ತು ಪಶ್ಚಿಮ ಬಂಗಾಲದ ಬಂಕುರಾ ಜಿಲ್ಲೆಗಳಲ್ಲಿ ಕಾಣಬಹುದು. ಸಾವಂತವಾಡಿಯ ಹಿಂದಿನ ಮಹಾರಾಜರು ತಮ್ಮ ಅರಮನೆಯಲ್ಲಿಯೇ ಒಂದು ಕಾರ್ಯಗಾರ ಮಾಡಿ ಗಂಜೀಫಾ ಎಲೆಗಳನ್ನು ಮಾರುಕಟ್ಟೆಗೆ ಸಿದ್ಧಗೊಳಿಸುತ್ತಿದ್ದರು. ಅದರಲ್ಲೂ ವಿಶೇಷವಾಗಿ ರಫ್ತಿಗಾಗಿ ಸಿದ್ಧಗೊಳಿಸಿದರು. ಈ ಕಟ್ಟುಗಳು ಆಧುನಿಕ ನಕ್ಷೆಗಳೊಂದಿಗೆ ಸಂಪ್ರದಾಯಿಕ ವಿನ್ಯಾಸಗಳನ್ನು ಹೊಂದಿದ್ದವು. ಇವುಗಳ ಮೇಲೆ ಆಟದ ನಿಯಮಾವಳಿಗಳಿಗಿಂತ ಕಲೆ ಮತ್ತು ಮಾರುಕಟ್ಟೆ ದೃಷ್ಟಿಯಿಂದ ವರ್ಣಮಯಗೊಳಿಸಲಾಗಿತ್ತು. ಅಲ್ಲದೇ ಆಕರ್ಷ ಅಂದಿನ ಸಭಾ ಭವನಗಳ ಆಕರ್ಷಕ ಚಿತ್ರಗಳೊಂದಿಗೆ ಸಂಖ್ಯೆಗಳಿಗನುಗುಣವಾಗಿ ಚಿತ್ರಿಸಲಾಗಿತ್ತಲ್ಲದೆ ಆಟ ಆಡುವ ಪದ್ಧತಿಗಿಂತ ಅವುಗಳನ್ನು ಮಾರುವುದಕ್ಕಾಗಿಯೇ ನಿರ್ಮಿಸಲಾಗಿತ್ತು. ಆದುದರಿಂದ ಈ ವಿಷಯಕ್ಕೆ ಕಲಾವಿದರನ್ನು ದೂರುವಂತಿಲ್ಲ. ಓರಿಸ್ಸಾ, ಬಂಗಾಲ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಹೋಗುವ ಪ್ರವಾಸಿಗರು ಅವುಗಳನ್ನು ಒಳಾಂಗಣದ ಆಟದ ವಸ್ತುಗಳೆಂದು ಖರಿದಿಸದೆ ತಮ್ಮ ಪ್ರವಾಸದ ನೆನಪಿಗೆ, ಭೇಟಿಯ ಘಟನೆ ಸ್ಮರಣೆಗೆ ಖರೀದಿಸುತ್ತಾರೆ. ಹಲವು ರೀತಿಗಳಲ್ಲಿ ಸಿದ್ಧವಾಗುತ್ತಿರುವ ಈ ಆಟದ ಕಟ್ಟುಗಳು ಈ ದೇಶದ ಸಾಂಪ್ರದಾಯಿಕ ಆಟಗಳ ನೆನಪುಗಳು ಎನ್ನುವುದಕ್ಕಾಗಿಯೇ ಇಂದಿಗೂ ಗಂಜೀಫಾ ಕಲಾವಿದರ ಕರಗಳಲ್ಲಿ ಈ ಎಲೆಗಳು ಜೀವಂತವಾಗಿದೆ.

ಚಿತ್ರಗಾರರ ವಂಶ

ಸೋಮವಂಶ ಕ್ಷತ್ರಿಯರೆಂದು ಪ್ರಸಿದ್ಧಿಗೆ ಬಂದಿರುವ ಚಿತ್ರಗಾರರ ಮನೆತನದವರು ಹಿಂದಿನ ಶತಮಾನಗಳಲ್ಲಿ ಗ್ವಾಲಿಯರ್ ಕಡೆಯಿಂದ ಬಂದವರೆಂದು ಹೇಳಲಾಗಿದೆ. ಇವರು ನಿಮಿಷಾಂಬಾ ದೇವಿಯ ಭಕ್ತರು. ಈಗ ಮಹಾರಾಷ್ಟ್ರದ ಕೆಲವು ನಗರಗಳಲ್ಲಿ, ಕರ್ನಾಟಕದ ಒಂದೆರಡು ನಗರಗಳಲ್ಲಿ, ಮುಖ್ಯವಾಗಿ ಶ್ರೀರಂಗಪಟ್ಟಣದಲ್ಲಿ ನಿಮಿಷಾಂಬ ದೇವಿಯ ದೇವಸ್ಥಾನಗಳು ಸ್ಥಾಪಿತವಾಗಿವೆ. ಸೋಮವಂಶ ಕ್ಷತ್ರಿಯ ಕಲಾವಿದರು ರಾಜಾಶ್ರಯದಲ್ಲಿ ಉನ್ನತ ಸ್ಥಾನ ಪಡೆದಿದ್ದುದರಿಂದ ಸಮಾಜದಲ್ಲಿ ಗೌರವವನ್ನು ಪಡೆದಿದ್ದರು.

ಇನ್ನು ಮೈಸೂರು ಶೈಲಿಯ ಚಿತ್ರಗಳ ಪೋಷಣೆಯಲ್ಲಿ ಜರುಗಿದ ಬೆಳವಣಿಗೆಯನ್ನು ಗಮನಿಸೋಣ. ೧೭-೧೮ನೇ ಶತಮಾನಗಳ ಅವಧಿ[೧] ಭಾರತದ ಎಲ್ಲ ರಾಜ್ಯಗಳಲ್ಲಿ ರಾಜಕೀಯ ಅಸ್ಥಿರತೆ ಮೂಡಿದ ಕಾಲ. ಆದರೂ ಮೈಸೂರು ಅರಸರು ಮತ್ತು ಅವರ ಕಕ್ಷೆಯಲ್ಲಿದ್ದ ಅನೇಕ ಪಾಳೆಗಾರರು ತಮ್ಮ ಆಸ್ಥಾನಗಳಲ್ಲಿ ಚಿತ್ರಗಾರರಿಗೆ ನಿರಂತರ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಿದ್ದರು. ಇದಕ್ಕನುಗುಣವಾಗಿ ಚಿತ್ರದುರ್ಗದ ಪಾಳೆಗಾರರು ಕಲಾಪೋಷಣೆಗೆ ಹೆಚ್ಚು ಪ್ರೋತ್ಸಾಹ ಕೊಡುತ್ತಿದ್ದರು. ಈ ಶೈಲಿಯ ಅನೇಕ ಚಿತ್ರಗಾರ ಮನೆತನದವರು ಚಿತ್ರದುರ್ಗದ ಮೂಲದವರೆನಿಸಿಕೊಂಡಿದ್ದಾರೆ. ಇದಲ್ಲದೆ ಶಿವಮೊಗ್ಗ ಜಿಲ್ಲೆಯ ನಗರ ಪಾಳೆಗಾರರು ಸಹ ಕಲೆಗೆ ಪ್ರೋತ್ಸಾಹವನ್ನಿತ್ತು ಕಲಾಕೃತಿಗಳ ರಚನೆಗೆ ಅವಕಾಶ ಕಲ್ಪಿಸಿದರು. ಚನ್ನಪಟ್ಟಣ, ಆನೆಗೊಂದಿ, ಪೆನುಗೊಂಡೆ, ಮಧುಗಿರಿ, ಹಾಸನ ಪಾಳೆಗಾರರು ಸಹ ಈ ಕಾರ್ಯದಲ್ಲಿ ಹಿಂದೆ ಬೀಳಲಿಲ್ಲ.

ಹಿಂದಿನ ತಲೆಮಾರಿನ ಚಿತ್ರಕಾರರು

ಅಜಂತಾ ಭಿತ್ತಿಚಿತ್ರಗಳ ಕಾಲದಿಂದಲೂ ೧೯ನೇ ಶತಮಾನದವರೆಗೆ ಬಹುತೇಕ ಚಿತ್ರಕಾರರು ಕಲಾಕೃತಿಗಳಲ್ಲಿ ಕೃತಿಕಾರನಾಗಿ ತಮ್ಮ ಹೆಸರನ್ನು ಬರೆಯುತ್ತಿರಲಿಲ್ಲ. ತನ್ನ ಕೃತಿಯನ್ನು ಭಕ್ತಿಪರಂಪರೆಯ ಹಾದಿಯಲ್ಲಿ ರಚಿಸಿ ದೇವರಿಗೆ ಅರ್ಪಿಸಿ ತನ್ನ ಪ್ರಭುಗಳಿಗೆ ನಿವೇದಿಸುತ್ತಿದ್ದುದು ಚಿತ್ರಕಾರರ ಅಭ್ಯಾಸವಾಗಿದ್ದಿತು. ಇದರಿಂದ ಅನೇಕ ಭಿತ್ತಿಚಿತ್ರಗಳು ಮತ್ತು ಕಲಾಕೃತಿಗಳಲ್ಲಿ ಚಿತ್ರಗಾರರ ಹೆಸರು ಸಿಗುವುದು ದುರ್ಲಭ. ಆದರೆ ೧೯ನೇ ಶತಮಾನದಲ್ಲಿ ಮೈಸೂರು ಅರಸರ ಆಶ್ರಯದಲ್ಲಿ ಬೆಳೆದ ಹಲವು ಚಿತ್ರಗಾರರು ತಮ್ಮ ಹೆಸರುಗಳನ್ನು ನಮೂದಿಸಿದ್ದಾರೆ. ಅವರಲ್ಲಿ ಅವಧೂತ ಪಾಪಣ್ಣ, ಕವಿಕೃಷ್ಣ, ಗೋಪಾಲಯ್ಯ, ಚೆನ್ನಕೃಷ್ಣ, ತಿಮ್ಮರಾಯಪ್ಪ. ತಿರುಪಳಯ್ಯ, ದೊಡ್ಡನಾರಾಯಣಪ್ಪ, ನಗುವನಹಳ್ಳಿ ನಾರಾಯಣಪ್ಪ, ಮೇಸ್ತ್ರೀ ಲಕ್ಷ್ಮಯ್ಯ, ರಂಗಯ್ಯ ಮೊಕ್ತೇಸರ ತಿಪ್ಪಣ್ಣ, ಯುಲ್ಲೈಯ್ಯ, ರಂಗಯ್ಯ, ರಾಮಾಂಜಿ, ವೀರಣ್ಣ, ವೆಂಕಟಸುಬ್ಬ, ಸೀತಾರಾಮಯ್ಯ, ಸುಬ್ಬಯ್ಯ, ಸುರಪುರದ ಶಂಕರ ಉಲ್ಲೇಖಾರ್ಹರು. ಅತ್ಯಂತ ಉತ್ತಮ ಕೃತಿಗಳನ್ನು ರಚಿಸಿದ ಜಾವಗಲ್ ನರಸಿಂಹಯ್ಯ ಮತ್ತು ಶಿಕಾರಿಪುರದ ತಿಪ್ಪಾಜಿ ಚಿತ್ರಗಾರರವರು ಕಲಾಪ್ರಪಂಚಕ್ಕೆ ಅದ್ವಿತೀಯ ಕೊಡುಗೆ ನೀಡಿದ್ದಾರೆ. ವಿಶ್ವವಿಖ್ಯಾತ ಕಲಾವಿದ ಕೆ.

---

೦೧. ಎಂ. ಎಸ್. ನಂಜುಂಡರಾವ್ : ಚಿತ್ರಕಲಾ ಪ್ರಪಂಚ, ಪುಟ-೨೪೮
೦೨. ಎಂ. ಎಸ್. ನಂಜುಂಡರಾವ್ : ಚಿತ್ರಕಲಾ ಪ್ರಪಂಚ, ಪುಟ-೨೫೧

ವೆಂಕಟಪ್ಪನವರ ತಂದೆ ದುರ್ಗದ ಕೃಷ್ಣಪ್ಪನವರು ಹಾಗೂ ಮಧುಗಿರಿ ಲಿಂಗಪ್ಪನವರು ಅನೇಕ ಉತ್ತಮ ಕೃತಿಗಳನ್ನು ರಚಿಸಿದ್ದಾರೆ.[೨]

ಇಂದಿನ ಕಲಾವಿದರು

ಸೋಮವಂಶ ಕ್ಷತ್ರಿಯ ವಂಶದಲ್ಲಿ ಚಿತ್ರಗಾರ ಮನೆತನದವರು ಈ ಶತಮಾನದಲ್ಲಿ ತಮ್ಮ ಕಾರ್ಯವನ್ನು ಮುಂದುವರೆಸಿದ್ದಾರೆ. ಅದರಲ್ಲಿ ಶ್ರೀ ವೈ. ಸುಬ್ರಹ್ಮಣ್ಯರಾಜು ಮತ್ತು ಅವರ ಮಕ್ಕಳಾದ ಶ್ರೀ ವಿಶ್ವೇಶ್ವರರಾಜು, ಶ್ರೀ ಕೃಷ್ಣಾನಂದರಾಜು ಹಾಗೂ ಮೊಮ್ಮಕ್ಕಳಾದ ರಾಜವೀರ ಹಾಗೂ ರಾಣಿರೇಖಾ ಹೊಸ ಪೀಳಿಗೆಗೆ ನಾಂದಿಯಾಗಿದ್ದಾರೆ. ಟಿ. ನರಸೀಪುರದ ಶ್ರೀ ಕೆ. ವೆಂಕಟರಾಮು ಮತ್ತು ಅವರ ಮಕ್ಕಳು ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ.

ಇದಲ್ಲದೆ ಮೈಸೂರು ಸಂಪ್ರದಾಯ ಶೈಲಿಯನ್ನು ತಮ್ಮದಾಗಿಸಿಕೊಂಡ ಮೈಸೂರಿನ ಶ್ರೀ ಎಂ. ರಾಮನರಸಯ್ಯ, ಬೆಂಗಳೂರಿನ ಯುವ ಪರಂಪರೆಗೆ ಸೇರಿದ ಶ್ರೀಮತಿಗಳಾದ ನೀಲಾಪಂಚ್, ವಿನೋದ, ಪದ್ಮಾಹೆಬ್ಳಿಕರ್, ಸುಶೀಲಾದೇವಿ, ಹೇಮಲತಾ, ಪ್ರಭಾಮಲ್ಲೇಶ್, ಉಷಾರಾಜ, ರೇಣುಕಾ ಮತ್ತು ಶ್ರೀಯುತರಾದ ಅಪ್ಪಾಜಯ್ಯ, ಶ್ರೀನಿವಾಸಾಚಾರ್ಯ, ಕುಲಕರ್ಣಿ, ಟಿ.ಡಿ. ಸುರೇಶ್ ಈ ಶೈಲಿಯ ಹೊಸ ರೂವಾರಿಗಳಾಗಿದ್ದಾರೆ.[೩] ಅಲ್ಲದೆ ಅರಮನೆಯ ಕಲಾವಿದ ಎಂ. ರಾಮನರಸಯ್ಯ ಅವರ ಮಕ್ಕಳಾದ ಬೆಂಗಳೂರಿನ ಶ್ರೀಮತಿ ಸುಧಾ ವೆಂಕಟೇಶ, ಮೈಸೂರಿನ ಚಂದ್ರಿಕಾ ಪದ್ಮನಾಭನ್ ಅವರು ಪ್ರಸ್ತುತ ಗಂಜೀಫಾ ಚಿತ್ರಕಲೆಯನ್ನು ಉಳಿಸಿ ಬೆಳೆಸಿಕೊಂಡು ಪೋಷಿಸಿರುವುದರಲ್ಲಿ ಗಂಜೀಫಾದ ಉಳಿವಿಗೆ ಕಾರಣರಾಗಿದ್ದಾರೆ.


ಮೈಸೂರಿನ ದರ್ಬಾರ ಭಕ್ಷಿ ಕಾರ್ಯಾಲಯದಲ್ಲಿ ಶಿರಸ್ತೇದಾರರಾಗಿದ್ದ ವೆಂಕಟನರಸಯ್ಯನವರ ಪುತ್ರ ಶ್ರೀಯುತ ಎಂ. ರಾಮನರಸಯ್ಯನವರು ೧೯೨೨ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರ ತಾಯಿ ಸುಬ್ಬಮ್ಮನವರು ಸದ್ ಗೃಹಿಣಿ, ರಾಮನರಸಯ್ಯನವರಿಗೆ ಅವರ ತಾತನ ಹೆಸರನ್ನು ಇಡಲಾಗಿತ್ತು. ರಾಮನರಸಯ್ಯನವರ ತಾತ ಭಕ್ಷಿ ರಾಮನರಸಯ್ಯನವರು, ಆಗರ್ಭ ಶ್ರೀಮಂತ, ಜಹಗೀರದಾರ್ ಮನೆತನದಲ್ಲಿ ಜನಿಸಿದವರು. ಇವರ ಭವ್ಯ ಸೌಧ ಅರಮನೆ ಕೋಟೆಯೊಳಗಡೆನೇ ಇತ್ತು. ಇವರು ಆಗ ಯುವರಾಜರಾಗಿದ್ದ ಚಾಮರಾಜ ಒಡೆಯರರ ಸಹಪಾಠಿ ಹಾಗೂ ಉತ್ತಮ ಗೆಳೆಯರಲ್ಲೊಬ್ಬರಾಗಿದ್ದರು. ಇವರು ಮುಂದೆ ಅರಮನೆಯಲ್ಲಿ ದರ್ಬಾರ ಭಕ್ಷಿಯಾಗಿದ್ದರು. ರಾಜಮನೆತನದೊಂದಿಗಿನ ಒಡನಾಟ ಮತ್ತು ಸಂಪರ್ಕ ಇವರಲ್ಲೂ ಕಲಾಪ್ರಜ್ಞೆಯನ್ನು ಮೂಡಿಸಿತ್ತು. ಇವರೊಬ್ಬ ಅತ್ಯುತ್ತಮ ಕಲಾಪ್ರೇಮಿ ಮತ್ತು ಕಲಾಪೋಷಕರಾಗಿದ್ದಾರೆ. ತಮ್ಮ ಮನೆಯಲ್ಲಿಯೇ ಹಲವು ಕಲಾವಿದರಿಗೆ ಆಶ್ರಯ ನೀಡಿ ಅವರಿಂದ ಉತ್ತಮೋತ್ತಮ ಕಲಾಕೃತಿಗಳನ್ನು ರಚಿಸುತ್ತಿದ್ದರು. ಹೀಗೆ ರಚಿಸಿದ ಕಲಾಕೃತಿಗಳನ್ನು ಗಣ್ಯರಿಗೆ, ದೇವಸ್ಥಾನಗಳಿಗೆ ದೇಣಿಗೆಯಾಗಿ ನೀಡಿ ಅವರಲ್ಲೂ ಕಲಾಪ್ರಜ್ಞೆ ಮೂಡಲು ಪ್ರೇರಿಸಿದ್ದಾರೆ.

೧. ಶ್ರೀಮತಿ ಸುಧಾ ವೆಂಕಟೇಶ ಗಂಜೀಫಾ ಕಲಾವಿದೆ


೦೩. ಎಂ. ಎಸ್. ನಂಜುಂಡರಾವ್ : ಚಿತ್ರಕಲಾ ಪ್ರಪಂಚ, ಪುಟ-೨೫೨




ಕಲಾವಿದೆ ಶ್ರೀಮತಿ ಸುಧಾ ವೆಂಕಟೇಶ













ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಬೆಂಗಳೂರಿನ ಪ್ರಶಾಂತ ವಿಸ್ತಾರಣೆಗಳಲ್ಲೊಂದಾದ ಬಾನಸವಾಡಿಯ ಮುಖ್ಯರಸ್ತೆಯ ಹಿಂಭಾಗದ ರಾಮಗೋಪಾಲ ಲೇಔಟ್ ೧೭೯ ನಂಬರಿನ ಪುಟ್ಟ ಮನೆಯೊಂದನ್ನು ಪ್ರವೇಶಿಸಿದರೆ ಯಾವುದೋ ವಸ್ತು ಪ್ರದರ್ಶನವೊಂದರ ನಡುವೆ ನಿಂತ ಅನುಭವ ನಮಗಾಗುತ್ತದೆ. ಮನೆಯ ಗೋಡೆಗಳನ್ನು ಅಲಂಕರಿಸಿದ ಅನೇಕ ಮೈಸೂರು ಸಾಂಪ್ರದಾಯಿಕ ಚಿತ್ರಗಳು ಹಾಗೂ ಗಂಜೀಫಾ ಆಟದ ಎಲೆಗಳ ಚಿತ್ರಗಳು ಮತ್ತು ಕೊನೆಯ ಹಂತದ ಕುಂಚಸ್ಪರ್ಶಕ್ಕೆ ಕಾದುನಿಂತಿರುವ ಅದೇ ಮುಗಿದ ಸಾಂಪ್ರದಾಯಿಕ ಹಾಗೂ ಚಿಕ್ಕ ಗಂಜೀಫಾ ಕಲಾಕೃತಿಗಳು. ಇವುಗಳ ನಡುವೆ ಮಧ್ಯವಯಸ್ಸಿನ ಗೃಹಿಣಿಯೊಬ್ಬರು ಕಂಡು ಬರುತ್ತಾರೆ. ಅವರೆ ಶ್ರೀಮತಿ ಸುಧಾ ವೆಂಕಟೇಶ.

ಸುಧಾ ಅವರು ಕಲಾಪ್ರಪಂಚದಲ್ಲಿ ಹೀಗೆ ಬೆಳಕಿಗೆ ಬರಲು ಬಾಲ್ಯದಲ್ಲಿ ಅವರು ಬೆಳೆದು ಬಂದ ಪರಿಸರವೇ ಕಾರಣ. ಮೈಸೂರಿನ ಸಾಂಪ್ರದಾಯಿಕ ಶೈಲಿಯ ಚಿತ್ರಕಲೆಯ ಕುರಿತು ಪ್ರಸ್ತಾಪ ಬಂದಾಗಲೆಲ್ಲಾ ಥಟ್ಟನೆ ಹೊಳೆಯುವ ಹೆಸರು ಮೈಸೂರಿನ ಕಲಾವಿದ ಎಂ. ರಾಮನರಸಯ್ಯನವರದು. ಈ ಹೆಸರು ಕರ್ನಾಟಕದಾದ್ಯಂತ ಮಾತ್ರವಲ್ಲ, ದೇಶ ವಿದೇಶಗಳಲ್ಲೂ ಪರಿಚಿತ. ಮೃದು ಮಾತಿನ, ಸರಳ ಬದುಕಿನ, ಸಜ್ಜನಿಕೆಯ ವ್ಯಕ್ತಿ ರಾಮನರಸಯ್ಯನವರು. ಇವರು ಪ್ರಸ್ತುತ ಎಂಪತ್ತೆಂಟರ ಇಳಿವಯಸ್ಸಿನಲ್ಲೂ ಕಲಾ ಜೀವನ ನಡೆಸುತ್ತಿದ್ದಾರೆ. ಇಂತಹ ಮಹಾನ್ ಕಲಾವಿದರ ಮೊದಲನೆ ಮಗಳಾಗಿ ೦೮/೦೫/೧೯೫೨ರಲ್ಲಿ ತಾಯಿ ಜಯಲಕ್ಷ್ಮೀ ಉದರದಲ್ಲಿ ಮೈಸೂರಿನಲ್ಲಿ ಜನಿಸಿದರು.

ಇಂತಹ ಒಬ್ಬ ಉತ್ತಮ ಕಲಾಪ್ರೇಮಿ, ಪೋಷಕನ ಹೆಸರನ್ನು ಪಡೆದ ರಾಮನರಸಯ್ಯನವರು ಮೊದಲ ಸಲ ಕಣ್ತೆರೆದು ನೋಡಿರುವುದು ಬಹುಷಃ ತಾಯಿಯನ್ನು ಮತ್ತು ಕಲಾಕೃತಿಗಳನ್ನೇ ಇರಬೇಕು. ಈ ಪರಿಸರದಲ್ಲಿ ಹುಟ್ಟಿದ ಎಳೆಯ ರಾಮನರಸಯ್ಯನವರಿಗೆ ಕಲೆ, ಬದುಕಿನ ಒಂದು ಅವಿಭಾಜ್ಯ ಅಂಗವಾಗಿ ಅಂಟಿಕೊಂಡಿರುವುದು ಸಹಜ. ಇವರು ತನ್ನ ತಾತನಂತೆ ಒಬ್ಬ ಕಲಾಪ್ರೇಮಿಯಾಗಿ, ಒಬ್ಬ ಕಲಾಪೋಷಕನಾಗಿ ಉಳಿಯದೆ ತಾನು ಚಿತ್ರಕಾರರ ವಂಶದಿಂದ ಬರದಿದ್ದರೂ ತನ್ನನ್ನು ತಾನು ಚಿತ್ರಕಲೆಯಲ್ಲಿ ತೊಡಗಿಸಿಕೊಂಡ ಒಬ್ಬ ಮಹಾನ್ ಕಲಾವಿದನ ಮೊದಲ ಮಗಳಾಗಿ ಸುಧಾ ಅವರು ಮೂಲತಃ ಚಿತ್ರಕಲೆಯನ್ನು ಅಭ್ಯಸಿಸಿದವರಲ್ಲ. ಸುಧಾ ಅವರು ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಬಿ. ಎ. ಪದವಿಯನ್ನು ಪಡೆದವರು. ಸುಧಾ ಅವರೆ ಹೇಳುವಂತೆ,

ನಮ್ಮ ತಂದೆ ಎಂ. ರಾಮನರಸಯ್ಯನವರಿಗೆ ಇದ್ದಂತೆ ಅರಮನೆ ಸಂಪರ್ಕ ಶ್ರೀಮನ್ಮಹಾರಾಜ ಜಯಚಾಮರಾಜ ಒಡೆಯರವರ ಆಶ್ರಯ, ಆಗಾಗ್ಗೆ ಅವರೊಡನೆ ಭೇಟಿ, ಮತ್ತು ಮಹಾರಾಜರಿಗೆ ಅರಮನೆಗೆ ಬೇಕಾದಂತಹ ಚಿತ್ರಪಟಗಳನ್ನು ಬರೆಸಿಕೊಳ್ಳುವ ಹವ್ಯಾಸ ಇವೆಲ್ಲದರ ಪ್ರಭಾವದಿಂದ ಈ ಗಂಜೀಫಾ ಎಲೆಗಳು ರಾಜಮನೆತನದಿಂದ ನೇರವಾಗಿ ನಮ್ಮ ಸಂಪರ್ಕಕ್ಕೆ ಬಂದಿದ್ದವು. ಆ ಎಲೆಗಳ ಮೇಲಿದ್ದಂತಹ ಸುಂದರವಾದ ಸಣ್ಣ ಸಣ್ಣ ಚಿತ್ರಗಳು ಬಹಳ ಆಕರ್ಷಕವಾಗಿದ್ದವು ಆದ್ದರಿಂದ ಈ ಚಿತ್ರಗಳನ್ನು ರೇಖಿಸಲು ನನಗೆ ಬಹಳ ಉತ್ತೇಜನಕಾರಿಯಾಯಿತು.

ನಮ್ಮ ದೇಶದ ಗಂಜೀಫಾ ಎಲೆಗಳ ಸಂಗ್ರಹಕಾರರಲ್ಲಿ ಒಬ್ಬರಾದ ಹೆಸರಾಂತ ಕಲಾಪೋಷಕ ಶ್ರೀಯುತ ಕಿಶೋರ ಗೋವರ್ಧನದಾಸ್ ರವರು ಮೈಸೂರಿಗೆ ಭೇಟಿ ನೀಡಿ ಸಾಂಪ್ರದಾಯಿಕ ಮೈಸೂರ ಗಂಜೀಫಾ ಎಲೆಗಳ ಚಿತ್ರಣ ಮಾಡಿಕೊಡಲು ನಮ್ಮ ತಂದೆಯವರನ್ನು ಕೇಳಿಕೊಂಡರು. ಆಗ ನಮ್ಮ

ತಂದೆಯವರು ಈ ಕೆಲಸವನ್ನು ನನಗೆ ವಹಿಸಿ ಅವರ ಪರಿಚಯ ಮಾಡಿಕೊಟ್ಟರು. ಹೀಗೆ ನನಗೆ ಗಂಜೀಫಾ ಎಲೆಗಳ ಮೇಲೆ ಚಿತ್ರಗಳನ್ನು ಮಾಡುವ ವೃತ್ತಿ ಮತ್ತಷ್ಟು ಬೆಳವಣಿಗೆಗೆ ಕಾರಣವಾಯಿತು. ಶ್ರೀ ಕಿಶೋರ ಗೋವರ್ಧನ ದಾಸರವರಿಗೆ ದೇಶದಾದ್ಯಂತ ಇರುವ ಗಂಜೀಫಾ ಎಲೆಗಳನ್ನು ಆಯಾ ಪ್ರಾಂತದ ಚಿತ್ರಗಾರರ ಕೈಯಲ್ಲಿ ಚಿತ್ರಿಸಿಕೊಳ್ಳುವುದು ಅವರ ವೈಶಿಷ್ಟ್ಯ. ಹೀಗಾಗಿ ನಾನು ಅವರಿಗೆ ಅನೇಕ ಗಂಜೀಫಾ ಎಲೆಗಳ ಕಟ್ಟುಗಳನ್ನು ಮಾಡಿಕೊಟ್ಟಿದ್ದೇನೆ.

ಹದಿನೇಳನೇ ಶತಮಾನದ ಗಂಜೀಫಾ ಚಿತ್ರಕಲೆಯನ್ನು ಆಗಿನ ಶ್ರೀಮನ್ ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರವರು ಸ್ವತಃ ತಾವೇ ಸೃಷ್ಟಿಸಿ ಚಿತ್ರಗಾರರಲ್ಲಿ ಬರೆಯಿಸಿ ಮಾಡಿರುವ ಅನೇಕ ಗಂಜೀಫಾ ಎಲೆಗಳು ಪರಕೀಯರ ಪಾಲಾಗಿವೆ. ನನ್ನ ಮಾಹಿತಿ ಪ್ರಕಾರ ನಮಗೆ ಸಿಕ್ಕಿರುವದು ಕೇವಲ ಹದಿನೆಂಟು ಕಟ್ಟುಗಳು. ಅದರಲ್ಲಿ ಹದಿಮೂರು ಕಟ್ಟುಗಳ ಎಲೆಗಳು ಮ್ಯೂಜಿಯಂಗಳಲ್ಲಿ, ಕಲಾ ಪೋಷಕರ ಮನೆಗಳಲ್ಲಿ ಸಂಗ್ರಹವಾಗಿವೆ. ಆ ಹದಿಮೂರು ಕಟ್ಟುಗಳಲ್ಲಿ ಏಳೆಂಟು ಗಂಜೀಫಾ ಕಟ್ಟುಗಳ ಎಲೆಗಳನ್ನು ನಾನು ಈಗಾಗಲೇ ಪೂರ್ಣಗೊಳಿಸಿರುತ್ತೇನೆ. ಇನ್ನುಳಿದ ಐದು ಆರು ಕಟ್ಟುಗಳ ಗಂಜೀಫಾ ಎಲೆಗಳ ಕಟ್ಟನ್ನು ಸಂಪೂರ್ಣಗೊಳಿಸುವ ಯೋಜನೆ ಇದೆ ಎಂದು ಶ್ರೀಮತಿ ಸುಧಾ ವೆಂಕಟೇಶ ಅವರು ತಿಳಿಸುತ್ತಾರೆ, ಅವರು ರಚಿಸಿದ ಕೆಲವು ಗಂಜೀಫಾ ಎಲೆಗಳ ಸೂಟಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ :

೦೧. ನವಿನರಾಮ್ ಛದ್	೦೨. ಕೃಷ್ಣರಾಜ ಛದ್
೦೩. ನವಗ್ರಹ ಗಂಜೀಫಾ	೦೪. ದಶಾವತಾರ ಗಂಜೀಫಾ
೦೫. ಚಾಮುಂಡೇಶ್ವರಿ ಗಂಜೀಫಾ	೦೬. ಕಲ್ಯಾಣ ಗಂಜೀಫಾ


೦೧. ನವಿನರಾಮ್ ಛದ್


ಸುಧಾ ಅವರು ರಚಿಸಿದ ಈ ಛದ್‌ನಲ್ಲಿ ಒಟ್ಟು ಮೂವತ್ತಾರು ಎಲೆಗಳು, ನಾಲ್ಕು ಜಾಕಿ, (ಹಸಿರು, ಕೆಂಪು, ಹಳದಿ, ಕಪ್ಪು) ಒಂದು ಜಾಕಿಯಲ್ಲಿ ಒಂಭತ್ತು ಎಲೆಗಳು, ಇದರಲ್ಲಿ ರಾಜ, ರಾಣಿ, ಸೇನಾಧಿಪತಿಗಳಾಗಿ, ರಾಮ, ಸೀತೆ, ಹನುಮಂತ, ಸುಗ್ರೀವ, ಲಕ್ಷ್ಮಣ, ಭರತ ಇವರು ಒಂದು, ರಾಮನ ಆಯುಧಗಳಾದ ಬಿಲ್ಲು, ಬಾಣ, ಛತ್ರಿ ಮತ್ತು ಚಾಮರಗಳು, ಏಣಿ, ಎಲೆಗಳಾಗಿರುತ್ತವೆ. ಈ ಎಲೆಗಳು ಹದಿನೆಂಟನೆಯ ಶತಮಾನದ ಎಲೆಗಳನ್ನೇ ಯಥಾವತ್ತಾಗಿ ಹೋಲುವಂತೆ ಇಂದಿನ ಆಧುನಿಕ ಬಣ್ಣ ಹಾಗೂ ಬ್ರೆಶ್‌ಗಳನ್ನು ಉಪಯೋಗಿಸಿ ಅತ್ಯಂತ ಸುಂದರವಾಗಿ ಪ್ರತಿಕೃತಿ ಮಾಡಿದ್ದಾರೆ. ಇದರ ವಿವರಣೆಯನ್ನು ವಸ್ತುವಿಷಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

೦೨. ಕೃಷ್ಣರಾಜ ಛದ್

ಸುಧಾ ಅವರು ರಚಿಸಿದ ಈ ಛದ್‌ನಲ್ಲಿ ಒಟ್ಟು ಎಪ್ಪತ್ತಾರು ಎಲೆಗಳು ಬರುತ್ತವೆ. ವಿಷ್ಣು, ಕೃಷ್ಣ, ಬ್ರಹ್ಮ, ಶಿವ ಮತ್ತು ಇಂದ್ರ, (ಹಸಿರು, ಕೆಂಪು, ಹಳದಿ, ಕಪ್ಪು) ನಾಲ್ಕು ವರ್ಣಗಳಲ್ಲಿ ಕಂಡು ಬರುತ್ತವೆ. ಒಂದು ಜಾಕಿ ಎಲೆಗೆ ಹದಿನೆಂಟು ಎಲೆಗಳು ಬರುತ್ತವೆ. ಇವುಗಳ ಎಣಿಕೆ ಎಲೆಗಳನ್ನು ಹನ್ನೆರಡು


ರಾಮ


ಸೀತಾ


ಲಕ್ಷ್ಮಣ







ಸಾಂಕೇತಿಕ ಚಿತ್ರಗಳು







ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ರಾಶಿಗಳನ್ನು ಬಳಸಿಕೊಂಡು ವೃತ್ತಾಕಾರದಲ್ಲಿ ಹಿಂದಿನ ಎಲೆಗಳನ್ನೇ ಹೋಲುವಂತೆ ಚಿತ್ರಗಳಲ್ಲಿ ನೈಜತೆಯನ್ನು ತಂದಿದ್ದಾರೆ.

೦೩. ನವಗ್ರಹ ಗಂಜೀಫಾ

ಸುಧಾ ಅವರು ರಚಿಸಿದ ಈ ಛದ್‌ನಲ್ಲಿ ಒಂಬತ್ತು ಜನ ನಾಯಕರು, ಒಂಬತ್ತು ಜನ ಪ್ರಧಾನರನ್ನು ವೃತ್ತಾಕಾರದ ಎಲೆಗಳಲ್ಲಿ ಚಿತ್ರಿಸಿದ್ದಾರೆ. ಅವುಗಳಲ್ಲಿ ಸೂರ್ಯ, ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಶನಿ, ರಾಹು, ಕೇತುಗಳನ್ನು ೧೨ ರಾಶಿಗಳ ಚಿಹ್ನೆಯಡಿ ಚಿತ್ರಗಳನ್ನು ಸಂಯೋಜಿಸಿ ಭಾವನಿರೂಪಣೆಯಿಂದ ಚಿತ್ರಿಸಿದ್ದಾರೆ.

೦೪. ದಶಾವತಾರ ಗಂಜೀಫಾ

ಸುಧಾ ವೆಂಕಟೇಶ ಅವರು ರಚಿಸಿದ ಈ ಛದ್‌ನಲ್ಲಿ ದಶಾವತಾರದ ಹತ್ತು ಸೂಟಗಳನ್ನು ಚಿತ್ರಿಸಿದ್ದಾರೆ. ಮತ್ಸ್ಯ ಅವತಾರದಲ್ಲಿ ಮತ್ಸ್ಯರಾಜನನ್ನು ಮತ್ತು ರಾಣಿಯನ್ನು ಪ್ರಧಾನವಾಗಿ ಚಿತ್ರಿಸಿ, ರಾಜನನ್ನು ಸಿಂಹಾಸನದ ಮೇಲೆ ಕುಳಿತಿರುವ ಹಾಗೂ ರಾಣಿಯು ಅಶ್ವವನ್ನೇರಿ ಕುಳಿತಿರುವ ಭಂಗಿಯಲ್ಲಿ ಚಿತ್ರಿಸಿ ಹತ್ತು ವೃತ್ತಾಕಾರದ ಒಂದೊಂದು ಎಲೆಯಲ್ಲಿ ಅಂದರೆ ಒಂದನೇ ಎಲೆಯಲ್ಲಿ ಒಂದು ಮೀನು, ಎರಡನೆ ಎಲೆಯಲ್ಲಿ ಎರಡು ಮೀನು, ಹೀಗೆ ಹತ್ತನೆಯ ಎಲೆಯಲ್ಲಿ ಹತ್ತು ಮೀನುಗಳ ಸೂಕ್ಷ್ಮವಾದ ಚಿತ್ರಗಳನ್ನು ಕಾಣಬಹುದು. ಹೀಗೆ ಹತ್ತು ಅವತಾರಗಳಲ್ಲಿ ರಾಜ ಮತ್ತು ರಾಣಿಯನ್ನು ಪ್ರಧಾನವಾಗಿಟ್ಟುಕೊಂಡು ಉಳಿದ ಹತ್ತು ವೃತ್ತಾಕಾರದ ಎಲೆಗಳಲ್ಲಿ ಅವುಗಳಿಗೆ ಸಂಬಂಧಪಟ್ಟ ಚಿಹ್ನೆಗಳನ್ನು ಯಥೇಚ್ಛವಾಗಿ ಬಳಸಿದ ಕಲಾತ್ಮಕವಾದ ಕ್ರಮಬದ್ಧ ಜೋಡಣೆಯು ವಿಶಿಷ್ಟವಾಗಿ ಮೂಡಿ ಬಂದಿದೆ.

ಈ ಹತ್ತು ಚಿತ್ರಗಳ ಒಂದಕ್ಕೆ ಹನ್ನೆರಡು ಎಲೆಗಳ ಚಿತ್ರಗಳು. ಒಂದೇ ವರ್ಣಪದ್ಧತಿಯನ್ನು ಹಾಗೂ ಅಂಚುಗಳ ವಿನ್ಯಾಸ, ರೇಖಾ ವಿನ್ಯಾಸವನ್ನು ಒಂದೇ ರೀತಿಯಲ್ಲಿ ಅನುಸರಿಸಲಾಗಿದೆ. ಈ ಹತ್ತು ಅವತಾರಗಳ ಕುರಿತು ಅಧ್ಯಾಯ ನಾಲ್ಕರಲ್ಲಿ ವಿವರಿಸಲಾಗಿದೆ.

೦೫. ಚಾಮುಂಡೇಶ್ವರಿ ಗಂಜೀಫಾ

ಸುಧಾ ವೆಂಕಟೇಶ ಅವರು ಈ ಸೂಟನ್ನು ವೃತ್ತಾಕಾರದ ಎಲೆಗಳಲ್ಲಿ ಚಿತ್ರಿಸಿದ್ದಾರೆ. ಚಾಮುಂಡೇಶ್ವರಿಯಲ್ಲಿ ಒಟ್ಟು ೩೬೦ ಎಲೆಗಳು ಬರುತ್ತವೆ. ಇದರಲ್ಲಿ ೧೬೬ ಜನ ನಾಯಕ-ನಾಯಕಿಯರುಗಳು, ಒಬ್ಬರಿಗೆ ಹದಿನೆಂಟು ಎಲೆಗಳು, ಆಯಾದೇವತೆಗಳನ್ನು ಗ್ರಹಗಳ ಚಿಹ್ನೆಯಿಂದ ಚಿತ್ರಿಸಿದ್ದಾರೆ. ಇಪ್ಪತ್ತೈದು ಚಕ್ರವರ್ತಿ ಎಲೆಗಳು, ಏಳು ಹಂಸ ಪತ್ರಗಳು, ಇದರಲ್ಲಿ ಚಂಡಿಕೆಯು ಪ್ರಧಾನ. ಇಲ್ಲಿ ಪ್ರಧಾನವಾಗಿ ಚಾಮುಂಡೇಶ್ವರಿ, ವಿಷ್ಣು, ಈಶ್ವರ, ಬ್ರಹ್ಮ, ಗಣಪತಿ, ಸ್ಕಂದ, ವೀರಭದ್ರ, ರಾಮ, ಕೃಷ್ಣ, ಶೇಷ, ಇಂದ್ರ, ರವಿ, ಹಿಮಾಲಯ, ಸಮುದ್ರರಾಜ, ಮನ್ಮಥ ಮತ್ತು ಮೋಹಿನಿಯರನ್ನು ಪ್ರಧಾನವಾಗಿಟ್ಟುಕೊಂಡು ರಾಜ, ಧ್ವಜ, ಯೋಧ, ಪದಾತಿ, ಮೇಷ, ವೃಷಭ, ಮಿಥುನ, ಕಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಂಭ, ಮೀನ, ರಾಶಿಗಳನ್ನು ಬಳಸಿ ಹದಿನೆಂಟು ಎಲೆಗಳನ್ನು ವೃತ್ತಾಕಾರದಲ್ಲಿ ಒಂದೇ ವರ್ಣಪದ್ಧತಿ ಹಾಗೂ ಅಂಚುಗಳ ಚಿತ್ರವಿನ್ಯಾಸ, ರೇಖಾವಿನ್ಯಾಸವನ್ನು ಒಂದೇ ರೀತಿಯಲ್ಲಿ ಅನುಸರಿಸಲಾಗಿದೆ.



ರಾಜ



ಧ್ವಜ



ರಥ



ಯೋಧ











ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

೦೬. ಕಲ್ಯಾಣ ಗಂಜೀಫಾ

ಸುಧಾ ವೆಂಕಟೇಶ ಅವರು ರಚಿಸಿದ ಈ ಛದ್‌ನಲ್ಲಿ ಐವತ್ತನಾಲ್ಕು ಎಲೆಗಳು ಇರುತ್ತವೆ. ಈ ಸೂಟಿನಲ್ಲಿ ರಾಜ, ರಾಣಿ, ಜೋಡಿ, ಪದಾತಿ, ಮುಖ್ಯ ಗಂಜೀಫಾ ಎಲೆಗಳಾಗಿವೆ. ಇನ್ನುಳಿದಂತೆ ನಾಲ್ಕು ಚೌಕಾಕಾರದ ಎಲೆಗಳಲ್ಲಿ ನೃತ್ಯಭಂಗಿಯಲ್ಲಿರುವ ಲತಾಮೋಹಿನಿಯರನ್ನು ಸಂಯೋಜಿಸಿದ್ದಾರೆ. ಎಲ್ಲಾ ಗಂಜೀಫಾ ಎಲೆಗಳು ಚೌಕಾಕಾರದಲ್ಲಿದ್ದು ಷಡ್ಭುಜಾಕೃತಿ ಚೌಕದಲ್ಲಿ ಈ ಸ್ತ್ರೀಯರನ್ನು ರಚಿಸಿದ್ದಾರೆ. ಆಕೃತಿಗಳಿಗೆ ಹಳದಿ, ಹಸಿರು, ಕೆಂಪು, ಕಪ್ಪು ಕಂದುಗೆಂಪು ಬಣ್ಣಗಳನ್ನು ಸಂಯೋಜಿಸಿ ನೆರಳು ಬೆಳಕಿನ ಛಾಯೆಯನ್ನು ತರಲಾಗಿದೆ. ಈ ಆಕೃತಿಗಳಲ್ಲಿ ಭಾವಭಂಗಿ, ಉಡುಗೆ ತೊಡುಗೆಗಳ ಕೌಶಲತೆ ಹಾಗೂ ಆಭರಣಗಳ ಸಂಯೋಜನೆಯು ಅಲಂಕಾರಪ್ರಜ್ಞೆಯನ್ನು ಪ್ರತಿಬಿಂಬಿಸುತ್ತವೆ. ಈ ಗಂಜೀಫಾ ಎಲೆಗಳು ಸಾಂಕೇತಿಕ ಆಟದ ಎಲೆಗಳಾಗಿದ್ದು ಚಿತ್ರಪ್ರಜ್ಞೆಯಿಂದ ಕೂಡಿವೆ.

ಸುಧಾ ವೆಂಕಟೇಶ ಅವರು ಹಿಂದಿನ ಸಾಂಪ್ರದಾಯಿಕ ಶೈಲಿಯ ಗಂಜೀಫಾ ಗಳಲ್ಲದೆ ಇಂದಿನ ಆಧುನಿಕತೆಯ ಅನೇಕ ಗಂಜೀಫಾಗಳನ್ನು ತಮ್ಮ ಶೈಲಿಯಲ್ಲಿ ಶೋಧಿಸಿದ್ದಾರೆ. ಅವುಗಳೆಂದರೆ

೦೧. ರಾಮನ ಪಟ್ಟಾಭಿಷೇಕ

೦೨. ಸಂಪೂರ್ಣ ರಾಮಾಯಣ

೦೩. ಭಗವಾನ್ ಮಹಾವೀರನ ಪೂರ್ಣ ಚರಿತ್ರೆ

೦೪. ಸ್ವಾತಂತ್ರ್ಯ ಸಂಗ್ರಾಮ

೦೧. ರಾಮನ ಪಟ್ಟಾಬಿಷೇಕ

ಈ ಚಿತ್ರದಲ್ಲಿ ರಾಮ, ಸೀತಾ, ಲಕ್ಷ್ಮಣರ ಜೊತೆ ವನವಾಸದಲ್ಲಿ ನಡೆದ ಘಟನೆಯ ಸಂಪೂರ್ಣ ಚಿತ್ರಗಳನ್ನು ಚೌಕಾಕಾರದ ಎಲೆಗಳಲ್ಲಿ ಚಿತ್ರಿಸಿದ್ದಾರೆ. ಒಂದು ಚೌಕಾಕಾರದ ಎಲೆಯಲ್ಲಿ ಎರಡು ಕೃತಿಗಳಿಂದ ಹಿಡಿದು ಹದಿನೆಂಟು ಕೃತಿಗಳವರೆಗೂ ಚಿತ್ರಗಳನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಆಕೃತಿಗಳಲ್ಲಿ ಸ್ಪಷ್ಟವಾದ ಚಿತ್ರಗಳು, ಸ್ಪಷ್ಟವಾದ ರೇಖಾವಿನ್ಯಾಸ, ವರ್ಣಸಂಯೋಜನೆ ಪ್ರಬುದ್ಧವಾಗಿ ಮೂಡಿಬಂದಿವೆ. ಹಿನ್ನೆಲೆಯಲ್ಲಿ ಕಪ್ಪು ವರ್ಣದ ಲೇಪನವಿದೆ. ಆಕೃತಿಗಳಿಗೆ ಶ್ವೇತವರ್ಣದ ಲೇಪನವಿದೆ. ಇಲ್ಲಿ ಜಟಾಯುವನ್ನು ರಾವಣ ಸಂಹರಿಸುವ, ಹನುಮಂತ ಸೀತೆಗೆ ರಾಮನ ಮುದ್ರಿಕೆಯನ್ನು ನೀಡುತ್ತಿರುವುದು, ಹನುಮಂತ ಸಂಜೀವಿನಿ ಪರ್ವತ ತರುತ್ತಿರುವುದು, ರಾವಣನ ಸಾವು, ರಾಮನ ಪಟ್ಟಾಭಿಷೇಕ ಬಹಳ ಶ್ರೇಷ್ಠ ಮಟ್ಟದ ಕಲಾಕೃತಿಗಳಾಗಿವೆ. ರಾಮನ ಪಟ್ಟಾಭಿಷೇಕದ ಬಗ್ಗೆ ಮೂವತ್ತಮೂರು ಚೌಕಾಕಾರದ ಎಲೆಗಳಲ್ಲಿ ಸೂಕ್ಷ್ಮ ಚಿತ್ರಗಳನ್ನು ರಚಿಸಿದ್ದಾರೆ.

೦೨. ಸಂಪೂರ್ಣ ರಾಮಾಯಣ

ಸುಧಾ ವೆಂಕಟೇಶ ಅವರು ರಾಮನ ಪಟ್ಟಾಭಿಷೇಕವಲ್ಲದೆ ಸಂಪೂರ್ಣ ರಾಮಾಯಣದ ನಲವತ್ತೆಂಟು ದೃಶ್ಯವನ್ನು ವೃತ್ತಾಕಾರದ ಎಲೆಗಳಲ್ಲಿ ಚಿತ್ರಿಸಿದ್ದಾರೆ. ನಾಲ್ಕು ಇಂಚು ವೃತ್ತಾಕಾರದ ಒಂದು ಎಲೆಯಲ್ಲಿ ಎರಡರಿಂದ ಆರು ಆಕೃತಿಗಳವರೆಗೆ ಚಿತ್ರಗಳನ್ನು ರಚಿಸಿ ಸಂಪೂರ್ಣ ರಾಮಾಯಣದ ದೃಶ್ಯಗಳನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಆಕೃತಿಗಳಲ್ಲಿ ಸ್ಪಷ್ಟವಾದ ರೇಖೆ, ವರ್ಣಸಂಯೋಜನೆ, ಮೂಲ



ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು

ಬಣ್ಣಗಳ ಹೊಂದಾಣಿಕೆಯನ್ನು ಮಾಡಿದ್ದಾರೆ. ಈ ಎಲ್ಲ ಗಂಜೀಫಾ ಚಿತ್ರಗಳು ಹದಿನೇಳು, ಹದಿನೆಂಟನೆಯ ಶತಮಾನದ ಗಂಜೀಫಾಗಳನ್ನೇ ಹೋಲುವಂತಿವೆ.

೦೩. ಭಗವಾನ್ ಮಹಾವೀರನ ಪೂರ್ಣ ಚರಿತ್ರೆ

ಬಗವಾನ ಮಹಾವೀರ ಚರಿತ್ರೆಯನ್ನು ಕಥಾರೂಪದಲ್ಲಿ ಇಪ್ಪತ್ತೊಂದು ಚೌಕಾಕಾರದ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ. ಇವುಗಳ ಹಿನ್ನೆಲೆಯಲ್ಲಿ ಕಪ್ಪುವರ್ಣವನ್ನು ಬಳಸಿ, ಭಗವಾನ್ ಮಹಾವೀರನಿಗೆ ಶ್ವೇತವರ್ಣವನ್ನು ಲೇಪಿಸಿ, ಸೂಕ್ಷ್ಮವಾದ ರೇಖಾವಿನ್ಯಾಸ, ವರ್ಣವಿನ್ಯಾಸಗಳಿಂದ ಚಿತ್ರಿಸಿದ್ದಾರೆ.

೦೪. ಸ್ವಾತಂತ್ರ್ಯ ಸಂಗ್ರಾಮ

ಭಾರತಕ್ಕೆ ಸ್ವಾತಂತ್ರ ತಂದು ಕೊಟ್ಟ ಗಾಂಧೀಜಿ, ಸುಭಾಸಚಂದ್ರ ಭೋಸ್, ಭಗತ್ ಸಿಂಗ್, ವಲ್ಲಭಭಾಯಿ ಪಟೇಲ ಹಾಗೂ ಗಾಂಧೀಜಿ ಹೋರಾಟದಿಂದ ಹಿಡಿದು ಗಾಂಧೀಜಿ ಹತ್ಯೆಯವರೆಗೆ ಹಾಗೂ ಸ್ವಾತಂತ್ರ್ಯ ಸಿಕ್ಕ ಸಂದರ್ಭದಲ್ಲಿ ಧ್ವಜಾರೋಹಣ ಮಾಡುತ್ತಿರುವ ದೃಶ್ಯ ಹೀಗೆ ನಲವತ್ತೆಂಟು ದೃಶ್ಯಗಳನ್ನು ನಾಲ್ಕು ಇಂಚು ವೃತ್ತಾಕಾರದ ಎಲೆಗಳಲ್ಲಿ ಚಿತ್ರಿಸಿದ್ದಾರೆ.

ಒಟ್ಟಾರೆ ಈ ಅಪೂರ್ವವಾದ ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮ ಎಂಬ ಚಿತ್ರಕಥಾ ಮಾದರಿಯಲ್ಲಿ ವೃತ್ತಾಕಾರದ ಗಂಜೀಫಾ ಎಲೆಗಳ ಮಾದರಿಯನ್ನು ಅನುಸರಿಸಿದ್ದಾರೆ. ಇದರಲ್ಲಿ ನಲವತ್ತೆಂಟು ಎಲೆಗಳಿದ್ದು ಮಧ್ಯದಲ್ಲಿ ಭಾರತಾಂಬೆ ಚಿತ್ರವನ್ನು ಸುಂದರವಾಗಿ ಚಿತ್ರಿಸಿ ಸುತ್ತಲೂ ಸ್ವಾತಂತ್ರ್ಯ ಯೋಧರನ್ನು ಚಿತ್ರಿಸಿದ್ದಾರೆ. ಇನ್ನುಳಿದ ಚಿತ್ರಗಳಲ್ಲಿ ನಮ್ಮ ದೇಶಕ್ಕೆ ದಾಳಿ ಇಟ್ಟವರು, ದಾಳಿಯನ್ನು ಎದುರಿಸುತ್ತಿರುವ ವೀರ ಹೋರಾಟಗಾರರು, ಅನೇಕ ತರಹದ ದಂಗೆ ಅಸಹಕಾರ ಚಳುವಳಿ, ಉಪವಾಸ ಸತ್ಯಾಗ್ರಹಗಳು, ರಾಷ್ಟ್ರ ಪಿತಾಮಹರು, ಅವರು ಎದುರಿಸಿದ ಕಷ್ಟಗಳ ಚಿತ್ರಣಗಳು ಸಂಕ್ಷಿಪ್ತವಾಗಿ ಈ ಚಿತ್ರಗಳಲ್ಲಿ ಮೂಡಿಬಂದಿವೆ. ಸುಧಾ ವೆಂಕಟೇಶ ಅವರು ಇದಲ್ಲದೆ ಮೂವತ್ತಾರು ಬಹುರೂಪಿ ಗಣಪ, ಮೂವತ್ತಾರು ಶ್ರೀನಿವಾಸ ಕಲ್ಯಾಣ ಹೀಗೆ ಹಲವಾರು ಗಂಜೀಫಾ ಚಿತ್ರಗಳನ್ನು ಕಥಾರೂಪದ ಗಂಜೀಫಾ ಶೈಲಿಯಲ್ಲಿ ಚಿತ್ರಿಸಿದ್ದಾರೆ.

ಸುಧಾ ವೆಂಕಟೇಶ ಅವರು ಸಾಂಪ್ರದಾಯಿಕ ಚಿತ್ರಕಲೆಯನ್ನು ನಲವತ್ತು ವರ್ಷಗಳಿಂದ ರೂಢಿಸಿಕೊಂಡು ಬಂದಿದ್ದಾರೆ. ಕರ್ನಾಟಕದಲ್ಲಿ ಹೆಸರುವಾಸಿಯಾದ ಮೈಸೂರು ಶೈಲಿ ಸಾಂಪ್ರದಾಯಕ ಚಿತ್ರಕಲೆ ಎಲ್ಲರಿಗೂ ತಿಳಿದ ವಿಷಯ. ಇದೇ ಮೈಸೂರು ಚಿತ್ರಕಲೆಗಳಲ್ಲಿ ಒಂದಾದ ನಶಿಸಿ ಹೋದಂತ ಗಂಜೀಫಾ ಚಿತ್ರಕಲೆಯಲ್ಲಿ ಸಾಕಷ್ಟು ವಿಷಯಗಳನ್ನು ಸಂಗ್ರಹಿಸಿ ಸ್ವತಃ ಸಾವಿರಾರು ಹಿಂದಿನ ಗಂಜೀಫಾ ಶೈಲಿಯನ್ನೇ ಹೋಲುವಂತೆ ಸಾವಿರಾರು ಗಂಜೀಫಾ ಎಲೆಗಳನ್ನು ಚಿತ್ರಿಸಿದ್ದಾರೆ.

ಸ್ವಯಂ ಪ್ರೇರಣೆಯಿಂದ ನೂರಾರು ಜನ ಮಹಿಳೆಯರಿಗೆ ಗಂಜೀಫಾದ ಮಹತ್ವ ಮತ್ತು ತರಗತಿಗಳ ಮುಖೇನ ತರಬೇತಿ ನೀಡುತ್ತಿದ್ದಾರೆ. ಇದಲ್ಲದೆ ಬೇಸಿಗೆ ಶಿಬಿರಗಳನ್ನು ಹಮ್ಮಿಕೊಂಡು ನೂರಾರು ಮಕ್ಕಳಿಗೆ ತರಬೇತಿ ಮತ್ತು ತಿಳಿವಳಿಕೆಯನ್ನು ನೀಡುತ್ತಾ ಬರುತ್ತಿದ್ದಾರೆ. ಈಗಾಗಲೇ ಅನೇಕ ಮಹಿಳೆಯರು ತಮ್ಮ ಸ್ವಂತ ಇಚ್ಛೆಯಿಂದ ಸುಧಾ ಅವರ ಬಳಿಯಲ್ಲಿ ಕಲಿಯಲು ಬಂದು, ಇದರಲ್ಲಿ ಸಾಕಷ್ಟು ಪರಿಣಿತಿಯನ್ನು ಪಡೆದು ಸ್ವಂತ ಉದ್ಯೋಗವನ್ನು ಪ್ರಾರಂಭಿಸಿದ್ದಾರೆ.



ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು



ಮಹಾವೀರನ ಮೋಕ್ಷ ಚರಿತೆ

ಸಂಗ್ರಹ ;ಸುಧಾ ವೆಂಕಟೇಶ ಅವರ ವಸ್ತು ಸಂಗ್ರಹಾಲಯ ಬೆಂಗಳೂರು



ಮೊಗಲ್ ಶೈಲಿ



ಮೈಸೂರ ಶೈಲಿ

ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು



ಸಂಗ್ರಹ ; ಸುಧಾ ವೆಂಕಟೇಶ ಅವರ ವಸ್ತುಸಂಗ್ರಹಾಲಯ ಬೆಂಗಳೂರು

ಇದಲ್ಲದೆ ಇಂಗ್ಲೆಂಡ್, ಜರ್ಮನಿ, ಪ್ಯಾರಿಸ್, ಇಟಲಿ ಮ್ಯೂಜಿಯಂಗಳಿಗೆ ಕಂಪ್ಲೀಟ್ ಸೇಟ್ ಆಫ್ ಕಾರ್ಡಗಳನ್ನು (ಹಳೆಯ ಗಂಜೀಫಾ ಕಾರ್ಡುಗಳಿಗೆ ಸರಿ ಹೊಂದುವಂತೆ) ಗಂಜೀಫಾ ಕಾರ್ಡಗಳನ್ನು ಮಾಡಿ ಕೊಟ್ಟಿದ್ದಾರೆ. ಅಳಿದು ಹೋಗಿರುವ ಗಂಜೀಫಾ ಚಿತ್ರಕಲೆಯ ಉಳಿವಿಗೆ ಮತ್ತು ಅದರ ಪರಿಪೂರ್ಣ ಚಿತ್ರಗಳ ಸಂಶೋಧನೆಯಲ್ಲಿ ತೊಡಗಿರುವ ಇವರಿಗೆ ಅನೇಕ ರಾಜ್ಯ ಹಾಗೂ ರಾಷ್ಟ್ರೀಯ ಪುರಸ್ಕಾರಗಳು ದೊರೆತಿವೆ.

ಪುರಸ್ಕಾರಗಳು

೦೧. ರಾಷ್ಟ್ರೀಯ ಪುರಸ್ಕಾರ ೨೦೦೮ ಡಿಸೆಂಬರ್ ೫ (ನವದೆಹಲಿ)

೦೨. ೧೯೯೪ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ

೦೩. ೧೯೯೩ರಲ್ಲಿ ದಸರಾ ವಸ್ತು ಪ್ರದರ್ಶನ ಪ್ರಶಸ್ತಿ

೦೪. ೧೯೯೫ರಲ್ಲಿ ರಾಷ್ಟ್ರೀಯ ಮೆರಿಟ್ ಸರ್ಟಿಫಿಕೇಟ್

೦೫. ೧೯೯೮ರಲ್ಲಿ ಅಪ್ರೈಸ್ ಸಿಫ್ ತರಬೇತಿ ಸ್ಕೀಮ್ (ಗಂಜೀಫಾ ಚಿತ್ರಕಲೆ ಅಭಿವೃದ್ಧಿಗೆ)

೦೬. ೨೦೧೧ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪುರಸ್ಕಾರ

ಶ್ರೀಮತಿ ಸುಧಾ ವೆಂಕಟೇಶ ಅವರು ಗಂಜೀಫಾ ಚಿತ್ರಕಲೆ ಅಷ್ಟೆ ಅಲ್ಲದೆ ಮೈಸೂರು ಸಾಂಪ್ರದಾಯಿಕ ಶೈಲಿ ಹಾಗೂ ತಂಜಾವೂರು ಸಾಂಪ್ರದಾಯಿಕ ಶೈಲಿಗಳೆರಡರಲ್ಲೂ ಪ್ರಭುತ್ವವನ್ನು ಪಡೆದಿದ್ದು ತಾವು ತಿಳಿದಿರುವುದನ್ನು ತಮ್ಮ ವಿದ್ಯಾರ್ಥಿಗಳಿಗೆ ಹೇಳಿ ಕೊಡುತ್ತಾ ಮೈಸೂರು ಸಾಂಪ್ರದಾಯಿಕ ಹಾಗೂ ಗಂಜೀಫಾ ಚಿತ್ರಕಲೆಯ ಸರ್ವತೋಮುಖ ಅಭಿವೃದ್ಧಿಗೆ ದುಡಿಯುತ್ತಿದ್ದಾರೆ.


೨. ಶ್ರೀಮತಿ ಚಂದ್ರಿಕಾ ಪದ್ಮನಾಭನ್, ಗಂಜೀಫಾ ಚಿತ್ರಕಲಾವಿದೆ


ಶ್ರೀಮತಿ ಚಂದ್ರಿಕಾ ಪದ್ಮನಾಭನ್ ಅವರು ಶ್ರೀಮತಿ ಸುಧಾ ವೆಂಕಟೇಶ ಅವರ ಸಹೋದರಿ. ಚಂದ್ರಿಕಾ ಅವರು ೧೯೬೧ ಜೂನ್ ಹದಿನೇಳರಂದು ಕಲಾವಿದ ಎಂ. ರಾಮನರಸಯ್ಯ ಹಾಗೂ ಜಯಲಕ್ಷ್ಮೀ ಉದರದಲ್ಲಿ ಮೈಸೂರಿನಲ್ಲಿ ಜನಿಸಿದ್ದರು. ಇವರ ತಂದೆ ಅರಮನೆಯ ಚಿತ್ರಕಲಾವಿದರಾಗಿದ್ದರಿಂದ ಚಿತ್ರಕಲೆ ಇವರನ್ನು ಆಕರ್ಷಿಸಿದ್ದು ಸಹಜ. ಬಾಲ್ಯದಲ್ಲಿಯೇ ತಂದೆಯೊಂದಿಗೆ ಚಿತ್ರಕಲಾಕೃತಿ ರಚನೆಯಲ್ಲಿ ಸಹಾಯಕರಾಗಿ ಅವರಿಗೆ ಸಹಕರಿಸುತ್ತ ಮುಂದೆ ಇವರ ಮನಸ್ಸು ಚಿತ್ರಕಲೆಯತ್ತ ವಾಲಿದೆ. ಚಂದ್ರಿಕಾ ಅವರು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ೧೯೮೨-೮೩ರಲ್ಲಿ ಬಿ.ಎ ಪದವಿ ಪಡೆದು ನಂತರ ಚಿತ್ರಕಲೆಯಲ್ಲಿ ಇನ್ನೂ ಹೆಚ್ಚಿ ವ್ಯಾಸಂಗ ಮಾಡುವ ದೃಷ್ಟಿಯಿಂದ ಬೆಂಗಳೂರಿನ ಚಿತ್ರಕಲಾ ಪರಿಷತ್‌ಗೆ ಸೇರಿಕೊಂಡು ೧೯೯೪-೯೫ರಲ್ಲಿ ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್ ಪದವಿಯನ್ನು ಪಡೆದರು.

ಈ ಪದವಿ ಕಲೆಗೆ ಮೂಲ ಪ್ರವೇಶವಾದರೂ ಕಿರು ವಯಸ್ಸಿನಿಂದಲೇ ತಂದೆ ರಾಮನರಸಯ್ಯ ಅವರಿಂದ ಸೂಕ್ಷ್ಮಾತಿಸೂಕ್ಷ್ಮವಾಗಿ ಸಾಂಪ್ರದಾಯಿಕ ಚಿತ್ರಕಲೆಯನ್ನು ಕಲಿತವರು. ಗಂಜೀಫಾದಲ್ಲಿ ಮುಖಭಂಗಿಯ ಸೌಂದರ್ಯ, ಕಾಲುಗಳು, ಕೈಗಳ ರಚನೆಯು ಇವರ ವಿಶೇಷತೆಯಾಗಿದೆ.. ಚಂದ್ರಿಕಾ



ಕಲಾವಿದೆ ಶ್ರೀಮತಿ ಚಂದ್ರಿಕಾ ಪದ್ಮನಾಭನ್







ಸಂಗ್ರಹ ; ಚಂದ್ರಿಕಾ ಪದ್ಮನಾಭನ್ ಅವರ ವಸ್ತುಸಂಗ್ರಹಾಲಯ ಮೈಸೂರು

ಅವರು ತಮ್ಮ ೨೦ನೇ ವಯಸ್ಸಿನಲ್ಲಿ ಮದುವೆಯಾದರು, ಪತಿ ಕೆನರಾ ಬ್ಯಾಂಕ್ ಉದ್ಯೋಗಿ. ಅವರಿಗೂ ಪುರಾತನ ಸಾಂಪ್ರದಾಯಿಕ ಚಿತ್ರಗಳನ್ನು ಸಂಗ್ರಹಿಸುವ ಹವ್ಯಾಸವಿತ್ತು. ಆಗ ಇವರು ನಿರಂತರವಾಗಿ ಅವುಗಳನ್ನು ನೋಡಿ ಐದಾರು ಶೈಲಿಗಳನ್ನು ತಮ್ಮ ಚಿತ್ರಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಮದುವೆಯಾದ ನಂತರ ಕಾವೇರಿ, ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ, ಮತ್ತಿತರ ಸಂಸ್ಥೆಗಳಿಗೆ ಸಾಂಪ್ರದಾಯಿಕ ಚಿತ್ರಗಳನ್ನು ಮಾರಾಟಕ್ಕೆ ಕೊಡುತ್ತಿದ್ದರು. ಇದರಿಂದ ಇವರಿಗೆ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಯಿತು.

ಇವರ ನಲವತ್ತು ವರ್ಷಗಳ ಅನುಭವದಿಂದ ಮೂಡಿಸಿರುವ ಅನೇಕ ಸಾಂಪ್ರದಾಯಿಕ ಚಿತ್ರಗಳಲ್ಲಿ, ಶಂಖದಲ್ಲಿ ರಾಮಾವತಾರ, ಚಕ್ರದಲ್ಲಿ ಕೃಷ್ಣ ಅವತಾರ, ಸಾಕಷ್ಟು ಜನಪ್ರಿಯತೆಗೊಂಡಿವೆ. ಕಲಾಪ್ರಿಯರು ಇವರ ಸಾಂಪ್ರದಾಯಿಕ ಹಾಗೂ ಗಂಜೀಫಾ ಚಿತ್ರಕಲೆ ಕುರಿತು ಒಲವು ತೋರುತ್ತಾರೆ. ಇದಲ್ಲದೆ ಇವರ ದಶರಥ ಮಹಾರಾಜ, ಶ್ರೀನಿವಾಸ ಕಲ್ಯಾಣ, ಅಷ್ಟ ಮಹಿಷ ಕೃಷ್ಣ, ಧರ್ಮರಾಯನ ಪಟ್ಟಾಭಿಷೇಕ, ದಶಾವತಾರದೊಡನೆ ಶ್ರೀರಾಮನ ಪಟ್ಟಾಭಿಷೇಕ ಹೀಗೆ ಪ್ರತಿಮಾಲಕ್ಷಣಗಳಿಗೆ ಅನುಗುಣವಾಗಿ ರಾಮಾಯಣದಲ್ಲಿ ಸೂಚಿಸಿರುವಂತೆ ದೇವ-ದೇವತೆಗಳನ್ನು ರಚಿಸಿದ್ದಾರೆ. ಮಹಾಭಾರತ, ರಾಮಾಯಣ, ಪುರಾಣಗಳ ಕುರಿತು ರಚಿಸುವ ಚಿತ್ರಗಳಲ್ಲಿ ಮೂಲ ಚಿನ್ನದ ಸೊಗಸನ್ನು ತರುವಂತೆ ೨೪ ಕ್ಯಾರೆಟ್‌ನ ಚಿನ್ನದ ಎಸಳನ್ನು ಲೇಪಿಸುವುದು ವಿಶೇಷ. ಆರ್ಯರ ಮುಖಮುದ್ರೆಯನ್ನು ಮೂಡಿಸುವ ಸೊಗಸು ವರ್ಣಾತೀತವಾದುದು. ಸಾಮಾನ್ಯವಾಗಿ ಇವರ ಸಾಂಪ್ರದಾಯಿಕ ಚಿತ್ರಗಳು ೨೦-೨೪, ೨೪-೩೦, ೩೦-೪೦ ಇಂಚುಗಳ ಅಳತೆಯಲ್ಲಿರುತ್ತವೆ. ಇವರ ಕೈಯಿಂದ ಮೂಡುವ ಯಶೋದೆ-ಕೃಷ್ಣ, ಶ್ರೀಲಕ್ಷ್ಮೀ, ದುರ್ಗಾದೇವಿ, ಗೀತೋಪದೇಶ ಮೊದಲಾದವು ಹೆಚ್ಚು ಗಮನ ಸೆಳೆದಿವೆ.

ಚಂದ್ರಿಕಾರವರು ಮೊದಲು ಗಂಜೀಫಾ ಚಿತ್ರರಚನೆಗೆ ಬೇಕಾದ ಎಲೆಗಳನ್ನು ಚೌಕಾಕಾರದಲ್ಲಿ ಸಿದ್ಧಪಡಿಸಿಕೊಂಡು, ಅದರಲ್ಲಿ ಸೂಕ್ಷ್ಮ ರೇಖಾವಿನ್ಯಾಸದಿಂದ ಆಕೃತಿಗಳನ್ನು ರಚಿಸಿ, ನಂತರ ರಾಸಾಯನಿಕ ವರ್ಣಗಳಾದ ಜಲವರ್ಣ ಇದರಲ್ಲಿ ಮುಖ್ಯವಾಗಿ ಪೋಸ್ಟರ್ ವರ್ಣಗಳಿಂದ ಪೂರ್ಣಗೊಳಿಸಲಾಗುತ್ತದೆ. ಪ್ರಸ್ತುತ ಈ ಎಲೆಗಳ ಚಿತ್ರಗಳನ್ನು ಈ ಒಂದು ವರ್ಣಪದ್ಧತಿಯಲ್ಲೇ ರಚನೆ ಮಾಡುತ್ತಿದ್ದಾರೆ. ಇವರು ನೂರಾರು ಚಿತ್ರಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಚಿತ್ರಗಳ ಕುರಿತು ವಿವೇಚನೆ ಮಾಡಲಾಗುತ್ತದೆ.

ಇವರು ಹೆಚ್ಚಾಗಿ ದೇವತೆಗಳ ಚಿತ್ರಗಳನ್ನೆ ಗಂಜೀಫಾ ಎಲೆಗಳಲ್ಲಿ ಸಂಯೋಜಿಸಿದ್ದಾರೆ. ಶೇಷಶಯನ ವಿಷ್ಣು, ಲಕ್ಷ್ಮೀ, ಸೂರ್ಯ, ನಾಟ್ಯಗಣೇಶ, ನಟರಾಜ, ಶ್ರೀರಾಮಚಂದ್ರ, ಬಲರಾಮ, ಗೋವರ್ಧನ ಗಿರಿಧಾರಿಯಾದ ಶ್ರೀಕೃಷ್ಣ, ಚತುರ್ಮುಖ ಹಾಗೂ ಪಂಚಮುಖಿ ಗಣೇಶನ ಚಿತ್ರಗಳು ಈ ಕಲಾವಿದೆಯ ಗಂಜೀಫಾ ಎಲೆಗಳಲ್ಲಿ ಸಂಯೋಜನೆಗೊಂಡಿವೆ. ಇವರ ಗಂಜೀಫಾ ಚಿತ್ರಗಳು ಮೈಸೂರು ಸಾಂಪ್ರದಾಯಿಕ ರಚನಾಪದ್ಧತಿಯನ್ನು ಹೋಲುತ್ತಿದ್ದರೂ ಆಕೃತಿಗಳ ಬಾಹ್ಯರೇಖೆಗಳು ಚಪ್ಪಟೆಯಾದ ವರ್ಣವೈವಿಧ್ಯ, ದುಂಡುತನದ ವರ್ಣಛಾಯೆ, ದೈಹಿಕ ಚಲನೆ, ಭಾವನಿರೂಪಣೆಯು ಸಮಕಾಲೀನತೆಯ ಪ್ರಭಾವದಿಂದ















ಸಂಗ್ರಹ ; ಚಂದ್ರಿಕಾ ಪದ್ಮನಾಭನ್ ಅವರ ವಸ್ತುಸಂಗ್ರಹಾಲಯ ಮೈಸೂರು











ಸಂಗ್ರಹ ; ಚಂದ್ರಿಕಾ ಪದ್ಮನಾಭನ್ ಅವರ ವಸ್ತುಸಂಗ್ರಹಾಲಯ ಮೈಸೂರು

ಅನುಕರಣೆಗೊಂಡಿವೆ. ಇವರ ಕೆಲವು ಚಿತ್ರಗಳಲ್ಲಿ ಅಲ್ಪ ಸ್ವಲ್ಪ ವೈವಿಧ್ಯವನ್ನು ಕಾಣಬಹುದಾಗಿದೆ. ಕೆಲವೊಂದು ಆಕೃತಿಗಳು ನೀಳದೇಹ ರಚನೆ ಹೊಂದಿವೆ. ಅಲಂಕಾರಿಕ ಆಶಯವನ್ನು ಸಹ ಪ್ರತಿನಿಧಿಸುತ್ತವೆ. ಕೆಲವೊಂದು ಚಿತ್ರಗಳಲ್ಲಿ ಕುಬ್ಜದೇಹದ ಜೊತೆಗೆ ದುಂಡುತನ ದೈಹಿಕ ಲಕ್ಷಣಗಳು ಕಂಡು ಬರುತ್ತವೆ. ಈ ಆಕೃತಿಗಳಲ್ಲಿಯೂ ಸಹ ಅಲಂಕರಣದ ಆಶಯವು ಉದ್ದೀಪನಗೊಂಡಿದೆ. ಈ ಕಲಾವಿದರು ಬಣ್ಣಗಳನ್ನು ಸಂಯೋಜಿಸುವ ಪೂರ್ವದಲ್ಲಿನ ರೇಖಾಚಿತ್ರವು ಅತ್ಯಂತ ಸೂಕ್ಷ್ಮತರದಿಂದ ಕೂಡಿರುತ್ತದೆ. ಗಾಢವಾದ ವರ್ಣರೇಖಾವಿನ್ಯಾಸವು ನೋಡಲು ಆನಂದ ಕೊಡುತ್ತದೆ.

ಚಂದ್ರಿಕಾರವರು ದೇವತೆಗಳಿಗೆ ಸಂಬಂಧಿಸಿದ ಹಾಗೂ ಆ ಸಾಂದರ್ಭಿಕ ಸನ್ನಿವೇಶವನ್ನು ಅತ್ಯಂತ ನೈಜರೂಪದಲ್ಲಿ ತರಲು ಪ್ರಯತ್ನಿಸಿದ್ದಾರೆ. ಚಿತ್ರಗಳ ಹಿನ್ನೆಲೆಯೂ ಸಹ ದುಂಡತನ (ಆಯಾಮ) ದಿಂದ ಕೂಡಿದ್ದು, ಜೊತೆಗೆ ಯಥಾದೃಷ್ಟಿರೂಪದಿಂದ ಅನಾವರಣಗೊಂಡಿದೆ. ಗೋವರ್ಧನ ಗಿರಿಧಾರಿಯಾದ ಶ್ರೀಕೃಷ್ಣ ಹಾಗೂ ಮಾಯಾಜಿಂಕೆಯನ್ನು ಬೆನ್ನಟ್ಟಿದ ಶ್ರೀರಾಮಚಂದ್ರನ ಚಿತ್ರಕಲೆಗಳ ಗಂಜೀಫಾ ಎಲೆಗಳಲ್ಲಿ ಆಧುನಿಕ ರಚನಾಕ್ರಮವು ಎದ್ದು ತೋರುತ್ತದೆ. ಈ ಎರಡೂ ಚಿತ್ರಗಳಲ್ಲಿ ಪ್ರಕೃತಿಯ ಸೊಬಗು ಅತ್ಯಂತ ನೈಜರೂಪದಲ್ಲಿ ಮೂಡಿಬಂದಿದೆ. ವರ್ಣಸಂಯೋಜನೆ, ಯಥಾದೃಷ್ಟಿ, ದುಂಡುತನ, ಬೆಳಕು, ನೆರಳುಗಳ ಏರಿಳಿತ, ಹಸಿರು ವನಸಿರಿ ಹಾಗೂ ಮೇಘಗಳ ಚಲನೆ, ಪರ್ವತಗಳ ಸಾಲು, ಸರೋವರದ ಕಲ್ಪನೆ, ಸಮಯ ಸಂದರ್ಭಗಳು ಅತ್ಯಂತ ನೈಜವಾಗಿ ಬಿಂಬಿತವಾಗಿವೆ. ಅದೇ ರೀತಿ ಆಕೃತಿಗಳಲ್ಲಿ ರೇಖೆಗಳ ಚಲನೆ, ಆಭರಣಗಳ ಸಂಯೋಜನೆ, ಉಡುಗೆ ತೊಡುಗೆಗಳ ಸಂಯೋಜನೆ, ಸಂಕೇತಾಯುಧಗಳ ಸಂಯೋಜನೆ ಹಾಗೂ ಸಾಂದರ್ಭಿಕ ನಿರೂಪಣೆಯು ಅತ್ಯಂತ ಭಾವನಾತ್ಮಕವಾಗಿ ಮೂಡಿಬಂದಿದೆ. ಈ ಅಂಶಗಳು ಅವರ ಬಹುತೇಕ ಚಿತ್ರಗಳಲ್ಲಿ ಕಾಣುತ್ತವೆ.

೩. ರಘುಪತಿ ಭಟ್ ಗಂಜೀಫಾ ಚಿತ್ರಕಲಾವಿದ

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನ ಪುಟ್ಟ ಗ್ರಾಮ ಬೆಳ್ಮಣ್ಣು ಎಂಬಲ್ಲಿ ಸುಬ್ಬಣ್ಣ ಭಟ್ಟರ ಮೊದಲನೆಯ ಮಗನಾದ ಅನಂತರಾಮ ಭಟ್ಟರ ಹಾಗೂ ಪತ್ನಿಯವರಾದ ಕೃಷ್ಣವೇಣಿಯಮ್ಮ ಎಂಬ ದಂಪತಿಗಳ ೭ ಜನ ಮಕ್ಕಳಲ್ಲಿ ೬ನೆಯ ಮಗನಾಗಿ ಜುಲೈ ೨೧ ೧೯೫೭ರಲ್ಲಿ ರಘುಪತಿ ಭಟ್ಟರು ಜನಿಸಿದರು.

ರಘುಪತಿ ಭಟ್ಟರವರ ಅಣ್ಣನಾದ ಹರಿಚಂದ್ರ (ಹರಿರಾಮ ಭಟ್ಟ) ರವರು ಬಿಡಿಸುತ್ತಿದ್ದ ಚಿತ್ರಗಳನ್ನು ತದೇಕಚಿತ್ತದಿಂದ ನೋಡುತ್ತಿದ್ದ ಬಾಲಕರಾದಂತಹ ರಘುಪತಿ ಭಟ್ಟರು ನಾನೂ ಅಣ್ಣನಂತೆ ಚಿತ್ರ ಬರೆಯುವುದನ್ನು ಕಲಿಯಬೇಕೆಂದು ಬಯಸಿದರು. ಬಾಲ್ಯದಲ್ಲಿ ಕಂಡು ಅನುಭವಿಸಿದ ಪರಿಸರವು ರಘುಪತಿ ಭಟ್ಟರನ್ನು ತುಂಬಾ ಆಕರ್ಷಿಸಿತ್ತು. ನಿಸರ್ಗ, ಪ್ರಾಣಿ, ಪಕ್ಷಿಗಳು, ಸುತ್ತಮುತ್ತಲಿನ ಆಗುಹೋಗುಗಳು, ನಾಟಕಗಳು, ಬಯಲಾಟ, ಯಕ್ಷಗಾನ ಮೇಳದ ಪ್ರಸಂಗಗಳು ಇವರ ಮೇಲೆ ತುಂಬ ಪ್ರಭಾವವನ್ನು ಬೀರಿದವು. ೨ನೆಯ ತರಗತಿಯನ್ನು ಹುಟ್ಟೂರಿನಲ್ಲಿ ಮುಗಿಸಿ, ನಂತರ ಮಂಡ್ಯ ಜಿಲ್ಲೆಯ ನಾಗಮಂಗಲಕ್ಕೆ ಬಂದು ನೆಲೆಸುತ್ತಾರೆ. ಪಕ್ಕದಲ್ಲಿಯೇ ಇದ್ದ ದೇವಾಲಯಗಳನ್ನು ನೋಡಿದ ಇವರು ಬೇರೆಯದೆ

ಒಂದು ಲೋಕಕ್ಕೆ ಬಂದಂತಹ ಅನುಭವದಿಂದ ದೇವಾಲಯಗಳ ಒಳಭಾಗದಲ್ಲಿ ಇರುವ ಚಿತ್ರಗಳು, ಶಿಲ್ಪಗಳು, ಉಬ್ಬುಶಿಲ್ಪಗಳು, ಗರ್ಭಗುಡಿಯಲ್ಲಿದ್ದ ಮೂರ್ತಿಗಳು ಇವರಿಗೆ ರೇಖಾಚಿತ್ರಗಳ ಪರಿಕಲ್ಪನೆಗೆ ಮನ ಸೆಳೆದವು. ಇವರು ಬಿಡುವಿನ ಸಮಯದಲ್ಲಿ ದೇವಸ್ಥಾನಗಳಲ್ಲಿನ ಒಳಗೋಡೆಗಳ ಮೇಲಿ ಭಿತ್ತಿ ಚಿತ್ರಗಳು ಹಾಗೂ ಉಬ್ಬುಚಿತ್ರಗಳನ್ನು ಯಥಾವತ್ತಾಗಿ ನಕಲು ತೆಗೆಯಲು ಮುಂದಾದರು. ದೇವಾಲಯಗಳ ವಾಸ್ತುಕಲ್ಪನೆಯು ಚಿತ್ರಕಲಾಶಾಲೆಯಾಗಿ ಪರಿವರ್ತನೆಗೊಂಡಿತು. ಇವರ ಅಣ್ಣನವರು ರಚಿಸುತ್ತಿದ್ದನ್ನು ನೋಡುತ್ತಿದ್ದ ಮನಸ್ಸು ತಾನೇ ಪ್ರಯತ್ನಿಸುವ ಒಂದು ಸ್ಪರ್ಧೆಯಾಗಿ ಕಂಡು ಬಂದಿತು. ಪ್ರಶಾಂತ ಸ್ಥಳದಲ್ಲಿ ನಿರ್ಮಲ ಮನಸ್ಸಿನಿಂದ ಪ್ರೋತ್ಸಾಹದಾಯಕವಾಗಿ ಸ್ವತಃ ಚಿತ್ರ ಬರೆಯುವುದನ್ನು ಮೈಗೂಡಿಸಿಕೊಂಡರು.

ಇವರ ತಾತನವರು ತಾಳೆಗರಿಯಲ್ಲಿ ಶ್ರೀಮತ್ ಭಾಗವತ, ದುರ್ಗಾಸಪ್ತಶತಿ ಇತ್ಯಾದಿ ಗ್ರಂಥ ರಚನೆ ಮಾಡಿ ಮಾರಾಟ ಮಾಡುತ್ತಿದ್ದರು. ಇದರಲಿನ್ನ ಕೆಲವು ರೇಖಾವಿನ್ಯಾಸಗಳು ರಘುಪತಿಯವರನ್ನು ಸೆಳೆದಿದ್ದವು. ಅದನ್ನೂ ಕ್ರಮೇಣವಾಗಿ ಕರಗತ ಮಾಡಿಕೊಂಡರು. ಜೀವನ ನಿರ್ವಹಣೆ ಕಷ್ಟವಾಗಿದ್ದರಿಂದ ಬೆಂಗಳೂರಿಗೆ ಬಂದು ತಮ್ಮ ತಂದೆಯ ಜೊತೆಯಲ್ಲಿ ನೆಲೆಸಿದರು. ರಘುಪತಿ ಭಟ್ಟರು ಯಾವುದೇ ಕಲಾಶಾಲೆಯಲ್ಲಿ ಚಿತ್ರಕಲೆಯನ್ನು ಕ್ರಮವಾಗಿ ಕಲಿತವರಲ್ಲ. ನೋಡಿ, ಅನುಭವಿಸಿ, ಶ್ರವಣ–ಮನನದಿಂದ ಕಲಿತವರು.

ರಘುಪತಿ ಭಟ್ಟರು ರಾಮಾಯಣದ ಹಲವು ಸನ್ನಿವೇಶಗಳನ್ನು ಚಿತ್ರಿಸಲು ಪ್ರಾರಂಭಿಸಿದರು. ಇವುಗಳಲ್ಲಿ ಮುಖ್ಯವಾಗಿ ರಾಮ–ರಾವಣರ ಯುದ್ಧ, ಸೀತೆಯು ಜಿಂಕೆಯ ವೇಷದಲ್ಲಿರುವ ಮಾರೀಚನ ಕಡೆಗೆ ಕೈ ತೋರಿಸುತ್ತಿರುವುದು, ರಾಮ–ಲಕ್ಷ್ಮಣ ಇತ್ಯಾದಿ. ಇಷ್ಟೇ ಅಲ್ಲದೇ ೨೦ ಅಡಿ ಎತ್ತರದ ಪಾಂಡುರಂಗನ ದೊಡ್ಡ ದೊಡ್ಡ ಚಿತ್ರಣವನ್ನು ರಚಿಸಿದ್ದಾರೆ. ನಂಜುಂಡರಾವ ಅವರ ಮಾತಿನ ಪ್ರಭಾವದಿಂದ ಸಾಂಪ್ರದಾಯಿಕ ಶೈಲಿಯಲ್ಲಿ ಚಿತ್ರಗಳನ್ನು ರಚಿಸಲು ಪ್ರಾರಂಭಿಸಿದರು. ಇವರ ಕಲೆಯಲ್ಲಿ ಹೆಚ್ಚಿನ ಪ್ರಭಾವವನ್ನು ಬೀರಿರುವ ಕಲೆ ಎಂದರೆ ಜನಪದ ಕಲೆ, ಜೊತೆಗೆ ಜಾನಪದ ಚಿತ್ರದ ಬಗೆಗಿನ ರೇಖಾಚಿತ್ರಗಳನ್ನು ವೀಕ್ಷಿಸಲು ಮುಂದಾದರು. ಅಷ್ಟರ ಹೊತ್ತಿಗೆ ಇವರು ೧೧ನೆಯ ತರಗತಿಯನ್ನು ಎರಡು ಬಾರಿ ಅನುತ್ತೀರ್ಣರಾಗಿ ವಿದ್ಯಾಭ್ಯಾಸವನ್ನು ನಿಲ್ಲಿಸಿ ಕಲೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದರು.

ಸಾಂಪ್ರದಾಯಿಕ ಚಿತ್ರ ರಚನಾ ಶೈಲಿಯಲ್ಲಿ ತಮ್ಮತನವನ್ನು ಸ್ಥಾಪಿಸಬೇಕೆಂದು ಗಂಜೀಫಾ ಎಲೆಗಳಲ್ಲಿನ ಚಿತ್ರಗಳನ್ನು ಮೊದಲ ಬಾರಿಗೆ ನೋಡಿದಾಗ ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ. ವೆಂಕಟೇಶ ಎಂಬುವವರ ಸಹಾಯದಿಂದ ಗಂಜೀಫಾ ಬಗ್ಗೆ ಹೆಚ್ಚಿಗೆ ಅಧ್ಯಯನ ಮಾಡಲು ಪ್ರಾರಂಭಿಸಿ ಕರ್ನಾಟಕದ ಅನೇಕ ಭಾಗಗಳಲ್ಲಿ ಗಂಜೀಫಾ ಎಲೆಗಳನ್ನು ಸಂಗ್ರಹಿಸುತ್ತಾರೆ. ಅವುಗಳಲ್ಲಿ ಹೆಚ್ಚಾಗಿ ದೊರೆತದ್ದು ಮೈಸೂರಿನಲ್ಲಿ. ಇದರಿಂದ ಪ್ರೋತ್ಸಾಹಗೊಂಡು ಹೆಚ್ಚಿನ ಅಧ್ಯಯನಕ್ಕಾಗಿ ಓರಿಸ್ಸಾ, ಪುಣೆ, ಮುಂಬಯಿ, ಸಾವಂತವಾಡಿ, ಆಂಧ್ರ, ಹೈದರಾಬಾದ್, ಕರ್ನೂಲ್, ಪಶ್ಚಿಮ ಬಂಗಾಳ, ಶ್ರೀನಗರ, ಜೈಪುರ ಇತ್ಯಾದಿ ಪ್ರದೇಶಗಳಿಂದ ಗಂಜೀಫಾ ಚಿತ್ರಗಳನ್ನು ಸಂಗ್ರಹಿಸಿಕೊಂಡು ತಮ್ಮದೇ ಶೈಲಿಯಲ್ಲಿ ಚಿತ್ರಗಳ ರಚನೆಗೆ ತಮ್ಮನ್ನು

ತೊಡಗಿಸಿಕೊಂಡರು. ಇವರ ಪ್ರಮುಖ ಎಲೆಗಳು ವಿಶ್ವರೂಪ, ಶ್ರೀರಂಗ, ಗಣಪತಿ, ನವನಾರಿಕುಂಜರ, ವಿಶ್ವಾಮಿತ್ರ, ಬಾಲಕೃಷ್ಣ, ದಶಾವತಾರ, ನವಗ್ರಹ, ಕಾಮಸೂತ್ರದ ಮಿಥುನ ಚಿತ್ರಗಳು, ಅಷ್ಟದಿಕ್ಪಾಲಕರು, ವೇದ-ಉಪನಿಷತ್ತುಗಳ ಆಧಾರದಲ್ಲಿ ಕೆಲವು, ಶಕ್ತಿನಿಧಿ ಹಾಗೂ ತತ್ವನಿಧಿಗೆ ಸಂಬಂಧಿಸಿದಂತೆ ಇತ್ಯಾದಿ ಚಿತ್ರಗಳನ್ನು ಬಿಡಿಸಲು ಆಸಕ್ತಿ ತೋರಿದರು.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ರಚಿಸಿದಂತಹ ಕೆಲವು ಪುರಾತನ ಗಂಜೀಫಾ ಚಿತ್ರಗಳನ್ನು ನೋಡಿ ಪ್ರತಿಕೃತಿ ಮಾಡಲು ಪ್ರಯತ್ನಿಸಿದರು. ಸಾಂಪ್ರದಾಯಿಕ ಶೈಲಿಯನ್ನು ಕೆಡಿಸಿಕೊಳ್ಳದೆ ಒಡೆಯರು ಗಂಜೀಫಾ ಚಿತ್ರಗಳನ್ನು ಬೆಳೆಸುತ್ತಿದ್ದರೆನ್ನುವ ನೆನಪಿಗಾಗಿ ಅವರ ಜನ್ಮಸ್ಥಳವಾದ ಶ್ರೀರಂಗಪಟ್ಟಣದಲ್ಲಿ ಗಂಜೀಫಾ ಕಲಾ ಗ್ಯಾಲರಿಯನ್ನು ೧೯೭೭ರಲ್ಲಿ ಶ್ರೀ ವೀರೇಂದ್ರ ಹೆಗಡೆಯವರ ಅಮೃತಹಸ್ತದಲ್ಲಿ ಪ್ರಾರಂಭಿಸಿದರು. ಅಂದಿನಿಂದ ಐತಿಹಾಸಿಕ ಸ್ಥಳವಾದ ಶ್ರೀರಂಗಪಟ್ಟಣವನ್ನು ನೋಡಲು ಬರುತ್ತಿದ್ದ ಯಾತ್ರಿಕರು ಈ ಕಲಾಗ್ಯಾಲರಿಗೆ ಭೇಟಿ ನೀಡುತ್ತಿದ್ದರು. ತದನಂತರ ಈ ಗ್ಯಾಲರಿಯೂ ಅನೇಕ ಅಪವಾದಗಳಿಗೆ ಗುರಿಯಾಗಿ ಮುಚ್ಚಿತು.

ನಂತರ ಮೈಸೂರಿನ ವಿದ್ಯಾರಣ್ಯಪುರಂಗೆ ಕಲಾ ಗ್ಯಾಲರಿಯನ್ನು ಸ್ಥಳಾಂತರಿಸಿಕೊಂಡು ನಂತರ ಸರ್ಕಾರಕ್ಕೆ ಪತ್ರ ಬರೆದು, ಅನುಮತಿಯನ್ನು ಪಡೆದು ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ವೆಲ್ಲಿಂಗಟನ್ ಕಲಾಗ್ಯಾಲರಿಗೆ ಸ್ಥಳಾಂತರಿಸಿದರು. ಕೆಲ ಕಾಲದಲ್ಲಿಯೇ ಮತ್ತೆ ಅಲ್ಲಿಂದ ತಮ್ಮ ಮನೆಯಲ್ಲಿಯ ಒಂದು ಕೊಠಡಿಯನ್ನೇ ಗ್ಯಾಲರಿಯನ್ನಾಗಿ ಮಾಡಿಕೊಂಡರು. ವಿದೇಶಿ ಪ್ರವಾಸಿಗರ ಪ್ರೋತ್ಸಾಹ ಅತೀ ಹೆಚ್ಚು ದೊರೆತಿದ್ದರಿಂದ ಮತ್ತೆ ಕೆ. ಸಿ. ಲೇಔಟನಲ್ಲಿ ಕಲಾಗ್ಯಾಲರಿಯನ್ನು ನಿರ್ಮಿಸಿದ್ದರು. ಈಗ ಅದು ಬಂದಾಗಿದೆ. ಈಗ ಯಾವುದೇ ಗ್ಯಾಲರಿಯನ್ನು ನಿರ್ಮಿಸಿಲ್ಲ. ಆದರೆ ಇತ್ತೀಚೆಗೆ ಅತಿ ಚಿಕ್ಕ ಗಾತ್ರದ ಗಂಜೀಫಾ ಎಲೆಯನ್ನು ನಿರ್ಮಿಸಲು ಕಣ್ಣಿಗೆ ಶ್ರಮ ನೀಡುವುದರಿಂದ ಅದೇ ಶೈಲಿಯ ದೊಡ್ಡ ಪೇಂಟಿಂಗ್ ಹಾಗೂ ರೇಖಾಚಿತ್ರಗಳ ರಚನೆಯನ್ನು ಮಾಡುತ್ತಾರೆ. ಇವರು ರಚಿಸಿರುವ ಮತ್ತು ಸಂಗ್ರಹಿಸಿರುವ ಕೆಲವು ಕಲಾಕೃತಿಗಳು ವಿಜಯ ಆರ್. ಶೆಣೈ ಅವರ ಗ್ಯಾಲರಿಯಲ್ಲಿ ಸಂಗ್ರಹವಾಗಿವೆ.

ಕಲಾ ಪ್ರದರ್ಶನಗಳು

ಹಲವು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಹಾಗೂ ಪ್ರಾತ್ಯಕ್ಷಿಕೆಗಳನ್ನು ದೆಹಲಿ, ಬೆಂಗಳೂರು, ಮೈಸೂರು, ಮಣಿಪಾಲ, ಓರಿಸ್ಸಾ ಇತ್ಯಾದಿ ಪ್ರದೇಶಗಳಲ್ಲಿ ನೀಡಿದ್ದಾರೆ. ಗಂಜೀಫಾ ಕಲೆಯಲ್ಲಿ ಏಕವ್ಯಕ್ತಿ ಪ್ರದರ್ಶನವನ್ನು ಮೊಟ್ಟ ಮೊದಲ ಬಾರಿಗೆ ಹೊರದೇಶದಲ್ಲಿ ಮಾಡಿದ್ದಾರೆ. ಇಂಗ್ಲೆಂಡಿನಲ್ಲಿ ೧೯೯೨ ಮತ್ತು ೧೯೯೪ರಲ್ಲಿ ಎರಡು ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಇದರ ಜೊತೆಗೆ ಪ್ರಾತ್ಯಕ್ಷಿಕೆಗಳನ್ನು ನಡೆಸಿದ್ದಾರೆ. ಲಂಡನ್ನಿನ ಭಾರತೀಯ ವಿದ್ಯಾಭವನದಲ್ಲಿ ಎರಡು ದಿವಸಗಳ ಕಾಲ ಪ್ರದರ್ಶನ ನಡೆಸಿ, ಅಲ್ಲಿನ ಕಲಾವಿಮರ್ಶಕರ ಹಾಗೂ ಕಲಾವಿದರ ಮೆಚ್ಚುಗೆಯನ್ನು ಪಡೆದಿದ್ದಾರೆ. ಲಂಡನ್ನಿನ ವಿಕ್ಟೋರಿಯಾ ಮತ್ತು ಆಲ್ಬರ್ಟ ಮ್ಯೂಜಿಯಂನಲ್ಲ ೬೦ ಎಲೆಗಳ ರಾಮಾಯಣವನ್ನು ಇವರು ರಚಿಸಿ ಪ್ರದರ್ಶನವನ್ನು ನೀಡಿದ್ದಾರೆ. ಇವರ ಅನೇಕ ಕಲಾಕೃತಿಗಳು ಜರ್ಮನಿ, ಅಮೇರಿಕಾ, ಫ್ರಾನ್ಸ್, ಕೆನಡಾ, ಇಟಲಿ, ಗ್ರೀಕ್ ದೇಶಗಳಲ್ಲಿ

ಸಂಗ್ರಹಗೊಂಡಿವೆ. ೨ ವರ್ಷಗಳಿಗೊಮ್ಮೆ ಜರ್ಮನಿ ಮತ್ತು ಇತರೆ ದೇಶಗಳಿಗೆ ಭೇಟಿ ನೀಡಿ ಪ್ರದರ್ಶನ ನಡೆಸುವುದರ ಜೊತೆಗೆ ಗಂಜೀಫಾ ಕಲೆಯ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಅಲ್ಲಿಯ ಕಲಾಪ್ರಿಯರಿಗೆ ನೀಡುತ್ತಾ ಬಂದಿದ್ದಾರೆ. ಮೊದಲ ಬಾರಿಗೆ ಲಂಡನ್ನದ ಭಾರತೀಯ ವಿದ್ಯಾಭವನದಲ್ಲಿ ಇವರ ಕಲಾಪ್ರದರ್ಶನ ಯಶಸ್ವಿಯಾಗಿ ನಡೆಯಿತು. ಇವರಿಗೆ ೧೯೯೩ರಲ್ಲಿ ಭಾರತ ಸರ್ಕಾರವು ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಭಟ್ಟರು ಇತ್ತೀಚಿನ ಕಲಾಕೃತಿಗಳಲ್ಲಿ ವೇದ, ಪುರಾಣ, ಮಹಾಭಾರತ, ರಾಮಾಯಣಗಳಲ್ಲಿನ ಶಾಸ್ತ್ರೀಯ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ಕಲಾಕೃತಿಯ ರಚನೆಯಲ್ಲಿ ಬಳಸಿಕೊಳ್ಳುತ್ತಾರೆ. ಆಯುರ್ವೇದ ವೈದ್ಯಸಂಹಿತೆಯಲ್ಲಿನ ಸರಣಿಚಿತ್ರಗಳನ್ನು ರಚಿಸಿದ್ದಾರೆ. ಅದರಲ್ಲಿ ೫೦೦೦ ವರ್ಷಗಳ ಹಿಂದೆ ಭರತಖಂಡದಲ್ಲಿ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿದ್ದರ ಬಗ್ಗೆ ವೇದಗಳಿಂದ ತಿಳಿದು ಬರುತ್ತದೆ.

ಕಲಾವಿದ ರಘುಪತಿ ಭಟ್ಟರು ಭಾರತೀಯ ಪೌರಾಣಿಕ ಘಟನೆಗಳನ್ನು ಗಂಜೀಫಾ ಎಲೆಗಳಲ್ಲಿ ಆಧುನಿಕ ಪದ್ಧತಿಯಲ್ಲಿ ಸಂಯೋಜಿಸಿದ್ದಾರೆ. ಇವರು ಬಹುತೇಕ ಗಂಜೀಫಾ ರಚನೆಯನ್ನು ವೃತ್ತಾಕಾರದ ಹಾಗೂ ಚೌಕಾಕಾರದ ಆವರಣದಲ್ಲಿ ರಚನೆ ಮಾಡಿದ್ದಾರೆ.

ಕಲಾಕೃತಿಗಳು

ವಿಶ್ವಾಮಿತ್ರ–ವಸಿಷ್ಟ–ಕಾಮಧೇನು ಸಂಯೋಜನೆಯನ್ನು ಸಾಂಪ್ರದಾಯಿಕ ರಚನಾಪದ್ಧತಿಯಲ್ಲಿ ಬಿಂಬಿಸಲಾಗಿದ್ದು ಈ ಚಿತ್ರವು ಜೈನ ಚಿಕಣಿ ಚಿತ್ರ ಸಂಪ್ರದಾಯದ ಪ್ರಭಾವ ಕಂಡು ಬರುತ್ತದೆ. ವಿಶ್ವಾಮಿತ್ರನು ಹಿಂದೆ ಕ್ಷತ್ರೀಯನಾಗಿದ್ದು, ವಸಿಷ್ಟರ ಆಶ್ರಮದಲ್ಲಿ ತಂಗಿದ್ದಾಗ ಅಲ್ಲಿದ್ದ ಕಾಮಧೇನುವನ್ನು ಬಲಾತ್ಕಾರವಾಗಿ ಒಯ್ಯುತ್ತಿರುವಾಗ ಅವರನ್ನು ತಡೆಯುವ ಸಂದರ್ಭದ ಕಥೆಯನ್ನು ಈ ಚಿತ್ರವು ವಿವರಿಸುತ್ತದೆ. ಚಿತ್ರವು ರೇಖಾ ಪ್ರಧಾನವಾಗಿದ್ದು ಶಾಂತವರ್ಣಗಳ ವೈವಿಧ್ಯತೆ ಕಂಡು ಬರುತ್ತದೆ. ಆಕೃತಿಗಳ ಭಾವಲಕ್ಷಣಗಳು ಹಾಗೂ ಹಿನ್ನೆಲೆಯ ಸಂಯೋಜನೆಯು ಸಾಂಕೇತಿಕವಾಗಿ ನಿರೂಪಣೆಗೊಂಡಿದೆ.

ಶ್ರೀ ರಂಗನಾಥ ಶೀರ್ಷಿಕೆಯ ಚಿತ್ರದಲ್ಲಿ ಮಹಾವಿಷ್ಣು, ಕ್ಷೀರಸಾಗರದಲ್ಲಿ ಶೇಷಾಶಯನಾಗಿದ್ದು, ಪಾದಸೇವೆಯಲ್ಲಿ ಲಕ್ಷ್ಮೀದೇವತೆಯು ನಿರತಳಾಗಿದ್ದಾಳೆ. ಉಳಿದಂತೆ ಅವನ ಸುತ್ತಲೂ ದೇವತೆಗಳು, ಮಹರ್ಷಿಗಳು, ಸೇವಕರು ಸಂಯೋಜಿತಗೊಂಡಿದ್ದಾರೆ. ಭಾರತೀಯ ಧರ್ಮ ಹಾಗೂ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಈ ಸನ್ನಿವೇಶವನ್ನು ಕಲಾವಿದರು ಗಂಜೀಫಾಎಲೆಗಳಲ್ಲಿ ಸೃಜಿಸಿದ್ದಾರೆ. ಪುರುಷ ಸೂಕ್ತದ ವಿರಾಟ್ ಸ್ವರೂಪ ಚಿತ್ರದಲ್ಲಿ ಈ ಶಕ್ತಿ ಪುರುಷನ ವೀರಾವೇಶವನ್ನು ಪ್ರತಿನಿಧಿಸುತ್ತದೆ. ದೇವಾನುದೇವತೆಗಳು, ದಾನವರು, ಮಹರ್ಷಿಗಳು ಹಾಗೂ ಇತರೆ ಪ್ರಾಣಿವರ್ಗಗಳು ಇವನ ಸುತ್ತಲೂ ಸುತ್ತುತ್ತಿದ್ದಾರೆ. ಕಣ್ಣು, ಹಣೆ, ಗದ್ದ, ತುಟಿಗಳಿಂದ ದೇವತೆಗಳು ಹೊರಹೊಮ್ಮುವಂತೆ ಸಂಯೋಜಿಸಲಾಗಿದೆ. ರೇಖಾ ಪ್ರಧಾನವಾದ ಈ ಗಂಜೀಫಾ ಚಿತ್ರವೂ ಸಂಪ್ರದಾಯಶೈಲಿಯಲ್ಲಿ ರೂಪಗೊಂಡಿದೆ.

ಲವ–ಕುಶರ ಮತ್ತು ಋಷಿ–ಮುನಿಗಳ ನರ್ತನ, ಅಭಿನಂದನ ಎಂಬ ಚಿತ್ರದಲ್ಲಿ ಬಾಲವೀರರಾದ ಲವ–ಕುಶರು ಕುಶಲೋಪರಿಯಲ್ಲಿ ತೊಡಗಿದ್ದಾರೆ. ಅವರ ಸುತ್ತಲೂ ಮಹರ್ಷಿಗಳು ವೈವಿಧ್ಯಮಯ



ವಿಶ್ವಾಮಿತ್ರ–ವಸಿಷ್ಠ–ಕಾಮಧೇನು



ಶ್ರೀರಂಗನಾಥ



ಪುರುಷ ಸೂಕ್ತದ ವಿರಾಟ್ ಸ್ವರೂಪ



ಲವಕುಶರ ಸುತ್ತ ಋಷಿಮುನಿಗಳ ನರ್ತನ. ಅಭಿನಂದನ.



ಮತ್ಸ್ಯವಿನ್ಯಾಸ



ರಾವಣನ ಬಳಿ ಶೂರ್ಪನಖಿ ಮೂರು ಕೊಡುವುದು

ಭಂಗಿಯಲ್ಲಿ ನರ್ತನ ಮಾಡುತ್ತಾ ಸುತ್ತು ಹಾಕುತ್ತಿದ್ದಾರೆ. ಈ ಸನ್ನಿವೇಶವು ಬಾಲಕರ ಶೌರ್ಯ, ಸಾಹಸ ಹಾಗೂ ಅವರ ಮೇಲಿರುವ ಪ್ರೀತಿಯನ್ನು ತಿಳಿಸುತ್ತದೆ. ಬಾಲಕರು, ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸಿದ್ದಾರೆ. ಹಾಗೂ ಹಿನ್ನೆಲೆಯಲ್ಲಿ ಕುಟಿರದ ಪರಿಸರವನ್ನು ಪ್ರತಿಬಿಂಬಿಸುತ್ತದೆ.

'ಮತ್ಸ್ಯವಿನ್ಯಾಸ' ಎಲೆಯಲ್ಲಿ ಮತ್ಸ್ಯಗಳನ್ನು ವೃತ್ತಾಕಾರದ ವಿನ್ಯಾಸದಲ್ಲಿ ಸಂಯೋಜಿತಗೊಳಿಸಿದ್ದಾರೆ. ಅಲಂಕಾರಿಕವಾಗಿ ಮೂಡಿಬಂದ ಈ ಮತ್ಸ್ಯಗಳು ಚಲನೆಯಿಂದ ಕೂಡಿವೆ. ರೇಖೆ, ವರ್ಣ, ಹಿನ್ನೆಲೆಯು ಆಕರ್ಷಕವಾಗಿ ಬಿಂಬಿತವಾಗಿದ್ದು, ಈ ಗಂಜೀಫಾ ಎಲೆಯು ವೃತ್ತಾಕಾರದಲ್ಲಿ ರಚನೆಗೊಂಡಿದೆ. ರಾವಣನ ಬಳಿ ಶೂರ್ಪನಖಿ ದೂರು ಕೊಡುವುದು ಎಂಬ ಚಿತ್ರದಲ್ಲಿ ಶೂರ್ಪನಖಿಯು ಲಕ್ಷ್ಮಣನಿಂದ ಅಪಮಾನಕ್ಕೊಳಗಾಗಿ ಕೋಪಗೊಂಡು ಅಣ್ಣನಾದ ದಶಮುಖನ ಹತ್ತಿರ ದೂರು ಕೊಡುತ್ತಿದ್ದಾಳೆ. ಇಬ್ಬರ ಮುಖಭಾವಗಳು ಕ್ರೌರ್ಯದಿಂದ ಹಾಗೂ ದುಃಖದಿಂದ ಕೂಡಿವೆ. ರಾವಣನು ತಂಗಿಗೆ ಸಮಾಧಾನ ಮಾಡುತ್ತಿದ್ದರೆ, ತಂಗಿಯು ದುಃಖಿತಳಾಗಿ ರಾಮ ಲಕ್ಷ್ಮಣರ ಮೇಲೆ ದ್ವೇಷವನ್ನು ಸಾಧಿಸುವಂತೆ ಆಲಾಪನೆ ಮಾಡುತ್ತಿದ್ದಾಳೆ. ಇಲ್ಲಿ ರಾವಣನನ್ನು ದೈತ್ಯಾಕಾರದಲ್ಲಿ ಚಿತ್ರಿಸಿದ್ದು ಭಯ ಪಡುವಂತಹ ದೈಹಿಕ ರೂಪವನ್ನು ತರಲಾಗಿದೆ. ಶೂರ್ಪನಖಿಯನ್ನು ಅರ್ಧ ಬೆತ್ತಲೆಯಾಗಿ ರೂಪಿಸಲಾಗಿದ್ದು ಕಾಡು ಜನರು ಧರಿಸುವ ವೇಷ-ಭೂಷಣಗಳನ್ನು ಸಂಯೋಜಿಸಲಾಗಿದೆ. ಹಿನ್ನೆಲೆಯು ಕಪ್ಪುಬಣ್ಣದಿಂದ ಕೂಡಿದ್ದು ಸುತ್ತಲೂ ರೇಖೆ ಹಾಗೂ ಚುಕ್ಕಿಗಳಿಂದ ಕೂಡಿದ ಅಂಚನ್ನು ಹೊಂದಿದೆ. ಒಟ್ಟಾರೆ ಭಟ್ಟರ ಗಂಜೀಫಾ ಚಿತ್ರಗಳು ಸಾಂಪ್ರದಾಯಿಕ ಕಿರುರೂಪ ಚಿತ್ರಗಳನ್ನು ಪ್ರತಿನಿಧಿಸುತ್ತವೆ.

ಚಿತ್ರಗಳ ಅಂಚು ಸೂಕ್ಷ್ಮರೇಖೆ ಹಾಗೂ ಚಿಕ್ಕ ಚಿಕ್ಕ ಚುಕ್ಕಿಗಳ ಅಲಂಕಾರಿಕ ವಿನ್ಯಾಸದಿಂದ ಸಂಯೋಜಿತಗೊಂಡಿದೆ. ಈ ಗಂಜೀಫಾ ಚಿತ್ರಗಳಲ್ಲಿ ತೃತೀಯ ವರ್ಗದ ಬಣ್ಣಗಳಾದ ಬೂದು, ಕಂದು ಗೆಂಪು, ಬಿಳಿ ಮಿಶ್ರಿತ ನೀಲಿ, ಕಂದು ಬಿಳಿ, ಕಪ್ಪು ಬಣ್ಣಗಳು ಪ್ರಧಾನವಾಗಿ ಬಿಂಬಿತಗೊಂಡಿವೆ. ಒಟ್ಟಾರೆ ಇವರ ಚಿತ್ರಗಳು ಆಧುನಿಕತೆಯ ಶೈಲಿಯೊಂದಿಗೆ ವೈಯಕ್ತಿಕ ಚಿತ್ರಕ್ರಮವು ಕಾಣಸಿಗುತ್ತದೆ.

ಸಾವಂತವಾಡಿ (ಮಹಾರಾಷ್ಟ್ರ) ಕಲಾವಿದರು

ಸಾವಂತವಾಡಿಯ ಪಾಂಡುರಂಗ ಕೃಷ್ಣ ಅವರು ಕೊಂಕಣದ ಮಧ್ಯಭಾಗದಲ್ಲಿರುವ ಅವರ ಮನೆಯು ಸಹ್ಯಾದ್ರಿಯ ಬೆಟ್ಟಗಳು ಮತ್ತು ಸಮುದ್ರದ ಮಧ್ಯದಲ್ಲಿದೆ. ಪಾಂಡುರಂಗ ಕೃಷ್ಣ ಅವರು ಗಂಜೀಫಾ ಎಲೆಗಳನ್ನು ವೃತ್ತಾಕಾರದಲ್ಲಿ ಚಿತ್ರಿಸುತ್ತಿದ್ದರು. ಈ ಕಾಯಕವನ್ನು ಅವರ ತಾತ ಹಾಗೂ ತಂದೆಯರೂ ಮಾಡುತ್ತಿದ್ದರು. ಈ ಕಲಾವಿದರು ಸ್ವತಃ ಕುಂಚಗಳನ್ನು ತಾವೇ ತಯಾರಿಸಿಕೊಂಡು, ಬಣ್ಣಗಳಿಗೆ ಅಂಟು ಸೇರಿಸಿ, ತೆಂಗಿನಕಾಯಿ ಚಿಪ್ಪಿನಲ್ಲಿ ಕಲಿಸಿಕೊಳ್ಳುತ್ತಿದ್ದರು. ಅವರು ಚಿತ್ರಿಸಿದ ಎಲೆಗಳು ನೂರಾ ಐವತ್ತು ವರ್ಷಗಳ ಹಿಂದೆ ಮಾಡಿದ ಎಲೆಗಳನ್ನು ಹೋಲುತ್ತಿದ್ದವು. ಇವರು ಹೆಚ್ಚಾಗಿ ಆಟಕ್ಕೆ ಸಂಬಂಧಿಸಿದ ದಶಾವತಾರ ಚಿತ್ರಗಳನ್ನು ಚಿತ್ರಿಸುತ್ತಿದ್ದರು.

ಓರಿಸ್ಸಾದ ಗಂಜಮ್ ಜಿಲ್ಲೆಯ ಪರ್ಲಕ್ಕಿಮೇಡಿ ಎಂಬ ಗ್ರಾಮದ ಒಂದು ಬೀದಿಯನ್ನು "ಚಿತ್ರಗಾರ ಬೀದಿ" ಎಂದೇ ಕರೆಯುತ್ತಾರೆ. ಪ್ರಕಾಶ ಚಂದ, ಮಹಾಪಾತ್ರೋ, ಪರಶುರಾಮ ಹಂಡಿಯವರು ತಮ್ಮ

ಕಾರ್ಯಾಗಾರದಲ್ಲಿ ವಿಷ್ಣುವಿನ ದಶಾವತಾರದ ಗಂಜೀಫಾ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಇವರ ಕುಟುಂಬದವರೆಲ್ಲರು ಅನೇಕ ಬಗೆಯ ಆಟದ ಎಲೆಗಳನ್ನು ತಯಾರಿಸುತ್ತಿದ್ದರು. ಇವರ ಚಿತ್ರಗಳೆಲ್ಲ ಪರ್ಲಕ್ಕಿಮೇಡಿ ಕೌಶಲತೆ ಮತ್ತು ಸೌಂದರ್ಯವನ್ನು ಹೊಂದಿದ್ದವು.

ಓರಿಸ್ಸಾದ ಪುರಿ ಜಿಲ್ಲೆಯ ರಗುರಾಜಪುರದ ಖ್ಯಾತ ಚಿತ್ರಗಾರ ಜಗನ್ನಾಥ ಮಹಾಪಾತ್ರೋ ರವರ ಹತ್ತಿರದ ಸಂಬಂಧಿಕರೆಲ್ಲ ಮನೆಯ ಪ್ರಾಂಗಣದಲ್ಲಿ ಹಾಗೂ ಎಲ್ಲೆಂದರಲ್ಲಿ ಯಾವಾಗಲೂ ಪೌರಾಣಿಕ ಕಥೆಗಳಿಗೆ ಹಾಗೂ ಆಟಗಳಿಗೆ ಸಂಬಂಧಿಸಿದಂತೆ ಎಲೆಗಳ ತಯಾರಿಕೆಯಲ್ಲಿ ಕಾರ್ಯನಿರತರಾಗಿದ್ದರು. ಕೆಲವರು ಬರೀ ನೀರಿನಲ್ಲಿ, ಕೆಲವರು ಹುಣಸೇ ಬೀಜ ಹಾಗೂ ಕುದಿಸಿದ ನೀರು, ಕೆಲವರು ಅಂಟಿನಲ್ಲಿ ಹತ್ತಿಯನ್ನು ನೆನಸುತ್ತಿದ್ದರು. ಇನ್ನೂ ಕೆಲವರು ಬಟ್ಟೆಯನ್ನು ಗಂಜಿ ಹಾಕಿ ಅವುಗಳಿಗೆ ಕೊಡಿ ಅಥವಾ ಲಿಂಬೆ ರಸ ಹಾಕುತ್ತಿದ್ದರು. ಇನ್ನೂ ಕೆಲವರು ಅವುಗಳಿಗೆ ಒಂದು ರೀತಿಯ ಹೊಳಪು ಬರುವಂತೆ ಒಪ್ಪ ಹಾಕುತ್ತಿದ್ದರು.

ಕಿಶೋರ್ ಗೋವರ್ಧನ್ ದಾಸ್ (ಇಸ್ಪೇಟ್ ಎಲೆ ಸಂಗ್ರಹಕಾರ)

೧೯೩೦ರಲ್ಲಿ ಕರಾಚಿಯಲ್ಲಿ ಜನಿಸಿದ ಕಿಶೋರ್ ಗೋವರ್ಧನ್ ದಾಸ್ ಮುಂಬೈಯಲ್ಲಿ ಬೆಳೆದರು. ಮುಂಬೈನ ಕಿಶೋರ್ ಗೋವರ್ಧನ್ ದಾಸರು ಇಸ್ಪೇಟ್ ಆಟದ ಭಕ್ತರ ಪಾಲಿಗೆ ಸೇರಿದವರು. ಇವರ ಹವ್ಯಾಸ ಬರೀ ಆಡುವುದು ಮಾತ್ರ ಅಲ್ಲ, ಅವರಿಗೆ ಜಗತ್ತಿನಲ್ಲಿ ಎಲ್ಲೆಲ್ಲಿ ಯಾವ ರೀತಿಯ ಇಸ್ಪೇಟ್ ಎಲೆಗಳಿವೆ, ಯಾವಾಗ ಬೆಳಕಿಗೆ ಬಂದಿವೆ ಮತ್ತು ಅವುಗಳು ಎಲ್ಲೆಲ್ಲಿವೆ, ಅವುಗಳ ಆಕಾರ, ಇತಿಹಾಸ ಇವುಗಳನ್ನು ಕಂಡು ಹಿಡಿಯುವ ಹವ್ಯಾಸ. ಅವುಗಳನ್ನು ತನ್ನಲ್ಲಿ ಸಂಗ್ರಹಿಸಿಡುವ ಬಯಕೆ.

ಅವರ ಬಳಿ ಈಗ ಬೇರೆ ಬೇರೆ ಬಗೆಯ, ಬೇರೆ ಬೇರೆ ಆಕಾರಗಳ ನಲವತ್ತು ದೇಶಗಳ, ಮೂರು ಸಾವಿರ ಇಸ್ಪೇಟು ಎಲೆಗಳ ಕಟ್ಟುಗಳಿವೆ. ಏಷಿಯಾಖಂಡದಲ್ಲಿಯೇ ಅತ್ಯಧಿಕ ಏಕಮಾತ್ರ ಸಂಗ್ರಹ ಕಿಶೋರ್ ಗೋವರ್ಧನ್ ದಾಸ್‌ರಲ್ಲಿದೆ. ಅದಲ್ಲದೇ ಇವರ ಸಂಗ್ರಹ ಗಿನ್ನಿಸ್ ದಾಖಲೆಯ ಪುಸ್ತಕದಲ್ಲಿ ಸೇರ್ಪಡೆಗೊಂಡಿದೆ.[೪]

ಗೋವರ್ಧನ್ ದಾಸರ ಬಳಿ ಹಲವಾರು ಶೈಲಿಯ ಗಂಜೀಫಾ ಎಲೆಗಳಿವೆ. ಕೆಲವು ಅಂತರ್ಗೋಳ(ಕೆನ್‌ಕೀವ್)ದವುಗಳಾದರೆ, ಕೆಲವು ಪೀಪಾಯಿಯಾಕಾರದವುಗಳು. ಕೆಲವು ಪೆಟ್ಟಿಗೆಯಾಕಾರದವುಗಳಾಗಿದ್ದು ಅವುಗಳ ಮೇಲೆ ಬೀಯರ್ ಅಥವಾ ಇನ್ನಿತರ ಪೇಯಗಳ ನಕ್ಷೆಗಳಿವೆ. ಕೆಲವು ಎಲೆಗಳು ಅಂಕು-ಡೊಂಕು ಇದ್ದು ಅವುಗಳಲ್ಲಿ ಕೆಲವುಗಳ ಸೊಂಟ ದಪ್ಪವಾಗಿದ್ದರೆ ಕೆಲವು ಸಪೂರದವುಗಳು. ಇನ್ನು ಕೆಲವು ಬಾಕ್ಸ್‌ಗಳ ಆಕಾರದಲ್ಲಿದ್ದು, ಆರು ಪೃಷ್ಠಗಳ ಎಲೆಗಳೂ ಇವೆ. ಇವುಗಳ ಎರಡು ವಿರುದ್ಧ ತುದಿಗಳಿಂದ ಅರ್ಧ ಇಂಚುಗಳ ಭಾಗಗಳು ಕತ್ತರಿಸಲ್ಪಟ್ಟಿವೆ. ಬೇರೆ ಬೇರೆ ತುದಿಗಳಿಂದ ಬೇರೆ ಬೇರೆ ಚಿತ್ರಗಳು ಕಂಡು ಬರುವಂಥ ಪಾರದೀಪಕ ಎಲೆಗಳೂ ಇವೆ. ಆತಾಕಾರ, ವೃತ್ತಾಕಾರ, ಮೊಟ್ಟೆಯಾಕಾರ, ಕುದುರೆಯ ಲಾಳದ ಆಕಾರ, ದೀರ್ಘವೃತ್ತಾಕಾರ, ಸಮಾಂತರ

---

೦೪. ಎಚ್ಕೆ ಕರ್ಕೇರ : ತರಂಗ (ವಾರಪತ್ರಿಕೆ), ೧೯೯೫, ಪುಟ-೨೩

ಚತುರ್ಭುಜಗಳ ಆಕಾರಗಳ ಎಲೆಗಳಿದ್ದು ಇವೆಲ್ಲಾ ಯಾರನ್ನಾದರೂ ಆಶ್ಚರ್ಯಚಕಿತರನ್ನಾಗಿ ಮಾಡುವಂಥವುಗಳು. ಅನೇಕ ಶತಮಾನಗಳಿಂದ ಇಸ್ಪೇಟೆಲೆಗಳ ಆಕಾರ, ಬಣ್ಣ ಮತ್ತು ಅಲಂಕಾರ ಇವುಗಳಲ್ಲಿ ಬದಲಾವಣೆ ಆಗುತ್ತಾ ಬಂದಿದೆ ಎಂಬುದು ಗೋವರ್ಧನರ ಮಾತು.

ಪ್ರಾಚೀನ ಎಲೆಗಳು ಸಾಮಾನ್ಯವಾಗಿ ಆತಾಕಾರವಾಗಿದ್ದವು. ಒಮ್ಮೊಮ್ಮೆ ವೃತ್ತಾಕಾರವಾಗಿಯೂ ಇತ್ತು. ಅವುಗಳ ಮೇಲೆ ಕೈಯಿಂದ ಅಥವಾ ಸ್ಟೆಂಸಿಲ್‌ನಿಂದ ಚಿಹ್ನೆಗಳನ್ನು ಮಾಡಿಸಲಾಗುತ್ತಿತ್ತು. ಹದಿನೈದನೆಯ ಶತಮಾನದ ಜರ್ಮನಿಯ ಅತ್ಯಂತ ಸುಂದರ ಇಸ್ಪೀಟೆಲೆಯ ಮೇಲೆ ಮರದ ಕೋಮಲ ಚಿತ್ರಗಳು ಅಂಕಿತವಾಗಿವೆ. ಪ್ರಾಚೀನ ಜರ್ಮನ್ ಎಲೆಗಳ ಮೇಲೆ ಬಾದಾಮು, ಘಂಟೆಗಳು, ಎಲೆಗಳ ಚಿತ್ರ ಮಾಡಲ್ಪಡುತ್ತಿದ್ದವು. ಇಟಲಿ ಮತ್ತು ಸ್ಪೇನ್ ಜನರಿಗೆ ಎಲೆಗಳ ಮೇಲೆ ಖಡ್ಗ ಮತ್ತು ನಾಣ್ಯಗಳನ್ನು ಕಾಣುವುದು ಇಷ್ಟ. ಆದರೆ ಎಲೆಗಳ ಇತಿಹಾಸದಲ್ಲಿ ಎಲ್ಲದಕ್ಕಿಂತ ದೀರ್ಘ ಪ್ರವಾಸ ಫ್ರಾನ್ಸ್‌ನ ಎಲೆಗಳು ಮಾಡಿವೆ. ಅವುಗಳಲ್ಲಿ ಹುಕುಂ, ಪಾನ್, ಇಟ್ಟಿಗೆ ಮತ್ತು ಪಕ್ಷಿಗಳ ಚಿತ್ರಗಳಿವೆ.[೫]

ಗೋವರ್ಧನ್‌ದಾಸರಿಗೆ ಹೆಚ್ಚಿನ ಎಲೆಗಳ ಇತಿಹಾಸ ತಿಳಿದಿದೆ. ಅವುಗಳ ಬಗ್ಗೆ ಅವರು ಮಾಹಿತಿ ಪಡೆದುಕೊಂಡಿದ್ದಾರೆ. ಅವರ ಮಾತಿನಂತೆ ಇಸ್ಪೀಟೆಲೆಗಳು ಸದಾ ಆಟಕ್ಕಾಗಿಯೇ ಉಪಯೋಗವಾಗುತ್ತಿರಲಿಲ್ಲ. ಇಂಗ್ಲೀಷರ ಬತಿಪಸ್ಮ ಸಮುದಾಯದ ಪೆಂಡಲಟನ್ ೧೬೫೧ರಲ್ಲಿ ಒಂದು ವಿಶಿಷ್ಟ ಎಲೆಗಳನ್ನು ತಯಾರು ಮಾಡಿ ಅವುಗಳ ಮೇಲೆ ವ್ಯಾಕರಣದ ಮುಖ್ಯ ನಿಯಮಗಳನ್ನು ಬರೆದಿದ್ದರು.

ಫ್ರಾನ್ಸ್‌ನ ಫ್ರಾಯರ್ ಥಾಮಸ್ ಮಟ್‌ನರ್ ಎಂಬುವರು ಇಸ್ಪೀಟೆಲೆಯ ಮೇಲೆ ತರ್ಕಶಾಸ್ತ್ರದ ವಿವರಣೆ (ಎಕ್ಸ್‌ಪೊಸಿಷನ್ ಆಫ್ ಲೋಜಿಕ್) ಅಚ್ಚು ಮಾಡಿದ್ದರು. ಗೋವರ್ಧನರ ಸಂಗ್ರಹದಲ್ಲಿ ನರ್ಸರಿಯ ಕವಿತೆಗಳ, ಐತಿಹಾಸಿಕ ವ್ಯಂಗ್ಯ ಚಿತ್ರಗಳ ವಿಷಯಗಳ ಮೇಲೆ ತಯಾರಿಸಿದ ಎಲೆಗಳ ಕಟ್ಟುಗಳಿವೆ. ಒಂದು ಎಲೆಗಳ ಕಟ್ಟಿನ ಸಮೂಹದಲ್ಲಿ ಎಲ್ಲಾ ಪಾದರಿಗಳ (ಪೋಪರು) ಚಿತ್ರಗಳಿದ್ದರೆ ಇನ್ನೊಂದರಲ್ಲಿ ಬ್ರಿಟನ್ನಿನ ರಾಜಪರಿವಾರದ ಪ್ರಸಿದ್ಧ ಸದಸ್ಯರ ಚಿತ್ರಗಳೂ ಇವೆ. ಇತಿಹಾಸದ ವ್ಯಾಖ್ಯೆ, ದರ್ಶನ, ಜ್ಯೋತಿಷ್ಯ, ಭೂಗೋಲ ಇತ್ಯಾದಿ ವಿಷಯಗಳ ಶಿಕ್ಷಣ ಸಾಧನಗಳ ರೂಪಗಳಲ್ಲಿ ಕೂಡಾ ಇಸ್ಪೀಟೆಲೆಗಳು ಉಪಯೋಗವಾಗುತ್ತಿದ್ದವು.[೬]

ನಮ್ಮ ಹಿರಿಯ ಕಲಾಪ್ರೇಮಿಗಳಾಗಿದ್ದರಿಂದ ಅಲಂಕಾರಿಕ ವಸ್ತುಗಳು ವರ್ಣಚಿತ್ರಗಳು, ಕರಕುಶಲ ವಸ್ತುಗಳು ಶಿಲ್ಪಕಲಾಕೃತಿಗಳ ಜೊತೆಗೆ ಗಂಜೀಫಾ ಎಲೆಗಳನ್ನು ಸಂಗ್ರಹ ಮಾಡಿದ್ದಾರೆ. ಕರ್ನಾಟಕದಲ್ಲಿ ಈ ಬಗೆಯ ಅಭೂತಪೂರ್ವ ಗಂಜೀಫಾ ಎಲೆಗಳು ಅರಮನೆ ಹಾಗೂ ಸರಕಾರಿ, ಖಾಸಗಿ ವಸ್ತುಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿವೆ. ಈ ಕಲಾಕೃತಿಗಳನ್ನು ನಮ್ಮ ಪೋಷಕರು ಸುಮಾರು ಎರಡು ಮೂರು ತಲೆಮಾರುಗಳಿಂದ ಪೋಷಿಸಿಕೊಂಡು ಬಂದಿದ್ದಾರೆ.

ಇಲ್ಲಿ ಮುಖ್ಯವಾಗಿ ಗಂಜೀಫಾ ಎಲೆಗಳ ಪೋಷಕರನ್ನು, ಪೋಷಿಸಲ್ಪಟ್ಟ ಗಂಜೀಫಾ ಚಿತ್ರಗಳನ್ನು ಹಾಗೂ ಅವುಗಳ ಸಂರಕ್ಷಣೆಯ ಕುರಿತಾಗಿ ಈ ಅಧ್ಯಾಯದಲ್ಲಿ ವಿವೇಚಿಸಲು ಪ್ರಯತ್ನಿಸಲಾಗಿದೆ.

---

೦೫. ಎಚ್ಕೆ ಕರ್ಕೇರ : ತರಂಗ (ವಾರಪತ್ರಿಕೆ), ೧೯೯೫, ಪುಟ-೨೪
೦೬. ಎಚ್ಕೆ ಕರ್ಕೇರ : ತರಂಗ (ವಾರಪತ್ರಿಕೆ), ೧೯೯೫, ಪುಟ-೨೪


ಕಿಶೋರ್ ಗೋವರ್ಧನದಾಸ್



ತಾಳೆಗರಿಯ ದಶಾವತಾರ (ಒರಿಸ್ಸಾ) ಬಿಸಣಿಕೆವಂದಿಗೆ ಕಿಶೋರ್ ಗೋವರ್ಧನದಾಸ್










ಸಂಗ್ರಹ ; ಜಗನ್ಮೋಹನ ವಸ್ತುಸಂಗ್ರಹಾಲಯ ಮೈಸೂರು

ಗಂಜೀಫಾ ಕಲಾವಿದ













ಸಂಗ್ರಹ ; ಜಗನ್ಮೋಹನ ವಸ್ತುಸಂಗ್ರಹಾಲಯ ಮೈಸೂರು



ಇತರ ದಿನ ಬಳಕೆಯ ವಸ್ತುಗಳ ಮೇಲೆ ಇಸ್ಪೀಟು ಎಲೆಗಳ ಪ್ರಭಾವ





ಹಿಂದೂ ಜ್ಯೋತಿಷ್ಯ ಎಲೆಗಳು







ಸಂಗ್ರಹ ; ಜಗನ್ಮೋಹನ ವಸ್ತುಸಂಗ್ರಹಾಲಯ ಮೈಸೂರು

ಗಂಜೀಫಾ ಎಲೆಗಳ ಪೋಷಕರನ್ನು ಮತ್ತು ಕಲಾಕೃತಿಗಳನ್ನು ಈ ಕೆಳಗಿನಂತೆ ವಿಂಗಡಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ :

೧. ಅರಮನೆಗಳಲ್ಲಿ ಪೋಷಿತಗೊಂಡ ಗಂಜೀಫಾ ಚಿತ್ರಗಳು

೨. ವಸ್ತು ಸಂಗ್ರಹಾಲಯಗಳಲ್ಲಿ ಪೋಷಿತಗೊಂಡ ಗಂಜೀಫಾ ಚಿತ್ರಗಳು

೧. ಅರಮನೆಗಳಲ್ಲಿ ಪೋಷಿತಗೊಂಡ ಗಂಜೀಫಾ ಚಿತ್ರಗಳು

ಕರ್ನಾಟಕದಲ್ಲಿ ವಿವಿಧ ಕಾಲಮಾನಗಳ ರಾಜಮನೆತನದವರ ಆಡಳಿತಾವಧಿಯಲ್ಲಿ ನಿರ್ಮಿತಗೊಂಡ ಹಲವಾರು ಅರಮನೆಗಳು ಕಂಡುಬರುತ್ತವೆ. ಅದರಲ್ಲೂ ವಿಶೇಷವಾಗಿ ಮೈಸೂರು ನಗರದಲ್ಲಿಯೇ ಹಲವಾರು ಅರಮನೆಗಳು ಕಂಡುಬರುತ್ತಿದ್ದು, ಇವು ಬಹುತೇಕ ಒಡೆಯರ ಕಾಲಮಾನಗಳಲ್ಲಿ ನಿರ್ಮಿತಗೊಂಡಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಮೈಸೂರಿನ ಮುಖ್ಯ ಅರಮನೆ, ಜಗನ್‌ಮೋಹನ ಅರಮನೆಗಳು.

ಮೈಸೂರ ಅರಮನೆಗಳಲ್ಲಿ ಇನ್ನೊಂದು ಮುಖ್ಯವಾದ ಅರಮನೆಯೆಂದರೆ ಜಗನ್ಮೋಹನ ಅರಮನೆ. ಇದನ್ನು ಮುಖ್ಯವಾಗಿ ಚಿತ್ರಕಲೆಗೆ ಸೀಮಿತವಾದ ಒಂದು ವಿಶಿಷ್ಟ ಕಲಾಶಾಲೆ ಎನ್ನಬಹುದು. ಇಲ್ಲಿ ಸದ್ಯ ಈ ಅರಮನೆಯು ಒಂದು ಕಲಾ ಸಂಗ್ರಹಾಲಯವಾಗಿ ಮಾರ್ಪಟ್ಟು ಕಲಾಭಿಮಾನಿಗಳ ಗಮನ ಸೆಳೆಯುತ್ತದೆ. ಇಲ್ಲಿ ಮೂನ್ನೂರಕ್ಕೂ ಹೆಚ್ಚು ಗಂಜೀಫಾ ಎಲೆಗಳು ಬೃಹದಾಕಾರದ ಎರಡು ಫ್ರೈಮಗಳಲ್ಲಿ ಸಂಗ್ರಹಗೊಂಡಿವೆ. ಇಲ್ಲಿ ಎಲ್ಲಾ ಚಿತ್ರಗಳು ಸುರಕ್ಷಿತವಾಗಿದ್ದು ನೋಡುಗರ ಕಣ್ಮನ ಸೆಳೆಯುತ್ತವೆ.

೨. ವಸ್ತು ಸಂಗ್ರಹಾಲಯಗಳಲ್ಲಿ ಪೋಷಿತಗೊಂಡ ಚಿತ್ರಗಳು

ಕರ್ನಾಟಕದಲ್ಲಿ ವಸ್ತು ಸಂಗ್ರಹಾಲಯಗಳು ಸಾಕಷ್ಟು ಸಂಖ್ಯೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿದ್ದು, ಕೆಲವೊಂದು ಸರಕಾರಿ ವಸ್ತು ಸಂಗ್ರಹಾಲಯಗಳು, ಕೆಲವೊಂದು ಖಾಸಗಿಯ ವಸ್ತು ಸಂಗ್ರಹಾಲಯಗಳೆಂದು ವಿವರಿಸಬಹುದಾಗಿದೆ. ವಸ್ತು ಸಂಗ್ರಹಾಲಯಗಳು ನಿರ್ದಿಷ್ಟ ಪ್ರದೇಶದ ಅಥವಾ ಸಮುದಾಯದ ಕಲೆ ಮತ್ತು ಸಂಸ್ಕೃತಿಗಳನ್ನು ಉಳಿಸಿಕೊಂಡು ಬರುವುದರಲ್ಲಿ ಮಾತ್ರವಲ್ಲದೇ, ಮಾನವನ ಸೃಜನಶೀಲತೆ ಮತ್ತು ಪ್ರಕೃತಿಯ ಮೇಲಿನ ನಿಯಂತ್ರಣದ ಬಗ್ಗೆ ಮೂಲಭೂತ ಸಾಕ್ಷಿಗಳನ್ನು ಸಾದರಪಡಿಸುವುದರ ಮೂಲಕ ಮಾನವತೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಉತ್ಥಾನಕ್ಕೆ ನೆರವಾಗುವುದರಲ್ಲೂ ಜೀವಂತ ಪಾತ್ರ ವಹಿಸುವುದು ಇಂದಿನ ವಸ್ತು ಸಂಗ್ರಹಾಲಯಗಳ ಉದ್ದೇಶವೆನ್ನಬಹುದು. ಅದರ ಜೊತೆಗೆ ವಸ್ತುಗಳ ಸಂಗ್ರಹ ಹಾಗೂ ಸಂರಕ್ಷಣೆಯ ಅಗತ್ಯತೆಯನ್ನು ಸಾರ್ವಜನಿಕರಿಗೆ ತಿಳಿಹೇಳುವುದು ಕೂಡಾ ಮುಖ್ಯವೆನಿಸುತ್ತದೆ. ವಸ್ತುಗಳ ಕಾಲಮಾನ, ಅವುಗಳ ಹಿನ್ನೆಲೆ, ರೂಪ, ವಿನ್ಯಾಸ, ಪರಿಕರ ಹಾಗೂ ಅವುಗಳ ಮಹತ್ವವನ್ನು ತಿಳಿಯಪಡಿಸುವುದು ಮಹತ್ವವೆನಿಸುತ್ತದೆ. ಆ ಕೆಲಸವನ್ನು ವಸ್ತು ಸಂಗ್ರಹಾಲಯಗಳು ಇಂದು ಮಾಡುತ್ತಲಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದ “ಮಂಜೂಷಾ” ವಸ್ತು ಸಂಗ್ರಹಾಲಯದಲ್ಲಿ ಸುಮಾರು ನೂರಾ ನಲವತ್ತೆಂಟು ಗಂಜೀಫಾ ಎಲೆಗಳು ಸಂಗ್ರಹಗೊಂಡಿವೆ. ಈ ಅಮೂಲ್ಯ ಗಂಜೀಫಾ ಎಲೆಗಳನ್ನು

"ಮಂಜೂಷಾ"ದ ಕ್ಯೂರೆಟರ್ ಆಗಿದ್ದ ಖ್ಯಾತ ಚಿತ್ರಕಲಾವಿದ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರು ಕರ್ನಾಟಕದ ವಿವಿಧ ಪ್ರದೇಶಗಳನ್ನು ಸಂದರ್ಶಿಸಿ ಸಂಗ್ರಹಮಾಡಿದ್ದಾರೆ. ಇಲ್ಲಿ ಸಂಗ್ರಹಗೊಂಡಿರುವ ನೂರಾ ನಲವತ್ತೆಂಟು ಗಂಜೀಫಾ ಎಲೆಗಳು ಮೂರು ಇಂಚು ವೃತ್ತಾಕಾರದ ಅಳತೆಯ ದಶಾವತಾರ ಚಿತ್ರಗಳಾದ ಮತ್ಸ್ಯ, ಕೂರ್ಮ, ವರಾಹ, ರಾಮ, ಬಲರಾಮ, ಕೃಷ್ಣ, ನರಸಿಂಹ, ವಾಮನ, ಕಲ್ಕಿ ಅಲ್ಲದೆ ಇನ್ನೂ ಹಲವಾರು ಪೌರಾಣಿಕ ಕಥೆಗಳನ್ನೊಳಗೊಂಡ ಚಿತ್ರಗಳಾಗಿವೆ. ಈ ಎಲ್ಲ ಚಿತ್ರಗಳನ್ನು ಥರ್ಮಾಕೋಲಿನ ಮೇಲೆ ಸಾಲಾಗಿ ಹಚ್ಚಿ ದೊಡ್ಡ ಬಾಕ್ಸನಲ್ಲಿ ಪ್ರದರ್ಶಿಸಲಾಗುತ್ತಿದೆ. ಮೂಡಬಿದರಿಯ ಆಳ್ವಾಸ್ ನುಡಿಸಿರಿಯ ವಸ್ತುಸಂಗ್ರಹಾಲಯದಲ್ಲಿ ಅನೇಕ ಗಂಜೀಫಾ ಚಿತ್ರಗಳು ಸಂಗ್ರಹಗೊಂಡಿವೆ.

ಮೈಸೂರಿನ ವಿಶ್ವವಿದ್ಯಾಲಯದ ಜನಪದ ವಸ್ತು ಸಂಗ್ರಹಾಲಯದಲ್ಲಿ ಸುಮಾರು ನೂರಾ ನಲವತ್ತೈದಕ್ಕೂ ಹೆಚ್ಚು ಗಂಜೀಫಾದ ಎಲೆಗಳು ಸಂಗ್ರಹಗೊಂಡಿವೆ. ಇಲ್ಲಿನವಗ್ರಹಗಳಿಗೆ ಸಂಬಂಧಪಟ್ಟಂತೆ ಹಾಗೂ ರಾಶಿಗಳಿಗೆ ಸಂಬಂಧಿಸಿದಂತೆ ಅನೇಕ ಚಿತ್ರಗಳು ನಮಗೆ ನೋಡಲು ಇಂದು ಲಭ್ಯವಿವೆ. ಅದಲ್ಲದೆ ಬೆಂಗಳೂರಿನ ವಸಂತ ನಗರದಲ್ಲಿರುವ ಮಾಡರ್ನ್ ಆರ್ಟ್ ಗ್ಯಾಲರಿಯಲ್ಲಿ ಸುಮಾರು ಐದು ಕಲಾಕೃತಿಗಳು ಸಂಗ್ರಹಗೊಂಡಿವೆ. ಉಡುಪಿಯ ಮಣಿಪಾಲದಲ್ಲಿರುವ ಶ್ರೀ ವಿಜಯನಾಥ ಶೆಣೈಯವರು ಸ್ಥಾಪಿಸಿರುವ "ಹೆರಿಟೇಜ್ ವಿಲ್ಲೇಜ್" ಎಂಬ ವಸ್ತು ಸಂಗ್ರಹಾಲಯದಲ್ಲಿ ಮೈಸೂರಿನ ರಘುಪತಿ ಭಟ್ಟ ಅವರ ಗಂಜೀಫಾಗಳನ್ನು ಸಂಗ್ರಹಿಸಲಾಗಿದೆ.

ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಸುಮಾರು ನೂರಾ ಐವತ್ತು ಆಧುನಿಕ ಗಂಜೀಫಾಗಳನ್ನು ಆಗಿನ ಮುಖ್ಯಸ್ಥರಾದ ಎಂ.ಎಸ್. ನಂಜುಂಡರಾಯರು ಗಂಜೀಫಾ ಶಿಬಿರ ಮಾಡಿ ಸ್ಥಳೀಯ ಹಾಗೂ ಹೊರ ರಾಜ್ಯದ ಕಲಾವಿದರಿಂದ ಗಂಜೀಫಾಗಳನ್ನು ರಚಿಸಿ ಪರಿಷತ್ತಿನಲ್ಲಿ ಸಂಗ್ರಹಿಸಿದ್ದಾರೆ.

ಹೀಗೆ ಕರ್ನಾಟಕದಲ್ಲಿ ಕಂಡು ಬರುವ ಅನೇಕ ವಸ್ತು ಸಂಗ್ರಹಾಲಯಗಳಲ್ಲಿ ಗಂಜೀಫಾ ಚಿತ್ರಗಳು ಸಂಗ್ರಹಗೊಂಡಿದ್ದನ್ನು ಕಾಣುತ್ತೇವೆ. ಎಲ್ಲ ವಸ್ತು ಸಂಗ್ರಹಾಲಯಗಳಲ್ಲಿ ಕಂಡು ಬರದೇ ಇದ್ದರೂ ಕೆಲವೊಂದು ವಸ್ತು ಸಂಗ್ರಹಾಲಯಗಳಲ್ಲಿ ಈ ಚಿತ್ರಗಳು ಸಂಗ್ರಹಗೊಂಡಿದ್ದನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ.

ಕರ್ನಾಟಕೇತರ ಪ್ರದೇಶಗಳಲ್ಲಿ ಸಂಗ್ರಹಗೊಂಡ ಗಂಜೀಫಾ ಚಿತ್ರಗಳು

ಕರ್ನಾಟಕೇತರ ರಾಜ್ಯದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ, ಒಂದೇ ರಚನಾ ಶೈಲಿಯಲ್ಲಿ ಗಂಜೀಫಾ ಎಲೆಗಳು ಕಂಡುಬರುತ್ತವೆ. ಇವು ಆಟಕ್ಕೆ ಸಂಬಂಧಿಸಿದಂತೆ ಪೌರಾಣಿಕ ದೃಶ್ಯಗಳನ್ನೊಳಗೊಂಡು ರಚನೆಯಾಗಿವೆ. ಇಂತಹ ಅಪರೂಪದ ಕಿರುರೂಪದ ಗಂಜೀಫಾ ಚಿತ್ರಕಲೆ ಮಹಾರಾಜರ ಖಾಸಗಿ ವಸ್ತು ಸಂಗ್ರಹಾಲಯದಲ್ಲಿ ಹಾಗೂ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಪೋಷಣೆಗೊಂಡಿದೆ.

ಪುಣೆಯ ರಜಾ ಕೇಳಕರ ಮ್ಯೂಜಿಯಂನಲ್ಲಿ ರತ್ನಗಿರಿಯ ಕೊಂಕಣ ಶೈಲಿಯ ಹಸ್ತಿದಂತದಲ್ಲಿ ವೃತ್ತಾಕಾರ ಹಾಗೂ ಚೌಕಾಕಾರದಲ್ಲಿ ಮಾಡಿದ ನೂರಕ್ಕೂ ಹೆಚ್ಚು ಬೆಲೆಬಾಳುವ ಗಂಜೀಫಾಗಳು ಸಂಗ್ರಹಗೊಂಡಿವೆ. ಗಂಜೀಫಾ ಎಲೆಗಳಲ್ಲಿ ಪ್ರಾಣಿ, ಪಕ್ಷಿಗಳು, ರಾಜರ ಭೇಟಿಯ ಚಿತ್ರಗಳು ಇಲ್ಲಿ ವಿಭಿನ್ನವಾಗಿ ಚಿತ್ರಿತಗೊಂಡಿವೆ.





ಸಂಗ್ರಹ ; ಜನಪದ ವಸ್ತು ಸಂಗ್ರಹಾಲಯ, ಮೈಸೂರು







ಸಂಗ್ರಹ ; ಕರ್ನಾಟಕ ಚಿತ್ರಕಲಾ ಪರಿಷತ್ ಬೆಂಗಳೂರು

ಕೊಲ್ಹಾಪುರದ ಶಾಹುಮಹಾರಾಜ ವಸ್ತು ಸಂಗ್ರಹಾಲಯದಲ್ಲಿ ಇಪ್ಪತ್ತು ಮೊಘಲ್ ಶೈಲಿಯ ಗಂಜೀಫಾಗಳು ಸಂಗ್ರಹಗೊಂಡಿವೆ. ಮುಂಬಯಿನ ಪ್ರಿನ್ಸ ಆಫ್ ವೇಲ್ಸ ವಸ್ತು ಸಂಗ್ರಹಾಲಯದಲ್ಲಿ ಅನೇಕ ಗಂಜೀಫಾಗಳು ಸಂಗ್ರಹಗೊಂಡಿವೆ. ಬರೋಡಾದ ವಸ್ತುಸಂಗ್ರಹಾಲಯದಲ್ಲಿ ಹಸ್ತಿದಂತಹ ಬೆಲೆಬಾಳುವ ಗಂಜೀಫಾಗಳು ಸಂಗ್ರಹಗೊಂಡಿವೆ. ಅಲ್ಲದೇ ಭೂಪಾಲದ ಮಾನವ ಸಂಗ್ರಹಾಲಯದಲ್ಲಿ ನೂರಕ್ಕೂ ಹೆಚ್ಚು ಗಂಜೀಫಾಗಳು ಸಂಗ್ರಹಗೊಂಡಿವೆ.

ಮುಂಬಯಿನ ಕಿಶೋರ ಗೋವರ್ಧನದಾಸರು ಇಸ್ಪೇಟಾಟದ (ಗಂಜೀಫಾ) ಭಕ್ತರ ಪಾಲಿಗೆ ಸೇರಿದವರು. ಇವರ ಹವ್ಯಾಸ ಆಡುವುದು ಮಾತ್ರವಲ್ಲ, ಅವರಿಗೆ ಜಗತ್ತಿನಲ್ಲಿ ಎಲ್ಲಿ ಎಲ್ಲಿ ಎಂಥ ಬಗೆಗಳ ಇಸ್ಪೇಟೆಲೆಗಳಿವೆ. ಯಾವಾಗ ಬೆಳಕಿಗೆ ಬಂದಿವೆ ಮತ್ತು ಅವುಗಳು ಎಲ್ಲೆಲ್ಲಿವೆ, ಅವುಗಳ ಆಕಾರ, ಶೈಲಿ, ಇತಿಹಾಸ ಹುಡುಕುವ ಹವ್ಯಾಸ. ಪ್ರಪಂಚದಲ್ಲಿರುವ ಅನೇಕ ಬಗೆಬಗೆಯ ನಲವತ್ತು ದೇಶಗಳ ಮೂರು ಸಾವಿರಕ್ಕೂ ಹೆಚ್ಚು ವಿವಿಧ ಬಗೆಯ ಗಂಜೀಫಾ ಎಲೆಗಳ ಖಾಸಗಿ ಸಂಗ್ರಹವಿದೆ. ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಭಾರತ ಕಲಾಭವನದಲ್ಲಿ ಮೊಘಲ್ ಶೈಲಿಯ ನೂರಕ್ಕೂ ಹೆಚ್ಚು ಗಂಜೀಫಾಗಳು ಸಂಗ್ರಹಗೊಂಡಿವೆ.

ದೇಶದ ವಿವಿಧ ಭಾಗಗಳಲ್ಲಿ ಸಂಗ್ರಹಗೊಂಡ ಗಂಜೀಫಾ ಎಲೆಗಳು

ಆಂಧ್ರ ಪ್ರದೇಶದ ನಿರ್ಮಲ ಹಾಗೂ ಕರ್ನೂಲ, ಬಂಗಾಲಪಲ್ಲಿ, ಚದ್ದಪತ್, ಹೈದ್ರಾಬಾದಗಳಲ್ಲಿ ಗಂಜೀಫಾ ಎಲೆಗಳು ಸಂಗ್ರಹಗೊಂಡಿವೆ. ಗುಜರಾತನ ಅಹಮದಾಬಾದ, ಕಾಂಬಾಡಿ, ಜಮ್ಮು, ಕಾಶ್ಮೀರ, ಶ್ರೀನಗರ, ಪಂಜಾಬದ ಹೊಷಿಯಾಪುರ, ಉತ್ತರ ಪ್ರದೇಶದ ದೆಹಲಿ, ಲಖನೌ, ವಾರಣಾಸಿ, ಬಿಹಾರದ ವಿಷ್ಣುಪುರ, ಪಾಟ್ನಾ, ಮುರುಪಿದಾಬಾದ್, ರಾಜಸ್ಥಾನದ ಜೈಪುರ, ಉದಯಪುರ, ಕರೋಲಿ, ಗುಜರಾತದ ಅಹಮದಾಬಾದ್, ಕಾಂಬೋಡಿ, ಮಧ್ಯಪ್ರದೇಶದ ಭೂಪಾಲ, ಶಿವಪುರ, ಓರಿಸ್ಸಾದ ಸೋನಿಪುರ, ಪರ್ಲಕೆಮುಂಡಿ, ಪುರಿ, ಮಹಾರಾಷ್ಟ್ರದ ಕೊಲ್ಹಾಪುರ, ಸಾವಂತವಾಡಿ, ಪುಣಾ, ಮುಂಬೈ, ಕರ್ನಾಟಕದ ಮೈಸೂರು, ಬೆಂಗಳೂರು, ತಮಿಳುನಾಡಿನ ತಂಜಾವೂರು.

ವಿದೇಶದಲ್ಲಿ ಸಂಗ್ರಹಗೊಂಡ ಗಂಜೀಫಾ ಎಲೆಗಳು

ಪಾಶ್ಚಿಮಾತ್ಯ ದೇಶಗಳಿಂದ ಭಾರತಕ್ಕೆ ಪ್ರವೇಶ ಪಡೆದ ಗಂಜೀಫಾ, ಭಾರತದಲ್ಲಿ ೧೫, ೧೬, ೧೭, ೧೮ನೇ ಶತಮಾನದಲ್ಲಿ ದೇವಾನುದೇವತೆಗಳ ವಸ್ತುವಿಷಯಗಳನ್ನೊಳಗೊಂಡ ಚಿತ್ರಗಳನ್ನು ವಿದೇಶೀಯರು ಭಾರತದಿಂದ ಖರೀದಿಸಿ ವಸ್ತು ಸಂಗ್ರಹಾಲಯದಲ್ಲಿ ಕಾಯ್ದಿರಿಸಿದ್ದಾರೆ. ಅವುಗಳಲ್ಲಿ ಅಮೇರಿಕಾದ ಯೇಲ್ ಯೂನಿರ್ವಸಿಟಿ ಗ್ರಂಥಾಲಯದಲ್ಲಿ ದಿಕ್ಪಾಲ ಗಂಜೀಫಾ ಸೂಟ್‌ಗಳು ಸಂಗ್ರಹಗೊಂಡಿವೆ.

ಲಂಡನ್ನಿನ ವಿಕ್ಟೋರಿಯಾ ಆಲ್ಬರ್ಟ ವಸ್ತು ಸಂಗ್ರಹಾಲಯದ ಕ್ಯೂರೆಟರ್ ಆಗಿದ್ದ, ಶ್ರೀಮತಿ ಡಿಬೋರಾ ಸ್ವೆಲೋ ನೂರಾಎಂಟು ಸಂಪೂರ್ಣ ರಾಮಾಯಣದ ಗಂಜೀಫಾ ಸೂಟನ್ನು ಸಂಗ್ರಹದಲ್ಲಿರಿಸಿದ್ದಾರೆ. ಲಂಡನ್ನಿನ ಭಾರತೀಯ ವಿದ್ಯಾಭವನದಲ್ಲಿ ಅನೇಕ ಹಿಂದೂ ಗಂಜೀಫಾಗಳಿದ್ದು ಅಲ್ಲದೇ ಫ್ರಾನ್ಸ್, ಜಪಾನ್, ಸ್ಪೇನ್, ಯು.ಎಸ್.ಎ ಹಾಗೂ ನೇಪಾಳದ ಕಠ್ಮಂಡುವಿನಲ್ಲಿ ಗಂಜೀಫಾ ಎಲೆಗಳು ಸಂಗ್ರಹಗೊಂಡಿವೆ.[೭]

೦೭. R & N. Y. Leyden, The Playing Cards of India, p.72

ಗಂಜೀಫಾ ಚಿತ್ರಗಳ ಸಂಗ್ರಹಣಾ ಕಾರ್ಯ

ಗಂಜಿಫಾ ರಾಷ್ಟ್ರದ ಅತ್ಯಮೂಲ್ಯ ಆಟಗಳ ನಿಧಿಯಾಗಿದೆ. ಗಂಜೀಫಾ ಚಿತ್ರಕಲೆ ಸಂಗ್ರಹಣ ಕಾರ್ಯ ಪ್ರತಿಚಿತ್ರಕಲಾ ಶಾಲೆಗಳಲ್ಲಿ ಶೈಕ್ಷಣಿಕ ಅವಧಿಯ ಕಾರ್ಯಸೂಚಿಯಾಗಿರಬೇಕು. ರಾಷ್ಟ್ರೀಯ, ವಿಭಾಗ ಮಟ್ಟದ ಕೇಂದ್ರಗಳಂತೆ ಕಾರ್ಯ ನಿರ್ವಹಿಸುತ್ತಿರುವ ಕಲಾ ಶಾಲೆಗಳು ಹಾಗೂ ವಿಶ್ವವಿದ್ಯಾಲಯಗಳು ತಮ್ಮ ಕ್ಷೇತ್ರವ್ಯಾಪ್ತಿಯಲ್ಲಿ ಗಂಜೀಫಾ ಚಿತ್ರಕಲೆ ಹಾಗೂ ಆಟಗಳ ಸಂಶೋಧನಾ ಸೂಚಿ ನಿರ್ಮಿಸಬೇಕು. ಸಂಶೋಧಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಕ್ಷೇತ್ರಕಾರ್ಯದಲ್ಲಿ ನಿರತರಾದಾಗ ಗಂಜೀಫಾ ಚಿತ್ರಗಳ ಅನ್ವೇಷಣಾ ಕಾರ್ಯವನ್ನು ಪರಿಶೀಲಿಸಬೇಕು. ಚಿತ್ರಕಲಾ ಶಾಲೆಗಳು ಹಾಗೂ ವಿಶ್ವವಿದ್ಯಾಲಯಗಳು ಸಂಪರ್ಕ ಸಭೆಗಳಲ್ಲಿ, ವಿದ್ಯಾರ್ಥಿಸಮುದಾಯದಲ್ಲಿ ಗಂಜೀಫಾ ಚಿತ್ರಕಲೆ ಹಾಗೂ ಆಟಗಳ ಕುರಿತು ಅರಿವು ಮೂಡಿಸಲು ಎಲ್ಲ ವಿಭಾಗಗಳ ವಿದ್ಯಾರ್ಥಿಗಳು, ರಾಷ್ಟ್ರೀಯ ಸ್ವಯಂ ಸೇವಾನಿರತ ಅಧಿಕಾರಿಗಳು ಗಂಜೀಫಾ ಚಿತ್ರಗಳ ನೆಲೆಯನ್ನು ಶೋಧಿಸುವ ಕಾರ್ಯ ಮಾಡಿದರೆ, ಸಂಶೋಧಕರು ಸೂಚೀಕರಣ, ಸಂರಕ್ಷಣದಂತಹ ಕಾರ್ಯವು ಮುಂದುವರಿಯುವುದು. ಪ್ರತಿ ವರ್ಷದ ವಾರ್ಷಿಕ ವರದಿಯಲ್ಲಿ ಹೊಸದಾಗಿ ಸಂಗ್ರಹಿತವಾದ ಗಂಜೀಫಾ ಚಿತ್ರಗಳ ವಿವರ, ಆರೈಕೆಗೊಂಡ ಲೆಕ್ಕದ ವಿವರವು ಇರತಕ್ಕದ್ದು. ಇದರೊಂದಿಗೆ ಚಿತ್ರ, ಚಿತ್ರಕಲೆಯನ್ನು ನೋಡುವುದನ್ನು, ಅಭ್ಯಾಸ ಮಾಡುವುದನ್ನು ಒದಗಿಸಿಕೊಡಬೇಕು. ಚಿತ್ರವಿರಲಿ, ಆಟವಿರಲಿ, ಸಾಹಿತ್ಯವಿರಲಿ, ತಾಂತ್ರಿಕತೆಯ ಮತ್ತಾವುದೇ ಪ್ರಚಾರವಿರಲಿ ಅದು ಗಂಜೀಫಾ ಚಿತ್ರ ಹಾಗೂ ಆಟ ನಮ್ಮ ರಾಷ್ಟ್ರೀಯ ಸೊತ್ತು. ಅದು ಎಲ್ಲರಿಗೂ ಸೇರಿರುವ ಸೊತ್ತು ಎಂಬ ಭಾವ ಎಲ್ಲರಿಗೂ ಇರಬೇಕು.

ಗಂಜೀಫಾ ಚಿತ್ರಗಳ ಸಂರಕ್ಷಣಾ ಕಾರ್ಯಗಳು

ಗಂಜೀಫಾ ಚಿತ್ರಗಳ ಸಂರಕ್ಷಣಾ ಕಾರ್ಯವೆಂದರೆ ನಾಡಿನ ಪರಂಪರೆಯನ್ನು, ಪ್ರಾದೇಶಿಕ ವೈಶಿಷ್ಟ್ಯವನ್ನು ಕಾಯ್ದಿಟ್ಟುಕೊಳ್ಳುವಂತಹ ಕಾರ್ಯವಾಗಿದೆ. ಇದು ಅತ್ಯಂತ ಜವಾಬ್ದಾರಿಯ ಕಾರ್ಯವಾಗಿದೆ. ಗಂಜೀಫಾ ಚಿತ್ರಗಳ ಸಂಸ್ಕರಣಕಾರ್ಯದ ಬೌದ್ಧಿಕ ಕಾರ್ಯದಂತೆ ಗಂಜೀಫಾ ಚಿತ್ರಗಳ ಸಂಸ್ಕರಣೆಯ ಕಾರ್ಯವು ದೇಶ ಕಾಯುವ ಸೈನಿಕನಂತೆ ಕಟ್ಟೆಚ್ಚರದ ದೈಹಿಕ ಕಾರ್ಯವು ಅಗಿದೆ.

ನೈಸರ್ಗಿಕ ಆಪತ್ತು

ಗಂಜೀಫಾ ಚಿತ್ರಗಳನ್ನು ಮಾನವನಿರ್ಮಿತ ಆಪತ್ತುಗಳಿಂದ ಭಿನ್ನವಾಗಿರುವ ನೈಸರ್ಗಿಕ ವಿಪತ್ತುಗಳಿಂದ ಬೆಂಕಿ, ಗಾಳಿ, ಮಳೆ, ಮತ್ತು ಕ್ರಿಮಿ–ಕೀಟಗಳಲ್ಲದೆ ಹೆಗ್ಗಣ–ಇಲಿಗಳಿಂದಲೂ ಈ ಚಿತ್ರಗಳಿಗೆ ವ್ಯಾಪಕವಾಗಿರುವ ರಕ್ಷಣೆಯ ಕಾರ್ಯವನ್ನು ಒದಗಿಸಬೇಕಾಗಿದೆ. ವಾಯುಶೂನ್ಯವಾದ ಪೆಟ್ಟಿಗೆಗಳಲ್ಲಿ ಅಥವಾ ಕಪಾಟಿನಲ್ಲಿ ಗಂಜೀಫಾ ಚಿತ್ರಗಳನ್ನಿಟ್ಟು ಸಂರಕ್ಷಿಸಬಹುದು.

ಆಧುನಿಕ ಕ್ರಮ ಅಳವಡಿಕೆ

ಗಂಜೀಫಾ ಚಿತ್ರಗಳ ರಕ್ಷಣೆಗೆ ಹಲವಾರು ಸಾಧನ, ಸಂಪತ್ತುಗಳನ್ನು ಇಲ್ಲಿ ಬಳಸಿಕೊಳ್ಳಬಹುದಾಗಿದೆ.

............ವತಾರ



ಮೀನ ರಾಶಿ



ಸಿಂಹ ರಾಶಿ



ಕುಂಭ ರಾಶಿ



ಧನಸ್ಸು ರಾಶಿ



ತುಲಾ ರಾಶಿ

ತುಂಬಾ ಶಿಥಿಲವಾಗಿರುವ ಗಂಜೀಫಾ ಚಿತ್ರಗಳ ಸಂರಕ್ಷಣೆಗಾಗಿ ಗಂಜೀಫಾ ಚಿತ್ರಗಳನ್ನು ಛಾಯಾಚಿತ್ರ ಮಾಡುವ, ಝೆರಾಕ್ಸ್ ತೆಗೆಯುವ, ಮೈಕ್ರೋ ಫಿಲ್ಮ್, ಸ್ಲೈಡ್ಸ್‌ಗಳನ್ನು ಮಾಡುವ ವಿಧಾನಗಳಿವೆ. ಗಂಜೀಫಾ ಚಿತ್ರಗಳಿಗೆ ಪದೇ ಪದೇ ಧೂಳು ತೆಗೆದು ಸ್ವಚ್ಛಗೊಳಿಸಿ ಸಿಟ್ರೋನಲ್ ರಾಸಾಯನಿಕ ಅಥವಾ ಮೇಲು ಕೋಟೆಯಲ್ಲಿ ಸಿಗುವ ದೇಶೀಯ ತೈಲ ಅಥವಾ ಇತರ ಯಾವುದೇ ರಾಸಾಯನಿಕ ತೈಲವನ್ನು ಲೇಪಿಸಿ ನೆರಳಲ್ಲಿ, ಗಾಳಿಯಲ್ಲಿ ಒಣಗಿಸಿ ಇಡಬಹುದು. ಕೀಟರಕ್ಷಣೆಗಾಗಿ ಪ್ರಧೂಮನ ಪೆಟ್ಟಿಗೆಯನ್ನು ಬಳಸಬಹುದು. ವಿಶಾಲವಾದ ಕೊಠಡಿಗಳಲ್ಲಿ ಗಾಳಿ, ಬೆಳಕು ಇರುವಂತೆ ಕಪಾಟುಗಳಿಗೂ ಪ್ರವೇಶಿಸುವಂತೆ ಮಾಡಿರಬೇಕು. ಸದಾ ಒಂದೇ ರೀತಿಯ ಉಷ್ಣಾಂಶವಿರುವಂತೆ ಹವಾನಿಯಂತ್ರಿತ ಕೊಠಡಿಗಳನ್ನು ಬಳಸಬಹುದು. ಜಿರಳೆ, ಬೆಳ್ಳಿ ಮೀನು, ಪುಸ್ತಕ ಕ್ರಿಮಿ, ಬೂಷ್ಟ್, ಗೆದ್ದಲು ಬರದಂತೆ ಕೀಟನಾಶಕಗಳನ್ನು ಬಳಸಬೇಕು.

ನಕಲು ಮಾಡುವುದು

ಗಂಜೀಫಾ ಚಿತ್ರಗಳ ದಾಖಲೆಗಾಗಿ ಚಿತ್ರಗಳನ್ನು ಪ್ರತಿ ಮಾಡುವಂತೆ ಎದುರಿಗೆ ಕುಳಿತು ಅದು ಇದ್ದಂತೆ ರಚಿಸಿ ನಕಲು ಮಾಡುವ ವಿಧಾನವೂ ಇದೆ. ಹೀಗೆ ನಕಲು ಮಾಡುವಾಗ ಗಂಜೀಫಾ ಚಿತ್ರಗಳು ಹಾಳಾಗಿದ್ದರೆ, ಬಣ್ಣ ಹೋಗಿದ್ದರೆ, ಅದು ಹೇಗೆ ಕಾಣುವುದೊ ಹಾಗೇ ನಕಲು ಮಾಡುವುದು. ಅರೆಬರೆಯಾಗಿ ಕಾಣುವ ಆಕಾರಗಳನ್ನು ಪೂರ್ತಿ ಮಾಡುವುದು ಹಾಗೂ ಏನೂ ಉಳಿದಿಲ್ಲದ ಭಾಗದಲ್ಲಿ ಊಹಾ ಪಾಠದಂತೆ ಊಹಿಸಿ ಚಿತ್ರಿಸುವುದು. ಹೀಗೆ ಮೂರು ರೀತಿ ಅನುಸರಿಸುತ್ತಾರೆ. ನಕಲು ಮಾಡುವ ಪದ್ಧತಿಯಲ್ಲಿ ಪ್ರತಿ ಮಾಡುವ ವಿಧಾನಕ್ಕಿಂತ ಹೆಚ್ಚಿನ ಅಡಚಣೆಗಳು, ವ್ಯತ್ಯಾಸಗಳು ಕಂಡುಬರುತ್ತವೆ. ಅರ್ಹ ಕಲಾವಿದರಿಲ್ಲದಿದ್ದರೆ ಚಿತ್ರಗಳ ಶೈಲಿ, ರೇಖಾವಿನ್ಯಾಸ, ವರ್ಣಗಾರಿಕೆಯಲ್ಲಿ ಭಿನ್ನತೆ ಕಂಡುಬರುವುದು ಮಾತ್ರವಲ್ಲದೇ ಮೂಲ ಚಿತ್ರಗಳನ್ನು ಹೋಲಲಾರವು. ಅಲ್ಲದೇ ಕಲಾವಿದ ಎಷ್ಟೇ ಪ್ರಬುದ್ಧನಿದ್ದರೂ ಮೂಲ ಚಿತ್ರಗಳ ಶೈಲಿ, ರೇಖಾವಿನ್ಯಾಸ, ವರ್ಣಗಾರಿಕೆಯನ್ನು ಆತನ ಕೃತಿಗಳು ಸರಿಗಟ್ಟಲಾರವು. ಪ್ರಾಚೀನ ವರ್ಣಗಳ ಹೊಳಪು, ಆಧುನಿಕ ವರ್ಣಗಳ ಹೊಳಪು ವ್ಯತ್ಯಾಸವಾಗುವುದು. ಪ್ರತಿ ಮಾಡಿದ ಚಿತ್ರಗಳು ಮೂಲ ಚಿತ್ರಕ್ಕಿಂತ ಬೇರೆಯಾಗಿ ಕಂಡು ಬರುವ ಸಂಭವವೇ ಅಧಿಕ. ಆದರೂ ಗಂಜೀಫಾ ಚಿತ್ರಗಳ ಉಳಿವಿಗಾಗಿ ಚಿತ್ರಗಳ ಪ್ರತಿ ಮಾಡಿಸುವುದು ಅನಿವಾರ್ಯವಾಗಿದೆ.

ಛಾಯಾಚಿತ್ರಣ ಮಾಡುವುದು

ಗಂಜೀಫಾ ಚಿತ್ರಗಳ ಉಳಿವಿಗೆ ಮತ್ತೊಂದು ಕ್ರಮವೆಂದರೆ ಛಾಯಾಚಿತ್ರಣ ಮಾಡಿಸುವುದು. ವರ್ಣ ಛಾಯಾಚಿತ್ರಗಳಲ್ಲಿ ಇಂದು ಅತ್ಯಾಧುನಿಕ ವಿಧಾನ ಬಂದಿರುವುದು. ಚಿತ್ರಗಳನ್ನು ಯಥಾವತ್ತಾಗಿ ಸೆರೆ ಹಿಡಿಯುವುದಷ್ಟೇ ಅಲ್ಲದೇ ಚಿತ್ರಗಳ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಸೆರೆಹಿಡಿಯಬಲ್ಲ ಆಧುನಿಕ ಕ್ಯಾಮೆರಾಗಳು ಲಭ್ಯವಿವೆ. ಛಾಯಾಚಿತ್ರ ವಿಧಾನದಲ್ಲಿ ಚಿತ್ರಗಳ ಮೂಲ ಸ್ವರೂಪ, ಬಣ್ಣಗಳು, ಚಿತ್ರದ ಮೈವಳಿಕೆಗಳು ಯಥಾವತ್ತಾಗಿ ಮೂಡಿ ಬಂದು ಮೂಲ ಚಿತ್ರಕ್ಕೆ ಅತೀ ಸಮೀಪವಾಗಿ ಕಂಡುಬರುತ್ತವೆ. ಛಾಯಾಚಿತ್ರ ಮಾಡಿದ ಚಿತ್ರಗಳು ಮನುಷ್ಯನು ನಕಲು ಮಾಡಿದ ಮತ್ತು ಪ್ರತಿ ಮಾಡಿದ ಚಿತ್ರಗಳಿಗಿಂತ ಮೂಲ ಚಿತ್ರಗಳ ಸ್ವರೂಪವನ್ನು ಒದಗಿಸುವುದರಲ್ಲಿ ಹೆಚ್ಚಿನ ಅನುಕೂಲ ಮಾಡುತ್ತವೆ.

ಹೀಗೆ ಛಾಯಾಚಿತ್ರ ಮಾಡಿಸುವಾಗ ಒಂದೊಂದು ಸ್ಥಳದ ಗಂಜೀಫಾ ಚಿತ್ರಗಳನ್ನು ಒಂದು ಕಡೆಗೆ ಸೇರಿಸಿ ಸಂಪುಟಗಳಲ್ಲಿ ಹೊರತರಬಹುದು. ಇಂತಹ ಚಿತ್ರಸಂಪುಟಗಳಲ್ಲಿ ಎಡಗಡೆಯ ಪುಟದಲ್ಲಿ ಚಿತ್ರಗಳ ವರ್ಣಛಾಯಾ ಚಿತ್ರಗಳನ್ನು ಬಲಭಾಗದಲ್ಲಿ ಚಿತ್ರಗಳಿಗೆ ಸಂಬಂಧಿಸಿದ ಅವಶ್ಯಕ ಮಾಹಿತಿಯನ್ನು ನೀಡುವುದು.

ಸ್ಲೈಡ್ಸ್ ಮಾಡುವುದು

ಛಾಯಾ ಚಿತ್ರಗಳನ್ನು ಮಾಡಿ ಗಂಜೀಫಾ ಚಿತ್ರಗಳನ್ನು ಕಾಯ್ದಿರಿಸಿದಂತೆ ಸ್ಲೈಡ್ಸ್‌ಗಳನ್ನು ಮಾಡಿಯೂ ಕಾಯ್ದಿರಿಸಬಹುದು. ಅವಶ್ಯಕತೆ ಬಿದ್ದಾಗ ಅಥವಾ ನಮಗೆ ಬೇಕಾದಾಗ ಸ್ಲೈಡ್ಸ್‌ಗಳನ್ನು ಹಾಕಿಕೊಂಡು ಚಿತ್ರಗಳನ್ನು ನೋಡಿ ಸ್ವರೂಪ ತಿಳಿದುಕೊಳ್ಳಬಹುದು. ಒಂದೊಂದು ನೆಲೆಗಳ ಸ್ಲೈಡ್ಸ್‌ಗಳನ್ನು ಒಂದೊಂದು ಕಡೆ ವ್ಯವಸ್ಥಿತವಾಗಿ ಹೊಂದಿಸಿ ಅವುಗಳಿಗೆ ಅನುಕ್ರಮವಾಗಿ ಸಂಖ್ಯೆಗಳನ್ನು ಕೊಟ್ಟು ಆಯಾ ಸಂಖ್ಯೆಯ ಸ್ಲೈಡ್ಸ್ ಮಾಹಿತಿಯನ್ನು ಬರೆದಿರಿಸಬಹುದು.

ವೀಡಿಯೋ ಚಿತ್ರೀಕರಣ ಮಾಡುವುದು

ಗಂಜೀಫಾ ಚಿತ್ರಗಳನ್ನು ವೀಡಿಯೋ ಚಿತ್ರೀಕರಣ ಮಾಡುವುದು ರಕ್ಷಣೆಯ ದೃಷ್ಟಿಯಿಂದ ಮತ್ತು ದಾಖಲೆಯ ದೃಷ್ಟಿಯಿಂದ ಅಗತ್ಯವಾಗಿದೆ. ವೀಡಿಯೋ ಚಿತ್ರೀಕರಣ ಮಾಡಿದ ದೃಶ್ಯಗಳನ್ನು ನೋಡಿದಾಗ ಅದು ನಮಗೆ ಕಣ್ಣೆದುರಿಗೆ ನೋಡಿದ ಅನುಭವ ಕೊಡುತ್ತದೆ. ಉಳಿದವು ಸ್ಥಿರ ಚಿತ್ರಗಳಂತೆ ಕಂಡು ಬಂದರೆ ಇದು ಚಲನಚಿತ್ರವಾಗಿರುವುದರಿಂದ ನೇರವಾಗಿ ಚಿತ್ರಗಳ ನೆಲೆಗಳಲ್ಲಿ ಎದುರಿಗೆ ನಿಂತು ನೋಡಿದ ಅನುಭವ ಉಂಟಾಗುತ್ತದೆ. ಇದರಿಂದಾಗಿ ಗಂಜೀಫಾ ಚಿತ್ರಗಳನ್ನು ದಾಖಲೆಗೊಳಿಸುವುದರ ಜೊತೆಗೆ ಮುಂದಿನ ಅಧ್ಯಯನಕಾರರಿಗೆ, ನೋಡುಗರಿಗೆ ಚಿತ್ರಗಳನ್ನು ಮೂಲ ಸ್ವರೂಪದಲ್ಲಿ ದೊರಕಿಸಿಕೊಟ್ಟಂತಾಗುತ್ತದೆ.

ವಾಣಿಜ್ಯ ವಸ್ತುಗಳಲ್ಲಿ ಗಂಜೀಫಾ ಚಿತ್ರಗಳನ್ನು ರೂಪಿಸುವುದು

ಅಲಂಕಾರಿಕ ವಸ್ತುಗಳಾದ ಹೂಜಿ, ಹೂಕುಂಡಗಳು, ವಿವಿಧ ರೀತಿಯ ವಸ್ತ್ರಗಳು, ಬಾಗಿಲ ಪರದೆ, ಹಾಸುವ, ಹೊದೆಯುವ ವಸ್ತುಗಳು, ಕೈವಸ್ತ್ರ, ಗ್ರೀಟಿಂಗ್ಸ್ ಕಾರ್ಡ್ಸ್‌ಗಳು, ನೋಟ್ ಪುಸ್ತಕಗಳ ಮೇಲೆ ಹೀಗೆ ಹತ್ತು ಹಲವು ಅಲಂಕಾರಿಕ ವಸ್ತುಗಳಲ್ಲಿ ಪ್ರಾಚೀನ ಗಂಜೀಫಾ ಚಿತ್ರಗಳನ್ನು ರೂಪಿಸಿ ಅವುಗಳ ಅಂದ ಹೆಚ್ಚಿಸಬಹುದು.

* ಸರ್ಕಾರವು ಗಂಜೀಫಾ ಚಿತ್ರಗಳನ್ನು ಸಂರಕ್ಷಣೆ ಮಾಡುವ ಕುರಿತು, ರಾಜ್ಯದ ಎಲ್ಲ ಚಿತ್ರಕಲಾ ಶಾಲೆಗಳಲ್ಲಿ ಗಂಜೀಫಾ ಚಿತ್ರಕಲೆಗಳ ಶಿಬಿರಗಳನ್ನು ಏರ್ಪಡಿಸಿ, ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದರ ಮುಖೇನ ಗಂಜೀಫಾ ಕಲೆಯ ಬಗ್ಗೆ ಮಾಹಿತಿ ನೀಡಬೇಕು.

* ಆಟಗಳಿಗೆ ಸಂಬಂಧಿಸಿದ ಪುಸ್ತಕಗಳಲ್ಲಿ ಬುದ್ಧಿಶಕ್ತಿ ಮತ್ತು ಚಾಣಾಕ್ಷರನ್ನಾಗಿ ಮಾಡುವ ಗಂಜೀಫಾ ಚಿತ್ರ ಮತ್ತು ಆಟಗಳ ಕುರಿತು ಅಧ್ಯಯನವನ್ನು ಮೀಸಲಿಡಬೇಕು.

* ಸರ್ಕಾರಿ ಸಭೆ, ಸಮಾರಂಭಗಳಲ್ಲಿ ಗಂಜೀಫಾ ಚಿತ್ರಗಳನ್ನು ಉಡುಗೊರೆಯಾಗಿ ನೀಡಿ ಚಿತ್ರಗಳ ಬಗ್ಗೆ ಪ್ರಚಾರ ನೀಡಬೇಕು.

ಹೀಗೆ ಛಾಯಾಚಿತ್ರ ಮಾಡಿಸುವಾಗ ಒಂದೊಂದು ಸ್ಥಳದ ಗಂಜೀಫಾ ಚಿತ್ರಗಳನ್ನು ಒಂದು ಕಡೆಗೆ ಸೇರಿಸಿ ಸಂಪುಟಗಳಲ್ಲಿ ಹೊರತರಬಹುದು. ಇಂತಹ ಚಿತ್ರಸಂಪುಟಗಳಲ್ಲಿ ಎಡಗಡೆಯ ಪುಟದಲ್ಲಿ ಚಿತ್ರಗಳ ವರ್ಣಛಾಯಾ ಚಿತ್ರಗಳನ್ನು ಬಲಭಾಗದಲ್ಲಿ ಚಿತ್ರಗಳಿಗೆ ಸಂಬಂಧಿಸಿದ ಅವಶ್ಯಕ ಮಾಹಿತಿಯನ್ನು ನೀಡುವುದು.

ಸ್ಲೈಡ್ಸ್ ಮಾಡುವುದು

ಛಾಯಾ ಚಿತ್ರಗಳನ್ನು ಮಾಡಿ ಗಂಜೀಫಾ ಚಿತ್ರಗಳನ್ನು ಕಾಯ್ದಿರಿಸಿದಂತೆ ಸ್ಲೈಡ್ಸ್‌ಗಳನ್ನು ಮಾಡಿಯೂ ಕಾಯ್ದಿರಿಸಬಹುದು. ಅವಶ್ಯಕತೆ ಬಿದ್ದಾಗ ಅಥವಾ ನಮಗೆ ಬೇಕಾದಾಗ ಸ್ಲೈಡ್ಸ್‌ಗಳನ್ನು ಹಾಕಿಕೊಂಡು ಚಿತ್ರಗಳನ್ನು ನೋಡಿ ಸ್ವರೂಪ ತಿಳಿದುಕೊಳ್ಳಬಹುದು. ಒಂದೊಂದು ನೆಲೆಗಳ ಸ್ಲೈಡ್ಸ್‌ಗಳನ್ನು ಒಂದೊಂದು ಕಡೆ ವ್ಯವಸ್ಥಿತವಾಗಿ ಹೊಂದಿಸಿ ಅವುಗಳಿಗೆ ಅನುಕ್ರಮವಾಗಿ ಸಂಖ್ಯೆಗಳನ್ನು ಕೊಟ್ಟು ಆಯಾ ಸಂಖ್ಯೆಯ ಸ್ಲೈಡ್ಸ್ ಮಾಹಿತಿಯನ್ನು ಬರೆದಿರಿಸಬಹುದು.

ವೀಡಿಯೋ ಚಿತ್ರೀಕರಣ ಮಾಡುವುದು

ಗಂಜೀಫಾ ಚಿತ್ರಗಳನ್ನು ವೀಡಿಯೋ ಚಿತ್ರೀಕರಣ ಮಾಡುವುದು ರಕ್ಷಣೆಯ ದೃಷ್ಟಿಯಿಂದ ಮತ್ತು ದಾಖಲೆಯ ದೃಷ್ಟಿಯಿಂದ ಅಗತ್ಯವಾಗಿದೆ. ವೀಡಿಯೋ ಚಿತ್ರೀಕರಣ ಮಾಡಿದ ದೃಶ್ಯಗಳನ್ನು ನೋಡಿದಾಗ ಅದು ನಮಗೆ ಕಣ್ಣೆದುರಿಗೆ ನೋಡಿದ ಅನುಭವ ಕೊಡುತ್ತದೆ. ಉಳಿದವು ಸ್ಥಿರ ಚಿತ್ರಗಳಂತೆ ಕಂಡು ಬಂದರೆ ಇದು ಚಲನಚಿತ್ರವಾಗಿರುವುದರಿಂದ ನೇರವಾಗಿ ಚಿತ್ರಗಳ ನೆಲೆಗಳಲ್ಲಿ ಎದುರಿಗೆ ನಿಂತು ನೋಡಿದ ಅನುಭವ ಉಂಟಾಗುತ್ತದೆ. ಇದರಿಂದಾಗಿ ಗಂಜೀಫಾ ಚಿತ್ರಗಳನ್ನು ದಾಖಲೆಗೊಳಿಸುವುದರ ಜೊತೆಗೆ ಮುಂದಿನ ಅಧ್ಯಯನಕಾರರಿಗೆ, ನೋಡುಗರಿಗೆ ಚಿತ್ರಗಳನ್ನು ಮೂಲ ಸ್ವರೂಪದಲ್ಲಿ ದೊರಕಿಸಿಕೊಟ್ಟಂತಾಗುತ್ತದೆ.

ವಾಣಿಜ್ಯ ವಸ್ತುಗಳಲ್ಲಿ ಗಂಜೀಫಾ ಚಿತ್ರಗಳನ್ನು ರೂಪಿಸುವುದು

ಅಲಂಕಾರಿಕ ವಸ್ತುಗಳಾದ ಹೂಜಿ, ಹೂಕುಂಡಗಳು, ವಿವಿಧ ರೀತಿಯ ವಸ್ತ್ರಗಳು, ಬಾಗಿಲ ಪರದೆ, ಹಾಸುವ, ಹೊದೆಯುವ ವಸ್ತುಗಳು, ಕೈವಸ್ತ್ರ, ಗ್ರೀಟಿಂಗ್ಸ್ ಕಾರ್ಡ್ಸ್‌ಗಳು, ನೋಟ್ ಪುಸ್ತಕಗಳ ಮೇಲೆ ಹೀಗೆ ಹತ್ತು ಹಲವು ಅಲಂಕಾರಿಕ ವಸ್ತುಗಳಲ್ಲಿ ಪ್ರಾಚೀನ ಗಂಜೀಫಾ ಚಿತ್ರಗಳನ್ನು ರೂಪಿಸಿ ಅವುಗಳ ಅಂದ ಹೆಚ್ಚಿಸಬಹುದು.

* ಸರ್ಕಾರವು ಗಂಜೀಫಾ ಚಿತ್ರಗಳನ್ನು ಸಂರಕ್ಷಣೆ ಮಾಡುವ ಕುರಿತು, ರಾಜ್ಯದ ಎಲ್ಲ ಚಿತ್ರಕಲಾ ಶಾಲೆಗಳಲ್ಲಿ ಗಂಜೀಫಾ ಚಿತ್ರಕಲೆಗಳ ಶಿಬಿರಗಳನ್ನು ಏರ್ಪಡಿಸಿ, ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದರ ಮುಖೇನ ಗಂಜೀಫಾ ಕಲೆಯ ಬಗ್ಗೆ ಮಾಹಿತಿ ನೀಡಬೇಕು.

* ಆಟಗಳಿಗೆ ಸಂಬಂಧಿಸಿದ ಪುಸ್ತಕಗಳಲ್ಲಿ ಬುದ್ಧಿಶಕ್ತಿ ಮತ್ತು ಚಾಣಾಕ್ಷರನ್ನಾಗಿ ಮಾಡುವ ಗಂಜೀಫಾ ಚಿತ್ರ ಮತ್ತು ಆಟಗಳ ಕುರಿತು ಅಧ್ಯಯನವನ್ನು ಮೀಸಲಿಡಬೇಕು.

* ಸರ್ಕಾರಿ ಸಭೆ, ಸಮಾರಂಭಗಳಲ್ಲಿ ಗಂಜೀಫಾ ಚಿತ್ರಗಳನ್ನು ಉಡುಗೊರೆಯಾಗಿ ನೀಡಿ ಚಿತ್ರಗಳ ಬಗ್ಗೆ ಪ್ರಚಾರ ನೀಡಬೇಕು.

* ರಾಜ್ಯ ಮತ್ತು ಕೇಂದ್ರ ಸರ್ಕಾರ, ವಿಶ್ವವಿದ್ಯಾಲಯಗಳು, ಸಂಘ ಸಂಸ್ಥೆಗಳು, ವಿಶೇಷ ಅಭಿಯಾನದ ಮೂಲಕ ಗಂಜೀಫಾ ಚಿತ್ರಗಳನ್ನು ಬೆಳಕಿಗೆ ತರಬೇಕು. ಅವುಗಳ ಕುರಿತು ಗಂಭೀರವಾಗಿ ಅಧ್ಯಯನಮಾಡಿ ಪುಸ್ತಕಗಳನ್ನು, ಕ್ಯಾಟಲಾಗ್, ಮೋನೋಗ್ರಾಫ್‌ಗಳನ್ನು ಪ್ರಕಟಿಸಬೇಕು.

* ಕರ್ನಾಟಕ ಲಲಿತಕಲಾ ಅಕಾಡೆಮಿ ಪುರಾತನ ಚಿತ್ರಗಳನ್ನು ಸ್ಲೈಡ್ಸ್ ಮಾಡುವುದು ಮತ್ತು ಕಲಾವಿದರಿಂದ ಪ್ರತಿಕೃತಿ ಮಾಡಿಸುವುದು, ಇತ್ಯಾದಿ ಕಾರ್ಯಕ್ರಮಗಳನ್ನು ನಿರಂತರವಾಗಿ ಮಾಡಲು ಶ್ರಮವಹಿಸಬೇಕು.

* ವೆಬ್‌ಸೈಟ್‌ಗಳ ಮೂಲಕ ದೇಶ ವಿದೇಶಗಳ ಜನರಿಗೆ ಕರ್ನಾಟಕದ ಗಂಜೀಫಾ ಚಿತ್ರಗಳ ವೈವಿಧ್ಯ, ವೈಶಿಷ್ಟ್ಯಗಳನ್ನು ಪರಿಚಯಿಸುವುದು.

* ಪ್ರವಾಸಿ ತಾಣಗಳಲ್ಲಿ ಗಂಜೀಫಾ ಚಿತ್ರಗಳ ಕುರಿತಾದ ಮಾಹಿತಿ, ಗಂಜೀಫಾ ಕಾರ್ಡುಗಳ ಕೆಲವು ಮಾದರಿಗಳು ಇರುವಂತೆ ಶ್ರಮವಹಿಸಬೇಕು. ಇದರಿಂದ ಆಸಕ್ತರಿಗೆ ಇವುಗಳ ತಿಳಿವಳಿಕೆ ಮಾಡಿಕೊಟ್ಟಂತಾಗುತ್ತದೆ.

* ಕರ್ನಾಟಕ ಭಾರತೀಯ ಕರಕುಶಲ ನಿಗಮವು ಅಪರೂಪದ ಗಂಜೀಫಾ ಚಿತ್ರಕಲೆಗೆ ವಿಶೇಷ ಪ್ರೋತ್ಸಾಹ, ಅರ್ಥಿಕ ಅನುದಾನವನ್ನು ನೀಡಬೇಕು.

* ಶಾಲಾ, ಕಾಲೇಜುಗಳು, ವಿಶೇಷವಾಗಿ ಚಿತ್ರಕಲಾ ಮಹಾವಿದ್ಯಾಲಯಗಳ ಪಠ್ಯಕ್ರಮದಲ್ಲಿ ಸ್ಥೂಲವಾಗಿ ಈ ಆಟದ ಕುರಿತು ಮಾಹಿತಿ ನೀಡುವಂತಾಗಬೇಕು.

ಇಂತಹ ಹತ್ತು ಹಲವು ಕ್ರಮಗಳನ್ನು ಕಾರ್ಯರೂಪಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಗಂಜೀಫಾ ಚಿತ್ರಕಲೆಯ ರಕ್ಷಣೆಯನ್ನು ಕೈಗೊಳ್ಳಬಹುದು. ಎಲ್ಲದಕ್ಕಿಂತ ಮುಖ್ಯವಾಗಿ, ಲಭ್ಯವಿದ್ದ ಪುರಾತನ ಚಿತ್ರಗಳನ್ನು ಅವು ಅಳಿದು ಹೋಗುವ ಮುಂಚೆ ಅಧ್ಯಯನಕ್ಕೊಳಪಡಿಸುವುದು ಬಹುಮುಖ್ಯವಾಗಿದೆ.

❖❖❖



ಅಧ್ಯಾಯ – ಒಂಭತ್ತು
ಸಮಾರೋಪ

ಕರ್ನಾಟಕದಲ್ಲಿ ಗಂಜೀಫಾ ಚಿತ್ರಕಲೆ ಮತ್ತು ಆಟ ಪ್ರಾಚೀನ ಪರಂಪರೆಯನ್ನು ಹೊಂದಿದ್ದು ಇತರ ಚಿತ್ರಕಲಾ ಪ್ರಕಾಗಳಿಗಿಂತ ಗಂಜೀಫಾ ಚಿತ್ರಕಲೆ ಭಿನ್ನವಾಗಿದೆ. ಇದು ಕರ್ನಾಟಕದಲ್ಲಿ ಆಟದ ಹಿನ್ನೆಲೆಯಲ್ಲಿ ಬೆಳೆದು ಬಂದಿದೆ. ಇತರ ಕಲಾ ಪ್ರಕಾರಗಳಂತೆ ಗಂಜೀಫಾ ಚಿತ್ರಕಲೆಯೂ ಸಹಿತ ಧಾರ್ಮಿಕವಾಗಿ, ಸಾಮಾಜಿಕವಾಗಿ ಪರಿಣಾಮಕಾರಿಯಾದ ಪಾತ್ರವಹಿಸುತ್ತ ಧಾರ್ಮಿಕ ಸಮನ್ವಯತೆ, ಸಾಮಾಜಿಕ ಸಾಮರಸ್ಯವನ್ನು ಉಂಟು ಮಾಡುವ ನಿಟ್ಟಿನಲ್ಲಿ ಈ ಕಲಾಪ್ರಕಾರ ಪ್ರಮುಖ ಪಾತ್ರವಹಿಸಿದೆ. ಗಂಜೀಫಾ ಒಂದು ಆಟವೆಂದೇ ಪರಿಗಣಿಸಿದ್ದರು. ಆದರೆ ಗಂಜೀಫಾ ಎಲೆಗಳಲ್ಲಿಯ ರಮ್ಯ ಚಿತ್ರಕಲೆಯೆಂದು ಗಂಭೀರ ಕಲಾಪ್ರಕಾರದ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧದ ಒಂಭತ್ತು ಅಧ್ಯಾಯಗಳಲ್ಲಿ ವಿಷಯ ನಿರೂಪಣೆಗೊಂಡು ವಿಶ್ಲೇಷಣೆಗೊಳಪಡಿಸಲಾಗಿದೆ. ಪ್ರತಿಯೊಂದು ಅಧ್ಯಾಯಗಳಲ್ಲಿ ಕಂಡುಕೊಂಡ ಫಲಿತಗಳನ್ನು ಕೆಳಗಿನಂತೆ ಸ್ಥೂಲವಾಗಿ ನೋಡಬಹುದು.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಹಾಗೂ ವ್ಯಾಪ್ತಿಯನ್ನು ಕುರಿತು ಹೇಳಲಾಗಿದೆ. ಇಲ್ಲಿ ಪ್ರಸ್ತು ಅಧ್ಯಯನದ ಪ್ರಮುಖ ಉದೇಶಗಳು, ಅಧ್ಯಯನದ ಮಹತ್ವ ವಿಶಾಲವಾದ ಗಂಜೀಫಾ ಚಿತ್ರಕಲಾ ಕ್ಷೇತ್ರದಲ್ಲಿ ಸೀಮಿತಿಗೊಳಿಸಿಕೊಂಡಿರುವ ವ್ಯಾಪ್ತಿ, ಪ್ರಬಂಧ ರಚನೆ ವಿಧಾನ, ಬಳಸಿಕೊಂಡಿರುವ ಆಕರ ಸಾಮಗ್ರಿಗಳ ಕುರಿತು ಹೇಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಗಂಜೀಫಾ ಚಿತ್ರಕಲೆ ಬೆಳೆದು ಬಂದ ಹಿನ್ನೆಲೆಯನ್ನು ಮೂರು ರೀತಿಯಲ್ಲಿ ಅಧ್ಯಯನದ ಅನುಕೂಲತೆಗಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ೧. ಪಾಶ್ಚಿಮಾತ್ಯ ದೇಶಗಳಲ್ಲಿ ಗಂಜೀಫಾ ಚಿತ್ರಕಲೆಗಳ ಹುಟ್ಟು–ಬೆಳವಣಿಗೆ, ೨. ಭಾರತ ದೇಶದಲ್ಲಿ, ೩. ಕರ್ನಾಟಕದಲ್ಲಿ ಗಂಜೀಫಾ ಚಿತ್ರಕಲೆಯ ಬೆಳವಣಿಗೆಯ ಐತಿಹಾಸಿಕ ಹಿನ್ನೆಲೆಯನ್ನು ಸ್ಥೂಲವಾಗಿ ವಿವೇಚನೆ ಮಾಡಲಾಗಿದೆ.

ವಿವೇಚನೆ ಮಾಡಲಾಗಿದೆ.

ವಿದೇಶೀ ವ್ಯಾಪಾರಿಗಳು ಬಂದ ಸಂದರ್ಭದಲ್ಲಿ ಗಂಜೀಫಾ ಚಿತ್ರಗಳು ಅವರೊಂದಿಗೆ ಭಾರತವನ್ನು ಪ್ರವೇಶಿಸಿವೆ. ಭಾರತದಲ್ಲಿ ಗಂಜೀಫಾ ಆಟ ಅತ್ಯಂತ ಪ್ರಾಚೀನವಾದ ಒಂದು ಆಟವಾಗಿದೆ. ಕ್ರಿ.ಶ. ೧೬ನೆಯ ಶತಮಾನದಿಂದಲೇ ಈ ಆಟ ಪ್ರಚಲಿತವಾಗಿತ್ತು. ಹೀಗೆ ಸಾವಿರಾರು ವರ್ಷಗಳಿಂದ ಉಳಿದುಬಂದ ಶ್ರೀಮಂತ ಕಲೆ ಗಂಜೀಫಾ ಕಲೆಯಾಗಿದೆ.

ಕರ್ನಾಟಕದಲ್ಲಿ ಪರ್ಷಿಯನ್ ಕಲಾವಿದರನ್ನು ಟಿಪ್ಪು ತನ್ನ ಆಸ್ಥಾನಕ್ಕೆ ಕರೆಯಿಸಿ ಕಲಾಕೃತಿಗಳನ್ನು ರಚಿಸುತ್ತಿದ್ದುದ್ದಾಗಿ ತಿಳಿದು ಬರುತ್ತದೆ. ಆ ಸಂದರ್ಭದಲ್ಲಿಯೇ ಗಂಜೀಫಾ ಚಿತ್ರಕಲೆ ಮತ್ತು ಆಟ ಹೆಚ್ಚಿನ ಪ್ರಮಾಣದಲ್ಲಿ, ಮೈಸೂರು ಪ್ರದೇಶದಲ್ಲಿ ಪರಿಚಯಗೊಂಡಿತು. ಟಿಪ್ಪುವಿನ ನಂತರ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಗಂಜೀಫಾ ಚಿತ್ರಕಲೆ ಮತ್ತು ಆಟ ಹೆಚ್ಚು ಪ್ರಚಲಿತಗೊಂಡಿತು. ಈ ವಿಶಿಷ್ಟವಾದ ಕಲಾಪ್ರಕಾರವನ್ನು ಕರ್ನಾಟಕದ ಉದ್ದಗಲಕ್ಕೂ ಮೆರೆಸಿದ ಹಿರಿಮೆ ಮೈಸೂರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸಲ್ಲಬೇಕು. ಈ ಕಲೆ ಆಯಾ ಪ್ರದೇಶದ ಸಾಮಾಜಿಕ, ಪೌರಾಣಿಕ ಪ್ರಭಾವ, ಶೈಲಿಗಳನ್ನು ಈ ಚಿತ್ರಕಲೆಯ ಮುಖಾಂತರ ಮನುಕುಲಕ್ಕೆ ನೀಡಿದ ಅಭೂತಪೂರ್ವ ಕೊಡುಗೆ ಈ ಕಲೆಯ ವೈಶಿಷ್ಟ್ಯವಾಗಿದೆ. ಪಾಶ್ಚಿಮಾತ್ಯ ದೇಶಗಳಿಂದ ಹಿಡಿದು ದೇಶದ ನಾನಾ ಭಾಗಗಳಲ್ಲಿ ಗಂಜೀಫಾ ಬೆಳೆದು ಬಂದ ಹಿನ್ನೆಲೆ ಹಾಗೂ ಕರ್ನಾಟಕದಲ್ಲಿ ಈ ಕಲೆ ಬೆಳೆದುಬಂದ ನೆಲೆ-ಹಿನ್ನೆಲೆಯನ್ನೂ ಕುರಿತು ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ, ಗಂಜೀಫಾ ಚಿತ್ರಕಲೆಯ ಪರಿಕರಗಳು ಮತ್ತು ರಚನಾ ವಿಧಾನಗಳನ್ನು ಪ್ರತ್ಯೇಕವಾಗಿ ವಿವೇಚಿಸಲಾಗಿದೆ. ಮೊದಲಿಗೆ ಗಂಜೀಫಾ ಎಲೆಗಳ ತಯಾರಿಕೆ, ಅದರಲ್ಲಿ ಬಳಸಿಕೊಳ್ಳುವ ಪರಿಕರಗಳು ಹಾಗೂ ತಯಾರಿಕೆಯ ವಿವಿಧ ಹಂತಗಳನ್ನು ಹೇಳಲಾಗಿದೆ. ಗಂಜೀಫಾಚಿತ್ರ ರಚಿಸುವ ಪರಿಕರ ಹಾಗೂ ವಿಧಾನಗಳನ್ನು ಪ್ರತ್ಯೇಕವಾಗಿ ವಿವೇಚಿಸಲಾಗಿದೆ. ಇಲ್ಲಿ ಬಣ್ಣಗಳು, ಕುಂಚಗಳು, ರೇಖಾ ಚಿತ್ರಗಳನ್ನು ಬರೆಯುವ ಸೀಸದ ಕಡ್ಡಿಗಳು, ಚಾರ್ಕೋಲುಗಳು, ಕಾಗದಗಳು ಇತರ ಪರಿಕರಗಳ ಕುರಿತು ಹೇಳಲಾಗಿದೆ. ಬಣ್ಣಗಳಲ್ಲಿ ಪ್ರಾಕೃತಿಕ ಬಣ್ಣಗಳು, ಅದರಲ್ಲಿ ಲೋಹ ಮೂಲ, ಖನಿಜ ಮೂಲ, ಸಸ್ಯ ಮೂಲ ಬಣ್ಣಗಳು, ಅದೇ ಪ್ರಕಾರದ ಅಂಟು ದ್ರಾವಕಗಳು, ಟೆಂಪರಾ ಪದಾರ್ಥಗಳು, ರಾಸಾಯನಿಕ ಬಣ್ಣಗಳು ಹೀಗೆ ವಿವಿಧ ಪರಿಕರಗಳನ್ನು ಕುರಿತು ಚರ್ಚಿಸಲಾಗಿದೆ.

ಸಾಮಾನ್ಯವಾಗಿ ರಾಜ ಮಹಾರಾಜರು, ಶ್ರೀಮಂತ ಕುಟುಂಬದವರು ಮನೋರಂಜನೆಗಾಗಿ ಆಡುವ ಆಟ ಈ ಗಂಜೀಫಾ ಚಿತ್ರಕಲೆ. ಈ ಕಲೆಯ ರಚನೆಗಳು ಜನಪದ ಮತ್ತು ಶಿಷ್ಟಪದ ಕಲಾವಿದರಿಂದ ನಿರ್ಮಾಣವಾಗಿವೆ. ಚಿತ್ರಾಂಕಿತ ಗಂಜೀಫಾಎಲೆಗಳು ಆಗ ಉನ್ನತ ವರ್ಗದವರು ಆಡುವ ಆಟದ ಎಲೆಗಳಾಗಿದ್ದವು. ಗಂಜೀಫಾಎಲೆಗಳನ್ನು ಆಯಾ ಪ್ರದೇಶದಲ್ಲಿ ಸಿಗುವ ವಸ್ತುಗಳ ಮೂಲಕ ತಯಾರಿಸಲಾಗುತ್ತಿತ್ತು. ಕೈಯಿಂದ ತಯಾರಿಸಿದ ಕಾಗದ, ದಪ್ಪನೆ ಕಾರ್ಡುಗಳನ್ನು ಗಂಜಿಯಿಂದ ಒಂದರ ಮೇಲೊಂದು ಅಂಟಿಸಿ ಸ್ವಲ್ಪ ದಪ್ಪವಾದ ನಂತರ ಅದರ ಮೇಲೆ ಶುಭ್ರವಾದ ಹಾಳೆಯನ್ನು ಲೇಪಿಸಿ ಇನ್ನುಳಿದ ಭಾಗಗಳನ್ನು ವೃತ್ತಾಕಾರ, ಆಯತ, ಚೌಕಾಕಾರ ಹೀಗೆ ತಮಗೆ ಬೇಕಾದ ರೀತಿಯಲ್ಲಿ ವಿಂಗಡಿಸಿಕೊಂಡು ಗಂಜೀಫಾ ಚಿತ್ರದ ಕಾರ್ಡುಗಳನ್ನು ಕಲಾತ್ಮಕಗೊಳಿಸುತ್ತಿದ್ದರು. ಈ ತಯಾರಿಕೆಯ ಮತ್ತು ಚಿತ್ರ ರಚಿಸುವ ವಿಧಿ-ವಿಧಾನಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದು ಕಂಡು ಬರುತ್ತದೆ. ಅವುಗಳನ್ನು ಸ್ಥೂಲವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ.

ಮೊದಲನೆಯ ಹಂತದಲ್ಲಿ ಗಂಜೀಫಾ ಬಿಲ್ಲೆಗಳನ್ನು ಸಿದ್ಧಗೊಳಿಸಿಕೊಳ್ಳುತ್ತಾರೆ. ಎರಡನೆಯ ಹಂತದಲ್ಲಿ ಬಿಲ್ಲೆಗಳನ್ನು ಬೇಕಾದ ಗಾತ್ರಕ್ಕೆ ಕತ್ತರಿಸಿ, ಮೇಲ್ಗಡೆಯ ಭಾಗವನ್ನು ರೇಖಾಂಕನ ಮಾಡಿಕೊಳ್ಳಲು ಸಿದ್ಧಪಡಿಸುತ್ತಾರೆ. ನಂತರದ ಹಂತದಲ್ಲಿ ವರ್ಣಲೇಪನ ಮಾಡಿ ಚಿತ್ರರಚನೆ ಮಾಡುತ್ತಾರೆ. ತಮಗೆ ಬೇಕಾದ ವಿಷಯದ ರೇಖಾವರ್ಣ ಚಿತ್ರಗಳನ್ನು ರಚಿಸುತ್ತಾರೆ. ವರ್ಣಗಾರಿಕೆಯಲ್ಲಿ ತಮಗೆ ಬೇಕಾದ ವರ್ಣಗಳನ್ನು ಆಯ್ದುಕೊಂಡು, ಸಮ್ಮಿಶ್ರಣಮಾಡಿ ವರ್ಣವಿನ್ಯಾಸ ಮಾಡುತ್ತಾರೆ. ಹೀಗೆ ವಿವಿಧ ಬಗೆಯ ನೈಸರ್ಗಿಕ ವರ್ಣಗಳನ್ನು ಸಿದ್ಧಪಡಿಸಿಕೊಳ್ಳುವುದು ಇಲ್ಲಿ ಗಮನಾರ್ಹವಾದ ಅಂಶವಾಗಿದೆ. ನಂತರ ಕಲಾವಿದರೇ ತಯಾರಿಸಿದ ಕುಂಚದ ಸಹಾಯದಿಂದ ಚಿತ್ರಕ್ಕೆ ವರ್ಣಲೇಪನ ಮಾಡುತ್ತಾರೆ. ಇಂತಹ ಅನೇಕ ಸಿದ್ಧತಾ ವಿಧಿ-ವಿಧಾನಗಳನ್ನು ಮತ್ತು ಚಿತ್ರರಚನಾ ವಿವಿಧ ಹಂತಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ, ಗಂಜೀಫಾ ಆಟದ ನೀತಿ-ನಿಯಮಗಳ ಕುರಿತು ಚರ್ಚಿಸಲಾಗಿದೆ. ಮೂಲತಃ ಮನೋರಂಜನೆಯ ಆಟವಾದ ಈ ಗಂಜೀಫಾ ಆಟ ಕಾಲಕ್ರಮೇಣ ಹೊಸ ಹೊಸ ಆಟಗಳಿಗೆ ಪ್ರೇರಣೆಯನ್ನು ಒದಗಿಸಿರಬೇಕು. ಗಂಜೀಫಾ ಆಟವನ್ನು ಹಗಲು ಮತ್ತು ರಾತ್ರಿ ವೇಳೆಯ ಆಟವೆಂದು ವಿಂಗಡಿಸಿಕೊಂಡು ಈ ಆಟವನ್ನು ಆಡುತ್ತಿದ್ದರು. ದಶಾವತಾರ ಗಂಜೀಫಾ, ನವಗ್ರಹ ಗಂಜೀಫಾ, ಸರ್ವಮಂಗಳ ಗಂಜೀಫಾ, ಚಾಮುಂಡೇಶ್ವರಿ ಗಂಜೀಫಾ, ರಾಮಾಯಣ ಗಂಜೀಫಾ ಮೊದಲಾದ ಹದಿನೆಂಟು ಪ್ರಕಾರದ ಗಂಜೀಫಾ ಆಟಗಳಿವೆ. ಅವುಗಳಲ್ಲಿ ಹದಿನಾಲ್ಕು ಪ್ರಕಾರದ ಆಟಗಳನ್ನು ಇಲ್ಲಿ ವಿವರಿಸಲಾಗಿದೆ. ಒಂದೊಂದು ಆಟಕ್ಕೆ ಒಂದೊಂದು ರೀತಿಯ ಆಟದ ನೀತಿ ನಿಯಮಗಳಿವೆ. ಇವುಗಳ ಆಟದ ವಿಧಿ-ವಿಧಾನಗಳನ್ನು ಹಲವಾರು ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಅವುಗಳ ಆಟದ ಸ್ವರೂಪವನ್ನು ತಿಳಿಸಿಕೊಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಇಲ್ಲಿ ಕೆಲವು ಆಟಗಳ ನೀತಿ-ನಿಯಮಗಳು ಲಭ್ಯವಾಗಿಲ್ಲ. ಕಾರಣ ಈಗ ಈ ಆಟ ಆಡುವವರು ಇಲ್ಲದೇ ಇರುವ ಕಾರಣ ಮತ್ತು ಆಟ ಆಡುವವರು ಆಟದ ಮಾಹಿತಿಯನ್ನು ದಾಖಲೀಕರಣ ಮಾಡದೇ ಇರುವ ಕಾರಣವಾಗಿ ನೂರು ಇನ್ನೂರು ವರ್ಷಗಳ ಹಿಂದಿನ ಈ ಆಟದ ರೀತಿ-ನೀತಿಗಳು ಇಂದು ಲಭ್ಯವಾಗುತ್ತಿಲ್ಲ. ಅಷ್ಟಾಗಿಯೂ ಅಲ್ಲಲ್ಲಿ ಕೆಲವು ಹಿರಿಯರು ಹೇಳಿದ ಹೇಳಿಕೆಗಳನ್ನು ಮತ್ತು ಹಲವು ಲೇಖನ, ಗ್ರಂಥಗಳಲ್ಲಿರುವ ವಿಷಯವನ್ನು ಆಧರಿಸಿ ಗಂಜೀಫಾ ಆಟದ ನೀತಿ-ನಿಯಮಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ, ಗಂಜೀಫಾ ಚಿತ್ರಕಲೆಯ ವಸ್ತು ವಿಷಯಗಳನ್ನು ವಿಷಯಾನುಸಾರವಾಗಿ ವಿಂಗಡಿಸಿಕೊಂಡು ವಿಶ್ಲೇಷಿಸಲಾಗಿದೆ. ಧಾರ್ಮಿಕ ಚಿತ್ರಗಳು, ಧಾರ್ಮಿಕೇತರ ಚಿತ್ರಗಳೆಂದು ಎಂದು ಎರಡು ವಿಭಾಗ ಮಾಡಿಕೊಂಡು, ಮತ್ತೆ ಪ್ರತಿಯೊಂದು ವಿಭಾಗಗಳಲ್ಲಿ ಹಲವಾರು ಬಗೆಯ ಉಪವಿಭಾಗಗಳನ್ನು ಮಾಡಿಕೊಂಡು ವಿವೇಚಿಸಲಾಗಿದೆ. ಧಾರ್ಮಿಕ ಚಿತ್ರಗಳಲ್ಲಿ ದಶಾವತಾರ ಚಿತ್ರಗಳು, ನವಗ್ರಹ ಚಿತ್ರಗಳು, ರಾಶಿ ಚಿತ್ರಗಳೆಂದು ವಿಂಗಡಿಸಿ ಚರ್ಚಿಸಲಾಗಿದ್ದು, ಧಾರ್ಮಿಕ ಚಿತ್ರಗಳಲ್ಲಿ ಚಾಮುಂಡಿ, ಶಿವ, ಶೈವ, ವೈಷ್ಣವ, ವೀರಭದ್ರ, ವಿಷ್ಣು, ಬ್ರಹ್ಮ ಮುಂತಾದ ದೇವತೆಗಳ ಚಿತ್ರಗಳನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ಧಾರ್ಮಿಕೇತರ ಚಿತ್ರಗಳಲ್ಲಿ ಸಂಕೀರ್ಣ ಚಿತ್ರಗಳು, ಸಾಂಕೇತಿಕ ಚಿಹ್ನೆಗಳ ಚಿತ್ರಗಳು, ಪ್ರಾಣಿ-ಪಕ್ಷಿಗಳು, ಹೂ-ಬಳ್ಳಿಗಳ ಚಿತ್ರಗಳನ್ನು ವಿವೇಚಿಸಲಾಗದ್ದರೇ ಅಲಂಕಾರಿಕ ಚಿತ್ರಗಳಲ್ಲಿ ವಿವಿಧ

ಬಗೆಯ ನಕ್ಷಾವಿನ್ಯಾಸದ ಚಿತ್ರಗಳನ್ನು ಕುರಿತು ಹೇಳಲಾಗಿದೆ.ವೈಷ್ಣವ ಧರ್ಮದ ಚಿತ್ರದಲ್ಲಿ ವಿಷ್ಣುವಿಗೆ ಸಂಬಂಧಿಸಿದ ಚಿತ್ರಗಳಾದ ದಶಾವತಾರ ಚಿತ್ರಗಳು, ಕಥೆಗಳು, ವಿಷ್ಣುವಿನ ವಿವಿಧ ರೂಪ ಹಾಗೂ ಲೀಲೆಗಳ ಕುರಿತು ವಿವೇಚಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ, ಕರ್ನಾಟಕ ಗಂಜೀಫಾ ಚಿತ್ರಕಲೆಯ ಶೈಲಿ, ಪ್ರಭಾವ, ಪ್ರೇರಣೆ ಮತ್ತು ತಂತ್ರಗಾರಿಕೆಗಳ ಕುರಿತು ಚರ್ಚಿಸಲಾಗಿದೆ. ಯಾವುದೇ ಕಲಾಪ್ರಕಾರವನ್ನು ಗುರುತಿಸುವುದು ಅದರ ಶೈಲಿಯಿಂದ. ಶೈಲಿಯು ಆ ಕಲಾಪ್ರಕಾರದ ಪ್ರಮುಖ ಲಕ್ಷಣಗಳನ್ನು ತಿಳಿಸಿಕೊಡುತ್ತದೆ. ಇಲ್ಲಿ ಕರ್ನಾಟಕದ ಗಂಜೀಫಾ ಚಿತ್ರಕಲಾಶೈಲಿ ಕಾಲದಿಂದ ಕಾಲಕ್ಕೆ ಹೇಗೆ ಭಿನ್ನವಾಗುತ್ತಾ ಬಂದಿತೆಂಬುದನ್ನು ಚಿತ್ರಗಳ ವಿಶ್ಲೇಷಣೆಯಿಂದ ಕಂಡುಕೊಳ್ಳಲಾಗಿದೆ. ಪಾಶ್ಚಿಮಾತ್ಯರ ಶೈಲಿ, ಕರ್ನಾಟಕೇತರ ಶೈಲಿ, ವಿಜಯನಗರ ಶೈಲಿ, ಮರಾಠಾ ಶೈಲಿ ಹಾಗೂ ಸ್ಥಳೀಯ ಜನಪದ ಶೈಲಿಗಳಂತಹ ವಿವಿಧ ಶೈಲಿಗಳು ಕರ್ನಾಟಕದ ಗಂಜೀಫಾ ಚಿತ್ರಕಲಾ ಪ್ರಕಾರದಲ್ಲಿ ಬೆಳೆದು ಬಂದ ಹಂತಗಳನ್ನು ಗುರುತಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ, ಕರ್ನಾಟಕೇತರ ಪ್ರದೇಶದಲ್ಲಿ ಗಂಜೀಫಾ ಚಿತ್ರಕಲೆ ಹೇಗೆ ಬೆಳೆದಿದೆ ಎಂಬುದನ್ನು ವಿವರಿಸಲಾಗಿದೆ. ಪಶ್ಚಿಮ ಬಂಗಾಲ, ಓರಿಸ್ಸಾ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಜಮ್ಮು ಮತ್ತು ಕಾಶ್ಮೀರ ಹೀಗೆ ಗಂಜೀಫಾ ಚಿತ್ರಕಲೆಯು ಆಯಾ ಪ್ರದೇಶದ ಸಂಸ್ಕೃತಿಯನ್ನು ಹೇಗೆ ಬಿಂಬಿಸುತ್ತದೆ, ಕರ್ನಾಟಕದ ಗಂಜೀಫಾ ಚಿತ್ರಗಳಿಗೂ ಅವುಗಳಿಗೂ ಇರುವ ಸಾಮ್ಯ ಮತ್ತು ವೈಶಿಷ್ಟ್ಯ ಸೂಕ್ಷ್ಮ ವಿವರಗಳನ್ನು, ರೇಖಾವಿನ್ಯಾಸ ವರ್ಣಗಾರಿಕೆಯ ಹಿನ್ನೆಲೆಯನ್ನು ಈ ಅಧ್ಯಾಯದಲ್ಲಿ ತೌಲನಿಕವಾಗಿ ಚರ್ಚೆಗೆ ಒಳಪಡಿಸಲಾಗಿದೆ. ಆಯಾ ಪ್ರದೇಶದ ಚಿತ್ರಗಳು ಆಯಾ ಸಂಸ್ಕೃತಿಯ ಹಿನ್ನೆಲೆಯಲ್ಲಿ ಸಾಮಾನ್ಯವಾಗಿ ರಚನೆಯಾಗಿವೆ. ಆಯಾ ಪ್ರದೇಶದ ಕಲಾವಿದರ ವೈಯಕ್ತಿಕ ಕಲಾಶೈಲಿಯು ಕೆಲವು ಸಲ ಈ ಗಂಜೀಫಾ ಚಿತ್ರಕಲೆಯ ಮೇಲೆ ಪ್ರಭಾವ ಬೀರಿದೆ. ಕರ್ನಾಟಕದ ಗಂಜೀಫಾ ಚಿತ್ರಕಲೆಯನ್ನು ಕರ್ನಾಟಕೇತರ ಗಂಜೀಫಾ ಚಿತ್ರಗಳೊಂದಿಗೆ ತೌಲನಿಕವಾಗಿ ಚರ್ಚಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ, ಇಂದು ಹೆಚ್ಚು ಕಡಿಮೆ ಈ ಆಟ ಚಿತ್ರಕಲೆಯಾಗಿ ಕೇವಲ ಪಳೆಯುಳಿಕೆಯಾಗಿ ಮಾತ್ರ ಈ ಕಲೆ ಉಳಿದುಕೊಂಡು ಬಂದಿದೆ. ದೇಶ-ವಿದೇಶಗಳ ಕಲಾ ಸಂಗ್ರಹಕಾರರ ಸಂಗ್ರಹಗಳಲ್ಲಿ ಈ ಆಟಗಳ ಕಾರ್ಡುಗಳ ಸಂಗ್ರಹ ನೋಡಲು ಸಿಗುತ್ತವೆ. ಆದರೆ ಗಂಜೀಫಾ ಕಾರ್ಡುಗಳಲ್ಲಿ ಅತ್ಯಂತ ಸೂಕ್ಷ್ಮವಾದ ರೀತಿಯಲ್ಲಿ ಕೆಲಸ ಮಾಡುವ ಚಿತ್ರಕಾರರು ಮಾತ್ರ ತೀರಾ ವಿರಳವಾಗುತ್ತಿದ್ದಾರೆ. ಆದರೆ ಕೆಲವು ಗಂಜೀಫಾ ಪರಂಪರೆಯ ಕಲಾವಿದರು ಮಹಾರಾಷ್ಟ್ರದಲ್ಲಿನ ಪಾಂಡುರಂಗ ಕೃಷ್ಣ, ಓರಿಸ್ಸಾದಲ್ಲಿನ ಜಗನ್ನಾಥ ಮಹಾಪಾತ್ರೋ ಮುಂತಾದವರು ಕಾಣಿಸಿಕೊಳ್ಳುತ್ತಾರೆ. ಹಾಗೆಯೇ ಕರ್ನಾಟಕದಲ್ಲಿ ಬೆಂಗಳೂರಿನ ಶ್ರೀಮತಿ ಸುಧಾ ವೆಂಕಟೇಶ, ಶ್ರೀ ರಘುಪತಿ ಭಟ್ಟರು ಮತ್ತು ಮೈಸೂರಿನ ಶ್ರೀಮತಿ ಚಂದ್ರಿಕಾ ಪದ್ಮನಾಭನ್ ಮುಂತಾದವರು ಹೀಗೆ ತೆರೆಮರೆಯಲ್ಲಿರುವ ಕಲಾವಿದರನ್ನು ಮತ್ತು ಕಲೆಯ ಸಂಗ್ರಹಕಾರರನ್ನು, ಪೋಷಕರನ್ನು ಕುರಿತು ಸ್ಥೂಲವಾಗಿ ವಿವರಿಸಲಾಗಿದೆ. ಮತ್ತು ಗಂಜೀಫಾ ಚಿತ್ರಕಲೆಯ ಸದ್ಯದ ಸ್ಥಿತಿಗತಿಯನ್ನು ಕುರಿತು ಸಹ ಇಲ್ಲಿ ವಿವೇಚನೆಯನ್ನು ಮಾಡಲಾಗಿದೆ.

ಒಂಭತ್ತನೆಯ ಅಧ್ಯಾಯದಲ್ಲಿ, ಪ್ರಸ್ತುತ ಮಹಾಪ್ರಬಂಧದ ಎಲ್ಲ ಅಧ್ಯಾಯಗಳ ಮೂಲಕ ಕಂಡುಕೊಂಡ ಪ್ರಮುಖವಾದ ಅಧ್ಯಯನದ ಫಲಿತಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ ಫಲಿತಗಳನ್ನು ಹಾಗೂ ಮುಂದಿನ ಅಧ್ಯಯನಕ್ಕೆ ಬೇಕಾದ ಕೆಲವು ವಿಚಾರಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಿಕೊಳ್ಳಲಾಗಿದೆ.

ಅಧ್ಯಯನದ ಪ್ರಮುಖ ಫಲಿತಗಳು

೦೧. ಕರ್ನಾಟಕದ ಗಂಜೀಫಾ ಚಿತ್ರಕಲೆ ಮತ್ತು ಆಟ ಆಧುನಿಕ ಸಂದರ್ಭದಲ್ಲಿ ನೇಪಥ್ಯಕ್ಕೆ ಸರಿಯುತ್ತಿದೆ. ತಲೆತಲಾಂತರದಿಂದ ಬದುಕುಳಿದಿದ್ದು, ಗಂಜೀಫಾ ಚಿತ್ರಕಲೆ ಮತ್ತು ಆಟವನ್ನು ವಿಶೇಷವಾಗಿ ದೃಶ್ಯಾತ್ಮಕ ನೆಲೆಯಲ್ಲಿ ಅವುಗಳ ಆಂತರ್ಯ, ವಿನ್ಯಾಸ, ರಚನಾ ತಂತ್ರ ಮತ್ತು ಸಂಯೋಜನೆಯ ಕುರಿತು ಆಳವಾದ ಅಧ್ಯಯನಗೈಯುವುದರ ಮುಖೇನ ನಿರ್ಲಕ್ಷಿತವಾಗಿದ್ದ ಗಂಜೀಫಾ ಚಿತ್ರಕಲೆ ಮತ್ತು ಆಟದ ಕುರಿತು ಈ ಅಧ್ಯಯನ ಪ್ರಥಮ ಬಾರಿಗೆ ಬೆಳಕು ಚೆಲ್ಲಿದೆ.

೦೨. ಪಾಶ್ಚಿಮಾತ್ಯ ಮೂಲದಿಂದ ಭಾರತಕ್ಕೆ ಪ್ರವೇಶ ಮಾಡಿದ ಗಂಜೀಫಾ ಚಿತ್ರಕಲೆ ಮತ್ತು ಆಟವನ್ನು ನಮ್ಮವರು ಅತ್ಯಂತ ಮನೋಜ್ಞವಾಗಿ ಬಳಸಿಕೊಂಡು ಸ್ವತಂತ್ರ ಕಲಾಪ್ರಕಾರವಾಗಿ ಬೆಳೆಸಿದ ಬಗೆಯನ್ನು ಕುರಿತು ವಿಶೇಷವಾಗಿ ಅಧ್ಯಯನ ಗಮನಹರಿಸಿದೆ.

೦೩. ನಮ್ಮ ಅರಸರು ಈ ಕಲೆ ಮತ್ತು ಆಟವನ್ನು ಪ್ರೋತ್ಸಾಹಿಸಿ, ಬೆಳೆಸಿ ಒಂದು ಕಲಾಪ್ರಕಾರವಾಗಿ ಬೆಳೆಯಲು ಪ್ರೇರಣೆ ನೀಡಿದ್ದಾರೆ. ಅಲ್ಲದೇ ಕಲಾವಿದರಿಗೆ ಆಶ್ರಯ ನೀಡಿ, ತಮ್ಮ ಕಲಾಪ್ರತಿಭೆಯನ್ನು ಈ ಚಿತ್ರಗಳ ಮೂಲಕ ತೋರ್ಪಡಿಸಲು ಪ್ರಯತ್ನಿಸಿದ್ದು ಈ ಚಿತ್ರಗಳ ಅಧ್ಯಯನದಿಂದ ತಿಳಿದು ಬರುತ್ತದೆ.

೦೪. ನಮ್ಮ ಧಾರ್ಮಿಕಪರ ವಿಚಾರಗಳನ್ನು ಕಲಾವಿದರು ಗಂಜೀಫಾ ಎಲೆಗಳ ಮೇಲೆ ಪೂಜಾ ಪ್ರಜ್ಞೆಯಿಂದ ಹಾಗೂ ಆಟದ ನೆಲೆಯಲ್ಲಿ ಪ್ರಯೋಗಿಸಿ, ಧಾರ್ಮಿಕಪರ ವಿಚಾರವಾದಿಗಳಿಗೆ ಭಯ-ಭಕ್ತಿಯನ್ನು ಚಿತ್ರಗಳ ಮೂಲಕ ಒಡಮೂಡಿಸಿದ್ದಾರೆ.

೦೫. ಗಂಜೀಫಾ ಚಿತ್ರಗಳಲ್ಲಿ ಧಾರ್ಮಿಕ ಚಿತ್ರಗಳಲ್ಲಿನ ಶೈವ, ರಾಮಾಯಣ, ಮಹಾಭಾರತದ ನವಗ್ರಹಗಳು, ದಶಾವತಾರಗಳ ವಿಷಯಗಳಿಗೆ ಆಟಕ್ಕನುಗುಣವಾಗಿ ಹೆಚ್ಚು ಪ್ರಾಮುಖ್ಯ ನೀಡಲಾಗಿದೆ.

೦೬. ಈ ಮೊದಲು ಇದನ್ನು ಒಂದು ಆಟವೆಂದೇ ಪರಿಗಣಿಸಿದ್ದರು. ಆ ಆಟಕ್ಕೆ ಮುಖ್ಯವಾಗಿ ಇರುವ ವರ್ಣರಂಜಿತ ಚಿತ್ರಗಳ ಕಾರ್ಡುಗಳ ಕಲಾವಿನ್ಯಾಸದ ಬಗೆಗೆ ಯಾರೂ ಅಷ್ಟೊಂದು ಗಮನ ಹರಿಸಿರಲಿಲ್ಲ. ಹೀಗಾಗಿ ಗಂಜೀಫಾ ಚಿತ್ರಗಳು ಎಂಬ ಅಜ್ಞಾತ ಚಿತ್ರಕಲಾ ಪ್ರಕಾರವೊಂದು ಈ ಅಧ್ಯಯನದ ಮೂಲಕ ಬೆಳಕಿಗೆ ಬರುತ್ತಿದೆ.

೦೭. ಗಂಜೀಫಾ ಚಿತ್ರಕಲೆಯಲ್ಲಿ ಅಪ್ಪಟ ಕರ್ನಾಟಕದ ದೇಶೀಯ ಅಂಶಗಳು ರಚನೆಗೊಂಡಿವೆ. ಉದಾಹರಣೆಗೆ ರಾಮಾಯಣ, ಮಹಾಭಾರತ, ನವಗ್ರಹ, ದಶಾವತಾರದ ಚಿತ್ರಗಳು, ಚಾಮುಂಡಿ, ಮುಂತಾದ ಸ್ಥಳೀಯ ದೇವತೆಯರ ಹೆಸರಿನ ಆಟಗಳನ್ನು ಇಲ್ಲಿ ಗಮನಿಸಬಹುದಾಗಿದೆ.

೦೮. ಗಂಜೀಫಾ ಚಿತ್ರರಚನೆಯ ಕಲಾಪರಿಕರಗಳ ಬಗೆಗೆ ಇಲ್ಲಿ ವಿಶೇಷವಾಗಿ ಅಧ್ಯಯನ ಮಾಡಲಾಗಿದೆ.

೦೯. ಗಂಜೀಫಾ ಕಾರ್ಡುಗಳ ಚಿತ್ರಗಳ ಸಿದ್ಧತಾ ವಿಧಿ-ವಿಧಾನಗಳ ಅಧ್ಯಯನ ಕೂಡ ಕಲಾಕ್ಷೇತ್ರದ ಅಧ್ಯಯನಕಾರರಿಗೆ ಮಹತ್ವದ ಆಕರಗಳನ್ನು ನೀಡಿದೆ.

೧೦. ಗಂಜೀಫಾ ಚಿತ್ರದ ಈ ಕಾರ್ಡುಗಳ ಮೂಲಕ ಕರ್ನಾಟಕವು ಕಿರುರೂಪ ಚಿತ್ರಸಂಪ್ರದಾಯಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಈ ಮುಲಕ ನೀಡಿದೆ.

೧೧. ಮರೆಯಾಗಿ ಹೋಗಿರುವ ಈ ಕಲಾ ಸಂಪ್ರದಾಯ ನಮ್ಮ ಪರಂಪರೆಯ ಕಲಾವಿದ್ಯಾರ್ಥಿ, ಕಲಾವಿದರಿಗೆ ಪರಿಚಯಿಸುವ ಮತ್ತು ಡಾಕುಮೆಂಟೇಶನ್ ಮಾಡುವ ಈ ಕೆಲಸ ಈ ಅಧ್ಯಯನದ ಮೂಲಕ ನಡೆದಿದೆ.

೧೨. ಮುಂದಿನ ನಮ್ಮ ಪರಂಪರೆಯ ವಾರಸುದಾರರಿಗೆ ಇದನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಸಹ ಇದು ಸಹಕಾರಿಯಾದ ಅಧ್ಯಯನವಾಗಿದೆ.

೧೩. ಹೆಚ್ಚಾಗಿ ಇದೊಂದು ಉನ್ನತ ವರ್ಗದವರ ವಿರಾಮ ವೇಳೆಯ ಆಟವಾಗಿ ಬೆಳೆದುಬಂದಿರುವುದು ಗಮನಿಸುವಂತಹ ಅಂಶವಾಗಿದೆ. ಜನಸಾಮಾನ್ಯರಿಂದ ದೂರವಾದ ಕ್ರೀಡೆಯಾಗಿದೆ.

೧೪. ಚಿತ್ರಕಲೆಯ ದೃಷ್ಟಿಯಿಂದ 'ಗಂಜೀಫಾ ಚಿತ್ರಕಲೆ' ಎಂಬ ಹೊಸ ಪ್ರಕಾರವೊಂದು ಕರ್ನಾಟಕದಲ್ಲಿ ಆಕಾರ ಪಡೆದಿರುವುದು ಈ ಕ್ಷೇತ್ರಕ್ಕಾದ ಒಂದು ದೊಡ್ಡ ಪ್ರಯೋಜನವೆಂದು ಹೇಳಬಹುದಾಗಿದೆ.

೧೫. ಗಂಜೀಫಾ ಚಿತ್ರಗಳು ಈ ಕಾರ್ಡುಗಳಲ್ಲಿರುವ ವೈವಿಧ್ಯ, ವಸ್ತು ವಿಷಯದ ಬಗೆಗೆ ಬೆಳಕು ಚೆಲ್ಲಿದೆ.

೧೬. ಗಂಜೀಫಾ ಚಿತ್ರಗಳಲ್ಲಿ ಆಗಿರುವ ವೈವಿಧ್ಯಮಯವಾದ ಆಕಾರ, ವಿನ್ಯಾಸ, ಚಿತ್ರಗಳಲ್ಲಿ ವರ್ಣಗಳ ರೇಖಾವಿನ್ಯಾಸಗಳಲ್ಲಿ ಆದ ಬದಲಾವಣೆಗಳು, ಅವುಗಳ ಮೇಲಾದ ಪ್ರಭಾವ ಪ್ರೇರಣೆಗಳನ್ನು ಗುರುತಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

೧೭. ಇಂದು ಈ ಕಲಾ ಸಂಪ್ರದಾಯ ಉಳಿದುಕೊಂಡು ಬರದಿರುವುದನ್ನು, ಈಗ ಆಧುನಿಕ ಕಲಾವಿದರು ಈ ಚಿತ್ರರಚನಾ ಕಾರ್ಯವನ್ನು ಮುಂದುವರೆಸಿದ್ದನ್ನಿಲ್ಲಿ ಪರಿಚಯಿಸಲಾಗಿದೆ. ಈ ಕಲೆಯ ಅನೇಕ ಅಂಶಗಳನ್ನು ಬಳಸಿಕೊಂಡು ಸಮಕಾಲೀನತೆಗೊಳಿಸಿಕೊಂಡು ಶ್ರೀಮತಿ ಸುಧಾ ವೆಂಕಟೇಶ, ಶ್ರೀಮತಿ ಚಂದ್ರಿಕಾ ಪದ್ಮನಾಭನ್ ಹಾಗೂ ರಘುಪತಿ ಭಟ್‌ರಂತಹ ಕಲಾವಿದರು ಕಲಾಕೃತಿ ರಚಿಸುತ್ತಿದ್ದಿದ್ದನ್ನು ಗಮನಿಸಲಾಗಿದೆ.

೧೮. ಈ ಗಂಜೀಫಾ ಚಿತ್ರಕಲೆಯ ಇಂದಿನ ಸ್ಥಿತಿ–ಗತಿಗಳನ್ನು ಕುರಿತು, ಅವುಗಳ ರಕ್ಷಣೆಯ ವಿಧಿ–ವಿಧಾನಗಳ ಕುರಿತು ಈ ಅಧ್ಯಯನ ಮಹತ್ವದ ಸಲಹೆಗಳನ್ನು ನೀಡಿದೆ.

ಅನುಬಂಧ – ೦೧. ಸಂಕ್ಷೇಪಗಳು

ಕ.ವಿ.ವಿ. ಧಾರವಾಡ	–	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಗು.ವಿ.ವಿ. ಗುಲಬರ್ಗಾ	–	ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಕ.ವಿ.ವಿ. ಹಂಪಿ	–	ಕನ್ನಡ ವಿಶ್ವವಿದ್ಯಾಲಯ, ಹಂಪಿ
ಮ.ಪ್ರ	–	ಮಹಾಪ್ರಬಂಧ
ಸಂ.ಪ್ರ	–	ಸಂಪ್ರಬಂಧ
ಅ.ಪ್ರ.ಯೋ.ವ	–	ಅಕಪ್ರಕಟಿತ ಯೋಜನಾ ವರದಿ
ಯೋ.ವ	–	ಯೋಜನಾ ವರದಿ
ಕ.ಲ.ಕ.ಅ. ಬೆಂಗಳೂರು	–	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
PP	–	Page

ಅನುಬಂಧ – ೨. ಗ್ರಂಥಋಣ

೦೧. **ಉತ್ತರ ಕರ್ನಾಟಕದ ಜನಪದ ಕಲೆ ಮತ್ತು ವಿಧಿಕ್ರಿಯೆ** – ಎ. ವಿ. ಪಾಟೀಲ
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೮೦

೦೨. **ಉತ್ತರ ಕರ್ನಾಟಕದ ಒಗಟುಗಳು** – ಡಾ. ಎಂ. ಎಸ್. ಲಠೆ
ರವೀಂದ್ರ ಪ್ರಕಾಶನ, ಕಲಬುರ್ಗಿ,
೧೯೨೪

೦೩. **ಎಂ. ರಾಮನರಸಯ್ಯ** – ರಾಮದಾಸ್ ಅಡ್ಯಂತಾಯ್
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು,
೨೦೦೦

೦೪. **ಕನ್ನಡ ವಿಶ್ವಕೋಶ ಸಂಪುಟ-೫** –
ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾಲಯ, ಮೈಸೂರು
೧೯೭೨

೦೫. **ಕನ್ನಡ ನಾಡಿನ ಧಾರ್ಮಿಕ ಪರಂಪರೆ** – ಪ್ರೊ. ಎಸ್. ಕೆ. ರಾಮಚಂದ್ರರಾವ್
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು
೧೯೮೩

೦೬. **ಕರ್ನಾಟಕ ಚರಿತ್ರೆ ಸಂ-೬** – ಸಹ.ಸಂ: ಡಾ. ಸೆಬಾಸ್ಟಿಯನ್ ಜೋಸೆಫ್
ಪ್ರಸಾರಾಂಗ, ಕನ್ನಡ
ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
೧೯೯೭

೦೭. **ಕರ್ನಾಟಕದ ಜನಪದ ಚಿತ್ರಕಲೆ** – ಡಾ ಎಸ್. ಸಿ. ಪಾಟೀಲ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ
ಸಂಸ್ಥಾನ ಮಠ ಗದಗ,
೧೯೯೩

೦೮. **ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ** – ಕೆ. ವಿ. ಕಾಳೆ
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ,
೨೦೦೦

೦೯. **ಕರ್ನಾಟಕದ ಕಲೆಗಳು ಭಾಗ ೧** – ಎಸ್. ಕೆ. ರಾಮಚಂದ್ರರಾವ್
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,
೧೯೮೧

೧೦. **ಕರ್ನಾಟಕದ ಗಂಜೀಫಾ ಚಿತ್ರಕಲೆ** – ಯೋಜಕ : ಕೃಷ್ಣೇಗೌಡ ಎಚ್.ಎನ್
ಬಿ.ಎಫ್.ಎ. ಪದವಿಗಾಗಿ ಕನ್ನಡ
ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
(ಅ.ಪ್ರ.)ಕಿರು ಪ್ರಬಂಧ ಶಿಲ್ಪ ಮತ್ತು
ವರ್ಣಚಿತ್ರಕಲಾ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಬಾದಾಮಿ, ಬನಶಂಕರಿ,
೨೦೦೫.

೧೧. **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ** – ಡಾ. ಶಶಿಕಲಾ ಹೂಗಾರ
ಪಿಹೆಚ್.ಡಿ ಪ್ರಬಂಧ, ಅಪ್ರಕಟಿತ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೫

೧೨. **ಕರ್ನಾಟಕದ ಜಾನಪದ ಸಮಾವೇಶ** – (ಸಂ) ಡಾ. ಜಿ. ಶಂ. ಪರಮಶಿವಯ್ಯ
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
ವಿಶ್ವವಿದ್ಯಾಲಯ, ಮೈಸೂರು
೧೯೮೧

೧೩. **ಕರ್ನಾಟಕ ಜಾನಪದ** – ಡಾ. ಕರೀಂಖಾನ್ ಎಸ್.ಕೆ
ಕನ್ನಡ ಜಾನಪದ ಮತ್ತು ಯಕ್ಷಗಾನ
ಅಕಾಡೆಮಿ, ಬೆಂಗಳೂರು
೧೯೮೯

೧೪. **ಕರ್ನಾಟಕ ಭಿತ್ತಿ ಚಿತಪರಂಪರೆ** – ಡಾ. ಅ.ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು,
೨೦೦೨

೧೫. **ಕರ್ನಾಟಕದ ಕರಕುಶಲಕಲೆಗಳು** – ಬಿ. ಎಂ. ಚಂದ್ರಶೇಖರಯ್ಯ
ಐ. ಬಿ. ಎಚ್. ಪ್ರಕಾಶನ, ಗಾಂಧಿನಗರ,
ಬೆಂಗಳೂರು,
೧೯೭೩

೧೬. **ಕರ್ನಾಟಕದ ಕಲೆಗಳು(ಭಾಗ–೧)** – ಎಸ್. ಕೆ. ರಾಮಚಂದ್ರರಾವ್
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು,
೧೯೮೧

೧೭. **ಕರ್ನಾಟಕದ ಕಲೆಗಳು** – ಬೆನಕನಹಳ್ಳಿ ಗ. ನಾಯಕ
(ಭಾಗ ೩, ಕರಕುಶಲಕಲೆಗಳು)
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು,
೧೯೮೬

೧೮. **ಕರಕುಶಲ ಕಲೆಗಳು ವಿಶ್ವಕೋಶ ೨** – ಡಾ. ಕರೀಗೌಡ ಬೀಚನಹಳ್ಳಿ
ಪಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ,
೨೦೦೦

೧೯. **ಕಲಾ ಪಪಂಚ** – ಡಾ. ಶಿವರಾಮ ಕಾರಂತ
ವ್ಯಾಸಂಗ ವಿಸ್ತರಣ– ಪ್ರಕಟನಾ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,
೧೯೭೮

೨೦. **ಕಲಾಕೋಶ** – ಪಿ. ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತ ಕಲಾ ಅಕಾಡೆಮಿ,
ಬೆಂಗಳೂರು,
೧೯೯೪

೨೧. **ಕಲಾತತ್ವ** – (ಮೂಲ) ಅಬರಕ್ರಾಂಬಿ
ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು – (ಅನು) ಸಿ.ಪಿ.ಕೆ
ವಿದ್ಯಾವರ್ಧಕ ಟ್ರಸ್ಟ, ಮೈಸೂರು.
೧೯೭೬

೨೨. **ಕಲೆಯ ದರ್ಶನ** – ಶಿವರಾಮ ಕಾರಂತ
ರಾಜಲಕ್ಷ್ಮಿ ಪ್ರಕಾಶನ, ಬಳೇಪೇಟ ಚೌಕ,
ಬೆಂಗಳೂರು(ತೃತೀಯ ಮುದ್ರಣ),
೧೯೮೨

೨೩. **ಕಲೆಯ ನೆಲೆ** – ವಿ. ಕೃ. ಗೋಕಾಕ
ಪ್ರಸಾರಾಂಗ, ಮೈಸೂರು
ವಿಶ್ವವಿದ್ಯಾಲಯ, ಮೈಸೂರು,
೧೯೭೮

೨೪. **ಕಲೆಗಳು ಮತ್ತು ಮಾನವ** – (ಮೂಲ) ಇರ್ವಿನ್ ಎಡ್ಮನ್,
ಕಾವ್ಯಾಲಯ ಪ್ರಕಾಶನ, – (ಅನು) ಎನ್. ಬಾಲಸುಬ್ರಹ್ಮಣ್ಯ
ಮೈಸೂರು,
೧೯೪೬

೨೫. **ಕಲೆ ಮತ್ತು ಸಾಮಾಜಿಕ ಜೀವನ** – (ಮೂಲ) ಗಿ.ವಿ. ಪ್ಲೆಖನೋವೆ,
ನವಕರ್ನಾಟಕ ಪಬ್ಲಿಕೇಶನ್ಸ್, – (ಅನು) ಎಚ್.ಕೆ.ರಾಮಚಂದ್ರಮೂರ್ತಿ
ಸುಬೇದಾರ ಛತ್ರಂ ರಸ್ತೆ
ಬೆಂಗಳೂರು
೧೯೭೯

೨೬. **ಗಂಜೀಫಾ ಕಲೆ** – ಸಂತೋಷಕುಮಾರ ಗುಲ್ವಾಡಿ
ಕರ್ನಾಟಕ ಲಲಿತಕಲಾ ಅಕಾಡೆಮಿ
ಜೆ.ಸಿ.ರಸ್ತೆ, ಬೆಂಗಳೂರು
೧೯೯೪

೨೭. **ಗಂಜೀಫಾ** – ಎಂ.ಎಲ್. ಶಿವಶಂಕರ
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ
ನಿರ್ದೇಶನಾಲಯ, ಮೈಸೂರು
೧೯೯೬

೨೮. **ಚಿತ್ರಕಲಾ ಪ್ರಪಂಚ** – ಸಂ: ಅ.ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ – ಎನ್ ಮರಿಶಾಮಾಚಾರ್
ಬೆಂಗಳೂರು,
೨೦೦೮

೨೯. **ಚಿತಕಲೆ ಮತ್ತು ಪೂರಕ ಕ್ಷೇತಗಳು** – ಡಾ. ಎಸ್. ಸಿ. ಪಾಟೀಲ
ಸ್ಕೂಲ್ ಆಫ್ ಆರ್ಟ್, ಧಾರವಾಡ
೧೯೯೬

೩೦. **ಚಿತ್ರಾಕ್ಷಿ** – (ಸಂ.) ಡಾ. ಎಸ್. ಸಿ. ಪಾಟೀಲ
ಶ್ರೀ. ಡಿ.ವಿ. ಹಾಲಬಾವಿ ಸ್ಕೂಲ್
ಆಫ್ ಆರ್ಟ್, ಧಾರವಾಡ,
೧೯೯೬

೩೧. **ಜನಪದ ಜೀವನ ಮತ್ತು ಕಲೆ** – ಎಲ್. ಆರ್. ಪಗಡೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,
೧೯೭೭

೩೨. **ತೌಲನಿಕ ಕಾವ್ಯ ಮೀಮಾಂಸೆ** – ಡಾ. ಎಚ್. ತಿಪ್ಪೇರುದ್ರಸ್ವಾಮಿ
ಪ್ರಕಾಶಕರು : ಡಿ.ವಿ.ಕೆ. ಮೂರ್ತಿ
ಕೃಷ್ಣಮೂರ್ತಿಪುರಂ, ಮೈಸೂರು
೨೦೦೭

೩೩. **ದಖನಿ ಚಿತ್ರಕಲೆ** – ಎಸ್. ಕೆ. ಅರುಣಿ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು
೨೦೦೧

೩೪. **ನವಗ್ರಹಗಳು** – ಚಿಕ್ಕೇರೂರು ಧಿರೇಂದ್ರಾಚಾರ್ಯ
ಸಾಧನಾ ಪ್ರಕಾಶನ, ನಂ. ೧೨೦,
ಮೊದಲನೇ ಮಹಡಿ, ಬಳೆಪೇಟೆ,
ಬೆಂಗಳೂರು-೫೩,
೨೦೦೮

೩೫. **ನಿಜದ ನೆಲೆ**
ಡಾ. ಬಿ.ಕೆ. ಹಿರೇಮಠ ಅಭಿನಂದನ ಗ್ರಂಥ – (ಸಂ) ಡಾ. ಎಸ್. ಸಿ. ಪಾಟೀಲ ಸತ್ಯಾನಂದ ಪಾತ್ರೋಟ
ಪ್ರ. ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ
ಬಸವೇಶ್ವರ ವಿದ್ಯಾವರ್ಧಕ ಸಂಘ
ಬಾಗಲಕೋಟ
೨೦೦೩

೩೬. **ಪುರಾಣ ಭಾರತಕೋಶ** – ಯಜ್ಞನಾರಾಯಣ ಉಡುಪ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೦೨.
೨೦೦೮

೩೭. **ಬಾರಾಮಾಸ** – (ಸಂ) ಸಂಶೋಧಕ. ಶಾಂತರಸ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ
೧೯೯೩

೩೮. **ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ** – ಡಾ. ಟಿ. ಎಸ್. ರಾಜಗೋಪಾಲ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು
೧೯೮೩

೩೯. **ಭಾರತೀಯ ಚಿತ್ರಕಲೆ** – ಡಾ. ಶಿವರಾಮ ಕಾರಂತ
ಪುತ್ತೂರು
೧೯೯೦

೪೦. **'ಮಹಾರಾಷ್ಟ್ರ ಜಾನಪದ '** – (ಸಂ) ಡಾ. ಹೆಚ್. ಎಂ. ಮಹೇಶ್ವರಯ್ಯ
ಕರ್ನಾಟಕ ಜಾನಪದ ಮತ್ತು ಯಕ್ಷಗಾನ
ಅಕಾಡೆಮಿ, ಬೆಂಗಳೂರು
೧೯೯೭

೪೧. **ಮಹಾಭಾರತ ಕಥಾ ಸಂಗ್ರಹ** – ಡಾ. ಹೆಚ್. ರಾಮಚಂದ್ರಸ್ವಾಮಿ
ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು
೨೦೦೩

೪೨. **ಮಾನ್ಯ ಡಿ.ವಿ.ಜಿ. ಯವರು** – ಶ್ರೀಕಾಂತ
ಮಂಕುತಿಮ್ಮನ ಕಗ್ಗ – ತಾತ್ಪರ್ಯ
ಪ್ರ: ಶ್ರೀ ಎಚ್. ವಿ. ಶ್ರೀಕಂದನ್
ನಂ.೨೨೬. ೮ನೇ ಅಡ್ಡರಸ್ತೆ,
೧೯ನೇ 'ಡಿ' ಮುಖ್ಯರಸ್ತೆ, ರಾಜಾಜಿನಗರ
೧ನೇ 'ಎನ್' ಬ್ಲಾಕ್, ಬೆಂಗಳೂರು–೧೦,
೨೦೦೯

೪೩. **ಮುಮ್ಮಡಿ ಕೃಷ್ಣರಾಜ ಒಡೆಯರು** – ಡಾ. ಆರ್. ಗೋಪಾಲ್
ಒಂದು ಚಾರಿತ್ರಿಕ ಅಧ್ಯಯನ – ಡಾ. ಎಸ್. ನರೇಂದ್ರ ಪ್ರಸಾದ್
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಹೊಸಪೇಟೆ
೨೦೦೪

೪೪. **ಮುಮ್ಮಡಿ ಕೃಷ್ಣರಾಜ ಒಡೆಯರ** – ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್
ಶ್ರೀ ತತ್ವನಿಧಿ ಸಂಪುಟ ೧
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ.
೧೯೯೨

೪೫. **'ಮೈಸೂರು ಅರಮನೆ' ಮಾರ್ಗದರ್ಶಿ** –
ಮೈಸೂರು ಅರಮನೆ ಮಂಡಳಿ
ಅರಮನೆ ಆವರಣ, ಮೈಸೂರು
ಪ್ರಕಾಶಕರು : ಕಾರ್ಯನಿರ್ವಾಹಕ
ಅಧಿಕಾರಿಗಳು, ಅರಮನೆ ಮಂಡಳಿ,
ಮೈಸೂರು
೨೦೦೭

೪೬. **ಮೈಸೂರು ಚಾಮುಂಡೇಶ್ವರಿ ದೇವಸ್ಥಾನ** – ಬಿ.ಬಿ. ಗೋಸ್ವಾಮಿ, ಎಸ್. ಜಿ. ಮೊರಬ್
ಒಂದು ಸಾಮಾಜಿಕ ಅಧ್ಯಯನ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು
೨೦೦೧

೪೭. **ರಾಜಸ್ಥಾನ ಜಾನಪದ** – ಮೂಲ: ಡಿ. ಆರ್. ಅಹುಜಾ
ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯಾ – ಅನುವಾದ : ಡಾ. ಸಿ.ಪಿ. ಕೃಷ್ಣಕುಮಾರ
೧೯೯೩.

೪೮. **'ವಜ್ರ ವಿಜಯ' (೧೯೪೭–೨೦೦೨)** – (ಸಂ) ಡಾ. ಮೋಹನರಾವ್ ಬಿ. ಪಂಚಾಳ
(ನೆನಪಿನ ಸಂಚಿಕೆ)
ವಿಜಯ ಕಲಾ ಮಂದಿರ, ಗದಗ
೨೦೦೨

೪೯. **ವರ್ಣಸಂಚಯ** – ಡಾ. ಎಸ್. ಸಿ. ಪಾಟೀಲ್
ವಿಜಯ ಚಿತ್ರಕಲಾ ಮಹಾವಿದ್ಯಾಲಯ,
ಇಳಕಲ್
೨೦೦೧

೫೦. **'ವಿಷ್ಣು ಪುರಾಣ'** – ರಾಘವೇಂದ್ರ ಆಚಾರ್ಯ
ಕರ್ನಾಟಕ ಲಲಿತಕಲಾ ಅಕಾಡೆಮಿ
ವಿಶ್ವರೂಪ ಪ್ರಕಾಶನ
ಬೆಂಗಳೂರು
೨೦೦೪

೫೧. **ಸಂಗೀತ ಕಲೆಗೆ ಮೈಸೂರು ಒಡೆಯರ** – ಡಾ. ವಿ. ಎಸ್. ಸಂಪತ್ತುಮಾರ ಆಚಾರ್ಯ
ಪ್ರೋತ್ಸಾಹ, ಕೊಡುಗೆ – ಎಂ. ಎಲ್. ಶಿವಶಂಕರ
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ
ನಿರ್ದೇಶನಾಲಯ, ಮೈಸೂರು
೧೯೯೬

೫೨. **ಸಾಹಿತಿ, ಕಲಾವಿದರ ಕಣ್ಣಲ್ಲಿ ಟಿಪ್ಪು** – (ಸಂ) ಪ್ರೊ. ಶಿವರಾಮಯ್ಯ.
ಸಿರಿಗನ್ನಡ ಪ್ರಕಾಶನ, ಶಿವಮೊಗ್ಗ
೨೦೦೫

೫೩. **ಸೌಂದರ್ಯ ಸಮೀಕ್ಷೆ** – ಡಾ. ಜಿ.ಎಸ್. ಶಿವರುದ್ರಪ್ಪ
ಸತ್ಯಶ್ರೀ ಪ್ರಿಂಟರ್ಸ್, ಬೆಂಗಳೂರು
೧೯೬೫

ಕನ್ನಡ ಲೇಖನಗಳು

೦೧.	ದೀಪಾವಳಿ ವಿಶೇಷಾಂಕ : ಡೆಕ್ಕನ್ ವರ್ಣಚಿತ್ರಗಳ ಶೈಲಿ ೧೯೬೨	–	ನಾರಾಯಣರಾವ್ ಕುಲಕರ್ಣಿ
೦೨.	ಉದಯವಾಣಿ–ದೀಪಾವಳಿ ವಿಶೇಷಾಂಕ : ಸಾವಂತವಾಡಿಯ ಚಿತ್ತಾರಿಗಳು ೧೯೭೭	–	ಶ್ರೀ ಎನ್. ಸಿ. ದೇಸಾಯಿ
೦೩.	ತರಂಗ ವಾರಪತ್ರಿಕೆ : ಇಸ್ಪೇಟ್ ಎಲೆ ಆಟದ ಅಪ್ಪ ಗಂಜೀಫಾ ೧೯೮೯	– –	ಸಂತೋಷಕುಮಾರ ಗುಲ್ವಾಡಿ ಶ್ರೀ ನಾ.ಸು. ನಾಗೇಶ
೦೪.	ಮಂಜುವಾಣಿ : ಆಟದ ಎಲೆಗಳ ರಮ್ಯಕತೆ ೧೯೮೯	–	ಎಸ್. ಡಿ. ಶೆಟ್ಟಿ
೦೫.	ತರಂಗ ವಾರಪತ್ರಿಕೆ : ಗಂಜೀಫಾ ಆಟಗಳ ಬಗ್ಗೆ ನಿಮಗೇನು ಗೊತ್ತು ? ೧೯೮೯	–	ಸಂತೋಷಕುಮಾರ ಗುಲ್ವಾಡಿ ಶ್ರೀ ನಾ.ಸು. ನಾಗೇಶ
೦೬.	ತರಂಗ ವಾರಪತ್ರಿಕೆ : ಇಸ್ಪೇಟ್ ಎಲೆಗಳ ಮಹಲಿನ ಬಾದ್ ಷಾ ಕಿಶೋರ್ ಗೋವರ್ಧನ್ ದಾಸ್ ೧೯೯೫	–	ಎಚ್ಕೆ ಕರ್ಕೇರ
೦೭.	ತರಂಗ ವಾರಪತ್ರಿಕೆ ಭವಿಷ್ಯದರ್ಶಕ ಕಲೆ ಟ್ಯಾರೋ ೨೦೧೦	–	ಟಿ. ಜಿ. ಶೆಟ್ಟಿ

ಇಂಗ್ಲಿಷ್ ಗ್ರಂಥಗಳು

01. Ganjifa - By. Dr. Sarala Chopra
The Playing Cards of India
In Bharat Kala Bhavan
Banaras Hindu University,
1999

02. The Playing cards of India - R and N.Y. Leyden
Roy Strong
Director, Victoria and Albert
Musuem
1981

03. A Hand book of western Arts in - By. B. Kotaia
the Salarjung Museum-
1999

04. Arts and Crafts of Tamilnadu - By. Nandita. Krishna
Photographed by : V.K. Rajamani
Ashok Leyland Ltd
In Association with Maphin
Publishing Private Limited.

05. A Great Missionory Bishop - Author : L. Inde Desreligions
Bishop etrenne louis charbonnav
1803-1873
First Bishop of Viucariate Apostolic
Editions Karnataka paris
1988

06. CHINA - By. Sreemati Chakravarati
National Book Trust, India
2007

07. Chintamani Vyas and Drs. Dalijeet - Edited by : S. Ganesh Rao
Painting of Tanjavur and Mysore
Published by : Vishwanatha Sharma
Geeta Publishers, Thansi

08. Japan - By. Yamaguchi. Hikoichi
National Book Trust, India.
2007

09. Museum of India - By. Jothin Jain
National Handicraft and Handlooms Arati Agarawal
Museum, New Delhi.

10. Mughal Art - By. Shanti Swarup
A Study in Handicrafts

11. Maharaja Ranajith Singha - By. Jean-Marie Lofont
Lord of the Five Kivers

12. Manjusha Art Centre - Dr. Chudamani Nandagopal
Published By : S. Prabhakar
SDM Publication Trust, (R)
Ujire
2000

13. Mysore Chitramala - Prof : S.K. Ramachandra Rao
Traditional Paintings

14. Residency to Rajabhavan - M.S. Surazvi
Bangalore Editional Commitee - C.M. Ganapathi
Published by: Govt of Karnataka
Stationery and Publication
1999

15. The Traditional Paintings of - Prof: S.K. Ramachandra Rao
Karnataka - B.V.K. Shastri
Published By : Karnataka Chitrakala
Parisad.

16. The Traditional Paintings -
old and New
Published and printed by
the Secreatry
Lalita Kala Academy, New Delhi
1889

17. Festival of India, - Abarams,
Harry N. Abarams Inc 100 fifth
Avenue, New York
1986

18. Fundamentals of Indian Art, Bharatiya Vidya Bhavan, Chaupaty Bombay-7 1960 - S. N. Dasgupta

19. Folk art and Craft, - Vol III, Institute of Oriental and Orissan Studies, India Folklore of Madhya Pradesh Parama Shyam National Book Trust, India 1972 - (Ed) Dr. Karunasagar Behera,

20. Handicrafts and Craftsmen, University of Leiden, 1977 - Jan Browser

21. Homage to Karnataka Marg Publication, Bombay 1982 - (Ed) Dr. Sarayu Doshi

22. Introduction of the History of Fine Arts in India and the west Orient Long mans, New Delhi 1968 - (Ed) Tomary

23. Indian Crafts Development and Potential Vikas Publishing House, Pvt. Ltd, New Delhi, 1982 - D. N. Saraf

24. Indian Painting, V. M. C. A. Publishing House Pvt. Ltd., 5 Russel Street, Kolkatta, 1960 - Perscy Brown

25. Primitive Art, Publication Inc., New York 1955 - Frans Book

26. South Indian Customs Asian Educational Services, New Delhi 1982 - P. V. Jagadisayya

ಭಾರತದ ಗಂಜೀಫಾ ಚಿತ್ರಕಲೆಯ ಸಂಗ್ರಹದ ನೆಲೆಗಳು



27. Sixty Four Arts in Ancient India - Anil Baran Ganguly
The English Book store, 72,
Connaught Circus, New Delhi
1962

28. Symbolism the Universal language, - J. S. Cooper
The Agurain Press, Welling borough,
Northumptanshiva
1982

29. The Significance of Indian Art, - Sri. Aurobindo
Sri Aurobindo Asharama,
Pondichery
1964

30. Tribal Art of Middle India - Verries Geoffrey
Combredge,
Oxford University Press,
1985

31. The glory of Indian Handicrafts - Kamaladevi Chattopadhyay
Clarion Books, C-36, Connaught
New Delhi

32. The meaning of Art, - Herbert Read,
Harmonds Worth Pengum,
1961

ಇಂಗ್ಲೀಷ್ ಲೇಖನಗಳು

01. Discover India : - Kishor Goverdhan Das
Chads Playing Cards of
Mysore.
1989

ಅನುಬಂಧ – ೦೩
ಭಾರತದಲ್ಲಿ ಸಂಗ್ರಹಗೊಂಡಿರುವ ಗಂಜೀಫಾ ಚಿತ್ರಗಳ ನೆಲೆಗಳು

೦೧. **ಗುಜರಾತನ** ಅಹಮದಾಬಾದ, ಕಾಂಬಾಡಿ,

೦೨. **ಜಮ್ಮು, ಕಾಶ್ಮೀರ,** ಶ್ರೀನಗರ

೦೩. **ಪಂಜಾಬದ** ಹೊಶಿಯಾರಪುರ

೦೪. **ಉತ್ತರ ಪ್ರದೇಶದ** ದೆಹಲಿ, ಲಖನೌ, ವಾರಣಾಸಿ,

೦೫. **ಬಿಹಾರದ** ವಿಷ್ಣುಪುರ, ಪಾಟ್ನಾ, ಮುರುಪಿದಾಬಾದ್

೦೬. **ರಾಜಸ್ಥಾನದ** ಜೈಪುರ, ಉದಯಪುರ, ಕರೋಲಿ

೦೭. **ಮಧ್ಯಪ್ರದೇಶದ** ಭೂಪಾಲ, ಶಿವಪುರ

೦೮. **ಓರಿಸ್ಸಾದ** ಸೋನಿಪುರ, ಪರ್ಲಕೆಮುಂಡಿ, ಪುರಿ

೦೯. **ಮಹಾರಾಷ್ಟ್ರದ** ಕೊಲ್ಹಾಪುರ, ಸಾವಂತವಾಡಿ, ಪುಣಾ, ಮುಂಬೈ

೧೦. **ತಮಿಳುನಾಡಿನ** ತಂಜಾವೂರು

೧೧. **ಆಂಧ್ರಪ್ರದೇಶದ** ಕರ್ನೂಲ್, ಬಾಗನಪಲ್ಲಿ, ನಿರ್ಮಲ್, ಕಡಪಾ

ಅನುಬಂಧ – ೦೪
ಕರ್ನಾಟಕದ ಗಂಜೀಫಾ ಚಿತ್ರಗಳ ನೆಲೆಗಳು

೦೧. **ಜಗನ್ಮೋಹನ ಅರಮನೆ,**
ಮೈಸೂರು

೦೨. **ಜನಪದ ವಸ್ತು ಸಂಗ್ರಹಾಲಯ,**
ಮೈಸೂರು ವಿಶ್ವವಿದ್ಯಾಲಯ, ಮೈಸೂರು

೦೩. **ಮಂಜೂಷಾ ವಸ್ತು ಸಂಗ್ರಹಾಲಯ,**
ಧರ್ಮಸ್ಥಳ

೦೪. **ಮಾಡರ್ನ್ ಆರ್ಟ್ ಗ್ಯಾಲರಿ**
ವಸಂತನಗರ, ಬೆಂಗಳೂರು

೦೫. **ಶ್ರೀ ವಿಜಯನಾಥ್ ಶೆಣೈ**
ಹೆರಿಟೇಜ್ ವಿಲೇಜ್, ಮಣಿಪಾಲ್

೦೬. **ಕರ್ನಾಟಕ ಚಿತ್ರಕಲಾ ಪರಿಷತ್**
ಬೆಂಗಳೂರು

೦೭. **ಶ್ರೀಮತಿ ಸುಧಾ ವೆಂಕಟೇಶ್**
ಮ.ನಂ. ೧೭೯
ರಾಮಗೋಪಾಲ ಲೇಔಟ್
ಬಾಣಸವಾಡಿ
ಮುಖ್ಯರಸ್ತೆ, ಬೆಂಗಳೂರು

೦೮. **ಶ್ರೀಮತಿ ಚಂದ್ರಿಕಾ ಪದ್ಮನಾಭನ್**
ಸರಸ್ವತಿಪುರಂ, ಮೈಸೂರು

೦೯. **ರಘುಪತಿ ಭಟ್**
ಚಾಮುಂಡಿ ಬೆಟ್ಟ ರೋಡ್, ಮೈಸೂರು.

● ಕರ್ನಾಟಕದ ಗಂಜೀಫಾ ಚಿತ್ರಕಲೆ ಸಂಗ್ರಹದ ನೆಲೆಗಳು



ಅನುಬಂಧ-೫
ವಿದೇಶದಲ್ಲಿ ಸಂಗ್ರಹಗೊಂಡಿರುವ ಗಂಜೀಫಾ ಚಿತ್ರಗಳ ನೆಲೆಗಳು

೦೧. ಏಲ್ ಯುನಿವರ್ಸಿಟಿ,
ಅಮೇರಿಕಾ

೦೨. ವಿಕ್ಟೋರಿಯಾ ಆಲ್ಬರ್ಟ್ ಮ್ಯೂಸಿಯಂ,
ಲಂಡನ್

೦೩. ನೇಪಾಳ (ಕಾಠ್ಮಂಡು)

AKSHARA GRANTHALAYA
ACC.NO. 049305

049305

